ಕೇಶಿರಾಜಕವಿಯ

ಶಬ್ದಮಣಿದರ್ಪಣಂ

ಮೂರನೆಯ ಸುಧಾರಿಸಲ್ಪಟ್ಟ ಆವೃತ್ತಿ

KÊŠIRÂJA'S

JEWEL MIRROR OF GRAMMAR

EDITED

by the late **Rev. F. KITTEL,** *Dr. Phil. Tübingen.*

RE-EDITED

BY

P. MANGESHA RAU, B. A., L. T.

Headmaster, Government Training School, Mangalore.

PUBLISHED BY THE
KANARESE MISSION BOOK AND TRACT DEPOSITORY
MANGALORE
1920

PRINTED AT THE KANARESE MISSION PRESS, MANGALORE.

PREFACE.

The emendations in the present edition refer principally to Kêśirâja's quotations from previous poets. They are based partly on the different readings given in the Appendix to the first edition, but chiefly on a manuscript from Mûḍabidaru near Mangalore. A loan of this manuscript on palmyra leaves was obtained through the kind endeavours of the late Dr. A. C. Burnell in the year 1872. It is on the whole, a good one; nevertheless it has been impossible to give a few of the quotations, also with its aid, in a correct form. Such doubtful quotations have been marked out with a sign of interrogation in parenthesis, thus (?).

The Commentator on Keśirâja's work in the Mûḍabidaru manuscript is not Nishṭhûrasańjayya (or Nishṭhûranańjayya); his name, however, does not appear. Though the wording of his commentary often is different from that of the first-mentioned one's (it may be called somewhat more archaeic), the meaning is essentially the same.

The Editor believes that the present edition fairly represents Kêśirâja's original, and trusts that all scholars interested in the Kannaḍa language will, therefore, gratefully welcome it.

Dr. F. Kittel.

Tübingen, 11th May, 1897.

ಉಪೋದ್ಘಾತ.

ಕನ್ನಡ ವ್ಯಾಕರಣಕ್ಕೆ ಸಂಬಂಧಿಸಿ ಬರೆಯಲ್ಪಟ್ಟ ಗ್ರಂಥಗಳಲ್ಲಿ ನೃಪತುಂಗನ ಕವಿರಾಜಮಾರ್ಗವೇ ಬಹಳ ಪುರಾತನ ಗ್ರಂಥವೆಂಬುದಾಗಿ ಇದುವರೆಗೆ ತಿಳಿಯ ಬಂದಿದೆ. ನೃಪತುಂಗನ ತರುವಾಯ ಕನ್ನಡದಲ್ಲಿ ಪ್ರಸಿದ್ಧಿಪಡೆದ ವೈಯಾಕರಣ ರಲ್ಲಿ ನಾಗವರ್ಮ, ಕೇಶಿರಾಜ, ಭಟ್ಟಾಕಳಂಕದೇವ ಎಂಬಿವರೇ ಶ್ರೇಷ್ಠರು. ಈ ಕೇಶಿರಾಜನೇ ಶಬ್ದಮಣಿದರ್ಪಣವನ್ನು ಬರೆದನು.

ಕೇಶಿರಾಜನನ್ನು ಕುರಿತು ಕನ್ನಡ ಕವಿಚರಿತೆಯಲ್ಲಿ ಹೀಗೆ ಹೇಳಿದೆ:—"ಈತನು ಜೈನಮತದವನು. ಸೂಕ್ತಿಸುಧಾರ್ಣವವನ್ನು ಬರೆದ ಮಲ್ಲಿಕಾರ್ಜುನನ ಮಗನು; ಹೊಯ್ಸಳ ನಾರಸಿಂಹನಲ್ಲಿ ಕಟಕೋಪಾಧ್ಯಾಯನಾಗಿದ್ದ ಕವಿಸುಮನೋಬಾ ಣನ ದೌಹಿತ್ರನು; ಜನ್ನನ ಸೋದರಳಿಯನು. ಇವನ ತಂದೆ ೧೨೪೩ರಿಂದ ೧೨೬೪ರ ವರೆಗೆ ಹೊಯ್ಸಳ ಸೋಮೇಶ್ವರನ ಕಾಲದಲ್ಲಿ ಇದ್ದುದರಿಂದ, ಕೇಶಿ ರಾಜನು ಸುಮಾರು ೧೨೬೦ರಲ್ಲಿದ್ದಿರಬಹುದು."

ಕೇಶಿರಾಜನು ನಾಗವರ್ಮನಿಗಿಂತ ಈಚಿನವನಾಗಿದ್ದು ತನ್ನ ಗ್ರಂಥವನ್ನು ನಾಗವರ್ಮನ ಶಬ್ದಸ್ಮೃತಿ, ಭಾಷಾಭೂಷಣ ಎಂಬ ಕೃತಿಗಳನ್ನು ಅವಲಂಬಿಸಿ ಬರೆದನು. ಆದರೂ ಕನ್ನಡ ವ್ಯಾಕರಣಶಾಸ್ತ್ರವನ್ನು ಯಾರೊಬ್ಬರೂ ಇವನಿ ಗಿಂತ ಮುಂದಿನವರಾಗಲಿ ಹಿಂದಿನವರಾಗಲಿ ಇವನಷ್ಟು ವಿಸ್ತಾರವಾಗಿ ಪ್ರತಿ ಪಾದಿಸಿಲ್ಲ.

ಕೇಶಿರಾಜನ ಶಬ್ದಮಣಿದರ್ಪಣಕ್ಕೆ ಟೀಕೆಯನ್ನು ಬರೆದವನ ಹೆಸರು ನಿಟ್ಟೂರ ಸಂಜಯ್ಯ. ಮೂಲಗ್ರಂಥವನ್ನೂ ಟೀಕೆಯನ್ನೂ ಘನ ಎಫ್. ಕಿಟ್ಟೆಲ್ ಎಂಬವರು ಪರಿಷ್ಕರಿಸಿ ಪ್ರಕಾಶಪಡಿಸಿದರು. ಘನ ಕಿಟ್ಟೆಲರು ಪ್ರಚುರಗೊಳಿಸಿದ ಮೂಲಗ್ರಂಥದ ಮೂರನೆಯ ಆವೃತ್ತಿಯೇ ಈ ಪುಸ್ತಕವು. ಕೇಶಿರಾಜನ ಸೂತ್ರಗಳಿಗೆ ಮೂಲವಾಗಿರುವ ನಾಗವರ್ಮನ ಪದ್ಯಗಳನ್ನೂ ಶ್ಲೋಕಗಳನ್ನೂ ಈ ಆವೃತ್ತಿಯಲ್ಲಿ ಕೊಟ್ಟಿರುತ್ತೇನೆ; ಸೂತ್ರಗಳನ್ನು ಉದಾಹರಿಸುವ ಪದ್ಯಭಾಗ ಗಳಿಗೆ ಒರಸೆಯಾಗಿ ಸಂಖ್ಯೆ ಹಾಕಿರುತ್ತೇನೆ. ಕೇಶಿರಾಜನು ತನ್ನ ಸೂತ್ರಗಳ ಉದಾಹರಣೆಗಳಿಗಾಗಿ ಗಜಗ, ಗುಣನಂದಿ, ಮನಸಿಜ, ಅಸಗ, ಚಂದ್ರಭಟ್ಟ, ಗುಣವರ್ಮ, ಶ್ರೀವಿಜಯ, ರನ್ನ, ಹೊನ್ನ, ಪಂಪ, ಸುಜನೋತ್ತಂಸ, ನಾಗ

ವರ್ಮ, ನೇಮಿಚಂದ್ರ, ಜನ್ನ, ಹಂಸರಾಜ, ಬ್ರಹ್ಮಶಿವ ಮೊದಲಾದ ಪುರಾತನ ಕನ್ನಡ ಕವಿಗಳ ಪದ್ಯಭಾಗಗಳನ್ನು ಎತ್ತಿಕೊಂಡಿರುವುದರಿಂದ, ಶಬ್ದಮಣಿ ದರ್ಪಣವು ಕೇಶಿರಾಜನ ಕಾಲದ ಕನ್ನಡ ಶಬ್ದಶಾಸ್ತ್ರದ ಮೇಲೂ ಆತನ ಕಾಲಕ್ಕಿಂತ ಮೊದಲಿದ್ದ ಕನ್ನಡದ ವಾಙ್ಮಯದ ಮೇಲೂ ಬೆಳಕನ್ನು ಹಾಕುತ್ತದೆ. ಈ ವಿಷಯವನ್ನು ವಿಮರ್ಶಿಸಿ ಒಂದು ಉಪೋದ್ಘಾತವನ್ನು ಈ ಮೂರನೆಯ ಆವೃತ್ತಿಯಲ್ಲಿ ಸೇರಿಸಬೇಕೆಂದಿದ್ದೆನು. ಕಾರಣಾಂತರಗಳಿಂದ ಇದು ತಪ್ಪಿಹೋದುದಕ್ಕೂ, ಮೊದಲು ಉದ್ದೇಶಿಸಿದ ಪರಿಶಿಷ್ಟಗಳನ್ನು ಸೇರಿಸದೆ ಹೋದುದಕ್ಕೂ, ಶುದ್ಧಾಶುದ್ಧ ಪತ್ರಿಕೆಯನ್ನು ಇದರಲ್ಲಿ ಕೊಡದೆ ಹೋದುದಕ್ಕೂ ಬಹಳ ವ್ಯಸನಪಡುತ್ತೇನೆ. ಈ ನ್ಯೂನಾತಿರಿಕ್ತಗಳನ್ನು ನಾಲ್ಕನೆಯ ಆವೃತ್ತಿಯಲ್ಲಿ ಸರಿಗೊಳಿಸಲು ಸಂಕಲ್ಪಿಸಿರುತ್ತೇನೆ.

ಈ ಆವೃತ್ತಿಯನ್ನು ಪ್ರಸಿದ್ಧಪಡಿಸಲು ನನಗೆ ಅವಕಾಶಕೊಟ್ಟುದಕ್ಕಾಗಿ ಕೆ. ಇ. ಎಂ. ಮಿಶನ್ ಪುಸ್ತಕಾಲಯದ ಮೆ. ಒ. ವುಯಿತ್ರಿಕ್ ದೊರೆಗಳನ್ನೂ ಇದನ್ನು ಅಂದವಾಗಿ ಮುದ್ರಿಸಿಕೊಟ್ಟ ಕೆ. ಇ. ಎಂ. ಛಾಪಖಾನೆಯ ಯಜಮಾನರಾದ ಘನ ಇ. ಸಿಕೆಮೆಯರ್ ದೊರೆಗಳನ್ನೂ ಅವರ ನೌಕರರನ್ನೂ ನಾನು ಈ ಮೂಲಕ ವಂದಿಸುತ್ತೇನೆ.

1ನೆಯ ಸಪ್ಟಂಬರ್ 1920.
ಮಂಗಳೂರು.

ಪಂ. ಮಂಗೇಶರಾಯ.

ಅನುಕ್ರಮಣಿಕೆ.

ಶಬ್ದಮಣಿದರ್ಪಣಂ

ನಿಷ್ಠುರಸಂಜಯ್ಯನವರು (or ನಿಷ್ಠುರನಂಜಯ್ಯನವರು)
ಬರೆದ ವ್ಯಾಖ್ಯಾನಂ ಸಹಿತಮಾದುದು.

The Jewel Mirror of Grammar, with the Commentary of Nishṭhûra Saṇjayya (or Naṇjayya).

ಪೀಠಿಕೆ Preface.

ಮೂಲಂ Original text.

The Author's esteem for Speech.

ಶ್ರೀವಾಗ್ದೇವಿಗೆ ಶಬ್ದದಿ- ।
ನಾವಾವಿಂದ್ರಿಯದ ವಿಷಯಮಂ ಶ್ರೋತ್ರದೊಳು- ॥
ದ್ಭಾವಿಪ ನಿರ್ಮಲಮೂರ್ತಿಗಿ- ।
ಳಾವಂದ್ಯೆಗೆ ಶಾಸ್ತ್ರಮುಖದೊಳವನತನಪ್ಪೆಂ. ॥೧॥

ಪದಚ್ಛೇದಂ[1] Separation of the words.

ಶ್ರೀವಾಗ್ದೇವಿಗೆ ಶಬ್ದದಿಂ ಆ ಆ ಇಂದ್ರಿಯದ ವಿಷಯಮಂ ಶ್ರೋತ್ರದೊಳ್ ಉದ್ಭಾವಿಪ ನಿರ್ಮಲಮೂರ್ತಿಗೆ ಇಳಾವಂದ್ಯೆಗೆ ಶಾಸ್ತ್ರಮುಖದೊಳ್ ಅವನತಂ ಅಪ್ಪೆಂ.

ಅನ್ವಯಂ[1] Arrangement of the words in their prose-order.

ಆ ಆ ಇಂದ್ರಿಯದ ವಿಷಯಮಂ ಶ್ರೋತ್ರದೊಳ್ ಶಬ್ದದಿಂ ಉದ್ಭಾವಿಪ ನಿರ್ಮಲಮೂರ್ತಿಗೆ, ಇಳಾವಂದ್ಯೆಗೆ, ಶ್ರೀವಾಗ್ದೇವಿಗೆ, ಶಾಸ್ತ್ರಮುಖದೊಳ್ ಅವನತಂ ಅಪ್ಪೆಂ.

---

1) The ಪದಚ್ಛೇದಂ and ಅನ್ವಯಂ are given only in two of our Manuscripts; they will be, however, a help to beginners. The ಟೀಕು too is often wanting in the Mûḍabidaru Manuscript.

ಟೀಕು Meaning of each word and Remarks as given by Nishṭhûra Saṇjayya. (or Naṇjayya).

ಆ ಆ ಇಂದ್ರಿಯದ = ಶ್ರೋತ್ರ, ತ್ವಕ್ಕು, ನೇತ್ರ, ಜಿಹ್ವೆ, ಘ್ರಾಣಂಗಳೆಂಬ ಸರ್ವೇಂದ್ರಿಯಂಗಳ; ವಿಷಯಮಂ=ಶಬ್ದ, ಸ್ಪರ್ಶ, ರೂಪ, ರಸ, ಗಂಧಂಗಳೆಂಬ ಸಮಸ್ತ ವಿಷಯಂಗಳಂ; ಶ್ರೋತ್ರದೊಳ್ = ಶ್ರೋತ್ರೇಂದ್ರಿಯಮೊಂದಱಲ್ಲಿಯೆ; ಶಬ್ದದಿಂ = ಶಬ್ದದಿಂದೆ; ಉದ್ಭಾವಿಪ = ಅಭಿವ್ಯಕ್ತಮಾಗಿ ಅಱಿಯಿಸುವ; ನಿರ್ಮಲಮೂರ್ತಿಗೆ = ವಿಮಲಸ್ವರೂಪಿಯಾದ; ಇಳಾವಂದ್ಯೆಗೆ = ಭೂಜನದಿಂದೆ ವಂದಿಸಿಕೊಂಬಳಾದ; ಶ್ರೀ = ಐಶ್ವರ್ಯೋಪಲಕ್ಷಿತೆಯಾದ; ವಾಗ್ದೇವಿಗೆ = ವಾಕ್ಕೆಂಬ ದೇವಿಗೆ; ಶಾಸ್ತ್ರಮುಖದೊಳ್ = ಶಬ್ದಶಾಸ್ತ್ರಪ್ರಾರಂಭದಲ್ಲಿ; ಅವನತಂ = ನಮಸ್ಕರಿಸುವಾತಂ; ಅಪ್ಪಂ = ಆಗುವೆಂ.

ವೃತ್ತಿ The author's explanatory Gloss.

ಕಾಂತಿಯೆಂಬ ಗುಣದೊಳನ್ವಿತೆಯಪ್ಪ ವಾಕ್ಕೆಂಬ ದೇವಿಗೆ, ಪಂಚೇಂದ್ರಿಯಂಗಳ ವಿಷಯಮಪ್ಪ ಶಬ್ದ, ಸ್ಪರ್ಶ, ರೂಪ, ರಸ, ಗಂಧಂಗಳೊಳ್ಪಂ ಶ್ರೋತ್ರೇಂದ್ರಿಯಮೊಂದಱಲ್ಲಿಯೆ ಶಬ್ದಮುಖದಿನಭಿವ್ಯಕ್ತಿಯಂ ಮಾೞ್ಪ ವಿಮಲಸ್ವರೂಪಿಗೆ, ಭುವನಸ್ತುತ್ಯೆಗೆ ಯೀ ಶಾಸ್ತ್ರಪ್ರಾರಂಭದಲ್ಲಿ ನಮಸ್ಕರಿಸುವಾತನಪ್ಪೆಂ.

ಮೂಲಂ.

The Author's name is Keśava, his father is Mallikârjuna, and he is a daughter's son of the poet Sumanobâṇa, who is a teacher to the Yâdavas.

ಕವಿಸುಮನೋಬಾಣನ ಯಾ- |
ದವಕಟಕಾಚಾರ್ಯನೆಸೆವ ದೌಹಿತ್ರನೆನಾಂ ||
ಕವಿಕೇಶವನೆಂ ಯೋಗಿ- |
ಪ್ರವರಚಿದಾನಂದಮಲ್ಲಿಕಾರ್ಜುನಸುತನೆಂ[1]. || ೨ ||

ಪದಚ್ಛೇದಂ.— ಕವಿಸುಮನೋಬಾಣನ ಯಾದವಕಟಕಾಚಾರ್ಯನ ಎಸೆವ ದೌಹಿತ್ರನೆಂ ಆಂ, ಕವಿಕೇಶವನೆಂ, ಯೋಗಿಪ್ರವರಚಿದಾನಂದಮಲ್ಲಿಕಾರ್ಜುನಸುತನೆಂ. (See *Sûtra* 219.)

ಅನ್ವಯಂ.— ಯಾದವಕಟಕಾಚಾರ್ಯನ ಕವಿಸುಮನೋಬಾಣನ ಎಸೆವ ದೌಹಿತ್ರನೆಂ, ಯೋಗಿಪ್ರವರ ಚಿದಾನಂದಮಲ್ಲಿಕಾರ್ಜುನಸುತನೆಂ, ಆಂ ಕವಿಕೇಶವನೆಂ.

ಟೀಕಂ.— ಯಾದವ=ಯದುಕುಲದ ಕ್ಷತ್ರಿಯರ; ಕಟಕ=ಸಮೂಹಕ್ಕೆ; ಆಚಾರ್ಯನ=ಗುರುವಾದ; ಕವಿಸುಮನೋಬಾಣನ=ಸುಮನೋಬಾಣನೆಂಬ ಕವೀಶ್ವರನ; ಎಸೆವ

1) See Introduction.

ದೌಹಿತ್ರನೆಂ=ಶೋಭಿಸುವ ಮಗಳ ಮಗನಾದ; ಯೋಗಿ = ಯೋಗಿಗಳಲ್ಲಿ; ಪ್ರವರ=ಅತ್ಯಂತ ಶ್ರೇಷ್ಠನಾದ; ಚಿದಾನಂದಮಲ್ಲಿಕಾರ್ಜುನ=ಜ್ಞಾನಾನಂದಮುಳ್ಳ ಮಲ್ಲಿಕಾರ್ಜುನನ; ಸುತನೆಂ= ಮಗನಾದ; ಆಂ=ಶಾಸ್ತ್ರಕಾರನಾದ ನಾಂ; ಕವಿಕೇಶವನೆಂ=ಕೇಶಿರಾಜಕವೀಶ್ವರಂ.

ವೃತ್ತಿ[1]. — ಯಾದವಕಟಕೋಪಾಧ್ಯಾಯನಪ್ಪ ಕವಿಸುಮನೋಬಾಣನ ಮಗಳ ಮಗನೆಂ, ಯೋಗಿವಲ್ಲಭನಪ್ಪ ಮಲ್ಲಿಕಾರ್ಜುನನಂದನನೆಂ, ಕೇಶಿರಾಜ ಕವಿಯೆಂ ಆಂ.

ಮೂಲಂ.

This Grammar was composed at the request of learned men.

ಗುಣಮಮರೆ ಶಬ್ದಮಣಿದ- |
ರ್ಪಣನಾಮಮವನಿಟ್ಟು ನೆಱೆಯೆ ಕರ್ಣಾಟಕಲ- ||
ಕ್ಷಣಶಬ್ದಶಾಸ್ತ್ರಮಂ ಲಾ- |
ಕ್ಷಣಿಕರ್ಪೇೞಿಮೆಂದು ಬೆಸಸೆ ಬಗೆವೊಗೆ ಪೇೞ್ದೆಂ. || ೩ ||

ಪದಚ್ಛೇದಂ. — ಗುಣಂ ಅಮರೆ, ಶಬ್ದಮಣಿದರ್ಪಣನಾಮಮಂ ಇಟ್ಟು ನೆಱೆಯೆ, ಕರ್ಣಾಟಕಲಕ್ಷಣಶಬ್ದಶಾಸ್ತ್ರಮಂ — ಲಾಕ್ಷಣಿಕರ್ "ಪೇೞ್ ಎಂದು" ಬೆಸಸೆ — ಬಗೆವೊಗೆ ಪೇೞ್ದೆಂ.

ಟೀಕು, ಯಥಾನ್ವಯಂ. — ಗುಣಂ = ಶಬ್ದಸಾಮರ್ಥ್ಯವೆಂಬ ಗುಣಂ; ಅಮರೆ = ಪೊರ್ದುಗೆಯಾಗಲಾಗಿ; ಶಬ್ದಮಣಿದರ್ಪಣನಾಮಮಂ = ಶಬ್ದಮಣಿದರ್ಪಣವೆಂಬ ಪೆಸರಂ;

---

[1] "It is not clear what is meant by the term Kaṭakôpâdhyâya. The word Kaṭaka may mean a metropolis, an army or camp, or a bracelet of gold. It is not likely that the expression is used in the sense of a teacher in the army or a teacher adorned with bracelets of gold. It apparently means a teacher in the royal capital or metropolis; but this does not give us an idea of the nature of the post. Whatever may be the exact signification of the term, there is no doubt that the office denoted by it was one highly honoured and held in great respect, as there appears to have been only one such appointment in the whole kingdom." (Page 9 of the Introduction to Nâgavarma's Kâvyâvalokanam edited by R. Narasimhachar, M. A.)

1*

ಇಟ್ಟು = ಕೊಟ್ಟು; ನೆಱೆಯೆ = ಪೆರ್ಚುಗೆಯಾಗೆ: ಕರ್ಣಾಟಕ = ಕನ್ನಡಕ್ಕೆ; ಲಕ್ಷಣ = ಲಕ್ಷಣವಾದ; ಶಬ್ದಶಾಸ್ತ್ರಮಂ = ವ್ಯಾಕರಣಶಾಸ್ತ್ರವಂ; ಲಾಕ್ಷಣಿಕರ್ = ಲಕ್ಷಣಾಚಾರ್ಯರು; ಪೇೞಿಂದು = ಹೇಳಿಂದು; ಬೆಸಸೆ = ನಿರೂಪಿಸೆ; ಬಗೆವುಗೆ = ಮನಂಬುಗೆ; ಪೇೞ್ದಿಂ = ಹೇಳ್ದಿಂ.

ವೃತ್ತಿ. — ಶಬ್ದಸಾಮರ್ಥ್ಯಮಮರೆ, ವಿಸ್ತಾರದಿಂ ಕರ್ಣಾಟಕವ್ಯಾಕರಣಮಂ, ಶಬ್ದಮಣಿದರ್ಪಣಮೆಂಬ ಪೆಸರನಿಟ್ಟು—ಲಕ್ಷಣಾಚಾರ್ಯರ್ "ಪೇೞಿಂದು" ಬೆಸಸೆ—ಮನಂಬುಗುವಂತೆ ಪೇೞ್ದಿಂ.

ಮೂಲಂ.

Let learned men receive this work kindly!

ಅವಧರಿಪುದು ವಿಬುಧರ್ ದೋ- |
ಷವಿದಱೊಳೇನಾನುಮುಳ್ಳೊಡಂ ಪ್ರಿಯದಿಂ ತಿ- ||
ರ್ದುವುದು ಗುಣಯುಕ್ತಮುಂ ದೋ- |
ಷವಿದೂರಮುಮಾಗೆ ಮೆಚ್ಚಿ ಕೈಕೊಳ್ವುದಿದಂ. || ೪ ||

ಪದಚ್ಛೇದಂ. — ಅವಧರಿಪುದು ವಿಬುಧರ್; ದೋಷಂ ಇದಱೊಳ್ ಏನಾನುಂ ಉಳ್ಳೊಡಂ ಪ್ರಿಯದಿಂ ತಿರ್ದುವುದು; ಗುಣಯುಕ್ತಮುಂ ದೋಷವಿದೂರಮುಂ ಆಗೆ, ಮೆಚ್ಚಿ ಕೈಕೊಳ್ವುದು ಇದಂ.

ಅನ್ವಯಂ. — ಇದಂ ವಿಬುಧರ್ ಅವಧರಿಪುದು; ಇದಱೊಳ್ ದೋಷಂ ಏನಾನುಂ ಉಳ್ಳೊಡಂ ಪ್ರಿಯದಿಂ ತಿರ್ದುವುದು; ಗುಣಯುಕ್ತಮುಂ ದೋಷವಿದೂರಮುಂ ಆಗೆ, ಮೆಚ್ಚಿ ಕೈಕೊಳ್ವುದು.

ಟೀಕು. — ಇದಂ = ಈ ಶಬ್ದಮಣಿದರ್ಪಣವಂ; ವಿಬುಧರ್ = ವಿದ್ವಾಂಸರ್; ಅವಧರಿಪುದು = ಕೇಳ್ವುದು; ಇದಱೊಳ್ = ಈ ಶಬ್ದಮಣಿದರ್ಪಣದಲ್ಲಿ; ದೋಷಂ = ಅಷ್ಟಾದಶದೋಷಂ; ಏನಾನುಂ = ಎತ್ತಾನುಂ; ಉಳ್ಳೊಡಂ = ಉಂಟಾದೊಡೆಯುಂ; ಪ್ರಿಯದಿಂ = ಪ್ರೀತಿಯಿಂದೆ; ತಿರ್ದುವುದು = ನೇರಿತ್ತಂ ಮಾಡುವುದು; ಗುಣಯುಕ್ತಮುಂ = ಶಬ್ದಸಾಮರ್ಥ್ಯವೆಂಬ ಗುಣದೊಡನೆ ಕೂಡಿದುದುಂ; ದೋಷವಿದೂರಮುಂ = ದೋಷರಹಿತಮಾದುದುಂ; ಆಗೆ = ಆಗಲಾಗಿ; ಮೆಚ್ಚಿ = ಒಡಂಬಟ್ಟು; ಕೈಕೊಳ್ವುದು = ಅಂಗೀಕರಿಸುವುದು.

ವೃತ್ತಿ. — ಶಬ್ದಮಣಿದರ್ಪಣದೊಳೇನಾನುಂ ದೋಷಮುಳ್ಳೊಡಂ, ವಿದ್ವಾಂಸರವಧರಿಸಿ ಕೇಳ್ದು, ಕರುಣದಿಂ ಮನಪ್ರೀತಿವೆರಸಿ ತಿರ್ದುವುದು; ಗುಣಾನ್ವಿತಮುಂ ನಿರ್ದೋಷಮುಮಾಗೆ, ಮೆಚ್ಚಿ ಸ್ವೀಕರಿಪುದು.

ಮೂಲಂ.

The work is illustrated with quotations from the poets Gajaga, Guṇanandi, Manasija, Asaga, Čandrabhaṭṭa, Guṇavarma, Śrīvijaya, Honna, Hampa and Sujanottaṁsa.

ಗಜಗನ[1] ಗುಣನಂದಿಯ[2] ಮನ[3] |
ಸಿಜನ[4]ಸಗನ ಚಂದ್ರಭಟ್ಟ[5]ಗುಣವರ್ಮ[6] ಶ್ರೀ[7] ||
ವಿಜಯರ ಹೊನ್ನನ[8] ಹಂಪನ[9] |
ಸುಜನೋತ್ತಂಸನ[10] ಸುಮಾರ್ಗಮಿದಱೊಳೆ ಲಕ್ಷ್ಯಂ.
|| ೫ ||

---

1) ಗಜಗ or ಗಜಾಂಕುಶ a Kannada poet of about 1050 A. D.

2) ಗುಣನಂದಿ the eminent logician and the disciple of ಬಲಾಕಪಿಂಛ has been mentioned in the Śravaṇa Beḷuguḷa inscription of about 1115 A. D.

"ಅಭೂದುಮಾಸ್ವಾತಿಮುನೀಶ್ವರೋಽಸಾ-
ವಾಚಾರ್ಯಶಬ್ದೋತ್ತರಗೃಧ್ರಪಿಂಛಃ" ||
"ಶ್ರೀಗೃಧ್ರಪಿಂಛಮುನಿಪಸ್ಯ ಬಲಾಕಪಿಂಛ |
ಶಿಷ್ಯೋಽಜನಿಷ್ಟ ಭುವನತ್ರಯವರ್ತಿಕೀರ್ತಿಃ" ||
"ತಚ್ಛಿಷ್ಯೋ ಗುಣನಂದಿಪಂಡಿತಯತಿಶ್ಚಾರಿತ್ರಚಕ್ರೇಶ್ವರಃ" ||
ತರ್ಕವ್ಯಾಕರಣಾದಿ ಶಾಸ್ತ್ರನಿಪುಣಸ್ಸಾಹಿತ್ಯವಿದ್ಯಾಪತಿಃ" ||

3) ಮನಸಿಜ, ಅಸಗ and ಚಂದ್ರಭಟ್ಟ have been mentioned together by ದುರ್ಗಸಿಂಹ in his ಪಂಚತಂತ್ರ.

"ಎಸೆದುವೊ ಸುಕವಿಗಳೆನೆ ನೆಗ
ೞ್ದಸಗನ ಮನಸಿಜನ ಚಂದ್ರಭಟ್ಟನ ನುಡಿಗಳ್" ||

ಮನಸಿಜ according to ಕವಿಚರಿತೆ lived about the year 1140 A. D.

4) ಅಸಗ according to ಕವಿಚರಿತೆ flourished about the year 945 A. D. In the Muḍabidaru library is found a Saṁskṛita work, called ವರ್ಧಮಾನಪುರಾಣ by ಅಸಗ ಕವಿ.

5) ಚಂದ್ರಭಟ್ಟ having been mentioned by ದುರ್ಗಸಿಂಹ must have lived before 1145 A. D.

6) There were two poets of the name of ಗುಣವರ್ಮ. ಗುಣವರ್ಮ I. whom the author of ಶಬ್ದಮಣಿದರ್ಪಣ quotes probably lived about the year 1050 A. D. ಗುಣವರ್ಮ II. the author of ಪುಷ್ಪದಂತಪುರಾಣ might have been a contemporary of ಕೇಶಿರಾಜ.

ಪದಚ್ಛೇದಂ.— ಗಜಗನ, ಗುಣನಂದಿಯ, ಮನಸಿಜನ, ಅಸಗನ, ಚಂದ್ರಭಟ್ಟಗುಣವರ್ಮಶ್ರೀವಿಜಯರ, ಹೊನ್ನನ, ಹಂಪನ, ಸುಜನೋತ್ತಂಸನ ಸುಮಾರ್ಗಂ ಇದರೊಳೆ ಲಕ್ಷ್ಯಂ.

ಟೀಕು, ಯಥಾನ್ವಯಂ.—ಗಜಗನ = ಗಜಗನೆಂಬ ಕವೀಶ್ವರನ; ಗುಣನಂದಿಯ= ಗುಣನಂದಿಯೆಂಬ ಕವೀಶ್ವರನ; ಮನಸಿಜನ = ಮನಸಿಜನೆಂಬ ಕವೀಶ್ವರನ; ಅಸಗನ = ಅಸಗನೆಂಬ ಕವೀಶ್ವರನ; ಚಂದ್ರಭಟ್ಟಗುಣವರ್ಮಶ್ರೀವಿಜಯರ = ಚಂದ್ರಭಟ್ಟನೆಂಬ ಗುಣವರ್ಮನೆಂಬ ಶ್ರೀವಿಜಯನೆಂಬೀ ಕವೀಶ್ವರರ; ಹೊನ್ನನ=ಹೊನ್ನನೆಂಬ ಕವೀಶ್ವರನ; ಹಂಪನ = ಹಂಪನೆಂಬ ಕವೀಶ್ವರನ; ಸುಜನೋತ್ತಂಸನ = ಸುಜನೋತ್ತಂಸನೆಂಬ ಕವೀಶ್ವರನ; ಸುಮಾರ್ಗಂ= ಲೇಸಾದ ಕಾವ್ಯಮಾರ್ಗಂ; ಇದರೊಳೆ = ಈ ಶಬ್ದಮಣಿದರ್ಪಣದಲ್ಲಿಯೆ; ಲಕ್ಷ್ಯಂ = ಉದಾಹರಣೆಗಳ್ ಕುಱುವಾಗಿರ್ಪವು.

ವೃತ್ತಿ.—ಈ ಕವಿಗಳಾದಿಯಾದ ಮತ್ತಂ ಪಲಂಬರ್ ಪ್ರಸಿದ್ಧಕವಿಗಳುದಾಹರಣಂಗಳಿದಱೊಳೊಳವು.

ಮೂಲಂ.

The Author wrote an explanatory Gloss (ಅರ್ಥವೃತ್ತಿ) to each Rule (ಸೂತ್ರಂ).

ಪ್ರಾಸಚ್ಛಂದೋನ್ವಯವಿ- |
ನ್ಯಾಸದಿನಂತಿಂತು ಶಬ್ದಮಿರ್ಕುಂ ವೃತ್ತಿ- ||
ವ್ಯಾಸಂ ತದ್ವ್ಯಾಕುಳಮೆಂ- |
ದಾ ಸೂತ್ರಕ್ಕರ್ಥವೃತ್ತಿ ವರ್ತಿಸೆ ಬರೆದೆಂ. || ೬ ||

---

7) ಶ್ರೀವಿಜಯ who is generally addressed in the plural by succeeding poets is the reputed author of the famous poem ಕವಿರಾಜಮಾರ್ಗ, a work of the 8th century on Poetics.

8) ಹೊನ್ನ or ಪೊನ್ನ is the author of ಶಾಂತಿಪುರಾಣ and ಜಿನಾಕ್ಷರಮಾಲೆ and belongs to the year 950 A. D.

9) ಹಂಪ or ಪಂಪ who wrote ಆದಿಪುರಾಣ and ಪಂಪಭಾರತ lived about the year 941 A. D.

10) According to ಕವಿಚರಿತೆ the real name of ಸುಜನೋತ್ತಂಸ is ಬೊಪ್ಪಣ್ಣ. He is said to have lived about the year 1180 A. D. and written ಗುಮ್ಮಟಸ್ತುತಿ and ನಕ್ಷತ್ರಮಾಲಿಕೆ.

ಪದಚ್ಛೇದಂ.—ಪ್ರಾಸಚ್ಛಂದೋಽನ್ವಯವಿನ್ಯಾಸದಿಂ ಅಂತು ಇಂತು ಶಬ್ದಂ ಇರ್ಕುಂ; ವೃತ್ತಿವ್ಯಾಸಂ ತದ್ವ್ಯಾಕುಳಂ ಎಂದು, ಆ ಸೂತ್ರಕ್ಕೆ ಅರ್ಥವೃತ್ತಿ ವರ್ತಿಸೆ ಬರೆದೆಂ.

ಅನ್ವಯಂ.—ಪ್ರಾಸಚ್ಛಂದೋಽನ್ವಯವಿನ್ಯಾಸದಿಂ ಶಬ್ದಂ ಅಂತಿಂತು ಇರ್ಕುಂ; ವೃತ್ತಿವ್ಯಾಸಂ ತದ್ವ್ಯಾಕುಳಂ ಎಂದು, ಆ ಸೂತ್ರಕ್ಕೆ ಅರ್ಥವೃತ್ತಿ ವರ್ತಿಸೆ ಬರೆದೆಂ.

ಟೀಕು.—ಪ್ರಾಸ = ಪಟ್ಪ್ರಾಸಂಗಳ; ಛಂದಃ = ಛಂದಸ್ಸಿನ; ಅನ್ವಯ = ಅರ್ಥದ; ವಿನ್ಯಾಸದಿಂ = ನಿಱುಗೆಯಿಂದೆ; ಶಬ್ದಂ = ಶಬ್ದಂಗಳ್; ಅಂತಿಂತು = ಪಲ್ಲಟವಾಗಿ; ಇರ್ಕುಂ = ಇರ್ಪುವು; ವೃತ್ತಿವ್ಯಾಸಂ = ವೃತ್ತಿವಿಸ್ತಾರಂ; ತತ್ = ಅದು; ವ್ಯಾಕುಳಮೆಂದು = ಸಂದೇಹವಪ್ಪುದೆಂದು; ಆ ಸೂತ್ರಕ್ಕೆ = ಆಯಾ ಸೂತ್ರಂಗಳ್ಗೆ; ಅರ್ಥವೃತ್ತಿ = ಅರ್ಥದ ವೃತ್ತಿಯು; ವರ್ತಿಸೆ = ಪ್ರವರ್ತಿಸೆ; ಬರೆದೆಂ = (ಅಂತಹ) ವೃತ್ತಿಯಂ ಲಿಖಿಸಿದೆಂ.

ವೃತ್ತಿ.—ಪ್ರಾಸದ, ಛಂದದ, ಅನ್ವಯದ ನಿಱುಗೆಯಿಂ ಶಬ್ದಂಗಳ್ ವ್ಯತ್ಯಯಮಾಗಿರ್ಪುವು; ಅವಱಿವಱ ಬಱಿಯೊಳ್ ವೃತ್ತಿಯ ವಿಸ್ತಾರಂ ವ್ಯಾಕುಲಮಾದಪುದೆಂದಾ ಸೂತ್ರಕ್ಕೆ ತಾತ್ಪರ್ಯಾರ್ಥಂ ಪ್ರವರ್ತಿಸುತ್ತಮಿರೆ ಬರೆದೆಂ.

ಮೂಲಂ.

The learned will accept this work favourably on account of its completeness.

ಜನಮಂಗೀಕರಿಪುದು ನೆ- |
ಟ್ಟನೆ ಸಂಬಂಧಾಭಿಧೇಯಶಕ್ಯಾನುಷ್ಠಾ- ||
ನನಿಜೇಷ್ಟಸಿದ್ಧಿಗಳ್ ನೆಲ- |
ಸಿ ನಿಂದ ಕಾರಣದೆ ಶಬ್ದಮಣಿದರ್ಪಣಮಂ. || ೭ ||

ಪದಚ್ಛೇದಂ.—ಜನಂ ಅಂಗೀಕರಿಪುದು, ನೆಟ್ಟನೆ ಸಂಬಂಧಾಭಿಧೇಯಶಕ್ಯಾನುಷ್ಠಾನನಿಜೇಷ್ಟಸಿದ್ಧಿಗಳ್ ನೆಲಸಿ ನಿಂದ ಕಾರಣದೆ, ಶಬ್ದಮಣಿದರ್ಪಣಮಂ.

ಅನ್ವಯಂ.—ಸಂಬಂಧಾಭಿಧೇಯಶಕ್ಯಾನುಷ್ಠಾನನಿಜೇಷ್ಟಸಿದ್ಧಿಗಳ್ ನೆಟ್ಟನೆ ನೆಲಸಿ ನಿಂದ ಕಾರಣದೆ ಶಬ್ದಮಣಿದರ್ಪಣಮಂ ಜನಂ ಅಂಗೀಕರಿಪುದು.

ಟೀಕು.—ಸಂಬಂಧ = ಪ್ರಕೃತಿಪ್ರತ್ಯಯಸಂಬಂಧ[1] ಲಕ್ಷ್ಯಲಕ್ಷಣಸಂಬಂಧ[2] ವಿಶೇಷ್ಯವಿಶೇಷಣಸಂಬಂಧ[3] ಕರ್ತೃಕರ್ಮಕ್ರಿಯಾಸಂಬಂಧಮೆಂದು[4], ನಾಲ್ಕುಗೆಗೆ ನಿಮಿತ್ತಂ;

---

[1] Relation between themes and affixes. [2] Relation between definables and definitions. [3] Relation between Substantives and Adjectives. [4] Relation between Subjects, Objects and Predicates.

ಅಭಿಧೇಯಂ = ಅರ್ಥಂ; ಶಕ್ಯಾನುಷ್ಠಾನಂ = ಆ ಅರ್ಥವನ್ನು ಸಾಧಿಸಲ್ತಕ್ಕ ಉದ್ಯೋಗಂ; ನಿಜ = ತನ್ನ; ಇಷ್ಟಸಿದ್ಧಿಗಳ್ = ಇಷ್ಟಾರ್ಥಸಿದ್ಧಿಗಳ್; ನೆಟ್ಟನೆ = ವ್ಯಕ್ತವಾಗಿ; ನೆಲಸಿ = ನೆಲೆಗೊಂಡು; ನಿಂದ ಕಾರಣದೆ = ಇರ್ದ ಕಾರಣದಿಂದೆ; ಶಬ್ದಮಣಿದರ್ಪಣಮುಂ = ಶಬ್ದಮಣಿದರ್ಪಣವೆಂಬ ಶಾಸ್ತ್ರಮುಂ; ಜನಂ = ವಿದ್ವಜ್ಜನಂ; ಅಂಗೀಕರಿಪುದು = ಸ್ವೀಕರಿಸುವುದು.

ವೃತ್ತಿ.—ಸಂಬಂಧಮೆಂದು ಪೊರ್ದುಗೆ, ಅಭಿಧೇಯಮೆಂದರ್ಥಂ, ಶಕ್ಯಾನುಷ್ಠಾನಮೆಂದಾ ಪದಾರ್ಥಮಂ ಸಾಧಿಸಲ್ ತಕ್ಕುದ್ಯೋಗಂ, ಇಷ್ಟಸಿದ್ಧಿಯೆಂದದಱ ಫಲಪ್ರಾಪ್ತಿ, ಇವು ಶಬ್ದಮಣಿದರ್ಪಣದೊಳ್ ನೆಲೆಗೊಂಡಿರ್ಪುದಱಿಂ ಸ್ವೀಕರಿಸದ ಲೋಕಮಿಲ್ಲ.

ವ್ಯಾಕರಣಪ್ರಾರಂಭಂ Commencement of Grammar.

ಮೂಲಂ.

This work has 8 Chapters.

ಕ್ರಮದಿಂದೆ ಸಂಧಿ ನಾಮಂ |
ಸಮಾಸಮಾ ತದ್ಧಿತಂ ಪೊದಟ್ಟಾಖ್ಯಾತಂ ||
ಪ್ರಮುದಿತ ಧಾತುಮಪಭ್ರಂ- |
ಶಮವ್ಯಯಂ ಸಂಧಿ ಶಬ್ದಮಣಿದರ್ಪಣದೊಳ್. || ೮ ||

ಪದಚ್ಛೇದಂ.—ಕ್ರಮದಿಂದೆ ಸಂಧಿ, ನಾಮಂ, ಸಮಾಸಂ, ಆ ತದ್ಧಿತಂ, ಪೊದಟ್ಟು ಆಖ್ಯಾತಂ, ಪ್ರಮುದಿತ ಧಾತುಂ, ಅಪಭ್ರಂಶಂ, ಅವ್ಯಯಂ—ಸಂಧಿ ಶಬ್ದಮಣಿದರ್ಪಣದೊಳ್.

ಅನ್ವಯಂ.—ಶಬ್ದಮಣಿದರ್ಪಣದೊಳ್ ಕ್ರಮದಿಂದೆ ಸಂಧಿ, ನಾಮಂ, ಸಮಾಸಂ, ಆ ತದ್ಧಿತಂ, ಪೊದಟ್ಟಾಖ್ಯಾತಂ, ಪ್ರಮುದಿತಧಾತುಂ, ಅಪಭ್ರಂಶಂ, ಅವ್ಯಯಂ — ಸಂಧಿ.

ಟೀಕು.—ಶಬ್ದಮಣಿದರ್ಪಣದೊಳ್ = ಶಬ್ದಮಣಿದರ್ಪಣದಲ್ಲಿ; ಕ್ರಮದಿಂದೆ = ತರುವಾಯಿಂದೆ; ಸಂಧಿ = ಸಂಧಿಪ್ರಕರಣಮೆಂದು; ನಾಮಂ = ನಾಮಪ್ರಕರಣಮೆಂದು; ಸಮಾಸಂ = ಸಮಾಸಪ್ರಕರಣಮೆಂದು; ಆ ತದ್ಧಿತಂ = ಆ ಪ್ರಸಿದ್ಧವಾದ ತದ್ಧಿತಪ್ರಕರಣಮೆಂದು; ಪೊದಟ್ಟು = ಪ್ರಸಿದ್ಧವಡೆದ; ಆಖ್ಯಾತಂ = ಆಖ್ಯಾತಪ್ರಕರಣಮೆಂದು; ಪ್ರಮುದಿತಧಾತುಂ = ವಿಶೇಷವಾಗಿ ಸಂತೋಷಿಸಲ್ಪಟ್ಟ ಧಾತುಪ್ರಕರಣಮೆಂದು; ಅಪಭ್ರಂಶಂ = ಅಪಭ್ರಂಶಪ್ರಕರಣಮೆಂದು; ಅವ್ಯಯಂ = ಅವ್ಯಯಪ್ರಕರಣಮೆಂದು; ಸಂಧಿ = ಸಂಧಿಗಳೆಂಟು.

ವೃತ್ತಿ.—ತರುವಾಯಿಂ ಸಂಧಿಯೆಂದುಂ[1], ನಾಮಮೆಂದುಂ[2], ಸಮಾಸ ಮೆಂದುಂ[3], ತದ್ಧಿತಮೆಂದುಂ[4], ಆಖ್ಯಾತಮೆಂದುಂ[5], ಧಾತುಮೆಂದುಂ[6], ಅಪ ಭ್ರಂಶಮೆಂದುಂ[7], ಅವ್ಯಯಮೆಂದುಂ[8], ಈ ಶಬ್ದಮಣಿದರ್ಪಣದೊಳ್ ಸಂಧಿ ಯೆಂಟಕ್ಕುಂ.

ಮೂಲಂ.

Origin of Sound (ಶಬ್ದದ್ರವ್ಯಂ) and Speech (or words, ಶಬ್ದಂ; cf. S. 34).

ಅನುಕೂಲಪವನನಿಂ ಜೀ- |
ವನಿಷ್ಟದಿಂ ನಾಭಿಮೂಲದೊಳ್ ಕಹಳೆಯ ಪಾಂ- ||
ಗಿನವೊಲ್ ಶಬ್ದದ್ರವ್ಯಂ |
ಜನಿಯಿಸುಗುಂ ಶ್ವೇತಮದಱ ಕಾರ್ಯಂ ಶಬ್ದಂ. || ೯ ||

ಪದಚ್ಛೇದಂ.—ಅನುಕೂಲಪವನನಿಂ ಜೀವನ ಇಷ್ಟದಿಂ ನಾಭಿಮೂಲದೊಳ್ ಕಹಳೆಯ ಪಾಂಗಿನ ವೊಲ್ ಶಬ್ದದ್ರವ್ಯಂ ಜನಿಯಿಸುಗುಂ ಶ್ವೇತಂ; ಅದಱ ಕಾರ್ಯಂ ಶಬ್ದಂ.

ಅನ್ವಯಂ.—ಜೀವನ ಇಷ್ಟದಿಂ ಅನುಕೂಲಪವನನಿಂ ನಾಭಿಮೂಲದೊಳ್ ಕಹಳೆಯ ಪಾಂಗಿನ ವೊಲ್ ಶಬ್ದದ್ರವ್ಯಂ ಶ್ವೇತಂ ಜನಿಯಿಸುಗುಂ; ಅದಱ ಕಾರ್ಯಂ ಶಬ್ದಂ.

ಟೀಕು.—ಜೀವನ=ಜೀವಾತ್ಮನ; ಇಷ್ಟದಿಂ=ಇಚ್ಛೆಯಿಂದೆ; ಅನುಕೂಲಪವನನಿಂ=ಜೀವ ನೊಡನೆ ಅನುಕೂಲವಾದ ಪ್ರಾಣಮಾರುತನಿಂದೆ; ನಾಭಿಮೂಲದೊಳ್ = ನಾಭಿಯ ಮೊದಲಲ್ಲಿ; ಕಹಳೆಯ ಪಾಂಗಿನ ವೊಲ್ = ನೆಗಪಿದ ಕಹಳೆಯಾಕಾರದ ಹಾಗೆ; ಶಬ್ದದ್ರವ್ಯಂ = ಶಬ್ದವೆಂಬ ದ್ರವ್ಯಂ; ಶ್ವೇತಂ = ಧವಳವರ್ಣವಾಗಿ; ಜನಿಯಿಸುಗುಂ = ಪುಟ್ಟುವುದು; ಅದಱ = ಆ ಶಬ್ದ ದ್ರವ್ಯದ; ಕಾರ್ಯಂ = ಪ್ರಯೋಜನಂ; ಶಬ್ದಂ = ಶಬ್ದಮಕ್ಕುಂ.

ವಿಚಾರಂ Remark.—ಶಬ್ದದ್ರವ್ಯಮೆಂದೊಡೆ ಘಟಕ್ಕೆ ಮೃತ್ತಿಕೆಯೆಂತಂತೆ ಅಕ್ಷರಾ ತ್ಮಕವಾದ ಶಬ್ದಂಗಳ್ ಪುಟ್ಟುವುದರ್ಕೆ ಉಪಾದಾನಕಾರಣವಾದ ವಸ್ತುವೆಂದಱವುದು; ಶಬ್ದಕ್ಕೆ ದ್ರವ್ಯತ್ವಮುಂ ಜೈನರ್ ಪೇೞ್ವರ್.

---

[1] Euphonic junction of letters. [2] Nominal bases. [3] Compound bases. [4] Secondary nominal bases formed by means of suffixes from Nouns and Verbs. [5] Verbal themes with personal terminations. [6] Verbal roots. [7] Words corrupted from Samskrita. [8] Indeclinables.

ವೃತ್ತಿ.—ಅನುಕೂಲಪವನನ ಬೆಂಬಳಿಯಿಂ ಜೀವನೊಡನೆ ಸಂಬಂಧ ಮಾಗಿರ್ಪುದರಿಂ, ನಾಭಿಯ ಮೊದಲಲ್ಲಿ ನೆಗಪಿದ ಕಹಳೆಯಾಕಾರದಿಂ ಶಬ್ದ ಮೆಂಬ ದ್ರವ್ಯಂ ಧವಳವರ್ಣಮಾಗಿ ಪುಟ್ಟುಗುಂ; ಅದಱ ಕಾರ್ಯಮಂ ಶಬ್ದ ಮೆಂಬರ್.

ಮೂಲಂ.

Usefulness of Grammar.

ವ್ಯಾಕರಣದಿಂದೆ ಪದಮಾ ।
ವ್ಯಾಕರಣದ ಪದದಿನರ್ಥಮರ್ಥದೆ ತತ್ತ್ವಾ- ॥
ಲೋಕಂ ತತ್ತ್ವಾಲೋಕದಿ- ।
ನಾಕಾಂಕ್ಷಿಪ ಮುಕ್ತಿಯಕ್ಕುಮದೆ ಬುಧರ್ಗೆ ಫಲಂ. ॥ ೧೦ ॥

ಪದಚ್ಛೇದಂ.—ವ್ಯಾಕರಣದಿಂದೆ ಪದಂ, ಆ ವ್ಯಾಕರಣದ ಪದದಿಂ ಅರ್ಥಂ, ಅರ್ಥದೆ ತತ್ತ್ವಾಲೋಕಂ, ತತ್ತ್ವಾಲೋಕದಿಂ ಆಕಾಂಕ್ಷಿಪ ಮುಕ್ತಿ ಅಕ್ಕುಂ; ಅದೆ ಬುಧರ್ಗೆ ಫಲಂ.

ಯಥಾನ್ವಯಂ. ಟೀಕು.—ವ್ಯಾಕರಣದಿಂದೆ = ಶಬ್ದಶಾಸ್ತ್ರದಿಂದೆ; ಪದಂ = ಪದಸಿದ್ಧಿ; ಅಕ್ಕುಂ = ಅಪ್ಪುದು.; ಆ ವ್ಯಾಕರಣದ = ಆ ಶಬ್ದಶಾಸ್ತ್ರದ; ಪದದಿಂ = ಪದಸಿದ್ಧಿಯಿಂದೆ; ಅರ್ಥಂ = ಅರ್ಥವಿಚಾರಂ ಅಪ್ಪುದು; ಅರ್ಥದೆ = ಅರ್ಥವಿಚಾರದಿಂದೆ; ತತ್ತ್ವಾಲೋಕಂ = ತತ್ತ್ವಜ್ಞಾನಂ ಅಪ್ಪುದು; ತತ್ತ್ವಾಲೋಕದಿಂ = ತತ್ತ್ವಜ್ಞಾನದಿಂದೆ; ಆಕಾಂಕ್ಷಿಪ ಮುಕ್ತಿ = ಬಯಸಲ್ ತಕ್ಕ ಮೋಕ್ಷಂ ಅಪ್ಪುದು; ಅದೆ = ಆ ಮೋಕ್ಷವೆ; ಬುಧರ್ಗೆ = ವಿದ್ವಾಂಸರ್ಗೆ; ಫಲಂ = ಸತ್ಫಲಂ ಅಪ್ಪುದು.

ವೃತ್ತಿ.—ವ್ಯಾಕರಣದಿಂದೆ ಪದಸಿದ್ಧಿಯಕ್ಕುಂ; ಆ ವ್ಯಾಕರಣದ ಪದಸಿದ್ಧಿಯಿಂದರ್ಥಜ್ಞಾನಮಕ್ಕುಂ; ಆ ಜ್ಞಾನದಿಂ ತತ್ತ್ವವಿಚಾರಮಕ್ಕುಂ; ತತ್ತ್ವವಿಚಾರದಿಂ, ಬಯಸುವ ಮುಕ್ತಿ ದೊರೆಕೊಳ್ಳುಂ; ಬುಧರ್ಗದುಕಾರಣದಿಂ ವ್ಯಾಕರಣಮುಪಾದೇಯಂ.

೧ನೆಯ ಅಧ್ಯಾಯಂ I. CHAPTER.

ಸಂಧಿ On Letters and Euphonism.

1. ಅಕ್ಷರಸಂಜ್ಞಾಪ್ರಕರಣಂ First Section: On Letters.

ಸೂತ್ರಂ Aphorism or Rule. ‖ ೧ ‖

Letters, the first subject to be treated of.

ಅರಯೆ ತಚ್ಛಾಸ್ತ್ರವ್ಯವ- |
ಹಾರಜ್ಞಾನಾರ್ಥಮಾಗೆ ಪೇೞಲ್ಪಡೆಗುಂ ||
ಧೀರರಿನಕ್ಷರಸಂಜ್ಞಾ- |
ಕಾರಂ ವ್ಯಾಕರಣದಾದಿಯೊಳ್ ಪರಿವಿಡಿಯಿಂ. || ೧೧ ||

ಪದಚ್ಛೇದಂ.— ಅರಯೆ ತಚ್ಛಾಸ್ತ್ರವ್ಯವಹಾರಜ್ಞಾನಾರ್ಥಂ ಆಗಿ ಪೇೞಲ್‌ಪಡೆಗುಂ ಧೀರರಿಂ ಅಕ್ಷರಸಂಜ್ಞಾಕಾರಂ ವ್ಯಾಕರಣದ ಆದಿಯೊಳ್ ಪರಿವಿಡಿಯಿಂ.

ಅನ್ವಯಂ.—ತಚ್ಛಾಸ್ತ್ರವ್ಯವಹಾರಜ್ಞಾನಾರ್ಥಂ ಆಗಿ, ಅರಯೆ, ವ್ಯಾಕರಣದ ಆದಿಯೊಳ್ ಧೀರರಿಂ ಅಕ್ಷರಸಂಜ್ಞಾಕಾರಂ ಪರಿವಿಡಿಯಿಂ ಪೇೞಲ್‌ಪಡೆಗುಂ.

ಟೀಕು.— ತಚ್ಛಾಸ್ತ್ರ=ಆ ಶಬ್ದಶಾಸ್ತ್ರದ; ವ್ಯವಹಾರ=ವ್ಯವಹಾರಮುಂ; ಜ್ಞಾನಾರ್ಥಮಾಗೆ=ತಿಳಿವ ಪ್ರಯೋಜನವಾಗಿ; ಅರಯೆ=ವಿಚಾರಿಸೆ, ವ್ಯಾಕರಣದ=ವ್ಯಾಕರಣಶಾಸ್ತ್ರದ; ಆದಿಯೊಳ್=ಮೊದಲಲ್ಲಿ; ಧೀರರಿಂ=ವಿದ್ವಾಂಸರಿಂದ; ಅಕ್ಷರಸಂಜ್ಞಾಕಾರಂ=ಅಕ್ಷರಂಗಳ ಸಂಜ್ಞಾಸ್ವರೂಪಂ; ಪರಿವಿಡಿಯಿಂ=ತರುವಾಯಿಂದ; ಪೇೞಲ್ಪಡೆಗುಂ=ಹೇೞಲ್ಪಡುವುದು.

ವೃತ್ತಿ.— ಆ ಶಬ್ದಶಾಸ್ತ್ರವ್ಯವಹಾರಮಂ ತಿಳಿಯಲೋಸ್ಕರಮಾಗಕ್ಷರಸಂಜ್ಞಾಸ್ವರೂಪಂ ವ್ಯಾಕರಣದ ಮೊದಲೊಳ್ ಕ್ರಮದಿಂ ಪೇೞಲ್ಪಡೆಗುಂ.

ಸೂತ್ರಂ. || ೨ ||

The two Synonyms for "Letter" are ಅಕ್ಷರಂ and ವರ್ಣಂ.

ಅಕ್ಕರಮುಂ ವರ್ಣಮುಮೆಂ- |
ದಕ್ಕುಂ ಶುದ್ಧಾಕ್ಷರಕ್ಕೆ ನಾಮಂ ಬರೆಪಂ ||
ಬೊಕ್ಕುಚ್ಚರಿಸಲ್ಬಾರದು- |
ವಕ್ಕರಮಲ್ತವು ಘನಸ್ವನಾದಿಧ್ವನಿಗಳ್. || ೧೨ ||

ಪದಚ್ಛೇದಂ.— ಅಕ್ಕರಮುಂ ವರ್ಣಮುಂ ಎಂದು, ಅಕ್ಕುಂ ಶುದ್ಧಾಕ್ಷರಕ್ಕೆ ನಾಮಂ; ಬರೆಪಂಬೊಕ್ಕು ಉಚ್ಚರಿಸಲ್ ಬಾರದುವು ಅಕ್ಕರಂ ಅಲ್ತು; ಅವು ಘನಸ್ವನಾದಿಧ್ವನಿಗಳ್.

ಟೀಕು, ಯಥಾನ್ವಯಂ.— ಅಕ್ಕರಮುಂ = ಅಕ್ಕರಮೆಂದುಂ; ವರ್ಣಮುಂ = ವರ್ಣಮೆಂದುಂ; ಶುದ್ಧಾಕ್ಷರಕ್ಕೆ=ಶುದ್ಧವಾದಕ್ಷರಂಗಳ್ಗೆ; ನಾಮಂ=ಪೆಸರ್; ಅಕ್ಕುಂ=ಅಪ್ಪುದು; ಬರೆಪಂಬೊಕ್ಕು=ಬರೆವುದಂ ಪೊಕ್ಕು; ಉಚ್ಚರಿಸಲ್ ಬಾರದುವು=ಉಚ್ಚಾರಣೆಗೆ ಬಾರದುವು; ಅಕ್ಕರಂಗಳ್=ಅಕ್ಷರಂಗಳ್; ಅಲ್ತು=ಅಲ್ಲ: ಅವು=ತಾವು; ಘನ=ಮೇಘದ: ಸ್ವನ=ಧ್ವನಿ; ಆದಿ=ಮೊದಲಾದ; ಧ್ವನಿಗಳ್=ಪಲವು ತೆಱದ ಧ್ವನಿಗಳ್ ಅಪ್ಪುವು.

ವೃತ್ತಿ.— ಅಕ್ಕರಮೆಂದುಂ, ವರ್ಣಮೆಂದುಂ, ಶುದ್ಧಾಕ್ಷರಕ್ಕೆ ಪರ್ಯಾಯನಾಮಂ; ಬರೆಯಲುಮುಚ್ಚರಿಸಲ್ಬಾರದುವಕ್ಷರಂಗಳಲ್ತವು—ಮೊೞಗು ಮೊದಲಾದ ಪಲ ತೆಱದ ಧ್ವನಿಗಳ್..

ಸೂತ್ರಂ. || ೩ ||

In each letter Sound and Form.

ವ್ಯವಹರಿಪುವೆರಡು ರೂಪಿಂ- |
ದವಕ್ಕರಂ ಶ್ರಾವಣಂ ಸ್ವನೈಕಾಕಾರಂ ||
ವಿವಿಧಾಕಾರಂ ಲಿಪಿಭೇ- |
ದವೃತ್ತಿಯಿಂ ಚಾಕ್ಷುಷಂ ಪುರಾತನಮತದಿಂ. || ೧೩ ||

ಪದಚ್ಛೇದಂ.— ವ್ಯವಹರಿಪುವು ಎರಡು ರೂಪಿಂದೆ ಅವು ಅಕ್ಕರಂ; ಶ್ರಾವಣಂ ಸ್ವನೈಕಾಕಾರಂ, ವಿವಿಧಾಕಾರಂ ಲಿಪಿಭೇದವೃತ್ತಿಯಿಂ ಚಾಕ್ಷುಷಂ; ಪುರಾತನಮತದಿಂ.

ಅನ್ವಯಂ.— ಪುರಾತನಮತದಿಂ ಅಕ್ಕರಂ ಅವು ಎರಡು ರೂಪಿಂದೆ ವ್ಯವಹರಿಪುವು: ಸ್ವನೈಕಾಕಾರಂ ಶ್ರಾವಣಂ, ಲಿಪಿಭೇದವೃತ್ತಿಯಿಂ ವಿವಿಧಾಕಾರಂ ಚಾಕ್ಷುಷಂ.

ಟೀಕು. — ಪುರಾತನಮತದಿಂದೆ = ಪೂರ್ವದ ಕವಿಗಳ ಮತದಿಂದೆ; ಅಕ್ಕರಂ = ಅಕ್ಷರಂಗಳ್; ಅವು = ಅವು ತಾಂ; ಎರಡು ರೂಪಿಂದೆ = ಶ್ರಾವಣ ಚಾಕ್ಷುಷವೆಂಬೆರಡು ತೆಱದಾಕಾರದಿಂದೆ; ವ್ಯವಹರಿಪುವು = ವರ್ತಿಪುವು; ಸ್ವನೈಕಾಕಾರಂ = ಧ್ವನಿಯೊಂದಱಾಕಾರವನುಳ್ಳುದು; ಶ್ರಾವಣಂ = ಶ್ರಾವಣವೆನಿಪುದು; ಲಿಪಿ = ಲಿಪಿಗಳ; ಭೇದ = ಭೇದದ; ವೃತ್ತಿಯಿಂ = ವರ್ತನೆಯಿಂದೆ; ವಿವಿಧಾಕಾರಂ = ನಾನಾ ಪ್ರಕಾರವಾದ ಆಕಾರವನುಳ್ಳುದು; ಚಾಕ್ಷುಷಂ = ಚಾಕ್ಷುಷವೆನಿಸುವುದು. — ಶ್ರಾವಣಮೆಂದೊಡೆ ಕಿವಿಯಲ್ಲಿ ಕೇಳ್ವುದು; ಚಾಕ್ಷುಷಮೆಂದೊಡೆ ಕಣ್ಣೊಳ್ಕಾಣ್ಬುದೆಂದಱಿವುದು.

ವೃತ್ತಿ. — ಎರ್ತೆಱದಾಕಾರದಿಂದಕ್ಕರಂ ವರ್ತಿಸುಗುಂ; ಶಬ್ದಾಕಾರದಿಂ ಕಿವಿಗೆ ವಿಷಯಮಾದಕ್ಷರಂ ಶ್ರಾವಣಮೆಂಬುದು, ಲಿಪಿಭೇದದಿಂ ಪಲವಾಕಾರಮಾಗಿ ಕಣ್ಗೆ ತೋಱುವಕ್ಕರಂ ಚಾಕ್ಷುಷಮೆಂಬುದು; ಇದನಾದಿಮಾರ್ಗದಿನಱಿವುದು.

I. The Alphabet.

ಸೂತ್ರಂ[1]. || ೪ ||

The 48 independent (for the dependent ones see Ss. 12; 17) letters of the Samskrita-Kannada Alphabet[2].

ವರ್ಣಂಗಳ ಪಾಠಕ್ರಮ- |
ಮರ್ಣವವೃತಧಾತ್ರಿಯೊಳ್ ಪ್ರಸಿದ್ಧಂ ನಿಜದಿಂ ||
ವರ್ಣಂಗಳಕಾರಾದ್ಯಾ- |
ಪೂರ್ಣತೆಯಂ ಪಡೆವುವಾ ಳಕಾರಂಬರೆಗಂ. || ೧೪ ||

ಪದಚ್ಛೇದಂ. — ವರ್ಣಂಗಳ ಪಾಠಕ್ರಮಂ ಅರ್ಣವವೃತಧಾತ್ರಿಯೊಳ್ ಪ್ರಸಿದ್ಧಂ ನಿಜದಿಂ; ವರ್ಣಂಗಳ್ ಅಕಾರಾದ್ಯಾಪೂರ್ಣತೆಯಂ ಪಡೆವುವು, ಆ ಳಕಾರಂಬರೆಗಂ.

ಅನ್ವಯಂ. — ಅರ್ಣವವೃತಧಾತ್ರಿಯೊಳ್ ವರ್ಣಂಗಳ ಪಾಠಕ್ರಮಂ ನಿಜದಿಂ ಪ್ರಸಿದ್ಧಂ; ವರ್ಣಂಗಳ್ ಅಕಾರಾದ್ಯಾಪೂರ್ಣತೆಯಂ ಆ ಳಕಾರಂಬರೆಗಂ ಪಡೆವುವು.

ಟೀಕು. — ಅರ್ಣವ = ಸಮುದ್ರದಿಂದೆ; ವೃತ = ಸುತ್ತಲ್ಪಟ್ಟ; ಧಾತ್ರಿಯೊಳ್ = ಭೂಮಿಯಲ್ಲಿ; ವರ್ಣಂಗಳ = ಅಕ್ಷರಂಗಳ; ಪಾಠಕ್ರಮಂ = ಓದುವನುಕ್ರಮಂ; ನಿಜದಿಂ = ಸಹಜದಿಂದೆ;

---

1) ನಾಗವರ್ಮನ ಭಾಷಾಭೂಷಣ ಸೂತ್ರ 2.
"ಅಕಾರಾದಯಃ ಪ್ರಸಿದ್ಧಾ ವರ್ಣಾಃ" || ಭಾ. ಭೂ. 2. ||

2) The ಳ್ under this rule is the ಕ್ಷಳಂ.

ಪ್ರಸಿದ್ಧಂ = ಪ್ರಸಿದ್ಧಂ; ವರ್ಣಂಗಳ್ = ಅಕ್ಷರಂಗಳ್; ಅಕಾರ = ಅಕಾರಂ; ಆದಿ = ಮೊದಲಾಗಿ; ಆಪೂರ್ಣತೆಯುಂ = ಆ ಪರಿಪೂರ್ಣತ್ವಮುಂ; ಆ ಳಕಾರಂಬರೆಗಂ = ಆ ಳಕಾರಂ ಪರ್ಯಂತಂ; ಪಡೆವುವು = ಪಡೆವುವು.

ವೃತ್ತಿ. — ಅಕ್ಕರಂಗಳನೋದುವನುಕ್ರಮಂ ಕಡಲುಡಿಗೆಯಾದ ಪೊಡವಿಯೊಳ್ ಪ್ರಸಿದ್ಧಂ; ಅಕ್ಕರಂಗಳ್ ಅಕಾರಂ ಮೊದಲಾಗಿ ಳಕಾರ ಪರ್ಯಂತಂ ಪರಿಪೂರ್ಣಮಾಗಿರ್ಪುವು; ಅವಾವುವೆಂದೊಡೆ—

ಅ ಆ, ಇ ಈ, ಉ ಊ, ಋ ೠ, ಌ ೡ, ಏ ಐ, ಓ ಔ;
ಕ್ ಖ್, ಗ್ ಘ್, ಙ್; ಚ್ ಛ್, ಜ್ ಝ್, ಞ್; ಟ್ ಠ್, ಡ್ ಢ್,
ಣ್; ತ್ ಥ್, ದ್ ಧ್, ನ್; ಪ್ ಫ್, ಬ್ ಭ್, ಮ್;
ಯ್, ರ್, ಲ್, ವ್; ಶ್, ಷ್, ಸ್, ಹ್, ಳ್.

ಸೂತ್ರಂ. || ೫ ||

The Samskrita ಲ್ must take the form of ಳ್ (ಕ್ಷಳಂ) to be in Alliteration (ನಿಯಾಮಮಂ, ಪ್ರಾಸಂ) with the Kanarese ಳ್ (ಕುಳಂ)[1]

ಕುಳದ ನಿಯಾಮದೊಳೆಂದುಂ |
ಕ್ಷಳಕ್ಕೆ ಲಾಕ್ಷರವಿಕಲ್ಪಮಿಲ್ಲ ವಿಕಲ್ಪಂ ||
ಕ್ಷಳನಲ್ಲದಿಲ್ಲ ಸಂಸ್ಕೃತ- |
ದೊಳಾ ಲಕಾರಕ್ಕೆ ಪೇೞ್ದನದಱಿಂ ಕ್ಷಳನಂ || ೧೫ ||

ಪದಚ್ಛೇದಂ. — ಕುಳದ ನಿಯಾಮದೊಳ್ ಎಂದುಂ ಕ್ಷಳಕ್ಕೆ ಲಾಕ್ಷರವಿಕಲ್ಪಂ ಇಲ್ಲ; ವಿಕಲ್ಪಂ, ಕ್ಷಳಂ ಅಲ್ಲದೆ, ಇಲ್ಲ; ಸಂಸ್ಕೃತದೊಳ್ ಆ ಲಕಾರಕ್ಕೆ ಪೇೞ್ದಂ ಅದಱಿಂ ಕ್ಷಳನಂ.

ಅನ್ವಯಂ. — ಕುಳದ ನಿಯಾಮದೊಳ್ ಕ್ಷಳಕ್ಕೆ ಲಾಕ್ಷರವಿಕಲ್ಪಂ ಎಂದುಂ ಇಲ್ಲ; ವಿಕಲ್ಪಂ, ಕ್ಷಳಂ ಅಲ್ಲದೆ, ಇಲ್ಲ; ಅದಱಿಂ ಸಂಸ್ಕೃತದೊಳ್ ಆ ಲಕಾರಕ್ಕೆ ಕ್ಷಳನಂ ಪೇೞ್ದಂ.

[1] In Saṁskṛita the letter ಳ್ is a substitute for the letter ಡ್. According to Kêśava this ಳ್ is not ಕ್ಷಳ. That ಳ್ which only in a few instances is optionally used for Saṁskṛita ಲ್ is termed ಕ್ಷಳ by him:—ಕಮಳ or ಕಮಲ; ಜಳ or ಜಲ. The so called ಕುಳ or the Kannada ಳ್ which in its form and pronunciation is the same as Kêśava's ಕ್ಷಳ appears in words adduced by him, such as ಎಳಿದ, ಓಕುಳಿ, ಅಳಿಯು. See also ಸೂತ್ರ 16.

ಟೀಕು.— ಕುೞದ = ಕುೞ ೞಕಾರದ; ನಿಯಾಮದೊಳ್ = ಪ್ರಾಸಿನಲ್ಲಿ; ಕ್ಷಳಕ್ಕೆ = ಕ್ಷಳ ಳಕಾರಕ್ಕೆ; ಲಾಕ್ಷರವಿಕಲ್ಪಂ = ಲಕಾರದ ವಿಕಲ್ಪಂ; ಎಂದುಂ = ಆವಾಗಳುಂ; ಇಲ್ಲ = ಉಂಟಾಗದು; ವಿಕಲ್ಪಂ = ಕುೞಪ್ರಾಸಿಂಗೆ ವಿಕಲ್ಪಂ; ಕ್ಷಳನಲ್ಲದೆ = ಕ್ಷಳ ಳಕಾರಮಲ್ಲದೆ; ಇಲ್ಲ = ಲಕಾರದ ವಿಕಲ್ಪಮಿಲ್ಲ; ಅದಱಿಂ = ಅದು ಕಾರಣದಿಂದೆ; ಸಂಸ್ಕೃತದೊಳ್ = ಸಂಸ್ಕೃತದಲ್ಲಿ; ಆ ಲಕಾರಕ್ಕೆ = ಆ ಸಂಸ್ಕೃತದಲ್ಲಿರ್ದ ಲಕಾರಕ್ಕೆ; ಕ್ಷಳನಂ = ಕ್ಷಳನೆಂಬ ಳಕಾರಮುಂ; ಪೇೞ್ದಂ = ಹೇೞ್ದಂ.

ವಿಚಾರಂ.— ಕುೞಮೆಂದೊಡೆ ಕನ್ನಡ ಶಬ್ದದಲ್ಲಿ ಇರ್ದ ೞಕಾರಂ; ಕ್ಷಳಮೆಂದೊಡೆ, ಸಂಸ್ಕೃತ ಶಬ್ದದಲ್ಲಿ "ಲಳಯೋರ್ ಅಭೇದಃ" ಎಂದು ಉಂಟಾಗಿ, ಲಕಾರ ಳಕಾರಂಗಳ್ಗೆ ಭೇದವಿಲ್ಲದ ಳಕಾರವೆಂದಱಿವುದು.

ವೃತ್ತಿ.—ಕುೞಪ್ರಾಸಮಾಗಿ ಪೇೞ್ದ ಕಬ್ಬಂ ಕ್ಷಳನಂ ಸೆರೆಗೆಯ್ವುದಾಗಿ, ಲಕಾರಮಂ ವಿಕಲ್ಪಮಂ ಮಾಡಬಾರದು; ಲಕಾರಪ್ರಾಸಮಾಗಿ ಪೇೞ್ದ ಕನ್ನಡದ ಕಬ್ಬದೊಳ್ ಕ್ಷಳನಂ ವಿಕಲ್ಪದಿನಿರಿಸಬಾರದು, ಇದುವುಮಾಗದು. ಕ್ಷಳನೆಂಬುದಿಲ್ಲದೆ, ಸಂಸ್ಕೃತಪದದ ಲಕಾರಕ್ಕೆ ವಿಕಲ್ಪಮಂ ಪೇೞಲ್ವಾರದಾಗಿ, ಕ್ಷಳನನಿದಱೊಳ್ ಬೆರಸಿ, ಪೇೞ್ದಂ.

ಪ್ರಯೋಗಂ Application of the foregoing rule.

ಕುೞಕ್ಷಳಪ್ರಾಸಕ್ಕೆ[1]—

[illegible] ಕಿೞಿಱಿ ಹಯಂಗಳ್ ಗರ್ಜಿಸೆ |
ಜಲದನಿಭಂಗಳ್ ಗಜಂಗಳ . . . . ‖ 1 ‖

[1] ಪ್ರಾಸ in Kannada is a kind of obligatory Alliteration in which the second letter of every line in a stanza should be the same consonant. Different consonants standing as the second letters of lines in poetry spoil the ಪ್ರಾಸ and are never permissible. It thus follows that ಲ್ and ೞ್ should not be employed as letters for ಪ್ರಾಸ in the same verse. But Kêśava lays down that under certain conditions ಲ್ and ೞ್ shall be allowed as ಪ್ರಾಸ letters. The Kannada ೞ್, *i. e.* the ಕುೞ ೞಕಾರ and the Saṁskṛita ಲ್ for which ಳ್ can be substituted, *i. e.* the ಕ್ಷಳ ಳಕಾರ do stand to form a right ಪ್ರಾಸ. In the first instance quoted ೞ್ in ಕೆೞೆ is ಕುೞ ೞಕಾರ, while ಲ in ಜಲದ can have ಳ substituted for it. Hence the ಪ್ರಾಸ is permissible. In the second instance though the same letter ಲ occurs in each of the lines the ಪ್ರಾಸ is wrong, for ಲ್ in ಓಲಗ cannot interchange with ಳ್ and thus the combination of ಲ್, *i. e.* the Kannada ಲಕಾರ and the Saṁskṛita ಲ್ in ಬಾಲಕ for which ಳ can be substituted is not admissible.

ಲಕಾರಕ್ಕೆ ಕ್ಷಳನನಿರಿಸಬಾರದುದರ್ಕೆ—
ಓಲಗದೊಳೊರ್ವೆ ನತನರ- |
ಪಾಲಕಚೂಡಾಮಣಿದ್ಯುತಿಪ್ಲುತಚರಣಂ ॥ 2 ॥

2. The Vowels.

ಸೂತ್ರಂ[1]. ॥ ೬ ॥

There are 14 Saṃskṛita-Kannada Vowels; excepting ಏ, ಐ and ಓ, ಔ (which are Diphthongs, ಸಂಧ್ಯಕ್ಷರಂಗಳ್, cf S. 10), they are Monophthongs (ಸಮಾನಂಗಳ್), and Homogens (ಸವರ್ಣಂಗಳ್).

ತರದಿನಕಾರಂ ಮೊದಲಾ- |
ಗಿರೆ ಪದಿನಾಲ್ಕುಂ ಸ್ವರಂಗಳಾದಿಯ ಪತ್ತ ॥
ಕ್ಕರಮುಂ ಸಮಾನಮೆನಿಸುಗು- |
ಮೆರಡೆರಡವಱೊಳ್ ಸವರ್ಣಮೆಂತೋದಿದೊಡಂ. ॥ ೧೬ ॥

ಪದಚ್ಛೇದಂ. — ತರದಿಂ ಅಕಾರಂ ಮೊದಲ್ ಆಗಿ ಇರೆ, ಪದಿನಾಲ್ಕುಂ ಸ್ವರಂಗಳ್; ಆದಿಯ ಪತ್ತು ಅಕ್ಕರಮುಂ ಸಮಾನಂ ಎನಿಸುಗುಂ, ಎರಡು ಎರಡು ಅವಱೊಳ್ ಸವರ್ಣಂ, ಎಂತು ಓದಿದೊಡಂ.

ಅನ್ವಯಂ. — ತರದಿಂ ಅಕಾರಂ ಮೊದಲ್ ಆಗಿ ಇರೆ, ಪದಿನಾಲ್ಕುಂ ಸ್ವರಂಗಳ್; ಆದಿಯ ಪತ್ತಕ್ಕರಮುಂ ಸಮಾನಂ ಎನಿಸುಗುಂ, ಅವಱೊಳ್ ಎರಡೆರಡು, ಎಂತು ಓದಿದೊಡಂ, ಸವರ್ಣಂ.

ಟೀಕು. — ತರದಿಂ=ತರುವಾಯಿಂದೆ; ಅಕಾರಂ=ಅತ್ವಂ; ಮೊದಲಾಗಿ=ಆದಿಯಾಗಿ; ಇರೆ=ಇರಲಾಗಿ; ಪದಿನಾಲ್ಕುಂ=ಹದಿನಾಲ್ಕಕ್ಷರಂಗಳುಂ; ಸ್ವರಂಗಳ್=ಸ್ವರಾಕ್ಷರಂಗಳ್; ಎನಿಸುಗುಂ=ಎನಿಸುವುವು; ಆದಿಯ=ಮೊದಲ; ಪತ್ತಕ್ಕರಮುಂ=ಹತ್ತಕ್ಷರಂಗಳುಂ; ಸಮಾನಂ=ಸಮಾನಂಗಳ್; ಎನಿಸುಗುಂ=ಎನಿಸುವುವು; ಅವಱೊಳ್=ಆ ಸಮಾನಸಂಜ್ಞೆಯಂ ಪಡೆದ ಹತ್ತಕ್ಷರಂಗಳಲ್ಲಿ; ಎರಡೆರಡು=ಎರಡೆರಡಕ್ಷರಂಗಳ್; ಎಂತೋದಿದೊಡಂ=ಅನುಲೋಮವಿಲೋಮಂಗಳಾಗಿ ಹೇಗೆ ಓದಿದೊಡೆಯುಂ; ಸವರ್ಣಂ= ಸವರ್ಣಂಗಳ್; ಎನಿಸುಗುಂ=ಎನಿಸುವುವು.

---

1) ತೇಷ್ವಾದೌ ಚತುರ್ದಶ ಸ್ವರಾಃ ॥ ಭಾ. ಭೂ. 3. ॥
ನಾಗವರ್ಮನ ಕಾವ್ಯಾವಲೋಕನದಲ್ಲಿನ ಶಬ್ದಸ್ಮೃತಿಯ ಸೂತ್ರ.
ಸ್ವರಮೆಂದುಂ ವ್ಯಂಜನಮೆಂ- |
ದೆರಡಕ್ಕುಂ ವರ್ಣಭೇದಮಾದ್ಯಕ್ಷರದಿಂ ॥
ಬರೆ ಪದಿನಾಲ್ಕುಂ ಸ್ವರಮಿಂ |
ಪರಿಶೇಷಂ ವ್ಯಂಜನಂಗಳರೆಮಾತ್ರಿಕೆಗಳ್. ॥ ಶ. ಸ್ಮೃ. ॥

ವೃತ್ತಿ.— ಕ್ರಮದಿಂದ ಅಕಾರಂ ಮೊದಲಾಗಿ ಔಕಾರ ಪರ್ಯಂತಮಿರ್ದ ಪದಿನಾಲ್ಕಕ್ಕರಂ ಸ್ವರಸಂಜ್ಞೆಯಂ ಪಡೆಗುಂ; ಅಲ್ಲಿ ಮೊದಲ ಪತ್ತಕ್ಕರಂ ಸಮಾನ ಸಂಜ್ಞೆಯಂ ಪಡೆಗುಂ; ಆ ಪತ್ತಕ್ಕರಂಗಳೊಳೆರಡೆರಡಕ್ಕರಂಗಳ್, ತಮ್ಮೊಳ್ ಅನುಲೋಮದೊಳಿರ್ದೊಡಂ ವಿಲೋಮದೊಳಿರ್ದೊಡಂ, ಸವರ್ಣಸಂಜ್ಞೆಯಂ ಪಡೆಗುಂ.

ಪದಿನಾಲ್ಕು ಸ್ವರಂಗಳ್ —

ಅ ಆ, ಇ ಈ, ಉ ಊ, ಋ ೠ, ಌ ೡ, ಏ ಐ, ಓ ಔ.

ಸಮಾನಸಂಜ್ಞಾಕ್ಷರಂಗಳ್ —

ಅ ಆ, ಇ ಈ, ಉ ಊ, ಋ ೠ, ಌ ೡ.

ಅನುಲೋಮಕ್ಕೆ (Regular order).— ಅ ಆ; ಇ ಈ ಎಂಬೀ ಪ್ರಕಾರ ಮಾಗಿ ಆ ಪತ್ತಕ್ಷರಂಗಳ್ ಅನುಲೋಮದೊಳಿರ್ದೊಡಂ ಸವರ್ಣಸಂಜ್ಞೆಯಂ ಪಡೆಗುಂ.

ವಿಲೋಮಕ್ಕೆ (Irregular order).— ಆ ಅ; ಈ ಇ ಎಂಬೀ ಪ್ರಕಾರ ಮಾಗಿರ್ದೊಡಂ ಸವರ್ಣಸಂಜ್ಞೆಯಂ ಪಡೆಗುಂ.

ಸೂತ್ರಂ. || ೭ ||

Further remark on the Homogeny of the said 10 Vowels.

ಕ್ರಮದಿಂ ಹ್ರಸ್ವಕ್ಕಂ ಹ್ರ- |
ಸ್ವಮೊದವೆ ದೀರ್ಘಕ್ಕೆ ದೀರ್ಘಮೊದವೆ ತಗುಳ್ಗುಂ ||
ಸಮಸಂದಾ ಯುಗಳಂಗಳೊ- |
ಳಮಳಿನಮಾಗೆಲ್ಲಿಯುಂ ಸವರ್ಣವಿಧಾನಂ. || ೧೭ ||

ಪದಚ್ಛೇದಂ.— ಕ್ರಮದಿಂ ಹ್ರಸ್ವಕ್ಕಂ ಹ್ರಸ್ವಂ ಒದವೆ, ದೀರ್ಘಕ್ಕೆ ದೀರ್ಘಂ ಒದವೆ, ತಗುಳ್ಗುಂ ಸಮಸಂದ ಆ ಯುಗಳಂಗಳೊಳ್, ಅಮಳಿನಂ ಆಗಿ, ಎಲ್ಲಿಯುಂ ಸವರ್ಣವಿಧಾನಂ.

ಅನ್ವಯಂ.— ಸಮಸಂದಾ ಯುಗಳಂಗಳೊಳ್ ಕ್ರಮದಿಂ ಹ್ರಸ್ವಕ್ಕಂ ಹ್ರಸ್ವಂ ಒದವೆ, ದೀರ್ಘಕ್ಕೆ ದೀರ್ಘಂ ಒದವೆ, ಅಮಳಿನಂ ಆಗಿ ಎಲ್ಲಿಯುಂ ಸವರ್ಣವಿಧಾನಂ ತಗುಳ್ಗುಂ.

ಟೀಕು.—ಸಮಸಂದ = ಸಮಾನವಾಗಿ ಸಂದ; ಆ ಯುಗಳಂಗಳೊಳ್ = ಆ ಎರಡೆರ ಡಕ್ಷರಂಗಳಲ್ಲಿ; ಕ್ರಮದಿಂ = ತರುವಾಯಿಂದೆ; ಹ್ರಸ್ವಕ್ಕಂ = ಹ್ರಸ್ವಾಕ್ಷರಕ್ಕೆಯುಂ; ಹ್ರಸ್ವಂ = ಹ್ರಸ್ವಾಕ್ಷರಂ; ಒದವೆ = ಪ್ರಾಪ್ತಿಸೆ; ದೀರ್ಘಕ್ಕೆ = ದೀರ್ಘಾಕ್ಷರಕ್ಕೆ; ದೀರ್ಘಂ = ದೀರ್ಘಾಕ್ಷರಂ; ಒದವೆ = ಪ್ರಾಪ್ತಿಸೆ; ಅಮಳಿನವಾಗಿ = ನಿರ್ದೋಷವಾಗಿ; ಎಲ್ಲಿಯುಂ = ಅವೆಡೆಯಲ್ಲಿಯುಂ; ಸವರ್ಣವಿಧಾನಂ = ಸವರ್ಣಸಂಜ್ಞಾವಿಧಾನಂ; ತಗುಳ್ಗುಂ = ಐದುವುದು.

ವೃತ್ತಿ.—ತರುವಾಯಿಂದಾ ಯುಗಳಂಗಳೊಳೆ ಹ್ರಸ್ವಕ್ಕೆ ಹ್ರಸ್ವಂ ಪರಮಾದೊಡಂ, ದೀರ್ಘಕ್ಕೆ ದೀರ್ಘಂ ಪರಮಾದೊಡಂ, ನಿರ್ದೋಷಮಾಗಿ ಸವರ್ಣಸಂಜ್ಞೆ ವರ್ತಿಸುಗುಂ. ಎಂತೆಂದೊಡೆ—

ಹ್ರಸ್ವಕ್ಕೆ—ಅ ಅ; ಇ ಇ; ಉ ಉ; ಋ ಋ; ಌ ಌ.

ದೀರ್ಘಕ್ಕೆ—ಆ ಆ; ಈ ಈ; ಊ ಊ; ೠ ೠ; ೡ ೡ.

ಸೂತ್ರಂ[1]. || ೮ ||

ಸವನಿಸಿದೆ ಏ ಒ ಓ ಎಂ- |
ಬಿವು ಕನ್ನಡದೊಳ್ಸ್ವಭಾವದಿಂದೊಳವು ಸವ- ||
ರ್ಣವುಮಪ್ಪುವು ವರ್ಣಾಂಕಂ |
ಸವರ್ಣಸಂಜ್ಞೆಯೊಳಮೊದವುಗುಂ ವ್ಯಾಕೃತಿಯೊಳ್.
|| ೧೮ ||

The 4 Vowels ಎ ಏ, ಒ ಓ are inherent in Kannaḍa, form two distinct pairs each of homogen character, (and have characteristical marks to denote their being long or short. In Samskṛita there is neither ಎ nor ಒ *cf.* s 19.)

ಪದಚ್ಛೇದಂ.—ಸವನಿಸಿದ ಎ ಏ, ಒ ಓ ಎಂಬಿವು ಕನ್ನಡದೊಳ್ ಸ್ವಭಾವದಿಂದೆ ಒಳವು; ಸವರ್ಣವುಂ ಅಪ್ಪುವು; ವರ್ಣಾಂಕಂ ಸವರ್ಣಸಂಜ್ಞೆಯೊಳಂ ಒದವುಗುಂ ವ್ಯಾಕೃತಿಯೊಳ್.

ಅನ್ವಯಂ.—ಕನ್ನಡದೊಳ್ ಸವನಿಸಿದ ಎ ಏ, ಒ ಓ ಎಂಬಿವು ಸ್ವಭಾವದಿಂದೆ ಒಳವು; ಸವರ್ಣವುಂ ಅಪ್ಪುವು; ವ್ಯಾಕೃತಿಯೊಳ್ ಸವರ್ಣಸಂಜ್ಞೆಯೊಳಂ ವರ್ಣಾಂಕಂ ಒದವುಗುಂ.

ಎ·ಏ ಒ·ಓ ✓ 1) ಏದೋೞ್ತೌ ಹ್ರಸ್ವಾಶ್ಚ || ಭಾ. ಭೂ. 5. ||
ಪೊಯ್ ಬಯ್ ಮತ್ತಾರಯ್ ಗೆಯ್ |
ಸಯ್ಕೆಂದು ವಿಕಲ್ಪದಿಂ ಯ ಸಂಯೋಗದೊಳ್- ||
ತ್ರಯಿಸಿರ್ಕುಂ ಗುರುಲಘುಗತಿ |
ನಿಯಮಮದೇದೋದ್ವಯಕ್ಕಮಕ್ಕುಂ ಪ್ರಾಯಂ. || ಶ. ಸ್ಮೃ. 67. ||

ಟೀಕು.—ಕನ್ನಡದೊಳ್ = ಕನ್ನಡ ಭಾಷೆಯಲ್ಲಿ; ಸವಸಿಸಿದ = ಪ್ರಾಪ್ತಿಸಿದ; ಎ ಏ ಒ ಓ = ಎ ಏ ಒ ಓ ಎಂಬಿವು ಹ್ರಸ್ವ ದೀರ್ಘಂಗಳಾಗಿ; ಎಂಬಿವು = ಈ ಯುಗಳಾಕ್ಷರಂಗಳ್; ಸ್ವಭಾವದಿಂದೆ = ಸಹಜದಿಂದೆ; ಒಳವು = ಉಂಟು; ಸವರ್ಣವುಂ = ಸವರ್ಣಂಗಳುಂ; ಅಪ್ಪುವು = ಆಗುವುವು; ವ್ಯಾಕೃತಿಯೊಳ್ = ವ್ಯಾಕರಣದಲ್ಲಿ; ಸವರ್ಣಸಂಜ್ಞೆಯೊಳಂ = ಸವರ್ಣವೆಂಬ ಸಂಜ್ಞೆಯಲ್ಲಿಯುಂ; ವರ್ಣಾಂಕಂ = ವರ್ಣವೆಂಬ ಸಂಜ್ಞೆ; ಒದವುಗುಂ = ಪ್ರಾಪ್ತಿಸುವುದು.

ವಿಚಾರಂ.—ವರ್ಣಸಂಜ್ಞೆ ಎಂತೆಂದೊಡೆ, ಅವರ್ಣಂ ಇವರ್ಣಂ ಉವರ್ಣಂ ಎಂಬಂತೆ ಇವಂ ತಿಳಿವುದು.

ವೃತ್ತಿ.—ಎ ಏ, ಒ ಓ, ಎಂಬೀ ಯುಗಳಾಕ್ಷರಂಗಳ್ ಶಂಕಾವಧಾರಣ ನಿಪಾತಂಗಳಲ್ಲದೆ ನಿಜದಿನೊಳವು; ಸವರ್ಣಸಂಜ್ಞೆಯುಮವರ್ಕೆ ದೊರೆಕೊಳ್ವುದು; ವ್ಯಾಕರಣದೊಳ್ ಸವರ್ಣಸಂಜ್ಞೆ ವರ್ಣಸಂಜ್ಞೆಯುಮುಂಟು[1].

ಪ್ರಯೋಗಂ.—ಎಲೆ, ಎಲವಂ; ಏರಿ ಏತಂ; ಒಕ್ಕಲ್, ಒರೆಗಲ್; ಓತಂ, ಓರಗೆ.

"ಎತ್ತುಂಗೋಲುಂ ಬಿರಯಿಗೆ |
ಚಿತ್ತಭವಂ . . . ." || 3 ||

"ಎಡಱಿದರನಟ್ಟಿ ವೋಡುವ |
ಪಡಿಯಱಿಗಟ್ಟಿಗೆಗಳ . . . ." || 4 ||

"ಏಳಿದಂಗೆಯ್ಯಲಿವಿಾಗಳ್ . . . ." || 5 ||

"ಏತ್ತಱಿ ಮಾತೋ ಭೂತಳದೊಳ್" || 6 ||

"ಏೞಿಂ ಬೆಸನಮುಮಂ ನರಪಾಲನುಱಿಗೆ" || 7 ||

"ಒತ್ತರಮೊತ್ತಿದಂತೆ ಬೆಱಿಗಾಗೆ ಕೃಪಾದಿಗಳೊತ್ತೆ . . ." || 8 ||

"ಓಸರಿಸಿದ ಜವನಿಕೆಯೊಡ- |
ನೋಸರಿಸಿದನಲ್ತೆ ಕಂತು . . . . . ." || 9 ||

[1] The letters ಎ, ಏ, ಒ ಓ are not only used as particles to express doubt and emphasis, but are also found to be inherent in Kannada words. In the latter case, they belong to one class and are ಸವರ್ಣ.

ಸೂತ್ರಂ[1]. || ೯ ||

ವಿದಿತಸಮಾನಂಗಳ ಪೂ- |
ರ್ವದಕ್ಕರಂ ಹ್ರಸ್ವಮದಱ ಪರದಕ್ಕರಮಂ- ||
ತದು ದೀರ್ಘಮವರ್ಣಂ ಪಿಂ- |
ಗಿದಾ ಸ್ವರಂ ನಾಮಿಯೆಂದು ಪೇೞಲ್ಪಡೆಗುಂ || ೧೯ ||

As will have been observed, the Vowels are long and short. The Samskṛita-Kannada vowels, except ಅ and ಆ, are called "Benders" (ನಾಮಿಗಳ್)[2]

ಪದಚ್ಛೇದಂ.— ವಿದಿತಸಮಾನಂಗಳ ಪೂರ್ವದ ಅಕ್ಕರಂ ಹ್ರಸ್ವಂ, ಅದಱ ಪರದ ಅಕ್ಕರಂ ಅಂತು ಅದು ದೀರ್ಘಂ; ಅವರ್ಣಂ ಪಿಂಗಿದಾ ಸ್ವರಂ, ನಾಮಿ ಎಂದು, ಪೇೞಲ್ ಪಡೆಗುಂ.

ಟೀಕು, ಯಥಾನ್ವಯಂ.— ವಿದಿತ = ಪ್ರಸಿದ್ಧವಾದ; ಸಮಾನಂಗಳ = ಸಮಾನಸಂಜ್ಞೆಯಂ ಪಡೆದ ಪತ್ತಕ್ಕರಂಗಳ; ಪೂರ್ವದ = ಮೊದಲ; ಅಕ್ಕರಂ = ಅಕ್ಷರಂ; ಹ್ರಸ್ವಂ = ಹ್ರಸ್ವಾಕ್ಷರಂ; ಅದಱ = ಆ ಹ್ರಸ್ವಾಕ್ಷರದ; ಪರದ = ಮುಂದಣ; ಅಕ್ಕರಂ = ಅಕ್ಷರಂ; ಅಂತು = ಹಾಗೆ; ಅದು = ತಾಂ; ದೀರ್ಘಂ = ದೀರ್ಘಾಕ್ಷರಂ; ಅವರ್ಣಂ = ಅ ಆ ಎಂಬ ಸವರ್ಣಂ; ಪಿಂಗಿದ = ತೊಲಗಿದ; ಆ ಸ್ವರಂ = ಆ ಹನ್ನೆರಡು ಸ್ವರಾಕ್ಷರಂಗಳ್; ನಾಮಿಯೆಂದು = ನಾಮಿಗಳೆಂದು; ಪೇೞಲ್ಪಡೆಗುಂ = ಪೇಳಲ್ಪಡೆವುವು.

ವೃತ್ತಿ.— ಸಮಾನಸಂಜ್ಞೆಯಂ ಪಡೆದ ಪತ್ತಕ್ಕರಂಗಳ ಮೊದಲಕ್ಕರಂಗಳ್ ಹ್ರಸ್ವಂಗಳ್, ಅವಾವುವೆಂದೊಡೆ—
ಅ, ಇ, ಉ, ಋ, ಌ ಎಂಬಿವು; ಎ, ಒ ಎಂಬಿವುಮಂತೆ ಸಲ್ವುವು.
ಅವಱ ಮುಂದಣಕ್ಕರಂಗಳ್ ದೀರ್ಘಂ, ಅವಾವುವೆಂದೊಡೆ—
ಆ, ಈ, ಊ, ೠ, ೡ ಎಂಬಿವು; ಏ, ಓ ಎಂಬಿವುಮಂತೆ ಸಲ್ವುವು.

---

1) ಪರಿಹರಿಸೆಯುವರ್ಣಮನಾ |
ಸ್ವರಂಗಳವು ನಾಮಿಯೆಂಬುವಕ್ಕುಂ ಸಂಧ್ಯ- ||
ಕ್ಷರಮೆನೆ ಯಥಾರ್ಥದಿಂ ವ್ಯವ- |
ಹರಿಸುಗುಮೇಕಾರವಾದಿಯಾಗಿರೆ ನಾಲ್ಕುಂ || ಶ. ಸ್ಮೃ. 3. ||

2) Nâmi means "bending," as, according to Boethlingk and Roth's Dictionary, the Nâmi vowels bend or change a Dental into a Cerebral. The author does not make use of the word again.

ಅ ಆ ಎಂಬ ವರ್ಣಂ ಪಿಂಗಿದಾ ಪನ್ನೆರಡು ಸ್ವರಂಗಳ್ ನಾಮಿಸಂಜ್ಞೆಯಂ ಪಡೆವುವು, ಅವಾವುವೆಂದೊಡೆ—

ಇ, ಈ; ಉ, ಊ; ಋ, ೠ; ಌ, ೡ; ಏ, ಐ; ಓ, ಔ ಎಂಬಿವು.

ಅವರ್ಣವಾದಕ್ಕೆಡೆಯಾಗದೊಳ್ಪಿಂ- |
ದವರ್ಣಿಕಾಮರ್ ಗುಣವೃದ್ಧಿಧಾಮರ್ ||
ದಿವಾಕರರ್ ವ್ಯಾಕೃತಿನಾಮಿಗಳ್ ಪೋಲ್ |
ದಿವಕ್ಕೆ ಪನ್ನೀರ್ವರೆ ಮುಖ್ಯರಾದರ್. || 10 ||

ಸೂತ್ರಂ[1]. || ೧೦ ||

The 4 Diphthongs (*cf*. S. 6). Metrical quantity of the Vowels.

ಕ್ರಮದೆ ಗುರುದೀರ್ಘಮೇಕಾ- |
ರಮುಖ್ಯಸಂಧ್ಯಕ್ಷರಂಗಳವು ನಿಜದಿಂ ಹ್ರ- ||
ಸ್ವಮದೇಕಮಾತ್ರಕಂ ದೀ- |
ರ್ಘಮುಭಯಮಾತ್ರಂ ತ್ರಿಮಾತ್ರಕಂ ಪ್ಲುತಮಕ್ಕುಂ.
|| ೨೦ ||

ಪದಚ್ಛೇದಂ.—ಕ್ರಮದೆ ಗುರು ದೀರ್ಘಂ ಏಕಾರಮುಖ್ಯಸಂಧ್ಯಕ್ಷರಂಗಳ್ ಅವು ನಿಜದಿಂ; ಹ್ರಸ್ವಂ ಅದು ಏಕಮಾತ್ರಕಂ; ದೀರ್ಘಂ ಉಭಯಮಾತ್ರಂ; ತ್ರಿಮಾತ್ರಕಂ ಪ್ಲುತಂ ಅಕ್ಕುಂ.

ಅನ್ವಯಂ.—ಕ್ರಮದೆ ಏಕಾರಮುಖ್ಯಸಂಧ್ಯಕ್ಷರಂಗಳ್ ಅವು ನಿಜದಿಂ ಗುರು ದೀರ್ಘಂ ಅಕ್ಕುಂ; ಏಕಮಾತ್ರಕಂ ಅದು ಹ್ರಸ್ವಂ; ಉಭಯಮಾತ್ರಂ ದೀರ್ಘಂ; ತ್ರಿಮಾತ್ರಕಂ ಪ್ಲುತಂ ಅಕ್ಕುಂ.

ಟೀಕು.—ಕ್ರಮದೆ = ತಱುವಾಯಿಂದೆ; ಏಕಾರ = ಏಕಾರಂ; ಮುಖ್ಯ = ಮೊದಲಾದ; ಸಂಧ್ಯಕ್ಷರಂಗಳ್ = ಏ ಐ, ಓ ಔ ಎಂಬ ಸಂಧ್ಯಕ್ಷರಂಗಳ್; ಅವು = ಅವು ತಾಂ; ನಿಜದಿಂ =

---

1) ಏಕದ್ವಿತ್ರಿಮಾತ್ರಾಸ್ತೇ ಹ್ರಸ್ವ ದೀರ್ಘ ಪ್ಲುತಾಃ || ಭಾ. ಭೂ. 4. ||
(ಆ ಹದಿನಾಲ್ಕು ಸ್ವರಗಳು ಒಂದು, ಎರಡು, ಮೂರು ಮಾತ್ರೆಯುಳ್ಳವಾಗಿ ಪರಿಪಾಡಿಯಿಂದ ಹ್ರಸ್ವ, ದೀರ್ಘ, ಪ್ಲುತಗಳಾಗುವುವು.)

ಸ್ವರದೊಳಗಮೇಕ ಮಾತ್ರಾ |
ನಿರತಂ ಹ್ರಸ್ವಂ ದ್ವಿಮಾತ್ರಮಂತದು ದೀರ್ಘಂ ||
ಪರಿಪಾಡಿಯಿಂ ಮಾತ್ರಾತ್ರಯ |
ಪರಿಗತಮಪ್ಪುದೆ ಪಲಂ ಪ್ಲುತಂ ತಾನಕ್ಕುಂ || ಶ. ಸ್ಮೃ. 2. ||

ಸ್ವಭಾವದಿಂದೆ; ಗುರು = ಗುರುಗಳುಂ; ದೀರ್ಘಂ = ದೀರ್ಘಂಗಳುಂ; ಅಕ್ಕುಂ = ಅಪ್ಪವು; ಏಕಮಾತ್ರಕಂ = ಒಂದು ಮಾತ್ರೆಯನುಳ್ಳುದು; ಅದು = ಅದು ತಾಂ; ಹ್ರಸ್ವಂ = ಹ್ರಸ್ವಾಕ್ಷರಂ ಅಪ್ಪುದು; ಉಭಯಮಾತ್ರಂ = ಎರಡು ಮಾತ್ರೆಯನುಳ್ಳುದು; ದೀರ್ಘಂ = ದೀರ್ಘಾಕ್ಷರಂ ಅಪ್ಪುದು; ತ್ರಿಮಾತ್ರಕಂ = ಮೂಱು ಮಾತ್ರೆಯನುಳ್ಳುದು; ಪ್ಲುತಂ = ಪ್ಲುತವಾದಕ್ಷರಂ ಅಪ್ಪುದು. —

ವಿಚಾರಂ. — ಸಂಧ್ಯಕ್ಷರಂಗಳೆಂದೊಡೆ ಸಂಸ್ಕೃತವ್ಯವಹಾರದಲ್ಲಿ ಸಂಧಿಯಾದಕ್ಷರಂಗಳೆಂದಱಿವುದು; ಅದೆಂತೆಂದೊಡೆ, ಅಕಾರಮುಂ ಇಕಾರಮುಂ ಕೂಡಿ ಸಂಧಿಯಾಗೆ, ಏಕಾರಂ ಪುಟ್ಟುಗುಂ; ಅಕಾರಮುಂ ಏಕಾರಮುಂ ಕೂಡಿ ಸಂಧಿಯಾಗೆ, ಐಕಾರಂ ಪುಟ್ಟುಗುಂ; ಅಕಾರಮುಂ ಉಕಾರಮುಂ ಕೂಡಿ ಸಂಧಿಯಾಗೆ, ಓಕಾರಮುಂ ಪುಟ್ಟುಗುಂ; ಅಕಾರಮುಂ ಓಕಾರಮುಂ ಕೂಡಿ ಸಂಧಿಯಾಗೆ, ಔಕಾರಮುಂ ಪುಟ್ಟುಗುಂ. ಇದಕ್ಕುದಾಹರಣೆಗಳ್ —

ಅಕಾರಂ ಇಕಾರಂ ಕೂಡಿ ಏಕಾರಮಾದುದರ್ಕೆ — ನಿಜ ಇಷ್ಟ ಸಿದ್ಧಿಗಳ್ = ನಿಜೇಷ್ಟಸಿದ್ಧಿಗಳ್.
ಐಕಾರಕ್ಕೆ — ಜ್ಯಾದಿ ಸಮಸ್ತ ಏಕಾಕ್ಷರಂ = ಜ್ಯಾದಿ ಸಮಸ್ತೈಕಾಕ್ಷರಂ.
ಓಕಾರಕ್ಕೆ — ವಿದಿತ ಉಭಯ ಕರ್ತೃಕಂ = ವಿದಿತೋಭಯಕರ್ತೃಕಂ.
ಔಕಾರಕ್ಕೆ — ವಿದಿತ ಓಕಾರಂ = ವಿದಿತೌಕಾರಂ

ಎಂಬಂತೆ.

ವೃತ್ತಿ. — ತಱುವಾಯಿಂ ಗುರುವುಂ ದೀರ್ಘಮುಂ ಗೂಢಸಂಧಿಯುಮಾಗಿ ಸ್ವಭಾವದಿಂದೇಕಾರಂ ಮೊದಲಾದ ಸಂಧ್ಯಕ್ಷರಂಗಳಪ್ಪುವು; ಅವಾವುವೆಂದೊಡೆ — ಏ ಐ, ಓ ಔ.

"ವರಸಂಧ್ಯಕ್ಷರದಂತಿರೆ |
ಗುರು ದೀರ್ಘಂ ಗೂಢಸಂಧಿಯೆನೆ ತೋಳ್ ನಾಲ್ಕುಂ ||
ಕರಮೆಸೆದಿರ್ಕುಂ ಪದ್ಮೋ- |
ದರಂಗೆ ಚಕ್ರಾಸಿಶಂಖಶಾರ್ಙಸಮೇತಂ." || 11 ||

ಎರಡು ವ್ಯಂಜನಮನುಚ್ಚರಿಸುವನಿತು ಕಾಲಂ ಮಾತ್ರೆಯೆಂಬುದು, ಅದು ಹ್ರಸ್ವಮೆನಿಪುದು, ಲಘುವೆನಿಪುದು; ಸ್ವರವ್ಯಂಜನದಿನೇಕಮಾತ್ರಮಾದೊಡೆ ಹ್ರಸ್ವಂ; ದ್ವಿಮಾತ್ರಮಾದೊಡೆ ದೀರ್ಘಂ; ತ್ರಿಮಾತ್ರಮಾದೊಡೆ ಪ್ಲುತಂ[1].

---

1) ಮಾತ್ರೆ or a prosodical instant is the time taken to pronounce a short vowel or two consonants. In prosody a short vowel is called ಲಘು, a long vowel ಗುರು. A vowel when lengthened in pronunciation becomes ತ್ರಿಮಾತ್ರಕ or ಪ್ಲುತ.

ಪ್ರಯೋಗಂ.— ಹ್ರಸ್ವದೀರ್ಘಪ್ಲುತಕ್ಕೆ—"ಭು ಭ್ಭೂ ಭೂ೩ ಎಂದು ಪೂರಯಿಸಿದುದು ಶಂಖಂ." || 12 ||

"ಕು ಕ್ಕೂ ಕೂ೩ ಎಂದು ಕೋಟಿ ಕೂಗಿದುವಾಗಳ್." || 13 ||

ಸೂತ್ರಂ[1]. || ೧೧ ||

On Anusvâra(ಂ) and Visarga(ಃ)

ಬಿಂದುಮನುಸ್ವಾರಂ ತಾ- |
ನೆಂದಕ್ಕುಂ ಸೊನ್ನೆ ಮುತ್ತುವೋಲ್ ವೃತ್ತತೆಯಿಂ ||
ಸಂದಿರ್ಪುದಂತದಡಕಿ- |
ಲ್ವೊಂದಿರೆ ಮಣಿಗೊಪ್ಪುವೋಲ್ ವಿಸರ್ಗಮೆನಿಕ್ಕುಂ.||೨೧||

ಪದಚ್ಛೇದಂ. — ಬಿಂದುಂ ಅನುಸ್ವಾರಂ ತಾಂ ಎಂದು, ಅಕ್ಕುಂ ಸೊನ್ನೆ; ಮುತ್ತುವೋಲ್ ವೃತ್ತತೆಯಿಂ ಸಂದಿರ್ಪುದು. ಅಂತು ಅದು ಅಡಕಿಲ್ವೊಂದಿ ೨ರೆ, ಮಣಿಗೊಪ್ಪುವೋಲ್ ವಿಸರ್ಗಂ ಎನಿಕ್ಕುಂ.

ಅನ್ವಯಂ. — ಬಿಂದುಂ ಅನುಸ್ವಾರಂ ಎಂದು, ಸೊನ್ನೆ ತಾಂ ಅಕ್ಕುಂ; ವೃತ್ತತೆಯಿಂ ಮುತ್ತುವೋಲ್ ಸಂದಿರ್ಪುದು. ಅಂತು ಅದು ಅಡಕಿಲ್ವೊಂದಿರೆ, ಮಣಿಗೊಪ್ಪುವೋಲ್ ವಿಸರ್ಗಂ ಎನಿಕ್ಕುಂ.

ಟೀಕು. — ಬಿಂದುಂ = ಬಿಂದುವೆಂದೂ; ಅನುಸ್ವಾರಂ = ಅನುಸ್ವಾರವೆಂದೂ; ಸೊನ್ನೆ = ಸೊನ್ನೆ; ತಾಂ = ತಾಂ; ಅಕ್ಕುಂ = ಅಪ್ಪುದು; ವೃತ್ತತೆಯಿಂ = ಬಟ್ಟಿತ್ತಾಗಿರ್ಪುದಱಿಂದೆ; ಮುತ್ತುವೋಲ್ = ಮುತ್ತಿನ ಮಣಿಯು ಹಾಗೆ; ಸಂದಿರ್ಪುದು = ಸಲುವಳಿಯಾಗಿರ್ಪುದು; ಅಂತು = ಹಾಗೆ; ಅದು = ಆ ಸೊನ್ನೆ; ಅಡಕಿಲ್ವೊಂದಿರೆ = ಒಂದಱ ಮೇಲೊಂದಿರೆ; ಮಣಿಗೊಪ್ಪುವೋಲ್ = ಮಣಿಗೊಪ್ಪಿನ ಹಾಗೆ; ವಿಸರ್ಗಂ = ವಿಸರ್ಜನೀಯಂ; ಎನಿಕ್ಕುಂ = ಎನಿಸುವುದು.

ವೃತ್ತಿ.—ಬಿಂದುವೆಂದುಂ ಅನುಸ್ವಾರಮೆಂದುಂ ಸೊನ್ನೆಗೆ ಪೆಸರಕ್ಕುಂ; ಬಿಂದು ಮುತ್ತಂ ಪೋಲ್ತು, ಸೊನ್ನೆಯಂತೆ ಬಟ್ಟಿತ್ತಾಗಿರ್ಪುದಱಿಂ ಶೂನ್ಯಶಬ್ದಂ;

---

1) ಅನುಸ್ವಾರೋ ಬಿಂದುಃ || ಭಾ. ಭೂ. 14. ||
(ಅನುಸ್ವಾರವೆಂದೂ ಬಿಂದುವೆಂದೂ ಸೊನ್ನೆಯ ಹೆಸರು; ಅದನ್ನು ಸ್ವರಾಂಗವೆಂದೂ ವ್ಯಂಜನಾಂಗವೆಂದೂ ಹೇಳುವರು.)

ಸ ಉಪರ್ಯಧಸ್ತಾಚ್ಚ ವಿಸರ್ಗಃ || ಭಾ. ಭೂ. 15. ||
(ಆ ಸೊನ್ನೆ ಮೇಲೆಯೂ ಕೆಳಗೂ ಮಣಿಗೊಪ್ಪಿನಂತಿದ್ದರೆ ವಿಸರ್ಗವಾಗುವುದು.)

ಇದಪಭ್ರಂಶಮಾಗಿಯುಂ ಕನ್ನಡದೊಳ್ ಸೊನ್ನೆಯೆಂದಾಯ್ತು; ಬಿಂದುವಿನಂತಿರ್ಪುದರಿಂ ಬಿಂದುವೆಂದಾಯ್ತು; ಬಿಂದುಸ್ವರೂಪಂ ॥ ೦ ॥. ಮಣಿಗೊಪ್ಪುವಿನಂತಿರೆ, ಎರಡು ಸೊನ್ನೆಯುಮಡಕಿಲಾಗಿ ನಿಲೆ, ವಿಸರ್ಗಮೆನಿಸುಗುಂ; ವಿಸರ್ಜನೀಯಮೆಂದುಂ ವಿಸರ್ಗಕ್ಕೆ ಪೆಸರ್; ವಿಸರ್ಗಸ್ವರೂಪಂ ॥ ಃ ॥.

ಪ್ರಯೋಗಂ.—ಬಿಂದುವಿಂಗೆ—ಆಂದೋಳಂ, ಅಂದುಗೆ, ಅಂಬಿಕೆ.

"ಬೆರ್ಚಿ ಬೆಳ್ಪಳಿಸಿ ಬಂದಂ. . . ." ॥ 14 ॥

". . . ಫಲ್ಗುಣನಲ್ಲಿ ಸಂದಯಮಣಂ ತಾನಿಲ್ಲ." ॥ 15 ॥

ವಿಸರ್ಗಕ್ಕೆ— "ಅಃ ಸಂದಯಮಿಲ್ಲ ಮೆಚ್ಚಿದೆಂ."

ಸೂತ್ರಂ. ॥ ೧೨ ॥

They are half vowels, half consonants, and called Yôgavâhas, *i. e.* letters which are dependent on others.

ಸ್ವರಪರದೊಳಿರ್ಪ ತೆಱದಿಂ- ।
ದುರು ಮುಖ್ಯೋಚ್ಚಾರಣಕ್ಕೆ ಬಾರದ ಕತದಿಂ ॥
ಪರಿಕಿಸೆ ಬಿಂದುವಿಸರ್ಗಂ ।
ಸ್ವರಾಂಗಮುಂ ವ್ಯಂಜನಾಂಗಮುಂ ತಾವೆಂಬರ್ ॥ ೨೨ ॥

ಪದಚ್ಛೇದಂ. — ಸ್ವರಪರದೊಳ್ ಇರ್ಪ ತೆಱದಿಂದೆ ಉರು ಮುಖ್ಯೋಚ್ಚಾರಣಕ್ಕೆ ಬಾರದ ಕತದಿಂ, ಪರಿಕಿಸೆ, ಬಿಂದುವಿಸರ್ಗಂ ಸ್ವರಾಂಗಮುಂ ವ್ಯಂಜನಾಂಗಮುಂ ತಾಂ ಎಂಬರ್.

ಟೀಕು, ಯಥಾನ್ವಯಂ. — ಸ್ವರ = ಸ್ವರಾಕ್ಷರಂಗಳ; ಪರದೊಳ್ = ಮುಂದುಗಡೆಯಲ್ಲಿ; ಇರ್ಪ ತೆಱದಿಂದೆ = ಇರ್ಪ ರೀತಿಯಿಂದೆ; ಉರು = ವಿಶೇಷವಾಗಿ; ಮುಖ್ಯೋಚ್ಚಾರಣಕ್ಕೆ = ಮುಖ್ಯವಾಗಿ ಉಚ್ಚರಿಪುದಕ್ಕೆ; ಬಾರದ ಕತದಿಂ = ಬಾರದ ಕಾರಣದಿಂದೆ; ಪರಿಕಿಸೆ = ವಿಚಾರಿಸೆ; ಬಿಂದು = ಸೊನ್ನೆ; ವಿಸರ್ಗಂ = ವಿಸರ್ಜನೀಯಂ; ಸ್ವರಾಂಗಮುಂ = ಸ್ವರಾಂಗಮೆಂದುಂ; ವ್ಯಂಜನಾಂಗಮುಂ = ವ್ಯಂಜನಾಂಗಮೆಂದುಂ; ತಾಂ = ವಿದ್ವಾಂಸರ್ಗಳ್; ಎಂಬರ್ = ಪೇಳ್ವರ್.

ವಿಚಾರಂ. — ಸ್ವರಂಗಳ ಪರದೊಳಿರ್ಪುದರಿಂ ಸ್ವರಾಂಗಮೆಂದುಂ, — ಸಂಸ್ಕೃತದೊಳ್ ॥ ಮೋಽನುಸ್ವಾರಃ ॥ [1] ಸ್ರೋರ್ವಿಸರ್ಗಃ ॥ ಎಂಬ ಸೂತ್ರಂಗಳಿಂದೆ—ಮಕಾರಮನುಸ್ವಾರಮೆಂದುಂ ರೇಫ ಸಕಾರಂಗಳ್ವಿಸರ್ಗಮೆಂದುಂ ಪೇಳ್ದುದರಿಂ ವ್ಯಂಜನಾಂಗಮೆಂದುಂ, ಪೇಳ್ದರ್.

[1] ಪಾಣಿನಿಸೂತ್ರಂ VIII, 3, 23.

ಅದರಿಂ ಕೆಲಂಬರ್ ವ್ಯಾಕರಣಕಾರರ್ ಸ್ವರಸಂಜ್ಞೆಯಲ್ಲಿ ಪೇಳ್ದರ್; ಕೆಲಂಬರ್, ಜಿಹ್ವಾಮೂಲೀಯೋಪಧ್ಮಾನೀಯಬಿಂದುವಿಸರ್ಗಂಗಳಂ ವ್ಯಂಜನಸಂಜ್ಞೆಯಲ್ಲಿ ಯೋಗವಾಹಂಗಳೆಂದು, ಪೇಳ್ದರ್.

ವೃತ್ತಿ.—ಸ್ವರಂಗಳ ಪರದೊಳಿರ್ಪ ದೂಸ್ರದಿಂ ಸ್ವರಾಂಗಮುಮಪ್ಪುವು; ಕಾಲ ಸ್ವತಂತ್ರಮಾಗುಚ್ಚರಿಸಲ್ಬಾರದುದರಿಂ ಬಿಂದು ವಿಸರ್ಗಂಗಳ್ ಸ್ವರಾಂಗಮುಂ ವ್ಯಂಜನಾಂಗಮುಮಪ್ಪುವು.

ಇದು ಸ್ವರಸಂಜ್ಞೆ.

3. The Consonants.

ಸೂತ್ರಂ[1]. || ೧೩ ||

The 34 Saṁskṛitā-Kannaḍa Consonants, being classified (ವರ್ಗಾಕ್ಷರಂಗಳ್) and not classified (ಅವರ್ಗಾಕ್ಷರಂಗಳ್).

ಪ್ರಕಟತರವ್ಯಂಜನಸಂ- |
ಜ್ಞೆ ಕಕಾರದಿನಾ ಳಕಾರಪರ್ಯಂತಂ ಪಂ- ||
ಚಕಪಂಚಕಂಗಳಿಂ ಪಂ- |
ಚಕಮಕ್ಕುಂ ವರ್ಗಮಂತ್ಯವರ್ಣಮವರ್ಗಂ. || ೨೩ ||

---

[1]) ಕಾದಯಸ್ತ್ರಯಸ್ತ್ರಿಂಶದ್ವ್ಯಂಜನಾನಿ || ಭಾ. ಭೂ. 6. || (ಕಕಾರ ಮೊದಲಾಗಿ ಹಕಾರ ಪರ್ಯಂತದ 33 ಅಕ್ಷರಗಳು ವ್ಯಂಜನಗಳು.)

ವರ್ಗಾಸ್ಸ್ಯುರ್ಮಾಂತಾಃ ಪಂಚಶಃ ಪಂಚ || ಭಾ. ಭೂ. 7. || (ಕಕಾರ ಮೊದಲಾಗಿ ಮಕಾರ ಪರ್ಯಂತದ ವ್ಯಂಜನಗಳು ಐದೈದುಗಳೊಂದಾಗಿ ಐದು ವರ್ಗಗಳಾಗುವುವು.)

ಸ್ವರಮೆಂದುಂ ವ್ಯಂಜನಮೆಂ- |
ದೆರಡಕ್ಕುಂ ವರ್ಣಭೇದಮಾದ್ಯಕ್ಷರದಿಂ ||
ಬರೆ ಪದಿನಾಲ್ಕುಂ ಸ್ವರಮಿಂ |
ಪರಿಶೇಷಂ ವ್ಯಂಜನಂಗಳರೆಮೂತ್ತಿಕೆಗಳ್. || ಶ. ಸ್ಮೃ. 1. ||

ಐದೆ ಕಕಾರದಿನಿರ್ಪ- |
ತ್ತೈದಕ್ಕರಮೈದುವನ್ನೆಗಂ ಪರಿವಿಡಿಯಿಂ- ||
ದೈದೈದು ಗೈದು ವರ್ಗದಿ- |
ನೈದುಂ ವರ್ಗಂಗಳಕ್ಕುಮುಳಿದುವವರ್ಗಂ || ಶ. ಸ್ಮೃ. 4. ||

ಪದಚ್ಛೇದಂ.— ಪ್ರಕಟತರವ್ಯಂಜನಸಂಜ್ಞೆ ಕಕಾರದಿಂ ಆ ಳಕಾರಪರ್ಯಂತಂ; ಪಂಚಕ ಪಂಚಕಂಗಳಿಂ ಪಂಚಕಂ ಅಕ್ಕುಂ ವರ್ಗಂ; ಅಂತ್ಯವರ್ಣಂ ಅವರ್ಗಂ.

ಅನ್ವಯಂ.— ಕಕಾರದಿಂ ಆ ಳಕಾರಪರ್ಯಂತಂ ಪ್ರಕಟತರವ್ಯಂಜನಸಂಜ್ಞೆ; ಪಂಚಕ ಪಂಚಕಂಗಳಿಂ ವರ್ಗಂ ಪಂಚಕಂ ಅಕ್ಕುಂ; ಅಂತ್ಯವರ್ಣಂ ಅವರ್ಗಂ.

ಟೀಕು.— ಕಕಾರದಿಂ = ಕಕಾರದಿಂದೆ; ಆ ಳಕಾರಪರ್ಯಂತಂ = ಆ ಳಕಾರಪರ್ಯಂತವಾಗಿ; ಪ್ರಕಟತರ = ಪ್ರಸಿದ್ಧವಾದ; ವ್ಯಂಜನಸಂಜ್ಞೆ = ವ್ಯಂಜನಾಕ್ಷರಂಗಳೆಂಬ ಸಂಜ್ಞೆ ಅಪ್ಪುದು; ಪಂಚಕಪಂಚಕಂಗಳಿಂ = ಐದೈದಕ್ಷರಂಗಳಿಂದೆ; ವರ್ಗಂ = ವರ್ಗಸಂಜ್ಞೆ; ಪಂಚಕಂ = ಐದುವರ್ಗಂ; ಅಕ್ಕುಂ = ಅಪ್ಪವು; ಅಂತ್ಯವರ್ಣಂ = ಕಡೆಯುಳೊಂಬತ್ತಕ್ಷರಂಗಳೆ; ಅವರ್ಗಂ = ಅವರ್ಗಾಕ್ಷರಂಗಳ್ ಅಪ್ಪವು.

ವೃತ್ತಿ.—ಕಕಾರಂ ಮೊದಲಾಗಿ ಳಕಾರ ಪರ್ಯಂತಂ ವರ್ತಿಪ ವರ್ಣಂಗಳ್ ವ್ಯಂಜನಸಂಜ್ಞೆಯಂ ಪ್ರತ್ಯೇಕಂ ಪಡೆಗುಂ. ಕ್ ಖ್ ಗ್ ಘ್ ಙ್ ಚ್ ಛ್ ಜ್ ಝ್ ಞ್ ಟ್ ಠ್ ಡ್ ಢ್ ಣ್ ತ್ ಥ್ ದ್ ಧ್ ನ್ ಪ್ ಫ್ ಬ್ ಭ್ ಮ್ ಯ್ ರ್ ಲ್ ವ್ ಶ್ ಷ್ ಸ್ ಹ್ ಳ್ ಎಂಬಿವು ೩೪ ವ್ಯಂಜನಂಗಳ್. ಅವರೊಳ್ ಕಕಾರಂ ಮೊದಲಾಗಿ ಮಕಾರಪರ್ಯಂತರವೈದೈದು ವರ್ಣಂಗಳೊಂದೊಂದು ವರ್ಗಮಾಗಿ, ವರ್ಗಮೈದಕ್ಕುಂ; ಆ ವರ್ಗಾಕ್ಷರಂಗಳಿರ್ಪತ್ತೈದರಿ ಕಡೆಯಕ್ಕರಂಗಳ್ ಅವರ್ಗಂಗಳ್, ಯ್ ರ್ ಲ್ ವ್ ಶ್ ಷ್ ಸ್ ಹ್ ಳ್ ಎಂಬಿವು.

ಸೂತ್ರ ೧೫೩ ಕಿ ೨೫೧ ನೋಡು.

ಸೂತ್ರಂ.[1] || ೧೪ ||

The Aspirates in Kannaḍa. They are used in numbers (ಸಂಖ್ಯೆ) and imitative sounds (ಅನುಕೃತಿ).

ವರ್ಗದ್ವಿತೀಯವರ್ಣಂ |
ವರ್ಗಚತುರ್ಥಾಕ್ಷರಂ ಮಹಾಪ್ರಾಣಮಷಂ ||
ಮಾರ್ಗವಿದರ್ ಸಂಖ್ಯೆಯೊಳಂ |
ಭೋರ್ಗರೆವನುಕೃತಿಯೊಳಂ ಪ್ರಯೋಗಿಸುತಿರ್ಪರ್. |
| ೨೪ ||

---

1) ನಾತ್ರ ಪ್ರಾಯೇಣ ವರ್ಗಾಣಾಂ ದ್ವಿತೀಯ ಚತುರ್ಥಾಃ || ಶಾ. ಭೂ. 11. ||
(ಪ್ರಾಯಿಕವಾಗಿ ಕನ್ನಡದಲ್ಲಿ ವರ್ಗಗಳ ದ್ವಿತೀಯಾಕ್ಷರಗಳೂ ಚತುರ್ಥಾಕ್ಷರಗಳೂ ಇಲ್ಲ; ಆದರೂ ಸಂಖ್ಯೆಯಲ್ಲಿಯೂ ಅನುಕರಣದಲ್ಲಿಯೂ ಕಾಣುತ್ತವೆ.)
ದೊರೆಕೊಂಡ ಸಂಖ್ಯೆಯೊಳವನು. |
ಕರಣದೊಳಂ ವರ್ತಿಕುಂ ಮಹಾಪ್ರಾಣಂಗಳ್ || ಶ. ಸ್ಮ 6. ||

ಪದಚ್ಛೇದಂ. — ವರ್ಗದ್ವಿತೀಯವರ್ಣಂ ವರ್ಗಚತುರ್ಥಾಕ್ಷರಂ ಮಹಾಪ್ರಾಣಂ; ಅವಂ ಮಾರ್ಗವಿದರ್ ಸಂಖ್ಯೆಯೊಳಂ ಘೋರ್ಗರೆವ ಅನುಕೃತಿಯೊಳಂ ಪ್ರಯೋಗಿಸುತೆ ಇರ್ಪರ್.

ಟೀಕು, ಯಥಾನ್ವಯಂ. — ವರ್ಗ = ವರ್ಗಂಗಳ; ದ್ವಿತೀಯವರ್ಣಂ = ಖ್ ಛ್ ಠ್ ಥ್ ಫ್ ಎಂಬೆರಡನೆಯ ಅಕ್ಷರಂಗಳುಂ; ವರ್ಗ = ವರ್ಗಂಗಳ; ಚತುರ್ಥಾಕ್ಷರಂ = ಘ್ ಝ್ ಢ್ ಧ್ ಭ್ ಎಂಬ ನಾಲ್ಕನೆಯ ಅಕ್ಷರಂಗಳುಂ; ಮಹಾಪ್ರಾಣಂ = ಮಹಾಪ್ರಾಣಾಕ್ಷರಂಗಳೆನಿಸುವುವು; ಅವಂ = ಆ ಮಹಾಪ್ರಾಣಾಕ್ಷರಂಗಳಂ; ಮಾರ್ಗವಿದರ್ = (ಕನ್ನಡದ) ಕವಿಮಾರ್ಗಮಂ ಬಲ್ಲವರ್; ಸಂಖ್ಯೆಯೊಳಂ = ಸಂಖ್ಯಾವಾಚಿಗಳಲ್ಲಿಯುಂ; ಘೋರ್ಗರೆವ = ಧ್ವನಿಗೆಯ್ವ; ಅನುಕೃತಿಯೊಳಂ = ಅನುಕರಣಶಬ್ದಂಗಳಲ್ಲಿಯುಂ; ಪ್ರಯೋಗಿಸುತಿರ್ಪರ್ = ಪ್ರಯೋಗವಂ ಮಾಡುತಿರ್ಪರ್.

ವಿಚಾರಂ. — ವರ್ಗದೆರಡನೆಯ ನಾಲ್ಕನೆಯ ಅಕ್ಷರಂಗಳ್ ಮಹಾಪ್ರಾಣಂಗಳಾದಲ್ಲಿ ವರ್ಗದೊಂದನೆಯ ಮೂಱನೆಯ ಕ್, ಚ್, ಟ್, ತ್ ಪ್; ಗ್ ಜ್, ಡ್, ದ್, ಬ್ ಎಂಬಿವು ಅಲ್ಪಪ್ರಾಣಂಗಳೆಂದಱಿವುದು.

ವೃತ್ತಿ. — ವರ್ಗದೆರಡನೆಯಕ್ಕರಂಗಳುಂ ನಾಲ್ಕನೆಯಕ್ಕರಂಗಳುಂ ಮಹಾಪ್ರಾಣಂಗಳೆನಿಸುಗುಂ; ಇವಂ ಸಂಖ್ಯೆಯೊಳಂ ಅನುಕರಣದೊಳಂ ಮಾರ್ಗವಿದರ್ ಪ್ರಯೋಗಿಸುವರ್.

ಪ್ರಯೋಗಂ. — ಸಂಖ್ಯೆಗೆ — ಇರ್ಚ್ಛಾಸಿರಂ; ಎಣ್ಛಾಸಿರಂ; ನೂರ್ಚ್ಛಾಸಿರಂ; ಪದಿನೆಣ್ಛಾಸಿರಂ.

“. . . . ಲೋಹವಕ್ಕರೆಯ ಜಾತ್ಯಶ್ವಂಗಳಿರ್ಚ್ಛಾಸಿರಂ.” || 16 ||

ಅನುಕರಣಕ್ಕೆ — ಖಣಿಲನೆ, ಖಿೞಿಲನೆ, ಛಮ್ಮನೆ, ಧುಮ್ಮನೆ, ಝುಲುಮ್ಮನೆ, ಸಳಿಲ್ಲನೆ, ಢಮ್ಮನೆ, ಥೊಪ್ಪನೆ, ಧಣಮ್ಮನೆ, ಫೊಟ್ಟನೆ, ಫೞಿಲನೆ, ಝುಲ್ಲನೆ ದುಘುಮ್ಮನೆ, ಧಟಿಮ್ಮನೆ, ಭೋರನೆ ಎಂಬಿವಾದಿಯಾಗಱಿವುದು. (See s. S. 23, No. 110.)

ಶೋಂ೩: ಸೂತ್ರ ೧೫೧.

ಸೂತ್ರಂ[1] || ೧೫ ||

Besides, there are some other words used by Kannada people in which the Aspirates appear. The Nasals.

ಒಳವು ಮಹಾಪ್ರಾಣಂಗಳ್ |
ಏಳಸತ್ಕರ್ಣಾಟಭಾಷೆಯೊಳ್ ಕೆಲವು ನಿಜೋ- ||
ಜ್ವಳಮಾಗಿ ವರ್ಗದಂತ್ಯಂ- |
ಗಳನಱಿಯನುನಾಸಿಕಾಖ್ಯೆಯಂ ತಳೆದಿರ್ಕುಂ || ೨೫ ||

ಪದಚ್ಛೇದಂ.— ಒಳವು ಮಹಾಪ್ರಾಣಂಗಳ್ ಏಳಸತ್ಕರ್ಣಾಟಭಾಷೆಯೊಳ್ ಕೆಲವು ನಿಜೋಜ್ವಳಂ ಆಗಿ; ವರ್ಗದ ಅಂತ್ಯಂಗಳಂ, ಅಱಿ, ಅನುನಾಸಿಕಾಖ್ಯೆಯಂ ತಳೆದು ಇರ್ಕುಂ.

ಅನ್ವಯಂ.— ಏಳಸತ್ಕರ್ಣಾಟಭಾಷೆಯೊಳ್ ಮಹಾಪ್ರಾಣಂಗಳ್ ಕೆಲವು ನಿಜೋಜ್ವಳಂ ಆಗಿ ಒಳವು, ವರ್ಗದ ಅಂತ್ಯಂಗಳಂ, ಅಱಿ, ಅನುನಾಸಿಕಾಖ್ಯೆಯಂ ತಳೆದು ಇರ್ಕುಂ.

ಟೀಕು.— ಏಳಸತ್ = ಒಪ್ಪಲ್ಪಟ್ಟ; ಕರ್ಣಾಟ=ಕನ್ನಡದ; ಭಾಷೆಯೊಳ್=ಭಾಷೆಯಲ್ಲಿ; ಮಹಾಪ್ರಾಣಂಗಳ್ = ಮಹಾಪ್ರಾಣಂಗಳಾದ; ಕೆಲವು = ಕೆಲವು ಶಬ್ದಂಗಳ್; ನಿಜ = ನಿಜದಿಂದೆ; ಉಜ್ವಳಂ = ಪ್ರಕಾಶಿಪುವು; ಆಗಿ = ಆಗಿ; ಒಳವು = ಉಂಟು; ವರ್ಗದ = ವರ್ಗಂಗಳ; ಅಂತ್ಯಂಗಳಂ = ಙ್, ಞ್, ಣ್, ನ್, ಮ್ ಎಂಬ ಅಂತ್ಯಾಕ್ಷರಂಗಳಂ; ಅಱಿ = ತಿಳಿ; ಅನುನಾಸಿಕಾಖ್ಯೆಯಂ = ಅನುನಾಸಿಕವೆಂಬ ಪೆಸರಿಂ; ತಳೆದು = ಧರಿಸಿ; ಇರ್ಕುಂ = ಇರ್ಪುವು.

ವಿಚಾರಂ.— ಅನುನಾಸಿಕವೆಂದೊಡೆ ಮುಖನಾಸಿಕದೊಡನೆ ಕೂಡಿ ಉಚ್ಚರಿಪುದು.

ವೃತ್ತಿ.— ಒಪ್ಪುವ ಕನ್ನಡದೊಳೆ ಸ್ವಭಾವದಿಂ ಕೆಲವು ಮಹಾಪ್ರಾಣಂಗಳೊಳವು; ಅವಾವುವೆಂದೊಡೆ—

ವರ್ಗದ್ವಿತೀಯಾಕ್ಷರಂಗಳ್ಗೆ— ವಕ್ಖಾಣಂ, ದೆಖ್ಖಾಣಂ (ದೆಖ್ಖಾಳಂ), ಪಖ್ಖಾಳಂ, ಅಖ್ಖಡಂ (ಅಖ್ಖಂಡಂ), ಖೊಪ್ಪರಂ, ಖಾಣಂ, ಖಾರಿಗೆ.— ಛಲ್ಲಿ ಮಾಡಿ

[1] See Bhashā Bhūshaṇa Suṭra 11, quoted on page 26.

ಅನುನಾಸಿಕಾಸ್ತೇಷಾಂ ಪಂಚಮಾಃ || ಭಾ. ಭೂ. 8. || (ಆ ವರ್ಗಗಳ ಐದನೆಯ ಅಕ್ಷರಗಳು ಅನುನಾಸಿಕಗಳು.)

ಅನುನಾಸಿಕಮಕ್ಕುಂ ಙ ಞ
ಣ ನ ಮಂ ಗಳೆ . . . . || ಶ. ಸ್ಮೃ. 5. ||

ದಂ (ಛಲ್ಲಂ ಮಾಡಿದಂ), ಛರ್ಪಿಸಿದಂ (ಛಪ್ಪಿಸಿದಂ), ಎಕ್ಕಛಾಯಂ.— ಠಾವು, ಠಾಣಂ, ಠಕ್ಕಿಸಿದಂ (ಠೆಕ್ಕಿಸಿದಂ), ಠಾಣಿಸಿತು.— ಥಟ್ಟು, ಥಾಪನೆ, ಸುತ್ಥಣೆ (ಸುತ್ಥಣೆಯಂ, ಸತ್ಥಣೆ), ಮತ್ಥವಟ್ಟಿಗೆ, ಕಥಾಯ (ಕತ್ಥಾಯಂ).— ಫಳೆಯಕಾರಂ, ಫೆಳಾವುಗಂ, ಫೆಳಿ, ಅಫಳಿಯಂ (ಅಪ್ಫಳಿಯಂ).

ವರ್ಗಚತುರ್ಥಾಕ್ಷರಂಗಳ್ಗೆ— ಘಱಿಯಂ, ಘಾಱಿಗೆ (ಘಾರಿಗೆ), ಘೋಱಿಗೆ, ಘಾಸಂ, ಘಾಸಿ, ಘಾಸರಂ.—ಝಳಂ, ಝಳಕಂ, ಝಲ್ಲಱಿ (ಝಲ್ಲರಿ), ಝಱಿಸಿತು, ಝಾಳಿಸಿತು, ಝಳಪಿಸಿತು, ಝಲ್ಲಿ, ಝುಂಕೆ.—ಢೊಂಕಣಿ, ಢೆಂಕಣಿ, ಅಢಾಳಂ, (ಢಾಳಂ), ವೇಢೆಯಂ, ಢೆಂಕೆ, ಢೊಕ್ಕರಂ.— ಧಱಿಂ, ಧಾಳಿ, ಧಾರಿ, ಧವಳಂ (ಧವಡಂ) ಧನಿ.— ಭಂಗಾರಂ, ಭಂಡಾರಂ, ಭರಿಕೈ, ಭಲ್ಲೆಯಂ, ಭಾವಂ.—

ಕಂಭಕ್ಕಂ ಭಾಸೆಗಂ ವಿಕಲ್ಪಂ.

ವರ್ಗಂಗಳೈದನೆಯ ಅಕ್ಕರಂಗಳನುನಾಸಿಕಾಖ್ಯೆಯಂ ಪಡೆಗುಂ.— ಙ್, ಞ್, ಣ್, ನ್, ಮ್ ಎಂಬಿವು; ಇವರ್ಕೆ ಪ್ರಯೋಗಂ—

ಬಿಙ್ಕಮ್ಬೆತ್ತೆಸೆವಞ್ಚೆಯ ।
ಸಙ್ಕುಳಮುಂ ತೊಣ್ಡುಗೆಡೆವ ಶುಕಸಾರಿಕೆಯಂ ॥
ಸೊಙ್ಕಿ ಬಲವನ್ದು ತೀಡುವ ।
ತೆಙ್ಕಣ ಗಾಳಿಯುಮಿದೇಂ ಮನಂಗೊಳಿಸಿದುದೋ ॥ 17 ॥

ಸೂತ್ರಂ.[1] ॥ ೧೬ ॥

ಯ, ವ, ಲ are Nasals and non-Nasals. The ಕ್ಷಳಂ again

ಅನುನಾಸಿಕಮುಂ ಯ ವ ಲ ಮ- ।
ನನುನಾಸಿಕಮುಂ ದಲೆಂಬರಾ ಸಂಸ್ಕೃತಶ- ॥
ಬ್ದನಿಯುಕ್ತ ಲಕಾರದ ನೆಲೆ- ।
ಗೆ ನಿಂದು ಸರಿಯಾಗಿ ಸಲ್ವುದಂ ಕ್ಷಳನೆಂಬರ್ ॥ ೨೬ ॥

1) ವಿಭಾಷಯಾ ಯ ವ ಲಾಃ ॥ ಭಾ. ಭೂ. 9. ॥ (ಯ, ವ, ಲಕಾರಗಳು ವಿಕಲ್ಪದಿಂದ ಅನುನಾಸಿಕಗಳಾಗುವುವು.)

. . . ಯ ವ ಲ ಮನನುನಾಸಿಕಮುಂ ಮ- ।
ತ್ತನುನಾಸಿಕಮುಮವಕ್ಕುಂ
ಜನೋಕ್ತಿಯಿಂದಱಿವುದವಱ ವಿಷಯಾಂತರಮುಂ ॥ ಶ. ಸ್ಮೃ. ೫. ॥

ಪದಚ್ಛೇದಂ.— ಅನುನಾಸಿಕಮುಂ ಯ ವ ಲಂ ಅನನುನಾಸಿಕಮುಂ ದಲ್ ಎಂಬರ್; ಆ ಸಂಸ್ಕೃತಶಬ್ದನಿಯುಕ್ತ ಲಕಾರದ ನೆಲೆಗೆ ನಿಂದು ಸರಿಯಾಗಿ ಸಲ್ವುದಂ ಕ್ಷಳಂ ಎಂಬರ್.

ಅನ್ವಯಂ.— ಯ ವ ಲಂ ಅನುನಾಸಿಕಮುಂ ಅನನುನಾಸಿಕಮುಂ ದಲ್ ಎಂಬರ್; ಆ ಸಂಸ್ಕೃತಶಬ್ದನಿಯುಕ್ತ ಲಕಾರದ ನೆಲೆಗೆ ಸರಿಯಾಗಿ ನಿಂದು ಸಲ್ವುದಂ ಕ್ಷಳಂ ಎಂಬರ್.

ಟೀಕು.— ಯ ವ ಲಂ = ಯಕಾರ ವಕಾರ ಲಕಾರಂಗಳ್; ಅನುನಾಸಿಕಮುಂ = ಅನುನಾಸಿಕಂಗಳೆಂದುಂ; ಅನನುನಾಸಿಕಮುಂ = ನಿರನುನಾಸಿಕಂಗಳೆಂದುಂ; ದಲ್ = ನಿಶ್ಚಯವಾಗಿ; ಎಂಬರ್ = ಪೇಳ್ವರ್; ಆ ಸಂಸ್ಕೃತ = ಆ ಸಂಸ್ಕೃತದ; ಶಬ್ದ = ಶಬ್ದದಲ್ಲಿ; ನಿಯುಕ್ತ = ಕೂಡಲ್ಪಟ್ಟ; ಲಕಾರದ = ಲತ್ವದ; ನೆಲೆಗೆ = ಸ್ಥಾನಕ್ಕೆ: ಸರಿಯಾಗಿ = ಸಮಾನವಾಗಿ; ನಿಂದು = ನೆಲೆಗೊಂಡು; ಸಲ್ವುದಂ = ಸಲುವಳಿಯಾಗಿರ್ಪ ಳಕಾರಮಂ; ಕ್ಷಳಂ = ಕ್ಷಳನೆಂದು; ಎಂಬರ್ = ಪೇಳ್ವರ್.

ವೃತ್ತಿ.—ಯ ವ ಲಂಗಳನುನಾಸಿಕಂಗಳುಂ ನಿರನುನಾಸಿಕಂಗಳುಮಪ್ಪುವು; ಸಂಸ್ಕೃತ ಶಬ್ದದಲ್ಲಿ ಯುಕ್ತಮಾದ ಲಕಾರದ ಸ್ಥಾನಕ್ಕೆ ನಿಂದು ಸರಿಯಾಗಿ ಸಲ್ವ ಳಕಾರಮಂ ಕ್ಷಳನೆಂಬರ್[1].

ಪ್ರಯೋಗಂ.— ಅನುನಾಸಿಕ ಯಕಾರಕ್ಕೆ—ಮೇಯಿಸಿದಂ, ನೋಯಿಸಿದಂ ಮಯಣಂ, ನಯಣಂ, ಮಾಯಂ.

ಅನುನಾಸಿಕ ವಕಾರಕ್ಕೆ—ಸೇವಂ, ಸೋವೆ, ಸಾವೆ, ಜಾವಂ, ಮಾವಂ, ಮಾವಂತಂ, ಕೋವಣಂ, ಕಾವಣಂ, ಸೇವಗೆ.

ಅನುನಾಸಿಕ ಲಕಾರಕ್ಕೆ—ಕೊಲ್ಲಣಿಗೆ, ಅಲ್ಲಣಿಗೆ ಎಂದು ಮೇಳಂ, ಹಲ್ಲಣಂ, ಇಲ್ಲಣಂ.

ನಿರನುನಾಸಿಕ ಯಕಾರಕ್ಕೆ—ಬಯಕೆ, ಬಿಯದಂ, ಬಿಯ್ತಳಂ, ದಯಕಾಱಂ, ದಾಯಿಗಂ, ವಾಯ್ತುಂ, ಬಯಲ್.

ನಿರನುನಾಸಿಕ ವಕಾರಕ್ಕೆ—ಕವಳಂ, ಹವಳಂ, ತಿವಳಿ, ತವಕಂ (ಅವಕಂ).

[1] The letters ಯ್, ವ್, ಲ್, though not nasal, become so under certain circumstances. Whether they are, or are not nasal in particular words cannot be detected at present, as Kēśava gives no mark to show the difference noticed by him.

Kēśava's ಕ್ಷಳ is the letter ಳ್ which in Saṁskṛita is a substitute for ಡ್.

ನಿರನುನಾಸಿಕ ಲಕಾರಕ್ಕೆ—ಹಾಲಿಗೆ, ಹಲಸಿಗಂ, ಹಲಗೆ, “ನೆಲಕಲನೆಂದು ಲೋಭಿ.”

ಲಕಾರಕ್ಕೆ ಕ್ಷಳಂ—ಜಲಂ=ಜಳಂ; ತಿಲಂ=ತಿಳಂ; ಫಲಂ=ಫಳಂ; ಬಲಂ=ಬಳಂ; ಖಲಂ=ಖಳಂ; ಕಮಲಂ=ಕಮಳಂ.

ಸೂತ್ರಂ. ॥ ೧೭ ॥

ಸಮ ಸಂದಿರ್ದ ೱಕ್ಕಮುಮ ।
ೲಮುಮೊಂದಿದ ಬಿಂದುವುಂ ವಿಸರ್ಗಮುಮೆಂದ- ॥
ಕ್ಕುಮಿವೆಯ್ದು ಯೋಗವಾಹಂ ।
ಕ್ರಮದಿಂ ಕಪಯುಗಳಮಿವಱೊಳನುಬಂಧಂಗಳ್ ॥೨೭॥

Besides ಬಿಂದು (ಂ) and ವಿಸರ್ಗ (ಃ) there are two other yôgavâhâs, viz. ೱ and ೲ[1]) respectively called ಜಿಹ್ವಾಮೂಲೀಯ and ಉಪಧ್ಮಾನೀಯ. The first (ೱ) is a tongue-root sibilant which can only stand before ಕ್ and ಖ್. The second (ೲ) is a labial sibilant pronounced with a forcing out of breath and always standing before ಪ್ and ಫ್. ಬಿಂದು, ವಿಸರ್ಗ, ಜಿಹ್ವಾಮೂಲೀಯ, ಉಪಧ್ಮಾನೀಯ are called ಯೋಗವಾಹಗಳು.

ಪದಚ್ಛೇದಂ. — ಸಮ ಸಂದು ಇರ್ದ ೱಕಮುಂ ೲಮುಂ ಒಂದಿದ ಬಿಂದುವುಂ ವಿಸರ್ಗಮುಂ ಎಂದು ಅಕ್ಕುಂ; ಇವು ಎಯ್ದು ಯೋಗವಾಹಂ; ಕ್ರಮದಿಂ ಕಪಯುಗಳಂ ಇವಱೊಳ್ ಅನುಬಂಧಂಗಳ್.

ಟೀಕು, ಯಥಾನ್ವಯಂ — ಸಮ ಸಂದು = ಸಮಾನವಾಗಿ ಸಂದು; ಇರ್ದ = ಇರ್ದ; ೱಕಮುಂ = ೱಕ್ಕೆಂಬ ಜಿಹ್ವಾಮೂಲೀಯಮುಂ; ೲಮುಂ = ೲಎಂಬ ಉಪಧ್ಮಾನೀಯಮುಂ; ಒಂದಿದ = ಕೂಡಿದ; ಬಿಂದುವುಂ = ಸೊನ್ನೆಯುಂ; ವಿಸರ್ಗಮುಂ = ವಿಸರ್ಜನೀಯಮುಂ; ಎಂದು = ಎಂದು; ಇವು = ಈ ನಾಲ್ಕಕ್ಷರಂಗಳ್; ಎಯ್ದು = ಚೆನ್ನಾಗಿ; ಯೋಗವಾಹಂ = ಯೋಗವಾಹಾಕ್ಷರಂಗಳ್; ಅಕ್ಕುಂ = ಅಪ್ಪುವು; ಕ್ರಮದಿಂ = ತಱುವಾಯಿಂದೆ; ಕಪಯುಗಳಂ = ಕಕಾರ ಪಕಾರಂಗಳೆಂಬೆರಡುಂ; ಇವಱೊಳ್ = ಈ ಜಿಹ್ವಾಮೂಲೀಯೋಪಧ್ಮಾನೀಯಂಗಳಲ್ಲಿ; ಅನುಬಂಧಂಗಳ್ = ಸಂಬಂಧಂಗಳಾಗಿರ್ಪವು.

---

1) These 2 sibilants correspond to the Vajrâkṛiti and Gajakumbhâkṛiti in the Dêvanâgari. S. 32 includes ೱ and ೲ among the Saṁskṛita-Kannaḍa letters.

ವೃತ್ತಿ.— ಕಕಾರಮುಚ್ಚಾರಣಾರ್ಥಮಾಗುಱಿದ, ಪಸುಂಬೆಯ ಲಕ್ಷಣ ದಂತಿರ್ದ ವರ್ಣಂ ಜಿಹ್ವಾಮೂಲೀಯಮೆಂಬುದು; (ಕಕಾರಸಂಗಡದ) ಅದಱ ಸ್ವರೂಪಂ ॥ ೱಕ ॥.

ಪಕಾರಮುಚ್ಚಾರಣಾರ್ಥಮಾಗುಱಿದ ಕುಮಾರೀಸ್ತನಯುಗಳಾಕೃತಿಯ ವರ್ಣಂ ಉಪಧ್ಮಾನೀಯಂ; (ಪಕಾರಸಂಗಡದ) ಅದಱ ಸ್ವರೂಪಂ ॥ ೲಪ ॥.

ಕೈವಾರಮಂ ಬೀಸಿದಂತೆ ಬಟ್ಟಿತ್ತಾಗಿ ತೋರ್ಪುದು ಸೊನ್ನೆ; ಅದಱ ರೂಪಂ ॥ ಂ ॥.

ಮೇಲೆಯುಂ ಕೆಳಗೆಯುಂ ಆ ತೆಱದಿನಿರೆ, ವಿಸರ್ಗಂ ಅದಱ ಸ್ವರೂಪಂ ॥ ಃ ॥. ಈ ನಾಲ್ಕು ಯೋಗವಾಹಂಗಳ್.

4. The Kanarese Consonants ಱ, ೞ, ಳ (ಕುಳಂ).

ಸೂತ್ರಂ[1]. ॥ ೧೮ ॥

The three Kannaḍa consonants ಱ (ṟ) ೞ (ḻ) and ಳ (ḷ). They are cognates of ರ, ಡ; and ಲ, ಡ is often changed into ೞ in Kannaḍa words, and sometimes in Tadbhavas.

ಅತಿಪೀಡನದಿಂ ರೇಫಾ- |
ಶ್ರಿತಮಾದ ಱಕಾರಮುಂ ಸಮಂತು ಡಕಾರಾ- ॥
ಶ್ರಿತಮಾದ [2]ೞಱನುಮಂಗೀ- |
ಕೃತಪದಲಕ್ಷ್ಮಕೆ ಸನೇಮ ಸಲ್ಲದ ಕುಳನುಂ. ॥ ೨೮ ॥

ಸೂತ್ರಂ[3]. ॥ ೧೯ ॥

ಇವು ವರ್ಣಾವೃತ್ತಿಗೆ[4] ಸ- |
ಲ್ಲುವವು ಸಂದುಂ ಪ್ರಾಸದೆಡೆಗೆ ಸಲ್ಲವು ಯಮಕ ॥

---

1) ಲ ರ ಡ ಗ್ರಹಣದೆ ಳ ಱ ೞಾ
ಕ್ಷರಮುಕ್ಕುಂ ಪೀಡನ ಪ್ರಯತ್ನಾಶ್ರಯದಿಂ. ॥ ಶ. ಸ್ಮೃ. 6. ॥

2) ಈ ಅಕ್ಷರಂ ಉಚಿತೋಚ್ಚರಣಕ್ಕಾಗಿ ೞ ಎಂಬುದಱ ಪಿಂದೆ ಇಟ್ಟಿರ್ಪುದು.

3) ಏದೋತೌ ಹ್ರಸ್ವಾ ಚ ॥ ಭಾ. ಭೂ. 5. ॥
(ಕನ್ನಡದಲ್ಲಿ ಏಕಾರ ಓಕಾರಗಳು ಹ್ರಸ್ವಗಳಾಗುವುವು.)
See ಶಬ್ದಸ್ಮೃತಿ ಸೂತ್ರ 67 quoted on page 18.

4) Repetition of cognate letters.

ವ್ಯವಹೃತಿಗಾಗವು ದೇಶೀ- |
ಯವೆನಿಪುವಾ ಹ್ರಸ್ವಮೆನಿಸಿದಾ ಎ ಒ ಸಹಿತಂ. || ೨೯ ||

ಪದಚ್ಛೇದಂ. — ಅತಿಪೀಡನದಿಂ ರೇಫಾಶ್ರಿತಂ ಆದ ಱಕಾರಮುಂ, ಸಮಂತು ಡಕಾರಾಶ್ರಿತಂ ಆದ ೞನುಂ, ಅಂಗೀಕೃತಪದಲತ್ವಕೆ ಸನೇಮ ಸಲ್ಲದ ಕುಳನುಂ — ಇವು ವರ್ಣಾವೃತ್ತಿಗೆ ಸಲ್ವುವು; ಸಂದುಂ ಪ್ರಾಸದ ಎಡೆಗೆ ಸಲ್ಲವು; ಯಮಕ ವ್ಯವಹೃತಿಗೆ ಆಗವು; ದೇಶೀಯಂ ಎನಿಪುವು, ಆ ಹ್ರಸ್ವಂ ಎನಿಸಿದ ಆ ಎ ಒ ಸಹಿತಂ.

ಟೀಕು, ಯಥಾನ್ವಯಂ. — ಅತಿಪೀಡನದಿಂ = ರೇಫೆ ಪುಟ್ಟುವ ಸ್ಥಾನವಂ ಬೆಟ್ಟಿತ್ತಾಗಿ ಉಚ್ಚರಿಪುದಱಿಂದೆ; ರೇಫಾಶ್ರಿತಂ = ರೇಫೆಯನಾಶ್ರೈಸಿ ಪುಟ್ಟಿದುದು; ಆದ = ಆದ; ಱಕಾರಮುಂ = ಱಕಾರಮುಂ; ಸಮಂತು = ಹಾಗೆ; ಡಕಾರಾಶ್ರಿತಂ = ಡಕಾರವನಾಶ್ರೈಸಿ ಪುಟ್ಟಿದುದು; ಆದ = ಆದ; ೞನುಂ = ೞವೆಂಬ ೞಕಾರವುಂ; ಅಂಗೀಕೃತಪದಲತ್ವಕೆ = ಅಂಗೀಕರಿಸಲ್ಪಟ್ಟ ಪದಂಗಳ ಲಕಾರಕ್ಕೆ; ಸನೇಮ = ಪ್ರಾಸ; ಸಲ್ಲದ = ಸಲುವಳಿಯಾಗದ; ಕುಳನುಂ = ಕುಳವೆಂಬ ಳಕಾರಮುಂ; ಇವು = ಈ ಅಕ್ಷರಂಗಳ್; ವರ್ಣಾವೃತ್ತಿಗೆ = ವರ್ಣಂಗಳಾವೃತ್ತಿಗೆ; ಸಲ್ವುವು = ಸಲುವಳಿಯಪ್ಪುವು; ಸಂದುಂ = ವರ್ಣಾವೃತ್ತಿಗೆ ಸಂದುಂ; ಪ್ರಾಸದ = ನಿಯಾಮದ (ನಿಯಮದ); ಎಡೆಗೆ = ಸ್ಥಾನಕ್ಕೆ; ಸಲ್ಲವು = ಸಲುವಳಿಯಾಗವು; ಯಮಕವ್ಯವಹೃತಿಗೆ = ಯಮಕವ್ಯವಹಾರಕ್ಕೆ; ಆಗವು = ಸಲುವಳಿಯಾಗವು; ಆ ಹ್ರಸ್ವಮೆನಿಸಿದ = ಆ ಸ್ವರಸಂಜ್ಞೆಯಲ್ಲಿ ಹ್ರಸ್ವಂಗಳೆನಿಸಿದ; ಆ ಎ ಒ ಸಹಿತಂ = ಆ ಎ ಒ ಎಂಬಿವು ಸಹಿತವಾಗಿ; ದೇಶೀಯಂ = ದೇಶೀಯಾಕ್ಷರಂಗಳ್; ಎನಿಪುವು = ಎನಿಸುವುವು.

ವೃತ್ತಿ. — ರೇಫೆ ಪುಟ್ಟುವ ತಾಣಮಂ ಬೆಟ್ಟಿತ್ತಾಗುಚ್ಚರಿಸೆ, ಱಕಾರಂ ಪುಟ್ಟುಗುಂ; ಡಕಾರಂ ಪುಟ್ಟುವ ತಾಣಮಂ ಬೆಟ್ಟಿತ್ತಾಗುಚ್ಚರಿಸೆ, ೞಿಂ ಪುಟ್ಟುಗುಂ; ಲಕಾರಂ ಪುಟ್ಟುವ ತಾಣಮಂ ಬೆಟ್ಟಿತ್ತಾಗುಚ್ಚರಿಸೆ, ಕುಳಳಕಾರಂ ಪುಟ್ಟುಗುಂ. ರೇಫೆ ಮೂರ್ಧನ್ಯಂ, ಱಕಾರಮದಱೊಳ್ [1] ಏಕಸ್ಥಾನಿ; ಡಕಾರಂ ಮೂರ್ಧನ್ಯಂ, ೞಿಂ ಅದಱೊಳ್ ಏಕಸ್ಥಾನಿ; ಲಕಾರಂ ದಂತ್ಯಂ, ಕುಳಂ ಅದಱೊಳ್ ಏಕಸ್ಥಾನಿ. [ಮೊರೆ—ಮೊಱೆ. ಮರೆ—ಮಱೆ.]

[ಕೋಡಿ—ಕೋೞಿ. ಕಡಲ್—ಕೞಲ್.]
[ಮೊಲೆ, ಮೊಳೆ; ಕಲೆ, ಕಳೆ.]

[1] Two consonants produced in, or by the same organs are termed ಏಕಸ್ಥಾನಿ. ರ್ and ಱ್, ಡ್ — ೞ್, ಲ್ and ಳ್ are ಏಕಸ್ಥಾನಿ.

ಇಂತೇಕಸ್ಥಾನಿಗಳಾದ ಕಾರಣದಿಂದಿವು [1]ವರ್ಣಾವೃತ್ತಿಗೆ ಸಲ್ವುವು; ನಿಯಾಮಕ್ಕಂ ಯಮಕ ವ್ಯವಹೃತಿಗಮಾಗವು. ಱಕಾರಮುಂ ೞಱನುಂ ಕುಳನುಂ ಹ್ರಸ್ವಮಾದ ಎ ಒ ಎಂಬಿವುಂ ಸಂಸ್ಕೃತದೊಳಿಲ್ಲ; ಅವು ಕೂಡಿ ದೇಶೀಯಂಗಳಾಗಿ ಕನ್ನಡದೊಳೊಳವು.

ಪ್ರಯೋಗಂ.—ರೇಫೆ ಱಕಾರಂಗಳ ವರ್ಣಾವೃತ್ತಿಗೆ—

ಸುರ್ಗಿಱೋದೊಱಗಿದ ಬಿರುದರ
ಕರುಳಂ ಕೊಱೆಕೊಱೆದು ಮರುಳಿರುಳ್ ತಿಂಬೆಡೆಯೊಳ್ || 18 ||

(In the above the ಪ್ರಾಸ letters are printed in thick type, the ವರ್ಣಾವೃತ್ತಿ letters are shown with a dot over them.)

ಡಕಾರ ೞಱಂಗಳ ವರ್ಣಾವೃತ್ತಿಗೆ—

"ಕಱಲೆ ನುಡಿದಱಲೆ ಬಗ್ಗಿಸಿ |
ಘಱಲನೆ ನಡೆಯೆಂದು ಜಡಿದು ಸಾರಥಿಯಂ" || 19 ||

(In the above the fat letters are the ಪ್ರಾಸಾಕ್ಷರಗಳು. The letters with a dot over them are all ಏಕಸ್ಥಾನಿಗಳು and hence permissible for ವರ್ಣಾವೃತ್ತಿ.)

[illegible]ಳಂಗಳ ವರ್ಣಾವೃತ್ತಿಗೆ—

"......ದೆಸೆಗಳ- |
ನಳುರ್ದುಸಿರ್ದೊಳ್ ಕೆಳರ್ದು ಮಿಳಿರ್ದು ತಳರ್ದತ್ತಾಗಳ್" || 20 ||

[1] ಪ್ರಾಸ in Kannaḍa is a kind of alliteration in which the second letter of the first line of a stanza is set in the same place in every other line. ವರ್ಣಾವೃತ್ತಿ is an additional alliteration in which the ಪ್ರಾಸಾಕ್ಷರ is set in other places in the course of a stanza. ಯಮಕ is a kind of Paronomasia. In Kannaḍa a ಪ್ರಾಸ is said to be correct when the second consonant of the first line is repeated in the same place in every other line, and incorrect when different consonants occur in that place. According to Kēśava the ಏಕಸ್ಥಾನಿ letters are inadmissible to be used both as ಪ್ರಾಸಾಕ್ಷರಗಳು and ಯಮಕಾಕ್ಷರಗಳು, but are permissible only in ವರ್ಣಾವೃತ್ತಿ.

ರೇಫೆ ಱಕಾರಂಗಳ ನಿಯಮವಾಗದುದರ್ಕೆ—

"ಧುರದೊಳ್ ಪಱಿಮಱಿಯಾಡುವ |
ತೆಱದಿಂದುಱದಿಱಿದನೆಂಬ ನಿಯಮಂ ದೂಷ್ಯಂ" || 21 ||

(In the above ರ and ಱ do not form a good ಪ್ರಾಸ, though admissible for ವರ್ಣಾವೃತ್ತಿ.)

ಡಕಾರ ಱಱಂಗಳ್ಗೆ ಪ್ರಾಸಮಾಗದುದರ್ಕೆ—

"ಕೋಡದಿಱಿದಿಂದ್ರರಾದರ್ |
ನಾಱಿಗೆಯೊಳ್ ವೀರರೆಂಬ ನಿಯಮಂ ದೂಷ್ಯಂ." || 22 ||

(In the above ಡ and ಱ cannot form a good ಪ್ರಾಸ.)

ಲಕಾರ ೞಂಗಳ ಪ್ರಾಸಮಾಗದುದರ್ಕೆ—

"ನೆಲದೊಳ್ ಪಗೆಪುಗೆ ಫಣಿಯವೊ- |
ಲೊಳವೊಕ್ಕಳಱಿಸಿದನೆಂಬ ನಿಯಮಂ ದೂಷ್ಯಂ." || 23 ||

(In the above ಲ and ೞ should not have been put together for ಪ್ರಾಸ.)

ಯಮಕಂಗಳಾಗದುದರ್ಕೆ—

"ಕರೆಯಂ ನೆರವಂ ವಂಶಂ |
ಕಱಿಯಂ ಪೊತ್ತಪ್ಪುದೆಂದು ಸಂಗರಮುಖದೊಳ್" || 24 ||

ಇಲ್ಲಿ ಶಬ್ದಾವೃತ್ತಿ ಕೆಟ್ಟಿಪ್ಪುದಾಗಿಯುಂ, ಕಱಿಯಂ ಪೊತ್ತಪ್ಪುದೆಂಬುದಂ ಕರೆಯಂ ಪೊತ್ತಪ್ಪುದೆಂದೊಡರ್ಥಘಟನೆಯಿಲ್ಲಾಗಿಯುಂ, ಯಮಕಲಕ್ಷಣಮಿಲ್ಲ.

ಡಕಾರ ಱಱಂಗಳುಂ ಲಕಾರ ೞಂಗಳುಂ ಈ ತೆಱದಿಂ ಯಮಕಕ್ಕೆ ಸಲ್ಲವು.

ಡಕಾರಕ್ಕಾದೇಶಮಾದ ಱಱಕ್ಕೆ ಪ್ರಯೋಗಂ — ಕಾಡುಕಿಚ್ಚು = ಕಾಱ್ಕಿಚ್ಚು; ಕೋಡುಕುಟ್ಟ = ಕೋಱ್ಕುಟ್ಟ; ನೀಡುಕರಿಸಿದಂ = ನೀಱ್ಕರಿಸಿದಂ; ಬೀಡುಕೊಂಡಂ = ಬೀಱ್ಕೊಂಡಂ; ನಾಡಕಡೆ = ನಾಱ್ಕಡೆ; ಸೆಡುಪಟ್ಟಂ = ಸೆಱ್ಪಟ್ಟಂ.

ಟ್ಟಂ; ನೀರಡಿಕೆ=ನೀರೞ್ಕೆ; ಎರಡುಮೂಱು=ಎರೞ್ಮೂಱು; ಮಾಡುವಂ=ಮಾೞ್ಪಂ; ನೋಡುವಂ=ನೋೞ್ಪಂ; ಬೇಡುವಂ=ಬೇೞ್ಪಂ; ಬೆಗಡುವಂ=ಬೆಗೞ್ಪಂ; ಪೞ್ಕಿ "ತೞ್ಕೈಸಿದನೆಂಬಲ್ಲಿ ತಡಕೈಯ್ಯಂ ಮಾಡಿದನೆಂಬರ್ಥಂ"; ನಾಡಿ=ನಾೞಿ; ನಾಡಿಕಾ=ನಾೞಿಗೆ, (ನಾೞಿಗೆಯೆಂದು ಘೞಿಗೆ); ಎಸಡಿಗೆ=ಎಸೞ್ಗೆ[1], (ಪೂವಿನೆಸಳೊಳ್ ಕುಳಂ); ಕಿವುಡು ಕೇಳ್ವನೆಂಬಲ್ಲಿ ಕಿವುೞ್ಕೇಳ್ವಂ.

ಸೂತ್ರಂ. ॥ ೨೦ ॥

Saṁskṛita ಡ changed also into ಳ in some Tadbhava-nouns and not ೞ (*cf.* S. 284).

ದಾಡಿಮಮಾ ಕೂಷ್ಮಾಂಡಂ ।
ಗೌಡಂ ಗುಡಮಡಸಿ ಪೊಡೆವ ಝುಗಡೆ ವಿಡಂಗಂ ॥
ಕೂಡೆ ಕುಳನೇಡಕಮುಮಱಿ ।
ರೂಢಿಯ ಕುಳನೆಂದು ಬಿೞಿದಪಭ್ರಂಶತೆಯೊಳ್ ॥ ೨೦ ॥

ಪದಚ್ಛೇದಂ.— ದಾಡಿಮಂ, ಆ ಕೂಷ್ಮಾಂಡಂ, ಗೌಡಂ, ಗುಡಂ, ಅಡಸಿ ಪೊಡೆವ ಝುಗಡೆ, ವಿಡಂಗಂ ಕೂಡೆ ಕುಳಂ; ಏಡಕಮುಂ, ಅಱಿ, ರೂಢಿಯ ಕುಳಂ ಎಂದು, ಬಿೞಿದ ಅಪಭ್ರಂಶತೆಯೊಳ್!

ಅನ್ವಯಂ.— ಬಿೞಿದ ಅಪಭ್ರಂಶತೆಯೊಳ್ ದಾಡಿಮಂ, ಆ ಕೂಷ್ಮಾಂಡಂ, ಗೌಡಂ, ಗುಡಂ, ಅಡಸಿ ಪೊಡೆವ ಝುಗಡೆ, ವಿಡಂಗಂ ಕೂಡೆ ಕುಳಂ; ಏಡಕಮುಂ ರೂಢಿಯ ಕುಳಂ ಎಂದು, ಅಱಿ!

ಟೀಕು.— ಬಿೞಿದ = ಬಿೞವೆಂಬ ಡಕಾರದ, ಅಪಭ್ರಂಶತೆಯೊಳ್ = ತದ್ಭವದಲ್ಲಿ; ದಾಡಿಮಂ = ದಾಡಿಮವೆಂಬ ಶಬ್ದಂ; ಆ ಕೂಷ್ಮಾಂಡಂ = ಆ ಕೂಷ್ಮಾಂಡಮೆಂಬ ಶಬ್ದಂ; ಗೌಡಂ = ಗೌಡಮೆಂಬ ಶಬ್ದಂ; ಗುಡಂ = ಗುಡಮೆಂಬ ಶಬ್ದಂ; ಅಡಸಿ = ಸಂಗಡಿಸಿ; ಪೊಡೆವ = ಹೊಡೆವ; ಝುಗಡೆ = ಝುಗಡೆಯೆಂಬ ಶಬ್ದಂ; ವಿಡಂಗಂ = ವಿಡಂಗಮೆಂಬ ಶಬ್ದಂ; ಕೂಡೆ = ಒಡನೆ; ಕುಳಂ = ಕುಳಮೆಂಬ ಳಕಾರಂ; ಏಡಕಮುಂ = ಏಡಕಮೆಂಬ ಶಬ್ದಮುಂ; ರೂಢಿಯ = ಪ್ರಸಿದ್ಧಿಯ; ಕುಳನೆಂದು = ಕುಳಮೆಂಬ ಳಕಾರವೆಂದು; ಅಱಿ = ತಿಳಿ!

ವೃತ್ತಿ.— ದಾಳಿಂಬಂ, ಕುಂಬಳಂ, ಗೌಳಂ, ಗುಳಂ, ಝುಗಳೆ, ವಿಳಂಗಂ ಇವು ಕೂಡೆ ಡಕಾರಕ್ಕೆ ಪುಟ್ಟೆ ಬಿೞಿದಪಭ್ರಂಶತೆಯಂ ಪಡೆದುಂ ರೂಢಿಯ ಕುಳಂಗಳ್; ಏಳಗಮೆಂಬುದು ಏಡಕಕ್ಕೆ ಪುಟ್ಟೆಯುಂ ಕುಳಂ.

[1] Dative of ಎಸಡಿ.

ಸೂತ್ರಂ. || ೨೧ ||

Saṁskṛita ಟ, ತ, ಠ, ಳ (ಕ್ಷಳಂ changed into ೞ) in Tadbhavas.

ಕೃತಿಮಾರ್ಗದೊಳುಂಟು ಟಕಾ- |
ರ ತಕಾರ ಠಕಾರ ರೇಫದೆಡೆಗಂ ಬಹುಳ ||
ಸ್ಥಿತಿಯಿಂ ಕ್ಷಳಕಮಪಭ್ರಂ- |
ಶತೆಯೊಳ್ ಸುಕವೀಂದ್ರರಿಂದೆ ೞದಾದೇಶಂ || ೩೧ ||

ಪದಚ್ಛೇದಂ.— ಕೃತಿಮಾರ್ಗದೊಳ್ ಉಂಟು ಟಕಾರ ತಕಾರ ಠಕಾರ ರೇಫದ ಎಡೆಗಂ ಬಹುಳ ಸ್ಥಿತಿಯಿಂ ಕ್ಷಳಕಂ ಅಪಭ್ರಂಶತೆಯೊಳ್ ಸುಕವೀಂದ್ರರಿಂದೆ ೞದ ಆದೇಶಂ.

ಅನ್ವಯಂ.— ಕೃತಿಮಾರ್ಗದೊಳ್ ಸುಕವೀಂದ್ರರಿಂದೆ ಅಪಭ್ರಂಶತೆಯೊಳ್ ಟಕಾರ ತಕಾರ ಠಕಾರ ರೇಫದ ಎಡೆಗಂ ಕ್ಷಳಕಂ ಬಹುಳ ಸ್ಥಿತಿಯಿಂ ೞದ ಆದೇಶಂ ಉಂಟು.

ಟೀಕು.— ಕೃತಿಮಾರ್ಗದೊಳ್ = ಕಾವ್ಯಮಾರ್ಗದಲ್ಲಿ; ಸುಕವೀಂದ್ರರಿಂದೆ = ಸತ್ಕವೀಂದ್ರರಿಂದೆ; ಅಪಭ್ರಂಶತೆಯೊಳ್ = ಅಪಭ್ರಂಶದಲ್ಲಿ; ಟಕಾರ ತಕಾರ ಠಕಾರ ರೇಫದ = ಟಕಾರದ ತಕಾರದ ಠಕಾರದ ರೇಫೆಯ; ಎಡೆಗಂ = ಸ್ಥಾನಕ್ಕೆಯುಂ; ಕ್ಷಳಕಂ = ಕ್ಷಳಳಕಾರಕ್ಕೆಯುಂ; ಬಹುಳ ಸ್ಥಿತಿಯಿಂ = ಬಹುಳ ಸ್ಥಿತಿಯಿಂದೆ; ೞದ = ೞವೆಂಬ ೞಕಾರದ; ಆದೇಶಂ = ಆದೇಶಂ; ಉಂಟು = ಉಂಟಾಗಿರ್ಪುದು.

ವಿಚಾರಂ.— ಆದೇಶಮೆಂದೊಡೆ ಮೊದಲಿರ್ದುದಂ ತೊಲಗಿಸಿ ಬರ್ಪುದೆಂದಱಿವುದು.

ವೃತ್ತಿ.— ಕಾವ್ಯಮಾರ್ಗದೊಳ್ ಟಕಾರ ತಕಾರ ಠಕಾರ ರೇಫ ಕ್ಷಳಂಗಳ್ಗೆ ೞಾದೇಶಂ ಅಪಭ್ರಂಶತೆಯೊಳುಂಟು.

ಪ್ರಯೋಗಂ. ಟಕಾರಕ್ಕೆ — ಘಟಿಕೆ = ಗೞಿಗೆ; ಘೋಟಿಕೆ = ಗೋೞಿಗೆ; ಧಾಟಿ = ದಾೞಿ; ಲಾಟಂ = ಲಾೞಂ; ಲಾಟಭಾಷೆಗಂ = ಲಾೞಬಾಸೆಗಂ; ಘೋಟಾರೂಢಂ = ಗೋೞಾಯಿಲಂ; ಕುಕ್ಕುಟಂ = ಕೋೞಿ.

ತಕಾರಕ್ಕೆ — ಪ್ರತಿಹಸ್ತಂ = ಪೞಿಹತ್ತಂ; ಪ್ರತಿಪಾದುಕೆ = ಪೞಿವಾವುಗೆ.

ಠಕಾರಕ್ಕೆ — ಮಠಿಕೆ = ಮೞಿಗೆ; ಪೀಠಿಕೆ = ಪೀೞಿಗೆ.

ರೇಫಕ್ಕೆ — ಕ್ರೂರಂ = ಕೂೞ್; ಝುಲ್ಲರಿ = ಝುಲ್ಲೞಿ.

ಕ್ಷಳಕ್ಕೆ — ತಾಳಂ = ತಾೞ್; ಪುಳಿನಂ = ಪುೞಿಲ್; ಕಳಮಂ = ಕೞವೆ; ಅರ್ಗಳಂ = ಅಗುೞಿ; ಮನ್ನಾಳಿ = ಮನ್ನೞಿ; ಅಳಿಕಾಬದ್ಧಂ = ಅೞಿಗೆವದ್ದಂ.

ಸೂತ್ರಂ. || ೨೨ ||

Samskrita ಟ changed also into ೞ (ಕುೞಂ) in some Tadbhavas.

ಸ್ಫಟಿಕಂ ಪೇಟಿಕೆ ವೀಟಿಕೆ |
ಘುಟಿಕೆ ವರಾಟಂ ಪೊದಟ್ಟಿ ರಘಟಿ ಕುೞಂ ತಾಂ ||
ಸ್ಫುಟಸಹಿತಂ ಸ್ಫೋಟಕಲಂ- |
ಪಟಶಬ್ದಯುಗಂ ಱಱಿಕ್ಕೆ ನೆಱೆ ಸಂದೇಹಂ || ೩೨ ||

ಪದಚ್ಛೇದಂ.— ಸ್ಫಟಿಕಂ ಪೇಟಿಕೆ, ವೀಟಿಕೆ, ಘುಟಿಕೆ, ವರಾಟಂ, ಪೊದಟ್ಟಿ ರಘಟಿ ಕುೞಂ ತಾಂ ಸ್ಫುಟಸಹಿತಂ; ಸ್ಫೋಟಕಲಂಪಟಶಬ್ದಯುಗಂ ಱಱಿಕ್ಕೆ ನೆಱೆ ಸಂದೇಹಂ.

ಅನ್ವಯಂ.— ಸ್ಫಟಿಕಂ, ಪೇಟಿಕೆ, ವೀಟಿಕೆ, ಘುಟಿಕೆ, ವರಾಟಂ, ಪೊದಟ್ಟಿ ರಘಟಿ ಸ್ಫುಟಸಹಿತಂ ತಾಂ ಕುೞಂ; ಸ್ಫೋಟಕಲಂಪಟಶಬ್ದಯುಗಂ ಱಱಿಕ್ಕೆ ನೆಱೆ ಸಂದೇಹಂ.

ಟೀಕು.— ಸ್ಫಟಿಕಂ=ಸ್ಫಟಿಕವೆಂಬ ಶಬ್ದಂ; ಪೇಟಿಕೆ = ಪೇಟಿಕೆಯೆಂಬ ಶಬ್ದಂ; ವೀಟಿಕೆ= ವೀಟಿಕೆಯೆಂಬ ಶಬ್ದಂ; ಘುಟಿಕೆ=ಘುಟಿಕೆಯೆಂಬ ಶಬ್ದಂ; ವರಾಟಂ=ವರಾಟವೆಂಬ ಶಬ್ದಂ: ಪೊದಟ್ಟಿ=ಪ್ರಸಿದ್ಧವಾದ; ರಘಟಿ=ರಘಟಿಯೆಂಬ ಶಬ್ದಂ; ಸ್ಫುಟಸಹಿತಂ=ಸ್ಫುಟಮೆಂಬ ಶಬ್ದ ಸಹಿತವಾಗಿ; ತಾಂ=ಈ ಶಬ್ದಂಗಳ್ ತಾಂ; ಕುೞಂ=ೞಕಾರಮಪ್ಪುವು; ಸ್ಫೋಟಕಲಂಪಟಶಬ್ದ ಯುಗಂ=ಸ್ಫೋಟಕವೆಂಬ ಲಂಪಟವೆಂಬ ಶಬ್ದಂಗಳೆರಡುಂ; ಱಱಿಕ್ಕೆ=ಱಱಿವೆಂಬ ಱಕಾರಕ್ಕೆ; ನೆಱೆ = ಚೆನ್ನಾಗಿ; ಸಂದೇಹಂ = ಸಂದೇಹಮಪ್ಪುವು, ಕುೞವೇ ಅಪ್ಪುದೆಂಬುದರ್ಥಂ.

ವೃತ್ತಿ.—ಪೞಿಕಂ, ಪೇೞಿಗೆ, ವೀೞಿಗೆ, ಗುೞಿಗೆ, ವರಾೞಂ, ರಗೞೆ, ಪುೞಂ ಇವು ಅಪಭ್ರಂಶದೊಳ್ ಟಕಾರಕ್ಕೆ ಪುಟ್ಟಿಯುಂ ಕುೞಂಗಳಾದುವು; ಸ್ಫೋಟಕ ಶಬ್ದಕ್ಕಾದ ಹೊೞಿಗೆಯೆಂಬುದುಂ, ಲಂಪಟಶಬ್ದಕ್ಕಾದ ಲಂಬೞಮೆಂಬುದುಂ ಱಱಿಕ್ಕೆ ಸಂದೇಹಂ, ಕುೞಂಗಳೆಯಪ್ಪುವು.✓

ಸೂತ್ರಂ. || ೨೩ ||

A list of words with the letter ಱ.

ಏಕದ್ವಿತ್ರಿಚತುಃಪಂ- |
ಚಾಕಲಿತಾರ್ಥಂಗಳಾಗಿ ಱಱಿನೊಳವು ನಿಸ- ||
ರ್ಗಾಕೃತಿಯಿಂದವನಾದಿಮು- |
ಹಾಕವಿಕೃತಿದೃಷ್ಟಮಂ ನಿರಾಕುಳಮುಸಿರ್ವೆಂ || ೩೩ ||

ಪದಚ್ಛೇದಂ.— ಏಕದ್ವಿತ್ರಿಚತುಃಪಂಚಾಕಲಿತಾರ್ಥಂಗಳ್ ಆಗಿ ಱೞಂ ಒಳವು ನಿಸರ್ಗಾಕೃತಿಯಿಂದೆ ಆವಂ ಆದಿಮಹಾಕವಿಕೃತಿದೃಷ್ಟಮಂ ನಿರಾಕುಳಂ ಉಸಿರ್ವೆಂ.

ಟೀಕು, ಯಥಾನ್ವಯಂ.— ಏಕ = ಒಂದಱಲ್ಲಿ; ದ್ವಿ = ಎರಡಱಲ್ಲಿ; ತ್ರಿ = ಮೂಱಱಲ್ಲಿ; ಚತುಃ = ನಾಲ್ಕಱಲ್ಲಿ; ಪಂಚ = ಐದಱಲ್ಲಿ; ಆಕಲಿತ=ಕೂಡಲ್ಪಟ್ಟ; ಅರ್ಥಂಗಳ್=ಅರ್ಥವುಳ್ಳುವು; ಆಗಿ = ಆಗಿ; ಱೞಂ=ಱೞಶಬ್ದಂಗಳ್; ಒಳವು=ಉಂಟು; ನಿಸರ್ಗಾಕೃತಿಯಿಂದೆ= ಸಿದ್ಧಯಾಕಾರದಿಂದೆ: ಆವಂ = ಆ ಱೞಶಬ್ದಂಗಳುಂ; ಆದಿ = ಪೂರ್ವದ; ಮಹಾಕವಿ = ಮಹಾಕವಿಗಳ; ಕೃತಿದೃಷ್ಟಮಂ = ಕಾವ್ಯದೃಷ್ಟಮಂ; ನಿರಾಕುಳಂ=ವ್ಯಾಕುಳವಿಲ್ಲದ ಹಾಗೆ; ಉಸಿರ್ವೆಂ = ಪೇೞ್ವೆಂ.

ವೃತ್ತಿ.— ಒಂದರ್ಥಮಂ ಎರಡರ್ಥಮಂ ಮೂಱರ್ಥಮಂ ನಾಲ್ಕರ್ಥಮಂ ಐದರ್ಥಮಂ ಪೇೞ್ವ ಸಹಜ ಱೞಂಗಳಂ ಪ್ರಾಮಾಣಪುರುಷರ ಕಾವ್ಯಮಾರ್ಗದಿಂ ಕಂಡು, ನೆಱೆ ಪೇೞ್ದಪೆಂ. ಅವಾವೆಂದೊಡೆ.—

ಒಂದರ್ಥಕ್ಕೆ—

1. ಅಗೞ್ತೆಯೆಂದು, ಖನನಂ.
2. ಅಗುೞ್ದನೆಂದು, ನೀರ್ನೆಲೆದಪ್ಪಿದಂ.
3. ಅದವಱಲೆಂದು, ಮಱುಕಂ.
4. ಅವಗೞಯವೆಂದು, ಉರವಣೆಕಾರ್ತನಂ.
5. ಅಸಕೞಾದನೆಂದು, ಕೈವಿಡಾೞದಂ.
6. ಅೞ್ಕಮೆಯೆಂದು, ಅಱವೆ.
7. ಅೞ್ಕರ್ತನೆಂದು, ಪ್ರೀತಿವಟ್ಟಂ.
8. ಅೞ್ಕೆಯೆಂದು, ರೋದನಂ.
9. ಅೞ್ತೆಯೆಂದು, ಪ್ರೀತಿ; (ಅದನ್ನರ್ತಿಯೆಂದು ಪೇೞ್ವುದಬದ್ಧಂ).
10. ಆೞಾೞಗಮೆಂದು, ಒಂದು ಸಾಮಾನ್ಯ ಮಾಲಾಬಂಧಂ.
11. ಅೞ್ದನೆಂದು, ಮುೞುಗಿದಂ.
12. ಈ ಸೂೞೆಂದು, ವರ್ತಮಾನ ವರುಷಂ.
13. ಈೞ್ದನೆಂದು, ಸೆಳೆದಂ.
14. ಉಂಬೞಿಯೆಂದು, ಕೊಡಗೆ.
15. [ಉೞಕು, ಉೞವು, ಕೞವು ಎಂಬಿವು ಭಾವವಾಚಿಗಳ್.]
16. ಉೞಗನೆಂದು, ಶಕುನದ ಪಕ್ಕಿ.
17. ಉೞುಗಿದನೆಂದು, ಒಲ್ದಂ.
18. ಉೞುಗೆಂದು, ಬೇಟಂ.
19. ಉೞ್ಕೆಯೆಂದು, ಉೞ್ವ ಸ್ವಭಾವಂ.
20. ಎಱವಿದನೆಂದು, ನೀವಿದಂ.
21. ಏೞೆಂದು, ಸಂಖ್ಯಾವಾಚಿ.
22. ಒೞ್ಕೆಂದು, ನದೀಪ್ರವಾಹಂ.
23. ಕಚ್ಚೞಿಯೆಂದು, ಬಿರುದಿನ ಬಳೆ.
24. ಕಱಕೞಸಿದನರ್ಕಂ.
25. ಕಱಕುಱಮೆಂದು, ಸ್ಥಾನವ್ಯಾಕುಲತೆ.
26. ಕಱಲೆಯೆಂದು, ಮುಳ್ವೆರಸಿದ ಗುಜುಱು ಗೊಂಬು.
27. ಕೞಾಲೆಯೆಂದು, ಬಿದಿರ ಕುಡಿ.
28. ಕೞ್ಕನೆಯೆಂದು, ಆಕಸ್ಮಿಕಂ.
29. ಕೞ್ತಲೆಯೆಂದು, ಮರ್ವು.

30. ಕೞ್ತೆಯೆಂದು, ಗರ್ದಭಂ.
31. ಕಿಮುೞ್ಚಿದನೆಂದು, ಚಿಕ್ಕಣಮಾಗಿ ಮಾಡಿದಂ.
32. ಕಿಮುೞ್ದುಱಿದನೆಂದು, ಸಣ್ಣಮಾಗಿ ತುಱಿದಂ.
33. ಕಿೞ್ಗಿದನೆಂದು, ಗುಜ್ಜಂ.
34. ಕಿೞ್ತನೆಂದು, ನಿರ್ಮೂಲಿಸಿದಂ.
35. ಕುೞಮೆಂದು, ನೇಗಿಲ್ವಾಯ್ದ ಕರ್ಬೊನಂ.
36. ಕುಱಿಯೆಂದು, ಅಗುಳ್ದೆ.
37. ಕೂೞನೆಂದು, ಎಗ್ಗಂ.
38. ಕೆೞವನೆಂದು, ಮುದುಕಂ.
39. ಕೇೞಿಯೆಂದು, ಪಂಕ್ತಿಯೊಳ್ ೞೞಂ, (ಕ್ರೀಡೆಯೊಳ್ ಳಕಾರಂ).
40. ಕೊೞಲೆಂದು, ವೇಣುವಾದ್ಯದೊಳ್ ೞೞಂ, (ಕೊಳಲೆಂಬ ಕ್ರಿಯೆಯೊಳ್ ಕುಳಂ).
41. ಕೊಂಕುೞೆಂದು, ಕಕ್ಷಮೂಲಂ.
42. ಖಿಱಿಲೆನೆ (or ಖಿಱಿಲನೆ), ಛಱಿಲೆನೆ, ಘಱಿಲೆನೆ, ಫಱಿಲೆನೆ, ಘುಱಿಮೆನೆ, ಘುೞುಮ್ಮನೆ, ಧೞಮ್ಮನೆ– ಇವು ಮೊದಲಾದ ಮಹಾಪ್ರಾಣಾನುಕರಣಂಗಳ್ ನಿಕ್ಕೞಿಂಗಳ್.
43. ಗಱಗಱನೆಯೆಂದು, ಬೇಗಂ.
44. ಗೞಪನೆಂದು, ಸೊರಹಂ.
45. ಗುೞಮೆಂದು, ಆನೆಕುದುರೆಗಳ ಪಕ್ಕರಕೆ.
46. "ಗುೞುಗುೞು ಗೞಗೞಯೆನುತಂ ಪರಿವ ಪರಿವೊನಲ್ ಸೊಗಯಿಸುಗುಂ."
ಇವು ಮೊದಲಾದುವಲ್ಪಪ್ರಾಣಾನುಕರಣಂಗಳ್; ೞೞನುಂ ಕುಳನುಂ ಅಪ್ಪುವು.
47. ಗೆೞಸೆಂದು, ಗೆಡ್ಡೆ.
48. ಗೋೞಿಟ್ಟಂ, ಗೋಱಿಟ್ಟಂ, ಗಱಗಱನೆ.
49. ಚಕ್ಕಱಿಯೆಂದು, ಒತ್ತಿ ಚಪ್ಪಟೆಯಾದುದು.
50. ಚಾೞೆಂದು, ರಾಹು.
51. ಜಗುೞ್ದನೆಂದು, ಜಾಱಿದಂ.
52. ಜಾಱಿಗೆಯೆಂದು, ಉಡುಗೆ.
53. ಜೀರ್ಕೊೞವಿಯೆಂದು, ಜಲಯಂತ್ರಂ.
54. ತಲ್ಲೞಮೆಂದು, ಭಯಂ.
55. ತೞತೞಗುದಿ, ತೞ್ತೞಗುದಿ ಎಂಬಿವು ಕಾಸುವ ರಸದ್ರವ್ಯಾನುಕರಣಂಗಳ್.
56. "ತೞತೞನೆ ನೇಸಮೂಡಿದುದು."
57. ತೞಲೆಂದು, ಮುತ್ತಕಾಯ್.
58. ತೞಿಯೆಂದು, ಸ್ಥೂಲದಾರುವಿನೊಳ್ ೞೞಂ. (ಸತ್ರಾರ್ಥದೊಳ್ ಕುಳಂ) "ತಳಿಯ ಕೂಱಿದಿರೊಳ್ ಪಣ್ತಾರವೆ."
59. ತೞೆಯೆಂದು, ಆತಪತ್ರದೊಳ್ ೞೞಂ. (ತಳೆಯೆಂಬ ಕ್ರಿಯೆಯೊಳಂ ಪಶುವಿನ ತಳೆಯೊಳಂ ಕುಳಂ.)
60. ತೞ್ಗಿದನೆಂದು, ಕುಸಿದಂ.
61. ತಿಪ್ಪುೞೆಂದು, ಪಕ್ಕಿಯ ಗಱಿ.
62. ತುಪ್ಪುೞೆಂದು, ಪಕ್ಕಿಯ ರೋಮಂ.
63. ತುೞುಕಲೆಂದು, ಸೊಪ್ಪಾದುದು.
64. ತೆಗೞ್ದನೆಂದು, ಪಱಿದಂ.
65. ತೇೞೆಂದು ವೃಶ್ಚಿಕಂ.
66. ತೊೞಲ್ದುದಾಗಿ, ತೊೞಕಲ್.
67. ತೊೞ್ತುಱಿಯೆಂದು, ಸೊಪ್ಪಾದುದು.
68. ದಂಡುಱಗನೆಂದು, ದಂಡದೊಳ್ ಪಡೆದವಂ.
69. ದೞದುೞಮೆಂದು, ಬಲ್ಪೂೞ್.
70. ದೞ್ಬುಱಿಯೆಂದು, ಸಂಕಲೆ.
71. ನೆಗೞೆಂದು, ನಕ್ರಂ.
72. ನೆಱಿಲೆನೆ, "ನೆೞ್ಕನೆಯೆ ಮುಱಿದುದು." ಇವುಂ ಅನುಕರಣಂಗಳ್.
73. ಪೞಗಮೆಂದು, ಒಣಗಿದೆಲೆ.
74. ಪೞದೆಂದು, ಜೀರ್ಣಂ.
75. ಪೞಪೞನೆ, ಪೞ್ಪೞನೆಯೆಂದು ವಿಂಲಾರ್ಥಂ.

76. ಪೞಪೆಂದು, ನರೆಗಿಕ್ಕುವ ಕರ್ಪು.
77. ಪೞಯಿಗೆಯೆಂದು, ಕೇತನಂ.
78. ಪೞುವೆಂದು, ಅಡವಿ.
79. ಪೞ್ಕಿ ತೞ್ಕೈಸಿದನಂ. ತಡಕೈಯಂ ಮಾಡಿದನೆಂಬರ್ಥಂ.
80. ಪೞ್ತಿಯೆಂದು, ಕಾರ್ಪಾಸಂ.
81. ಪಾೞಿಯೆಂದು, ಕ್ರಮಂ.
82. ಪಾೞೆಂದು, ಶೂನ್ಯಸ್ಥಾನಂ.
83. ಪುಚ್ಚೞಿಯೆಂದು, ಕೇಡು.
84. ಪುೞುವೆಂದು, ಕೀಟಂ.
85. ಪುೞ್ಗಿಯೆಂದು, ಉರ್ದು ತೊವರಿ ಹೆಸಱು ಮೊದಲಾದುವನಿಕ್ಕಿ ಅಟ್ಟ ಕೂೞ್.
86. ಪೆೞಕೆಂದು, ಜಗಳಂ.
87. ಪೆೞವನೆಂದು, ಕಾಲಿಲ್ಲದವಂ.
88. ಪೇೞ್ದನೆಂದು, ನಿರೂಪಿಸಿದಂ.
89. ಪೊಕ್ಕುೞೆಂದು, ನಾಭಿ.
90. ಪೊಗೞ್ತೆಯೆಂದು, ಕೀರ್ತನಂ.
91. ಪೊಂಪುೞಿಯೆಂದು, ಪೆರ್ಚುಗೆ.
92. ಪೊೞಕೆಂದು, ಸಾಮಾನ್ಯಾಕೃತಿ.
93. ಪೊೞವೆಂದು, ಪುರಂ.
94. ಪೊೞ್ತಡೆಯೆಂದು, ಉದಯಕಾಲಂ.
95. ಪೋೞಲೆಂದು, ಮರದ ಪೊಟ್ಟೆ.
96. ಪೋೞೆಂದು, ಸೀೞ್ದ ಭಾಗಂ.
97. ಬೞಿಯನೆಂದು, ವಿಧೇಯಂ.
98. ಬೞಿಯಂ, ಬೞಿಕಂ, ಬೞಿಕ್ಕಂ, ಬೞಿಕೆ, ಬೞಿಕ್ಕೆ ಎಂಬಿವು ಪಶ್ಚಾದರ್ಥಂಗಳ್.
99. ಬೞಿಲ್ದನೆಂದು, ಜಗುೞ್ದಂ.
100. ಬೞಿವೞಿಯೆಂದು, ಕೊಟ್ಟ ವಸ್ತುವಿನ ಬೞಿಯೊಳ್ ಕುಡುವುದು.
101. ಬಾಸುೞೆಂದು, ಪೊಯ್ದ ಬೞಿ.
102. ಬಾೞುಕಮೆಂದು, ಸೀೞ್ದುೞಗಿ ಬಾೞ್ದ ಶಾಕಂ.
103. ಬಾೞೆಂದು, ಜೀವನಾರ್ಥದೊಳ್ ೞಂ (ನಾವಿದವಾಳ್, ಕೂರ್ವಾಳ್, ಹರಗುವಾಳ್, ಎಂಬಲ್ಲಿ ಕುಳಂ.)
104. ಬೇೞ್ತೆಯೆಂದು, ಪ್ರಯೋಜನಂ.
105. ಬಿೞಲೆಂದು, ಮರದ ಜಿಡೆ.
106. ಬಿೞ್ಕಿಯೆಂದು, ಒಂದು ಮರಂ.
107. ಬೆಂಬೞಿಯೆಂದು, ಪಿಂದೆ ಬರ್ಪುದು.
108. ಬೆೞಲೆಂದು, ಒಂದು ಮರಂ.
109. ಬೋೞತರಮೆಂದು, ಮುಂಡಿ.
110. ಬೊೞೆಂದು, ಚಾಪಂ.
111. ಬೋೞಿಯೆಂದು, ಒಂದೆಂಬಿನ ಭೇದಂ.
112. ಮಣ್ಮೞಿಯೆಂದು, ರೂಪೞಿದ ಸಾವು.
113. ಮೞಿಲ್ದುದು ಮೞಮೞಿಸಿತ್ತೆಂಬ ಎರಡುಂ ಕಣ್ಮಡಿದ ಭಾವಂ.
114. ಮೞೆಯೆಂದು, ವೃಷ್ಟಿ.
115. ಮೞ್ತಿಯೆಂದು, ಒಂದು ಮರಂ.
116. ಮುೞ್ತುಗಮೆಂದು, ಒಂದು ಮರಂ.
117. ಮೊೞಕಾಲೆಂದು, ಒಳ್ದೊಡೆಯ ಸಂದು.
118. ಮೊೞನೆಂದು, ಅರತ್ನಿ.
119. ಮೊೞಗೆಂದು, ವಾದ್ಯಂ.
120. ಸುೞಿಯೆಂದು, ಜಲಾವರ್ತಂ.
121. ಸೂೞಾಯ್ತನೆಂದು, ಸೂಗ್ರೀವಂ.
122. ಸೂೞೆಂದು ಬಾರಿ.
123. ಹೞ್ಗಿಯೆಂದು, ದೂವೆಯೊಳ್ ತೞಲಂ ಪೂಡ್ದ ಕ್ರಿಯೆ.
124. ಹಾೞ್ಕನೆ ಹಾೞನೆಂದು, ತುಡುಗುಣಿ ನಾಯ್.
125. ಹಿೞಿದುದೆಂದು, ರಸಮಂ ಹಿಂಡುವಲ್ಲಿ ೞಂ. (ಬಿರಿದುದೆಂಬಲ್ಲಿ ಕುಳಂ).

ಎರಡರ್ಥಕ್ಕೆ—

126. ಅಗ್ಗಱಿಕೆಯೆಂದು, ಲಾಳವಿಂಡಿಗೆಯುಂ ಆವುಜದ ಮುಟ್ಟುಮುಮಕ್ಕುಂ.

127. ಅಱಪನೆಂದು, ಅಱಪುವನುಂ ಅಱಪಿದವನುಮಕ್ಕುಂ.

128. ಅಱೆಯೆಂದು, ಬಳ್ಳದಱೊಳಂ ವಿಧಿಕ್ರಿಯೆಯೊಳಂ ಱಿಂ; (ತುಂಬಿಯ ಪೇೞ್ವಲ್ಲಿ ಕ್ಷಳಂ).

129. ಅೞ್ದನೆಂದು, ನೀರೊಳ್ ಮುೞುಂಗಿದನುಂ ಕೆಟ್ಟನುಮಕ್ಕುಂ.

130. ಅೞ್ದಿದನೆಂದು, ಸತ್ತನುಂ ಸೊಪ್ಪಾದನುಮಕ್ಕುಂ.

131. ಆಱೆಯೆಂದು, ವಂಚನೆಯುಂ ಏಕಾಗ್ರಚಿತ್ತಮುಮಕ್ಕುಂ; (ಸಂಸ್ಕೃತದೊಳ್ ಸಖಿಯುಂ ಸಾಲುಂ ಬರ್ಪೆಡೆ, ಅದು ಕ್ಷಳಂ).

132. ಇಕ್ಕಱೆಂದು, ವ್ಯಾಧಿವಿಕಾರಮುಂ ಸಂದಂಶಮುಮಕ್ಕುಂ.

133. ಇಱದನೆಂದು, ಮೈಗುಂದಿದನುಂ ಕೆಳಗಣ್ಗೆವಂದನುಮಕ್ಕುಂ.

134. ಎೞಲ್ದನೆಂದು, ಜೋಲ್ದನುಂ ಬೞಲ್ದನುಮಕ್ಕುಂ.

135. ಎಱೆಯೆಂದು, ನೂಲೆಱೆಯೊಳಂ ಬರಸೆಳೆವುದಱೊಳಂ ಱಿಂ. (ಭೂಮ್ಯರ್ಥದೊಳ್ ಕುಳಂ.)

136. ಎೞ್ದನೆಂದು, ನೆಗೆದನುಂ ನಿದ್ರೆ ತಿಳಿದನುಮಕ್ಕುಂ.

137. ಎೞ್ಪಿಸಿದನೆಂದು, ನಿದ್ರೆತಿಳಿಯಿಸಿದನುಂ ಎತ್ತಿಕಳೆದನುಮಕ್ಕುಂ.

138. ಕೞಲೆಂದು, ಮಜ್ಜಿಗೆಯುಂ ಅಂದುಗೆಯುಮಕ್ಕುಂ.

139. ಕೞಲ್ದನೆಂದು, ಬಡವಾದನುಂ ಮನಮಿಕ್ಕನುಮಕ್ಕುಂ.

140. ಕೊತ್ತಱಿಯೆಂದು, ಕಾಗೆಯ ಮೊತ್ತಮುಂ ಬೆಸದವರ ನೆರವಿಯುಮಕ್ಕುಂ.

141. ಗಱಯಿಸಿದನೆಂದು, ದೊರೆಕೊಳಿಸಿದನುಂ ದೊರೆಕೊಂಡನುಮಕ್ಕುಂ.

142. ಗಱೆಯೆಂದು, ಕಡೆಗೋಲುಂ ಕೋಲ್ಲಟಿಗರಾಡುವುದುಮಕ್ಕುಂ.

143. ತುಱದನೆಂದು, ಬಡವಾದನುಂ ಅಗಲ್ದನುಮಕ್ಕುಂ.

144. ತುಱದನೆಂದು, ಕಾಲೊಳ್ ಮರ್ದಿಸಿದನುಂ ಘಾಸಿಮಾಡಿದನುಮಕ್ಕುಂ.

145. ತುಱಲೆಂದು, ಪೊಡವಡಿಕೆಯುಂ ವೀರಮುಮಕ್ಕುಂ.

146. ತುಱಲ್ಸಂದನೆಂದು, ವೀರನುಂ ಪಂಚಮನಕ್ಕುಂ.

147. ತೊೞಲ್ದನೆಂದು, ಭ್ರಮೆಗೊಂಡನುಂ ಗರವಟ್ಟಿಗೆವಂದನುಮಕ್ಕುಂ.

148. ತೊೞ್ತೆಂದು, ದಾಸನುಂ ದಾಸಿಯುಮಕ್ಕುಂ.

149. ದೞಮೆಂದು, ಚತುರಂಗಬಲಮುಂ ಸಾಮಾನ್ಯಬಲಮುಮಕ್ಕುಂ.

150. ನಾೞಮೆಂದು, ತುಂಬಿನೊಳಂ ಕೞ್ಪಿನೊಳಂ (?) ಱಿಂ "ನಾೞವಾಸಗೆ, ಕಳ್ಳವಾಸಗೆ" (ನಾಳಂ ಸಂಸ್ಕೃತದೊಳ್ ಕ್ಷಳಂ).

151. ನೆಗೞ್ತೆಯೆಂದು, ಪ್ರಸಿದ್ಧಿಯುಂ ಚರಿತ್ರಮುಮಕ್ಕುಂ.

152. ನೆೞಲೆಂದು, ಆತಪತ್ರಾದಿಛಾಯೆಯುಂ ಜಳದರ್ಪಣಪ್ರತಿಬಿಂಬಮುಮಕ್ಕುಂ.

153. ಪೞಹಮೆಂದು, ಬೇಂಟೆಯ ತೆರೆಯುಂ ವಾದ್ಯವಿಶೇಷಮುಮಕ್ಕುಂ.

154. ಪಱ್ಕೆಯೆಂದು, ಶಯನಮುಂ ಶಯನಸ್ಥಾನಮುಮಕ್ಕುಂ.

155. ಪೊೞೆಯೆಂದು, ಬಟ್ಟೆಯುಂ ತೊೞೆಯುಮಕ್ಕುಂ.

156. ಬೞ್ದನೆಂದು, ಜೀವಿಸಿದನುಂ ಒಕ್ಕಲಾದನುಮಕ್ಕುಂ.

157. ಬೞ್ದುಂಕಿದನೆಂದು, ಜೀವಿಸಿದನುಂ ಬಿಡಲ್ಪಟ್ಟನುಮಕ್ಕುಂ; "ಪುಲಿಯ ಬಾಯಿಂ ಬೞ್ದುಂಕಿದಂ" ಎಂಬಂತೆ.

158. ಬೀೞೆಂದು, ಮಾಡದ ಕೈಯುಂ ಪತನಕ್ರಿಯೆಯುಮಕ್ಕುಂ.

159. ಮಲ್ಲೞಿಯೆಂದು, ಶರೀರವ್ಯಾಕುಲತೆಯುಂ ಸುತ್ತಿಬರ್ಪುದುಮಕ್ಕುಂ.

160. ಮುೞ್ಗಿದನೆಂದು, ಬಿದ್ದನುಂ ಪೊಡವಟ್ಟನುಮಕ್ಕುಂ.

161. ಮೂೞಿಯೆಂದು, ಕಿವಿಯಿಲ್ಲದವಳುಂ ಕರಗದ ಜೂಳಿಯುಮಕ್ಕುಂ.

162. ಸುೞಿದನೆಂದು, ಸಂಚಲಿಸಿದನುಂ ಬಟ್ಟನೆ ವಂದನುಮಕ್ಕುಂ.

ಮೂಱರ್ಥಕ್ಕೆ—

163. ಅೞಿದನೆಂದು, ಸತ್ತನುಂ ಕೆಟ್ಟನುಂ ಕೆಡಿಸಿದನುಮಕ್ಕುಂ.

164. ಎೞ್ಚತ್ತನೆಂದು, ನಿದ್ರೆ ತಿಳಿದನುಂ ಕತ್ತನೋಸರಿಸಿದನುಂ ಮಱವೆ ಪಿಂಗಿದನುಮಕ್ಕುಂ.

165. ಎೞ್ತೆಂದು, ಗೂಳಿಯುಂ ಅನಡುಹುಂ ಹೊರಸಿನ ನೆಯ್ಗೆಯ ಊಕೆಯ ನುಲಿಯುಮಕ್ಕುಂ.

166. ಎೞ್ದನೆಂದು, ನೆಗೆದನುಂ ನಿದ್ರೆ ತಿಳಿದನುಂ ದೊರೆಕೊಂಡನುಮಕ್ಕುಂ.

167. ಕೞಲೆಂದು, ಪಿಂತೆ ಪೇೞ್ದುದಲ್ಲದೆ (No. 138) ತನುತ್ವಮುಮಕ್ಕುಂ.

168. ಕೞಿದನೆಂದು, ಸತ್ತನುಂ ದೂರಂಬೋದನುಂ ಕೈಮೀಱಿದನುಮಕ್ಕುಂ.

169. ಕೊೞೆತುದೆಂದು, ಜೀರ್ಣಿಸಿದುದುಂ ಅಳವೞಿಸಿ ಮಲವೇಱಿದುದುಂ ಮನವಿಕ್ಕಿದುದುಮಕ್ಕುಂ.

170. ತಾೞೆಂದು, ಒಂದು ಮರನುಂ ಅಗುೞಿಯುಂ ಸೂರಣದ ದಂಟುಮಕ್ಕುಂ.

171. ನೆೞಲೆಂದು, ಪಿಂತೆ ಪೇೞ್ದುದಲ್ಲದೆ (No. 152) ಒಂದು ಮರನುಮಕ್ಕುಂ.

172. ಪೊೞ್ತೆಂದು, ಸಾಮಾನ್ಯಕಾಲಮುಂ ಪ್ರಸವಕಾಲಮುಂ ನೇಸಱುಮಕ್ಕುಂ.

173. ಬಿೞ್ದುದೆಂದು, ಪಱಿಸಿದುದುಂ ಸತ್ತುದುಂ ಕೈಜೋಲ್ದುದುಮಕ್ಕುಂ.

174. ಬೋೞವೆಂದು, ಮಿೞ್ತುವುಂ ಮುಂಡಮುಂ ಮುಂಡವೆಂದೊಂದೌಷಧಿಯುಮಕ್ಕುಂ.

175. ಮೊೞಗೆಂದು, ಮುಗಿಲದನಿಯುಂ ಒಂದು ಮರದ ಪೆಸಱುಂ ವಾದನವಿಧಿಯುಮಕ್ಕುಂ.

176. ಸುೞಿಯೆಂದು, ಕೆಲಸಗಳ್ಳನುಂ ಸಸಿಯ ಸುೞಿಯುಂ ಸುೞಿವ ಭಾವಮುಮಕ್ಕುಂ. (ಸುಳಿಯೊಂದೀಶ್ವರನ ಪೆಸರೊಳ್ ಕ್ಷಳಂ.)

ನಾಲ್ಕರ್ಥಕ್ಕೆ—

177. ಉೞಿದುದೆಂದು, ಬಿಟ್ಟುದುಂ ಜೀವಿಸಿದುದುಂ ಲಾಭವಾದುದುಮಕ್ಕುಂ—ಇವಱೊಳ್ ೞಂ. ಅಡಂಗಿದುದಱೊಳಂ ಬಡಿಗೆಯ ಕಳ್ಳನ ಬೇಂಟೆಯ ಉಳಿಯೊಳಂ ಕುಳಂ. ಸ್ಥಾನವ್ಯಕ್ತಿಯಂ ಪೇೞ್ವೊಡೆ ಉೞ್. ಪೆಱವುೞಿಯೆಂಬವ್ಯಯಂ ೞಂ.

178. ಕೀೞೆಂದು, ದೊರೆಯಿಲ್ಲದ ಭಂಗಾರಮುಂ ತುರಗಮುಖದ ಲೋಹಮುಂ ಕ್ಷೀಣಕುಲನುಂ ಕೆಳಗುಮಕ್ಕುಂ.

179. ಪೞಿಯೆಂದು, ವಸ್ತ್ರವಿಶೇಷಮುಂ ದೂಷಣಮುಂ ನಾಯುಂ ಸೋವುವುದುಂ ಲೋಹದ ಘಟ್ಟಿಯುಮಕ್ಕುಂ.

180. ಸುೞಿಯೆಂದು, ಕೆಲಸಗಳ್ಗಂ ಮೊದಲಾದುದಲ್ಲದೆ (No. 176) ಜಲಾವರ್ತಮುಮಕ್ಕುಂ.

ಐದರ್ಥಕ್ಕೆ —

181. ಬೞಿಯೆಂದು, ಬಟ್ಟೆಯುಂ ವಂಶಮುಂ ಕರೆವನುಂ ಲೇಪಿಸುವುದುಂ ಪಿಂಗಲಿಯ ಬೞಿಗೊರಲುಮಕ್ಕುಂ. ಮತ್ತಂ ಬ ಪೂರಕದ ಬೞಿ ಅವ್ಯಯವಾಗಿ ಬೞಿಂ

ಇವು ಪ್ರಯೋಗದೃಷ್ಟಂಗಳಿವಱೊಳ್ ಸಂಶಯಮಿಲ್ಲ.

ಸೂತ್ರಂ. || ೨೪ ||

In Alliteration double consonants with ರ್ (ಱ) harmonize with ೞ್ when forming a part of a double consonant.

ಪಿರಿಯರ್ ಸಲಿಪರ್ ದಡ್ಡ- |
ಕ್ಕರದ ಱಳಕ್ಕೈದೆ ರೇಫೆವೆರಸಿದ ದಡ್ಡ- ||
ಕ್ಕರಮಂ ಱಳನಾಗದನು- |
ಚ್ಚರಿಸಲ್ಕಾಗಿರ್ದ ತೆಱದಿನಂತದು ಶುದ್ಧಂ. || ೩೪ ||

ಪದಚ್ಛೇದಂ. — ಪಿರಿಯರ್ ಸಲಿಪರ್ ದಡ್ಡಕ್ಕರದ ಱಳಕ್ಕೆ ಐದೆ ರೇಫೆವೆರಸಿದ ದಡ್ಡಕ್ಕರಮಂ, ಱಳಂ ಆಗಿ; ಅದಂ ಉಚ್ಚರಿಸಲ್ಕೆ ಆಗಿರ್ದ ತೆಱದಿಂ ಅಂತು ಅದು ಶುದ್ಧಂ.

ಅನ್ವಯಂ. — ಪಿರಿಯರ್ ದಡ್ಡಕ್ಕರದ ಱಳಕ್ಕೆ ಐದೆ ರೇಫೆವೆರಸಿದ ದಡ್ಡಕ್ಕರಮಂ ಸಲಿಪರ್, ಱಳನಾಗಿ; ಅದಂ ಉಚ್ಚರಿಸಲ್ಕೆ ಆಗಿರ್ದ ತೆಱದಿಂ ಅಂತು ಅದು ಶುದ್ಧಂ.

ಟೀಕು. — ಪಿರಿಯರ್ = ಶ್ರೇಷ್ಠರಾದ ವಿದ್ವಾಂಸರ್; ದಡ್ಡಕ್ಕರದ = ಒತ್ತಿನಕ್ಷರದ; ಱಳಕ್ಕೆ = ಱಳಪ್ರಾಸಕ್ಕೆ; ಎಯ್ದೆ = ಚೆನ್ನಾಗಿ; ರೇಫೆವೆರಸಿದ ದಡ್ಡಕ್ಕರಮಂ = ರೇಫೆಯೊಡನೆ ಕೂಡಿದ ದ್ವಿತ್ವಾಕ್ಷರಮಂ; ಸಲಿಪರ್ = ಪ್ರಾಸಕ್ಕೆ ಸಲಿಸುವರ್; ಱಳನಾಗಿ = ಱಳಪ್ರಾಸವಾಗಿ; ಅದಂ = ಆ ರೇಫೆವೆರಸಿದ ದ್ವಿತ್ವಾಕ್ಷರಮಂ; ಉಚ್ಚರಿಸಲ್ಕೆ = ಓದುವುದಕ್ಕೆ; ಆಗಿರ್ದ ತೆಱದಿಂ = ಸಲುವಳಿಯಾಗಿರ್ದ ರೀತಿಯಿಂದೆ; ಅಂತು = ಹಾಗೆ; ಅದು = ಅದು ತಾಂ; ಶುದ್ಧಂ = ಶುದ್ಧವಪ್ಪುದು.

ವೃತ್ತಿ. — ದಡ್ಡಕ್ಕರದ ಱಳಕ್ಕೆ ಪ್ರತಿಯಾಗಿ ರೇಫೆವೆರಸಿದ ದಡ್ಡಕ್ಕರಮಂ ಪ್ರಾಸಕ್ಕೆ ಪಿರಿಯರ್ ಪೇೞ್ದ ಪ್ರಯೋಗಮೊಳವು; ಆ ದಡ್ಡಕ್ಕರದ ರೇಫಮಂ ಱಳನಾಗುಚ್ಚರಿಸಲಾಗಿರ್ದ ನಿಸರ್ಗದಿನದು ಶುದ್ಧಂ.

ಉದಾ.

ಪ್ರಯೋಗಂ. — "ಬೞ್ದುದು ಬಳ್ಳವಾಡಿ ನೆಱೆ ನಂ- |
ಬಿರ್ದ್ದುದಾರುಹತಂ ಜಿನೇಂದ್ರನಂ- |
ತಿರ್ದ್ದ ಮಹಾನುಭಾವರ್. . . . ." || 25 ||

"ಚುರ್ಚ್ಚಿದ ವೋಲ್ ಬಿಸಿಲಳುರೆ ಕಿ- |
ಮುಱ್ಱಿದ ತಳಿರಂತೆ ನೊಂದು, ಗುಣನಂದಿ . . . . . ." || 26 ||

"ಒರ್ಕ್ಕುಡಿತೆ ನೀರ್ಗೆ ಪಱಿ ಪ- |
ಟ್ಟಿರ್ಕ್ಕೆಯ ಪಣ್ಣೆಲೆಯ ಮುಱಿಗೆ ದೇಸಿಗರಂ ದೇ- ||
ವರ್ಕ್ಕಳ್ಗೊಡೆಯರ ಮಾಱ್ಪಿರೆ- |
ನೀಱ್ಕಿರಿಸದೆ ನಿಮ್ಮ ದೊರೆಗೆ ಬೋಳೆಯರೊಳರೇ" || 27 ||

ಸೂತ್ರಂ. || ೨೫ ||

Words in which ಳ is preferred to ೞ.

ಝುಳಕಂ ಝುಳಪಿಸಿದಂ ಜೊಂ- |
ಗುಳಿ ಬೊಂಬುಳಿಯಾಳವಾಳಮಂತೆ ತಮಾಳಂ ||
ವಳಿಗೆ ನೆಗೞ್ದೊಂದುಳಿ ಜಂ- |
ಗುಳಿ ಪುತ್ತಳಿ ಗೋಳಿ ಫೇಳಿ ಳೞಿಸಂದೇಹಂ || ೨೫ ||

ಪದಚ್ಛೇದಂ. — ಝುಳಕಂ ಝುಳಪಿಸಿದಂ ಜೊಂಗುಳಿ ಬೊಂಬುಳಿ ಆಳವಾಳಂ, ಅಂತೆ ತಮಾಳಂ ವಳಿಗೆ ನೆಗೞ್ದ ಒಂದುಳಿ ಜಂಗುಳಿ ಪುತ್ತಳಿ ಗೋಳಿ ಫೇಳಿ ಳೞಿಸಂದೇಹಂ.

ಟೀಕು, ಯಥಾನ್ವಯಂ. — ಝುಳಕಂ = ಝುಳಕವೆಂಬ ಶಬ್ದಂ; ಝುಳಪಿಸಿದಂ = ಝುಳಪಿಸಿದನೆಂಬ ಶಬ್ದಂ; ಜೊಂಗುಳಿ = ಜೊಂಗುಳಿಯೆಂಬ ಶಬ್ದಂ; ಬೊಂಬುಳಿ = ಬೊಂಬುಳಿಯೆಂಬ ಶಬ್ದಂ; ಆಳವಾಳಂ = ಆಳವಾಳವೆಂಬ ಶಬ್ದಂ: ಅಂತೆ=ಹಾಗೆ; ತಮಾಳಂ=ತಮಾಳವೆಂಬ ಶಬ್ದಂ; ವಳಿಗೆ = ವಳಿಗೆಯೆಂಬ ಶಬ್ದಂ; ನೆಗೞ್ದ = ಪ್ರಸಿದ್ಧಿವಡೆದ; ಒಂದುಳಿ = ಒಂದುಳಿಯೆಂಬ ಶಬ್ದಂ; ಜಂಗುಳಿ=ಜಂಗುಳಿಯೆಂಬ ಶಬ್ದಂ; ಪುತ್ತಳಿ=ಪುತ್ತಳಿಯೆಂಬ ಶಬ್ದಂ; ಗೋಳಿ = ಗೋಳಿಯೆಂಬ ಶಬ್ದಂ; ಫೇಳಿ = ಫೇಳಿಯೆಂಬ ಶಬ್ದಂ; ಳೞಿಸಂದೇಹಂ=ಳೞಿಕ್ಕೆ ಸಂದೇಹಂ, ಕುಳವೆ ಅಪ್ಪುವೆಂಬುದರ್ಥಂ.

ವೃತ್ತಿ. — ಈ ಪೇೞ್ದ ಶಬ್ದಂಗಳ್ ಳೞಿಕ್ಕೆ ಸಂದೇಹಂಗಳಿವಂ ಪ್ರಯೋಗಮಂ ಕಂಡು ಪೇೞ್ವುದು.

Kannada words in which ೞ is required.

ಸೂತ್ರಂ. || ೨೬ ||

ಇೞಿದೞಿಯನೇೞಿದಂ ಸೂ- |
ಕುೞಿಯೋಕುೞಿ ಕೞಱು ಪೆೞಱು ಮಱುಕುೞಿಯೞಿಯಂ ||
ಕುೞಿಯಂ ಮೂೞಿಗೆ ಜಾೞಿಗೆ |
ತೞಿಗೆಯೊೞರ್ಬೞಸು ಬೞಸಿಗಂ ಮೊೞೆ ತಾೞಂ || ೩೬ ||

ಸೂತ್ರಂ. || ೨೭ ||

ಅೞಿಸಿದಂ ಪೇೞಿಸಿದಂ |
ಕೇೞಂ ಜೂದಾೞಿಯೞಿಲೆ ಕೞವೞಮಾ ಮೆ- ||
ಯ್ಮೇೞಂ ಮೂೞಂ ತಾೞಿಗೆ |
ಯೀೞಿಗೆಯಿಱುಕುೞಿಯಿವಾದಿಯಾಗಱಿ ಕುೞನಂ ||೩೭||

ಪದಚ್ಛೇದಂ.— ಇೞಿದೞಿಯಂ, ಏೞಿದಂ, ಸೂಕುೞಿ, ಓಕುೞಿ, ಕೞಱು, ಪೆೞಱು, ಮಱು ಕುೞಿ, ಆೞಿಯಂ, ಕುೞಿಯಂ, ಮೂೞಿಗೆ, ಜಾೞಿಗೆ, ತೞಿಗೆಯೊೞರ್, ಬೞಸು, ಬೞಸಿಗಂ, ಮೊೞೆ, ತಾೞಂ, ಅೞಿಸಿದಂ, ಪೇೞಿಸಿದಂ, ಕೇೞಂ, ಜೂದಾೞಿ, ಅೞಿಲೆ, ಕೞವೞಂ, ಆ ಮೆಯ್ಮೇೞಂ, ಮೂೞಂ, ತಾೞಿಗೆ, ಈೞಿಗೆ, ಇಱುಕುೞಿ, ಇವು ಆದಿ ಆಗಿ ಅಱಿ ಕುೞನಂ!

ಅನ್ವಯಂ.— ಇವಾದಿಯಾಗಿ ಕುೞನಂ ಅಱಿ! ಉೞಿದುದು ಯಥಾನ್ವಯಂ.

ಟೀಕು.— ಇೞಿದೞಿಯಂ = ಇೞಿದೞಿಯನೆಂದು; ಏೞಿದಂ = ಏೞಿದನೆಂದು; ಸೂಕುೞಿ = ಸೂಕುೞಿಯೆಂದು; ಓಕುೞಿ = ಓಕುೞಿಯೆಂದು; ಕೞಱು = ಕೞಱೆಂದು; ಪೆೞಱು = ಪೆೞಱೆಂದು; ಮಱುಕುೞಿ = ಮಱುಕುೞಿಯೆಂದು; ಅೞಿಯಂ = ಅೞಿಯನೆಂದು; ಕುೞಿಯಂ = ಕುೞಿಯನೆಂದು; ಮೂೞಿಗೆ = ಮೂೞಿಗೆಯೆಂದು; ಜಾೞಿಗೆ = ಜಾೞಿಗೆಯೆಂದು; ತೞಿಗೆಯೊೞರ್ = ತೞಿಗೆಯೊೞರೆಂದು; ಬೞಸು = ಬೞಸೆಂದು, ಬೞಸಿಗಂ = ಬೞಸಿಗನೆಂದು; ಮೊೞೆ = ಮೊೞೆಯೆಂದು; ತಾೞಂ = ತಾೞಮೆಂದು; ಅೞಿಸಿದಂ = ಅೞಿಸಿದನೆಂದು; ಪೇೞಿಸಿದಂ = ಪೇೞಿಸಿದನೆಂದು; ಕೇೞಂ = ಕೇೞನೆಂದು; ಜೂದಾೞಿ = ಜೂದಾೞಿಯೆಂದು; ಅೞಿಲೆ = ಅೞಿಲೆಯೆಂದು; ಕೞವೞಂ = ಕೞವೞಮೆಂದು; ಆ ಮೆಯ್ಮೇೞಂ = ಆ ಮೆಯ್ಮೇೞಮೆಂದು; ಮೂೞಂ = ಮೂೞಮೆಂದು; ತಾೞಿಗೆ = ತಾೞಿಗೆಯೆಂದು; ಈೞಿಗೆ = ಈೞಿಗೆಯೆಂದು; ಇಱುಕುೞಿ = ಇಱುಕುೞಿಯೆಂದು; ಇವಾದಿಯಾಗಿ = ಇವು ಮೊದಲಾಗಿ; ಕುೞನಂ = ಕುೞಳಕಾರವಂ; ಅಱಿ = ತಿಳಿ.

ವೃತ್ತಿ.— ಈ ಪೇೞ್ದ ಶಬ್ದಂಗಳ್ ಕುೞಂಗಳ್.

ಸೂತ್ರಂ. || ೨೮ ||

Kannada words in which ಳ is wrongly used for ಲ.

ಬೆರಲೆರಲೊರಲ್ ಕೊರಲ್ ಸರ- |
ಲರಲ್ ಪರಲ್ ಮರಲುಮಂತೆ ನರಲುಂ ಮುಂಗೈ- ||
ಸರಲುಂ ಲಾಂತಮಿವಂ ಗ್ರಾ- |
ಮ್ಯರಱಿಯದುಚ್ಚರಿಸುವರ್ ಕುಳಾಂತಭ್ರಮೆಯಿಂ || ೩೮ ||

ಪದಚ್ಛೇದಂ.— ಬೆರಲ್ ಎರಲ್ ಒರಲ್ ಕೊರಲ್ ಸರಲ್ ಅರಲ್ ಪರಲ್ ಮರಲುಂ, ಅಂತೆ ನರಲುಂ ಮುಂಗೈಸರಲುಂ ಲಾಂತಂ; ಇವಂ ಗ್ರಾಮ್ಯರ್, ಅಱಿಯದೆ, ಉಚ್ಚರಿಸುವರ್ ಕುಳಾಂತಭ್ರಮೆಯಿಂ.

ಅನ್ವಯಂ.— ಇವಂ ಗ್ರಾಮ್ಯರ್, ಅಱಿಯದೆ, ಕುಳಾಂತಭ್ರಮೆಯಿಂ ಉಚ್ಚರಿಸುವರ್.

ಟೀಕು.— ಬೆರಲ್ = ಬೆರಲೆಂಬ ಶಬ್ದಂ; ಎರಲ್ = ಎರಲೆಂಬ ಶಬ್ದಂ; ಒರಲ್ = ಒರಲೆಂಬ ಶಬ್ದಂ; ಕೊರಲ್ = ಕೊರಲೆಂಬ ಶಬ್ದಂ; ಸರಲ್ = ಸರಲೆಂಬ ಶಬ್ದಂ; ಅರಲ್ = ಅರಲೆಂಬ ಶಬ್ದಂ; ಪರಲ್ = ಪರಲೆಂಬ ಶಬ್ದಂ; ಮರಲುಂ = ಮರಲೆಂಬ ಶಬ್ದಮುಂ; ಅಂತೆ = ಹಾಂಗೆ; ನರಲುಂ = ನರಲೆಂಬ ಶಬ್ದಮುಂ; ಮುಂಗೈಸರಲುಂ = ಮುಂಗೈಸರಲೆಂಬ ಶಬ್ದಮುಂ; ಲಾಂತಂ = ಲಕಾರಾಂತಂ; ಇವಂ = ಈ ಲಕಾರಾಂತಶಬ್ದಂಗಳಂ; ಗ್ರಾಮ್ಯರ್ = ಮೂಢರ್; ಅಱಿಯದೆ = ತಿಳಿಯದೆ; ಕುಳಾಂತಭ್ರಮೆಯಿಂ = ಕುಳಾಂತಭ್ರಮೆಯಿಂದೆ; ಉಚ್ಚರಿಸುವರ್ = ಓದುವರ್.

ವೃತ್ತಿ.— ಬೆರಲ್ ಮೊದಲಾದ ಈ ಶಬ್ದಂಗಳ್ ನಿತ್ಯವಾಗಿ ಲಾಂತಂಗಳ್; ಇವಂ ಬೆರಳು ಕೊರಳು ಎಂಬಂತೆ ಕುಳನಾಗುಚ್ಚರಿಸಬಾರದು.

ಸೂತ್ರಂ. || ೨೯ ||

Transposition and interchange of ಲ and ರ and change of ರ (ಲ) into ಱ in some Kannada words.

ಮರಲರಲೆರಲೆಂಬಿವಱಿಂ |
ತರಾಳರೇಫಕ್ಕೆ ಲತ್ವಮುಂ ದೊರೆಕೊಳ್ಗುಂ ||
ಪಿರಿದುಂ ಮಲರಲರೆಲರೆಂ- |
ದೊರೆವುದು ಕೃತಿಯೊಳ್ ವಿಕಲ್ಪವಿಧಿಯಿಂದಮಿವಂ || ೩೯ ||

ಪದಚ್ಛೇದಂ.— ಮರಲ್ ಅರಲ್ ಎರಲ್ ಎಂಬಿವಱ ಅಂತರಾಳರೇಫಕ್ಕೆ ಲತ್ವಮುಂ ದೊರೆಕೊಳ್ಗುಂ; ಪಿರಿದುಂ, ಮಲರ್ ಅಲರ್ ಎಲರ್ ಎಂದು, ಒರೆವುದು ಕೃತಿಯೊಳ್ ವಿಕಲ್ಪವಿಧಿಯಿಂದಂ ಇವಂ.

ಅನ್ವಯಂ.— ಮರಲ್ ಅರಲ್ ಎರಲ್ ಎಂಬಿವಱ ಅಂತರಾಳರೇಫಕ್ಕೆ ಲತ್ವಮುಂ ದೊರೆಕೊಳ್ಗುಂ; ಪಿರಿದುಂ ಕೃತಿಯೊಳ್ ಇವಂ, ಮಲರ್ ಅಲರ್ ಎಲರ್ ಎಂದು, ವಿಕಲ್ಪವಿಧಿಯಿಂದಂ ಒರೆವುದು.

ಟೀಕು.— ಮರಲ್ = ಮರಲೆಂದು; ಅರಲ್ = ಅರಲೆಂದು; ಎರಲ್ = ಎರಲೆಂದು; ಎಂಬಿವಱ = ಎಂಬೀ ಮೂಱು ಶಬ್ದಂಗಳ; ಅಂತರಾಳ = ನಡುವಣ; ರೇಫಕ್ಕೆ = ರೇಫೆಗೆ; ಲತ್ವಮುಂ = ಲಕಾರವುಂ; ದೊರೆಕೊಳ್ಗುಂ = ಪ್ರಾಪ್ತಿಸುವುದು, ಉಂ ಎಂಬ ಸಮುಚ್ಚಯದಿಂದೆ ಅಂತ್ಯದ ಲತ್ವಕ್ಕೆ ರೇಫೆಯುಂ ದೊರೆಕೊಳ್ವುದು; ಪಿರಿದುಂ = ಬಹುಳವಾಗಿಯುಂ; ಕೃತಿಯೊಳ್ = ಕಾವ್ಯದಲ್ಲಿ; ಇವಂ = ಈ ಮೂಱು ಶಬ್ದಂಗಳಂ; ಮಲರ್ = ಮಲರೆಂದು; ಅಲರ್ = ಅಲರೆಂದು; ಎಲರ್ = ಎಲರೆಂದು; ವಿಕಲ್ಪವಿಧಿಯಿಂದಂ = ವಿಕಲ್ಪವಿಧಾನದಿಂದಂ; ಒರೆವುದು = ಪೇೞ್ವುದು.

ವಿಚಾರಂ.— ವಿಕಲ್ಪಮೆಂದೊಡೆ ಎರಡು ತೆಱನುಂಟೆಂಬರ್ಥಂ. ಪಿರಿದುಮೆಂಬ ಬಹುಳಗ್ರಹಣದಿಂ ಮರಲೆಂಬುದಱ ರೇಫೆಗೆ ಣತ್ವಮುಮಾಗಿ, ಮಣಲೆಂದುಮುಂಟು.

ವೃತ್ತಿ.— ಮರಲ್ ಅರಲ್ ಎರಲ್ ಎಂಬಿವಱ ಮಧ್ಯರೇಫೆಗೆ ಲತ್ವಮುಂ ಸಮುಚ್ಚಯವಶದಿಂದಂತ್ಯ ಲತ್ವಕ್ಕೆ ರೇಫಮುಮಾಗಿ, ಮಲರ್ ಅಲರ್ ಎಲರ್ ಎಂದು, ವಿಕಲ್ಪದಿನಕ್ಕುಂ; ಪಿರಿದೆಂಬುದಱಿಂ ಮರಲೆಂಬುದಱ ರೇಫೆಗೆ ಣತ್ವಮುಮಾಗಿ, ಮಣಲೆಂದುಮುಂಟು.

ಇದು ಱ ೞ ಳಂಗಳ ಸಮಾಪ್ತಿ.

5. Words construed by the letters, and peculiarities of some letters.

ಸೂತ್ರಂ. || ೩೦ ||

The eight places where (the sounds of) the letters originate, are enumerated.

ಕೊರಲುಂ ಜಿಹ್ವಾಮೂಲಮು- |
ಮುರಮುಂ ತಾಲುಗೆಯುಮೋಷ್ಠಮುಂ ನಾಸಿಕೆಯುಂ ||
ಶಿರಮುಂ ದಂತಮುಮೆಂದ- |
ಕ್ಕರಮುದಯಿಪ ತಾಣಮಾದುವೀ ಪೇೞ್ದೆಂಟುಂ || ೪೦ ||

ಪದಚ್ಛೇದಂ.— ಕೊರಲುಂ ಜಿಹ್ವಾಮೂಲಮುಂ ಉರಮುಂ ತಾಲುಗೆಯುಂ ಓಷ್ಠಮುಂ ನಾಸಿಕೆಯುಂ ಶಿರಮುಂ ದಂತಮುಂ ಎಂದು, ಅಕ್ಕರಂ ಉದಯಿಪ ತಾಣಃ ಆದುವು ಈ ಪೇೞ್ದೆಂಟುಂ.

ಅನ್ವಯಂ.— ಈ ಪೇೞ್ದೆಂಟುಂ ಅಕ್ಕರಂ ಉದಯಿಪ ತಾಣಂ ಆದುವು ಎಂಬುದನ್ವಯಂ.

ಟೀಕು.— ಕೊರಲುಃ = ಕಂಠಮುಂ; ಜಿಹ್ವಾಮೂಲಮುಂ = ನಾಲಗೆಯ ಬುಡನುಂ; ಉರಮುಂ = ಎರ್ದೆಯುಂ; ತಾಲುಗೆಯುಂ = ಗಲ್ಲಮುಂ; ಓಷ್ಠಮುಂ = ತುಟಿಯುಂ; ನಾಸಿಕೆಯುಂ = ನಾಸಿಕೆಯುಂ; ಶಿರಮುಂ = ಮಸ್ತಕಮುಂ; ದಂತಮುಂ = ಪಲ್ಗಳುಂ; ಎಂದು = ಹೀಗೆಂದು; ಈ ಪೇೞ್ದೆಂಟುಂ = ಈ ಪೇೞ್ದೆಂಟು ತಾಣಂಗಳುಂ; ಅಕ್ಕರಂ = ಅಕ್ಷರಂಗಳ್; ಉದಯಿಪ ತಾಣಂ = ಹುಟ್ಟುವ ಸ್ಥಾನಂಗಳ್; ಆದುವು = ಸಲುವಳಿ ಆದುವು.

ವೃತ್ತಿ.— ಈ ಪೇೞ್ದೆಂಟಱೊಳ್ ಅಕ್ಕರಂಗಳ್ ಪುಟ್ಟುಗುಂ; ಅವಱೊಳೇಕಸ್ಥಾನಿಗಳನಱಿದು, ವರ್ಣಾವೃತ್ತಿಯಂ ಮಾಡಿಪ್ಪುದು.

ಸೂತ್ರಂ. || ೩೧ ||

All letters divided into 5 kinds, viz. vowels, classified letters, unclassified letters, dependent letters, letters peculiar to Kanarese (ದೇಶೀಯಂಗಳ್).

ಕವಿಗಳ್ ಸ್ವರದಿಂ ವರ್ಗದಿ- |
ನವರ್ಗದಿಂ ಯೋಗವಾಹದಿಂ ದೇಶಿಯೊಳು- ||
ದ್ಭವಮಪ್ಪ ವರ್ಣದಿಂ ಪಂ- |
ಚವಿಧಂ ತಾನೆಂದು ತಿಳಿಪುವರ್ ಶುದ್ಧಗೆಯಂ. || ೪೧ ||

ಪದಚ್ಛೇದಂ.— ಕವಿಗಳ್ ಸ್ವರದಿಂ ವರ್ಗದಿಂ ಅವರ್ಗದಿಂ ಯೋಗವಾಹದಿಂ ದೇಶಿಯೊಳ್ ಉದ್ಭವಂ ಅಪ್ಪ ವರ್ಣದಿಂ ಪಂಚವಿಧಂ ತಾಂ ಎಂದು ತಿಳಿಪುವರ್ ಶುದ್ಧಗೆಯಂ.

ಅನ್ವಯಂ.— ಕವಿಗಳ್ ತಾಂ, ಸ್ವರದಿಂ ವರ್ಗದಿಂ ಅವರ್ಗದಿಂ ಯೋಗವಾಹದಿಂ ದೇಶಿಯೊಳ್ ಉದ್ಭವಂ ಅಪ್ಪ ವರ್ಣದಿಂ ಪಂಚವಿಧಃ ಎಂದು, ಶುದ್ಧಗೆಯಃ ತಿಳಿಪುವರ್.

ಟೀಕು.— ಕವಿಗಳ್ = ವಿದ್ವಾಂಸರ್; ತಾಂ = ತಾವು; ಸ್ವರದಿಂ = (ಅ, ಆ ಇತ್ಯಾದಿ) ಸ್ವರಾಕ್ಷರಂಗಳಿಂದೆ; ವರ್ಗದಿಂ = (ಕ, ಖ ಇತ್ಯಾದಿ) ವರ್ಗಾಕ್ಷರಂಗಳಿಂದೆ; ಅವರ್ಗದಿಂ = (ಯ, ರ ಇತ್ಯಾದಿ) ಅವರ್ಗಾಕ್ಷರಂಗಳಿಂದೆ; ಯೋಗವಾಹದಿಂ = (ಂ, ಃ ಇತ್ಯಾದಿ) ಯೋಗವಾ

ಾಕ್ಷರಂಗಳಿಂದೆ; ದೇಶಿಯೊಳ್ = ಕನ್ನಡದ ದೇಶೀಯಲ್ಲಿ; ಉದ್ಭವಮಪ್ಪ ವರ್ಣದಿಂ = ಹುಟ್ಟಿದ (ಎ, ಒ ಇತ್ಯಾದಿ) ಅಕ್ಷರಂಗಳಿಂದೆ; ಪಂಚವಿಧಂ = ಐದು ಪ್ರಕಾರವೆಂದು; ಶುದ್ಧಗೆಯಂ = ಶುದ್ಧಾಕ್ಷರಂಗಳಂ; ತಿಳಿಪುವರ್ = ತಿಳಿಸುವರ್.

ವೃತ್ತಿ.—ಸ್ವರದಿಂ ವರ್ಗದಿಂ ಅವರ್ಗದಿಂ ಯೋಗವಾಹದಿಂ, ದೇಶೀಯಂಗಳಿಂ, ಇಂತು ಶುದ್ಧಾಕ್ಷರಂಗಳ್ ಕನ್ನಡದೊಳ್ ಪಂಚವಿಧಮೆಂದು, ಕವಿಗಳ್ ಬಾಲಶಿಕ್ಷೆಯಂ ಮಾಳ್ಪರ್.

ಸೂತ್ರಂ. ‖ ೩೨ ‖

There are 14 vowels, 25 classified letters, 9 unclassified ones, and 4 dependent letters in the Saṁskṛita-Kannaḍa Alphabet, *i. e.* altogether 52.

ತರದಿಂದಂ ಪದಿನಾಲ್ಕುಂ ।
ಸ್ವರಮಿರ್ಪತ್ತೈದು ವರ್ಣಮವು ವರ್ಗಂ ತ- ‖
ತ್ಪರದೊಂಬತ್ತುಮವರ್ಗಂ ।
ಪರಿಭಾವಿಸೆ ಯೋಗವಾಹಮವು ನಾಲ್ಕೆ ವಲಂ. ‖ ೪೨ ‖

ಪದಚ್ಛೇದಂ.—ತರದಿಂದಂ ಪದಿನಾಲ್ಕುಂ ಸ್ವರಂ; ಇರ್ಪತ್ತೈದು ವರ್ಣಂ, ಅವು ವರ್ಗಂ; ತತ್ಪರದ ಒಂಬತ್ತುಂ ಅವರ್ಗಂ; ಪರಿಭಾವಿಸೆ, ಯೋಗವಾಹಂ ಅವು ನಾಲ್ಕೆ, ವಲಂ!

ಟೀಕು, ಯಥಾನ್ವಯಂ.—ತರದಿಂದಂ = ಕ್ರಮದಿಂದಂ; ಪದಿನಾಲ್ಕುಂ = ಹದಿನಾಲ್ಕಕ್ಷರಂಗಳುಂ; ಸ್ವರಂ = ಸ್ವರಾಕ್ಷರಂಗಳ್; ಇರ್ಪತ್ತೈದು ವರ್ಣಂ = ಇಪ್ಪತ್ತೈದಕ್ಷರಂಗಳ್; ಅವು = ಅವು; ವರ್ಗಂ = ವರ್ಗಾಕ್ಷರಂಗಳ್; ತತ್ಪರದ = ಆ ವರ್ಗಾಕ್ಷರಂಗಳ ಮುಂದಣ; ಒಂಬತ್ತು = ಒಂಬತ್ತಕ್ಷರಂಗಳ್; ಅವರ್ಗಂ = ಅವರ್ಗಾಕ್ಷರಂಗಳ್; ಪರಿಭಾವಿಸೆ = ವಿಚಾರಿಸೆ; ಯೋಗವಾಹಂ = ಯೋಗವಾಹಾಕ್ಷರಂಗಳ್; ಅವು = ಅವು; ನಾಲ್ಕೆ = ನಾಲ್ಕಕ್ಷರಂಗಳೆ; ವಲಂ = ನಿಶ್ಚಯಂ.

ವೃತ್ತಿ.—ಕ್ರಮದಿಂ ಸ್ವರಂ ಪದಿನಾಲ್ಕಕ್ಕರಂಗಳ್, ವರ್ಗಮಿರ್ಪತ್ತೈದಕ್ಕರಂಗಳ್, ಅವರ್ಗಮೊಂಬತ್ತಕ್ಕರಂಗಳ್, ಯೋಗವಾಹಂ ನಾಲ್ಕಕ್ಕರಂಗಳ್; ಅಂತು ಸಂಸ್ಕೃತದೊಳ್ ಶುದ್ಧಗೆಯ್ಯೈವತ್ತೆರಡು

ಸೂತ್ರಂ[1]. || ೩೩ || ✓

But pure Kanarese has only 47 letters.

ತಿಳಿ ದೇಶೀಯಮುಮೈದಂ- |
ಕಳೆ ನೀಂ ಋಌವರ್ಣ ಶ ಷ ವಿಸರ್ಗ ೱ ೲ ||
ಕ್ಷಳನಂ ನಾಲ್ವತ್ತೇೞಿಾ- |
ಯ್ತಳೆ ಶುದ್ಧಗೆಯಚ್ಚಗನ್ನಡಕ್ಕೀ ಕ್ರಮದಿಂ. || ೪೩ ||

ಪದಚ್ಛೇದಂ.— ತಿಳಿ ದೇಶೀಯಮುಂ ಐದಂ! ಕಳೆ ನೀಂ ಋಌವರ್ಣ, ಶ, ಷ, ವಿಸರ್ಗ, ೱ, ೲ, ಕ್ಷಳನಂ! ನಾಲ್ವತ್ತೇೞಾಯ್ತು, ಅಳೆ, ಶುದ್ಧಗೆ ಅಚ್ಚಗನ್ನಡಕ್ಕೆ ಈ ಕ್ರಮದಿಂ.

ಅನ್ವಯಂ. — ದೇಶೀಯಮುಂ ಐದಂ ನೀಂ ತಿಳಿ! ಋಌವರ್ಣ, ಶ, ಷ, ವಿಸರ್ಗ, ೱ, ೲ, ಕ್ಷಳನಂ ಕಳೆ! ಈ ಕ್ರಮದಿಂ ಅಚ್ಚಗನ್ನಡಕ್ಕೆ ಶುದ್ಧಗೆ ನಾಲ್ವತ್ತೇೞಾಯ್ತು; ಅಳೆ!

ಟೀಕು. — ದೇಶೀಯಮುಂ = ದೇಶೀಯಾಕ್ಷರಂಗಳುಂ; ಐದಂ = (ಱ, ೞ, ಳ, ಎ, ಒ ಎಂಬಿವು) ಐದಂ; ನೀಂ = ನೀಂ; ತಿಳಿ = ಅಱಿ; ಋಌವರ್ಣ, ಶ, ಷ, ವಿಸರ್ಗ, ೱ, ೲ, ಕ್ಷಳನಂ = ಋವರ್ಣ, ಌವರ್ಣ, ಶಕಾರ, ಷಕಾರ, ವಿಸರ್ಗ, ಜಿಹ್ವಾಮೂಲೀಯ ಉಪಧ್ಮಾನೀಯ, ಕ್ಷಳಂಗಳೆಂಬಕ್ಕರಂಗಳಂ; ಕಳೆ = ಕರ್ಣಾಟಭಾಷೆಯೊಳಿಲ್ಲೆಂದು, ಬಿಡು; ಈ ಕ್ರಮದಿಂ = ಈ ರೀತಿಯಿಂದೆ; ಅಚ್ಚಗನ್ನಡಕ್ಕೆ = ಸಂಸ್ಕೃತಂ ಬೆರೆಯದ ಬಱಿಯ ಕನ್ನಡಕ್ಕೆ; ಶುದ್ಧಗೆ = ಶುದ್ಧಾಕ್ಷರಂಗಳ್; ನಾಲ್ವತ್ತೇೞಾಯ್ತು = ನಾಲ್ವತ್ತೇೞಕ್ಷರಂಗಳಾದುವೆಂದು; ಅಳೆ = ಪ್ರಮಾಣಿಸು.

ವೃತ್ತಿ.— ಕನ್ನಡದೊಳ್ ದೇಶೀಯಮೈದು ತೆಱಿಂ; ಪಿಂತಣೈವತ್ತೆರಡಕ್ಕರಂಗಳ್ ಕೂಡೆ ಐವತ್ತೇೞಕ್ಕರಂಗಳ್; ಅವಱೊಳಗೆ ಋ ೠ, ಌ ೡ, ಶ, ಷ, ವಿಸರ್ಗ, ೱ, ೲ, ಕ್ಷಳಂಗಳೆಂಬ ಪತ್ತಂ ಕಳೆಯಲ್ ಅಚ್ಚಗನ್ನಡದೊಳ್ ಶುದ್ಧಗೆ ನಾಲ್ವತ್ತೇೞು ವಿಧಂ; ನಿಸರ್ಗಮಾಗಿ ವಿಸರ್ಗಮಿಲ್ಲ.

---

[1] ಶ ಷೌ ಚ || ಭಾ. ಭೂ. ಸೂ. ೧೨. || (ಶಕಾರ ಷಕಾರಗಳು ಕನ್ನಡದಲ್ಲಿಲ್ಲ).

ಋಕಾರಾದಯಶ್ಚತ್ವಾರಃ ಸ್ವರಾಃ || ಭಾ. ಭೂ. ಸೂ. ೧೩. || (ಋ, ೠ, ಌ, ೡ, ಎಂಬೀ ನಾಲ್ಕು ಸ್ವರಗಳು ಕನ್ನಡದಲ್ಲಿಲ್ಲ.)

ಸೂತ್ರಂ. || ೩೪ ||

The manner how, in the form of letters, articulate sounds (ಶಬ್ದಂ), *i. e.* words, originate.

ತನು ವಾದ್ಯಂ ನಾಲಗೆ ವಾ- |
ದನದಂಡಂ ಕರ್ತೃವಾತ್ಮನವನ ಮನೋವೃ- ||
ತ್ತಿನಿಮಿತ್ತಮಾಗಿ ಶಬ್ದಂ |
ಜನಿಯಿಸುಗುಂ ಧವಳವರ್ಣಮಕ್ಷರರೂಪಂ. || ೪೪ ||

ಪದಚ್ಛೇದಂ.— ತನು ವಾದ್ಯಂ, ನಾಲಗೆ ವಾದನದಂಡಂ, ಕರ್ತೃವು ಆತ್ಮಂ; ಅವನ ಮನೋವೃತ್ತಿನಿಮಿತ್ತಂ ಆಗಿ ಶಬ್ದಂ ಜನಿಯಿಸುಗುಂ ಧವಳವರ್ಣಂ ಅಕ್ಷರರೂಪಂ.

ಅನ್ವಯಂ.— ಧವಳವರ್ಣಂ ಅಕ್ಷರರೂಪಂ ಶಬ್ದಂ ಜನಿಯಿಸುಗುಂ ಎಂಬುದನ್ವಯಂ.

ಟೀಕು.— ತನು = ಶರೀರಂ; ವಾದ್ಯಂ = ವಾದ್ಯವು; ನಾಲಗೆ = ಜಿಹ್ವೆಯು; ವಾದನ ದಂಡಂ = ವಾದ್ಯವಂ ನುಡಿಸುವ ಕುಡುಹು; ಆತ್ಮಂ = ಜೀವಾತ್ಮಂ; ಕರ್ತೃ = ವಾದ್ಯವಂ ನುಡಿಸುವ ಕರ್ತೃ; ಅವನ = ಆ ಜೀವಾತ್ಮನ; ಮನೋ = ಮನಸಿನ; ವೃತ್ತಿ = ವರ್ತನೆಗೆ; ನಿಮಿತ್ತಂ = ಕಾರಣಂ; ಆಗಿ = ಆಗಿ; ಧವಳ ವರ್ಣಂ = ಶ್ವೇತ ವರ್ಣಮಾದ; ಅಕ್ಷರರೂಪಂ = ಅಕ್ಷರಾತ್ಮಕವಾದ; ಶಬ್ದಂ = ಧ್ವನಿ; ಜನಿಯಿಸುಗುಂ = ಹುಟ್ಟುವುದು.

ವೃತ್ತಿ.— ಶರೀರಮೆ ವಾದ್ಯಂ, ನಾಲಗೆ ಬಾಜಿಸುವ ಕುಡುಹು, ವಾದಕನಾತ್ಮಂ; ಆತನ ಮನೋವೃತ್ತಿಯಿಂದೆ ಧವಳವರ್ಣಮಂತಪ್ಪಕ್ಷರರೂಪಮಪ್ಪ ಶಬ್ದಂ ಪುಟ್ಟುಗುಂ.

Ref

ಸೂತ್ರಂ. || ೩೫ ||

(A word as) a Base (ಪ್ರಕೃತಿ) is either a nominal theme (ಲಿಂಗಂ) or a verbal one (ಧಾತು). When it is augmented by suffixes

ಪದದರ್ಥಮಂ ವಿಭಾಗಿಸು- |
ವುದಱಿಂದೆ ವಿಭಕ್ತಿಯಂತದಂ ಪ್ರತ್ಯಯಮೆಂ- ||
ಬುದು ತತ್ಪ್ರತ್ಯಯದಿಂ ಪೂ- |
ರ್ವದೊಳಿರ್ಕುಂ ಪ್ರಕೃತಿಯೆರಡುಮಮರ್ದೊದವೆ
ಪದಂ[1]. || ೪೫ ||

[1] According to Kêśava a ಶಬ್ದ or ಪದ is a word and signifies a ನಾಮಪದ *i. e.* a nominal base with a case-termination (ವಿಭಕ್ತಿ) attached to it or an ಆಖ್ಯಾತಪದ *i. e* a conjugated verb ending in a personal termination.

(ಪ್ರತ್ಯಯಂ, ವಿಭಕ್ತಿ) which are either nominal (ನಾಮವಿಭಕ್ತಿ) or verbal ones (ಆಖ್ಯಾತವಿಭಕ್ತಿ) it becomes an inflected word (ಪದಂ). Also an Adverb (ಅವ್ಯಯಂ) and the nominal part of a compound may be inflected words.

ಪದಚ್ಛೇದಂ.—ಪದದರ್ಥಮಂ ವಿಭಾಗಿಸುವುದಱಿಂದೆ ವಿಭಕ್ತಿ, ಅಂತು ಆದಂ ಪ್ರತ್ಯಯಂ ಎಂಬುದು; ತತ್ಪ್ರತ್ಯಯದಿಂ ಪೂರ್ವದೊಳ್ ಇರ್ಕುಂ ಪ್ರಕೃತಿ; ಎರಡುಂ ಅಮರ್ದು ಒದವೆ, ಪದಂ.

ಅನ್ವಯಂ.—ತತ್ಪ್ರತ್ಯಯದಿಂ ಪೂರ್ವದೊಳ್ ಪ್ರಕೃತಿ ಇರ್ಕುಂ.

ಟೀಕು.—ಪದದ=ಪದಂಗಳ; ಅರ್ಥಮಂ=ಪುರುಳಂ; ವಿಭಾಗಿಸುವುದಱಿಂದೆ=ವಿಭಾಗಿಸಿ ಕೊಡುವುದಱಿಂದೆ; ವಿಭಕ್ತಿ = ವಿಭಕ್ತಿ ಎನಿಪುದು; ಅಂತು = ಹಾಂಗೆ; ಆದಂ = ಆ ವಿಭಕ್ತಿಯಂ; ಪ್ರತ್ಯಯಂ = ಪ್ರತ್ಯಯಮೆಂದು; ಎಂಬುದು = ಪೇೞ್ವುದು; ತತ್ಪ್ರತ್ಯಯದಿಂ = ಆ ವಿಭಕ್ತಿಯಿಂದೆ; ಪೂರ್ವದೊಳ್ = ಮೊದಲಲ್ಲಿ; ಪ್ರಕೃತಿ = ಪ್ರಕೃತಿ; ಇರ್ಕುಂ = ಇರ್ಪುದು; ಎರಡುಂ = ಪ್ರಕೃತಿ ಪ್ರತ್ಯಯಮೆಂಬೆರಡುಂ; ಅಮರ್ದು = ಪೊರ್ದುಗೆಯಾಗಿ; ಒದವೆ = ಪ್ರಾಪ್ತಿಸೆ; ಪದಂ = ಪದವೆನಿಸುವುದು.

ವೃತ್ತಿ.—ಶಬ್ದದೊಳಿರ್ದರ್ಥಮಂ ತಂತಮ್ಮನುಗುಣಮಾಗಿ ವಿಭಾಗಿಸಿ ಕುಡುವುದಱಿಂ ವಿಭಕ್ತಿಯೆನಿಸುಗುಂ, ಆ ವಿಭಕ್ತಿಯಂ ಪ್ರತ್ಯಯಮೆನಲಕ್ಕುಂ; ಅವಾವೆಂದೊಡೆ—ಮ್, ಅಮ್, ಮೊದಲಾದ ನಾಮಾಖ್ಯಾತವಿಭಕ್ತಿಗಳ್. ಅವಱಿಂ ಪಿಂದಿರ್ಪ ಲಿಂಗಮಂ ಧಾತುಮಂ ಪ್ರಕೃತಿಯೆನಲಕ್ಕುಂ; ಪ್ರಕೃತಿ ಪ್ರತ್ಯಯಂಗಳೆರಡುಂ ಕೂಡೆ, ಪದಮಕ್ಕುಂ. ಮರ ದೇವ ಎಂದು, ನಾಮ ಲಿಂಗಮನಿರಿಸಿ, ಮ್ ಎಂಬ ವಿಭಕ್ತಿಯಂ ಕೂಡೆ, ಮರಂ ದೇವಂ ಎಂದು, (ನಾಮ)ಪದಮಕ್ಕುಂ. ನುಡಿ ನೋಡು ಎಂಬ ಧಾತುಮನಿಱಿಸಿ, ಅಮ್ ಎಂಬಾಖ್ಯಾತವಿಭಕ್ತಿಯಂ ಕೂಡೆ, ನುಡಿದಂ ನೋಡಿದಂ ಎಂಬ, (ಆಖ್ಯಾತ) ಪದಮಕ್ಕುಂ. ಅವ್ಯಯಮುಂ ಸಮಾಸದೊಳಗಣ ನಾಮಭಾಗಮಂ ವಿಭಕ್ತಿಯಂ ಕೊಟ್ಟುೞಿವುದಱಿಂ ಪದಮೆಂದಱಿವುದು.

ಸೂ. || ವಿಭಕ್ತ್ಯಂತಂ ಪದಂ. || ಭಾ. ಭೂ. 16. ||

(ನಾಮವಿಭಕ್ತಿಗಳಾಗಲಿ ಆಖ್ಯಾತವಿಭಕ್ತಿಗಳಾಗಲಿ ಕಡೆಯಾಗುಳ್ಳ ಶಬ್ದಗಳು ಪದಗಳು.)

ನಿರತಂ ಪ್ರಕೃತಿ ಪ್ರತ್ಯಯ-
ಮೆರಡುಮೊಡಂಬಟ್ಟು ತೋಱೆ ಪದಮೆನೆ ಪಡೆಗುಂ || ಶ. ಸ್ಮೃ. 7. ||

ಸೂತ್ರಂ. || ೩೬ ||

There are Kannada words with obligatory and optional Anusvâra, with true and slack double consonants (ಶಿಥಿಲದ್ವಿತ್ವಂಗಳ್) and with double consonants which may be treated either as true or as slack.

ಕೆಲವು ನಿಜ ಬಿಂದುಗಳ್ ಕೆಲ |
ಕೆಲವು ವಿಕಲ್ಪಾರ್ಥಬಿಂದುಗಳ್ ದ್ವಿತ್ವಂಗಳ್ ||
ಕೆಲವಾ ಶಿಥಿಲದ್ವಿತ್ವಂ |
ಕೆಲಮುಭಯಮುಮಾಗಿ ಕೆಲವು ಪದನಱಿವುದವಂ.
|| ೪೬ ||

ಪದಚ್ಛೇದಂ.— ಕೆಲವು ನಿಜ ಬಿಂದುಗಳ್, ಕೆಲಕೆಲವು ವಿಕಲ್ಪಾರ್ಥಬಿಂದುಗಳ್, ದ್ವಿತ್ವಂಗಳ್ ಕೆಲವು, ಆ ಶಿಥಿಲದ್ವಿತ್ವಂ ಕೆಲಂ, ಉಭಯಮುಂ ಆಗಿ ಕೆಲವು ಪದಂ, ಅಱಿವುದು ಅವಂ.

ಅನ್ವಯಂ.— ಕೆಲವು ನಿಜ ಬಿಂದುಗಳ್, ಕೆಲಕೆಲವು ವಿಕಲ್ಪಾರ್ಥಬಿಂದುಗಳ್, ಕೆಲವು ದ್ವಿತ್ವಂಗಳ್, ಕೆಲಂ ಆ ಶಿಥಿಲದ್ವಿತ್ವಂ, ಕೆಲವು ಪದಂ ಉಭಯಮುಂ ಆಗಿ, ಅವಂ ಅಱಿವುದು.

ಟೀಕು.— ಕೆಲವು = ಕೆಲವು ಶಬ್ದಂಗಳ್; ನಿಜ ಬಿಂದುಗಳ್ = ನಿತ್ಯಬಿಂದುಗಳೆನಿಸುವುವು; ಕೆಲಕೆಲವು = ಹಲವು ಕೆಲವು ಶಬ್ದಂಗಳ್; ವಿಕಲ್ಪಾರ್ಥಬಿಂದುಗಳ್ = ವಿಕಲ್ಪದಿಂ ಸಬಿಂದುಕಮಬಿಂದುಕಮಾಗಿರ್ಪುವು; ಕೆಲವು = ಕೆಲವು ಶಬ್ದಂಗಳ್; ದ್ವಿತ್ವಂಗಳ್ = ಒತ್ತಕ್ಕರಂಗಳಾಗಿರ್ಪುವು; ಕೆಲಂ = ಕೆಲವು ಶಬ್ದಂಗಳ್; ಆ = ಆ ಪ್ರಸಿದ್ಧಮಾದ; ಶಿಥಿಲದ್ವಿತ್ವಂ = ಶಿಥಿಲವಾದ ದ್ವಿತ್ವಂಗಳಾಗಿರ್ಪುವು; ಕೆಲವು ಪದಂ = ಕೆಲವು ಪದಂಗಳ್; ಉಭಯಮುಂ = ದ್ವಿತ್ವ— ಶಿಥಿಲದ್ವಿತ್ವಮೆಂಬುಭಯಮುಂ; ಆಗಿ = ಆಗಿರ್ಪುವು; ಅವಂ = ಆ ಪದಂಗಳಂ; ಅಱಿವುದು = ತಿಳಿವುದು.

ವೃತ್ತಿ.— ಕೆಲವು ಪದಂಗಳ್ ಸ್ವಭಾವದಿಂ ನಿತ್ಯಬಿಂದುಗಳ್, ಕೆಲವು ಪದಂಗಳ್ ವಿಕಲ್ಪದಿಂ ಸಬಿಂದುಕಂ ಅಬಿಂದುಕಂ ಆಗಿರ್ಪುವು; ಕೆಲವು ಪದಂಗಳ್ ನಿಯತದಿಂ ದ್ವಿತ್ವಂಗಳ್, ಕೆಲವು ಪದಂಗಳ್ ಶಿಥಿಲದ್ವಿತ್ವಂಗಳ್, ಕೆಲವು ಪದಂಗಳ್ ಶಿಥಿಲಮುಂ ದ್ವಿತ್ವಮುಮಾಗಿರ್ಪುವು.

ಪ್ರಯೋಗಂ[1].— ನಿತ್ಯಬಿಂದುಗೆ.—

1. ಅಡಂಗು.	3. ಅಸುಂಬಿದಂ.	5. ಎಱಂಕೆ.
2. ಅವುಂಕಿದಂ.	4. ಈಂಟು.	6. ಒಱಂಟು.

[1] The present Editor is responsible for the alphabetical arrangement of these words.

7. ಒಱಿಂತೆ.
8. ಕಡಂಗು.
9. ಕಡಂದುಱು.
10. ಕಡುಂಬು.
11. ಕರಂಡಗೆ.
12. ಕಲುಂಬು.
13. ಕವುಂಕುೞ್
14. ಕುಂಟಣಿ.
15. ಕುಱುಂಬು.
16. ಕುಸುಂಬೆ.
17. ಕೂಂಕಿದಂ.
18. ಕೂಂಟು.
19. ಕೊಡಂತಿ.
20. ಕೊಡಂಬೆ.
21. ಕೊಱಂತೆ.
22. ಗಂಟಿಗೆ.
23. ಗಳಂತಿಗೆ.
24. ಗೆಂಟು.
25. ಗೆಂಟುಗೆ.
26. ಗೋಂಟು.
27. ಚಲುಂಕಿದಂ.
28. ಚೆಲಂಕು.
29. ತಂದಲ್.
30. ತಱುಂಬು.
31. ತುಱುಂಬು.
32. ತೂಂಕಿದಂ.
33. ತೆಂಕು.
34. ತೆರಂಟು.
35. ತೊಡಂಕು.
36. ತೊಡಂಬೆ.
37. ತೋಂಟಂ.
38. ತೋಂಟಿಗಂ.
39. ದಾಂಟು.
40. ದೂಂಟು.
41. ದೋಂಟ.
42. ನಾಂದು.
43. ನಿಲುಂಬಿದಂ.
44. ಪಡಂಗು.
45. ಪಲುಂಬಿದಂ.
46. ಪಳಂಚಿದಂ.
47. ಪಳುಂಕಿದಂ.
48. ಪೇಂಕುಳಿ.
49. ಪೊಸಂತಿಲ್.
50. ಬಣಂಬಿಗಂ.
51. ಬಣಂಬೆ.
52. ಬಿಡಂಗು.
53. ಬಿದಂಡೆ.
54. ಬೆಂದುಱು.
55. ಬೇಂಟೆ.
56. ಮೀಂಟಿದಂ.
57. ಮೀಂಟು.
58. ಮುಸುಂಬು.
59. ಮೇಂಟಿ.
60. ಸಾಂದು.
61. ಸಿಡುಂಬು.
62. ಸೀಂಟು.
63. ಸುಂಟಿಗೆ.
64. ಸೆಱಂಗು.
65. ಸೇಂದು.
66. ಸೊರಂಟು.
67. ಹಸುಂಬೆ.

ವಿಕಲ್ಪಬಿಂದುವಿಗೆ.—

1. ಅಱುಂಬೆ— ಅಱುಬೆ.
2. ಇಱುಂಕಿದಂ— ಇಱುಕಿದಂ.
3. ಇಱುಂಪೆ— ಇಱುಪೆ.
4. ಕಣಂಜು— ಕಣಜು.
5. ಕದಂಪು— ಕದಪು.
6. ಕರಿಂಕು— ಕರಿಕು.
7. ಕಱುಂಕೆ— ಕಱುಕೆ.
8. ಕರ್ದುಂಕಿದಂ— ಕರ್ದುಕಿದಂ.
9. ಕುಱುಂಕಿದಂ— ಕುಱುಕಿದಂ.
10. ಕೊಡಂಕೆ— ಕೊಡಕೆ.

11. ಜಿನುಂಗು — ಜಿನುಗು.
12. ತುಳುಂಕಿದಂ — ತುಳುಕಿದಂ.
13. ತೊಳಂಕು — ತೊಳಕು.
14. ದುಘುಂಮಿಱಿದಂ — ದುಘುಮಿಱಿದಂ.
15. ನೊರಂಜು — ನೊರಜು.
16. ಪೊಳಂಕಿದಂ — ಪೊಳಕಿದಂ.
17. ಬೆಳಂತಿಗೆ — ಬೆಳತಿಗೆ.
18. ಮುಸುಂಕಿದಂ — ಮುಸುಕಿದಂ.

ನಿಯತದ್ವಿತ್ವಕ್ಕೆ. —

1. ಅಗ್ಗಳಂ.
2. ಅಱ್ತಿ.
3. ಆಱ್ದಿಂ.
4. ಉಕ್ಕಿವಂ.
5. ಉಗ್ಗಂ.
6. ಉಗ್ಗಿ.
7. ಉಪ್ಪಡಂ.
8. ಉಪ್ಪಂಡಂ.
9. ಎಗ್ಗಂ.
10. ಎಱ್ದಿಂ.
11. ಒಪ್ಪಂ.
12. ಕಕ್ಕಸಂ.
13. ಕಪ್ಪಡಿ.
14. ಕಪ್ಪಳಿ.
15. ಕಱಿಲ್ದಂ.
16. ಕಱ್ತಲೆ.
17. ಕಱ್ತಿ.
18. ಕೆಕ್ಕೊರಸು.
19. ಕೊಪ್ಪಂ.
20. ಕೊಪ್ಪಲ್.
21. ಕೊಪ್ಪು.
22. ಚಪ್ಪರಂ.
23. ಟಿಪ್ಪರಂ.
24. ತಪ್ಪಡಿ.
25. ತಿಪ್ಪುಟಿ.
26. ತೆಪ್ಪಂ.
27. ತೊಱಿಲ್ದಂ.
28. ತೊಱ್ತಿ.
29. ದುಪ್ಪಡಿ.
30. ನೆಪ್ಪು.
31. ಪಪ್ಪುಕಂ.
32. ಬಕ್ಕರಸೆ.
33. ಬಕ್ಕಸೆ.
34. ಬಕ್ಕುಡಿದಂ.
35. ಬಗ್ಗಂ.
36. ಬಗ್ಗಣೆ.
37. ಬಱಿಲ್ದಂ.
38. ಬಱ್ದಿಂ.
39. ಬಿಪ್ಪಂಡಂ.
40. ಬಿಱ್ದಿಂ.
41. ಮೊಕ್ಕಳಂ.
42. ಮೊಗ್ಗರಂ.
43. ಮೊಗ್ಗು.
44. ರಕ್ಕಸಿ.
45. ಱೊಪ್ಪಂ.
46. ಲಗ್ಗಿಗಂ.
47. ವೆಗ್ಗಳಂ.
48. ಸಕ್ಕರೆ.
49. ಸಿಪ್ಪು.
50. ಸುಗ್ಗಂ.
51. ಸುಗ್ಗಿ.
52. ಸುರುಳ್ದಂ.
53. ಸೊಪ್ಪುಗಳ್.
54. ಹಪ್ಪಳಿಕೆ.
55. ಹಿಪ್ಪಲಿ.

ಶಿಥಿಲದ್ವಿತ್ವಕ್ಕೆ.—

1. ಅಗುಱ್ದಿಂ.
2. ಜಗುಱ್ದಿಂ.
3. ತಿಮಿರ್ದಂ.
4. ತುಮುಱ್ದಿಂ.
5. ತೆಗಱ್ದಿಂ.
6. ನುಸುಱ್ದಿಂ.
7. ನೆಗಱ್ದಿಂ.
8. ಪೊಗಱ್ದಿಂ.
9. ಮಗುಱ್ದಿಂ.
10. ಮಸುಳ್ದಂ.
11. ಮುಗುಳ್ದಂ.

ಇನ್ನು ದ್ವಿತ್ವಮುಂ ಶಿಥಿಲಮುಂ ಆದುವರ್ಕೆ.—

ತಗುಳ್ದಂ. ಮೊರಳ್ದಂ.

ಎಂಬಂತೆ. *cf.* Sûtras 42, 43, 44, 45.

ಸೂತ್ರಂ. || ೩೭ ||

Words having a short vowel of the penultimate with Rêpha.

ಉರ್ದುಂ ಬಿರ್ದುಂ ತರ್ದುಂ |
ಮರ್ದುಂ ಗುರ್ದುಂ ಸಮಂತು ತಿರ್ದುಂ ಪರ್ದುಂ ||
ಗರ್ದುಱಿಮುರ್ದಿದುದೆನೆಯುಂ |
ಗರ್ದೆಯುಮಾ ಗುರ್ದೆಯುಂ ಸರೇಫಪದಂಗಳ್. || ೪೭ ||

ಪದಚ್ಛೇದಂ.— ಉರ್ದುಂ, ಬಿರ್ದುಂ, ತರ್ದುಂ, ಮರ್ದುಂ, ಗುರ್ದುಂ; ಸಮಂತು ತಿರ್ದುಂ, ಪರ್ದುಂ, ಗರ್ದುಱಿಂ, ಉರ್ದಿದುದು ಎನೆಯುಂ, ಗರ್ದೆಯುಂ, ಆ ಗುರ್ದೆಯುಂ ಸರೇಫಪದಂಗಳ್.

ಟೀಕು, ಯಥಾನ್ವಯಂ.— ಉರ್ದುಂ = ಉರ್ದೆಂದುಂ; ಬಿರ್ದುಂ = ಬಿರ್ದೆಂದುಂ; ತರ್ದುಂ = ತರ್ದೆಂದುಂ; ಮರ್ದುಂ = ಮರ್ದೆಂದುಂ; ಗುರ್ದುಂ = ಗುರ್ದೆಂದುಂ; ಸಮಂತು = ಹಾಂಗೆ; ತಿರ್ದುಂ = ತಿರ್ದೆಂದುಂ; ಪರ್ದುಂ = ಪರ್ದೆಂದುಂ; ಗರ್ದುಱಿಂ = ಗರ್ದುಱಿಂದುಂ; ಉರ್ದಿದುದೆನೆಯುಂ = ಉರ್ದಿದುದು ಎಂದೊಡೆಯುಂ; ಗರ್ದೆಯುಂ = ಗರ್ದೆ ಎಂದುಂ; ಆ ಗುರ್ದೆಯುಂ = ಆ ಪ್ರಸಿದ್ಧವಾದ ಗುರ್ದೆ ಎಂದುಂ; ಸರೇಫಪದಂಗಳ್ = ರೇಫೆಯೊಡನೆ ಕೂಡಿದ ಪದಂಗಳೆನಿಸುವುವು.

ಸೂತ್ರಂ. || ೩೮ ||

Further words of the same character.

ಸುರ್ಗಿದುದೆನೆ ತರ್ಗಿದುದೆನೆ |
ಕಿರ್ಗಿದುದೆನೆ ಜರ್ಗುಏಱ್ದಿದೆನೆ ಪೆರ್ಗತ್ತಾ ||
ಪೊರ್ಗಾದರ್ ಪೆರ್ಗಳವೆನೆ |
ಕುರ್ಗಿದುದೆನೆ ಮಾರ್ಗದೊಳ್ ಸರೇಫಪದಂಗಳ್. || ೪೮ ||

ಪದಚ್ಛೇದಂ— ಸುರ್ಗಿದುದು ಎನೆ, ತರ್ಗಿದುದು ಎನೆ, ಕಿರ್ಗಿದುದು ಎನೆ, ಜರ್ಗುವಿಬ್ದುದು ಎನೆ, ಪೆರ್ಗತ್ತು, ಆ ವರ್ಗಾದರ್, ಪೆರ್ಗಳವು ಎನೆ, ಕುರ್ಗಿದುದು ಎನೆ, ಮಾರ್ಗದೊಳ್ ಸರೇಫಪದಂಗಳ್.

ಟೀಕು, ಯಥಾನ್ವಯಂ.— ಇವೆಲ್ಲಂ ಮಾರ್ಗದೊಳ್ ಸರೇಫಪದಂಗಳೆಂಬುದರ್ಥಂ.

ಸೂತ್ರಂ. || ೬೯ ||

Further words of a similar character including, however, three terms with a long penultimate.

ಇರ್ಪುಂ ತೋರ್ಪುಂ ಕೆರ್ಪುಂ |
ನೆರ್ಪುಂ ಪೆರ್ಪೆಯುಮಡರ್ಪುಮಾರ್ಪುಂ ಕೂರ್ಪುಂ ||
ಪರ್ಪರಿಕೆಯುಮೆರ್ಪುಂ ಮೈ |
ಯ್ಗರ್ಪುಂ ಮೊದಲಾಗಿ ರೇಫಸಂಯೋಗಂಗಳ್. || ೬೯ ||

ಪದಚ್ಛೇದಂ.— ಇರ್ಪುಂ, ತೋರ್ಪುಂ, ಕೆರ್ಪುಂ, ನೆರ್ಪುಂ, ಪೆರ್ಪೆಯುಂ, ಅಡರ್ಪುಂ, ಆರ್ಪುಂ, ಕೂರ್ಪುಂ, ಪರ್ಪರಿಕೆಯುಂ, ಎರ್ಪುಂ, ಮೈಯ್ಗರ್ಪುಂ ಮೊದಲ್ ಆಗಿ ರೇಫಸಂಯೋಗಂಗಳ್.

ಟೀಕು, ಯಥಾನ್ವಯಂ.— ಇವು ಮೊದಲಾದ ಶಬ್ದಂಗಳ್ ರೇಫೆಯೊಡನೆ ಕೂಡಿದ ಪದಂಗಳೆಂಬುದರ್ಥಂ.

ಸೂತ್ರಂ. || ೭೦ ||

Words having a long penultimate vowel with Rêpha.

ಆರ್ದಂ ಸಾರ್ದಂ ಪೋರ್ದಂ |
ತೀರ್ದಂ ಪಾರ್ದಂ ಸಮಂತು ಪೀರ್ದಂ ಕಾರ್ದಂ ||
ನೇರ್ದಂ ಬಾರ್ದಂ ಗೋರ್ದಂ |
ಸೋರ್ದಂ ತಾನೆಂದೊಡಂ ಗುರೂಪಧೆಯಿನಿತುಂ. || ೭೦ ||

ಪದಚ್ಛೇದಂ.— ಆರ್ದಂ, ಸಾರ್ದಂ, ಪೋರ್ದಂ, ತೀರ್ದಂ, ಪಾರ್ದಂ, ಸಮಂತು ಪೀರ್ದಂ, ಕಾರ್ದಂ, ನೇರ್ದಂ, ಬಾರ್ದಂ, ಗೋರ್ದಂ, ಸೋರ್ದಂ ತಾಂ ಎಂದೊಡಂ ಗುರೂಪಧೆ ಇನಿತುಂ.

ಅನ್ವಯಂ.— ಸೋರ್ದಂ ಎಂದೊಡಂ ತಾಂ ಇನಿತುಂ ಗುರೂಪಧೆ. ಉಳಿದದ್ದು ಯಥಾನ್ವಯಂ.

ಟೀಕು.— ಸೋರ್ದಱನೆಂದೊಡಂ ತಾವಿನಿತು ಶಬ್ದಂಗಳುಂ ಗುರೂಪಧೆ = ಗುರುವಾದು ಪಧೆ ಎಂಬುದರ್ಥಂ.

ವಿಚಾರಂ[1].— ಉಪಧೆಯೆಂದೊಡೆ ವ್ಯಾಕರಣಂಗಳಲ್ಲಿ — "ಅಂತ್ಯಾತ್ ಪೂರ್ವಮ್ ಉಪಧಾ" ಎಂಬ ಸಂಜ್ಞಾಸೂತ್ರದಿಂ[1] ಅಂತ್ಯದತ್ತಣಿಂ ಮೊದಲುಪಧೆಯು ಎಂದಱ್!

ಸೂತ್ರಂ. ‖ ೪೧ ‖

Further words of such a character.

ಊರ್ಗಱಳ್ ಕೇರ್ಗಱಳ್ ಬೇರ್ಗಱಳ್ |
ನಾರ್ಗಱಳ್ ತೇರ್ಗಱಳ್ ನೆಗೞ್ತೆಯಾರ್ಗಱಳ್ ಕೂರ್ಗಱಳ್ ‖
ನೇರ್ಗಱಳ್ ಸೀರ್ಗಱಳ್ ತಾರ್ಗಱಳ್ |
ಸೂರ್ಗಱಳ್ ಕಾರ್ಗಱಳ್ ಗುರೂಪಧಾರ್ಥಮೆನಿಕ್ಕುಂ. ‖ ೫೧ ‖

ಪದಚ್ಛೇದಂ.— ಊಗಱಳ್, ಕೇಗಱಳ್, ಬೇಗಱಳ್, ನಾಗಱಳ್, ತೇಗಱಳ್, ನೆಗೞ್ತೆಯ ಆಗಱಳ್, ಕೂಗಱಳ್, ನೇಗಱಳ್, ಸೀಗಱಳ್, ತಾಗಱಳ್, ಸೂಗಱಳ್, ಕಾಗಱಳ್ ಗುರೂಪಧಾರ್ಥಂ ಎನಿಕ್ಕುಂ.

ಟೀಕು.— ಇವೆಲ್ಲಂ ಗುರೂಪಧಾರ್ಥಂಗಳೆಂಬುದರ್ಥಂ.

‖ ಸೂತ್ರಂ. ‖ ೪೨ ‖ ಶಿಥಿಲ ದ್ವಿ

ಪಿಂತಮರ್ದಿರೆ ಱುಱುಕುಳರೇ- |
ಫಾಂತಂ ಹ್ರಸ್ವಾದಿಲಿಂಗಮಂತವು ಗಳ್ಮೇ- ‖
ಣಂತೆ ಚತುರ್ಥಿಯ ಗೆಯೆ ಮೇ- |
ಣ್ಮಂತಮರ್ದಿರೆ ಪಿರಿದುಮೊದವುಗುಂ ಶಿಥಿಲತ್ವಂ. ‖ ೫೨ ‖

Slack double consonants (ಶಿಥಿಲ ದ್ವಿತ್ವಂಗಳ್) often occur in the (Nominative) Plural formed with ಗಳ್ and Dative Singular formed with ಗೆ (which is also the case-affix for the Dative Plural) of nominal bases with short penultimate which end either in ಱ್ or ಳ್ or ಱ. This ಱ map be a substitute (ಆದೇಶಂ) for ಱ್.

---

[1]) "ಅಂತ್ಯಾದ್ ವರ್ಣಾತ್ ಪೂರ್ವಂ ಉಪಧಾ" ಎಂತ ವಾಜಸನೇಯಿ ಪ್ರಾತಿಶಾಖ್ಯದೊಳುಂಟು (1, 35), also Pâṇini I. 1, 65. The Penultimate vowel in a word is termed ಉಪಧಾ. In the words ಬಿಲ್ (Bil), ಕೆಯ್ (Kai), ಪಾಱ್ (Pāṟ) the ಉಪಧೆ vowels are ಇ (i), ಎ (a), and ಆ (ā) respectively.

ಪದಚ್ಛೇದಂ.—ಪಿಂತೆ ಅಮರ್ದುರ್ ಇರೆ ಱಿಱಿಕುಳರೇಫಾಂತಂ ಹ್ರಸ್ವಾದಿಲಿಂಗಂ ಅಂತು ಅವು, ಗಳ್ ಮೇಣ್ ಅಂತೆ ಚತುರ್ಥಿಯ ಗೆಯೆ ಮೇಣ್ ಮುಂತೆ ಅಮರ್ದುರ್ ಇರೆ ಪಿರಿದುಂ ಒದವುಗುಂ ಶಿಥಿಲತ್ವಂ.

ಅನ್ವಯಂ.—ಹ್ರಸ್ವಾದಿಲಿಂಗಂ ಱಿಱಿಕುಳರೇಫಾಂತಂ ಪಿಂತೆ ಅಂತು ಅವು ಅಮರ್ದಿರೆ, ಮೇಣ್ ಗಳ್ ಅಂತೆ ಮೇಣ್ ಚತುರ್ಥಿಯ ಗೆಯೆ ಮುಂತೆ ಅಮರ್ದಿರೆ, ಪಿರಿದುಂ ಶಿಥಿಲತ್ವಂ ಒದವುಗುಂ.

ಟೀಕು.—ಹ್ರಸ್ವಾದಿಲಿಂಗಂ=ಹ್ರಸ್ವಾದಿಲಿಂಗಂಗಳಾದ; ಱಿಱಿಕುಳರೇಫಾಂತಂ=ಱಿಱಾಂತ ಕುಳಾಂತ ರೇಫಾಂತಂಗಳಾದ ಶಬ್ದಂಗಳ್; ಪಿಂತೆ=ಹಿಂದುಗಡೆಯಲ್ಲಿ; ಅಂತು=ಹಾಂಗೆ; ಅವು=ಆ ಶಬ್ದಂಗಳ್; ಅಮರ್ದಿರೆ=ಪೊರ್ದುಗೆಯಾಗಿ ಇರೆ; ಮೇಣ್=ವಿಕಲ್ಪದಿಂದೆ; ಗಳ್=ಬಹುವಚನದ ಗಳಾಗಮಂ; ಅಂತೆ=ಹಾಂಗೆ; ಮೇಣ್=ಅದಲ್ಲದೆ; ಚತುರ್ಥಿಯ=ಚತುರ್ಥೀವಿಭಕ್ತಿಯ; ಗೆಯೆ=ಗೆಕಾರಂ; ಮುಂತೆ=ಮುಂದುಗಡೆಯಲ್ಲಿ; ಅಮರ್ದಿರೆ=ಪೊರ್ದುಗೆಯಾಗಿರೆ; ಪಿರಿದುಂ=ಬಹುಳವಾಗಿಯುಂ; ಶಿಥಿಲತ್ವಂ=ಶಿಥಿಲಮಪ್ಪತನಂ; ಒದವುಗುಂ=ಪ್ರಾಪ್ತಿಸುವುದು.

(ವೃತ್ತಿ.—ಪೆಱಗಣ ಮೈಯೊಳ್ ಲಘು ಮೊದಲಾಗಿರ್ದ ಱಿಱಿಕುಳ ರೇಫಾಂತಂಗಳಪ್ಪಲಿಂಗಂಗಳಿರೆ, ಮುಂದೆ ಗಳ್ ಅಕ್ಕೆ, ಮೇಣ್ ಚತುರ್ಥಿಗಾದ ಗೆಕಾರಮಕ್ಕೆ, ಶಿಥಿಲಮಕ್ಕುಂ.)

ಪ್ರಯೋಗಂ.—ಱಿಱಾಂತಕ್ಕೆ—ಅಗಱ್ಗಳ್, ಎಸಱ್ಗಳ್ (see s. S. 19), ನೆಗಱ್ಗಳ್ ಎಂದೊಡೆ ಜಲಚರಂಗಳ್, ಉಗುಱ್ಗಳ್; ಅಗಱ್ಗೆ, ಎಸಱ್ಗೆ, ನೆಗಱ್ಗೆ ಉಗುಱ್ಗೆ.

ಆದಿ ದೀರ್ಘಮಾದೊಡಂ ಗುರುವಾದೊಡಂ ಶಿಥಿಲಮಿಲ್ಲ—ಬಾಸುಱ್ಗಳ್, ಇಕ್ಕುಱ್ಗಳ್, ಪೊಕ್ಕುಱ್ಗಳ್; ಬಾಸುಱ್ಗೆ, ಇಕ್ಕುಱ್ಗೆ, ಪೊಕ್ಕುಱ್ಗೆ.

ಕುಳಾಂತಕ್ಕೆ—ಮುಗುಳ್ಗಳ್, ಪುಗುಳ್ಗಳ್, ಅಮಳ್ಗಳ್, ಎಸಳ್ಗಳ್ ಎಂದೊಡೆ ಪೂವಿನವು; ಮುಗುಳ್ಗೆ, ಪುಗುಳ್ಗೆ, ಅಮಳ್ಗೆ, ಎಸಳ್ಗೆ.

ಪಿರಿದುಂ ಎಂಬುದಱಿಂ ಕೆಲವೆಡೆಯೊಳ್ ಶಿಥಿಲಮಿಲ್ಲದುದರ್ಕೆ—ಕುರುಳ್ಗಳ್, ಪುರುಳ್ಗಳ್, ಮರುಳ್ಗಳ್; ಕುರುಳ್ಗೆ ಇತ್ಯಾದಿ.

ರೇಫಾಂತಕ್ಕೆ—ಕನರ್ಗಳ್, ಕೊನರ್ಗಳ್, ತಳಿರ್ಗಳ್. ಅಲರ್ಗಳ್, ಎಲರ್ಗಳ್, ಉಗುರ್ಗಳ್, ಪೊಗರ್ಗಳ್, ಒಗರ್ಗಳ್, ಚಿಗುರ್ಗಳ್, ಬಿದಿರ್ಗಳ್,

ಕದಿರ್ಗಳ್, ಕುದಿರ್ಗಳ್, ತಮಿರ್ಗಳ್, ತಿಮಿರ್ಗಳ್, ತೆಮರ್ಗಳ್, ಬೆಮರ್ಗಳ್,

"ಬೆಮರ್ಗಳನೂದಿ ನುಣ್ದೊಡೆಗಳ ಪಿಡಿಕೈಸಿ. . . ." ||28||

ಎಸರ್ಗಳ್, ಮೊಸರ್ಗಳ್, ಒಸರ್ಗಳ್, ಉಸಿರ್ಗಳ್, ಪಸುರ್ಗಳ್, ನವಿರ್ಗಳ್; ಕನರ್ಗೆ, ನವಿರ್ಗೆ,

"ನಡೆದುದು ತಲೆನವಿರ್ಗೂಟಂ. . . ."ಇತ್ಯಾದಿ. ||29||

ೞಿಕಾರಾದೇಶರೇಫೆಗಂ ಶಿಥಿಲತ್ವಂ—ಅೞಿರ್ಗಳ್, ಅೞಿರ್ಗೆ

"ಪೆಂಪುಂ ಅೞಿರ್ಗೆ. . ." ||30||

ಕೆಸರ್ಗಳ್, ಬಸಿರ್ಗಳ್, ಪೆಸರ್ಗಳ್, ಹಗರ್ಗಳ್, ಎಡರ್ಗಳ್

"ಆವೆಡರ್ಗಳುಮಂ ತಿರ್ದುವೊಂದು ಕೋಡುಂ. . ." ||31|| ಇತ್ಯಾದಿ.

ಪಿರಿದುಮೆಂಬುದಱಿಂದೆ ಕಾದಲರ್ಗಳ್ ಎಂಬ ಪದನ ಆದಿ ದೀರ್ಘಮಾಗಿಯುಂ ಶಿಥಿಲಮಾಯ್ತು.

ಸೂತ್ರಂ. || ೪೩ ||

ಗ ದ ವ ಜಕಾರಮವಿದಿರಿರೆ,|
ಪದಮಧ್ಯಂ,ವಿಷಯಮಾಗನೇಕಾಕ್ಷರದೊಳ್ ||
ಪುದಿಯೆ,ಲಘೂಪಧೆ,ಕೆಲಕೆಲ- |
ವೊದವಿರ್ಕುಂ ರಾಂತಳಾಂತಮವು ಶಿಥಿಲತೆಯಂ || ೪೩ ||

Also in Compounds (ಸಮಾಸಂ) slack double consonants occur when ಗ, ದ, ವ, ಜ are preceded by words with short penultimate which terminate either in ರ್ or ಳ್.

ಪದಚ್ಛೇದಂ.—ಗದವಜಕಾರಂ ಅವು ಇದಿರ್ ಇರೆ, ಪದಮಧ್ಯಂ ವಿಷಯಂ ಆಗೆ, ಅನೇಕಾಕ್ಷರದೊಳ್ ಪುದಿಯೆ, ಲಘೂಪಧೆ ಕೆಲ ಕೆಲವು ಒದವಿ ಇರ್ಕುಂ ರಾಂತಳಾಂತಂ ಅವು ಶಿಥಿಲತೆಯಂ.

ಅನ್ವಯಂ.—ಪದಮಧ್ಯಂ ವಿಷಯಂ ಆಗೆ, ಗದವಜಕಾರಂ ಅವು ಇದಿರಿರೆ, ಅನೇಕಾಕ್ಷರದೊಳ್ ಪುದಿಯೆ, ಲಘೂಪಧೆ ಕೆಲ ಕೆಲವು ರಾಂತಳಾಂತಂ ಅವು ಶಿಥಿಲತೆಯಂ ಒದವಿರ್ಕುಂ.

ಟೀಕು.—ಪದಮಧ್ಯಂ=ಸಮಾಸಮಧ್ಯಂ; ವಿಷಯಂ=ಪ್ರಯೋಜನಂ; ಆಗೆ=ಆಗೆ; ಗದವಜಕಾರಂ=ಗಕಾರ, ದಕಾರ, ವಕಾರ, ಜಕಾರಂಗಳ್; ಅವು=ಅವು; ಇದಿರಿರೆ=ಮುಂದಿರೆ; ಅನೇಕಾಕ್ಷರದೊಳ್=ಅನೇಕಾಕ್ಷರದಲ್ಲಿ; ಪುದಿಯೆ=ಪ್ರವೇಶವಾಗೆ; ಲಘೂಪಧೆ=ಲಘುವೆ ಉಪಧೆಯಾದ; ಕೆಲ ಕೆಲವು=ಹಲವು ಕೆಲವು; ರಾಂತಳಾಂತಂ=ರೇಫಾಂತ ಳಕಾರಾಂತ ಶಬ್ದಂಗಳ್; ಅವು=ಅವು; ಶಿಥಿಲತೆಯಂ=ಶಿಥಿಲತ್ವವಂ; ಒದವಿರ್ಕುಂ=ಪ್ರಾಪ್ತಿಯಾಗಿರ್ಪುವು.

ವೃತ್ತಿ.—ಮುಂತೆ ಗದವಜಕಾರಂಗಳಿರೆ, ಪೆಱಗಣ ಮೈಯೊಳ್ ರಾಂತ ಳಾಂತಗಳ್, ಸಮಾಸಮಧ್ಯವೆ ವಿಷಯಮಾಗಿ, ಪಲವಕ್ಕರಂಗಳೊಳ್ ಕೂಡಿ ಲಘೂಪಧೆಯಾಗಿ ನಿಲೆ, ಆ ರಾಂತ ಳಾಂತಂಗಳ್ಗೆ ಶಿಥಿಲತ್ವಮಕ್ಕುಂ.

ಪ್ರಯೋಗಂ.—ರಾಂತಕ್ಕೆ—ಕುಳಿರ್ಗಾಳಿ; ಬೆಳರ್ಗೆಂಪು; ತಳಿರ್ದೋರಣಂ; ಅಲರ್ದೋರಣಂ; ಬಿದಿರ್ದಟ್ಟಿ; ಪೊಗರ್ವಟ್ಟೆ; ಬೆಮರ್ವನಿ; ಅಲರ್ಜೊಂಪಂ; ಕದಿರ್ಜೊನ್ನಂ. ಳಾಂತಕ್ಕೆ—ಮುಗುಳ್ಗಾಯ್; ಅಮಳ್ದೊಂಗಲ್; ಎಸಳ್ವಸೆ; ಅಮಳ್ಜಂತ್ರಂ.

ಸೂತ್ರಂ. || ೪೪ ||

Further in conjugating verbs which end in ೞ್, ಳ್ or ರ್ and the first syllable of which is short, slack double consonants occur, viz. before the affixes ದ, ದಪ, ವ, ಗೆ, ಗುಂ.

ಪುಗೆ ದ ದ ಪ ವ ಕಾರಂ, ವಿಧಿ- |
ಯ ಗೆಕಾರಂ ವರ್ತಮಾನಕಾಲದ ಗುಂ ಧಾ- ||
ತುಗೆ ೞಿಕುಳರೇಫಾಂತ- |
ಕ್ಕೊಗೆಗುಂ ಶಿಥಿಲತ್ವಮಗುರುಪೂರ್ವಸ್ಥಿತಿಯಿಂ. || ೫೪ ||

ಪದಚ್ಛೇದಂ.—ಪುಗೆ ದದಪವಕಾರಂ ವಿಧಿಯ ಗೆಕಾರಂ ವರ್ತಮಾನಕಾಲದ ಗುಂ ಧಾತುಗೆ, ೞಿಕುಳರೇಫಾಂತಕ್ಕೆ ಒಗೆಗುಂ ಶಿಥಿಲತ್ವಂ ಅಗುರುಪೂರ್ವಸ್ಥಿತಿಯಿಂ.

ಅನ್ವಯಂ.—ಅಗುರುಪೂರ್ವಸ್ಥಿತಿಯಿಂ ೞಿಕುಳರೇಫಾಂತಕ್ಕೆ, ಧಾತುಗೆ ದದಪವಕಾರಂ ವಿಧಿಯ ಗೆಕಾರಂ ವರ್ತಮಾನಕಾಲದ ಗುಂ ಪುಗೆ, ಶಿಥಿಲತ್ವಂ ಒಗೆಗುಂ.

ಟೀಕು.—ಅಗುರುಪೂರ್ವಸ್ಥಿತಿಯಿಂ = ಲಘು ಮೊದಲಾಗಿರ್ಪುದಱಿಂದೆ; ೞಿಕುಳರೇಫಾಂತಕ್ಕೆ = ೞಾಂತ ಕುಳಾಂತ ರೇಫಾಂತಗಳಾದ; ಧಾತುಗೆ = ಧಾತುಗಳ್ಗೆ; ದದಪವಕಾರಂ = ದಕಾರ ದಪಕಾರ ವಕಾರಂಗಳ್; ವಿಧಿಯ = ವಿಧ್ಯರ್ಥದ; ಗೆಕಾರಂ = ಗೆ ಎಂಬಕ್ಷರಂ; ವರ್ತಮಾನಕಾಲದ = ವರ್ತಮಾನಕಾಲಾರ್ಥದ; ಗುಂ=ಗುಂಕಾರಂ; ಪುಗೆ = ಪ್ರವೇಶವಾಗೆ; ಶಿಥಿಲತ್ವಂ = ಶಿಥಿಲಮಪ್ಪತನಂ; ಒಗೆಗುಂ = ಹುಟ್ಟುಗುಂ.

ವೃತ್ತಿ.—ಹ್ರಸ್ವಾದಿಗಳಪ್ಪ ೞಿಕುಳರೇಫಾಂತಂಗಳಪ್ಪ ಅನೇಕಾಕ್ಷರಿ ಧಾತುಗಳ್ಗೆ ಭೂತವರ್ತಮಾನಭವಿಷ್ಯಂತಿಗಾದ ದ ದಪ ವ ಎಂಬಿವು ಪರಮಾದೊಡಂ, ಪ್ರಥಮಪುರುಷದ ವಿಧ್ಯರ್ಥದೊಳಾದ ಗೆ ಎಂಬುದು ಪರಮಾದೊಡಂ, ಪ್ರಥಮಪುರುಷದ ವರ್ತಮಾನಭವಿಷ್ಯಂತಿಗಾದ ಗುಂ ಎಂಬುದು ಪರಮಾದೊಡಂ, ಕ್ರಿಯಾಪದದೊಳ್ ಶಿಥಿಲತೆಯನ್ನೈದುವುವು.

ಪ್ರಯೋಗಂ.—ಱೞಾಂತಂಗಳ ದ ದಪ ವಂಗಳ್ಗೆ—ಜಗುೞ್ದಿಂ, ಅಗುೞ್ದಿಂ, ಪೊಗೞ್ದಿಂ, ತೆಗೞ್ದಿಂ, ನೆಗೞ್ದಿಂ, ತುಮುೞ್ದಿಂ, ಜಗುೞ್ದಿಪಂ ಇತ್ಯಾದಿ; ಜಗುೞ್ವಿಂ ಇತ್ಯಾದಿ.

ಗೆಕಾರಕ್ಕೆ—ತೆಗೞ್ಗೆ, ನೆಗೞ್ಗೆ, ಪೊಗೞ್ಗೆ ಎಂಬಂತಱಿವುದು.

ಗುಂ ಎಂಬುದರ್ಕೆ—ತೆಗೞ್ಗುಂ, ನೆಗೞ್ಗುಂ, ಪೊಗೞ್ಗುಂ ಎಂಬಂತುೞಿವುದರ್ಕೆಲ್ಲಂ ಪತ್ತಿಸುಗುಂ.

ಕುಳಾಂತಕ್ಕೆ—ನುಸುಳ್ದಂ, ಮಸುಳ್ದಂ, ಮಗುಳ್ದಂ, ಮಸುಳ್ದಪಂ ಇತ್ಯಾದಿ; ಮಸುಳ್ವಂ ಇತ್ಯಾದಿ.

ಗೆಕಾರಕ್ಕೆ—ನುಸುಳ್ಗೆ, ಮಸುಳ್ಗೆ ಎಂಬಂತೆ.

ಗುಂ ಎಂಬುದರ್ಕೆ—ನುಸುಳ್ಗುಂ, ಮಸುಳ್ಗುಂ ಎಂಬಂತೆ ಮಾೞ್ಪುದು.

ತೆರಳ್ದಂ, ಪೊರಳ್ದಂ ಎಂಬಂತೆ ಕೆಲಕೆಲವೆಡೆಯೊಳ್ ಶಿಥಿಲತ್ವಮಿಲ್ಲ.

ರೇಫಾಂತಕ್ಕೆ—ತೊಡರ್ದಂ, ತಳರ್ದಂ, ಕೆಳರ್ದಂ, ಎಡರ್ದಂ, ಅಳರ್ದಂ, ಅದಿರ್ದಂ, ಬಿದಿರ್ದಂ, ಅಮರ್ದಂ, ನಿಮಿರ್ದಂ; ನಿಮಿರ್ದಪಂ; ನಿಮಿರ್ವನೆಂಬಂತೆಲ್ಲಕ್ಕಂ ಪತ್ತಿಸುವುದು.

ಗೆಕಾರಕ್ಕೆ—ತೊಡರ್ಗೆ, ಅದಿರ್ಗೆ, ಬಿದಿರ್ಗೆ, ಎಡರ್ಗೆ ಎಂಬಂತೆ.

ಗುಂ ಎಂಬುದರ್ಕೆ—ಅಮರ್ಗುಂ, ನಿಮಿರ್ಗುಂ ಎಂಬಂತೆ.

ದೀರ್ಘಾದಿಗೆ ಶಿಥಿಲತ್ವಮಿಲ್ಲ—ಆರ್ದಂ, ಸಾರ್ದಂ, ಪಾರ್ದಂ, ಸೋರ್ದಂ, ನೇರ್ದಮೆಂಬಂತೆ.

ಸೂತ್ರಂ. ‖ ೪೫ ‖

Slack double consonants also inherent in some few words.

ಬರ್ದಿಲಂ ಸಗ್ಗಕ್ಕೆ ಪೆಸರ್- |
ಗರ್ದುಗೆಸೆವಮರ್ದುವಳ್ಳಿ ಕಂಪಲರ್ದುದೆನ- ‖
ಲ್ಕೆರ್ದೆವಾಯದಿರ್ಮುತ್ತೆ ಪೊದ- |
ೞ್ದೆರ್ದೆಯೆಂಬಿವು ಸಹಜಶಿಥಿಲವೃತ್ತಿಯನಾಳ್ಗುಂ. ‖ ೪೫ ‖

ಪದಚ್ಛೇದಂ.— ಬರ್ದಿಲಂ ಸಗ್ಗಕ್ಕೆ ಪೆಸರ್, ಗರ್ದುಗು, ಎಸೆವ ಅಮರ್ದುವಳ್ಳಿ, ಕಂಪಲರ್ದುದು ಎನಲ್ಕೆ, ಎರ್ದೆವಾಯ್, ಅದಿರ್ಮುತ್ತೆ, ಪೊದೞ್ದೆರ್ದೆ ಎಂಬಿವು ಸಹಜಶಿಥಿಲ ವೃತ್ತಿಯಂ ಆಳ್ಗುಂ.

ಟೀಕು, ಯಥಾನ್ವಯಂ. — ಬರ್ದಿಲಂ = ಬರ್ದಿಲಮೆಂದು; ಸಗ್ಗಕ್ಕೆ = ಸ್ವರ್ಗಕ್ಕೆ; ಪೆಸರ್ = ಹೆಸರ್; ಗರ್ದುಗು = ಗರ್ದುಗು ಎಂದು; ಎಸೆವ = ಒಪ್ಪುವ; ಅಮರ್ದುವಳ್ಳಿ = ಅಮರ್ದುವಳ್ಳಿಯೆಂದು; ಕಂಪಲರ್ದುದು = ಕಂಪಲರ್ದುದು ಎಂದು; ಎನಲ್ಕೆ = ಪೇಳಲ್ಕೆ; ಎರ್ದೆವಾಯ್ = ಎರ್ದೆವಾಯೆಂದು; ಅದಿರ್ಮುತ್ತೆ = ಅದಿರ್ಮುತ್ತೆಯೆಂದು; ಪೊದಪ್ಪಿ = ಪ್ರಸಿದ್ಧಿವಡೆದ; ಎರ್ದೆ = ಎರ್ದೆಯೆಂದು; ಎಂಬಿವು = ಎಂಬೀ ಶಬ್ದಂಗಳ್; ಸಹಜಶಿಥಿಲವೃತ್ತಿಯಂ = ಸಹಜವಾದ ಶಿಥಿಲದ ವೃತ್ತಿಯಂ; ಆಳ್ಗುಂ = ತಾಳ್ವುವು.

ವೃತ್ತಿ. — ಇದರ್ಕಿದೆ ವೃತ್ತಿ.

ಸೂತ್ರಂ. || ೪೭ ||

Elision (ಲೋಪ) of the last letter (ವು) in certain nouns.

ನರವುಂ ನೆರವುಂ ದೇವರ |
ಬರವುಂ ತೆರವುಂ ನೆಗೞ್ತೆಯೆೞ್ತೆರವುಂ ಸಂ- ||
ಚರಿಸುವ ನೊಳವುಂ ತಾವರೆ- |
ಬರ ಮತದಿಂದಂತ್ಯವರ್ಣಲೋಪಮನಾಳ್ಗುಂ. || ೫೭ ||

ಪದಚ್ಛೇದಂ. — ನರವುಂ, ನೆರವುಂ, ದೇವರ ಬರವುಂ, ತೆರವುಂ, ನೆಗೞ್ತೆಯ ಎೞ್ತೆರವುಂ, ಸಂಚರಿಸುವ ನೊಳವುಂ ತಾಂ ಅರೆಬರ ಮತದಿಂದೆ ಅಂತ್ಯವರ್ಣಲೋಪಮಂ ಆಳ್ಗುಂ..

ಟೀಕು, ಯಥಾನ್ವಯಂ. — ನರವುಂ = ನರವು ಎಂಬ ಶಬ್ದಮುಂ; ನೆರವುಂ = ನೆರವು ಎಂಬ ಶಬ್ದಮುಂ; ದೇವರ ಬರವುಂ = ದೇವರ ಬರವು ಎಂಬ ಶಬ್ದಮುಂ; ತೆರವುಂ = ತೆರವು ಎಂಬ ಶಬ್ದಮುಂ; ನೆಗೞ್ತೆಯ = ಪ್ರಸಿದ್ಧಿಯ; ಎೞ್ತೆರವುಂ = ಎೞ್ತೆರವು ಎಂಬ ಶಬ್ದಮುಂ; ಸಂಚರಿಸುವ ನೊಳವುಂ = ಸಂಚಾರವ ಮಾೞ್ಪ ನೊಳವು ಎಂಬ ಶಬ್ದಮುಂ; ತಾಂ = ತಾಂ; ಅರೆಬರ = ಕೆಲಂಬರ; ಮತದಿಂದೆ = ಮತದಿಂದೆ; ಅಂತ್ಯ = ಕಡೆಯಣ; ವರ್ಣ = ಅಕ್ಷರದ; ಲೋಪಮಂ = ಅದರ್ಶನಮಂ; ಆಳ್ಗುಂ = ತಾಳ್ಗುಂ.

ವೃತ್ತಿ. — ಈ ಪದಂಗಳ ಕಡೆಯ ವಕಾರಕ್ಕೆ ವಿಕಲ್ಪದಿಂ ಲೋಪಮುಂಟು.

ಪ್ರಯೋಗಂ. — ನರವು = ನರಂ; ನೆರಂ, ಬರಂ, ಎೞ್ತೆರಂ, ನೊಳಂ ಎಂದ ಱಿವುದು.

ಸೂತ್ರಂ. || ೪೭ ||

Elision of the last letter in ಅಲ್ಲದೆ when it is emphasizing, and its non-elision in ಅಲ್ಲದು (ಅಲ್ತು) when it is denying (or, with ಎ, questioning).

ಪುದಿಗುಂ ನಿರ್ಧಾರಣದ- |
ಲ್ಲದೆಯೆಂಬ ದೇಕಾರದೆಡೆಗೆ ಪಿರಿದುಂ ಲೋಪಂ ||
ಪುದಿಯದು ಲೋಪಂ ಪ್ರತಿಷೇ- |
ಧದೊಳಲ್ಲದುವೆಂಬ ಪದಮನಲ್ತೆನಲಕ್ಕುಂ. || ೪೭ ||

ಪದಚ್ಛೇದಂ.— ಪುದಿಗುಂ ನಿರ್ಧಾರಣದ ಅಲ್ಲದೆ ಎಂಬ ದೇಕಾರದ ಎಡೆಗೆ ಪಿರಿದುಂ ಲೋಪಂ; ಪುದಿಯದು ಲೋಪಂ ಪ್ರತಿಷೇಧದೊಳ್; ಅಲ್ಲದು ಎಂಬ ಪದಮುಂ ಅಲ್ತು ಎನಲ್ ಅಕ್ಕುಂ.

ಅನ್ವಯಂ.— ನಿರ್ಧಾರಣದ ಅಲ್ಲದೆ ಎಂಬ ದೇಕಾರದ ಎಡೆಗೆ ಪಿರಿದುಂ ಲೋಪಂ ಪುದಿಗುಂ; ಪ್ರತಿಷೇಧದೊಳ್ ಲೋಪಂ ಪುದಿಯದು; ಅಲ್ಲದು ಎಂಬ ಪದಮುಂ ಅಲ್ತು ಎನಲ್ ಅಕ್ಕುಂ.

ಟೀಕು.— ನಿರ್ಧಾರಣದ = ನಿರ್ಧಾರಣಾರ್ಥದ; ಅಲ್ಲದೆಯೆಂಬ ದೇಕಾರದ = ಅಲ್ಲದೆ ಎಂದು ಪೇಳ್ವ ದೇಕಾರದ; ಎಡೆಗೆ = ಸ್ಥಾನಕ್ಕೆ; ಪಿರಿದುಂ = ವಿಶೇಷವಾಗಿಯುಂ; ಲೋಪಂ = ಅದರ್ಶನಂ; ಪುದಿಗುಂ = ಪ್ರವೇಶವಾಗುವುದು; ಪ್ರತಿಷೇಧದೊಳ್ = ಪ್ರತಿಷೇಧದಲ್ಲಿ; ಲೋಪಂ = ಅದರ್ಶನಂ; ಪುದಿಯದು = ಪ್ರವೇಶವಾಗದು; ಅಲ್ಲದುವೆಂಬ ಪದಮುಂ = ಅಲ್ಲದು ಎಂದು ಪೇಳ್ವ ಪದವಂ; ಅಲ್ತೆನಲ್ = ಅಲ್ತು ಎಂದು ಹೇಳಲ್; ಅಕ್ಕುಂ = ಅಪ್ಪುದು.

ವೃತ್ತಿ.— ನಿರ್ಧಾರಣಾರ್ಥಮಂ ಪೇಳ್ವ ಅಲ್ಲದೆ ಎಂಬ ಶಬ್ದದ ದೇಕಾರಕ್ಕೆ ವಿಕಲ್ಪದಿಂ ಲೋಪಮುಂಟು; ಅಲ್ಲದು ಎಂಬ ಪ್ರತಿಷೇಧದೊಳ್ ದುಕಾರಕ್ಕೆ ಲೋಪಮಾಗಲೆನಲಾಗದು. ಅಲ್ಲದು ಎಂಬುದಂ ಅಲ್ತು ಎಂದು ವಿಕಲ್ಪದಿನೆನಲಕ್ಕುಂ, ಅದರ್ಕೆ ಲಿಂಗವಚನವ್ಯವಸ್ಥೆಯಿಲ್ಲ.

ಪ್ರಯೋಗಂ.— ದೇಕಾರಲೋಪಕ್ಕೆ— ಗೊರವನಲ್ಲದೆ ಪೊಗೞೆನೆಂಬಲ್ಲಿ
"ಗೊರವನಲ್ಲ ಪೊಗೞೆಂ . . ." || 32 ||
ಎಂದುಂಟು.

ಪ್ರತಿಷೇಧದೊಳ್ ಲಿಂಗತ್ರಯಕ್ಕೆ— ಅವನಲ್ತು! ಅವಳಲ್ತು! ಅದಲ್ತು!

ವಚನತ್ರಯಕ್ಕೆ—". . . . . ಓರ್ವನೆ ಗಂಡನಲ್ತೆ ಜಗತೀತಳದೊಳ್." || 33 ||

". . . . ಇರ್ಬರೆ ತೋಳ್ಗಳಲ್ತೆ ನೃಪತಿಗೆ ರಣದೊಳ್" || 34 ||

"ತೇಜೋನಿಧಿಕವಿನಿಳಯದೊಳೀಪತ್ತ್ರಭರ್ ಮಹಾಪ್ರಭರಲ್ತೆ" || 35 ||

ಸೂತ್ರಂ. || ೪೮ ||

The letters ಯ, ರ, ಲ, ಣ, ನ, ಳ, ಱ, ೞ very often occur without the vowel ಅ (as ಯ್, ರ್, etc.) at the end of words.

ಯ ರ ಲ ಣ ನ ಳ ಱ ೞ ವರ್ಣೋ- |
ತ್ಕರಮೆ ವಲಂ ಪದದ ಕಡೆಯೊಳಸ್ವರವಿಧಿಯಂ ||
ಪಿರಿದುಂ ತಾಳ್ದುಗುಮಿವನಱಿ- |
ವರೆ ಕನ್ನಡಗಬ್ಬದೊಳ್ ತೊಡಂಕದೆ ಸಲ್ವರ್. || ೫೮ ||

ಪದಚ್ಛೇದಂ.—ಯ ರ ಲ ಣ ನ ಳ ಱ ೞ ವರ್ಣೋತ್ಕರಮೆ ವಲಂ ಪದದ ಕಡೆಯೊಳ್ ಅಸ್ವರ ವಿಧಿಯಂ ಪಿರಿದುಂ ತಾಳ್ದುಗುಂ; ಇವಂ ಅಱಿವರೆ ಕನ್ನಡಗಬ್ಬದೊಳ್ ತೊಡಂಕದೆ ಸಲ್ವರ್.

ಟೀಕು, ಯಥಾನ್ವಯಂ.—ಯ ರ ಲ ಣ ನ ಳ ಱ ೞ = ಯಕಾರ, ರೇಫ, ಲಕಾರ, ಣಕಾರ, ನಕಾರ, ಳಕಾರ, ಱಕಾರ, ೞಕಾರಂಗಳೆಂಬ; ವರ್ಣ = ಅಕ್ಷರಂಗಳ; ಉತ್ಕರಮೆ = ಹೆಚ್ಚಿಗೆಯೆ; ವಲಂ = ನಿಶ್ಚಯವಾಗಿ; ಪದದ = ಪದಂಗಳ; ಕಡೆಯೊಳ್ = ಅಂತ್ಯದಲ್ಲಿ; ಅಸ್ವರ ವಿಧಿಯಂ = ವ್ಯಂಜನವಿಧಿಯಂ; ಪಿರಿದುಂ = ಬಹುಳವಾಗಿಯುಂ; ತಾಳ್ದುಗುಂ = ಧರಿಸುವುದು; ಇವಂ = ಈ ವ್ಯಂಜನಾಂತಶಬ್ದಂಗಳಂ; ಅಱಿವರೆ = ತಿಳಿವರೆ; ಕನ್ನಡಗಬ್ಬದೊಳ್ = ಕರ್ಣಾಟಕ ಕಾವ್ಯಂಗಳಲ್ಲಿ; ತೊಡಂಕದೆ = ತೊಡಕಿಲ್ಲದೆ; ಸಲ್ವರ್ = ಸಲುವಳಿಯಾಗಿರ್ಪರ್.

ವೃತ್ತಿ.—ಯಕಾರ ರೇಫ ಲಕಾರ ಣಕಾರ ನಕಾರ ಳಕಾರ ಱಕಾರ ೞಕಾರಂಗಳ್ ಕನ್ನಡದೊಳ್ ಪಿರಿದುಂ ವ್ಯಂಜನಾಂತಂಗಳಾಗಿ ಪದಂಗಳಾಗಿರ್ಪುವು; ಇವನಱಿದು ಪ್ರಯೋಗಿಸುವರ್ಗೆ ಕವಿತ್ವದೊಳ್ತೊಡಂಕಿಲ್ಲ.

ಪ್ರಯೋಗಂ.—ಯಕಾರಕ್ಕೆ—ಕೆಯ್, ಮೆಯ್, ಜೆಯ್, ನೆಯ್, ಕೊಯ್, ಪೊಯ್, ಪಾಯ್, ಸಾಯ್, ಮಾಯ್, ಬಾಯ್, ಬಯ್.

ರೇಫೆಗೆ—ನಾರ್, ಬೇರ್, ತೇರ್, ಒರ್, ತೆಮರ್, ಬೆಮರ್, ಉಸಿರ್, ಮೊಸರ್, ತಳಿರ್, ಕುಳಿರ್.

ಲಕಾರಕ್ಕೆ—ಪಾಲ್, ಕೇಲ್, ಕೋಲ್, ಸಾಲ್, ನೂಲ್, ಕಲ್, ನೆಲ್, ಬಿಲ್, ಕವಲ್, ಅವಲ್, ತೆಂದಲ್.

ಣಕಾರಕ್ಕೆ—ಪವಣ್, ನಾಣ್, ಜಾಣ್, ಮಾಣ್, ಗೇಣ್, ಕಣ್, ಮಣ್, ಪೂಣ್, ಪುಣ್.

ನಕಾರಕ್ಕೆ—ಪೊನ್, ಬೆನ್, ಏನ್, ಜೇನ್, ಸೀನ್, ಈನ್, ಬಾನ್, ಪೇನ್.

ಳಕಾರಕ್ಕೆ—ಒಳ್, ಬೆಳ್, ತಳ್, ಕಳ್, ಮಿದುಳ್, ಕರುಳ್, ಕುರುಳ್, ತಿರುಳ್, ಮುಗುಳ್.

ಱಕಾರಕ್ಕೆ—ಎಱ್, ಬಸಿಱ್, ಕೆಸಱ್, ಪೆಸಱ್, ನೇಸಱ್, ಎಬ್ಬಿಱ್, ಪೊಱವಾಱ್.

ಱೞಿಕ್ಕೆ—ವಾೞ್, ಪೋೞ್, ಬೀೞ್, ತೇೞ್, ಬಾೞ್, ಎಸೞ್, ಅಗೞ್, ನೆಗೞ್, ಪೊಗೞ್.

ಪಿರಿದುಮೆಂಬುದಱಿಂ ಕೆಲವಱೊಳ್ವ್ಯಂಜನಮಿಲ್ಲ, ಅವಾವೆಂದೊಡೆ—ಕರು, ತಣು, ಅನು, ಕಱು, ತುಱು, ಪುೞು—ಇವು ಮೊದಲಾದುವು.

ಸೂತ್ರಂ[1]. || ೪೯ ||

ಎರಡುಂ ಪಲವುಂ ವರ್ಣಂ |
ಪರಸ್ಪರಂ ಕೂಡುವಂದಮದು ಸಂಧಿ ವಲಂ ||
ಸ್ವರರಹಿತವ್ಯಂಜನಮವು |
ಪರವರ್ಣಮನೈದುತಿರ್ಪುವಾ ಸಂಹಿತೆಯೊಳ್. || ೫೯ ||

The joining of two or more letters to each other is called (euphonic) combination (ಸಂಧಿ). Consonants without any vowel enter the following letter.

---

1) ಸೂ. ಪರಸ್ಪರ ಸನ್ನಿಕರ್ಷಃ ಸಂಹಿತಾ || ಭಾ. ಭೂ. 17. ||
(ವರ್ಣಾಕ್ಷರಗಳು ಒಂದರಲ್ಲೊಂದು ಕೂಡುವುದೇ ಸಂಹಿತೆ.)

ಪದಚ್ಛೇದಂ.— ಎರಡುಂ ಪಲವುಂ ವರ್ಣಂ ಪರಸ್ಪರಂ ಕೂಡುವ ಅಂದಂ ಅದು ಸಂಧಿ, ವಲಂ! ಸ್ವರರಹಿತ ವ್ಯಂಜನಂ ಅವು ಪರವರ್ಣಮುಂ ಐದುತೆ ಇರ್ಪುವು ಆ ಸಂಹಿತೆಯೊಳ್.

ಅನ್ವಯಂ.— ಎರಡುಂ ಪಲವುಂ ವರ್ಣಂ ಪರಸ್ಪರಂ ಕೂಡುವಂದಂ ಅದು ಸಂಧಿ, ವಲಂ! ಆ ಸಂಹಿತೆಯೊಳ್ ಸ್ವರರಹಿತವ್ಯಂಜನಂ ಅವು ಪರವರ್ಣಮುಂ ಐದುತೆ ಇರ್ಪುವು.

ಟೀಕು.— ಎರಡುಂ = ಎರಡಕ್ಷರಂಗಳುಂ; ಪಲವುಂ = ಪಲವಕ್ಷರಂಗಳುಂ; ಪರಸ್ಪರಂ = ಅನ್ಯೋನ್ಯವಾಗಿ; ಕೂಡುವಂದಂ = ಸಂಯೋಗವಾಗುವಂದಂ; ಅದು = ಅದು; ಸಂಧಿ = ಸಂಧಿಯೆನಿಪುದು; ವಲಂ = ನಿಶ್ಚಯಂ; ಆ ಸಂಹಿತೆಯೊಳ್ = ಆ ಸಂಧಿಯಲ್ಲಿ; ಸ್ವರರಹಿತ = ಸ್ವರಹೀನವಾದ; ವ್ಯಂಜನಂ = ವ್ಯಂಜನಾಕ್ಷರಂ; ಅವು = ಅವು; ಪರವರ್ಣಮುಂ = ಮುಂದಣಕ್ಷರವಂ; ಅಯ್ದುತೆ ಇರ್ಪುವು = ಕೂಡುತ್ತಿರ್ಪುವು.

ವೃತ್ತಿ.— ಎರಡಕ್ಕರಂ ಮೇಣ್ ಪಲವಕ್ಕರಂ ತಮ್ಮೊಳನ್ಯೋನ್ಯಮಾಗಿ ಕೂಡುವುದು ಸಂಧಿಯೆನಿಸುಗುಂ. ಆ ಸಂಧಿಯಲ್ಲಿ ಸ್ವರರಹಿತವ್ಯಂಜನಂಗಳ್ ಮುಂದಣಕ್ಕರಮನೈದುವುವು.

ಪ್ರಯೋಗಂ.— ಸ್ವರಯುಕ್ತವ್ಯಂಜನಕ್ಕೆ —
ಕೂರ್ತು + ಈವಂ = ಕೂರ್ತೀವಂ. ಎನ್ನ + ಅರಸಂ = ಎನ್ನರಸಂ. ಮುನ್ನ + ಇಱಿವಂ = ಮುನ್ನಿಱಿವಂ.

ಸ್ವರರಹಿತವ್ಯಂಜನಕ್ಕೆ —
ಜಾಣ್ + ಉಂಟು = ಜಾಣುಂಟು. ಕುರುಳ್ + ಕೊಂಕಾಯ್ತು = ಕುರುಳ್ಕೊಂಕಾಯ್ತು.

ಸೂತ್ರಂ. || ೫೦ ||

The two kinds of euphonic combinations, viz. Internal (the joining of a Nominal base or Verbal theme and Suffixes) and Final (the joining of a word to the end of another.)

ಪದಮಧ್ಯಂ ಪದದಂತ್ಯಂ |
ವಿದಗ್ಧರಿಂ ಸಂಧಿವಿಷಯಮೆರಡಕ್ಕುಮಿಳಾ- ||
ವಿದಿತಪ್ರಕೃತಿಪ್ರತ್ಯಯ |
ಮೊದವಿದ ಪದಯುಗದ ಬೆರಕೆ ಬೇಡಿರ್ದುದಱಿಂ. ||೬೦||

ಪದಚ್ಛೇದಂ. — ಪದಮಧ್ಯಂ ಪದದ ಅಂತ್ಯಂ ವಿದಗ್ಧರಿಂ ಸಂಧಿವಿಷಯಂ ಎರಡು ಅಕ್ಕುಂ; ಇಳಾವಿದಿತಪ್ರಕೃತಿಪ್ರತ್ಯಯಂ, ಒದವಿದ ಪದಯುಗದ ಬೆರಕೆ ಬೇಡಿದುದಱಿಂ.

ಅನ್ವಯಂ. — ಇಳಾವಿದಿತಪ್ರಕೃತಿಪ್ರತ್ಯಯಂ ಒದವಿದ ಪದಯುಗದ ಬೆರಕೆ ಬೇಡಿದುದಱಿಂ ಪದಮಧ್ಯಂ ಪದದಂತ್ಯಂ ವಿದಗ್ಧರಿಂ ಸಂಧಿವಿಷಯಂ ಎರಡು ಅಕ್ಕುಂ.

ಟೀಕು. — ಇಳಾವಿದಿತಪ್ರಕೃತಿಪ್ರತ್ಯಯಂ = ಭೂಮಿಯಲ್ಲಿ ಪ್ರಸಿದ್ಧವಾದ ಪ್ರಕೃತಿ ಪ್ರತ್ಯಯಂಗಳ್; ಒದವಿದ ಪದಯುಗದ = ಪ್ರಾಪ್ತಿಸಿದ ಪದಂಗಳೆರಡಱ; ಬೆರಕೆ = ಸಂಯೋಗಂ; ಬೇಡಿದುದಱಿಂ = ಬೇಕಾಗಿದ್ದುದಱಿಂದೆ; ಪದಮಧ್ಯಂ = ಪದಮಧ್ಯಸಂಧಿಯೆಂದು; ಪದದಂತ್ಯಂ = ಪದಾಂತ್ಯಸಂಧಿಯೆಂದು; ವಿದಗ್ಧರಿಂ = ವಿದ್ವಾಂಸರಿಂದೆ; ಸಂಧಿವಿಷಯಂ = ಸಂಧಿ ಪ್ರಯೋಜನಂ; ಎರಡು = ಎರಡು ತೆಱಂ; ಅಕ್ಕುಂ = ಅಪ್ಪುದು.

ವಿಚಾರಂ. — ಪ್ರಕೃತಿಪ್ರತ್ಯಯಂಗಳ್ ಕೂಡುವುದು ಪದಮಧ್ಯಸಂಧಿಯೆನಿಪ್ಪುದು; ಪದಂಗಳೆರಡು ಕೂಡುವಲ್ಲಿ ಮೊದಲ ಪದದ ಕಡೆಯೊಳಪ್ಪುದು ಪದಾಂತ್ಯಸಂಧಿಯೆನಿಪ್ಪುದು.

ವೃತ್ತಿ. — ಪ್ರಕೃತಿಪ್ರತ್ಯಯಂಗೆಳ ಮಧ್ಯಮುಂ, ಪೂರ್ವಪದದ ಕಡೆಯುಂ, ಪರಪದದ ಮೊದಲುಂ ಕೂಡೆ, ಪದಮಧ್ಯಸಂಧಿ ಪದಾಂತ್ಯಸಂಧಿ ಎಂದು, ಸಂಧಿವಿಷಯಮಿರ್ತೆಱಂ.

ಪ್ರಯೋಗಂ. — ಪದಮಧ್ಯಸಂಧಿಗೆ —

ನಾಮವಿಭಕ್ತಿಯಲ್ಲಿ — ಮಾತು + ಅಮ್ = ಮಾತಂ. ಮಾತು + ಇಮ್ = ಮಾತಿಂ. ಮಾತು + ಇಂಗೆ = ಮಾತಿಂಗೆ. ಮಾತಿನ + ಅತ್ತಣಿಂ = ಮಾತಿನತ್ತಣಿಂ. ಮಾತು + ಇನ = ಮಾತಿನ. ಮಾತಿನ + ಒಳ್ = ಮಾತಿನೊಳ್.

ಧಾತುವಿಭಕ್ತಿಯಲ್ಲಿ (ಆಖ್ಯಾತ) — ನುಡಿದ + ಅಮ್ = ನುಡಿದಂ. ನುಡಿದ + ಅರ್ = ನುಡಿದರ್. ನುಡಿದ + ಅಯ್ = ನುಡಿದಯ್. ನುಡಿದ + ಇರ್ = ನುಡಿದಿರ್. ನುಡಿದ + ಎನ್ = ನುಡಿದೆನ್. ನುಡಿದ + ಎವು = ನುಡಿದೆವು.

ಪದಾಂತ್ಯಸಂಧಿಗೆ —

ನಾಮಪದಂಗಳಲ್ಲಿ — ಅವನ + ಆಳ್ತನಂ = ಅವನಾಳ್ತನಂ. ಕಾಮನ + ಅಂಪಲೆ = ಕಾಮನಂಪಲೆ.

ಕ್ರಿಯಾಪದಂ ಬೆರಕೆಯಾದಲ್ಲಿ — ನುಡಿದರ್ + ಅವರ್ = ನುಡಿದರವರ್. ಬೆಸಸಿದೆವು+ಒಳ್ಳಂ=ಬೆಸಸಿದೆವೊಳ್ಳಂ.

ಇಂತಱಿವುದು.

ಸೂತ್ರಂ. || ೫೧ ||

The section on Letters finished.

ಇದು ಪೂರ್ವಪ್ರಕರಣಮಿಂ- |
ತಿದಱೊಳ್ ಸಾಕಲ್ಯಸಂಜ್ಞೆ ಪೇೞಿವೆನಲ್ವೇ- ||
ಡುದಿತಪ್ರಕರಣಗಣಸೂ- |
ತ್ರದಿಷ್ಟದಿಂ ಸಂಜ್ಞೆಯೊಡನೆ ಪೇೞಿಲ್ಪಡೆಗುಂ. || ೬೧ ||

ಪದಚ್ಛೇದಂ. — ಇದು ಪೂರ್ವಪ್ರಕರಣಂ. ಇಂತು ಇದಱೊಳ್ ಸಾಕಲ್ಯಸಂಜ್ಞೆ ಪೇೞಿವು ಎನಲ್ ಬೇಡ! ಉದಿತಪ್ರಕರಣಗಣಸೂತ್ರದ ಇಷ್ಟದಿಂ ಸಂಜ್ಞೆಯೊಡನೆ ಪೇೞಿಲ್ ಪಡೆಗುಂ.

ಟೀಕು, ಯಥಾನ್ವಯಂ. — ಇದು = ಇದು; ಪೂರ್ವಪ್ರಕರಣಂ = ಮೊದಲ ಪ್ರಕರಣಂ; ಇಂತು = ಹೀಂಗೆ; ಇದಱೊಳ್ = ಈ ಪ್ರಕರಣದಲ್ಲಿ; ಸಾಕಲ್ಯಸಂಜ್ಞೆ = ಸಮಸ್ತ ಸಂಜ್ಞೆಗಳ್; ಪೇೞಿವೆನಲ್ವೇಡ = ಹೇಳಿತಿಲ್ಲೆನ ಬೇಡ; ಉದಿತಪ್ರಕರಣಗಣಸೂತ್ರದ = ಉಂಟಾಗಲ್ಪಟ್ಟ ಪ್ರಕರಣದ ಸಮೂಹದ ಸೂತ್ರಂಗಳ; ಇಷ್ಟದಿಂ = ಇಷ್ಟದಿಂದೆ; ಸಂಜ್ಞೆಯೊಡನೆ = ಸಂಜ್ಞೆಯ ಕೂಡೆ; ಪೇೞಿಲ್ಪಡೆಗುಂ = ಹೇಳಲ್ಪಟ್ಟವು.

ವೃತ್ತಿ. — ಸಂಜ್ಞಾಪ್ರಕರಣಂ ಸಂಪೂರ್ಣಂ.

ಸಂಜ್ಞಾಪ್ರಕರಣಂ ಸಮಾಪ್ತಂ.

2. ಸಂಧಿಪ್ರಕರಣಂ. Second Section: Particularities of Euphonic Combination.

1. Combination of Vowels.

ಸೂತ್ರಂ.[1] || ೫೨ ||

Elision of vowels (ಅ, ಇ, ಉ, ಎ) at the end of inflected and uninflected words (whether Saṁskṛita or Kannaḍa) before vowels is very frequent, but ought not to occur when the meaning would become uncertain.

ಸ್ವರಮಿದರೊಳಿರೆ ವಿಭಕ್ತಿ |
ಸ್ವರಕಂ ಪ್ರಕೃತಿಸ್ವರಕ್ಕಮಕ್ಕುಂ ಲೋಪಂ ||
ವರಸಂಸ್ಕೃತಕರ್ಣಾಟಕ- |
ಮೆರಡಱೊಳಂ ನಾಮರೂಢಿಯಱಿಯದ ಪಕ್ಷಂ. ||೬೨||

ಪದಚ್ಛೇದಂ.— ಸ್ವರಂ ಇದಿರೊಳ್ ಇರೆ, ವಿಭಕ್ತಿಸ್ವರಕಂ ಪ್ರಕೃತಿಸ್ವರಕ್ಕಂ ಅಕ್ಕುಂ ಲೋಪಂ, ವರಸಂಸ್ಕೃತ ಕರ್ಣಾಟಕಂ ಎರಡಱೊಳಂ, ನಾಮರೂಢಿ ಅಱಿಯದ ಪಕ್ಷಂ.

ಅನ್ವಯಂ.— ವರಸಂಸ್ಕೃತಕರ್ಣಾಟಕಂ ಎರಡಱೊಳಂ — ನಾಮರೂಢಿ ಅಱಿಯದ ಪಕ್ಷಂ — ಸ್ವರಂ ಇದಿರೊಳ್ ಇರೆ, ವಿಭಕ್ತಿಸ್ವರಕಂ ಪ್ರಕೃತಿಸ್ವರಕ್ಕಂ ಲೋಪಂ ಅಕ್ಕುಂ.

---

1) ಸೂ. ಸ್ವರೇ ಸ್ವರಸ್ಯ ಲೋಪಃ || ಭಾ. ಭೂ. 19. ||
(ಕನ್ನಡದಲ್ಲಿ ಸ್ವರಕ್ಕೆ ಸ್ವರ ಪರವಾದರೆ ಪೂರ್ವಸ್ವರಕ್ಕೆ ಲೋಪ.)

ಸೂ. ಪ್ರಕೃತೇರುದೇತೋಃ || ಭಾ. ಭೂ. 20. ||
(ಪ್ರಕೃತಿಯೆಂದು ಹೆಸರುಳ್ಳ ಲಿಂಗದ ಉಕಾರ ಎಕಾರಗಳಿಗೆ ಸ್ವರ ಪರವಾದರೆ ಪೂರ್ವಸ್ವರಕ್ಕೆ ಲೋಪ.)

ಸೂ. ನ ನಾಮಭಾಗಪ್ರಧ್ವಂಸೇ || ಭಾ. ಭೂ. 21. ||
(ಸಂಧಿ ಮಾಡುವಾಗ ನಾಮರೂಢಿ ಕೆಡುವ ಪಕ್ಷದಲ್ಲಿ ಪ್ರಕೃತಿಯ ಉಕಾರ ಎಕಾರಗಳಿಗೆ ಲೋಪವಿಲ್ಲ.)

ಸ್ವರಮಿರೆ ಪರದೊಳ್ ಪೂರ್ವ |
ಸ್ವರಲೋಪಂ ಕೃತವಿಭಕ್ತಿಗಕ್ಕುಂ ಪ್ರಕೃತಿ ||
ಸ್ವರದೊಳುದೇದಂತಕ್ಕಾ- |
ಚರಿಸುವರವಿನಷ್ಟ ನಾಮಭಾಗಸ್ಥಿತಿಯೊಳ್ || ಶ. ಸ್ಮೃ. 8. ||

ಟೀಕು. — ವರ=ಶ್ರೇಷ್ಠವಾದ; ಸಂಸ್ಕೃತಕರ್ಣಾಟಕಂ=ಸಂಸ್ಕೃತಕರ್ಣಾಟಕಂಗಳೆಂಬ; ಎರಡಱೊಳಂ = ಎರಡು ಶಬ್ದದಲ್ಲಿಯುಂ; ನಾಮರೂಢಿ = ನಾಮಪ್ರಸಿದ್ಧಿಯು; ಅಱಿಯದ ಪಕ್ಷಂ = ಕೆಡದ ಪಕ್ಷದಲ್ಲಿ; ಸ್ವರಂ = ಸ್ವರಾಕ್ಷರಂ; ಇದಿರೊಳ್ = ಮುಂದುಗಡೆಯಲ್ಲಿ; ಇರೆ = ಇರೆ; ವಿಭಕ್ತಿಸ್ವರಕಂ = ವಿಭಕ್ತಿಸ್ವರಕ್ಕೆಯುಂ; ಪ್ರಕೃತಿಸ್ವರಕ್ಕಂ = ಪ್ರಕೃತಿಸ್ವರಕ್ಕೆಯುಂ; ಲೋಪಂ = ಅದರ್ಶನಂ; ಅಕ್ಕುಂ = ಅಪ್ಪುದು.

ವೃತ್ತಿ. — ಸ್ವರಂ ಪರವಾಗೆ, ಸಂಸ್ಕೃತದ ಕನ್ನಡದ ವಿಭಕ್ತಿಸ್ವರಕ್ಕಂ ಪ್ರಕೃತಿಯ ಸಹಜ ಸ್ವರಕ್ಕಂ, ನಾಮಪ್ರಸಿದ್ಧಿ ಕೆಡದ ಪಕ್ಷಂ, ಲೋಪಮಕ್ಕುಂ.

ಪ್ರಯೋಗಂ. — ಸಂಸ್ಕೃತಪ್ರಕೃತಿಯ ವಿಭಕ್ತಿಸ್ವರಲೋಪಕ್ಕೆ —

ಕ್ರಮದೆ + ಆಯ್ತು = ಕ್ರಮದಾಯ್ತು. ಇಂದ್ರಂಗೆ + ಐರಾವತಂ = ಇಂದ್ರಂಗೈರಾವತಂ. ಗಿರಿಯತ್ತಣಿಂದೆ + ಇೞಿದಂ = ಗಿರಿಯತ್ತಣಿಂದಿೞಿದಂ. ಗೃಹದಲ್ಲಿ + ಇರ್ದಂ = ಗೃಹದಲ್ಲಿರ್ದಂ. ಈಶ್ವರನ + ಒಲವು = ಈಶ್ವರನೊಲವು.

ವಿಭಕ್ತ್ಯಾದಿ ಕೂಡುವೆಡೆ ಸಂಸ್ಕೃತಪ್ರಕೃತಿಸ್ವರಲೋಪಕ್ಕೆ —

ಬುಧ + ಅರ್ = ಬುಧರ್. ಉದ್ಧತ + ಅರ್ = ಉದ್ಧತರ್. ದೇವ + ಎಂಬರ್ = ದೇವೆಂಬರ್. ರಾಗ + ಇಸು = ರಾಗಿಸು. ಭಂಗ + ಇಸು = ಭಂಗಿಸು. ಭಾವ + ಇಸು = ಭಾವಿಸು.

ಇಂತುೞಿದುವನಱಿವುದು.

ಕರ್ಣಾಟಕಪ್ರಕೃತಿಯ ವಿಭಕ್ತಿಸ್ವರಲೋಪಕ್ಕೆ —

ನೆಲದಿಂದೆ + ಉಣ್ಬಂ = ನೆಲದಿಂದುಣ್ಬಂ. ಲೇಸಿಂಗೆ + ಒಡೆಯಂ = ಲೇಸಿಂಗೊಡೆಯಂ. ಮರದತ್ತಣಿಂದೆ + ಇೞಿದಂ = ಮರದತ್ತಣಿಂದಿೞಿದಂ. ಚಲದ + ಆಣ್ಮಂ = ಚಲದಾಣ್ಮಂ. ಪೊಲದಲ್ಲಿ + ಇರ್ದಂ = ಪೊಲದಲ್ಲಿರ್ದಂ. ನೆಲದೆ + ಎೞ್ದಿಂದಂ = ನೆಲದೆೞ್ದಿಂದಂ.

ಆಖ್ಯಾತವಿಭಕ್ತಿಸ್ವರಲೋಪಕ್ಕೆ —

ಮಾಡಿದೆವು + ಒಳ್ಳಂ = ಮಾಡಿದೆವೊಳ್ಳಂ; —

ಕ್ರಿಯಾವಿಭಕ್ತಿಯಾದೇಶಮಾದ ಸ್ವರದ ಲೋಪಕ್ಕೆ —

ಕೂಡಿ + ಇರ್ದಂ = ಕೂಡಿರ್ದಂ. ಪಸಿದು + ಉಣ್ಡಂ = ಪಸಿದುಣ್ಡಂ.

ಕರ್ನಾಟಕಪ್ರಕೃತಿಸ್ವರಲೋಪಕ್ಕೆ—

1. ಅಕಾರಕ್ಕೆ—ಅರಸ+ಆಳ್=ಅರಸಾಳ್. ಅಚ್ಚ+ಆನೆ=ಅಚ್ಚಾನೆ. ಜೀಯ+ಎಂಬಂ=ಜೀಯೆಂಬಂ. ಬಡಬಡ+ಆದಂ=ಬಡಬಡಾದಂ. ಸಾವಂತ+ಓಲಗಂ=ಸಾವಂತೋಲಗಂ.

2. ಇಕಾರಕ್ಕೆ—ದಾಳಿಟ್ಟಂ, ಹಂದಿಟ್ಟಂ, ಸವದಿಟ್ಟಂ.

3. ಎಕಾರಕ್ಕೆ—ಸೇಸಿಕ್ಕಿದಂ, ಮುಡಿಗಿಕ್ಕಿದಂ, ಮತ್ತೆಲ್ಲಂ, ಮುನ್ನಱಿವಂ.

4. ಉಕಾರಕ್ಕೆ—ಸುತ್ತೋಲೆ, ಹತ್ತೆಂಟು, ಲೇಸೆಲ್ಲಂ, ಸೊವಡೊಂದು.

ನಾಮಂ ಕೆಡುವೊಡೆ ಸಂಸ್ಕೃತಕರ್ಣಾಟಕದ ಪ್ರಕೃತಿಸ್ವರಕ್ಕೆ ಲೋಪವಿಲ್ಲ—ಪಟು+ಏಕವಾಕ್ಯಂ=ಪಟುವೇಕವಾಕ್ಯಂ. ವಿಧು+ಇದು=ವಿಧುವಿದು. ಮಡು+ಇದು=ಮಡುವಿದು. ಕುಡು+ಇಲ್ಲ=ಕುಡುವಿಲ್ಲ.

ಸೂತ್ರಂ.[1] || ೫೩ ||

Insertion of ಯ after ಅ, ಇ, ಈ, ಓ, ಐ, ಎ, ಏ and after ಅ when it is the affix of the Genitive and followed by the emphasizing ಎ.

ಅತ್ವದಿನಿವರ್ಣದಿಂ ಮ- |
ತ್ತೋತ್ವದಿನೈತ್ವದಿನೆವರ್ಣದಿಂ ಮುಂದಕ್ಕಂ ||
ಯತ್ವಮದವಧಾರಣೆ ಪರ- |
ಮತ್ವಂ ಪಿಂತಾಗೆ ಷಷ್ಠಿನಿಯಮದೆ ಯತ್ವಂ. || ೬೩ ||

1) ಸೂ. ಆದಿವರ್ಣೈಕಾರೇಭ್ಯೋ ಯಃ || ಭಾ. ಭೂ. 22. ||
(ಅಕಾರ, ಇಕಾರ, ಎಕಾರಗಳಿಂದ ಪರವಾಗಿ ಯಕಾರವಾಗುವುದು.)

ಆಕಾರಾಂತಾಚ್ಚಾವಧಾರಣಾರ್ಥೇ ಏ || ಭಾ. ಭೂ. 23. ||
(ಅಕಾರಾಂತ ಶಬ್ದಗಳಿಂದ ಪರವಾಗಿ ಅವಧಾರಣೆಗೆ ಆದೇಶವಾದ ಎಕಾರವು ಬಂದರೆ ಯಕಾರವಾಗುವುದು.)

ಪವಸಿಕುಮಾಕಾರಂ ಮೇ- |
ಣಿವರ್ಣಮೇಕಾರಮೆಂಬಿವರ್ಕೆ ಯಕಾರಂ ||
ವ್ಯವಧಾಯಕಂ ವ್ಯವರ್ಣ- |
ಕ್ಕೆ ವಕಾರಂ ಸ್ವರಮುಪಿದಿರೊಳಗೆ ಯಥೇಷ್ಟಂ || ಶ. ಸ್ಮೃ. 9. ||

ಪದಚ್ಛೇದಂ.— ಅತ್ವದಿಂ ಇವರ್ಣದಿಂ ಮತ್ತೆ ಓತ್ವದಿಂ ಐತ್ವದಿಂ ಎವರ್ಣದಿಂ ಮುಂದೆ ಅಕ್ಕುಂ ಯತ್ವಂ ಅದು; ಅವಧಾರಣೆ ಪರಂ, ಅತ್ವಂ ಪಿಂತು ಆಗೆ ಷಷ್ಠಿ ನಿಯಮದೆ, ಯತ್ವಂ.

ಟೀಕು, ಯಥಾನ್ವಯಂ.—ಆ ಸಂಹಿತೆಯೊಳೆಂಬುದನುವರ್ತನೆ—ಅತ್ವದಿಂ = ಆಕಾರ ದಿಂದೆ; ಇವರ್ಣದಿಂ = ಇ ಈ ಎಂಬ ಸವರ್ಣದಿಂದೆ; ಮತ್ತೆ = ಬಳಿಕಂ; ಓತ್ವದಿಂ = ಓಕಾರ ದಿಂದೆ; ಐತ್ವದಿಂ = ಐಕಾರದಿಂದೆ; ಎವರ್ಣದಿಂ = ಎ ಏ ಎಂಬ ಸವರ್ಣದಿಂ; ಮುಂದೆ = ಮುಂದುಗಡೆಯಲ್ಲಿ; ಯತ್ವಂ = ಯಕಾರಂ; ಅದು = ಅದು; ಅಕ್ಕುಂ = ಅಪ್ಪುದು; ಅವ ಧಾರಣೆ = ನಿರ್ಧಾರಣೆಯ ಎಕಾರಂ; ಪರಂ = ಮುಂದಣದು; ಅತ್ವಂ = ಅಕಾರಂ; ಪಿಂತು = ಹಿಂದು; ಆಗೆ = ಆಗೆ; ಷಷ್ಠಿ = ಷಷ್ಠಿಯೆಂಬ ವಿಭಕ್ತಿಯ; ನಿಯಮದೆ = ಕಟ್ಟಿನಿಂದೆ; ಯತ್ವಂ = ಯಕಾರಂ ಅಪ್ಪುದು.

ವೃತ್ತಿ.— ಆ ಇ ಈ ಓ ಐ ಎ ಏ ಎಂಬಿವರ್ಕೆ ಸ್ವರಂ ಪರಮಾಗೆ, ನಡುವೆ ಯತ್ವಮಕ್ಕುಂ; ಷಷ್ಠಿಯ ಅಕಾರಂ ಪೆಱಗಿರೆ, ಅವಧಾರಣೆಯ ಎಕಾರಂ ಪರದೊಳಿರೆ, ನಿಯಮದಿಂ ಯತ್ವಮಕ್ಕುಂ.

ಪ್ರಯೋಗಂ.— ಆಕಾರಕ್ಕೆ—

"ಆಯಿರ್ದ ಮೊಟ್ಟೆಯಿಂ ಪರ- |
ಮಾಯುಷ್ಯಾಂತಂಬರಂ . . . ." || 36 ||

"ಕಾಯಲುಂ ಬಲು ಗರ್ವದಿಂ ನೆಲವೆಲ್ಲಮಂ . . ." || 37 ||

"ಸಾಯಲೆ ವೇಡಿ ತಾನೀಯನೆ ಧರೆಯಂ ಗಾಂಗೇಯ ಕೇಳ್" || 38 ||

ಇತ್ವಕ್ಕೆ—

ಕವಿಯಾರ್. ನಿಷ್ಕಾಮಿಯಾವಳ್.

"ಬಲಿಯ್ಯಂ ಬೇಡುಗುಮೆಂದು ಕಟ್ಟಿದಲಗುಂ ಕಿಲ್ಚಿರ್ದ" || 39 ||

"ಪಿಡಿಯೆಂದಸಿತಾಳಪತ್ರಮಂ ಜತಿಯಿತ್ತಂ." || 40 ||

ಈಕಾರಕ್ಕೆ—

"ಈಯಲ್ ಬಂದತ್ತು ಕಲ್ಪಾಂಘ್ರಿಪಮಭಿಮತಮಂ. . ." || 41 ||

"ಶ್ರೀಯಂ ಪೂರ್ವಾರ್ಜಿತ ಪು- |
ಣ್ಯಾಯತ್ತದಿನಱಿಸಿ ಕಾಣ್ಬವೊಲ್ ಕಂಡಂ. . . . ." || 42 ||

"ಸ್ತ್ರೀಯೆಂಬನಾಥೆಯೆಂಬ- |
ನ್ಯಾಯದ ಕೊಲೆಯೆಂಬ . . . ." || 43 ||

ಓಕಾರಕ್ಕೆ—

ನೋಯಿಸಿದಂ ತೋಯಲುಂ ಹಿಂಡಲುಂ
". . . . . ಅಮರಾಂ- |
ಗನೆಯರ್ ಜೋಯೆಂದು ಪಾಡಿದರ್ ಜೋಗಳಮಂ." || 44 ||
". . . . . ಬ್ರಹ್ಮರ್ |
ಭೋಯೆನಲುಂ ಬಲ್ಲರ್ ಕೊಲೆ |
ಧೋಯೆನಲುಂ ಬಲ್ಲರಿಱಿಯಲವರೆತ್ತಱಿವರ್ || 45 ||

ಐಕಾರಕ್ಕೆ—

ದೈಯೆಂದಂ. ರೈಯೊದವಿತ್ತು.
"ಒದೆದದ್ರಿ ಕ್ಷಿತಿಸಂಧಿ ಪತ್ತುವಿಡೆ ಭೈಭೈಯೆಂಬಿನಂ ಕಿಟ್ಟಿ . ." ||46||

ಎಕಾರಕ್ಕೆ—

"ನಡೆನಡೆಯೆಂದೇಂ ನಡೆದುದೊ. || 47 ||
"ತೊಱೆಯುಂ ಪಾಯ್ದೆತ್ತಿ ಬಂದಂ ಗಡ ಮಸಗಿ ಜರಾಸಂಧ ಭೂಪಂ." || 48 ||
"ಪಸೆಯಿರ್ದಂ ಗರುಡವೇಗನ್ನೃಪನಂದನೆಯೊಳ್." || 49 ||

ಏಕಾರಕ್ಕೆ—

ತೇಯಿಸಿದಂ. ಮೇಯಿಸಿದಂ. ಏಯೆಂದಂ.
". . . . . ಬೋಂ-
ಕನೆ ದೇವಸ್ತ್ರೀಯರಂದಾರತಿಯನುಘೆಯುಘೇಯೆಂದು ತಂದೆತ್ತಿರ್ದರ್" || 50 ||

ಅವಧಾರಣೆಗೆ—

ಅವಳಯೆ. ಅದಱಿಯೆ.
"ಆತನೆಯೆ ತೋರದೊಡೆಗಳ್ . . . . . ." || 51 ||

ಸೂತ್ರಂ. || ೫೪ ||

Further insertion of ಯ between Samskrita or Kannaḍa themes with final ಅ and the affix ಇಸು and after imitative sounds with final (ಅ).

ಸದಮಳ ಸಂಸ್ಕೃತ ಕರ್ಣಾ- |
ಟದದಂತಪ್ರಕೃತಿಗಳ್ಗಿಸುಪ್ರತ್ಯಯಮಿಂ- || ೬ಕಾಂತ
ತಿದಿರಾಗೆ ಯತ್ವಮನುಕೃತಿ |
ಪದಕಂ ಮುಂದನುಕೃತಿಸ್ವರಂ ನಿಲೆ ಯತ್ವಂ || ೬೪ ||

ಪದಚ್ಛೇದಂ.— ಸದಮಳಸಂಸ್ಕೃತಕರ್ಣಾಟದ ಅದಂತಪ್ರಕೃತಿಗಳ್ಗೆ ಇಸುಪ್ರತ್ಯಯಂ ಇಂತು ಇದಿರ್ ಆಗೆ, ಯತ್ವಂ; ಅನುಕೃತಿಪದಕಂ ಮುಂದೆ ಅನುಕೃತಿಸ್ವರಂ ನಿಲೆ, ಯತ್ವಂ.

ಟೀಕು, ಯಥಾನ್ವಯಂ.— ಸತ್ = ಲೇಸಾದ; ಅಮಳ = ನಿರ್ಮಲವಾದ; ಸಂಸ್ಕೃತ = ಸಂಸ್ಕೃತದ; ಕರ್ಣಾಟದ = ಕನ್ನಡದ; ಅದಂತಪ್ರಕೃತಿಗಳ್ಗೆ = ಅಕಾರಾಂತವಾದ ಪ್ರಕೃತಿಗಳ್ಗೆ; ಇಸುಪ್ರತ್ಯಯಂ = ಇಸು ಎಂಬ ಪ್ರತ್ಯಯಂ; ಇಂತು = ಹೀಂಗೆ; ಇದಿರಾಗೆ = ಪರವಾಗೆ; ಯತ್ವಂ = ಯಕಾರವಪ್ಪುದು; ಅನುಕೃತಿಪದಕಂ = ಅನುಕರಣಪದಕ್ಕೆಯುಂ; ಮುಂದೆ = ಮುಂದುಗಡೆಯಲ್ಲಿ; ಅನುಕೃತಿಸ್ವರಂ = ಅನುಕರಣವಂ ಪೇಳ್ವ ಸ್ವರಂ; ನಿಲೆ = ನೆಲಸೆ; ಯತ್ವಂ = ಯಕಾರವಪ್ಪುದು.

ವೃತ್ತಿ.— ಅಮಳತರಸಂಸ್ಕೃತಕರ್ಣಾಟದ ಅಕಾರಾಂತಪ್ರಕೃತಿಗಳ್ಗೆ ಇಸುಪ್ರತ್ಯಯಂ ಪರವಾಗೆ, ನಡುವೆ ಯತ್ವಮಕ್ಕುಂ; ಅದಂತಮಪ್ಪನುಕೃತಿಪದಕ್ಕೆ ಅನುಕೃತಿಸ್ವರಂ ಪರವಾಗೆ, ಯತ್ವಂ.

ಪ್ರಯೋಗಂ.— ಸಂಸ್ಕೃತಶಬ್ದದಲ್ಲಿ—

ಶುದ್ಧ + ಇಸಿದಂ = ಶುದ್ಧಯಿಸಿದಂ. ತಾರ + ಇಸಿದಂ = ತಾರಯಿಸಿದಂ. ನಿರ್ಣ + ಇಸಿದಂ = ನಿರ್ಣಯಿಸಿದಂ. ಪೂರ + ಇಸಿದಂ = ಪೂರಯಿಸಿದಂ.

ಕನ್ನಡಶಬ್ದದಲ್ಲಿ —

ಒರ + ಇಸಿದಂ = ಒರಯಿಸಿದಂ. ತೇರಯಿಸಿದಂ; ತೆಲ್ಲಯಿಸಿದಂ; ಮೇಳಯಿಸಿದಂ; ಓಲಯಿಸಿದಂ.

ಅನುಕೃತಿಸ್ವರಕ್ಕೆ—

"ಪಟಿಪಟಿಯೆಂದಾಲಿಕಲ್ಗಳುದಿರ್ದುವು ನಭದಿಂ." || 52 ||

"ಗುಟಿಗುಟಿಗುಟಿಗಟಿ-
ಗಟಿಯೆನುತಂ ಪರಿವ ಪರಿವೊನಲ್ ಸೊಗಯಿಸುಗುಂ." || 53 ||

ಸೂತ್ರಂ.[1] || ೫೫ ||

Insertion of ವ after ಉ, ಊ, ಋ, ೠ, ಓ, ಔ (ಇ. ಈ.). In Kannada words arbitrariness regarding the insertion of ಯ or ವ may happen, but not in Saṁskṛita words.

ಅವತರಿಸಿರ್ಕುಮುವರ್ಣದ |
ಋವರ್ಣದೋತ್ವೌತ್ವದಗ್ರದೊಳ್ ಸ್ವರಮಿರೆ ವ- ||
ತ್ವವಿಧಾನಂ ಬಹುಳತೆ ಯ- |
ತ್ವವತ್ವದೊಳ್ ಸಂಸ್ಕೃತಕ್ಕೆ ತಾನಿಲ್ಲೆಂದುಂ. || ೬೫ ||

ಪದಚ್ಛೇದಂ.— ಅವತರಿಸಿ ಇರ್ಕುಂ, ಉವರ್ಣದ ಋವರ್ಣದ ಓತ್ವೌತ್ವದ ಅಗ್ರದೊಳ್ ಸ್ವರಂ ಇರೆ, ವತ್ವವಿಧಾನಂ; ಬಹುಳತೆ ಯತ್ವವತ್ವದೊಳ್ ಸಂಸ್ಕೃತಕ್ಕೆ ತಾಂ ಇಲ್ಲ ಎಂದುಂ.

ಅನ್ವಯಂ.— ಉವರ್ಣದ ಋವರ್ಣದ ಓತ್ವೌತ್ವದ ಅಗ್ರದೊಳ್ ಸ್ವರಂ ಇರೆ, ವತ್ವ ವಿಧಾನಂ ಅವತರಿಸಿ ಇರ್ಕುಂ; ಸಂಸ್ಕೃತಕ್ಕೆ ಯತ್ವವತ್ವದೊಳ್ ಬಹುಳತೆ ತಾಂ ಎಂದುಂ ಇಲ್ಲ.

ಟೀಕು.— ಉವರ್ಣದ = ಉ ಊ ಎಂಬ ಸವರ್ಣದ; ಋವರ್ಣದ = ಋ ೠ ಎಂಬ ಸವರ್ಣದ; ಓತ್ವೌತ್ವದ = ಓಕಾರ ಔಕಾರದ; ಅಗ್ರದೊಳ್ = ಮುಂದೆ; ಸ್ವರಂ = ಸ್ವರಾಕ್ಷರಂ; ಇರೆ = ಇರೆ; ವತ್ವವಿಧಾನಂ = ವಕಾರದ ವಿಧಾನಂ; ಅವತರಿಸಿರ್ಕುಂ = ಹುಟ್ಟಿರ್ಪುದು; ಸಂಸ್ಕೃತಕ್ಕೆ = ಸಂಸ್ಕೃತಶಬ್ದಕ್ಕೆ; ಯತ್ವವತ್ವದೊಳ್ = ಯತ್ವಸಂಧಿ ವತ್ವಸಂಧಿಗಳಲ್ಲಿ; ಬಹುಳತೆ = ಬಹುಳತ್ವಂ; ತಾಂ = ತಾಂ; ಎಂದುಂ = ಆವಾಗಳುಂ; ಇಲ್ಲ = ಉಂಟಾಗದು.

ವಿಚಾರಂ.— ಕನ್ನಡದ ಶಬ್ದದಲ್ಲಿ ಯತ್ವವತ್ವಸಂಧಿಗಳಲ್ಲಿ ಬಹುಳಮುಂಟೆಂಬುದರ್ಥಂ. ಅತ್ವದಿಸಿವರ್ಣದಿಂ ಮತ್ತೋತ್ವದಿನೈತ್ವದಿನಿವರ್ಣದಿಂ ಮುಂದಕ್ಕುಂ ಯತ್ವಂ; ಉವರ್ಣದ ಋವರ್ಣದೋತ್ವೌತ್ವದಗ್ರದೊಳ್ಸ್ವರಮಿರೆ ವತ್ವವಿಧಾನವೆಂಬ ಈ ಯತ್ವಸಂಧಿವತ್ವಸಂಧಿಗಳಲ್ಲಿ ವಿಚಾರಮುಂಟು; ಅತ್ವಮದೆಂತೆಂದೊಡೆ— ಶಬ್ದಾನುಶಾಸನದಲ್ಲಿ ಸೂತ್ರಂ (೧ನೆಯ ಪಾದದ ೩೮ನೆಯ ಸೂತ್ರಂ) "ಅತ ಓಷ್ಠ್ಯೇ ಸ್ವರೇ ಪರೇ ಅಕಾರಸ್ಯ ವದ್ಭವತಿ" ಎಂದುದಾಗಿ ಅಕಾರಕ್ಕೆ ಓಷ್ಠ್ಯಸ್ವರಂ ಪರಮಾಗೆ, ವತ್ವಸಂಧಿಯಾಗುವುದು— ಅ + ಉದಕಂ = ಅವುದಕಂ, ಅ + ಊರ್ = ಅವೂರ್. ಅವೂಟಂ, ಅವೊಲೆ, ಅವೋಲೆ ಎಂಬಂತೆ ಓಷ್ಠ್ಯಗ್ರಹಣದಿಂ ಕಂಠೋಷ್ಠ್ಯಮುಂ ಸಂಗ್ರಹಿಸಲ್ಪಟ್ಟದು[2].

---

1) ವೋ ವೃರ್ಣಾಭ್ಯಾಂ || ಧಾ. ಭೂ. 24. ||
(ಉಕಾರ ಋಕಾರಗಳಿಂದ ಪರವಾಗಿ ವಕಾರವಾಗುವುದು.)
(73ನೆಯ ಪುಟದಲ್ಲಿ ಶಬ್ದಸ್ಮೃತಿ 9ನೆಯ ಸೂತ್ರ ನೋಡಿ.)

2) ಉ, ಊ, = ಓಷ್ಠ್ಯಂಗಳ್; ಒ, ಓ, ಔ = ಕಂಠೋಷ್ಠ್ಯಂಗಳ್.

ವೃತ್ತಿ.—ಉ ಊ ಋ ೠ ಓ ಔ ಎಂಬಿವರ್ಕೆ ಸ್ವರಂ ಪರಮಾಗೆ, ನಡುವೆ ವತ್ವಂ; ಸಂಸ್ಕೃತದೊಳ್ ಯತ್ವವತ್ವಂಗಳ್ಗೆ ಬಹುಳಮಿಲ್ಲ. ವಿಕಲ್ಪ

ನಿತ್ಯಕ್ರಮಪ್ರಯೋಗಂ.

ಉಕಾರಕ್ಕೆ—

"ಕುಡುವುದು ಕೂರ್ಮೆಯಲ್ಲಿ . . . . ." || 54 ||

"ಮನುವಿನ ಮಾರ್ಗಂ ಸುರಗುರು-
ವಿನಱಿವು. . . . .
. . . .
. . . . ನೆಗೞ್ದಿನಾ ವಿಭುವಿಳೆಯೊಳ್" || || 55 ||

ಊಕಾರಕ್ಕೆ—

"ಪೂವಿನ ಬಿಲ್ಲಕೊಪ್ಪನೊದೆದೇಱಿಸಿ ತಾವರೆನೂಲ ನಾರಿಯಂ |
ಜೀವೊಡೆಗೈದು . . . ." || 56 ||

". . . . . ಲಲಿತ- |
ಭ್ರೂವಂಗಜನಿಕ್ಷುಚಾಪಸಹಚರಮಕ್ಕುಂ" || 57 ||

ಋಕಾರಕ್ಕೆ—

"ಹೋತೃವೆಯಾನಧ್ವರಿಯೈ- |
ಭ್ರಾತೃವೆ ನೀನುಱಿದ ಋತ್ವಿಜರ್. . . . . . ." || 58 ||

". . . . ಕರ್ತೃವಾದ್ದಂದಿನಿತತಿಶಯಮುಂ ತಾಳ್ದದೀ ಕನ್ನೆಯಂದಂ"
|| 59 ||

ೠಕಾರಕ್ಕೆ—ೠವೆಂದಂ. ೠವಿತ್ತಂ.

ಓಕಾರಕ್ಕೆ—ಗೋ+ಅಂ=ಗೋವಂ, ಗೋವಿನ ಹಿಂಡು. ಗೋ+ ಇಂದಂ=ಗೋವಿಂದಂ.

ಔಕಾರಕ್ಕೆ—ನೌವನೇಱಿದಂ. ಗ್ಲಾವಂ ನೋಡಿದಂ. ಚೌವಿವಂ?

ಇ ಈ ಎಂಬಕ್ಕರಂಗಳನುಕರಿಸಿ ತೋಱಿುವಲ್ಲಿಯುಂ ನಡುವೆ ವತ್ವಂ—ಈವಿವು ಗ್ರಂಥಂಗಳ್. ಈವಿದು ಗ್ರಂಥಂ. ಈ+ಇದು=ಈವಿದು. ಈ

(ಕನ್ನಡದೊಳ್ ಯತ್ವವತ್ವಂಗಳ ಬಹುಳತೆಯಿಂ ಲೋಪಮುಂಟು—)

ಒತ್ತೆ+ಇಟ್ಟಂ=ಒತ್ತಿಟ್ಟಂ, ಒತ್ತೆಯಿಟ್ಟಂ. ತಗವೆ+ಅಪ್ಪೊಡೆ=ತಗವೆಯಪ್ಪೊಡೆ, ತಗವಪ್ಪೊಡೆ. ಮಾತು+ಎಲ್ಲಂ=ಮಾತುವೆಲ್ಲಂ, ಮಾತೆಲ್ಲಂ. ಸೊವಡು+ಒಂದು=ಸೊವಡುವೊಂದು, ಸೊವಡೊಂದು.

"‥‥‥‥‥‥‥ ಒತ್ತಿ- |
ಟ್ಟಿರುಳಿಕೆಯ ಕೈತವಕಂಜಿ ಪೊಱಪಟ್ಟಿರ್ದಂ." || 60 ||

ಸಂಸ್ಕೃತದ ನಿತ್ಯಕ್ಕೆ—

ನದಿಯೆಲ್ಲಂ. ಸುರಸಿಂಧುವೆ. ವಿಧುವಿಲ್ಲದಿರುಳ್.

"ವಿಧುವಿಲ್ಲದಿರುಳ್ ತನ್ನಯೆ |
ವಧುವಿಲ್ಲದ ಲೀಲೆ ಮಧುರಮಧುವಿಲ್ಲದ ಪೂ ||
ದಧಿಯಿಲ್ಲದುಣಿಸದೇವುದೋ |
ಬುಧರಿಲ್ಲದ ಸಭೆ ಸರಸ್ವತೀಮುಖತಿಲಕಾ" || 61 ||

ಇಂತಱಿವುದು.

ಸೂತ್ರಂ[1]. || ೫೬ ||

No insertion of letters is allowed after the ಎ, ಏ or

ಅವಿಕೃತಿಗಳೆವರ್ಣಮೊವ- |
ರ್ಣವಂತ್ಯವೆನಿಸಿದ ನಿಪಾತಮವಧಾರಣೆ ತ- ||

---

1) ಏದೋದಂತಾ ನಿಪಾತಾಃ ಸ್ವರೇ ಪರೇ ಪ್ರಕೃತ್ಯಾ || ಭಾ. ಭೂ. 25. ||
(ಏಕಾರಾಂತ ಓಕಾರಾಂತಗಳಾದ ನಿಪಾತಶಬ್ದಗಳಿಗೆ ಸ್ವರ ಪರವಾದರೆ ಸಂಧಿಯಿಲ್ಲ.)
ವಿಶಂಕಾವಧಾರಣಯೋಃ || ಭಾ. ಭೂ. 26. ||
(ವಿಶಂಕೆಯಲ್ಲಿಯೂ ಅವಧಾರಣೆಯಲ್ಲಿಯೂ ಸ್ವರ ಪರವಾದರೆ ಸಂಧಿಯಿಲ್ಲ.)
ಪ್ಲುತಾಶ್ಚ || ಭಾ. ಭೂ. 27. ||
(ಪ್ಲುತಕ್ಕೆ ಸ್ವರ ಪರವಾದರೆ ಸಂಧಿಯಿಲ್ಲ.)

ಅರವೆ ಎಲೇ ಏ ಓಹೋ |
ಆರೆ ಎಂಬ ನಿಪಾತಮುಂ ವಿಶಂಕಾಪರಮುಂ ||
ದೊರೆವೆತ್ತವಧಾರಣಮುಂ |
ಸ್ವರೂಪದಿಂ ನಿಲ್ಕುಮವಿಕೃತಿಗಳವೆಂದುಂ || ಶ. ಸ್ಮೃ. 10. ||

ಒ, ಓ in certain particles, strict emphasis, or suspicious questions, and after a syllable lengthened to three moras (ಪ್ಲುತಂ).

ಳ್ತ ವಿಶಂಕೆಗಳೆಂಬಿವಱೊಳ್ |
ವ್ಯವಹರಿಸದು ಸಂಧಿಯಾ ಪ್ಲುತಕ್ಕಮಭಾವಂ. || ೭೭ ||

ಪದಚ್ಛೇದಂ.— ಅವಿಕೃತಿಗಳ್ ಏವರ್ಣಂ ಓವರ್ಣಂ ಅಂತ್ಯಂ ಎನಿಸಿದ ನಿಪಾತಂ, ಅವಧಾರಣೆ, ತಳ್ತ ವಿಶಂಕೆಗಳ್ ಎಂಬಿವಱೊಳ್ ವ್ಯವಹರಿಸದು ಸಂಧಿ; ಆ ಪ್ಲುತಕ್ಕಂ ಅಭಾವಂ.

ಅನ್ವಯಂ.— ಎಂಬಿವಱೊಳ್ ಸಂಧಿ ವ್ಯವಹರಿಸದು; ಆ ಪ್ಲುತಕ್ಕಂ ಅಭಾವಂ ಎಂಬುದನ್ವಯಂ.

ಟೀಕು.— ಅವಿಕೃತಿಗಳ್ = ನಿರ್ವಿಕಾರಿಗಳಾದ; ಏವರ್ಣಂ = ಎ ಏ ಎಂಬ ಸವರ್ಣಂ; ಓವರ್ಣಂ = ಒ ಓ ಎಂಬ ಸವರ್ಣಂ; ಅಂತ್ಯಂ = ಕಡೆ; ಎನಿಸಿದ ನಿಪಾತಂ = ಎನಿಸಿದವ್ಯಯಂ; ಅವಧಾರಣೆ = ನಿರ್ಧಾರಣೆಯ ಏಕಾರಂ; ತಳ್ತ = ಪೊರ್ದುಗೆಯಾದ; ವಿಶಂಕೆಗಳ್ = ವಿಶಂಕೆಗಳ್; ಎಂಬಿವಱೊಳ್ = ಎಂಬಿವಱಲ್ಲಿ; ಸಂಧಿ = ಸಂಹಿತೆ; ವ್ಯವಹರಿಸದು = ಬಾರದು; ಆ ಪ್ಲುತಕ್ಕಂ = ಆ ಮೂರು ಮಾತ್ರೆಯನುಳ್ಳ ಪ್ಲುತಕ್ಕಂ; ಅಭಾವಂ = ಸಂಧಿಯಿಲ್ಲ.

ವೃತ್ತಿ.— ನಿರ್ವಿಕಾರಿಗಳಪ್ಪ ಎ ಏ, ಒ ಓ ಎಂಬಿವು ಕಡೆಯಾದ ನಿಪಾತಮುಂ ಅವಧಾರಣೆಯುಂ ವಿಶಂಕೆಯುಂ ಎಂಬಿವರ್ಕೆ ಸ್ವರಂ ಪರಮಾಗೆ, ಸಂಧಿಯಿಲ್ಲ; ಪ್ಲುತಕ್ಕಮಂತೆ ಸಂಧಿಯಿಲ್ಲ.

ಪ್ರಯೋಗಂ.— ನಿಪಾತಕ್ಕೆ—

"ಅರಮೆ ಅರಲ್ಲ ಬಯಲ್ದಾ- |
ವರೆಗಳ ಪೊದಱುಗಳೊಳರಮೆ ಎಳದಳಿರ ಲತಾಂ- ||
ತರದೊಳುಟಿದುಟಿದು ಕಾಡುಗು- |
ಮಿರುಳಪ್ಪಿನಮಱಸುವಿನಿಯಳಂ ಚಕ್ರಾಹ್ವಂ || 62 ||

"........ಎಲೇ ಇದಲ್ತೆ ತುಹಿನಕ್ಷೋಣೀಧೃದುತ್ತುಂಗಸಾ- |
ನುಗಳೊಳ್ ...." || 63 ||

"ಆರೆ ಏಡೆ ಹಸ್ತಿಶಿಕ್ಷಣ ವಿಚಕ್ಷಣರಿಂದರೆ ಅಶ್ವಶಿಕ್ಷೆಯಿಂ" || 64 ||

"ಓಹೋ ಇರಲಿಂ ಪೆಱುವಱ |
ಮಾಹಾತ್ಮ್ಯಮುಂ ...." || 65 ||

ಅವಧಾರಣೆಗೆ—

"ನುಡಿದನ್ನೆ ಕಾವುದನ್ನೇ ಎರ್ದೆ- |
ಗಿಡದಿರ್ ಜವನಿಟ್ಟುರಕ್ಕೆ ನಿನಗೀವುದನೇಂ ||
ನುಡಿದನೆ ಅದು ಕಯ್ಯದು ಮೇ- |
ಣ್ನುಡಿದುದು ತಪ್ಪುಗುಮೆ ಗಂಗಚೂಡಾಮಣಿಯಾ" || 66 ||
"ಆತನೆ ಇಂದ್ರನಾತನೆ ಗುಣೋನ್ನತನಾತನ್ನೆ ಅಂಬುಜೋದರಂ" || 67 ||

ವಿಶಂಕೆಗೆ—

"ಇನಿಯನ್ನೆ ಬೆಲ್ಲದಿಂದಿನಿಯನೀವ ಅಃ ಪಿರಿದೀವನಿತ್ತುದಂ |
ನೆನೆವನ್ನೆ ಚೀಃ ಅದಂ ನೆನೆಯಂ . . . ." || 68 ||
"ಆನೆಯೊ ಅದ್ರಿಯೊ" || 69 ||
"ಗುರುವಿಲ್ಲ ಕರ್ಣನಿಲ್ಲ ಗುರುವಿನ ಮಗನಿಲ್ಲ. . . . . . .
. . . . . . ಎನ್ನಿರೆ ಎನ್ನಿನಿಯಂ ಕವಿರಾಜಕುಂಜರಂ." || 70 ||

ಪ್ಲುತಕ್ಕೆ—

"ಹಾ ರಾಮಾ೩ ಎಂದು ಸೀತೆ ಬಾಯಬಿಡುತ್ತಿರ್ದಳ್." || 71 ||
"ಕು ಕ್ಕೂ ಕೂ೩ ಎಂದು ಕೋಳಿ ಕೂಗಿತ್ತಾಗಳ್." || 72 ||

ಸೂತ್ರಂ. || ೫೭ ||

ಮೆಚ್ಚಿನೊಳಾಕ್ಷೇಪಕದೊ- |
ಳ್ಬೆಚ್ಚೋವಭ್ಯುಪಗಮಾರ್ಥದೆಮಶಬ್ದಂ ಕ- ||
ಟ್ಟಚ್ಚರಿಯ ಗಡಾರ್ಥತ್ವಂ |
ಬಿಚ್ಚಿರ್ಕುಂ ಸ್ವರಮವಿದಿರೊಳಿರೆ ಖೇದದೊಳಂ. || ೬೭ ||

Further, insertion of letters is not allowed after the ಓ in approvals or reproaches, after ಎಮ in consent, after the ಆ in surprise, and after particles of lamentation.

ಪದಚ್ಛೇದಂ.— ಮೆಚ್ಚಿನೊಳ್ ಆಕ್ಷೇಪಕದೊಳ್ ಬೆಚ್ಚ ಓ, ಅಭ್ಯುಪಗಮಾರ್ಥದ ಎಮ ಶಬ್ದಂ, ಕಟ್ಟಚ್ಚರಿಯ ಗಡಾರ್ಥತ್ವಂ ಬಿಚ್ಚಿರ್ಕುಂ, ಸ್ವರಂ ಅವು ಇದಿರೊಳ್ ಇರೆ; ಖೇದದೊಳಂ.

ಅನ್ವಯಂ.— ಮೆಚ್ಚಿನೊಳ್ ಆಕ್ಷೇಪಕದೊಳ್ ಬೆಚ್ಚ ಓ, ಅಭ್ಯುಪಗಮಾರ್ಥದ ಎಮ ಶಬ್ದಂ, ಕಟ್ಟಚ್ಚರಿಯ ಗಡಾರ್ಥತ್ವಂ— ಸ್ವರಂ ಅವು ಇದಿರೊಳ್ ಇರೆ— ಖೇದದೊಳಂ ಬಿಚ್ಚಿರ್ಕುಂ.

ಟೀಕು. — ಮೆಚ್ಚಿನೊಳ್ = ಮೆಚ್ಚಿನಲ್ಲಿ; ಆಕ್ಷೇಪಕದೊಳ್ = ಆಕ್ಷೇಪಕದಲ್ಲಿ; ಬೆಚ್ಚೋ = ಬೆಸುಗೆಯಾದ ಓಕಾರಂ; ಅಭ್ಯುಪಗಮಾರ್ಥದ = ಅಂಗೀಕಾರಾರ್ಥದ; ಎಮಶಬ್ದಂ = ಎಮ ಎಂಬ ಶಬ್ದಂ; ಕಟ್ಟಚ್ಚರಿಯ = ಕಡಿದಾದಾಶ್ಚರ್ಯದ; ಗಡಾರ್ಥತ್ವಂ = ಗಡಾರ್ಥದ ಆಕಾರಂ; ಸ್ವರಂ = ಸ್ವರಾಕ್ಷರಂ; ಅವು = ಅವು; ಇದಿರೊಳ್ = ಮುಂದೆ; ಇರೆ = ಇರೆ; ಖೇದದೊಳಂ = ದುಃಖದಲ್ಲಿಯುಂ; ಬಿಚ್ಚಿಕರ್ಗಂ = ಸಂಧಿ ಬಿಚ್ಚಿರ್ಪುದು.

ವೃತ್ತಿ. — ಮೆಚ್ಚಿನೊಳ್ ಆಕ್ಷೇಪಕದೊಳ್ ನೆಲಸಿರ್ದ ಓಕಾರಕ್ಕಂ, ಅಂಗೀಕಾರಾರ್ಥದ ಎಮಶಬ್ದಕ್ಕಂ, ಗಡಾರ್ಥಕ್ಕಾದೇಶಮಾದ ಆಕಾರಕ್ಕಂ—ಸ್ವರಂ ಪರಮಾಗೆ—ಸಂಧಿಯಿಲ್ಲ; ಖೇದದೊಳಮಂತೆ ಸಂಧಿಯಿಲ್ಲ.

ಪ್ರಯೋಗಂ. — ಮೆಚ್ಚಿಂಗೆ— "ಎಂತೆಂತೋ ಅಃ ಕಬ್ಬಮೊಳ್ಳಿತಾಯ್ತು."

"ಏನೇನೋ ಓದಿನ ಪರಿ ಲೇಸು ಲೇಸು."

ಆಕ್ಷೇಪಕ್ಕೆ— ". . . . ಎಡಱಿದನೋ ಅವನ ನೊಸಲಕ್ಕರವಂ
. . . . ತೊಡೆದುದಕ್ಕುಂ." || 73 ||

"ಮುತ್ತಿದನೋ ಇಂದೆ ಕೋಂಟೆ ಧೂಳಿಪಟಂ." || 74 ||

ಎಮ ಶಬ್ದಕ್ಕೆ— "ನಿಮಗಕ್ಕೆಮ್ಮ ಅಬ್ಜಗರ್ಭನಾಯುಂ ಶ್ರೀಯುಂ." || 75 ||

"ಸಿಂಗಮಕ್ಕೆಮ್ಮ ಅಂಜೆಂ . . ." || 76 ||

ಗಡಾರ್ಥದ ಆಕಾರಕ್ಕೆ— "ಪಾಲ್ಗಾ ಅಮರ್ದಾ ಇನಿದು ಗಡಾ. ." || 77 ||

"ಆನಾ ಇಮ್ಮಡಿಯಾ ಎರಟ್ಟಿಕ್ಕಿದುರೆಯಾ ಇರ್ಬಗ್ಗೆರಟ್ಟಿಕ್ಕೈದುವಾ" || 78 ||

ಖೇದಕ್ಕೆ— "ಅಯ್ಯೋ ಅಕ್ಕಟಾ ಇಂದ್ರಂಗೆ ಕೇಡಾಯ್ತೆ" || 79 ||

ಸೂತ್ರಂ[1]. || ೫೮ ||

It is also not used after ಪೊೞ, ಒಳ, ಪೊಸ, ಪಱ and ಎಳ

ಪೊೞಗೊಳಗು ಪೊಸತು ಪಱದೆಳ- |
ದಱಿಕೆಯದಂತತೆಯನಾ ಸಮಾಸಾಂತರದೊಳ್ ||

[1]) ಪೊಸತ್ವಾದೀನಾಮುದಂತತ್ವಂ ನಿಪಾತ್ಯತೇ || ಭಾ. ಭೂ. 144. ||
(ಪೊಸತು ಮೊದಲಾದ ಶಬ್ದಗಳಿಗೆ ಉಪಾಂತಸ್ವರಾಕ್ಷರವು ಲೋಪವಾಗಿ ಅಕಾರಾಂತತೆ ನಿಪಾತಿಸಲ್ಪಡುತ್ತದೆ.)

which have dropped their final letters.

ನೆಱೆ ತಾಳ್ದು ಸಂಧಿಯಾಗವು |
ತಱಿಸಂದಿದಿರೊಳ್ ಸ್ವರಂಗಳಾವುವು ನಿಲೆಯುಂ. ||೬೮||

ಪದಚ್ಛೇದಂ. — ಪೊಱಗು ಒಳಗು ಪೊಸತು ಪಱಿದು ಎಳದು ಆಱ್ಕೆಯ ಅದಂತತೆಯುಂ ಆ ಸಮಾಸಾಂತರದೊಳ್ ನೆಱೆ ತಾಳ್ದು, ತಱಿಸಂದು ಇದಿರೊಳ್ ಸ್ವರಂಗಳ್ ಆವುವು ನಿಲೆಯುಂ, ಸಂಧಿ ಆಗವು.

ಅನ್ವಯಂ. — ಪೊಱಗು ಒಳಗು ಪೊಸತು ಪಱಿದು ಎಳದು ಆಱ್ಕೆಯ ಅದಂತತೆಯುಂ ಆ ಸಮಾಸಾಂತರದೊಳ್ ನೆಱೆ ತಾಳ್ದು, ಇದಿರೊಳ್ ತಱಿಸಂದು ಸ್ವರಂಗಳ್ ಆವುವು ನಿಲೆಯುಂ, ಸಂಧಿ ಆಗವು.

ಟೀಕು. — ಪೊಱಗು = ಪೊಱಗೆಂಬ ಶಬ್ದಂ; ಒಳಗು = ಒಳಗೆಂಬ ಶಬ್ದಂ; ಪೊಸತು = ಪೊಸತೆಂಬ ಶಬ್ದಂ; ಪಱಿದು = ಪಱಿದೆಂಬ ಶಬ್ದಂ; ಎಳದು = ಎಳದೆಂಬ ಶಬ್ದಂ; ಆಱ್ಕೆಯ = ಉಪಾಂತದ ಅಕ್ಷರಕ್ಕೆ ಲೋಪಮಾಗಿ ಅಕಾರಮಂ ಪಡೆವುದೆಂಬ ಆಱ್ಕೆಯ; ಅದಂತತೆಯುಂ = ಅಕಾರಾಂತತ್ವಮಂ; ಆ ಸಮಾಸಾಂತರದೊಳ್ = ಆ ಸಮಾಸಮಧ್ಯದಲ್ಲಿ; ನೆಱೆ = ಚೆನ್ನಾಗಿ; ತಾಳ್ದು = ಧರಿಸಿ; ಇದಿರೊಳ್ = ಮುಂದುಗಡೆಯಲ್ಲಿ; ತಱಿಸಂದು = ಚೆನ್ನಾಗಿ ಸಂದು; ಸ್ವರಂಗಳ್ = ಸ್ವರಾಕ್ಷರಂಗಳ್; ಆವುವು = ಆವುವು; ನಿಲೆಯುಂ = ನೆಲೆಗೊಂಡಿರೆಯುಂ; ಸಂಧಿ = ಸಂಹಿತೆ; ಆಗವು = ಆಗವು.

ವೃತ್ತಿ. — ಪೊಱಗು ಒಳಗು ಪೊಸತು ಪಱಿದು ಎಳದು ಎಂಬಿವರ್ಕೆ ಸಮಾಸವಿಷಯದೊಳ್ ಉಪಾಂತಾಕ್ಷರಕ್ಕೆ ಲೋಪಮಾಗಿ, ಅಕಾರಾಂತತೆಯ ನೈದಿ, ನಿಪಾತದಂತೆ, ಪರದೊಳ್ ಸ್ವರಮಾವುವಿರ್ದೊಡಂ, ಸಂಧಿಯಿಲ್ಲ.

ಪ್ರಯೋಗಂ. — ಪೊಱ ಅಡಿ, ಒಳ ಅಟ್ಟಂ, ಪೊಸ ಅಡಕೆ, ಪಱ ಅಲಗು, ಎಳ ಅಂಚೆ.

ಪೊಸತು ಪಱಿದೆಳದು ಪೊಱಗೊಳ- |
ಗು ಸಮಮೆನಿಪ್ಪವಱೊಳತ್ವಮಂತಕ್ಕೆ ನಿಪಾ- ||
ತಿಸೆ ಪಡೆಗುಮವಱೊಳೊಗಿಂ- |
ಗಸಂಗದಿಂ ಸಮನಿಸಿರ್ಕುಮುಳ್ಳಾದೇಶಂ || ಶ. ಸ್ಮೃ. 53. ||

ಸೂತ್ರಂ. || ೫೯ ||

In writing Kannada, combinations of letters cannot occur when the final letter of the first word is short and the initial letter of the second word is a double consonant. — This double consonant, when a compound with Rêpha, is, sometimes, considered as slack.

ಪರಪದಪೂರ್ವಂ ದ್ವಿತ್ವಾ- |
ಕ್ಷರವಾಗಿರೆ ಪೂರ್ವಪದದ ಚರಮಂ ಹ್ರಸ್ವಾ- ||
ಕ್ಷರವಾಗೆ ಸಂಧಿದೋಷಂ |
ಸರೇಫಮಿದಿರಾಗೆ ಶಿಥಿಲಮೆಂದನುಕರಿಪರ್. || ೬೯ ||

ಪದಚ್ಛೇದಂ. — ಪರಪದಪೂರ್ವಂ ದ್ವಿತ್ವಾಕ್ಷರಂ ಆಗಿ ಇರೆ, ಪೂರ್ವಪದದ ಚರಮಂ ಹ್ರಸ್ವಾಕ್ಷರಂ ಆಗೆ, ಸಂಧಿದೋಷಂ. ಸರೇಫಂ ಇದಿರ್ ಆಗೆ, ಶಿಥಿಲಂ ಎಂದು, ಅನುಕರಿಪರ್.

ಟೀಕು, ಯಥಾನ್ವಯಂ. — ಪರಪದ = ಮುಂದಣ ಪದದ; ಪೂರ್ವಂ = ಮೊದಲಕ್ಷರಂ; ದ್ವಿತ್ವಾಕ್ಷರಂ = ಒತ್ತಿನಕ್ಷರಂ; ಆಗಿ = ಆಗಿ; ಇರೆ = ಇರೆ; ಪೂರ್ವಪದದ = ಮೊದಲ ಪದದ; ಚರಮಂ = ಅಂತ್ಯಂ; ಹ್ರಸ್ವಾಕ್ಷರಂ = ಹ್ರಸ್ವವಾದಕ್ಷರಂ; ಆಗೆ = ಆಗೆ; ಸಂಧಿದೋಷಂ = ಸಂಧಿದೋಷವಪ್ಪುದು; ಸರೇಫಂ = ರೇಫೆಯೊಡನೆ ಕೂಡಿದಕ್ಷರಂ; ಇದಿರಾಗೆ = ಮುಂದಾಗೆ; ಶಿಥಿಲಮೆಂದು = ಶಿಥಿಲವಾಗುವುದೆಂದು; ಅನುಕರಿಪರ್ = ಅಂಗೀಕರಿಸುವರ್.

ವೃತ್ತಿ. — ಪರಪದದ ಮೊದಲಕ್ಕರಂ ದ್ವಿತ್ವಮಾಗಿರೆ, ಪೂರ್ವಪದದ ಕಡೆಯಕ್ಕರಂ ಲಘುವಾಗಿರೆ, ಸಂಧಿದೋಷಮಕ್ಕುಂ. ಛಂದೋವಿಷಯದೊಳ್ ಪರಪದದ ಪೂರ್ವಾಕ್ಷರಂ ರೇಫೆವೆರಸಿರ್ದೊಡಂ, ಶಿಥಿಲಮಾಗಲಾರ್ಪುದೆಂದು ಕೆಲಂಬರದನಂಗೀಕರಿಸುವರ್.

ಪ್ರಯೋಗಂ. — ಸಂಧಿದೋಷಕ್ಕೆ —

"ಬರಿಸಿಪ್ಪ್ರಧಾನರಂ ಕು- |
ಳ್ಳಿರಿಸಿಪ್ಪ್ರಿಯಕುಶಲವಾರ್ತೆಯಂ ನೆಱೆ ಕೇಳ್ದು ||
ಸ್ಥಿರಮಿರ್ದುಪ್ರಭು ನುಡಿಯೆ |
ಪ್ರರೂಢಮುದನಾದನಾತನೆಂಬುದಮಾರ್ಗಂ." || 80 ||

ಸರೇಫಸಂಯೋಗಕ್ಕೆ —

"ಮಿಱುಗುತ್ತಿರ್ಪ ತ್ರಿಶೂಲದಿಂ ......" || 81 ||

ಪ್ರಣಯದೆ ತ್ರಿಪಥೆಗೆ ನಡೆದಂ |
ತ್ರಿನೇತ್ರನೊಲವಿಂದೆ ತಾಳ್ದಿದಂ ಮಸ್ತಕದೊಳ್. || 82 ||

ಸೂತ್ರಂ. || ೭೦ ||

But it ought not to be considered as slack.

ಬಗೆಯದೆ ಸತೃಣಾಭ್ಯವಹಾ- |
ರಿಗಳುಸಿರ್ವರ್ ಗದ್ಯಕಾವ್ಯದೊಳ್ ನಿರ್ಬಂಧಂ ||
ಪುಗದೆಂದರೋಚಿಗಳದಂ |
ತೆಗಟೆಂದಾ ಗದ್ಯಪದ್ಯಕಾವ್ಯದೊಳಿರ್ಕರ್ || ೭೦ ||

ಪದಚ್ಛೇದಂ. — ಬಗೆಯದೆ, ಸತೃಣಾಭ್ಯವಹಾರಿಗಳ್ ಉಸಿರ್ವರ್, ಗದ್ಯಕಾವ್ಯದೊಳ್ ನಿರ್ಬಂಧಂ ಪುಗದು ಎಂದು; ಅರೋಚಿಗಳ್ ಅದಂ, ತೆಗಟ್ ಎಂದು, ಆ ಗದ್ಯಪದ್ಯಕಾವ್ಯದೊಳ್ ಇರ್ಕರ್.

ಅನ್ವಯಂ. — ಸತೃಣಾಭ್ಯವಹಾರಿಗಳ್, ಗದ್ಯಕಾವ್ಯದೊಳ್ ನಿರ್ಬಂಧಂ ಪುಗದೆಂದು, ಬಗೆಯದೆ, ಉಸಿರ್ವರ್; ಅರೋಚಿಗಳ್ ಅದಂ, ತೆಗಟ್ ಎಂದು, ಆ ಗದ್ಯಪದ್ಯಕಾವ್ಯದೊಳ್ ಇರ್ಕರ್.

ಟೀಕು. — ಸತೃಣ = ತೃಣದೊಡನೆ ಕೂಡಿದ; ಅಭ್ಯವಹಾರಿಗಳ್ = ವ್ಯಾಪಾರವನುಳ್ಳ ಕವಿಗಳ್; ಗದ್ಯಕಾವ್ಯದೊಳ್ = ಗದ್ಯಕಾವ್ಯದಲ್ಲಿ; ನಿರ್ಬಂಧಂ = ಬಲಾತ್ಕಾರಂ; ಪುಗದೆಂದು = ಪ್ರವೇಶವಾಗದೆಂದು; ಬಗೆಯದೆ = ವಿಚಾರಿಸದೆ; ಅದಂ = ಆ ಸರೇಫಮಿದಿರಾಗೆ ಶಿಥಿಲಮಪ್ಪುದೆಂಬ ಸಂಧಿಯಂ; ಉಸಿರ್ವರ್ = ಪೇಳ್ವರ್; ಅರೋಚಿಗಳ್ = ಹೇಯವುಳ್ಳವರ್; ಅದಂ = ಆ ಸಂಧಿಯಂ; ತೆಗಟೆಂದು = ನಿಂದೆ ಬರ್ಪುದೆಂದು; ಆ ಗದ್ಯಪದ್ಯಕಾವ್ಯದೊಳ್ = ಆ ಗದ್ಯಕಾವ್ಯ ಪದ್ಯಕಾವ್ಯಂಗಳಲ್ಲಿ; ಇರ್ಕರ್ = ಪೇಳರ್.

ಸೂತ್ರಂ. || ೭೧ ||

ಕರೆಗೆತ್ವದಿರ್ಗೆಯಲ್ಲದೆ |
ಪರಮಿರೆ ಪದ್ಯಾರ್ಧವಾಕ್ಯವೇಷ್ಟನದೆಡೆಗಂ ||
ಸ್ಫುರದನುಕೃತಿಗಂ ಸ್ವರಮವು |
ಪರಮಿರೆ ಋತ್ವಕ್ಕಮಂತೆ ಸಂಧಿವಿಕಲ್ಪಂ. || ೭೧ ||

When ಅಲ್ is joined to ಕರೆ, and ಅದೆ to ಇರ, or at the end of a half verse or when the meaning requires it or after quotations from Samskrita, or also after imitative sounds or before ಋ combination of letters is optional.

ಪದಚ್ಛೇದಂ. — ಕರೆಗೆ ಅತ್ವದ ಇರ್ಗೆ ಅಲ್ ಅದೆ ಪರಂ ಇರೆ, ಪದ್ಯಾರ್ಥವಾಕ್ಯವೇಷ್ಟನದ ಎಡೆಗಂ ಸ್ಫುರದನುಕೃತಿಗಂ ಸ್ವರಂ ಅವು ಪರಂ ಇರೆ, ಋತ್ವಕ್ಕಂ ಅಂತೆ ಸಂಧಿವಿಕಲ್ಪಂ.

ಟೀಕು, ಯಥಾನ್ವಯಂ. — ಕರೆಗೆ = ಕರೆಯೆಂಬ ಧಾತುವಿಂಗೆ; ಅತ್ವದ = ಅಕಾರದ; ಇರ್ಗೆ = ಇರೆಂಬ ಧಾತುವಿಂಗೆ; ಅಲ್ = ಅಲ್ ಎಂದು; ಅದೆ = ಅದೆ ಎಂಬುದು; ಪರಮಿರೆ = ಪರಮಾಗಿರೆ; ಪದ್ಯ = ಪದ್ಯಂಗಳ; ಅರ್ಥ = ಅರ್ಥದ; ವಾಕ್ಯವೇಷ್ಟನದ = ಸಂಸ್ಕೃತದ ವಾಕ್ಯವೇಷ್ಟನದ; ಎಡೆಗಂ = ಸ್ಥಾನಕ್ಕೆಯುಂ; ಸ್ಫುರತ್ = ಪ್ರಕಾಶಿಸುವ; ಅನುಕೃತಿಗಂ = ಅನುಕರಣಶಬ್ದಕ್ಕೆಯುಂ; ಸ್ವರಂ = ಸ್ವರಾಕ್ಷರಂಗಳ್; ಅವು = ಅವು; ಪರಮಿರೆ = ಪರದಲ್ಲಿರೆ; ಋತ್ವಕ್ಕಂ = ಋಕಾರಂ ಪರಮಾದುದರ್ಕೆಯುಂ; ಅಂತೆ = ಹಾಂಗೆ; ಸಂಧಿ = ಸಂಹಿತೆ; ವಿಕಲ್ಪಂ = ವಿಕಲ್ಪವಪ್ಪುದು.

ವೃತ್ತಿ. — ಕರೆಯೆಂಬ ಶಬ್ದಕ್ಕೆ ಅಲ್ ಪರಮಾದೊಡಂ, ಅದಂತಮಾದ ಇರ್ಗೆ ಅದೆ ಪರಮಾದೊಡಂ, ಪದ್ಯಾರ್ಥಕ್ಕಂ ವಾಕ್ಯವೇಷ್ಟನಕ್ಕಂ ಅನುಕರಣೆಗಂ ಸ್ವರಂ ಪರಮಾದೊಡಂ, ಸಂಧಿವಿಕಲ್ಪಂ; ಋಕಾರಂ ಪರಮಾದೊಡಮಂತೆ ಕ್ರಮಂ.

ಪ್ರಯೋಗಂ. — ಅಲ್ ಅದೆಗಳ ವಿಸಂಧಿಗೆ —

ಕರೆ + ಅಲ್ = ಕರೆಅಲ್. ಇರ + ಅದೆ = ಇರಅದೆ.

"ಬಗೆವೊಡಬಿನಿಸಿರ ಅದೆ" || 83 ||

ಅವಬಿ ಸಂಧಿಗೆ —

"ಮೈಗರೆಯಲ್ ಪಾಂಡವರ್ಗೆ ನೆಱೆಸಿದುವು ಬರಿಸಂ" || 84 ||

"ಇರದೆ ಗರ್ಜಿಸಿ ಬೊಪ್ಪಲಂ ತಳರ್ದಂ ಜವಂ ತಳರ್ವಂದದಿಂ" || 85 ||

ಪದ್ಯಾರ್ಥಕ್ಕೆ ವಿಸಂಧಿಯಾದುದರ್ಕೆ —

"ಅಲ್ಲಿ ಯಿದುಂಟೆಂಬರ್ಥದೊ- |
ಳೆಲ್ಲಿಯುಮುಳ್ಳೊಡೆಯವಂತ ಶಬ್ದಮುಮಕ್ಕುಂ ||
ಎಲ್ಲಂದದೊಳಂ ಪೋಲಿಸು- |
ವಲ್ಲಿ ಗುಣಾಧಿಕರೊಳಂತೆವೋಲೆನಲಕ್ಕುಂ" || 86 ||

ಪದ್ಯಾರ್ಥಸಂಧಿಗೆ —

ಬನದೊಳಗೆ ಪೋಗಿ ಪೊಸಪೂ- |
ವಿನ ಗೊಂಚಲನಕ್ಕ ನಿನಗೆ ತಂದಪ್ಪೆಂ ನೀ- ||

ನ್ನಿನಿತೊಂದು ಬೇಗದಿಂ ನಿ- |
ನ್ನಿನಿಯನ ಪೆಱ್ಕಿಯೊಳಿರೆಂದು ಸಖಿತೊಲಗುವುದುಂ || 87 ||

ವಾಕ್ಯವೇಷ್ಟನ ವಿಸಂಧಿಗೆ—(ದೀಪಿಕಾ)
". . . . . . 'ಕಃ
ಕೇನಾರ್ಥೀಕೋ ದರಿದ್ರಃ' ಎನಿತುಮನಿತುಮಂ ಧರ್ಮಜಂ ಸೂಱಿ
ಗೊಟ್ಟಂ" || 88 ||

ವಾಕ್ಯವೇಷ್ಟನ ಸಂಧಿಗೆ—
"'ನ ದೇವ ಚರಿತಂ ಚರನ್' ನಿಸಿದ್ದೈ ತ್ರಿಲೋಕೇಶ್ವರಾ" || 89 || ಆ.ಪು: 353.8

ಅನುಕರಣ ವಿಸಂಧಿಗೆ—
"ಕವಕ್ಕವ ಎಲೆ ಎಲೆ" || 90 ||
". . . . . ಊ ಊ ಪುಗಲ್ |
ಪುಗಲೆಂದೊಚ್ಚತ ಊಳ್ವ ಕೋಗಿಲೆಯುಂ . . . ." || 91 ||

ಅನುಕರಣ ಸಂಧಿಗೆ—
". . . . . ಭುಮ್ಮೆಂಬ ಭಟಚ್ಚಟೆಂಬ . . . ." || 92 ||

ಋಕಾರ ವಿಸಂಧಿಗೆ—
"ಎಸೆಗುಂ ಋಜ್ವಾಗತಂ ಕಣ್ಗೊಳಿಸುಗುಮಳವಟ್ಟಿರ್ದ ಋಜ್ವಾಗತಂ
. . ." || 93 ||

ಋಕಾರ ಸಂಧಿಗೆ—
"ಸರಸಮೃಜುವೀರನೆಂದಾ |
ತರುಣಿಯನೊಸದಿತ್ತಂ . . . ." || 94 ||

ವಾಕ್ಯವೇಷ್ಟನಶಬ್ದಮುಂ ಅನುಕರಣಶಬ್ದಮುಮಿರ್ದಂತಿರ್ಪುವು, ಕನ್ನಡ ವಿಭಕ್ತಿಯಂ ಮಾಡಬೇಡ. "ನವೋ ನವೋ ಭವತಿ ಜಾಯಮಾನೋಹ್ನಾ" ಎಂಬ ಸಂಸ್ಕೃತವಾಕ್ಯಾಂತಮಂ, ಜಾಯಮಾನೋಹ್ನಮೆಂದು, ಉಪಸಂಹರಿಸಲಾಗದು. "ಧಗಧಗ" ಎಂಬುದುಂ "ಧಗಧಗಂ" ಎನಲಾಗದು.

ಸೂತ್ರಂ. ‖ ೬೨ ‖

Combinations of letters are to be used with much discretion, and obscenities are to be avoided by all means.

ಪದಯುಗದ ಸಂಧಿಯಂ ಬೇ- |
ಱಿದೊಂದಸಹ್ಯೋಕ್ತಿ ಪುಟ್ಟೆ ಮಾಡುವುದುಂ ಮಾ- ‖
ರ್ಗದೊಳುಳ್ಳ ಸಂಧಿಯಂ ಕೆಡಿ- |
ಪುದುಮಾಗದು ತಾಂ ಯಥೇಷ್ಟಮೆಂದಱಿವುಳ್ಳರ್. ‖ ೬೨ ‖

ಪದಚ್ಛೇದಂ.—ಪದಯುಗದ ಸಂಧಿಯಂ ಬೇಱೆ ಅದು ಒಂದು ಅಸಹ್ಯೋಕ್ತಿ ಪುಟ್ಟೆ ಮಾಡುವುದುಂ ಮಾರ್ಗದೊಳ್ ಉಳ್ಳ ಸಂಧಿಯಂ ಕೆಡಿಪುದುಂ ಆಗದು ತಾಂ, ಯಥೇಷ್ಟಂ ಎಂದು, ಅಱಿವುಳ್ಳರ್.

ಅನ್ವಯಂ.—ಅಱಿವುಳ್ಳರ್ ತಾಂ, ಯಥೇಷ್ಟಮೆಂದು, ಪದಯುಗದ ಸಂಧಿಯಂ ಬೇಱೆ ಅದೊಂದು ಅಸಹ್ಯೋಕ್ತಿ ಪುಟ್ಟೆ ಮಾಡುವುದುಂ ಮಾರ್ಗದೊಳುಳ್ಳ ಸಂಧಿಯಂ ಕೆಡಿಪುದುಂ ಆಗದು.

ಟೀಕು.—ಅಱಿವುಳ್ಳರ್ = ವಿಚಾರವುಳ್ಳ ಕವಿಗಳ್; ತಾಂ = ತಾಂ; ಯಥೇಷ್ಟಮೆಂದು = ಸಂಧಿ ಯಥೇಷ್ಟಮೆಂದು, (ಇಚ್ಛೆ ಬಂದ ಹಾಂಗೆ ಎಂಬರ್ಥಂ); ಪದಯುಗದ = ಪದವೆರಡಱ; ಸಂಧಿಯಂ = ಸಂಹಿತೆಯಂ; ಬೇಱೆ = ಅನ್ಯವಾಗಿ; ಅದೊಂದು = ಅದು ತಾನೊಂದು; ಅಸಹ್ಯೋಕ್ತಿ = ಅಸಹ್ಯವಾದ ವಾಕ್ಯಂ; ಪುಟ್ಟೆ = ಹುಟ್ಟೆ; ಮಾಡುವುದುಂ = ಸಂಧಿ ಮಾಡುವುದುಂ; ಮಾರ್ಗದೊಳ್ = ಕವಿಮಾರ್ಗದಲ್ಲಿ; ಉಳ್ಳ ಸಂಧಿಯಂ = ರೂಢವಾಗಿ ಉಳ್ಳ ಸಂಧಿಯಂ; ಕೆಡಿಪುದುಂ = ಸ್ವರಲೋಪಸಂಧಿಯಂ ಮಾಡಿ ಕೆಡಿಸುವುದುಂ; ಆಗದು = ಸಲುವಳಿಯಾಗದು.

ವೃತ್ತಿ.—ಎರಡು ಪದಂಗಳ ನಡುವೆ, ಬೇಱೊಂದು ದುಃಪ್ರತೀತಿ ಪುಟ್ಟುವೆಡೆ, ಸಂಧಿಯಂ ಮಾಡಲಾಗದು; ಸಂಧಿ ಯಥೇಷ್ಟಮೆಂದು, ರೂಢಮಪ್ಪ ಸಂಧಿಯಂ ಕೆಡಿಸಿ, ಸ್ವರಲೋಪಸಂಧಿಯಂ ಮಾಡಲಾಗದು.

ಪ್ರಯೋಗಂ.--ಸಂಧಿದೋಷಪರಿಹಾರದ ಲಕ್ಷ್ಯಂ—

"ಬನ್ನಿಯ ತರು ಡಕ್ಕೆಗೆ ಸುರ- |
ಹೊನ್ನೆಯ ತರು ಡಮರುಗಕ್ಕೆ ಕರುವಿಡಿದಿರ್ಪಾ ‖
ಚೆನ್ನಂಗಿಯ ತರು ಡಾಣೆಗೆ |
ಹೊನ್ನಂ ಕುಡುವೆಡೆಗೆ ಕಲ್ಪತರು ಡಾಕರಸಾ. ‖ 95 ‖

ಸಂಧಿದೋಷದ ಅಸಹ್ಯೋಕ್ತಿಗೆ—

ಆಸೆಗಣೆತಾ; ಪೂಸಲೆಸೊಗಸು; ಪೊಸತುಲ್ಲಾರಂ; ಮೆಚ್ಚುತುಣ್ಣೆ.

"..... ....ಹೇಲತಾಕೋಮಲಾಂಗೀ" || 96 ||

".....ಪೂಱಿವಕೆಯಂ ತರವೇಱಿನೇ...." || 97 ||

ವಿಸಂಧಿದೋಷಕ್ಕೆ—

ಅಸಿಯ ಒಱಿ ಬೆಸೆದ ಪೆಟ್ಟಿಗೆ |
ಮಿಸುಗುವ ಅರಸೈದೆ ತೊಳಪ ಕನ್ನವುರಂ ಜೆ- ||
ಲ್ವೆಸೆದಿರೆ ಬಲವರ್ಪ ಜನರ್ |
ಕುಸುಮೇಷುವಮೇಳದವರ್ಗಳೆನಿಸಿದರವಱೊಳ್ || 98 ||

"ಪೊನ್ನ ಅಂದಳಂ" ಎಂದಿಂತು ಸಂಧಿಯಂ ಕೆಡಿಸಲಾಗದು.

ಸೂತ್ರಂ || ೬೨ ||

Also sounds disagreeable to the ear (for instance the joining of two Rêphas) are to be avoided.

ಎರಡುಂ ರೇಫೆಗಳಂ ತಂ- |
ದುರವಣೆಯಿಂ ಕೂಡಿದಂತೆವೋಲ್ ಶ್ರುತಿಕಷ್ಟಂ ||
ಬರೆ ಸಂಧಿ ಮಾಡಲಾಗದು |
ಕರಡೆಯ ಗಿರ್ಗಟದ ದನಿವೊಲಮರವವೆಂದುಂ. || ೬೨ ||

ಪದಚ್ಛೇದಂ.— ಎರಡುಂ ರೇಫೆಗಳಂ ತಂದು ಉರವಣೆಯಿಂ ಕೂಡಿದಂತೆವೋಲ್ ಶ್ರುತಿಕಷ್ಟಂ ಬರೆ, ಸಂಧಿ ಮಾಡಲ್ ಆಗದು; ಕರಡೆಯ ಗಿರ್ಗಟದ ದನಿವೋಲ್ ಅಮರವು ಅವು ಎಂದುಂ.

ಅನ್ವಯಂ.— ಅವು ಎಂದುಂ ಕರಡೆಯ ಗಿರ್ಗಟದ ದನಿವೋಲ್ ಅಮರವು. ಉಳಿದುದು ಯಥಾನ್ವಯಂ.

ಟೀಕು.— ಎರಡುಂ ರೇಫೆಗಳಂ= ಪೂರ್ವಪದದ ಕಡೆಯಲ್ಲಿ ಪರಪದದ ಮೊದಲಲ್ಲಿ ಇರ್ದ ಎರಡು ರೇಫೆಗಳನ್ನು; ತಂದು= ತಂದುಕೊಂಡು; ಉರವಣೆಯಿಂ= ಶೀಘ್ರದಿಂದೆ; ಕೂಡಿದಂತೆವೋಲ್= ಕೂಡಿದ ಹಾಂಗೆ; ಶ್ರುತಿಕಷ್ಟಂ= ಶ್ರುತಿಕಷ್ಟವೆಂಬ ಕರ್ಣಕಠೋರಂ; ಬರೆ= ಬರೆ; ಸಂಧಿ ಮಾಡಲ್= ಸಂಧಿಯಂ ಮಾಡಲ್ಕೆ; ಆಗದು= ಸಲುವಳಿಯಾಗದು; ಅವು= ಅವು; ಎಂದುಂ= ಆವಾಗಳುಂ; ಕರಡೆಯ= ಕರಡೆಯೆಂಬ ವಾದ್ಯದ; ಗಿರ್ಗಟದ= ಗಿರ್ಗಟಿಯೆಂಬ ವಾದ್ಯದ; ದನಿವೊಲ್= ಧ್ವನಿಯ ಹಾಂಗೆ; ಅಮರವು= ಪೊರ್ದುಗೆಯಾಗವು.

ವೃತ್ತಿ.—ಪದಂಗಳೆರಡಱ ಅಂತರಾಳರೇಫೆಗಳ್, ಕೂಡಿದಂತೆ, ಶ್ರುತಿಕಷ್ಟಮಾಗೆ, ಸಂಧಿಯಂ ಮಾಡಲಾಗದು; ಕರಡೆಯ ಗಿರ್ಗಟದ ಧ್ವನಿಯಂತಿರವು, ನೇರ್ಪಡವು.

ಪ್ರಯೋಗಂ.—ರೇಫದ್ವಿತೀಯಸಂಧಿದೋಷಕ್ಕೆ—

ಬಂದರ್ರ್ಾಮರ್; ದೇವರ್ರ್ಕ್ಷಿಸುಗೆ;

"ಮೂವರ್ರ್ಾಯರನೆ ಮಾಱುವಂತೆಸೆದಿರ್ಕುಂ". || 99 ||

ಶ್ರುತಿಕಷ್ಟಕ್ಕೆ—'ಏರ್ದ್ವಿಟ್ಸ್ತ್ರೀಯರ್', ಎಂದು ಮಾಡಲಾಗದು.

ಸೂತ್ರಂ. || ೭೪ ||

Combination of letters regarding the ಎ of strict emphasis and ಅಱೆ when their meaning is modified.

ಅವಧಾರಣೆಯೆನಿಯೋಗ- |
ವ್ಯವಹೃತಿಯಿಂದಿಱೆನಿಪಾತವಿಷಯದೊಳಲ್ಪಾ- ||
ರ್ಥವನಾಳ್ದಱೆ ವಸ್ತುವಿನ- |
ರ್ಥವನುಸಿರುತ್ತಿರೆ ತಗುಳ್ಚುವುದು ಸಂಹಿತೆಯಂ. || ೭೪ ||

ಪದಚ್ಛೇದಂ.—ಅವಧಾರಣೆ ಎ ಅನಿಯೋಗವ್ಯವಹೃತಿಯಿಂದ ಇಱೆ, ನಿಪಾತವಿಷಯದೊಳ್ ಅಲ್ಪಾರ್ಥವಂ ಆಳ್ದ ಅಱೆ ವಸ್ತುವಿನ ಅರ್ಥವಂ ಉಸಿರುತ್ತ ಇಱೆ, ತಗುಳ್ಚುವುದು ಸಂಹಿತೆಯಂ.

ಅನ್ವಯಂ.—ಸಂಹಿತೆಯಂ ತಗುಳ್ಚುವುದು.

ಟೀಕು.—ಅವಧಾರಣೆ = ಅವಧಾರಣೆಯ ಏಕಾರಂ; ಅನಿಯೋಗವ್ಯವಹೃತಿಯಿಂದೆ = ತನ್ನ ನಿಯತಾರ್ಥವಂ ಬಿಟ್ಟು ಅನಿಯೋಗವ್ಯವಹಾರದಿಂದೆ; ಇಱೆ = ಇಱೆ; ನಿಪಾತವಿಷಯದೊಳ್ = ಅವ್ಯಯವಿಷಯದಲ್ಲಿ; ಅಲ್ಪಾರ್ಥವಂ = ಕಿಱಿದೆಂಬಲ್ಪಾರ್ಥವಂ; ಆಳ್ದ = ತಾಳ್ದ; ಅಱೆ = ಅಱೆಯೆಂಬ ಶಬ್ದಂ; ವಸ್ತುವಿನ = ಒಂದು ವಸ್ತುವಿನ; ಅರ್ಥವಂ = ಸರಿ ಭಾಗವಂ; ಉಸಿರುತ್ತಿರೆ = ಹೇಳುತ್ತಿರೆ; ಸಂಹಿತೆಯಂ = ಸಂಧಿಯಂ; ತಗುಳ್ಚುವುದು = ಎಯ್ದುವುದು.

ವೃತ್ತಿ.—ಅವಧಾರಣೆಯ ಏಕಾರಂ ತನ್ನ ನಿಯತಾರ್ಥಮಂ ಬಿಟ್ಟು ಅನಿಯೋಗಮಾದಲ್ಲಿಯುಂ ಕಿಱಿದೆಡೆಯಂ ಪೇೞ್ವ ನಿಪಾತಾರ್ಥದ ಅಱೆಯೆಂಬ ಶಬ್ದಮೊಂದು ವಸ್ತುವಿನ ಭಾಗಮಂ ಪೇೞ್ವಲ್ಲಿಯುಂ ಸಂಧಿಯುಂಟು.

ಪ್ರಯೋಗಂ. — ಅನಿಯೋಗಸಂಧಿಗೆ —

"ಮಾಮರನಲ್ಲದಿಲ್ಲ ತನಿಗಂಪಿನ ಮಲ್ಲಿಗೆಯಲ್ಲದಿಲ್ಲ. . ." ‖ 100 ‖

ಆರೆಯ ಸಂಧಿಗೆ —

"ಕುರುಪತಿಯಂ ಏಷ್ಣು ಬೇಡಿದಂ ಧರೆಯರೆಯಂ" ‖ 101 ‖

2. Combination of Consonants.

ಸೂತ್ರಂ.[1] ‖ ೨೫ ‖

In combination ಕ, ತ, ಪ, when initials of the second word, are often changed into ಗ, ದ, ಬ.

ಇರೆ ವರ್ಗಪ್ರಥಮಂಗಳ್ ।
ಪರದೊಳ್ ಚಟವರ್ಗಮುೞಿಯೆ ತಮ್ಮ ತೃತೀಯಾ- ‖
ಕ್ಷರಮಕ್ಕುಂ ಪದವಿಧಿಯೊಳ್ ।
ಪರಿಹರಿಸಲ್ಬಾರದಲ್ಲಿ ಬಹುಳಸ್ಥಿತಿಯಂ. ‖ ೨೫ ‖

ಪದಚ್ಛೇದಂ. — ಇರೆ ವರ್ಗಪ್ರಥಮಂಗಳ್ ಪರದೊಳ್ — ಚಟವರ್ಗಂ ಉೞಿಯೆ — ತಮ್ಮ ತೃತೀಯಾಕ್ಷರಂ ಅಕ್ಕುಂ ಪದವಿಧಿಯೊಳ್; ಪರಿಹರಿಸಲ್ ಬಾರದು ಅಲ್ಲಿ ಬಹುಳಸ್ಥಿತಿಯಂ.

ಅನ್ವಯಂ. — ಪದವಿಧಿಯೊಳ್ — ಚಟವರ್ಗಂ ಉೞಿಯೆ — ವರ್ಗಪ್ರಥಮಂಗಳ್ ಪರದೊಳ್ ಇರೆ, ತಮ್ಮ ತೃತೀಯಾಕ್ಷರಂ ಅಕ್ಕುಂ; ಅಲ್ಲಿ (ಬಹುಳಸ್ಥಿತಿಯಂ ಪರಿಹರಿಸಲ್)ಬಾರದು) ವಿಕಲ್

---

1) ವರ್ಗಪ್ರಥಮಾನಾಂ ತೃತೀಯಾಃ ಸಮಾಸೋತ್ತರಪದಾದೌ ‖ ಭಾ. ಭೂ. 28. ‖ (ಸಮಾಸದ ಮುಂದಣ ಪದದ ಪ್ರಥಮಾಕ್ಷರಗಳಾಗಿದ್ದ ವರ್ಗದ ಮೊದಲನೆಯ ಅಕ್ಷರಗಳು ತಂತಮ್ಮ ಮೂರನೆಯ ಅಕ್ಷರಗಳಾಗುತ್ತವೆ.)

ಚಟವರ್ಗಯೋಃ ತ್ವ ‖ ಭಾ. ಭೂ. 30. ‖

(ಚವರ್ಗಟವರ್ಗಗಳ ಪ್ರಥಮಾಕ್ಷರಗಳಿಗೆ ಸಮಾಸದಲ್ಲಿ ತೃತೀಯಾಕ್ಷರಗಳು ಬರುವುದಿಲ್ಲ.)

ಪದವಿಧಿಯಿಂ ನೆಱೆದುತ್ತರ ।
ಪದದಾದಿಯೊಳೊಂದಿ ನಿಂದ ವರ್ಗಪ್ರಥಮಂ- ‖
ಕ್ಕದರ ತೃತೀಯಾಕ್ಷರಮಂ- ।
ಪ್ಪುದರಕ್ಕುಂ ಬಹುಳಮುೞಿಯೆ ಚಟವರ್ಗಂಗಳ್ ‖ ಶ. ಸ್ಮ. 11 ‖

ಟೀಕು.— ಪದವಿಧಿಯೊಳ್ = ಸಮಾಸವಿಧಿಯಲ್ಲಿ; ಚಟವರ್ಗಂ = ಚವರ್ಗ ಟವರ್ಗಂಗಳ್; ಉೞಿಯೆ = ಹೊರತಾಗಿ; ವರ್ಗ = ವರ್ಗಂಗಳ; ಪ್ರಥಮಂಗಳ್ = ಕ ತ ಪ ಎಂಬ ಮೊದಲಕ್ಷರಂಗಳ್; ಪರದೊಳ್ = ಪರಪದದಾದಿಯಲ್ಲಿ; ಇರೆ = ಇರೆ; ತಮ್ಮ = ತಮ್ಮ ತಮ್ಮ; ತೃತೀಯಾಕ್ಷರಂ = ಗ ದ ಬ ಎಂಬ ಮೂಱನೆಯಕ್ಷರಂಗಳ್; ಅಕ್ಕುಂ = ಅಪ್ಪವು; ಅಲ್ಲಿ = ಆ ತೃತೀಯಾಕ್ಷರವಾಗುವಲ್ಲಿ; ಬಹುಳಸ್ಥಿತಿಯುಂ = ಬಹುಳದ ಸ್ಥಿತಿಯಂ; ಪರಿಹರಿಸಲ್ಬಾರದು = ಬಿಡಬಾರದು.

ವೃತ್ತಿ.— ಚಟವರ್ಗದಿಂ ಪಿಂಗಿದ ಕ ತ ಪಂಗಳ್ ಪರಪದದಾದಿಯೊಳಿರ್ದು, ಸಮಾಸವಿಷಯದೊಳ್ ತಮ್ಮ ತಮ್ಮ ತೃತೀಯಾಕ್ಷರಂಗಳಂ ಬಹುಳತೆಯಿನೆಯ್ದುಗುಂ.

ಪ್ರಯೋಗಂ.— ಕಕಾರದ ತೃತೀಯತ್ವಕ್ಕೆ—

"ಪೞಗನ್ನಡದ ಪುದುಂಗೊಳೆ |
ಕೊೞೆಸಕ್ಕದಮಂ ತಗುಳ್ಚಿ ಜಾಣ್ಗಿಡೆ ಮುತ್ತಂ ||
ಮೆೞಸುಂಗೋದಂತಿರೆ ಪೇ- |
ೞ್ವೆೞಗವಿಗಳ ಕವಿತೆ ಬುಧರನೆರ್ದೆಗೊಳಿಸುಗುಮೇ" || 102 ||

"ಗೞೆಗೂಸಾಡುವರಿಂದ್ರನಂ ಗಿರಿಶನಂ ಸರ್ವಸ್ವಮಂ ಕೊಂಡು
ಮುನ್ನುೞಿವರ್. . . . ." || 103 ||

ತಕಾರದ ತೃತೀಯತ್ವಕ್ಕೆ—

'ಕಣ್ದೆಱವು' 'ಮೇಲ್ದುಡುಗೆ'

". . . . . ಮಣಿಯುಡಿದೊವಲುಂ ಪಿರಿಯ ಪಣೆಗಟ್ಟುಂ" || 104 ||

"ನಿಱುದಲೆ ನೀಳ್ಪುವೆತ್ತ ನಗೆಗಣ್ ಬೆಳರ್ಗೆಂಪಿನ ಸೊಂಪನಾಳ್ದ ಬಾ-
ಯ್ದೆಱೆ. . . . ." || 105 ||

ಪಕಾರದ ತೃತೀಯತ್ವಕ್ಕೆ—

'ಕಣ್ಬನಿ'

". . . . . ತ್ರ- |
ಣ್ಬುೞಿಲ ತಳದೊಳ್ ರುದ್ರಂ ಕಂಡಲ್ಲಿ ಕಣ್ಬೊಲನಾಗೆ . ." || 106 ||

ಬಹುಳಮೆಂಬುದಱಿಂದೆ ಕಿಱಿದೆಡೆಯೊಳಿಲ್ಲ — 'ತಲೆಕಟ್ಟು' 'ಬೆಸೆಕೋಲ್' 'ಏದುಪಂದಿ'.

"ಒಳಕೈಯೊಳಿರ್ದು ಪಲ್ಗಿರಿ- |
ದೊಳವಾಲಂಗೊಂಡು. . . . . ." || 107 ||

ಚಟವರ್ಗಕ್ಕೆ ತೃತೀಯತ್ವಮೆಂದುಮಿಲ್ಲದುದರ್ಕೆ —
ಕಡುಚಾಗಿ; ಕಣ್ಚಾಲ್ಲಂ; ಕಡುಟಕ್ಕೆ; ಪೊಸಟೊಪ್ಪಿಗೆ; ಕಳ್ಳಟಪ್ಪಣಂ.

ಸೂತ್ರಂ.[1] || ೭೬ ||

The foregoing rule is, for instance, not made use of when ಕ, ತ, ಪ occur after ಒರ್ and ಇರ್ after ಱ when substitute of ಱ್, and after ಱ್ when substitute of ಡ್.

ಒಂದೆರಡರ್ಕೆ ಱಿಕಾರ- |
ಕ್ಕಂದಾದಾದೇಶರೇಫೆಗಂ। ಡತ್ವಕ್ಕಂ ||
ಬಂದಾದೇಶಱಿಱಿಕ್ಕಂ। |
ಸಂಧಿಸದು ತೃತೀಯವೃತ್ತಿ ಕತಪಕ್ಕೆಂದುಂ. || ೭೬ ||

ಪದಚ್ಛೇದಂ. — ಒಂದೆರಡರ್ಕೆ, ಱಿಕಾರಕ್ಕೆ ಅಂದು ಆದ ಆದೇಶರೇಫೆಗಂ, ಡತ್ವಕ್ಕಂ ಬಂದ ಆದೇಶಱಿಱಿಕ್ಕಂ ಸಂಧಿಸದು ತೃತೀಯವೃತ್ತಿ ಕತಪಕ್ಕೆ ಎಂದುಂ.

ಅನ್ವಯಂ. — ಒಂದೆರಡರ್ಕೆ, ಱಿಕಾರಕ್ಕೆ ಅಂದಾದಾದೇಶರೇಫೆಗಂ, ಡತ್ವಕ್ಕಂ ಬಂದಾದೇಶಱಿಱಿಕ್ಕಂ ಕತಪಕ್ಕೆ ತೃತೀಯವೃತ್ತಿ ಎಂದುಂ ಸಂಧಿಸದು.

ಟೀಕು. — ಇಲ್ಲಿ ಅನುವರ್ತನೆ—ಪದವಿಧಿಯೊಳ್ ವರ್ಗಪ್ರಥಮಂಗಳ್ ಪರದೊಳಿರೆ ಒಂದೆರಡರ್ಕೆ = ಒಂದೆರಡೆಂಬಿವರ್ಕೆ; ಱಿಕಾರಕ್ಕೆ = ಱತ್ವಕ್ಕೆ; ಅಂದು = ಆ ಸಮಾಸ ಮಾಡುವಂದು; ಅದಾದೇಶರೇಫೆಗಂ = ಆದ ಆದೇಶದ ರೇಫೆಗೆಯುಂ; ಡತ್ವಕ್ಕಂ = ಡಕಾರಕ್ಕೆಯುಂ;

---

[1] ನಾವಿಷ್ಟರೇಫಾತ್ || ಭಾ. ಭೂ. 29. ||
(ವರ್ಗಪ್ರಥಮಾಕ್ಷರಗಳು ಆದೇಶವಾಗಿ ಬಂದ ರೇಫೆಯಿಂದ ಪದವಾದರೆ ಅವಕ್ಕೆ ತಂತಮ್ಮ ತೃತೀಯಾಕ್ಷರಗಳಿಲ್ಲ.)

"ಪದವಿಧಿಯಿಂ ನೆಱೆದುತ್ತರ"

ಇತ್ಯಾದಿ ಶಬ್ದಸ್ಮೃತಿ ಸೂತ್ರ 11 ಪುಟ ನೋಡಿರಿ.

ಬಂದ ಆದೇಶಱೞಕ್ಕಂ = ಬಂದ ಆದೇಶದ ಱೞಕ್ಕೆಯುಂ; ಕತಪಕ್ಕೆ = ಪರಮಾದ ಕತಪಂಗಳ್ಗೆ; ತೃತೀಯವೃತ್ತಿ = ಮೂಱನೆಯಕ್ಷರದ ವೃತ್ತಿ; ಎಂದುಂ = ಆವಾಗಳುಂ; ಸಂಧಿಸದು = ಸಂಘಟನೆಯಾಗದು, ಬಾರದೆಂಬುದರ್ಥಂ.

ವೃತ್ತಿ. — ಒಂದೆರಡೆಂಬಿವರ್ಕಂ, ಱಕಾರಕ್ಕಾದೇಶಮಾದ ರೇಫೆಗಂ, ಡಕಾರಕ್ಕಾದೇಶಮಾದ ೞಕ್ಕಂ ಪರಮಾದ ಕ ತ ಪಂಗಳ್ಗೆಂದುಂ ತೃತೀಯತ್ವಮಿಲ್ಲ.

ಪ್ರಯೋಗಂ. — ಒಂದರ್ಕೆ —

"ಒರ್ಕೈಸಿ ಬಿಲ್ಲನಂಬುಮ-" |
ನುರ್ಕಾಳ್ಗಳ್ ಸುರಿಗೆಗಿೞ್ತು ಮಾಣ್ದಿರದಾ ಗೋ- || (— ನಿೞ್ತು)
ವರ್ಕಳಿದಿರ್ಚಿದ ಘೋೞಾ- |
ಯ್ತರ್ಕಳೊಳೆಕ್ಕತುಳಮಿಱಿದು ಕುಱಿದಱಿಯಾದರ್" || 108 ||

". . . . . ಒರ್ತುತ್ತೆಂಬಿನಂ ತುತ್ತಿ ದೇ- |
ವಗಣಕ್ಕಚ್ಚರಿಯಾಗೆ ಪಾಱಿ. . . . ." || 109 ||

"ಒರ್ಪಿಡಿಗೂೞಿಂ ಸಿತ್ರಗನ |
ಕಪ್ಪಡಮುಂ . . . ." || 110 ||

ಎರಡರ್ಕೆ —

". . . . . ಇರ್ಕೋಡಿಯಿಂ ತೀವಿ ನಾ
ಲ್ದೆಸೆಗಂ ಸೂಸಿ . . . ." || 111 ||

" . . . . ಇರ್ತಲೆಗೋಜಂ" || 112 ||

"ಪೇಱಿರ್ದ್ದಿರ್ಪ್ಪರ್ತ್ತು ತೋಳುಂ ದಶಮುಖಕುಹರಾಟೋಪಮುಂ
. . . ." || 113 ||

ಱಕಾರಕ್ಕಾದೇಶಮಾದ ರೇಫೆಗೆ—

ಮಾರ್ತಲೆ, ಮಾರ್ಕಟ್ಟೆ, ಮಾರ್ಕೊರಲ ಭೈರವಂ.

"ಮಾರ್ತಪ್ಪ ತೆರೆಗಳಿಂ ತರ- |
ಲಾರ್ತುದು ತನ್ನದಿಗೆ ಸುರನದೀ ವಿಭ್ರಮಮಂ." || 114 ||

ಬೇರ್ವಟ್ಟಂ.

"． ． ． ． ． ． ． ． ． ಏರ್ಪೆತ್ತರೇರ್ಪೆತ್ತರಂ |
ಪದುಳಂ ಮಾಟ್ಪಿದುಚಿತಂ ． ． ． ． ． ． ． ." || 115 ||

ಡಕಾರಕ್ಕಾದೇಶಮಾದ ೞಿಟಿಕ್ಕೆ—

ನಾಟ್ಪಿಗರಣಂ; ನಾಟ್ಪಿಡುಗುಣಿ.
"ಕಾಟ್ಪಿಕ್ಕಿಚ್ಚು ತಗುಳೆ ತಮ್ಮೊಳ್ |
ಕೋಟ್ಪಿಟ್ಟೆ ． ． ． ． ． ． ． ． ． ． ． ． ." || 116 ||
"ಕಾಟ್ಪಿೞಿಯಿ ಮಸಗಿದ ವೊಲೊಡ್ಡಿದುದು ಕುರುಸೈನ್ಯಂ." || 117 ||
"ಕಾಟ್ಪಿರವಾಗೆ ಕಾವ್ಯರಸಮರ್ಥಮುಮಕ್ಕರಮುಂ ಪ್ರತೀತಿಯಂ
ಮಾಟ್ಪಿನೆಗಂ ． ． ． ． ． ． ． ． ． ． ． ． ." || 118 ||

ಸಮುಚ್ಚಯವಶದಿಂದೆ ಕೆಳಗಣ್ಣಾದೇಶಮಾದ ೞಿಟಿಕ್ಕಂ ತೃತೀಯತ್ವವಿಲ್ಲ – ಕಿಟ್ಕಿರೆ ಎಂಬಂತೆ.

ಸೂತ್ರಂ.[1] || ೬೭ ||

After vowels and radical (half) consonants the letters ಪ, ಬ, ಮ are, also in metrical and nonmetrical prose, often changed into ವ.

ವಿದಿತಸ್ವರದಿನಸಾದೇ- |
ಶದ ಸಹಜವ್ಯಂಜನಂಗಳಿಂ ಪರದ ಪವ- ||
ರ್ಗದ ನೆಲೆಗಕ್ಕುಂ ವತ್ವಂ |
ಪದವಿಧಿಯೊಳ್ ಬಹುಳವೃತ್ತಿಯಿಂ ವಾಕ್ಯದೊಳಂ. || ೬೭ ||

[1] ಸ್ವರಯರಲೇಭ್ಯೋ ಬಹುಲಂ ವಃ ಪವರ್ಗಸ್ಯ || ಭಾ. ಭೂ. 31. ||
(ಸ್ವರಗಳಿಂದಲೂ ಯರಲಕಾರಗಳಿಂದಲೂ ಪರವಾದ ಪವರ್ಗಾಕ್ಷರಗಳಿಗೆ ವಿಕಲ್ಪದಿಂದ ವಕಾರವಾಗುವುದು.)

ಸ್ವರದಿಂ ಯಲದಿನನಾದಿ- |
ಪ್ಸರೇಫದಿಂ ಪರದೊಳಮರ್ದು ತೋಱಿ ಪವರ್ಗಂ ||
ದೊರೆಕೊಳ್ಳುಂ ವಾದೇಶಮ- |
ದರೆ ಉದು ವಾಕ್ಯದೊಳಮಸ್ವಿತಾರ್ಥದೊಳಕ್ಕುಂ. || ಶ. ಸ್ಮ. 12. ||

ಪದಚ್ಛೇದಂ.— ವಿದಿತಸ್ವರದಿಂ ಅನಾದೇಶದ ಸಹಜವ್ಯಂಜನಂಗಳಿಂ ಪರದ ಪವರ್ಗದ ನೆಲೆಗೆ ಆಕ್ಕುಂ ವತ್ವಂ ಪದವಿಧಿಯೊಳ್ ಬಹುಳವೃತ್ತಿಯಿಂ ವಾಕ್ಯದೊಳಂ.

ಅನ್ವಯಂ.— ಪದವಿಧಿಯೊಳ್ ಬಹುಳವೃತ್ತಿಯಿಂ, ವಾಕ್ಯದೊಳಂ, ವಿದಿತಸ್ವರದಿಂ ಅನಾದೇಶದ ಸಹಜವ್ಯಂಜನಂಗಳಿಂ ಪರದ ಪವರ್ಗದ ನೆಲೆಗೆ ವತ್ವಂ ಆಕ್ಕುಂ.

ಟೀಕು.— ಪದವಿಧಿಯೊಳ್ = ಸಮಾಸದ ವಿಧಿಯಲ್ಲಿ; ಬಹುಳವೃತ್ತಿಯಿಂ = ಬಹುಳದ ವರ್ತನೆಯಿಂದೆ; ವಾಕ್ಯದೊಳಂ = ವಾಕ್ಯದಲ್ಲಿಯುಂ; ವಿದಿತಸ್ವರದಿಂ = ಪ್ರಸಿದ್ಧವಾದ ಸ್ವರಾಕ್ಷರಂಗಳಿಂದೆ; ಅನಾದೇಶದ = ಆದೇಶವಲ್ಲದ; ಸಹಜವ್ಯಂಜನಂಗಳಿಂ = ಸಹಜವಾದ ವ್ಯಂಜನಾಕ್ಷರಂಗಳಿಂದೆ; ಪರದ = ಮುಂದಣ; ಪವರ್ಗದ = "ಪ ಬ ಮ" ಎಂಬ ಪವರ್ಗದ; ನೆಲೆಗೆ = ಸ್ಥಾನಕ್ಕೆ; ವತ್ವಂ = ವಕಾರಂ; ಆಕ್ಕುಂ = ಅಪ್ಪುದು.

ವೃತ್ತಿ.— ಸ್ವರಂಗಳಿಂದನಾದೇಶದ ಸಹಜವಾದ ವ್ಯಂಜನಂಗಳಿಂ ಪರದೊಳಿರ್ದ ಪವರ್ಗಕ್ಕೆ ಸಮಾಸವಿಷಯದೊಳ್ ವತ್ವಮಕ್ಕುಂ; ಬಹುಳಮೆಂಬುದಱಿಂ ಕೆಲವಱೊಳಿಲ್ಲ; ವಾಕ್ಯದೊಳಂ ವತ್ವಮುಂಟು.

ಪ್ರಯೋಗಂ.— ಸ್ವರಂಗಳ್ಗೆ — ಪಕಾರಕ್ಕೆ—

"ಎಳವೆಱೆ ದಾಡೆ ಕೆಂದಳಿರೆ ನಾಲಗೆ ಮಾಮರದಳ್ಳಿಗೊಂಬಿನೊಳ್ |
ಮಿಳಿರ್ವೆಳವಳ್ಳಿ ಬಾಲಮಲರ್ದೊಂಗಲೆ ಕೇಸರಮೆಂಬಿನಂ ಮನಂ ||
ಗೊಳೆ ಮಧುಮಾಸಕೇಸರಿ ವಿಯೋಗಿಗಳೆಂಬ ಮೃಗಂಗಳಂ ಭಯಂ- |
ಗೊಳಿಸಿದುದುದ್ಘಕೀರಮದಕೋಕಿಲಗರ್ಜಿತತರ್ಜಿತಂಗಳಿಂ" || 119 ||
"ಬೆಳೆವೊಲನೆತ್ತಲ್ ಕಿಕ್ಕಿಱಿದ ಪರ್ಬಿದ ಪೆರ್ಬಾಳೆ. . ." || 120 ||

ಬಕಾರಕ್ಕೆ—

"ನಡುವಣ ಕರ್ಪುಂ ಕಡೆಯಣ |
ಕಡುವೆಳ್ಪುಂ ತುದಿಯ ಕೂರ್ಪುಮೆಸೆದಿರೆ ಜನರಂ ||
ಬಿಡದಿಸಲೆ ತೆಗೆದ ಮದನನ |
ನಿಡಿಯಲರ್ಗಣೆಗಳನೆ ಪೋಲ್ತುವಾಕೆಯ ಕಣ್ಗಳ್" || 121 ||

ಮಕಾರಕ್ಕೆ—

"ಮಱವಣೆಗಂ ಬೀಣೆಗಮಂ- |
ತರಮಾವುದು ದೋಷರಹಿತಮೃದುಲಲಿತಪದ ||

ಸ್ಫುರಿತಸರಸೋಕ್ತಿಗಂ ನಿ- |
ಷ್ಠುರಕುಕವಿಕಟೂಕ್ತಿಗಳ್ಗಮೇನಂತರಮೋ" || 122 ||

". . . . . .ಕಳೆಯಲ್ಕಾ- |
ಗದು ನರಪತಿಕುಳವನಱಿವ ಪೞವಾನಿಸ್ಸನಂ." || 123 ||

ಸಹಜವ್ಯಂಜನಕ್ಕೆ—

ಪ—"ಬ್ೞೇರ್ವೆರಸು ಕಾಯ್ತು ಪಲಸೆಳ |
ನೀರ್ವೊನಲಂ ಕೞಿದು ತೆಂಗು . . . . . ." || 124 ||

" . . . . .ಬೇಟಮಂ
ಹಡೆದನೆ ಬಾೞ್ಗೆ ಬಾೞ್ವೊಡಿನಿತಿಲ್ಲದ ಬಾೞ್ವಿಣನೇಕೆ ಬೞ್ದಿಪಂ."
|| 125 ||

ಬ—ಆಳ್ವಲ್ಮೆ; ತೋಳ್ವಲ್ಮೆ. ". . . . . .ಗೇಣ್ವಾಯ್ಗೆವೀೞದೆ" || 126 ||
"ಮೆಯ್ಮಸವೊಂದೆ ಪೂವಿನೊಳೆ ಪೋಗಿ ಮೊಗಂ ಮುರಿದಳ್ಳೆಗೊಂಬಿ |
ನೊಳ್ ಪಾಯ್ವುದು . . . ." || 127 ||

ಮ—"ಸಾತಿಶಯಾರ್ಥಮುಮಂ ಮೆ- |
ಲ್ಲಾತುಮನೊಸೆದಿತ್ತರೊಲಿದು ತವಗಿಲ್ಲದುವಂ." || 128 ||

ಆದೇಶವ್ಯಂಜನಕ್ಕೆ ವತ್ವಮಿಲ್ಲ—

ಪ—". . . . . .ಕಿ- |
ಱಿಪ್ಪೊಡೆ ರಸಭಾವಮಿರ್ಪೊಡೆ ಮುಖಂ ಸುರತೋತ್ಸವಗೋಮಿನೀ
ಮುಖಂ." || 129 ||

ಬ—"ಇರ್ಬಾಳ್ ಮೂವಾಳಿಕ್ಕಿ- |
ರ್ದುರ್ವರೆಯೊಳ್. . . . ." || 130 ||

ಮ—ಇರ್ಮಡಿ.

"ಧರೆಯೋಳ್ವೀರದ ಪೆಂಪಿನ |
ನರನಿಂದಿರ್ಮಡಿ ಬಕಾರಿಯಿಂ ಮೂವಡಿ ಭಾ- |
ಸ್ಕರಸುತನಿಂ ನಾಲ್ವಡಿ ಮುರ- |
ಹರನಿಂದೈವಡಿ ನೆಗೞ್ತೆಯುಧಟರ ಭೀಮಂ" || 131 ||

ಬಹುಳಮೆಂಬುದಱಿಂ ಕೆಲವಱೊಳ್ ವತ್ವಮಿಲ್ಲ.

ಪ—ಕೆಯ್ಪೞಿಗುಟ್ಟಿಯಾಡಿದರ್. ಪೂಪುಣುಂಬು. ಪಲ್ಪೞಿಗುಟ್ಟಿದಂ.

ಬ—ಕಣ್ಬೇಟಂ. ಕರ್ಬೇಡರೆ. ಸುಡುಬಾಡು. ಆ ನಾಡು ಪಿರಿಯ ಕಣ್ಬೀಡು.

ಮ—ಬಾಳ್ಮೊನೆ. ಪಾಱ್ಮನೆ. ಕತ್ತುರಿಮಿಗಂ.

ವಾಕ್ಯಕ್ಕೆ ವತ್ವಂ—ಬೆಂಗೆವಂದಂ. ತರವೇೞ್ದಿಂ. ನೆಲೆಗೆವಂದಂ.

"ದಿವದಿಂ ಕೆಲಸಕ್ಕೆವರ್ಪ ದಿವಿಜಾಂಗನೆಯರ್" || 132 ||

"ತಮರೂರ್ಗೆವೋಪ ಕುಲಜಾಂಗನೆಯರ್ |
ಕಮಲೋದರಂಗೆ ಪಡೆದರ್ ಮುದಮಂ" || 133 ||

"ಕಾಮನ ಗರವಟಿಗೆವರ್ಪಂತೆ ಸುತ್ತಿ ಬರ್ಪುವು ಗಿಳಿಗಳ್" || 134 ||

ಸೂತ್ರಂ.[1] || ೭೮ ||

ಸ is often changed into ಚ, ಜ and ಛ after consonants, with the exception of ಯ and ಲ.

ಇರೆ ಯಲರಹಿತವ್ಯಂಜನ |
ಪರಮಾಗಿ ಸಕಾರಮಲ್ಲಿ ಬಹುಳಂ ಚತ್ವಂ ||
ಅರೆ ಎಡೆಯೊಳ್ ಜತ್ವಂ ಮೇ- |
ಣರೆ ಎಡೆಯೊಳ್ ಸಂಖ್ಯೆಯಾಗೆ ನಿಯತಂ ಛತ್ವಂ. || ೭೮ ||

ಪದಚ್ಛೇದಂ.— ಇರೆ ಯಲರಹಿತವ್ಯಂಜನಪರಂ ಆಗಿ ಸಕಾರಂ, ಅಲ್ಲಿ ಬಹುಳಂ ಚತ್ವಂ; ಅರೆ ಎಡೆಯೊಳ್ ಜತ್ವಂ; ಮೇಣ್ ಅರೆ ಎಡೆಯೊಳ್, ಸಂಖ್ಯೆ ಆಗೆ, ನಿಯತಂ ಛತ್ವಂ.

ವ್ಯಂಜನಾದಲಯಾತ್ಸಸ್ಯ ಚಃ ಕ್ವಚಿಜ್ಜತ್ವಂ || ಭಾ. ಭೂ. 32. ||

(ಲಕಾರ ಯಕಾರಗಳಲ್ಲದ ವ್ಯಂಜನಗಳಿಂದ ಪರವಾದ ಸಕಾರಕ್ಕೆ ಚಕಾರಾದೇಶವಾಗುವುದು; ಕೆಲವೆಡೆಯಲ್ಲಿ ಜಕಾರವಾಗುವುದು.)

ಸಂಖ್ಯಾಯಾಂ ಛತ್ವಂ || ಭಾ. ಭೂ. 33. ||

(ಸಂಖ್ಯೆಯಲ್ಲಿ ಆ ಸಕಾರಕ್ಕೆ ಛಕಾರವಾಗುವುದು; ಯಲಕಾರಗಳ ಮುಂದಣ ಸಕಾರಕ್ಕೆ ಛಕಾರವಾಗದು.)

ಯಲರಹಿತವ್ಯಂಜನದಿಂ |
ನಿಲೆ ಮುಂದೆ ಸಕಾರಮಲ್ಲಿ ಬಹುಳಂ ಚತ್ವಂ ||
ಕೆಲಕೆಲವೆಡೆಯೊಳ್ ಜತ್ವಂ |
ನೆಲೆಗೊಳ್ಗುಂ ಸಂಖ್ಯೆಯಾದೊಡಕ್ಕುಂ ಛತ್ವಂ || ಶ. ಸ್ಮೃ. 13. ||

ಅನ್ವಯಂ. — ಯಲರಹಿತವ್ಯಂಜನಪರಂ ಆಗಿ ಸಕಾರಂ ಇರೆ, ಅಲ್ಲಿ ಬಹುಳಂ ಚತ್ವಂ; ಅರೆ ಎಡೆಯೊಳ್ ಜತ್ವಂ; ಮೇಣ್ ಅರೆ ಎಡೆಯೊಳ್, ಸಂಖ್ಯೆ ಆಗೆ, ನಿಯತಂ ಛತ್ವಂ.

ಟೀಕು. — ಯಲರಹಿತ = ಯಕಾರ ಲಕಾರಂಗಳಿಂ ವಿರಹಿತಂಗಳಾದ; ವ್ಯಂಜನ = ವ್ಯಂಜನಂಗಳ್ಗೆ; ಪರಂ = ಮುಂದಣಕ್ಷರಂ; ಆಗಿ = ಆಗಿ; ಸಕಾರಂ = ಸತ್ವಂ; ಇರೆ = ಇರೆ; ಅಲ್ಲಿ = ಆ ಸ್ಥಾನದಲ್ಲಿ; ಬಹುಳಂ = ಬಹುಳವಾಗಿ; ಚತ್ವಂ = ಚಕಾರವಪ್ಪುದು; ಅರೆ ಎಡೆಯೊಳ್ = ಕೆಲವೆಡೆಯಲ್ಲಿ; ಜತ್ವಂ = ಜಕಾರವಪ್ಪುದು; ಮೇಣ್ = ಅದಲ್ಲದೆ; ಅರೆ ಎಡೆಯೊಳ್ = ಕಿಱಿದೆಡೆಯಲ್ಲಿ; ಸಂಖ್ಯಾ = ಸಂಖ್ಯಾವಾಚಿ; ಆಗೆ = ಆಗೆ; ನಿಯತಂ = ಕಟ್ಟಾಗಿ; ಛತ್ವಂ = ಛಕಾರವಪ್ಪುದು.

ವೃತ್ತಿ. — ಯಕಾರ ಲಕಾರಂಗಳಿಂ ಕಳೆದುೞಿದ ವ್ಯಂಜನಂಗಳ್ಗೆ ಪರಮಾಗಿ ನಿಂದ ಸಕಾರಂ ಬಹುಳತೆಯಿಂ ಚತ್ವಮಕ್ಕುಂ; ಕೆಲವೆಡೆಯೊಳ್ ಜತ್ವಮಕ್ಕುಂ; ಕಿಱಿದೆಡೆಯೊಳ್ ಸಂಖ್ಯೆಯಾಗೆ ಛತ್ವಮಕ್ಕುಂ.

ಪ್ರಯೋಗಂ. — ಚತ್ವಕ್ಕೆ —

". . . . . ನು- |
ಣ್ಚರದ ತಿಣ್ಪು ಘನಘೋಷಗಭೀರಂ" || 135 ||

". . . . . ಈಂಚರದಿನಾಣತಿ ಮಾಡಿದುದುನ್ಮದಾಳಿ. . . ." || 136 ||

ಜತ್ವಕ್ಕೆ — ಮುಂಜೂರ್. ಮುಂಜೆಱಂಗು. ತಣ್ಜೊಡರ್.

". . . . . ಕಟ್ಟಿದ ಪೊಂ- |
ಜುರಿಗೆಯೊಳಂ ಜನಮನೇಂ ಮನಂಗೊಳಿಸಿದುದೋ" || 137 ||

ಛತ್ವಕ್ಕೆ —

"ಪದಿನೆಣ್ಛಾಸಿರ ಲೋಹವಕ್ಕರೆಯ ಜಾತ್ಯಶ್ವಂಗಳಿರ್ಛಾಸಿರಂ |
ಮದಮಂ ಮುಕ್ಕುಳಿಸಿರ್ದ ದಂತಿಘಟೆಗಳ್ ನೂರ್ಛಾಸಿರಂ." || 138 ||

ಬಹುಳಮೆಂಬುದಱಿಂ ಕೆಲವೆಡೆಯೊಳಿಲ್ಲ.

"ಕಣ್ಣೋಲಮನಱಿಯಂ ಪರ- |
ವೆಣ್ಸುರವಧುಗೆಣೆಯೆನಿಪ್ಪೊಡಂ ತೊಡರ್ದಾತಂ ||
ಮೇಣ್ಸುರನಕ್ಕುಮೆ ಅಚಲಪ- |
ವಣ್ಸಾರ ಕೋಟ್ಸಿರಿಗೆ ವಾರನಹಿತಕೃತಾಂತಂ" || 139 ||

"ಸೋನೆಯ ಕೆಸರ್ಗಳಲರ್ದಲರ ಬೆಳ್ಸರಿ. . . ." ‖ 140 ‖

"ಕಳ್ಸವಿಗೆ ಕುಡಿದು ಧನಮಂ" ‖ 141 ‖

ಯಲರಹಿತಕ್ಕೆ—ಕೆಯ್ಸುರಿಗೆ.

"..... ಬಾಯ್ಸವಿಗೆ ಮೆಯ್ಸವಿ ಕಣ್ಸವಿಯಪ್ಪ ರೂಪು ..." ‖ 142 ‖

ಕಲ್ಸೆರೆ. ಮೆಲ್ಸರಂ.

". . . . . ಮಾವಿನೊಳ್ |
ಮಸಗುತಮಿರ್ಪ ಬಲ್ಸೊನೆಯ ಸೋನೆಗೆ ಕಾಂಚನಕೇತಕೀವನ- |
ಪ್ರಸರದಲರ್ಗಳೊೞೆಗುಡೆ. . . . ." ‖ 143 ‖

ಬಹುಳಮೆಂಬುದಱಿಂ ಸ್ವರಂಗಳ ಪರದಲ್ಲಿರ್ದ ಸಕಾರಕ್ಕಂ ಕಿಱಿದೆಡೆಗಳಲ್ಲಿ ಚಕಾರ ಜಕಾರಂಗಳಪ್ಪುವು—

ಮುಚ್ಚಿರೆ. ಮುಚ್ಚಾಲ್. ತುಡುಜೊಡರ್.

ಸೂತ್ರಂ[1]. ‖ ೭೯ ‖

ಮೊದಲೊಳ್ ಹ್ರಸ್ವೈಕಸ್ವರ- |
ಮೊದವೆ ಪರಂ ಸ್ವರಮದಾಗೆ ನಣಲಯಳಂಗ- ‖
ಳ್ಗುದಯಿಸುಗುಂ ದ್ವಿತ್ವಂ ಪೂ- |
ರ್ವದೀರ್ಘಕವ್ಯಯಕೆ ವರ್ಣತತಿಗದ್ವಿತ್ವಂ. ‖ ೭೯ ‖

When the vowel of *monosyllabic* Nominal bases ending in ನ್, ಣ್, ಲ್, ಯ್, ಳ್ is short, and such bases meet with an initial vowel, their end-consonant must be doubled. Particles (Adverbs) of such a description are excepted from this rule.

---

1) ನಣಲಯಳಾ ದ್ವಿಃ ಸ್ವರೇ ಹ್ರಸ್ವಪೂರ್ವಾಃ ‖ ಭಾ. ಭೂ. 34. ‖

(ಹ್ರಸ್ವಾಕ್ಷರಗಳು ಮೊದಲುಳ್ಳ ನ, ಣ, ಲ, ಯ, ಳಕಾರಗಳು ಸ್ವರ ಪರವಾದರೆ ದ್ವಿತ್ವಗಳಾಗುತ್ತವೆ.)

ನಾನೇಕಾಕ್ಷರ ಪದೇ ‖ ಭಾ. ಭೂ. 35. ‖

(ಹ್ರಸ್ವಾಕ್ಷರವು ಪೂರ್ವವಾಗಿಯೂ ಅನೇಕಾಕ್ಷರಗಳುಳ್ಳ ಪದವು ಮೊದಲೊಳಿದ್ದರೂ ಸ್ವರ ಪರವಾದರೆ ನ, ಣ, ಲ, ಯ, ಳಕಾರಗಳಿಗೆ ದ್ವಿತ್ವವಿಲ್ಲ.)

ಅವ್ಯಯೇಪಿ ‖ ಭಾ. ಭೂ. 36. ‖

ಪದಚ್ಛೇದಂ.— ಮೊದಲೊಳ್ ಹ್ರಸ್ವೈಕಸ್ವರಂ ಒದವೆ, ಪರಂ ಸ್ವರಂ ಅದು ಆಗೆ, ನ ಣ ಲ ಯ ಳಂಗಳ್ಗೆ ಉದಯಿಸುಗುಂ ದ್ವಿತ್ವಂ; ಪೂರ್ವದೀರ್ಘಕೆ, ಅವ್ಯಯಕೆ, ವರ್ಣತತಿಗೆ ಅದ್ವಿತ್ವಂ.

ಅನ್ವಯಂ.— ಮೊದಲೊಳ್ ಹ್ರಸ್ವೈಕಸ್ವರಂ ಒದವೆ, ಸ್ವರಂ ಅದು ಪರಂ ಆಗೆ, ನ ಣ ಲ ಯ ಳಂಗಳ್ಗೆ ದ್ವಿತ್ವಂ ಉದಯಿಸುಗುಂ; ಪೂರ್ವದೀರ್ಘಕೆ, ಅವ್ಯಯಕೆ, ವರ್ಣತತಿಗೆ ಅದ್ವಿತ್ವಂ.

ಟೀಕು.— ಮೊದಲೊಳ್ = ಆದಿಯಲ್ಲಿ; ಹ್ರಸ್ವ = ಹ್ರಸ್ವವಾದ; ಏಕ = ಒಂದು; ಸ್ವರಂ = ಸ್ವರಾಕ್ಷರಂ; ಒದವೆ = ಪ್ರಾಪ್ತಿಸೆ; ಸ್ವರಂ = ಸ್ವರಾಕ್ಷರಂ; ಅದು = ಅದು; ಪರಂ = ಮುಂದು; ಆಗೆ = ಆಗೆ; ನ ಣ ಲ ಯ ಳಂಗಳ್ಗೆ = ನಕಾರ ಣಕಾರ ಲಕಾರ ಯಕಾರ ಳಕಾರಂಗಳ್ಗೆ; ದ್ವಿತ್ವಂ = ದ್ವಿರ್ಭಾವಂ; ಉದಯಿಸುಗುಂ = ಹುಟ್ಟುವುದು; ಪೂರ್ವದೀರ್ಘಕೆ = ಆದಿದೀರ್ಘಕ್ಕೆ; ಅವ್ಯಯಕೆ = ಅವ್ಯಯಶಬ್ದಂಗಳ್ಗೆ; ವರ್ಣತತಿಗೆ = ಅನೇಕಾಕ್ಷರಕ್ಕೆ; ಅದ್ವಿತ್ವಂ = ದ್ವಿತ್ವವಿಲ್ಲ.

ವೃತ್ತಿ.— ಹ್ರಸ್ವಮಪ್ಪೇಕಸ್ವರಂ ಪೂರ್ವಮಾಗೆ, ಸ್ವರಂ ಪರಮಾಗೆ, ನ ಣ ಲ ಯ ಳಕಾರಂಗಳ್ಗೆ ದ್ವಿತ್ವಮುಂಟು; ಪೂರ್ವದೀರ್ಘಮಾದೊಡಂ, ಅವ್ಯಯಮಾದೊಡಂ, ಅನೇಕಾಕ್ಷರಮಾದೊಡಂ, ದ್ವಿತ್ವಮಿಲ್ಲ.

ಪ್ರಯೋಗಂ.— ನಕಾರದ್ವಿರ್ಭಾವಕ್ಕೆ—"... ಬಿಡುಮುಡಿ
ಬೆನ್ನಪ್ಪಳಿಸೆ" || 144 ||

ಣಕಾರಕ್ಕೆ—"ಕಣ್ಣಿಂ ಕಾಣಳ್ ಚಿತ್ರದ
ಪೆಣ್ಣಂತೆವೊಲುಣ್ಣಳಾ. . . . ." || 145 ||

"ಮನದೊಳ್ ದಯವಿಲ್ಲದವನ ಕಣ್ಣೇಂ ಪುಣ್ಣೇಂ" || 146 ||

"ಎಣ್ಣೆಯೊಳರನೇಬಿಲ ತನಿ- |
ವಣ್ಣನ್ನುಣ್ಣಿಸಿದನಬ್ಜಭವಂ. . . . ." || 147 ||

(ಅವ್ಯಯಪದವು ಪೂರ್ವದಲ್ಲಿದ್ದು ಸ್ವರವು ಪರವಾದರೆ ಆ ನಣಲಯಳಕಾರಗಳಿಗೆ ದ್ವಿತ್ವವಿಲ್ಲ.)

ಸ್ವರಮುಮುರ್ದಿರೆ ಮುಂದೇಕ- |
ಸ್ವರದೊಳ್ ನಣಲಯಳಕಾರಮನಿತುಂ ಹ್ರಸ್ವಾ- ||
ಕ್ಷರಪೂರ್ವಮಾಗೆ ಪೀನಂ |
ಸ್ವರೂಪದಿಂ ದ್ವಿತ್ವವೃತ್ತಿಯಂ ತಾಳ್ದಿರ್ಕುಂ || ಶ. ಸ್ಮೃ. 14. ||

"ಪೊನ್ನುಳ್ಳವನೆ ಕುಲೀನಂ- |
ಚೆನ್ನಂ ಕಲಿ ಸತ್ಯವಾದಿಯೆನಿಸುಗುಮದಱಿಂ- ||
ದಿನ್ನುಂ ಪೊನ್ನನೆ ಪಡೆವುದು |
ಪೊನ್ನಿಂ ಸಮನಿಸುಗುಮಲ್ತೆ ಪೆಣ್ಣುಂ ಮಣ್ಣುಂ." || 148 ||

ಲಕಾರಕ್ಕೆ— "ಕಲ್ಲೆಲ್ಲಂ ಕಿಸುಗಲ್ ಮರ- |
ನೆಲ್ಲಂ. . . . .ಮಾವಿಮ್ಮಾವು . . . . . ." || 149 ||
"ನೆಲ್ಲುಂ ಕೌಂಗುಂ ಮಾವುಂ |
ಮಲ್ಲಿಗೆಯುಂ . . . . |
ಹುಲ್ಲುಂ ಹುಟ್ಟಿಗೆಯುಂ . . . ." || 150 ||

ಯಕಾರಕ್ಕೆ— "ಮೆಯ್ಯ್ ಮಸಿ ಕೊರಲ ಬಕ್ಕಳೆ |
ಪೊಯ್ಯ್ ಪುಗಿಲ್ಗರೆವ ಕೆಯ್ಯ್ ಕಂಕರಿಕೆ . . . ." || 151 ||

ಳಕಾರಕ್ಕೆ— ಮುಳ್ಳಾಗಿ. ಕಳ್ಳಾಟಂ.
"ಒಳ್ಳಾಳೆಡೆಗೋದನೊದಱ ಭಟ್ಟನೊಳೊವಜಂ." || 152 ||
". . . . . ಬೇಟ್ವಿರೆಳ್ಳಂ ಕೊದಳೆವೆರಸು ತಿಂಬಂ ನಾಗ
ದೇವಂ" || 153 ||

ಪೂರ್ವದೀರ್ಘಮಾಗೆ—

ನಕಾರಕ್ಕೆ— ತಾನ್ನೆಲ್ಲಂ. ಬಾನುದ್ದಂ. ಏನಾಯ್ತು.
"ಮೀನಾಗಿಯು ಮೆಸಡಿಯಾಗಿಯು ಮೇನಾಗಿಯುಂ" || 154 ||

ಣಕಾರಕ್ಕೆ— ಏಣುಂಟು.
[೫೯೩] "ನಾಣಂ ಪಿಂಗಿಸಿ ಮುಗ್ಧೆಗೆ |
ಜಾಣಂ ಕೈಕೊಳಿಸುವಂತೆ . . . ." || 155 ||

ಲಕಾರಕ್ಕೆ— "ಕೇಲಂ ಮಾಡುವ ತಿಗುರಿಯ |
ಕೋಲಂತೆವೊಲಿರ್ದು . . . ." || 156 ||

ಯಕಾರಕ್ಕೆ— ಬಾಯ್ಬಾರ್ವಳ್.
"ಈಯಲಿಱಿಯಲ್ ಶರಣ್ಬುಗೆ |
ಕಾಯಲ್ . . . ." || 157 ||
"ತಾಯೋರ್ವಳ್ ತಂದೆ ಬೇಱಿ. . . . . . ." || 158 ||

ಳಕಾರಕ್ಕೆ— ತೋಳ್ಳಾಟಂ. ಬಾಳ್ಳೊಪ್ಪಂ.

"ಆಳೋಳಿಯ ಮಾನಸಂಗೆ ಬಡವಂಗೆ . . . ." ‖ 159 ‖

ಅವ್ಯಯಕ್ಕೆ— "ಕಲಿ ದಲೆವಂ ಜವನಲ್ಲಿಯುಂಡಿಗೆದಂದನೋ" ‖ 160 ‖

ಅನೇಕಾಕ್ಷರಕ್ಕೆ— ಪರಲ್ಲೆಲ್ಲಂ. ತೊದಳ್ಳುಂಟೆ. ಪವಣಿಲ್ಲಂ.

"ಸರಣಾರುಮೊಳರೆ ಖಳಸಂ- |
ಸರಣದೊಳ್ . . . ." ‖ 161 ‖

"ಪರಲೆಲ್ಲಂ ಮುತ್ತುಮಾಣಿಕಂ ಪಾಸಱೆಗಳ್ |
ಪರುಸಂಗಳ್ . . . ." ‖ 162 ‖

". . . . . . .ಎನ್ನ ಮಾತಿನೊಳ್ ತೊದಳುಂಟೇ" ‖ 163 ‖

ಸೂತ್ರಂ. ‖ ೭೦ ‖

Monosyllabic Verbal themes ending in ನ್, ಣ್, ಲ್, ಯ್, ಳ್ do not allow that doubling when ಅಲ್ is joined; some ending in ಯ್, also when polysyllabic with long initials, it is optional; with other themes (ಉಯ್, 512, ನೆಯ್, 510, ಸುಯ್, 514, ಬಯ್, 508) it is obligatory, also in being conjugated, also ಅರಯ್ that is dissyllabic and has a long initial optionally do so; the themes ಉಯ್, ನೆಯ್, ಸುಯ್, ಬಯ್, however, always double their final, also in the Negative; before the suffix ಎ doubling is forbidden (excepting ಆರಯ್).

ಧಾತುಗಲುಂ ಪರಮಾದೊಡ- |
ಜಾತಂ ದ್ವಿತ್ವಂ ಯಕಾರದಲ್ಲಿ ವಿಕಲ್ಪಂ ‖
ಮಾತೇನುಯ್ನೆಯ್ಸುಯ್ಬ- |
ಯ್ಧಾತುಗಳೊಳ್ ದ್ವಿತ್ವಮಲ್ಲದಿಲ್ಲ ವಿಕಲ್ಪಂ. ‖ ೭೦ ‖

ಪದಚ್ಛೇದಂ.— ಧಾತುಗೆ ಅಲುಂ ಪರಂ ಆದೊಡೆ, ಅಜಾತಂ ದ್ವಿತ್ವಂ; ಯಕಾರದಲ್ಲಿ ವಿಕಲ್ಪಂ, ಮಾತೇಂ; ಉಯ್ ನೆಯ್ ಸುಯ್ ಬಯ್ ಧಾತುಗಳೊಳ್ ದ್ವಿತ್ವಂ ಅಲ್ಲದೆ ಇಲ್ಲ ವಿಕಲ್ಪಂ.

ಅನ್ವಯಂ.— ಧಾತುಗೆ ಅಲುಂ ಪರಂ ಆದೊಡೆ, ದ್ವಿತ್ವಂ ಅಜಾತಂ; ಯಕಾರದಲ್ಲಿ ವಿಕಲ್ಪಂ, ಮಾತೇಂ; ಉಯ್ನೆಯ್ಸುಯ್ಬಯ್ಧಾತುಗಳೊಳ್ ದ್ವಿತ್ವಂ ಅಲ್ಲದೆ ವಿಕಲ್ಪಂ ಇಲ್ಲ.

ಟೀಕು.— ಅನುವರ್ತನೆ— ನಣಲಯಳಕಾರಂಗಳಂತ್ಯವಾದ ಧಾತುಗೆ= ಧಾತುಗಳ್ಗೆ; ಅಲುಂ= ಅಲ್ ಎಂಬುದುಂ, ಉಂ ಎಂಬ ಸಮುಚ್ಚಯದಿಂದೆ ಎಕಾರಾದಿಸ್ವರಂಗಳುಂ; ಪರಂ=

ಮುಂದು; ಆದೊಡೆ = ಆದರೆ; ದ್ವಿತ್ವಂ = ದ್ವಿರ್ಭಾವಂ; ಅಜಾತಂ = ಹುಟ್ಟದು; ಯಕಾರದಲ್ಲಿ = ಯಕಾರಾಂತಧಾತುವಿನಲ್ಲಿ; ವಿಕಲ್ಪಂ = ವಿಕಲ್ಪವಾಗಿ ಬರ್ಪುದು; ಮಾತೇಂ = ಹೇಳ್ವುದೇಂ; ಉಯ್ನೆಯ್ಸುಯ್ಬಯ್ಧಾತುಗಳೊಳ್ = ಉಯ್, ನೆಯ್, ಸುಯ್, ಬಯ್, ಎಂಬ ಧಾತುಗಳಲ್ಲಿ; ದ್ವಿತ್ವಮುಲ್ಲದೆ = ದ್ವಿರ್ಭಾವಮಲ್ಲದೆ; ವಿಕಲ್ಪಂ = ವಿಕಲ್ಪಂ; ಇಲ್ಲ = ಉಂಟಾಗದು.

ವೃತ್ತಿ.—ನ ಣ ಲ ಯ ಳಕಾರಂಗಳಂತ್ಯಮಾದ ಧಾತುಗೆ ಅಲ್ ಪರಮಾದೊಡಂ ದ್ವಿತ್ವಮಿಲ್ಲ; ಯಕಾರಾಂತದಲ್ಲಿ ವಿಕಲ್ಪಂ; ಉಯ್ ನೆಯ್ ಸುಯ್ ಬಯ್ ಎಂಬಿವರ್ಕೆ ಅಲ್ ಪರಮಾದೊಡಂ ವಿಭಕ್ತಿಸ್ವರಂ ಪರಮಾದೊಡಂ ದ್ವಿತ್ವಂ ನಿತ್ಯಂ.

ಪ್ರಯೋಗಂ.—ಅದ್ವಿತ್ವಕ್ಕೆ—

ಎಸಲ್ತಕ್ಕಂ; ತಿನಲ್ಕೊಂಡಂ; ಉಣಲ್ಬಂದಂ; ಮೆಲಲ್ಪೋದಂ; ಕೊಲಲ್ಬಗೆವಂ; ಕೊಳಲ್ಸಾರ್ದಂ; ಕಳಲ್ನೋಡಿದಂ.

ವಿಕಲ್ಪ . ಯತ್ವಕ್ಕೆ—ಪೊಯಲುಂ, ಪೊಯ್ಯಲುಂ. ಕೊಯಲುಂ, ಕೊಯ್ಯಲುಂ.

ಆದಿ ದೀರ್ಘಮಾದೊಡಂ ಅನೇಕಾಕ್ಷರಮಾದೊಡಂ ವಿಭಕ್ತಿಸ್ವರಮುಂ ಪರಮಾದೊಡಂ ಆರಯ್ ಎಂಬ ಧಾತುಗೆ ದ್ವಿತ್ವವಿಕಲ್ಪಂ—

ಆರಯಲುಂ, ಆರಯ್ಯಲುಂ. ಆರಯಿಂ, ಆರಯ್ಯಿಂ. ಆರಯೆ, ಆರಯ್ಯೆ ಎಂಬಂತೆ.

ಉಯ್ಯಾದಿನಿತ್ಯದ್ವಿತ್ವಕ್ಕೆ—ಉಯ್ಯಂ, ನೆಯ್ಯರ್, ಸುಯ್ಯಯ್, ಬಯ್ಯವು; ಉಯ್ಯಲುಂ, ನೆಯ್ಯಲುಂ ಎಂಬಂತೆ.

ಸಮುಚ್ಚಯವಶದಿಂದೇಕಾರಾದಿಸ್ವರಂ ಪರಮಾದೊಡಂ ದ್ವಿತ್ವಮಿಲ್ಲ—ಎನೆ; ಕೊಲೆ; ಉಣೆ ಎಂಬಂತೆ.

ಸೂತ್ರಂ. || ೭೧ ||

The final ನ್, ಣ್, ಲ್, ಯ್, ಳ್ of all monosyllabic Verbal themes (only excepting ಕಳ್) however, must be doubled in the Negative.

ಪ್ರತಿಷೇಧದ ಧಾತುಗೆ ಮುಂ- |
ದೆ ತಱುಂಬೆ ವಿಭಕ್ತಿ ಪೂರ್ವಕಾಲಕ್ರಿಯೆಯೊಳ್ ||
ಪ್ರತಿಷೇಧದದೆಂಬುದು ಮುಂ- |
ದೆ ತೋಱೆ ಮೇಣ್ ದ್ವಿತ್ವವೃತ್ತಿ ನಿತ್ಯಮೆನಿಕ್ಕುಂ. ||೮೧||

ಪದಚ್ಛೇದಂ.— ಪ್ರತಿಷೇಧದ ಧಾತುಗೆ ಮುಂದೆ ತಱುಂಬೆ ವಿಭಕ್ತಿ, ಪೂರ್ವಕಾಲಕ್ರಿಯೆಯೊಳ್ ಪ್ರತಿಷೇಧದ ಅದೆ ಎಂಬುದು ಮುಂದೆ ತೋಱೆ ಮೇಣ್, ದ್ವಿತ್ವವೃತ್ತಿ ನಿತ್ಯಂ ಎನಿಕ್ಕುಂ.

ಅನ್ವಯಂ.— ಪ್ರತಿಷೇಧದ ಧಾತುಗೆ ಮುಂದೆ ವಿಭಕ್ತಿ ತಱುಂಬೆ, ಮೇಣ್ ಪೂರ್ವಕಾಲಕ್ರಿಯೆಯೊಳ್ ಪ್ರತಿಷೇಧದ ಅದೆ ಎಂಬುದು ಮುಂದೆ ತೋಱೆ, ದ್ವಿತ್ವವೃತ್ತಿ ನಿತ್ಯಂ ಎನಿಕ್ಕುಂ.

ಟೀಕು.— ಅನುವರ್ತನೆ — ನಣಲಯಳಕಾರಂಗಳಂತ್ಯವಾದ ಪ್ರತಿಷೇಧದ = ಪ್ರತಿಷೇಧಾರ್ಥದ; ಧಾತುಗೆ = ಧಾತುಗಳ್ಗೆ; ಮುಂದೆ = ಮುಂದುಗಡೆಯಲ್ಲಿ; ವಿಭಕ್ತಿ = ಪ್ರತ್ಯಯಂ; ತಱುಂಬೆ = ನಿಂದಿರೆ; ಮೇಣ್ = ಅದಲ್ಲದೆ; ಪೂರ್ವಕಾಲಕ್ರಿಯೆಯೊಳ್ = ಭೂತಕಾಲಕ್ರಿಯೆಯಲ್ಲಿ; ಪ್ರತಿಷೇಧದ = ಪ್ರತಿಷೇಧಾರ್ಥದ; ಅದೆ ಎಂಬುದು = ಅದೆ ಎಂಬುದು; ಮುಂದೆ = ಮುಂಗಡೆಯಲ್ಲಿ; ತೋಱೆ = ಕಾಣಿಸೆ; ದ್ವಿತ್ವವೃತ್ತಿ = ದ್ವಿಭಾವದ ವೃತ್ತಿ; ನಿತ್ಯಂ = ನಿತ್ಯಂ; ಎನಿಕ್ಕುಂ = ಎನಿಸುವುದು.

ವೃತ್ತಿ.—ಪ್ರತಿಷೇಧದರ್ಥದೊಳೆ ಧಾತುವಿಂಗೆ ವಿಭಕ್ತಿ ಪರಮಾದೊಡಂ, ಭೂತಕಾಲಕ್ರಿಯೆಯೊಳ್ ಪ್ರತಿಷೇಧಮನುಸಿರ್ವ ಅದೆ ಎಂಬುದು ಪರಮಾದೊಡಂ, ನ ಣ ಲ ಯ ಳಂಗಳ್ಗೆ ದ್ವಿತ್ವವೃತ್ತಿ ನಿತ್ಯಂ.

ಪ್ರಯೋಗಂ.—ವಿಭಕ್ತಿಗೆ—ಎನ್ನಂ, ಎನ್ನರ್. ಉಣ್ಣಂ, ಉಣ್ಣರ್. ಮೆಲ್ಲಯ್, ಮೆಲ್ಲರ್. ಬಯ್ಯೆನ್, ಬಯ್ಯೆವು. ಕೊಳ್ಳೆನ್, ಕೊಳ್ಳೆವು.

ಅದೆಗೆ—ಎನ್ನದೆ, ತಿನ್ನದೆ, ಉಣ್ಣದೆ, ಒಲ್ಲದೆ, ಬಯ್ಯದೆ, ಕೊಳ್ಳದೆ.

ಮೇಣೆಂಬುದಱಿಂ ಕಳ್ ಎಂಬ ಧಾತುವಿಂಗೆಲ್ಲಿಯುಂ ದ್ವಿತ್ವಮಿಲ್ಲ—

ಕಳಲ್ಪೋದಂ, ಕಳಲ್ಬಂದಂ, ಕಳದೆ ಬಂದಂ—ಇಂತಱಿವುದು.

ಗದ್ಯಂ.— ಇದು ಸಮಸ್ತಶಾಬ್ದಿಕಜನಮನೋಜನಿತಶಬ್ದಸಂದೇಹಶಲ್ಯಚಾರುಚುಂಬಕಾಯಮಾನಾನೂನಕರ್ಣಾಟಕಲಕ್ಷಣಶಿಕ್ಷಾಚಾರ್ಯಸುಕವಿಕೇತಿರಾಜವಿರಚಿತಮಪ್ಪ ಶಬ್ದಮಣಿದರ್ಪಣದೊಳ್ ಸಂಧಿಕಾರ್ಯಮೆಂಬ ಪ್ರಥಮಸಂಧಿ ಸಂಪೂರ್ಣಂ.

೧ನೆಯ ಅಧ್ಯಾಯಂ ಸಮಾಪ್ತಂ.

೨ನೆಯ ಅಧ್ಯಾಯಂ. II. CHAPTER.

ನಾಮಪ್ರಕರಣಂ.

ON NOUNS.

ಸೂತ್ರಂ[1]. ‖ ೭೨ ‖

ಕ್ರಿಯೆಯಂ ನುಡಿಯದುದು ವಿಭ- |
ಕ್ತಿಯನಿಲ್ಲದುದರ್ಥಮುಳ್ಳುದಂತದು ಲಿಂಗಂ ‖
ನಿಯತಚತುರ್ಭೇದಮದಾ- |
ರಯೆ ಕೃತ್ತದ್ಧಿತಸಮಾಸನಾಮಸ್ಥಿತಿಯಿಂ. ‖ ೮೨ ‖

Nominal bases are either Verbal forms (ಕೃತ್), or with certain suffixes (ತದ್ಧಿತಂ), or Compound forms (ಸಮಾಸಂ), or Ready nouns (ನಾಮಂ). Their Declension.

ಪದಚ್ಛೇದಂ.—ಕ್ರಿಯೆಯಂ ನುಡಿಯದುದು, ವಿಭಕ್ತಿಯಂ ಇಲ್ಲದುದು, ಅರ್ಥಂ ಉಳ್ಳುದು, ಅಂತು ಅದು ಲಿಂಗಂ; ನಿಯತಚತುರ್ಭೇದಂ, ಅದು ಆರಯೆ, ಕೃತ್ತದ್ಧಿತಸಮಾಸನಾಮಸ್ಥಿತಿಯಿಂ.

ಅನ್ವಯಂ.—ಕ್ರಿಯೆಯಂ ನುಡಿಯದುದು, ವಿಭಕ್ತಿಯಂ ಇಲ್ಲದುದು, ಅರ್ಥಂ ಉಳ್ಳುದು, ಅಂತು ಅದು ಲಿಂಗಂ; ಅದು ಆರಯೆ, ಕೃತ್ತದ್ಧಿತಸಮಾಸನಾಮಸ್ಥಿತಿಯಿಂ ನಿಯತಚತುರ್ಭೇದಂ.

ಟೀಕು.—ಕ್ರಿಯೆಯಂ = ಕ್ರಿಯಾರ್ಥವಂ; ನುಡಿಯದುದು = ಹೇಳದುದು; ವಿಭಕ್ತಿಯಂ = ಸಪ್ತವಿಭಕ್ತಿಗಳಂ; ಇಲ್ಲದುದು = ಇಲ್ಲದೆ ಇರ್ದುದು; ಅರ್ಥಂ = ಪುರುಳ್; ಉಳ್ಳುದು = ಉಂಟಾದುದು; ಅಂತು = ಹಾಂಗೆ; ಅದು = ಅದು; ಲಿಂಗಂ = ಲಿಂಗವೆನಿಸುವುದು;

---

[1] ಅರ್ಥವದಕ್ರಿಯಾವಾಚಿ ಕೃದಂತಂ ಚ ಲಿಂಗಂ ‖ ಧಾ. ಭೂ. 37. ‖
(ಕ್ರಿಯಾವಾಚಕವಲ್ಲದ ಕೃತ್ ಪ್ರತ್ಯಯಾಂತವಾದ ಅರ್ಥವುಳ್ಳ ಶಬ್ದವೇ ಲಿಂಗ.)
ಧಾತುವಿವರ್ಜಿತಮರ್ಥೋ- |
ಪೇತಂ ಲಿಂಗಂ . . . . ‖ ಶ. ಸ್ಮೃ. 15. ‖

ಅದು = ಆ ಲಿಂಗಂ; ಅರಯೆ = ವಿಚಾರಿಸೆ; ಕೃತ್ತದ್ಧಿತಸಮಾಸನಾಮಂ = ಕೃಲ್ಲಿಂಗಮೆಂಬ, ತದ್ಧಿತಲಿಂಗಮೆಂಬ, ಸಮಾಸಲಿಂಗಮೆಂಬ, ನಾಮಲಿಂಗಮೆಂಬ; ಸ್ಥಿತಿಯಿಂ = ಇರ್ಕೆಯಿಂದೆ; ನಿಯತ = ನಿಶ್ಚಿತವಾದ; ಚತುರ್ಭೇದಂ = ನಾಲ್ಕು ಭೇದವಾಗಿರ್ಪುದು.

ವೃತ್ತಿ.—ಕ್ರಿಯಾವಾಚಕಮಾಗಿ ಸಲ್ಲದುದು, ಸಪ್ತವಿಭಕ್ತಿಗಳನಿಲ್ಲದುದು, ನಿರರ್ಥಮಾಗಿ ಸಲ್ಲದುದು ಲಿಂಗಮೆನಿಸುಗುಂ; ಆ ಲಿಂಗಂ, ಕೃತ್ತೆಂದು, ತದ್ಧಿತಮೆಂದು, ಸಮಾಸಮೆಂದು, ನಾಮಮೆಂದು, ನಾಲ್ಕು ತೆಱನಕ್ಕುಂ.

ಪ್ರಯೋಗಂ.—ನಾಮವಿಭಕ್ತಿ ಪತ್ತಿಸುವುದು.

ಕೃತ್ತಿಂಗೆ—ಮಾಡಿದ, ಬೇಡಿದ, ನೋಡಿದ, ಕೂಡಿದ ಎಂದಿರಿಸಿ, ಕೃತ್ತನಱಿವುದು; ತರುವಾಯಿಂ—ಮಾಡಿದಂ, ಮಾಡಿದನಂ, ಮಾಡಿದನಿಂ, ಮಾಡಿದಂಗೆ, ಮಾಡಿದನತ್ತಣಿಂ, ಮಾಡಿದನ, ಮಾಡಿದನೊಳ್ ಎಂದೀ ಪರಿ ವಿಭಕ್ತಿಮಾಲೆಯಕ್ಕುಂ.

"........ತನ್ನ ನೀಳ್ದ ಜಸದಿಂ ಬೆಳ್ದಿಂಗಳಂ ಮಾಡಿದಂ" || 164 ||

"...ಬೇಡಿದನಿಷ್ಟಮಂ ಸಲಿಪುದುಂ ಕರ್ಣಂಗೆ ಜನ್ಮವ್ರತಂ" || 165 ||

". ....ಕೂಡಿದಂ- |
ಗೆರಡಂ ತಾ ಬಗೆವಾತನುಂ ನರಕದೊಳ್ ಬೀೞ್ವಿಲ್ಲಿಗೇಂ ಸಂದೆಯಂ" || 166 ||

ತದ್ಧಿತಕ್ಕೆ—ಅಡಪವಳ, ಮಡಿವಳ ಎಂದಿರಿಸಿ, ತದ್ಧಿತಮನಱಿವುದು; ತರುವಾಯಿಂ—ಅಡಪವಳಂ, ಅಡಪವಳನಂ, ಅಡಪವಳನಿಂ, ಅಡಪವಳಂಗೆ, ಅಡಪವಳನತ್ತಣಿಂ, ಅಡಪವಳನ, ಅಡಪವಳನೊಳ್ ಇಂತಕ್ಕುಂ.

ಷಟ್ಸಮಾಸಂಗಳ್ಗಂ ಸಪ್ತವಿಭಕ್ತಿಯಂ ಪತ್ತಿಸುವುದು.

ಕನ್ನಡಸಮಾಸಕ್ಕೆ—ತೆಂಗಾಳಿ, ತೆಂಗಾಳಿಯಂ, ತೆಂಗಾಳಿಯಿಂ, ತೆಂಗಾಳಿಗೆ, ತೆಂಗಾಳಿಯತ್ತಣಿಂ, ತೆಂಗಾಳಿಯ, ತೆಂಗಾಳಿಯೊಳ್.—ಇಮ್ಮಾವು; ಈರೈದು; ಕುಡುವಿಲ್ಲಂ; ಮರಗಿಡುಬಳ್ಳಿಪುಲ್ಪೊದಱ್ಪಕ್ಕಿಮಿಗಂಗಳ್; ಮುಂಗಯ್.

ಸಂಸ್ಕೃತಸಮಾಸದಲ್ಲಿ—ಪುರವನ, ನೀಲೋತ್ಪಲ, ತ್ರಿಶೂಲ, ಸದಯ, ತರುಲತೆ, ಜಿತಮದನ ಎಂಬಿವುಮವಱಿಂತೆ ಸಮಾಸಲಿಂಗಂಗಳಪ್ಪುವು; ಇವರ್ಕಂ ವಿಭಕ್ತಿ ಪತ್ತಿಸುವುದು—ಪುರವನಂ, ಪುರವನಮಂ, ಪುರವನದಿಂ, ಪುರವನಕೆ, ಪುರವನದತ್ತಣಿಂ, ಪುರವನದ, ಪುರವನದೊಳ್.

ಆದವಿಷ್ಣು ಎಂಬ (ಕನ್ನಡದ) ಗಮಕಸಮಾಸಮುಂ ಪಿರಿದೀವ ಎಂಬ (ಕನ್ನಡದ) ಕ್ರಿಯಾಸಮಾಸಮುಂ ಕೃತ್ತ್ರವಿಷ್ಟಲಿಂಗಂಗಳ್; ಇವುಮವರಿಂತೆ ಸಲ್ವುವು—

"\. . . . . ಜಲದನಿ- |
ಭೋರಸ್ಥಲನಾದವಿಷ್ಣು ವಿಜಯಾದಿತ್ಯಂ." || 167 ||
"ಪಿರಿದೀವಂ ನಿಲೆ ಸುಡಿವಂ |
ಸೆರಗಂ ಬೆರಗಂ ಪ್ರತಾಪಿ. . . . . . ." || 168 ||

ನಾಮಲಿಂಗಕ್ಕೆ—ಅರಸ, ಇಂದ್ರ, ಮೊಲ, ವರಾಹ, ಹರಿಣ, ಮೂಷಿಕ ಎಂದಿರಿಸಿ, ಸಪ್ತವಿಭಕ್ತಿಯಂ ಪತ್ತಿಸುವುದು—ಅರಸಂ, ಅರಸನಂ, ಅರಸನಿಂ, ಅರಸಂಗೆ, ಅರಸನತ್ತಣಿಂ, ಅರಸನ, ಅರಸನೊಳ್—ಈ ಪರಿಯಿನರಿವುದು. ಇಂದುಬಿಂಬದ ಮೊಲಂ. ಕಲಿಮೂಕವರಾಹಂ. ಅಗ್ನಿಮಿತ್ರನ ಹರಿಣಂ. ವಿನಾಯಕನ ಮೂಷಿಕಂ.

"ಅರಸಂ ಮೂರ್ಖಂ ಸಚಿವರ್ |
ಸರಸ್ವತೀದ್ರೋಹರ್ . . . ." || 169 ||
"\. . . . . . ಆಡಿದನಿಂದ್ರನಿಂದ್ರರಸಿತುಂ ಕೈವಾರಮಂ ಮಾಡಿ
ದರ್" || 170 ||

ಅರಸನೆಂಬುದರ್ಕೆ ಅರಸು ಎಂದುಮುಂಟು. ಕ್ರಿಯಾರ್ಥಮಂ ನುಡಿವ ಧಾತು ಲಿಂಗಮಲ್ಲದು—ನೋಡು, ಬೇಡು, ಇಸು, ಪಸು ಎಂಬಿವು ಮೊದಲಾದುವು.

ಸೂತ್ರಂ. || ೭೩ ||

As a nominal base of a Kannada Verbal theme is used the 3rd Person Singular of the Past and Future tenses with their Augment (ಆಗಮಂ), but without their Suffixes (ವಿಭಕ್ತಿ).

ಭೂತಭವಿಷ್ಯತ್ಕ್ರಿಯೆಗಳು- |
ಪೇತವಿಭಕ್ತಿಗಳನುಱಿಯೆ ಕೃತ್ತ್ವಪ್ಪವಸಂ- ||
ಭೂತಂ ಸಂಪ್ರತಿವಿಧಿಗಳೊ- |
ಳಾ ತೆಱದಿಂ ಮಧ್ಯಮೋತ್ತಮಕ್ರಿಯೆಗಳೊಳಂ. || ೭೩ ||

ಪದಚ್ಛೇದಂ.—ಭೂತಭವಿಷ್ಯತ್ಕ್ರಿಯೆಗಳ್ ಉಪೇತವಿಭಕ್ತಿಗಳಂ ಉಱಿಯೆ, ಕೃತ್ತು ಅಪ್ಪವು; ಅಸಂಭೂತಂ ಸಂಪ್ರತಿ ವಿಧಿಗಳೊಳ್, ಆ ತೆಱದಿಂ ಮಧ್ಯಮೋತ್ತಮಕ್ರಿಯೆಗಳೊಳಂ.

ಅನ್ವಯಂ.—ಸಂಪ್ರತಿ ವಿಧಿಗಳೊಳ್, ಆ ತೆಱದಿಂ ಮಧ್ಯಮೋತ್ತಮಕ್ರಿಯೆಗಳೊಳಂ ಅಸಂಭೂತಂ. (ಉಳಿದುದು ಯಥಾನ್ವಯಂ).

ಟೀಕು.— ಭೂತ = ಭೂತಕಾಲದ; ಭವಿಷ್ಯತ್ = ಭವಿಷ್ಯತ್ಕಾಲದ; ಕ್ರಿಯೆಗಳ್ = ಕ್ರಿಯಾಪದಂಗಳ್; ಉಪೇತ = ತಮ್ಮಲ್ಲಿ ಕೂಡಿರ್ದ; ವಿಭಕ್ತಿಗಳಂ = ಕ್ರಿಯಾವಿಭಕ್ತಿಗಳಂ; ಉಱೆಯೆ = ಕಳೆಯೆ; ಕೃತ್ತು = ಕೃಲ್ಲಿಂಗಂ; ಅಪ್ಪವು = ಆಗುವುವು; ಸಂಪ್ರತಿ = ವರ್ತಮಾನ ಕಾಲಕ್ರಿಯೆಗಳಲ್ಲಿ; ವಿಧಿಗಳೊಳ್ = ವಿಧಿಕ್ರಿಯೆಗಳಲ್ಲಿ; ಆ ತೆಱದಿಂ = ಆ ರೀತಿಯಿಂದೆ; ಮಧ್ಯಮ = ಮಧ್ಯಮಪುರುಷದ; ಉತ್ತಮ = ಉತ್ತಮಪುರುಷದ; ಕ್ರಿಯೆಗಳೊಳಂ = ಕ್ರಿಯೆಗಳಲ್ಲಿಯುಂ; ಅಸಂಭೂತಂ = ಕೃತ್ತು ಹುಟ್ಟದು.

ವೃತ್ತಿ.—ಭೂತಕಾಲಕ್ರಿಯೆಯುಂ ಭವಿಷ್ಯಂತಿಯ ಕ್ರಿಯೆಯುಂ ತಮ್ಮ ತಮ್ಮಂತರ್ಗತಾಗಮಂಗಳಂ ಬೆರಸಿರ್ದು, ವಿಭಕ್ತಿಮಾತ್ರಮಂ ಕಳೆಯೆ, ಕೃಲ್ಲಿಂಗಮಪ್ಪವು; ವರ್ತಮಾನಕ್ರಿಯೆಯುಂ ವಿಧಿಕ್ರಿಯೆಯುಂ ಮಧ್ಯಮಪುರುಷ ಕ್ರಿಯೆಯುಂ ಉತ್ತಮಪುರುಷಕ್ರಿಯೆಯುಂ ಕೃಲ್ಲಿಂಗಮಾಗವವರ್ಕೆ (ನಾಮ) ವಿಭಕ್ತಿಯಂ ಪತ್ತಿಸಲಾಗದು.

ಪ್ರಯೋಗಂ.—ಭೂತವತಿಯ ಕೃತ್ತಿಂಗೆ—ನಲಿದಂ ಎಂಬಲ್ಲಿ ಅಮ್ ಎಂಬ ವಿಭಕ್ತಿಯಂ ಕಳೆದು, ನಲಿದ ಎಂಬ ಕೃತ್ತನಿರಿಸಿ, ನಾಮವಿಭಕ್ತಿಯಂ ಪತ್ತಿಸಿ, ನಲಿದಂ, ನಲಿದನಂ, ನಲಿದನಿಂ ಎಂದು ಮಾಡ್ಪುದು. ನಲಿದಂ; ಬಂದಂ ಇತ್ಯಾದಿ.

". . . . . . ಬಾಳ್ದಿನೆಂದು ಮದನಂ ನಲಿದಂ ನಡೆ ನೋಡಿ
ಚೂತಮಂ" || 171 ||

"ಮದಗಜವೆರಡಱಿ ಬಾಲದ |
ಮೊದಲಂ ಪಿಡಿದೆತ್ತಿಯೊತ್ತಿ ನುರ್ಗುತ್ತಿರೆಯಾ- ||
ಸ್ಪದಿನೊಗುವ ರಕ್ತಮುರಿಯೆನೆ |
ತಿದಿಯ್ದೊತ್ತುವ್ವ ಕಮ್ಮಬಿಂಬೊಲಿರ್ದಂ ಭೀಮಂ || 172 ||

". . . . . ಬಂದನೀಗಳ್ |
ಪೆಱನಲ್ಲಂ ದುರ್ಜಯಂ ಕೌರವಕುಳನಳಿನೀಕುಂಜರಂ ಭೀಮ
ಸೇನಂ" || 173 ||

ಭವಿಷ್ಯಂತಿಯ ಕೃತ್ತಿಂಗೆ—ಬೇಡುವಂ, ಪೊಯ್ವಂ.

ಕೃತ್ತಾಗದವರ್ಕೆ— ನೋಡಿದಪಂ, ಮಾಡಿದಪಂ[1] ಕುಡು, ತುಡು[2] ಬೇಡಿದಯ್, ಬೇಡಿದಿರ್[3] ಪಾಡುವೆನ್, ಪಾಡುವೆವು[4] ಎಂಬಂತೆ.

ಸೂತ್ರಂ. || ೭೪ ||

S. 73 concerns also verbal nominal bases formed from Saṁskṛita abstract Verbal nouns (ಭಾವವಚನಂ) by means of ಇಸು.

ವಿನುತಕ್ರಿಯಾತ್ಮಕಂಗಳು- |
ಮೆನಿಸುವ ಸಂಸ್ಕೃತದ ಭಾವವಚನಂಗಳನಾ- ||
ಯ್ದನಿತರ್ಕಮಿಸುಪ್ರತ್ಯಯ- |
ವನೆ ಪತ್ತಿಸಿ ನಿಱಿಸೆ ಬರ್ಕುಮಾ ಕೃಲ್ಲಿಂಗಂ. || ೭೪ ||

ಪದಚ್ಛೇದಂ.— ವಿನುತಕ್ರಿಯಾತ್ಮಕಂಗಳುಂ ಎನಿಸುವ ಸಂಸ್ಕೃತದ ಭಾವವಚನಂಗಳಂ ಆಯ್ದು, ಅನಿತರ್ಕಂ ಇಸುಪ್ರತ್ಯಯವನೆ ಪತ್ತಿಸಿ, ನಿಱಿಸೆ, ಬರ್ಕುಂ ಆ ಕೃಲ್ಲಿಂಗಂ.

ಅನ್ವಯಂ.— ಆ ಕೃಲ್ಲಿಂಗಂ ಬರ್ಪುದು.— (ಉಳಿದುದು ಯಥಾನ್ವಯಂ).

ಟೀಕು.— ವಿನುತ = ಕೊಂಡಾಡಲ್ಪಟ್ಟ; ಕ್ರಿಯಾತ್ಮಕಂಗಳುಂ = ಕ್ರಿಯಾಸ್ವರೂಪಂಗಳುಂ; ಎನಿಸುವ = ಎನಿಸುವ; ಸಂಸ್ಕೃತದ = ಸಕ್ಕದದ; ಭಾವವಚನಂಗಳಂ = ಭಾವವಾಚಿಗಳಂ; ಆಯ್ದು = ಆಯ್ದುಕೊಂಡು; ಅನಿತರ್ಕಂ = ಅಷ್ಟರ್ಕೆಯುಂ; ಇಸುಪ್ರತ್ಯಯವನೆ = ಇಸು ಎಂಬ ಪ್ರತ್ಯಯವನೆ; ಪತ್ತಿಸಿ = ಪೊರ್ದುಗೆಯುಂ ಮಾಡಿ; ನಿಱಿಸೆ = ನಿಱುಗೆ ಮಾಡೆ; ಆ ಕೃಲ್ಲಿಂಗಂ = ಆ ಹಿಂದೆ ಪೇೞ್ದ ಕೃಲ್ಲಿಂಗಂ; ಬರ್ಕುಂ = ಬರ್ಪುದು.— ಅದೆಂತೆಂದೊಡೆ—

ವಿಚಾರಂ.— ಭಾವ ಭಂಗ ಭಾಗ ಭೋಗ ಧ್ಯಾನವೆಂಬಿವಾದಿಯಾದ ಭಾವವಾಚಿಗಳ ಮೇಲೆ ಇಸುಪ್ರತ್ಯಯಂ ಪತ್ತೆ, ಭಾವಿಸು ಭಂಗಿಸು ಭಾಗಿಸು ಭೋಗಿಸು ಧ್ಯಾನಿಸು ಎಂದು, ಕನ್ನಡಕ್ಕೆ ಧಾತುವಾದಲ್ಲಿ ಆಖ್ಯಾತದಲ್ಲಿ ಕ್ರಿಯಾಪದಂಗಳಾಗಿ, ಭೂತಭವಿಷ್ಯತ್ಕ್ರಿಯೆಗಳುಪೇತ ವಿಭಕ್ತಿಗಳನುೞಿಯೆ, ಕೃತ್ತಪ್ಪುವೆಂದಱಿವುದು.

ವೃತ್ತಿ.— ಕನ್ನಡಕ್ಕೆ ಕ್ರಿಯಾತ್ಮಕಂಗಳಪ್ಪ ಸಂಸ್ಕೃತದ ಭಾವವಚನಂಗಳನಾಯ್ದುಕೊಂಡು, ಇಸುಪ್ರತ್ಯಯಮಂ ಪತ್ತಿಸಿ, ಕೃಲ್ಲಿಂಗಮಂ ಮಾೞ್ಪುದು.

[1] Present tense; [2] Imperative; [3] 2nd Persons of the Past; [4] 1st Persons of the Future.

ಪ್ರಯೋಗಂ.—ಭಾವಿಸಿದಂ, ಭಂಗಿಸಿದಂ, ಭಾಗಿಸಿದಂ, ರಂಗಿಸಿದಂ, ರಾಗಿಸಿದಂ, ಭೋಗಿಸಿದಂ, ಪ್ರೇರಿಸಿದಂ, ವರ್ಣಿಸಿದಂ, ವರ್ತಿಸಿದಂ, ತರ್ಜಿಸಿದಂ; ಚರಿಸಿದಂ, ಚರಯಿಸಿದಂ; ಧರಿಸಿದಂ, ಧರಯಿಸಿದಂ.

". . . . . ಜಳನಿಧಿ ಜಳ- |
ಚರಚಯಮಂ ರತ್ನಚಯಮುಮಂ ಧರಿಸುವ ವೊಲ್." || 174 ||

ಸೂತ್ರಂ. || ೭೫ ||

Also Sentences have been considered as nominal bases.

ಸಮುಪಾತ್ತಕ್ರಿಯೆಯುಂ ವಾ- |
ಕ್ಯಮಾಲೆಯುಂ ಸುಕವಿರಚಿತನಾಮಮದಾದಂ- ||
ದಮಗುರ್ಗುಂ ಲಿಂಗಂ ಮಾರ್ಗ- |
ಕ್ರಮಮಂ ಕಾಣಲ್ಕೆ ಬರ್ಪುದಾದ್ಯರ ಕೃತಿಯೊಳ್. || ೭೫ ||

ಪದಚ್ಛೇದಂ.—ಸಮುಪಾತ್ತಕ್ರಿಯೆಯುಂ ವಾಕ್ಯಮಾಲೆಯುಂ ಸುಕವಿರಚಿತನಾಮಂ ಅದು ಆದ ಅಂದು ಅಮಗುರ್ಗುಂ ಲಿಂಗಂ; ಮಾರ್ಗಕ್ರಮಮಂ ಕಾಣಲ್ಕೆ ಬರ್ಪುದು ಆದ್ಯರ ಕೃತಿಯೊಳ್.

ಅನ್ವಯಂ.—ಸಮುಪಾತ್ತಕ್ರಿಯೆಯುಂ ವಾಕ್ಯಮಾಲೆಯುಂ ಸುಕವಿರಚಿತನಾಮಂ ಅದು ಆದಂದು ಲಿಂಗಂ ಅಮಗುರ್ಗುಂ; ಮಾರ್ಗಕ್ರಮಮಂ ಆದ್ಯರ ಕೃತಿಯೊಳ್ ಕಾಣಲ್ಕೆ ಬರ್ಪುದು.

ಟೀಕು.—ಸಂ = ಲೇಸಾಗಿ; ಉಪಾತ್ತ = ಎಯ್ದಲ್ಪಟ್ಟ; ಕ್ರಿಯೆಯುಂ = ಕ್ರಿಯೆಯುಂ; ವಾಕ್ಯಮಾಲೆಯುಂ = ವಾಕ್ಯಂಗಳ ಸಮೂಹಮುಂ; ಸುಕವಿ = ಸತ್ಕವೀಶ್ವರರಿಂದೆ; ರಚಿತ = ರಚಿಸಲ್ಪಟ್ಟ; ನಾಮಂ = ಪೆಸರ್; ಅದು = ಅದು; ಆದಂದು = ಆದ ಕಾಲದಲ್ಲಿ; ಲಿಂಗಂ = ಲಿಂಗವೆಂಬ ಸಂಜ್ಞೆ; ಅಮಗುರ್ಗುಂ = ಪೊರ್ದುಗೆಯಪ್ಪುದು; ಮಾರ್ಗಕ್ರಮಮಂ = ಅವಱ ಮಾರ್ಗದ ರೀತಿಯುಂ; ಆದ್ಯರ = ಪೂರ್ವಕವಿಗಳ; ಕೃತಿಯೊಳ್ = ಕಾವ್ಯಂಗಳಲ್ಲಿ; ಕಾಣಲ್ಕೆ = ಕಾಣಿಸಲ್ಕೆ; ಬರ್ಪುದು = ಬರ್ಪುದು.

• ವೃತ್ತಿ.—ಎಯ್ದಲ್ಪಟ್ಟ ಕ್ರಿಯೆಯುಂ ವಾಕ್ಯಮಾಲೆಯುಂ ಕವೀಶ್ವರರಿಂ ರಚಿತಮಾಗಿ ನಾಮಮಾದಲ್ಲಿ ಲಿಂಗಮಪ್ಪುವು; ಅವಱ ತೆಱಮಂ ಪುರಾತನ ಕೃತಿಗಳಲ್ಲಿ ಕಾಣಬರ್ಪುದು.

ಪ್ರಯೋಗಂ.—ಕ್ರಿಯೆಗೆ—ನಮೋಸ್ತುಗಳಿರ್ಪಂದದಿನಿರ್ದಂ. (ನಮೋಸ್ತುಗಳೆಂದು ಸವಣರ್ಗೆ ಪೆಸರಾಯ್ತು.)

ವಾಕ್ಯಶಿಕ್ಷೆನ ಸಂಧಿಗೆ ಎರಡನೆಯ ಸೂತ್ರ.

ವಾಕ್ಯಮಾಲೆಗೆ.—ಗುಣಕ್ಕೆ ನಲ್ಲಗಣೇಶಂ. ಸೊರ್ಕಾನೆಗಳಂಕಂ.
"........ಅಹಿಂಸಾಪರಮೋ ಧರ್ಮಮೆಂ- |
ಬುದನೀ ತತ್ವವಿತುರ್ವರೇಣ್ಯರಱಿದರ್ ತ್ರೈಲೋಕ್ಯಚೂಡಾಮಣೀ"* || 175 ||
"ತೋಳ್ಗೊಪ್ಪುವನಾಳ್ದರ ಕೈದುವೊತ್ತರ ದೇವಂ." || 176 ||

ಸೂತ್ರಂ. || ೭೬ ||

ಕ್ಷಿತಿಯೊಳೆ ರೂಢಾನ್ವರ್ಥಾಂ- |
ಕಿತಮೆಂದಾ ನಾಮಮಱಿಗೆ ಮೂದೆಱಿನಸಮಾ- ||
ಸತೆಯೊಳ್ ನೆಲಸಿರ್ಪುದು ನಿ- |
ಶ್ಚಿತನಾಮಂ ಪಂಚವರ್ಣಕೃತಪರಿಮಾಣಂ || ೭೬ ||

Ready nouns are: 1. such of which the meaning is everywhere well known (but the etymological analysis of which is not apparent at first sight, ರೂಢನಾಮಂ, ನಿಶ್ಚಿತನಾಮಂ, ನಿಟಿದನಾಮಂ); 2. such the meaning of which is self-evident (ಅನ್ವರ್ಥನಾಮಂ); 3. such as are of mark, *i. e.* proper-names (ಅಂಕಿತನಾಮಂ). Those of self-evident meaning are of two kinds: *a.*, such as refer to properties (ಗುಣಾನುರೂಪಂ); *b.*, such as refer to condition (ಅರ್ಥಾನುರೂಪಂ).

ಪದಚ್ಛೇದಂ.—ಕ್ಷಿತಿಯೊಳೆ, ರೂಢಾನ್ವರ್ಥಾಂಕಿತಂ ಎಂದು ಆ ನಾಮಂ, ಅಱಿಗೆ, ಮೂದೆಱಿಂ; ಅಸಮಾಸತೆಯೊಳ್ ನೆಲಸಿ ಇರ್ಪುದು ನಿಶ್ಚಿತನಾಮಂ ಪಂಚವರ್ಣಕೃತಪರಿಮಾಣಂ.

ಅನ್ವಯಂ.—ಕ್ಷಿತಿಯೊಳೆ, ರೂಢಾನ್ವರ್ಥಾಂಕಿತಂ ಎಂದು, ಆ ನಾಮಂ ಮೂದೆಱಿಂ, ಅಱಿಗೆ; ನಿಶ್ಚಿತನಾಮಂ ಪಂಚವರ್ಣಕೃತಪರಿಮಾಣಂ ಅಸಮಾಸತೆಯೊಳ್ ನೆಲಸಿರ್ಪುದು.

ಟೀಕು.—ಕ್ಷಿತಿಯೊಳೆ = ಭೂಲೋಕದಲ್ಲಿ; ರೂಢ = ರೂಢನಾಮಮೆಂದು; ಅನ್ವರ್ಥ = ಅನ್ವರ್ಥನಾಮಮೆಂದು; ಅಂಕಿತಂ = ಅಂಕಿತನಾಮಮೆಂದು; ಆ ನಾಮಂ = ಆ ಪಿಂದೆ ಪೇಳ್ದ ನಾಮಲಿಂಗಂ; ಮೂದೆಱಿಂ = ಮೂಱು ತೆಱನೆಂದು; ಅಱಿಗೆ = ತಿಳಿಗೆ; ನಿಶ್ಚಿತನಾಮಂ = ರೂಢನಾಮಂ; ಪಂಚವರ್ಣ = ಐದಕ್ಷರದಿಂದೆ; ಕೃತ = ಮಾಡಲ್ಪಟ್ಟ; ಪರಿಮಾಣಂ = ಪ್ರಮಾಣವನುಳ್ಳುದಾಗಿ; ಅಸಮಾಸತೆಯೊಳ್ = ಸಮಾಸವಲ್ಲದುದಱಲ್ಲಿ; ನೆಲಸಿರ್ಪುದು = ನೆಲೆಗೊಂಡಿರ್ಪುದು.

ವೃತ್ತಿ.—ರೂಢನಾಮಮೆಂದುಂ, ಅನ್ವರ್ಥನಾಮಮೆಂದುಂ, ಅಂಕಿತನಾಮಮೆಂದುಂ, ನಾಮಂ ಮೂದೆಱಿನಾಗಿರ್ಪುದು. ರೂಢನಾಮಂ ಪ್ರಸಿದ್ಧ

ತೆಱನಾಗಿರ್ಪುದು. ಅನ್ವರ್ಥನಾಮಂ ಗುಣಾನುರೂಪಮೆಂದುಂ ಅರ್ಥಾನುರೂಪಮೆಂದುಮಿರ್ತೆಱವಾಗಿರ್ಪುದು. ಅಂಕಿತನಾಮಂ ಪೆಸರನ್ನಿಡುವನಿಷ್ಟದಿನೆಂತಾದೊಡಮಿರ್ಪುದು. ದಿಟದ ನಾಮಂ ಸಮಾಸಮಿಲ್ಲದೊಂದಕ್ಕರಂ ಮೊದಲಾಗಿ ಎಯ್ದಕ್ಕರಂಬರಮುಂಟು. (೫)

ಪ್ರಯೋಗಂ. — ರೂಢನಾಮಕ್ಕೆ — ನೆಲಂ, ಪೊಲಂ, ಚಲಂ, ಜಲಂ ಎಂಬಂತೆ.

ಗುಣಾನುರೂಪಾನ್ವರ್ಥಕ್ಕೆ —

ದಾನಿ ದಯಾಪರನತ್ಯಭಿ- |
ಮಾನಿ ಪರಾಕ್ರಮಿ ಯಶೋರ್ಥಿ ನೀತಿಜ್ಞಂ ವಿ- ||
ದ್ಯಾನಿಲಯನೆನಿಪ ನೃಪಂ || 177 ||

ಅರ್ಥಾನುರೂಪಾನ್ವರ್ಥಕ್ಕೆ — ಹೆಱಗಾಲಂ, ನಿಡುಮೂಗಂ, ಕುಸಿಗೊರಲಂ, ಸವಟವಾಯಂ, ಗುಳ್ಳಿಗಣ್ಣಂ, ಹಱದಲೆಯಂ ಎಂಬಂತೆ.

ಅಂಕಿತನಾಮಕ್ಕೆ — ಕಾಟಂ, ಕಸವಂ, ದೂಡಿಗಂ, ಮಾಚಂ, ಮಾರಂ ಎಂಬಿವು ಮೊದಲಾದುವು. ಸಾರ್ಥಕಮಲ್ಲದವೆಲ್ಲಾ ಭಾಷೆಗಮಿತೆಱದೆ ಸಲ್ಪುದು.

ದಿಟದ ನಾಮಂಗಳ ಅಕ್ಷರವೃತ್ತಿಗೆ — ಪೂ, ಮರಂ, ಹೊತ್ತಗೆ, ಕವಳಿಗೆ, ಕಟ್ಟವತ್ತಿಗೆ.

ಸೂತ್ರಂ. || ೭೭ ||

Adjectives (ಗುಣವಚನಂ), among which several terminate in ತು and ದು. Those with final ತು may double the ತ of this syllable.

ಒಳ್ಳಿತು ಮೆಲ್ಲಿತು ಬೆಟ್ಟಿತು |
ತೆಳ್ಳಿತು ಬಸಿದಸಿದು ಕಡಿದು ನಿಡಿದಿನಿದೆಂಬಂ- ||
ತುಳ್ಳುವು ತು ದು ಕಡೆಯೆನೆ ಕೈ- |
ಕೊಳ್ಳಿಂ ಗುಣವಾಚ್ಯಮೇಣ್ ತುಕಾರಂ ದ್ವಿತ್ವಂ. || ೮೭ ||

ಪದಚ್ಛೇದಂ. — ಒಳ್ಳಿತು ಮೆಲ್ಲಿತು ಬೆಟ್ಟಿತು ತೆಳ್ಳಿತು ಬಸಿದು ಅಸಿದು ಕಡಿದು ನಿಡಿದು ಇನಿದು ಎಂಬಂತೆ ಉಳ್ಳುವು. "ತು, ದು" ಕಡೆ ಎನೆ, ಕೈಕೊಳ್ಳಿಂ ಗುಣವಾಚಿ; ಮೇಣ್ ತುಕಾರಂ ದ್ವಿತ್ವಂ.

ಅನ್ವಯಂ.— ಗುಣವಾಚಿ ಕೈಕೊಳ್ಗುಂ; ಮೇಣ್ ತುಕಾರಂ ದ್ವಿತ್ವಂ. (ಉಳಿದುದು ಯಥಾನ್ವಯಂ.)

ಟೀಕು.— ಒಳ್ಳಿತು = ಒಳ್ಳಿತೆಂದು; ಮೆಲ್ಲಿತು = ಮೆಲ್ಲಿತೆಂದು; ಬೆಟ್ಟಿತು = ಬೆಟ್ಟಿತೆಂದು; ತೆಳ್ಳಿತು = ತೆಳ್ಳಿತೆಂದು; ಬಸಿದು = ಬಸಿದೆಂದು; ಅಸಿದು = ಅಸಿದೆಂದು; ಕಡಿದು = ಕಡಿದೆಂದು; ನಿಡಿದು = ನಿಡಿದೆಂದು; ಇನಿದು = ಇನಿದೆಂದು; ಎಂಬಂತೆ = ಎಂಬ ಹಾಂಗೆ; ಉಳ್ಳುವು = ಉಂಟಾದ ಶಬ್ದಂಗಳ್; ತುದುಕಡೆಯನೆ = ತುಕಾರಾಂತ ದುಕಾರಾಂತವೆನೆ; ಗುಣವಾಚಿ = ಗುಣವಚನಂಗಳೆಂದು; ಕೈಕೊಳ್ಗುಂ = ಒಡಂಬಡುಂ; ಮೇಣ್ = ವಿಕಲ್ಪದಿಂದೆ; ತುಕಾರಂ = ತುಕಾರಾಂತಂ; ದ್ವಿತ್ವಂ = ದ್ವಿರ್ಭಾವಂ.

ವೃತ್ತಿ.—ತುಕಾರ ದುಕಾರಂಗಳೆ ಕಡೆಯಾಗಿ ಪಲವು ಗುಣವಚನಂಗಳೊಳವು; ಅವಱೊಳ್ ತುಕಾರಾಂತಕ್ಕೆ ವಿಕಲ್ಪದಿಂ ದ್ವಿತ್ವಮುಂಟು.

ಪ್ರಯೋಗಂ.—ಬೆಟ್ಟಿತು, ಬೆಟ್ಟಿತ್ತು; ದಟ್ಟಿತು, ದಟ್ಟಿತ್ತು; ಒಳ್ಳಿತು, ಒಳ್ಳಿತ್ತು; ಮೆಲ್ಲಿತು, ಮೆಲ್ಲಿತ್ತು; ತೆಳ್ಳಿತು, ತೆಳ್ಳಿತ್ತು; ತೋಱಿತ್ತು; ನೇರಿತ್ತು; ಕೂರಿತ್ತು; ಉದ್ದಿತ್ತು; ನುಣ್ಣಿತ್ತು; ತಣ್ಣಿತ್ತು; ಬಿಣ್ಣಿತ್ತು; ಗುಂಡಿತ್ತು; ಅಗಲಿತ್ತು; ದೊಡ್ಡಿತ್ತು; ಬಲ್ಲಿತ್ತು ಎಂಬಂತೆ ನೋಡಿಕೊಳ್ವುದು.

ದುಕಾರಾಂತಕ್ಕೆ—ಬಸಿದು, ಅಸಿದು, ಕಡಿದು, ನಿಡಿದು, ಕರಿದು, ಬಿಳಿದು ಎಂಬಂತಱಿವುದು.

ಸೂತ್ರಂ. || ೭೮ ||

ಅದುವಿದುವುದುವಾವುದುವೆ- |
ಲ್ಲದು ಪೆಱತೇನ್ಪೆಱದೆನಿಪ್ಪ ಶಬ್ದಂಗಳ್ ತ- ||
ಪ್ಪದೆ ಸರ್ವನಾಮಮಕ್ಕುಂ |
ವಿದಗ್ಧರಿವನಱಿದು ನಿಱಿಕೆ ಲಿಂಗಸ್ಥಿತಿಯೊಳ್. || ೮೮ ||

The ready nouns ಅದು, ಇದು, ಉದು, ಆವುದು, ಎಲ್ಲದು, ಪೆಱತು, ಏನ್, ಪೆಱದು are called Pronouns (ಸರ್ವನಾಮಂ), and (except ಏನ್) conform to the 3 (principal) genders.

ಪದಚ್ಛೇದಂ.— ಅದು ಇದು ಉದು ಆವುದು ಎಲ್ಲದು ಪೆಱತು ಏನ್ ಪೆಱದು ಎನಿಪ್ಪ ಶಬ್ದಂಗಳ್ ತಪ್ಪದೆ ಸರ್ವನಾಮಂ ಅಕ್ಕುಂ; ವಿದಗ್ಧರ್ ಇವಂ ಅಱಿದು, ನಿಱಿಕೆ ಲಿಂಗಸ್ಥಿತಿಯೊಳ್.

ಅನ್ವಯಂ.— ವಿದಗ್ಧರ್ ಇವಂ ಅಱಿದು, ಲಿಂಗಸ್ಥಿತಿಯೊಳ್ ನಿಱಿಕೆ ಎಂಬುದನ್ವಯಂ.

ಟೀಕು. — ಅದು = ಅದೆಂದು; ಇದು = ಇದೆಂದು; ಉದು = ಉದೆಂದು; ಆವುದು = ಆವುದೆಂದು; ಎಲ್ಲದು = ಎಲ್ಲದೆಂದು; ಪೆಱತು = ಪೆಱತೆಂದು; ಏನ್ = ಏನ್ ಎಂದು; ಪೆಱದು = ಪೆಱದೆಂದು; ಎನಿಪ್ಪ ಶಬ್ದಂಗಳ್ = ಎನಿಸುವ ಶಬ್ದಂಗಳ್; ತಪ್ಪದೆ = ತೊಲಗದೆ; ಸರ್ವನಾಮಂ = ಸರ್ವನಾಮಂಗಳ್; ಅಕ್ಕುಂ = ಅಪ್ಪುವು; ವಿದಗ್ಧರ್ = ವಿದ್ವಾಂಸರ್; ಇವಂ = ಈ ಸರ್ವನಾಮಂಗಳಂ; ಅಱಿದು = ತಿಳಿದು; ಲಿಂಗಸ್ಥಿತಿಯೊಳ್ = ತ್ರಿವಿಧಲಿಂಗಸ್ಥಿತಿಯೊಳ್; ನಿಱಿಕೆ = ನಿಱುಗೆ ಮಾಡುಗೆ.

ವೃತ್ತಿ. — ಅದು, ಇದು, ಉದು, ಆವುದು, ಎಲ್ಲದು, ಪೆಱತು, ಏನ್, ಪೆಱದು ಎಂಬಿವಾದಿಯಾದುವು ಸರ್ವನಾಮಂಗಳ್.

ಸೂತ್ರಂ. || ೭೯ ||

ಏನ್, however, is used, as it stands, for all the genders as well in the Singular as in the Plural.

ಏನೆಂಬ ಸರ್ವನಾಮಂ |
ತಾನದು ದಲ್ ಲಿಂಗದೇಕವಚನಂ ನಿಜದಿಂ ||
ಪೀನಂ ಬಹುವಚನಾರ್ಥಮ- |
ನಾನಲ್ ಸಾಲ್ದತ್ತು ಮತ್ತೆ ಕೃತಿಪದ್ಧತಿಯೊಳ್. || ೭೯ ||

ಪದಚ್ಛೇದಂ. — ಏನ್ ಎಂಬ ಸರ್ವನಾಮಂ ತಾಂ ಅದು ದಲ್ ಲಿಂಗದ ಏಕವಚನಂ ನಿಜದಿಂ; ಪೀನಂ ಬಹುವಚನಾರ್ಥಮಂ ಆನಲ್ ಸಾಲ್ದತ್ತು ಮತ್ತೆ ಕೃತಿಪದ್ಧತಿಯೊಳ್.

ಅನ್ವಯಂ. — ಏನ್ ಎಂಬ ಸರ್ವನಾಮಂ ತಾಂ ಅದು ದಲ್ ನಿಜದಿಂ ಲಿಂಗದ ಏಕವಚನಂ; ಮತ್ತೆ ಕೃತಿಪದ್ಧತಿಯೊಳ್ ಪೀನಂ ಬಹುವಚನಾರ್ಥಮಂ ಆನಲ್ ಸಾಲ್ದತ್ತು.

ಟೀಕು. — ಏನ್ = ಏನೆಂದು; ಎಂಬ ಸರ್ವನಾಮಂ = ಎಂಬ ಸರ್ವನಾಮಶಬ್ದಂ; ತಾನದು = ಅದು ತಾಂ; ದಲ್ = ನಿಶ್ಚಯವಾಗಿ; ನಿಜದಿಂ = ಸ್ವಭಾವದಿಂದೆ; ಲಿಂಗದ = ಲಿಂಗತ್ರಯದ; ಏಕವಚನಂ = ಏಕವಚನಮೆನಿಪುದು; ಮತ್ತೆ = ಬಳಿಕಂ; ಕೃತಿಪದ್ಧತಿಯೊಳ್ = ಕಾವ್ಯಪದ್ಧತಿಯಲ್ಲಿ; ಪೀನಂ = ವಿಶೇಷವಾಗಿ; ಬಹುವಚನಾರ್ಥಮಂ = ಬಹುವಚನದರ್ಥವಂ; ಆನಲ್ = ಧರಿಸಲ್; ಸಾಲ್ದತ್ತು = ಸಲುಬಳಿಯಾಯಿತು.

ಪ್ರಯೋಗಂ. — ಏಕವಚನಕ್ಕೆ — ಅವನೇನ್, ಅವಳೇನ್, ಅದೇನ್.

ಬಹುವಚನಾರ್ಥಕ್ಕೆ —

". . . . . . ತತ್ಸರಿಜನಾಲಾಪಂಗಳೇನ್ . . . . ." || 178 ||

ಸೂತ್ರಂ. || ೮೦ ||

Pure Saṁskṛita crude nouns (ಪ್ರಕೃತಿ) are used in an unaltered form as nominal bases in Kannaḍa, and are then called ಸಮಸಂಸ್ಕೃತಂ. They (generally) cannot form compounds with pure Kannaḍa words.

ಸಮುದಿತಸಂಖ್ಯಾವ್ಯಯರಹಿ- |
ತಮೆನಿಸಿ ವರ್ತಿಪ ನಿಘಂಟುವಿನ ನಾಮಪದೋ- ||
ತ್ತಮವರ್ಣಪ್ರಕೃತಿಗಳಂ |
ಸಮಸಂಸ್ಕೃತವೆಸರನಿಟ್ಟು ಲಿಂಗಂ ಮಾಳ್ಪಿರ್. || ೯೦ ||

ಪದಚ್ಛೇದಂ.— ಸಮುದಿತಸಂಖ್ಯಾವ್ಯಯರಹಿತಂ ಎನಿಸಿ ವರ್ತಿಪ ನಿಘಂಟುವಿನ ನಾಮಪದೋತ್ತಮವರ್ಣಪ್ರಕೃತಿಗಳಂ ಸಮಸಂಸ್ಕೃತವೆಸರಂ ಇಟ್ಟು, ಲಿಂಗಂ ಮಾಳ್ಪಿರ್.

ಟೀಕು, ಯಥಾನ್ವಯಂ.— ಸಂ = ಲೇಸಾಗಿ; ಉದಿತ = ಉಂಟಾದ; ಸಂಖ್ಯಾ = ಸಂಖ್ಯಾವಾಚಿಗಳಿಂದೆ; ಅವ್ಯಯ = ಅವ್ಯಯಶಬ್ದಗಳಿಂದೆ; ರಹಿತಂ = ವಿರಹಿತಂ; ಎನಿಸಿ = ಎನಿಸಿ; ವರ್ತಿಪ = ವರ್ತಿಸುವ; ನಿಘಂಟುವಿನ = ಅಮರಸಿಂಹಮೊದಲಾದ ಸಂಸ್ಕೃತನಿಘಂಟುಗಳ; ನಾಮಪದ = ಅಭಿಧಾನಪದಂಗಳಾದ; ಉತ್ತಮವರ್ಣ = ಸುಲಲಿತಾಕ್ಷರಂಗಳಾದ; ಪ್ರಕೃತಿಗಳಂ = ವಿಭಕ್ತಿರಹಿತವಾದ ಶಬ್ದಂಗಳಂ; ಸಮಸಂಸ್ಕೃತವೆಸರನಿಟ್ಟು = ಸಮಸಂಸ್ಕೃತವೆಂಬ ಹೆಸರಿಟ್ಟು; ಲಿಂಗಂ ಮಾಳ್ಪಿರ್ = ಶಬ್ದಜ್ಞರ್ ಲಿಂಗವಂ ಮಾಡುವರ್.

ವೃತ್ತಿ.— ಸಂಖ್ಯಾವ್ಯಯಂಗಳಂ ಕಳೆದುಳಿದ ನಿಘಂಟುವಿನ ಸುಲಲಿತಾಕ್ಷರಂಗಳಪ್ಪ ನಾಮಪ್ರಕೃತಿಗಳಂ ಕನ್ನಡಕ್ಕೆ ಸರಿ ಮಾಡಿ, ಸಮಸಂಸ್ಕೃತಮೆಂಬ ಪೆಸರನಿಟ್ಟು, ಶಬ್ದಜ್ಞರ್ ಲಿಂಗಮಂ ಮಾಳ್ಪಿರ್.

ಪ್ರಯೋಗಂ.—(ಕಾಮ) ಕಾಮಂ, (ಭೀಮ) ಭೀಮಂ, (ರಾಮ) ರಾಮಂ, (ಸೋಮ) ಸೋಮಂ, (ನಾರದ) ನಾರದಂ, (ನಾರಾಯಣ) ನಾರಾಯಣಂ ಎಂಬಂತೆ.

ಆ ಸಮಸಂಸ್ಕೃತಂಗಳನಚ್ಚಗನ್ನಡದೊಳ್ ಬೆರಸಿ ಸಮಾಸಂ ಮಾಡಲಾಗದು; ಅದಕ್ಕುದಾಹರಣೆ—

ಶಬ್ದಸ್ಮೃತಿ "ಅರಸುಕುಮಾರನನಾಯತ |
ತರಗಡೆಗಣ್ಣಿಂದೆ ನೋಡಿ ಕೆಳದಿಸಮೇತಂ ||

ಪರಿಗತನಗೆಯಿಂದಿರ್ದಂ |
ಗುರುನಾಣಾಭರದಿನೆಱಗಿ ಮುಖತಾವರೆಯಂ" || 179 ||
ಕಣ್ಣಮಲಮೆಂಬಂತೆ.

ಸೂತ್ರಂ. || ೮೧ ||

Saṁskṛita Adverbs, Pronouns and Participles with final ಅತ್, when not being parts of compounds, cannot form declinable bases in Kannaḍa.

ವಿದಿತಮೆನಿಪ್ಪವ್ಯಯಮುಂ- |
ತ್ಯದಾದಿಯುಂ ಶತೃಣಂತಮುಂ ಸಂಸ್ಕೃತದೊಳ್ ||
ಪದವಿಧಿಯಂ ನೆಱೆ ತಳೆದ- |
ಲ್ಲದೆ ಕನ್ನಡದಲ್ಲಿ ಲಿಂಗಮಾಗವು ನಿಜದಿಂ. || ೯೧ ||

ಪದಚ್ಛೇದಂ.— ವಿದಿತಂ ಎನಿಪ್ಪ ಅವ್ಯಯಮುಂ ತ್ಯದಾದಿಯುಂ ಶತೃಣಂತಮುಂ ಸಂಸ್ಕೃತದೊಳ್ ಪದವಿಧಿಯಂ ನೆಱೆ ತಳೆದು, ಅಲ್ಲದೆ ಕನ್ನಡದಲ್ಲಿ ಲಿಂಗಂ ಆಗವು ನಿಜದಿಂ.

ಅನ್ವಯಂ.— ಕನ್ನಡದಲ್ಲಿ ನಿಜದಿಂ ಲಿಂಗಂ ಆಗವು. ಉಳಿದುದು ಯಥಾನ್ವಯಂ.

ಟೀಕು.— ವಿದಿತಂ = ಪ್ರಸಿದ್ಧಂ; ಎನಿಪ್ಪ = ಎನಿಸುವ; ಅವ್ಯಯಮುಂ = ಅವ್ಯಯ ಶಬ್ದಂಗಳುಂ; ತ್ಯದಾದಿಯುಂ = ತ್ಯತ್ ಎಂಬುದಾದಿಯಾದ ಸರ್ವನಾಮಶಬ್ದಂಗಳುಂ; ಶತೃಣಂತಮುಂ = ಶತೃಣಂತಶಬ್ದಮುಂ; ಸಂಸ್ಕೃತದೊಳ್ = ಸಂಸ್ಕೃತದಲ್ಲಿ; ಪದವಿಧಿಯಂ = ಸಮಾಸವಿಧಿಯಂ; ನೆಱೆ = ಚೆನ್ನಾಗಿ; ತಳೆದಲ್ಲದೆ = ಧರಿಸಿದಲ್ಲದೆ; ಕನ್ನಡದಲ್ಲಿ = ಕರ್ಣಾಟಕದಲ್ಲಿ; ನಿಜದಿಂ = ಸ್ವಭಾವದಿಂದೆ; ಲಿಂಗಂ = ಲಿಂಗಂಗಳ್; ಆಗವು = ಸಲುವಳಿಯಾಗವು.

ವೃತ್ತಿ.— ಪ್ರಸಿದ್ಧಮಪ್ಪವ್ಯಯಂಗಳುಂ ತ್ಯದಾದಿಯುಂ ಶತೃಣಂತಮುಂ ಸಂಸ್ಕೃತದೊಳ್ ಸಮಾಸಮಂ ಪಡೆದಲ್ಲದೆ ಕನ್ನಡದೊಳ್ ಸ್ವಭಾವದಿಂ ಲಿಂಗಮಾಗವು.

ಪ್ರಯೋಗಂ.— ಅವ್ಯಯಕ್ಕೆ— ಅಂತರ್, ಬಹಿರ್, ಉಚ್ಚೈಸ್, ನೀಚೈಸ್, ಮುಹುರ್, ಪುನರ್, ಅಹಸ್, ಈಷತ್, ಯುಗಪತ್, ಪೃಥಕ್ ಇವು ಮೊದಲಾದ ಸಹಜಾವ್ಯಯಂಗಳನಿಱಿಸಿ, ವಿಭಕ್ತಿಯಂ ಪತ್ತಿಸಲಾಗದು.

ಅವ್ಯಯಸಮಾಸಕ್ಕೆ—ಅಂತರ್ಮುಖ, ಬಹಿರಂಗ, ಉಚ್ಚೈರ್ಧ್ಯಾನ, ನೀಚೈರ್ಗತ, ಮುಹುರ್ನಿರೀಕ್ಷಣ, ಪುನಃಪಾಕ, ಪ್ರಾತಃಕಾಲ, ಅಹರ್ನಿಶ, ಈಷದ್ಭೇದ, ಯುಗಪತ್ಸಂಭ್ರಮ, ಪೃಥಕ್ಚರಿತ್ರ, ಎಂದು ಸಮಾಸಂ ಮಾಡಿ—

ಅಂತರ್ಮುಖಂ, ಅಂತರ್ಮುಖನಂ, ಅಂತರ್ಮುಖನಿಂ, ಅಂತರ್ಮುಖಂಗೆ, ಅಂತರ್ಮುಖನತ್ತಣಿಂ, ಅಂತರ್ಮುಖನ, ಅಂತರ್ಮುಖನೊಳ್ ಎಂಬಂತೆಲ್ಲಕ್ಕಂ ವಿಭಕ್ತಿಯಂ ಪತ್ತಿಸುವುದು.

ತ್ಯದಾದಿಯಾದ ಸರ್ವನಾಮಂಗಳ್ಗೆ—ತ್ಯದ್, ತದ್, ಯದ್, ಏತದ್, ಇದಮ್, ಅದಸ್, ಯುಷ್ಮದ್, ಅಸ್ಮದ್, ಭವತ್, ಕಿಂ ಎಂಬೀ ತ್ಯದಾದಿಶಬ್ದಂಗಳನಿಱಿಸಿ, ವಿಭಕ್ತಿಯಂ ಕುಡದೆ,

ಇವಱ ಸಮಾಸಕ್ಕೆ—ತ್ಯತ್ಕಥನ; ತದ್ವಚನ; ಯತ್ಸುಖ; ಏತತ್ಸೌಖ್ಯ; ಇದನ್ನಿಮಿತ್ತ; ಅದಃಪುತ್ರ, (ಅದಃಪುತ್ರನೆಂದೀತನ ಪುತ್ರನೆಂಬುದರ್ಥಂ); ಇದಂದೇವ, (ಇದಂದೇವನೆಂದೀತನೆ ದೇವನೆಂಬರ್ಥಂ); ಯುಷ್ಮದ್ಗುಣ; ಅಸ್ಮದ್ದೌಹಿತ್ರ; ಭವದ್ರಾಜ್ಯ; ಕಿಂವಾರ್ತೆ (ಕಿಂವಾರ್ತೆಯೆಂದಾರ ವಾರ್ತೆಯೆಂಬರ್ಥಂ); ಈ ತೆಱದಿಂ ಸಮಾಸಮಂ ಮಾಡಿ, ವಿಭಕ್ತಿಯಂ ಪತ್ತಿಸುವುದು—

ತ್ಯತ್ಕಥನಂ, ತ್ಯತ್ಕಥನಮಂ, ತ್ಯತ್ಕಥನದಿಂ ಎಂಬಂತಱಿವುದು.

ಶತೃಇಂತಕ್ಕೆ[1]—ಕ್ವಣತ್, ಝಣತ್, ಭ್ರಮತ್, ರಟತ್, ಚಳತ್, ದಳತ್, ಮಿಳತ್, ಲಸತ್ ಮುಂಚತ್, ಚಂಚತ್, ಘೋಷ್ಯತ್ ಎಂಬೀ ಶತೃಇಂತಗಳ್ಗೆ ವಿಭಕ್ತಿಯಂ ಪತ್ತಿಸದೆ,

ಇವಱ ಸಮಾಸಕ್ಕೆ—ಕ್ವಣತ್ಕಂಕಣ, ಝಣನ್ನೂಪುರ, ಭ್ರಮದ್ಭ್ರಮರ, ರಟತ್ಕೋಕಿಲ, ಚಳತ್ಕುಂತಳ, ದಳತ್ಕೈರವ, ಮಿಳದ್ವಿಷ್ಟರ, ಲಸದ್ವಚನ, ಮುಂಚತ್ಕಂಚುಕ, ಚಂಚದ್ರೂಪ, ಗರ್ಜನ್ಮೇಘ, ಘೋಷ್ಯದರ್ಣವ ಎಂದಿಱಿಸಿ ಸಮಾಸಮಂ ಮಾಡಿ, ಎಲ್ಲಕ್ಕಂ ವಿಭಕ್ತಿಯಂ ಪತ್ತಿಸುವುದು—

ಕ್ವಣತ್ಕಂಕಣಂ, ಕ್ವಣತ್ಕಂಕಣಮಂ, ಕ್ವಣತ್ಕಂಕಣದಿಂ, ಕ್ವಣತ್ಕಂಕಣಕ್ಕೆ, ಕ್ವಣತ್ಕಂಕಣದತ್ತಣಿಂ, ಕ್ವಣತ್ಕಂಕಣದ, ಕ್ವಣತ್ಕಂಕಣದೊಳ್.

---

[1] ಶತೃ or ಶತೃಇಂತ denotes, according to Pânini, the Kṛt or Affix ಅತ್.

ಸೂತ್ರಂ. || ೮೨ ||

ಏಕದ್ವಿತ್ರ್ಯಾದಿ ಸಮಾ- |
ಸಾಕೃತಿಯಿಂ ಪ್ರತ್ಯಯಾಂತದಿಂದಿರೆ ಲಘುವ- ||
ಪ್ಪೇಕಾರಮನತ್ವಮನಿರ- |
ದಾಕಾರಂ ಬಹುಳದಿಂದೆ ತಳೆದಿರೆ ಲಿಂಗಂ. || ೯೨ ||

Further the Samskṛita Numbers up to ten are Indeclinables in Kannaḍa, unless they form parts of compounds or are in conjunction with affixes (ಪ್ರತ್ಯಯಂ), here ತಯ, ಕ, ಮ. — To form Kannaḍa declinable bases of Feminine Samskṛita nouns ending in ಆ, this ಆ is changed mostly into ಎ, seldom into ಅ.

ಪದಚ್ಛೇದಂ. — ಏಕದ್ವಿತ್ರ್ಯಾದಿ ಸಮಸಾಕೃತಿಯಿಂ ಪ್ರತ್ಯಯಾಂತದಿಂದೆ ಇರೆ, ಲಘುವಪ್ಪ ಏಕಾರಮಂ ಅತ್ವಮಂ, ಇರದೆ ಆಕಾರಂ, ಬಹುಳದಿಂದೆ ತಳೆದು ಇರೆ, ಲಿಂಗಂ.

ಅನ್ವಯಂ. — ಆಕಾರಂ ಲಘುವಪ್ಪೇಕಾರಮಂ ಅತ್ವಮಂ, ಇರದೆ, ಬಹುಳದಿಂದೆ ತಳೆದಿರೆ, ಲಿಂಗಂ ಎಂಬುದನ್ವಯಂ.

ಟೀಕು. — ಏಕದ್ವಿತ್ರ್ಯಾದಿ = ಏಕ, ದ್ವಿ, ತ್ರಿ ಎಂಬಿವಾದಿಯಾದ ಸಂಖ್ಯಾವಾಚಿಶಬ್ದಂ; ಸಮಾಸಾಕೃತಿಯಿಂ = ಸಮಾಸಾಕಾರದಿಂದೆ; ಪ್ರತ್ಯಯಾಂತದಿಂದೆ = ತಯಪ್ರತ್ಯಯಂ ಮೊದಲಾದ ಪ್ರತ್ಯಯಾಂತದಿಂದೆ; ಇರೆ = ಇರೆ ಲಿಂಗಮಪ್ಪವು; ಆಕಾರಂ = ಆಕಾರಾಂತಶಬ್ದಂ; ಲಘುವಪ್ಪೇಕಾರಮಂ = ಲಘುವಾದೇಕಾರಮಂ; ಅತ್ವಮಂ = ಅಕಾರಮಂ; ಇರದೆ = ನಿಲ್ಲದೆ; ಬಹುಳದಿಂದೆ = ಬಹುಳದಿಂದೆ; ತಳೆದು = ಧರಿಸಿ, ಇರೆ = ಇರೆ; ಲಿಂಗಂ = ಕನ್ನಡಕ್ಕೆ ಲಿಂಗಮಪ್ಪವು.

ವೃತ್ತಿ. — ಏಕ, ದ್ವಿ, ತ್ರಿ, ಚತುರ್, ಪಂಚ, ಷಟ್, ಸಪ್ತ, ಅಷ್ಟ, ನವ, ದಶ ಎಂಬಿವು ಸಹಜದಿಂ ಲಿಂಗಮಾಗವು; ಸಮಾಸಮಂ ಮೇಣ್ಪ್ರತ್ಯಯಾಂತಮಂ ಮಾಡೆ, ಲಿಂಗಮಕ್ಕುಂ. ಆಕಾರಾಂತಂ ಹ್ರಸ್ವಮಪ್ಪೇತ್ವಮಂ ಪಡೆದೊಡಂ ಅಕಾರಾಂತತೆಯಂ ಪಡೆದೊಡಂ ಲಿಂಗಮಕ್ಕುಂ.

ಪ್ರಯೋಗಂ. — ಸಂಖ್ಯಾವಾಚಿಸಮಾಸಕ್ಕೆ — ಏಕಾಂಗ, ದ್ವಿಮುಖ, ತ್ರಿಲೋಕ, ಚತುರ್ವೇದ, ಪಂಚಭೂತ, ಷಟ್ಕರ್ಮ, ಸಪ್ತದ್ವೀಪ, ಅಷ್ಟಭುಜ, ನವನಿಧಿ, ದಶವ್ಯಾಕರಣ ಎಂದು ಸಮಾಸಮಾಗಲೊಡಂ —

ಸಂಖ್ಯಾವಾಚಿಪ್ರತ್ಯಯಾಂತಕ್ಕೆ — ದ್ವಿತಯ, ತ್ರಿತಯ, ಚತುಷ್ಕ, ಪಂಚಕ, ಷಟ್ಕ, ಸಪ್ತಕ, ಅಷ್ಟಕ, ನವಮ, ದಶಮ ಎಂದು ಪ್ರತ್ಯಯಂ ಪತ್ತಲೊಡಂ — ಎಲ್ಲಕ್ಕಂ ವಿಭಕ್ತಿಯಂ ಪತ್ತಿಸುವುದು.

ಆಕಾರಮೆಕಾರಮಾದುದರ್ಕೆ—ಮಾಲಾ, ಬಾಲಾ, ಶಾಲಾ, ಏಲಾ, ಲೀಲಾ, ಜ್ವಾಲಾ, ಅಳಕಾ, ಕಳಿಕಾ, ತ್ರೇತಾ, ಸೀತಾ, ಯಾತ್ರಾ, ಮಾತ್ರಾ, ನಿದ್ರಾ, ಮುದ್ರಾ, ಕಶಾ, ಶಾಖಾ, ವೇಳಾ, ರೇಖಾ, ಮೂಷಾ, ಭಾಷಾ, ದ್ರಾಕ್ಷಾ, ಲಾಕ್ಷಾ ಎಂಬಿವು ಮೊದಲಾದುವು ಎಕಾರಾಂತಮಂ ಪಡೆಯಲೊಡೆ ವಿಭಕ್ತಿ ಪತ್ತುಗುಂ; ಮಾಲೆ, ಬಾಲೆ, ಲೀಲೆ, ಭಾಷೆ, ಯಾತ್ರೆ ಎಂಬಂತೆ.

ಆಕಾರಮೆಕಾರಮುಮ್ ಅಕಾರಮುಮಾದುದರ್ಕೆ—ಗ್ರೀವಾ ಭಿಕ್ಷಾ ಎಂಬೆರಡು ಶಬ್ದಂಗಳ್ಗೆ ಗ್ರೀವ, ಗ್ರೀವೆ; ಭಿಕ್ಷ, ಭಿಕ್ಷೆ ಎಂದು ನಿರೂಪಿಸುವುದು.

ಆಕಾರಮ್ ಅಕಾರಮಾದುದರ್ಕೆ—ಕಂಧರಾ, ಉಪತ್ಯಕಾ, ಕರುಣಾ, ಆದಿತ್ಯಕಾ, ದಂಷ್ಟ್ರಕಾ, ವಾಲುಕಾ ಎಂಬಿವು ಮೊದಲಾದುವು—ಕಂಧರ, ಉಪತ್ತ್ಯಕ, ಕರುಣ ಎಂದು ಅಕಾರಾಂತಂ ಪಡೆಯಲೊಡಂ ಲಿಂಗಮಾಗಿ ವಿಭಕ್ತಿ ಪತ್ತುಗುಂ.

ಸೂತ್ರಂ.[1] || ೮೩ ||

Further in forming Kannaḍa nominal bases of Saṁskṛita nouns ending in ಆ, this ಆ also is sometimes changed into ಎ; Saṁskṛita final ಈ and ಊ become short; monosyllables remain as they are.

ಆದಂ ಹ್ರಸ್ವೈದಂತಮ- |
ದಾದತ್ವಂ ಹ್ರಸ್ವಮೆನಿಸಿದೀದೂದಂತಂ ||
ಜ್ಯಾದಿಸಮಸ್ತೈಕಾಕ್ಷರ- |
ಮಾದವಿಕೃತಿಶಬ್ದಮುಕ್ತಿವಿದರಿಂ ಲಿಂಗಂ. || ೯೩ ||

---

1) ಆತೋಽ ಲಘುರೇತ್ || ಭಾ. ಭೂ. 100. ||
(ಲಿಂಗಾಂತದ ಆಕಾರಕ್ಕೆ ವಿಭಕ್ತಿಪ್ರತ್ಯಯವು ಪರವಾಗುವಾಗ ಎಕಾರವಾಗುವುದು.)
ಈದೂತೋರ್ಹ್ರಸ್ವ || ಭಾ. ಭೂ. 101. ||
(ಲಿಂಗಾಂತದ ಈಕಾರ ಊಕಾರಗಳು ಹ್ರಸ್ವಾಕ್ಷರಗಳಾಗುವುವು.)
ನೈಕಾಕ್ಷರಪದೇ || ಭಾ. ಭೂ. 102. ||
(ಏಕಾಕ್ಷರಪದಗಳಲ್ಲಿ ಈಕಾರ ಊಕಾರಂಗಳಿಗೆ ಹ್ರಸ್ವತ್ವ ಬರಲಾರದು.)

ಆಕಾರಕ್ಕೆ ಲಘೂಕೃತ- |
ಮೇಕಾರಂ ಬಹುಳಮಕ್ಕುಮೀದೂದಂತ- ||
ಕ್ಕೇಕಾಕ್ಷರಪದಮುಳಿದೆಯೆ ನಿ- |
ರಾಕುಳದಿಂ ಹ್ರಸ್ವಮಕ್ಕುಮೆಲ್ಲೆಡೆಗಳೊಳಂ || ಶ. ಸ್ಮೃ. 39. ||

ಪದಚ್ಛೇದಂ.— ಆದಂ ಹ್ರಸ್ವೈದಂತಂ ಅದು ಆದ ಅತ್ವಂ, ಹ್ರಸ್ವಂ ಎನಿಸಿದ ಈದೂದಂತಂ, ಜ್ಯಾದಿಸಮಸ್ತೈಕಾಕ್ಷರಂ ಆದ ಅವಿಕೃತಿಶಬ್ದಂ ಉಕ್ತಿವಿದರಿಂ ಲಿಂಗಂ.

ಟೀಕು, ಯಥಾನ್ವಯಂ.— ಆದಂ = ಪೀನ ಗ್ರಹಣದಿಂದೆ; ಹ್ರಸ್ವೈದಂತಂ = ಕನ್ನಡಕ್ಕೆ ಹ್ರಸ್ವವಾದ ಎಕಾರಾಂತಮುಂ; ಅದು = ಅದು; ಆದತ್ವಂ = ಆದಕಾರಾಂತ ಶಬ್ದಮುಂ; ಹ್ರಸ್ವಂ = ಕನ್ನಡಕ್ಕೆ ಹ್ರಸ್ವಂ; ಎನಿಸಿದೀದೂದಂತಂ = ಎನಿಸಿದ ಈಕಾರಾಂತ ಊಕಾರಾಂತಂ; ಜ್ಯಾದಿ = ಜ್ಯಾ ಎಂಬ ಶಬ್ದವಾದಿಯಾದ; ಸಮಸ್ತ = ಬಹುಳವಾದ; ಏಕಾಕ್ಷರಮಾದ = ಏಕಾಕ್ಷರವಾದ; ಅವಿಕೃತಿಶಬ್ದಂ = ವಿಕಾರವಿಲ್ಲದ ಶಬ್ದಂಗಳ್; ಉಕ್ತಿವಿದರಿಂ = ವಾಕ್ಯವಿದರಿಂದೆ; ಲಿಂಗಂ = ಲಿಂಗಮಪ್ಪವು.

ವೃತ್ತಿ.— ಆದಮೆಂಬ ಬಹುಳಗ್ರಹಣದಿಂದಾಕಾರಾಂತಮಲ್ಲದಕಾರಾಂತಮುಂ ಹ್ರಸ್ವಮಪ್ಪೇತ್ವಮಂ ಪಡೆದೊಡಂ ಲಿಂಗಮಕ್ಕುಂ; ಈಕಾರಾಂತ ಊಕಾರಾಂತಂಗಳ್ ಹ್ರಸ್ವಮಾದೊಡಂ ಲಿಂಗಮಕ್ಕುಂ; ಜ್ಯಾಶಬ್ದಂ ಮೊದಲಾದೇಕಾಕ್ಷರಶಬ್ದಂಗಳಿರ್ದ ತೆಱದಿಂ ಲಿಂಗಮಪ್ಪವು. 'ಅ'

ಪ್ರಯೋಗಂ.— ಅಕಾರಾಂತಕ್ಕೆ— ವಧ, ಅಭಿಲಾಷ, ಉದಾಹರಣ, ದರ್ಭ, ಪ್ರಶ್ನ, ಊಹ, ಅಳಕ ಎಂಬಿವು ವಧೆ, ಅಭಿಲಾಷೆ ಎಂಬಂತೆ ಎತ್ವಮಂ ಪಡೆದೊಡಂ ಲಿಂಗಮಪ್ಪವು.

ಈಕಾರಾಂತಕ್ಕೆ—ಲಕ್ಷ್ಮೀ, ಗೌರೀ, ಸರಸ್ವತೀ, ಶಚೀ, ಭಾಮಿನೀ, ಗೋಮಿನೀ, ಕಾಮಿನೀ, ನಾರೀ, ಕುಮಾರೀ, ಕಾವೇರೀ, ಗೋದಾವರೀ, ಗಾಂಧಾರೀ ಎಂಬೀಕಾರಾಂತಕ್ಕೆ ಲಕ್ಷ್ಮಿ, ಗೌರಿ, ಸರಸ್ವತಿ ಎಂಬಂತೆ ಹ್ರಸ್ವಮಾದೊಡಂ,

ಊಕಾರಾಂತಕ್ಕೆ—ಸರಯೂ, ಕಂಡೂ, ಖರ್ಜೂ, ಕುಹೂ, ಜಂಬೂ, ಸ್ವಯಂಭೂ, ಖಲಪೂ, ಅಲಾಬೂ, ಅಭ್ರಮೂ, ಚಮೂ ಎಂಬೂಕಾರಾಂತಂಗಳ್ ಸರಯು, ಕಂಡು ಎಂಬಂತೆ ಹ್ರಸ್ವಮಾದೊಡಂ, ಲಿಂಗಮಕ್ಕುಂ.

ಏಕಾಕ್ಷರಕ್ಕೆ—ಜ್ಯಾ, ಮಾ, ಶ್ರೀ, ಸ್ತ್ರೀ, ಭೀ, ಭ್ರೂ, ಕೂ ಎಂಬಿವು ಮೊದಲಾದ ಏಕಾಕ್ಷರಶಬ್ದಂಗಳಿರ್ದ ತೆಱದಿಂ ವಿಭಕ್ತಿಯುಂ ಪಡೆವುವು.

ಸೂತ್ರಂ[1]. || ೮೪ ||

Samskṛita nouns with final ಅ, ಇ, ಉ and ಋ (generally) remain as they are in Kannaḍa; but final ಋ is sometimes changed.

ಅತ್ವಾಂತಮುಮಿತ್ವಾಂತಮು- |
ಮುತ್ವಾಂತಮುಮಾ ಋದಂತಮುಂ ನಿಜಲಿಂಗಂ ||
ಋತ್ವಕ್ಕಾರಾದೇಶಂ |
ತತ್ವಂ ಪೀನಂ ವಿಧಾತೃಶಬ್ದಂ ರಾಂತಂ. || ೮೪ ||

ಪದಚ್ಛೇದಂ. — ಅತ್ವಾಂತಮುಂ ಇತ್ವಾಂತಮುಂ ಉತ್ವಾಂತಮುಂ ಆ ಋದಂತಮುಂ ನಿಜಲಿಂಗಂ; ಋತ್ವಕ್ಕೆ ಅರಾದೇಶಂ, ತತ್ವಂ ಪೀನಂ; ವಿಧಾತೃಶಬ್ದಂ ರಾಂತಂ.

ಟೀಕು, ಯಥಾನ್ವಯಂ. — ಅತ್ವಾಂತಮುಂ=ಅಕಾರಾಂತಶಬ್ದಮುಂ; ಇತ್ವಾಂತಮುಂ=ಇಕಾರಾಂತಶಬ್ದಮುಂ; ಉತ್ವಾಂತಮುಂ=ಉಕಾರಾಂತಶಬ್ದಮುಂ; ಆ ಋದಂತಮುಂ=ಆ ಋಕಾರಾಂತಶಬ್ದಮುಂ; ನಿಜಲಿಂಗಂ=ನಿಜದಿ ಲಿಂಗಮಪ್ಪುವು, (ಇರ್ದ ಹಾಂಗೆ ಲಿಂಗವಪ್ಪುದೆಂಬರ್ಥಂ); ಋತ್ವಕ್ಕೆ=ಋಕಾರಾಂತಕ್ಕೆ; ಅರಾದೇಶಂ=ಅರ ಎಂದಾದೇಶವಪ್ಪುದು; ತತ್ವಂ=ತಕಾರಾಂತವಪ್ಪುದು; ಪೀನಂ=ವಿಶೇಷವಾಗಿ; ವಿಧಾತೃಶಬ್ದಂ=ವಿಧಾತೃವೆಂಬ ಶಬ್ದಂ; ರಾಂತಂ=ರೇಫಾಂತವಪ್ಪುದು.

---

[1] ಧಾತೋಸ್ತೃಶಬ್ದಸ್ಯ ವಾರಃ || ಭಾ. ಭೂ. ೧೦೩. ||
(ಧಾತುವಿನ ತೃಶಬ್ದಕ್ಕೆ ವಿಕಲ್ಪದಿಂದ ಅರಾದೇಶಮುಂಟು.)
ರಾಂತೋ ವೇಧಸಿ ವಿಧಾತುಃ || ಭಾ. ಭೂ. 104. ||
(ಬ್ರಹ್ಮ ಎಂಬ ಅರ್ಥದಲ್ಲಿ ವಿಧಾತೃ ಎಂಬ ಶಬ್ದಕ್ಕೆ ರಕಾರಾಂತತೆ ಬಂದು ವಿಧಾತ್ರ ಎಂದಾಗುವುದುಂಟು.)

ಧಾತುವಿಹಿತಂ ತೃಶಬ್ದಂ |
ಖ್ಯಾತವಿಭಕ್ತ್ಯಂತರಂಗದೊಳ್ ನಿಲ್ಕುಂ ತಾ- ||
ನಾ ತೆರದೆ ನಿಲ್ಲದಂದುವ- |
ಜಾತಾರಾದೇಶಮಾಗಿ ನಿಯತಂ ನೆಗಳ್ಗುಂ || ಶ. ಸ್ಮೃ. 40. ||

ಬಿದಿಗಭಿಧಾನಂ ತಾನಂ- |
ತದಾದೊಡಕ್ಕುಂ ವಿಧಾತೃಶಬ್ದಂ ರಾಂತಂ ||
ತ್ರಿವಿವಕ್ಷಿತರೊಳರಾದೇ- |
ಶದಿಂದಮೊಡಗೂಡಿ ವರ್ತಿಕುಂ ಪಿತೃಶಬ್ದಂ || ಶ. ಸ್ಮೃ. 41. ||

ವೃತ್ತಿ.—ಅಕಾರಾಂತಮುಮಿಕಾರಾಂತಮುಮುಕಾರಾಂತಮುಂ ಋಕಾರಾಂತಮುಂ ಸ್ವಭಾವದಿಂ ಲಿಂಗಮಪ್ಪುವು; ಪೀನಗ್ರಹಣದಿಂ ಋಕಾರಾಂತಕ್ಕೆ ಆರಾದೇಶಮೊರ್ಮೆಯುಂಟು; ಧಾತೃಶಬ್ದಕ್ಕೆ ತಕಾರಮುಂ ವಿಧಾತೃಶಬ್ದಕ್ಕೆ ರೇಫಮುಮಕ್ಕುಂ.

ಪ್ರಯೋಗಂ.—ಅಕಾರಾಂತಕ್ಕೆ—ಭುವನ, ಭವನ, ನಳಿನ, ಶಯನ, ನಯನ, ಕುಲಿಶ, ಕಲಶ, ಕರಣ, ಚರಣ, ದೇಶ, ಕೋಶ, ಧ್ಯಾನ, ಮೌನ.

ಇಕಾರಾಂತಕ್ಕೆ—ಶ್ರುತಿ, ಸ್ಮೃತಿ, ಧೃತಿ, ಕೃತಿ, ಗತಿ, ಪತಿ, ಯತಿ, ಮತಿ, ಶುದ್ಧಿ, ಸಿದ್ಧಿ, ಬುದ್ಧಿ, ವೃದ್ಧಿ, ಕವಿ, ರವಿ, ಪವಿ, ಅರಿ, ಗಿರಿ, ಹರಿ, ಲಿಪಿ, ಕಪಿ, ಧ್ವನಿ, ಮುನಿ.

ಉಕಾರಾಂತಕ್ಕೆ—ಪಶು, ಶಿಶು, ರಿಪು, ಭಾನು, ಧೇನು, ಸಾನು, ಸೇತು, ಕೇತು, ಬಂಧು, ಸಿಂಧು, ದಾರು, ಭೀರು.

ಋಕಾರಾಂತಕ್ಕೆ—ಪಿತೃ, ಸವಿತೃ, ನಪ್ತೃ, ಕರ್ತೃ, ನೇತೃ, ಹೋತೃ, ಜಾಮಾತೃ, ದುಹಿತೃ, ಭರ್ತೃ, ನನಾಂದೃ, ಯಾತೃ, ಮಾತೃ, ಧಾತೃ.

ಆರಾದೇಶಕ್ಕೆ—ಸವಿತಾರ, ಕರ್ತಾರ, ನೇತಾರ, ಹೋತಾರ, ದುಹಿತಾರ, ಭರ್ತಾರ.

ಧಾತೃಶಬ್ದದ ತಕಾರಕ್ಕೆ—ಧಾತ, ಮಾಂಧಾತ.—

"ಭೀತನ ಧಾತನ ಸತ್ಯೋ- |
ಪೇತನ . . . . ||
. . . . .ಮಾಂ- |
ಧಾತನ ದೊರೆಯಪ್ಪ ಧೀರರುಂ ಚಾಗಿಗಳುಂ." || 180 ||

ವಿಧಾತೃಶಬ್ದದ ರಾಂತಕ್ಕೆ—ವಿಧಾತ್ರ.

". . . . . .ಭೀ- |
ತನಿಕಾಯಕ್ಕೆ ವಿಧಾತ್ರನುಂಡಿಗೆ ಜವಂ ಕೊಟ್ಟೋಲೆ. ." || 181 ||

ಸೂತ್ರಂ[1]. || ೮೫ ||

For ಪಿತೃ and ಸಖಿ are substituted ಪಿತರ and ಸಖಿ.

ಪಿತೃಶಬ್ದದೆಡೆಗರಾದೇ- |
ಶತೆ॥ಸಖಿಶಬ್ದಕ್ಕೆ ನೆಟ್ಟನತ್ತಾದೇಶ- ||
ಸ್ಥಿತಿಯಾಗೆ ಲಿಂಗಮಕ್ಕುಂ |
ವಿತರ್ಕಮೇಂ ಪೇೞಿಮ್ ಸ್ವರಾಂತಮಿವು ಲಿಂಗಂಗಳ್. || ೮೫ ||

ಪದಚ್ಛೇದಂ.—ಪಿತೃಶಬ್ದದ ಎಡೆಗೆ ಅರಾದೇಶತೆ, ಸಖಿಶಬ್ದಕ್ಕೆ ನೆಟ್ಟನೆ ಅತ್ತಾದೇಶ ಸ್ಥಿತಿ ಆಗೆ, ಲಿಂಗಂ ಅಕ್ಕುಂ. ವಿತರ್ಕಂ ಏಂ? ಪೇೞಿಮ್! ಸ್ವರಾಂತಂ ಇವು ಲಿಂಗಂಗಳ್.

ಅನ್ವಯಂ.—ಲಿಂಗಂಗಳಿವು ಸ್ವರಾಂತಂ. ಉಳಿದುದು ಯಥಾನ್ವಯಂ.

ಟೀಕು.—ಪಿತೃಶಬ್ದದ = ಪಿತೃ ಎಂಬ ಶಬ್ದದ; ಎಡೆಗೆ = ಸ್ಥಾನಕ್ಕೆ; ಅರಾದೇಶತೆ = ಅರ ಎಂಬಾದೇಶತ್ವಂ; ಸಖಿಶಬ್ದಕ್ಕೆ = ಸಖಿಯೆಂಬ ಶಬ್ದಕ್ಕೆ; ನೆಟ್ಟನೆ = ವ್ಯಕ್ತವಾಗಿ; ಅತ್ತಾದೇಶ ಸ್ಥಿತಿ = ಅಕಾರಾದೇಶಸ್ಥಿತಿ; ಆಗೆ = ಆಗೆ; ಲಿಂಗಂ = ಲಿಂಗಂ; ಅಕ್ಕುಂ = ಅಪ್ಪುದು; ವಿತರ್ಕಮೇಂ = ವಿವಾದವೇಂ; ಪೇೞಿಮ್ = ಹೇಳ್; ಲಿಂಗಂಗಳ್ = ಲಿಂಗಂಗಳ್; ಇವು = ಈ ಪೇೞ್ದುವು; ಸ್ವರಾಂತಂ = ಸ್ವರಾಂತಲಿಂಗಂಗಳ್ ಅಪ್ಪುವು.

ವೃತ್ತಿ.—ಸ್ವರ್ಗಸ್ಥರಪ್ಪ ಪಿತೃಗಳ್ಗರಾದೇಶಮುಂ ಸಖಿಶಬ್ದದಿಕಾರಕ್ಕಕಾರಮುಮಾಗೆ, ಲಿಂಗಮಕ್ಕುಂ.

ಪ್ರಯೋಗಂ.—ಪಿತೃಶಬ್ದಕ್ಕೆ—ಪಿತರ.

"......ಬಡವರ ಪಿತರರಂತೆ ಮಱುಗುತ್ತಿರ್ಕುಂ." || 182 ||

ಸಖಿಶಬ್ದಕ್ಕೆ—ಸಖ.

"ನಿಮಗೆ ಸಖಂ ಕಮಲಸಖಂ." || 183 ||

ಇವು ಸಂಸ್ಕೃತಸ್ವರಾಂತಲಿಂಗಂಗಳ್.

[1] ಅರೋಽ ನೃತ್ರ || ಧಾ. ಭೂ. 105 ||
(ಧಾತುವಿನದು ಅಲ್ಲದಿರುವ ತೃ ಎಂಬುದಕ್ಕೆ ಅರಾದೇಶವಾಗುವುದು.)
ಸಖ್ಯುರಾಯಃ || ಧಾ. ಭೂ. 107. ||
(ಸಖಿಶಬ್ದಕ್ಕೆ ವಿಭಕ್ತಿಗಣಂ ಪರವಾಗುವಾಗ ಆಯಪ್ರತ್ಯಯವಾಗುವುದು.)

ಸೂತ್ರಂ[1]. || ೮೬ ||

Saṁskṛita nominal bases ending in consonants are in Kannaḍa, made to end in ಅ, or in ಉ with doubling of the final consonant; or their final consonant is dropped.

ಜನಮುಲಿವ ಸಂಸ್ಕೃತವ್ಯಂ- |
ಜನಾಂತಲಿಂಗಂಗಳತ್ವಮಂ ದ್ವಿತ್ವದಿಸು- ||
ತ್ವನಿಯೋಗಮನಂತ್ಯಾದ- |
ರ್ಶನಮಂ ಮೇಣ್ತಾಳ್ದು ಕನ್ನಡಕ್ಕಿವು ಲಿಂಗಂ. || ೯೬ ||

ಪದಚ್ಛೇದಂ.— ಜನಂ ಉಲಿವ ಸಂಸ್ಕೃತವ್ಯಂಜನಾಂತಲಿಂಗಂಗಳ್ ಅತ್ವಮಂ ದ್ವಿತ್ವದಿಂ ಉತ್ವನಿಯೋಗಮಂ ಅಂತ್ಯಾದರ್ಶನಮಂ ಮೇಣ್ ತಾಳ್ದು, ಕನ್ನಡಕ್ಕೆ ಇವು ಲಿಂಗಂ.

ಟೀಕು, ಯಥಾನ್ವಯಂ.— ಜನಂ = ವಿದ್ವಜ್ಜನಂ; ಉಲಿವ = ಪೇಳ್ವ; ಸಂಸ್ಕೃತ = ಸಂಸ್ಕೃತದ; ವ್ಯಂಜನಾಂತ = ವ್ಯಂಜನಾಂತಂಗಳಾದ; ಲಿಂಗಂಗಳ್ = ಪ್ರಕೃತಿಸಂಜ್ಞೆಯುಳ್ಳ ಲಿಂಗಂಗಳ್; ಅತ್ವಮಂ = ಅಕಾರಮಂ; ದ್ವಿತ್ವದಿಂ = ದ್ವಿರ್ಭಾವದೊಡನೆ; ಉತ್ವನಿಯೋಗಮಂ = ಉಕಾರದ ನಿಯೋಗಮಂ; ಅಂತ್ಯ = ಕಡೆಯಕ್ಷರದ; ಅದರ್ಶನಮಂ = ಲೋಪಮಂ; ಮೇಣ್ = ವಿಕಲ್ಪದಿಂದೆ; ತಾಳ್ದು = ಧರಿಸಿ; ಕನ್ನಡಕ್ಕೆ = ಕರ್ಣಾಟಕಕ್ಕೆ; ಇವು = ಈ ಪೇಳ್ದುವು; ಲಿಂಗಂ = ಲಿಂಗಮಪ್ಪುವು.

ವಿಚಾರಂ.— ಇಲ್ಲಿ ವಿಚಾರಮುಂಟು – ಸಕಾರಾಂತಪ್ರಕೃತಿಗಳ್ಗೆ ದ್ವಿತ್ವದಿಂ ಉತ್ವಮುಮಂತ್ಯಲೋಪಮುಂ ವಿಕಲ್ಪಂದಿಂದಕ್ಕುಂ. ಶಬ್ದಾನುಶಾಸನದಲ್ಲಿ ಸೂತ್ರಂ (2, 34) || ಉಗಬಾದೀನಾಂ || ವೃತ್ತಿ || ಅಬಾದೀನಾಂ ಶಬ್ದಾನಾಂ ಉಗಾಗಮೋ ಭವತಿ || ಎಂದುದಾಗಿ, ಅಬಾದಿಗಳ್ಗೆ (ಅಪ್ ಮುಂತಾದ ಶಬ್ದಂಗಳ್ಗೆ) ಉಗಾಗಮಂ ಬರ್ಪುದು; ಉಗಾಗಮಂ ಬಂದಲ್ಲಿ ದ್ವಿತ್ವಮುಂಟು. ಅಪ್, ವಿಯತ್ ಸಂಯತ್, ವಿದ್ಯುತ್, ಜಗತ್, ದ್ಯುತ್, ಪುರಿತತ್, ಅಗ್ನಿಚಿತ್, ಯಜುಸ್, ಸದಸ್, ತಟಿತ್ ಇವಾದಿಯಾದುವು ಅಬಾದ್ಯಾಕೃತಿಗಣಂ; ಇವರ್ಕೆ ದ್ವಿತ್ವದಿಂ ಉತ್ವಮುಂಟು. ಸೂತ್ರಂ (2, 35) || ವಾಗಾದೀನಾಂ ಸ್ವಂತವಚ್ಚ || ವೃತ್ತಿ || ವಾಚ್ ಇತ್ಯ

[1] ವಿರಾಮೇ ವ್ಯಂಜನಸ್ಯ || ಭಾ. ಭೂ. 110. ||
(ವಿರಾಮದಲ್ಲಿ ವರ್ತಿಸುವ ವ್ಯಂಜನಕ್ಕೆ ಅಕಾರಾಂತತೆ ಬರುವುದು.)
ಲೋಪೋ ವಿಭಾಷಯಾ || ಭಾ. ಭೂ. 111. ||
(ಅಂಥಾ ವ್ಯಂಜನಗಳಿಗೆ ವಿಕಲ್ಪದಿಂದೆ ಲೋಪ ಬರುವುದುಂಟು.)

ಪಡೆಗುಂ ವಿಭಾಷೆಯಿಂದಂ |
ಕಡೆಯೊಳದಂತತೆಯುನಸ್ವರಂ ವ್ಯಂಜನವೋಲ್ ||
ಪಡೆಗುಮದರ್ಶನಮಂ ಮೇಣ್ |
ಪಡೆಗುಂ ದ್ವಿರ್ಭಾವವೃತ್ತಿಯಂ ಮೇಣ್ ಶ್ರುತಿವೊಲ್ || ಶ. ಸ್ಮೃ. 43. ||

ಏವಮ್ ಆದೀನಾಂ ಶಬ್ದಾನಾಂ ಸ್ವಂತವತ್ ಪ್ರಥಮೈಕವಚನವದ್ ರೂಪಮ್ ಅತಿದಿಶ್ಯತೇ ಉಗಾಗಮಶ್ ಚ ಭವತಿ || ಎಂದುದಾಗಿ, ವಾಗಾದಿಗಣಕ್ಕೆ ಸಂಸ್ಕೃತಪ್ರಥಮೈಕವಚನದ ಮೇಲೆ ದ್ವಿತ್ವದಿನುತ್ವಮಕ್ಕುಂ; ವಾಕ್ಕು, ದಿಕ್ಕು, ತ್ವಕ್ಕು, ಋಕ್ಕು, ಉಷ್ಣಿಕ್ಕು, ಕ್ಷುತ್ತು, ಪ್ರತಿಪತ್ತು, ಪರಿಷತ್ತು ಎಂಬಂತೆ. ವಾಚ್, ತ್ವಚ್, ಕ್ಷುಧ್, ವಿರುಧ್, ಸಮಿಧ್, ಸಂಪದ್, ಪ್ರತಿಪದ್, ಪರಿಷದ್, ವಿಪದ್, ಉಷ್ಣಿಹ್, ಋಚ್, ಸ್ರಜ್, ದಿಶ್, ವಿಶ್ ಇವಾದಿಯಾದುವು ವಾಗಾದ್ಯಾಕೃತಿಗಣಂ. ಸೂತ್ರಂ (2, 36) || ಮಹದಾದೀನಾಮ್ ಅಪಿ || ವೃತ್ತಿ || ಮಹದಾದೀನಾಂ ಶಬ್ದಾನಾಂ ಸ್ವಂತವದ್ ರೂಪಮ್ ಅತಿದಿಶ್ಯತೇ ಉಗಾಗಮಶ್ ಚ ಭವತಿ ನಪುಂಸಕಲಿಂಗವಿಷಯೇ || ಎಂದುದಾಗಿ, ಮಹದಾದಿಗಣಕ್ಕೆ ನಪುಂಸಕಲಿಂಗದಲ್ಲಿ ಪ್ರಥಮೈಕವಚನದ ಮೇಲೆ ದ್ವಿತ್ವದಿಂ ಉತ್ವಮಕ್ಕುಂ. ಮಹತ್ತು, ಬೃಹತ್ತು, ಪ್ರಾಕ್ಕು, ಅವಾಕ್ಕು, ಸಮ್ಯಕ್ಕು ಎಂಬಂತೆ; ಪುಲ್ಲಿಂಗದಲ್ಲಿ ಮಹಂತಂ, ಬೃಹಂತಂ, ಪ್ರಾಂಚಂ, ಸಮ್ಯಂಚಂ, ಪ್ರತ್ಯಂಚಂ ಎಂದಕ್ಕುಂ. ಮಹತ್, ಬೃಹತ್, ಪ್ರಾಚ್ ಅವಾಚ್, ಪ್ರತ್ಯಚ್, ಉದಚ್, ತಿರ್ಯಚ್, ವಿಷ್ವಚ್, ನ್ಯಚ್, ಅಮುದ್ರ್ಯಚ್, ಅದದ್ರ್ಯಚ್, ಅಮುಮುಯಚ್, ಅದಮುಯಚ್, ಸಧ್ರ್ಯಚ್ ಸಮ್ಯಚ್ ಇವಾದಿಯಾದುವು ಮಹದಾದ್ಯಾಕೃತಿಗಣಂ.

ವೃತ್ತಿ.—ಸಂಸ್ಕೃತವ್ಯಂಜನಾಂತಲಿಂಗಂಗಳತ್ವಮಂ ಪಡೆದುಂ, ದ್ವಿತ್ವಂ ಬೆರಸಿದುತ್ವಮಂ ಪಡೆದುಂ, ಅಂತ್ಯಲೋಪಮಂ ಮೇಣ್ಪಡೆದುಂ, ಲಿಂಗಮಕ್ಕುಂ.

ಪ್ರಯೋಗಂ.—ದಿವ್, ಸ್ರಜ್, ಚತುರ್, ಮರುತ್, ಬುಧ್, ಕಕುಭ್, ವೇದವಿದ್, ಪುರ್, ಮುದ್, ಸಮವಯಸ್, ಗುಣಭಾಜ್, ವಿಹಾಯಸ್, ಸಂಪದ್ ಇವು ಮೊದಲಾದ ವ್ಯಂಜನಾಂತಕ್ಕೆ ದಿವ, ಸ್ರಜ, ಚತುರ ಎಂಬಂಶತ್ವಮಾದೊಡಂ—

ರಜ್, ಅಪ್, ಕ್ಷುತ್, ಪ್ರತಿಪತ್, ಋಕ್, ಯಜುಸ್, ವಿದ್ಯುತ್, ದ್ವಿಟ್, ಪ್ರಾವೃಟ್, ವಾಕ್ ಇವು ಮೊದಲಾದುವರ್ಕೆ ಉತ್ವಂ ಬೆರಸಿ ದ್ವಿರ್ಭಾವಮಾಗಿ ರಜ್ಜು, ಅಪ್ಪು, ಕ್ಷುತ್ತು ಎಂಬಂತಾದೊಡಂ—

ರಾಜನ್, ಮೂರ್ಧನ್, ಪೂಷನ್, ಅರ್ಯಮನ್, ಮಘವನ್, ಕರಿನ್, ಷಂಡನ್, ಧಾಮನ್, ಸೀಮನ್, ಊಷ್ಮನ್, ಕರ್ಮನ್, ಚರ್ಮನ್, ಬ್ರಹ್ಮನ್, ಪುರೂರವನ್, ಅಧ್ವನ್, ಯುವನ್ ಇವು ಮೊದಲಾದ ಶಬ್ದಂಗಳಂತ್ಯಲೋಪಮಾಗಿ ರಾಜ, ಪೂಷ, ಮೂರ್ಧ ಎಂಬಂತಾದೊಡಂ ಲಿಂಗಮಪ್ಪವು; ಸೀಮೋಷ್ಮಂಗಳದಂತತೆಗೆ, ಸೀಮೆ ಊಷ್ಮೆ ಎಂದು, ಎತ್ವಮುಮುಂಟು.

ಮೇಣೆಂಬ ವಿಕಲ್ಪಾರ್ಥದಿಂ ಸಕಾರಾಂತದಲ್ಲಿ—ಯಶ, ಯಶಸ್ಸು; ತೇಜ,

ತೇಜಸ್ಸು; ವಯ, ವಯಸ್ಸು; ಪಯ, ಪಯಸ್ಸು; ಮನ, ಮನಸ್ಸು; ಶ್ರೇಯ, ಶ್ರೇಯಸ್ಸು ಎಂದು ಸಲ್ವುದು.

ಮೇಣೆಂಬುದಱಿಂ ಸಹ ವ್ಯಂಜನಮಾಗೆಯೆ ಕೆಲವಿರ್ಪುವು—ವಾಕ್; ಗೀರ್; ಏಕಕಾಲಂ ಯುಗಪದ್.

"ಶ್ರುತದೇವಿ ವಾಣಿ ವಾಗ್ ಭಾ- |
ರತಿ ವಚನಂ ಭಾಷೆ. . . . ." || 184 ||

ಮೇಣೆಂಬುದಱಿಂ ಗೀರ್ ಎಂಬುದರ್ಕೆ ಗಿರೆ ಎಂದೆತ್ವಮುಮುಂಟು.

ಸೂತ್ರಂ[1]. || ೮೭ ||

The Nominative Plural of certain Saṁskṛita words, after having dropped its Visarga, is used as a nominal theme in Kannaḍa.

ಪ್ರಚುರತೆಯಿಂ ಪ್ರಥಮಾಬಹು- |
ವಚನಂಗಳವೇಕವಚನಕೃತಲಿಂಗಂಗಳ್ ||
ನಿಚಿತವಿಸರ್ಗಮನುಳಿದಿಂ- |
ದುಚಿತಜ್ಞರ್ ತಿಳಿವುದಿವನುದಾಹೃತಿಮುಖದಿಂ. || ೯೭ ||

ಪದಚ್ಛೇದಂ.—ಪ್ರಚುರತೆಯಿಂ ಪ್ರಥಮಾಬಹುವಚನಂಗಳ್, ಅವು ಏಕವಚನಕೃತಲಿಂಗಂಗಳ್, ನಿಚಿತವಿಸರ್ಗಮುಂ ಉಳಿದ ಅಂದು; ಉಚಿತಜ್ಞರ್ ತಿಳಿವುದು ಇವಂ ಉದಾಹೃತಿಮುಖದಿಂ.

---

1) ಶ್ವಯುವಾಧ್ವನಾಮಾನಃ || ಧಾ. ಭೂ. 106. ||
(ಶ್ವನ್, ಯುವನ್, ಅಧ್ವನ್ ಎಂಬಿವುಗಳ ಅಂತ್ಯಕ್ಕೆ ಆನ ಪ್ರತ್ಯಯ ಬರುವುದು.)
ಸಖ್ಯುರಾಯಃ || ಧಾ. ಭೂ. 107. ||
(ಸಖಿಶಬ್ದಕ್ಕೆ ಆಯ ಪ್ರತ್ಯಯ ಬರುವುದು.)
ವನ್ಸ್ಯನ್ಸೋರುಪಾಂತ್ಯಸ್ಯ ದೀರ್ಘೋ ವಾ || ಧಾ. ಭೂ. 108. ||
(ವನ್ಸ್. ಯನ್ಸ್ ಪ್ರತ್ಯಯಾಂತಗಳ ಉಪಾಂತ್ಯಕ್ಕೆ ವಿಕಲ್ಪದಿಂದ ದೀರ್ಘವಾಗುವುದು.)
ಅದಂತತಾ ಚ || ಧಾ. ಭೂ. 109. ||
(ಆ ವನ್ಸ್ ಯನ್ಸ್‌ಗಳ ಉಪಾಂತ್ಯಕ್ಕೆ ದೀರ್ಘವಾದರೆ ಅವುಗಳಿಗೆ ಅಕಾರಾಂತತೆ ಬರುವುದು.)

ಶ್ವಯುವಾಧ್ವನ್ ಸಖಿಯನ್ಸ್- |
ತ್ವಯುವನ್ಸಂತಂ ಬಹುತ್ವವಿಷಯಕೃತಾದೇ- ||
ಶಯುತಂ ವಿಕಲ್ಪದಿಂದಂ |
ಪ್ರಯೋಗಿಸಲ್ಪಡೆಗುಮೆಸೆವಿನಂ ಕನ್ನಡದೊಳ್ || ಶ. ಸ್ಮೃ. 42. ||

ಅನ್ವಯಂ. — ಪ್ರಚುರತೆಯಿಂ ಪ್ರಥಮಾಬಹುವಚನಂಗಳ್, ಅವು ನಿಚಿತವಿಸರ್ಗಮಂ ಉೞಿದಂದು, ಏಕವಚನಕೃತಲಿಂಗಂಗಳ್; ಉಚಿತಜ್ಞರ್ ಇವಂ ಉದಾಹೃತಿಮುಖದಿಂ ತಿಳಿವುದು.

ಟೀಕು. — ಪ್ರಚುರತೆಯಿಂ = ಪ್ರಸಿದ್ಧಿಯಿಂದೆ; ಪ್ರಥಮಾಬಹುವಚನಂಗಳ್ = ಸಂಸ್ಕೃತದ ಪ್ರಥಮಾವಿಭಕ್ತಿಯ ಬಹುವಚನಂಗಳ್; ಅವು = ಅವು; ನಿಚಿತವಿಸರ್ಗಮಂ = ನಿಶ್ಚಯಿಸಲ್ಪಟ್ಟ ವಿಸರ್ಜನೀಯವಂ; ಉೞಿದಂದು = ಬಿಟ್ಟಂದು; ಏಕವಚನ = ಏಕವಚನವಾಗಿ; ಕೃತ = ಮಾಡಲ್ಪಟ್ಟ; ಲಿಂಗಂಗಳ್ = ಲಿಂಗಂಗಳೆನಿಸುವುವು; ಉಚಿತಜ್ಞರ್ = ಇಂಗಿತಜ್ಞರ್; ಇವಂ = ಈ ಶಬ್ದಂಗಳಂ; ಉದಾಹೃತಿಮುಖದಿಂ = ಉದಾಹರಣೆಯ ಮುಖದಿಂದೆ; ತಿಳಿವುದು = ಅರಿವುದು.

ವೃತ್ತಿ. — ಸಂಸ್ಕೃತದ ಪ್ರಥಮಾಬಹುವಚನಂಗಳ್ ತಮ್ಮ ವಿಸರ್ಗಮಂ ಕಳೆಯೆ, ಕನ್ನಡದೊಳೇಕವಚನವಾಗಿ, ಲಿಂಗಮಪ್ಪುವು.

ಪ್ರಯೋಗಂ. — ಶ್ವಾನ, ಯುವಾನ, ಅಧ್ವಾನ, ಸಖಾಯ, ಜ್ಯಾಯಾಂಸ, ಕನೀಯಾಂಸ, ವಿದ್ವಾಂಸ, ಭಾಸ್ವಂತ, ಶ್ರೀಮಂತ, ಹನುಮಂತ, ಇವು ಮೊದಲಾದುವು.

|| ಸೂತ್ರಂ. || ೭೮ ||

One may say that there are 9 different genders in Kannaḍa.

ನೀನಱಿ ಕರ್ಣಾಟಕದೊ- |
ಳ್ಪೀನಂ ಸ್ತ್ರೀಪುಂನಪುಂಸಕೋಭಯಪುಂಸ್ತ್ರೀ ||
ಸ್ತ್ರೀನಪ್ಸಮಸ್ತವಾಚ್ಯಾ- |
ನೂನಾವ್ಯಯಮೆಂದು ಲಿಂಗಮೊಂಬತ್ತು ತೆಱಂ. || ೭೮ ||

ಪದಚ್ಛೇದಂ. — ನೀಂ ಅಱಿ ಕರ್ಣಾಟಕದೊಳ್ ಪೀನಂ, ಸ್ತ್ರೀಪುಂನಪುಂಸಕೋಭಯಪುಂಸ್ತ್ರೀಸ್ತ್ರೀನಪ್ಸಮಸ್ತವಾಚ್ಯಾನೂನಾವ್ಯಯಂ ಎಂದು, ಲಿಂಗಂ ಒಂಬತ್ತು ತೆಱಂ!

ಅನ್ವಯಂ. — ಲಿಂಗಂ ಒಂಬತ್ತು ತೆಱಂ ನೀಂ ಅಱಿ! (ಉಳಿದುದು ಯಥಾನ್ವಯಂ.)

ಟೀಕು. — ಕರ್ಣಾಟಕದೊಳ್ = ಕನ್ನಡದಲ್ಲಿ; ಪೀನಂ = ವೆಗ್ಗಳವಾಗಿ; ಸ್ತ್ರೀ = ಸ್ತ್ರೀಲಿಂಗವೆಂದು; ಪುಂ = ಪುಲ್ಲಿಂಗವೆಂದು; ನಪುಂಸಕ = ನಪುಂಸಕಲಿಂಗವೆಂದು; ಉಭಯ = ಪುಂನಪುಂಸಕಲಿಂಗವೆಂದು; ಪುಂಸ್ತ್ರೀ = ಪುಂಸ್ತ್ರೀಲಿಂಗವೆಂದು; ಸ್ತ್ರೀನಪ್ = ಸ್ತ್ರೀನಪುಂಸಕಲಿಂಗವೆಂದು; ಸಮಸ್ತ = ತ್ರಿವಿಧಲಿಂಗವೆಂದು; ವಾಚ್ಯ = ವಿಶೇಷ್ಯಾಧೀನಲಿಂಗವೆಂದು; ಅನೂನ = ಕೊರತೆಯಿಲ್ಲದ; ಅವ್ಯಯಂ = ಅವ್ಯಯಲಿಂಗವೆಂದು; ಲಿಂಗಂ = ಲಿಂಗಂಗಳ್; ಒಂಬತ್ತು ತೆಱಂ = ಒಂಬತ್ತು ಪ್ರಕಾರವೆಂದು; ನೀಂ = ನೀಂ; ಅಱಿ = ತಿಳಿ.

ವೃತ್ತಿ.— ಕನ್ನಡದೊಳ್ ಪಿರಿದುಂ ಸ್ತ್ರೀಲಿಂಗಮೆಂದುಂ, ಪುಲ್ಲಿಂಗಮೆಂದುಂ, ನಪುಂಸಕಲಿಂಗಮೆಂದುಂ, ಪುಂಸ್ತ್ರೀಲಿಂಗಮೆಂದುಂ, ಸ್ತ್ರೀನಪುಂಸಕಲಿಂಗಮೆಂದುಂ, ಪುಂನಪುಂಸಕಲಿಂಗಮೆಂದುಂ, ತ್ರಿವಿಧಲಿಂಗಮೆಂದುಂ, ವಿಶೇಷ್ಯಾಧೀನಲಿಂಗಮೆಂದುಂ, ಅವ್ಯಯಲಿಂಗಮೆಂದುಂ, ಲಿಂಗಮೊಂಬತ್ತು ತೆಱಂ.

ಪ್ರಯೋಗಂ.—ಸ್ತ್ರೀಲಿಂಗಕ್ಕೆ—ಅರಸಿ, ದೇವಿ.

ಪುಲ್ಲಿಂಗಕ್ಕೆ—ಅರಸಂ, ದೇವಂ, ನರಂ, ಸುರಂ.

ನಪುಂಸಕಲಿಂಗಕ್ಕೆ— ಕನ್ನಡಿ, ಕಳಸಂ, ಜಿಡೆ, ಕೊಡೆ.

ಪುಂನಪುಂಸಕಲಿಂಗಕ್ಕೆ— ರವಿ ಮೂಡಿದಂ, ರವಿ ಮೂಡಿದುದು. ವಿಧು ಏವಂ, ವಿಧುವಿದು. ಇವಱಂತೆ ಮಂಗಳಬುಧಬೃಹಸ್ಪತ್ಯಾದಿ ನವಗ್ರಹಂಗಳೆಲ್ಲಂ ಪುಂನಪುಂಸಕಲಿಂಗಂಗಳ್.

ಆಳಿವಂ, ಆಳಿದು. ಬಸಂತಂ ಬಂದಂ, ಬಸಂತಂ ಬಂದುದು. ಮಲಯಾನಿಲಂ ತೀಡಿದಂ, ಮಲಯಾನಿಲಂ ತೀಡಿದುದು.

ಕಾಮಂಗೆಯುಂ ಕಾಮಕ್ಕಮೇಕತ್ವಮುಳ್ಳುದಱಿಂ ಕಾಮನೆೞ್ದಂ, ಕಾಮಂ ಪೆರ್ಚಿದುದು. ಇವೆಲ್ಲಂ ಪುಂನಪುಂಸಕಂ.

ಪುಂಸ್ತ್ರೀಲಿಂಗಕ್ಕೆ— ಇವರ್ ಪುರುಷರ್, ಇವರ್ ಸ್ತ್ರೀಯರ್. ಅವರ್ ಗಂಡರ್, ಅವರ್ ಪೆಂಡಿರ್. ಉವರ್ ದೇವರ್, ಉವರ್ ದೇವಿಯರ್. ತೊೞ್ತೆಂಬುದುಮಂತೆ— ಇವಂ ದೇವರ ತೊೞ್ತು, ಇವಳ್ದೇವರ ತೊೞ್ತು.

ಸ್ತ್ರೀನಪುಂಸಕಕ್ಕೆ—ಆ ಪೆಣ್ಬಾೞ್ದೆ, ಆ ಪೆಣ್ಬಂದುದು; ಆ ಕನ್ನಿಕೆ ಸಲಕ್ಷಣೆ, ಆ ಕನ್ನಿಕೆ ಪೊಲ್ಲದು. ಅವಳ್ ಸಜ್ಜನವೆಣ್, ಅದು ಸಜ್ಜನವೆಣ್. ಸಿರಿ, ಸರಸ್ವತಿ, ದೇವತೆ ಎಂಬಿವುಮಂತೆ—

"ಸಿರಿಯೊಲ್ಲಳೆ ಹೃದ್ಯವಿದ್ಯರಂ . . . . . ." || 185 ||

"ಸಿರಿಯೊಂದಾಗದೊಡಮೇನೊ ಸುಜನೋತ್ತಂಸಾ" || 186 ||

"ಪರಮಜಿನೇಂದ್ರವಾಣಿಯೆ ಸರಸ್ವತಿ ಕೆಯ್ನೆರವಾಗೆ ಪೇೞ್ದಿಪಳ್" || 187 ||

"ಸರಸ್ವತಿ ಬೆಱೆಿದು ಪೆಣ್ರೂಪಮಂ ಧರಿಯಿಸಿ ನಿಂದುದಲ್ತುದುವೆ" || 188 ||

"ದೇವತೆಯರ್ ಮೆಚ್ಚಿ ವರಮನರಸಂಗಿತ್ತರ್" || 189 ||

"ಬಾರಿಸಿದುವು ಬಿಡದೆ ಜಡೆದು ವನದೇವತೆಗಳ್" || 190 ||

ತ್ರಿಲಿಂಗಕ್ಕೆ— ನೀನರಸಂ, ನೀನರಸಿ, ನೀಂ ಪಶು. ತಾನ್, ಆನ್, ಪಿತರ್ಕೆ, ಅದರ್ಕೆ, ಶಿಶು, ಹಸುಳೆ, ಮಗುವು, ಕೂಸು, ಸೊಂದಿ, ಪಗೆ, ಕೆಳೆ, ಅರಸು, ತರುವಲಿ ಎಂಬಿವೆಲ್ಲಮಂತೆ.

ವಾಚ್ಯಲಿಂಗಮೆಂದು ವಿಶೇಷ್ಯಾಧೀನಲಿಂಗಕ್ಕೆ— ನೇರಿದನಿವಂ, ನೇರಿದ ಳಿವಳ್, ನೇರಿತ್ತಿದು; ಅಭಿಮಾನಿ, ದಾನಿ, ಸಾಧು, ಪಟು, ಹಡಣ, ಚಂಡಿ, ರಾಗಿ, ಭೋಗಿ, ಸುಖಿ, ಹೇಡಿ, ಕಲಿ, ಗುರು, ಲಘು ಇವುಮಾ ತೆಱದೆ ಸಲ್ವುವು.

ಅವ್ಯಯಲಿಂಗಕ್ಕೆ— ಕಮ್ಮಿದಂ, ಕಮ್ಮಿದಳ್, ಕಮ್ಮಿತು. ಭೋಂಕನೆ ಬಂದಂ, ಭೋಂಕನೆ ಬಂದಳ್, ಭೋಂಕನೆ ಬಂದುದು. ತೊಟ್ಟನೆ, ಮೆಲ್ಲನೆ, ಕಮ್ಮನೆ, ಇಮ್ಮನೆ, ಸುಮ್ಮನೆ, ಸಿಯ್ಯನೆ, ಕೆಚ್ಚನೆ, ಪಚ್ಚನೆ, ತೆಳ್ಳನೆ, ಬೆಳ್ಪಳಂ, ಜೆಚ್ಚರಂ, ನಿರ್ನೆರಂ, ಸೋಡಂಬಾಡಂ (ಸೋಡಂಬಾಡಮೆಂದು ಬಱಿದೆಂಬರ್ಥಂ), ಅಂತೆ ವೋಲ್, ಮಿಗೆ, ದಲ್, ವಲಂ, ತೆಱಿಂ, ಕೆನ್ನಂ, ಮತ್ತೆ, ಬಲ್ಲೆ — ಇವಾದಿಯಾಗ ಱುವುದು.

ಸೂತ್ರಂ. ‖ ೮೯ ‖

The 6 classes of words of dependent gender (ವಾಚ್ಯಲಿಂಗಂ, ವಿಶೇಷ್ಯಾಧೀನಲಿಂಗಂ): Pronouns, Adjectives, Relative Compounds (ಬಹುವ್ರೀಹಿ) nominal bases of Verbal themes, Taddhita nouns, and Numerals.

ಬಗೆ ನೀನಾನ್ತಾನೆಂಬು- ।
ಕ್ತಿಗಳುಂ ಗುಣವಚನಸರ್ವನಾಮಬಹುವ್ರೀ- ‖
ಹಿಗಳುಂ ಕೃತ್ತದ್ಧಿತಸಂ- ।
ಖ್ಯೆಗಳುಂ ಸಲೆ ವಾಚ್ಯಲಿಂಗಮೆಂದೀ ಕ್ರಮದಿಂ. ‖ ೮೯ ‖

ಪದಚ್ಛೇದಂ.— ಬಗೆ, ನೀನ್ ಆನ್ ತಾನ್ ಎಂಬ ಉಕ್ತಿಗಳುಂ ಗುಣವಚನ ಸರ್ವ ನಾಮ ಬಹುವ್ರೀಹಿಗಳುಂ ಕೃತ್ ತದ್ಧಿತ ಸಂಖ್ಯೆಗಳುಂ ಸಲೆ ವಾಚ್ಯಲಿಂಗಂ ಎಂದು, ಈ ಕ್ರಮದಿಂ!

ಅನ್ವಯಂ.— ವಾಚ್ಯಲಿಂಗಂ ಎಂದು, ಈ ಕ್ರಮದಿಂ ಬಗೆ ಎಂಬುದನ್ವಯಂ.

ಟೀಕು.— ನೀಂ = ನೀನೆಂದು; ಆಂ = ಆನೆಂದು; ತಾಂ = ತಾನೆಂದು; ಎಂಬುಕ್ತಿಗಳುಂ = ಎಂಬ ವಾಕ್ಯಂಗಳುಂ; ಗುಣವಚನ = ಗುಣವಚನಂಗಳುಂ; ಸರ್ವನಾಮ = ಸರ್ವನಾಮಂಗಳುಂ; ಬಹುವ್ರೀಹಿಗಳುಂ = ಬಹುವ್ರೀಹಿಶಬ್ದಂಗಳುಂ; ಕೃತ್ = ಕೃತ್ತುಗಳುಂ; ತದ್ಧಿತ = ತದ್ಧಿತಂಗಳುಂ; ಸಂಖ್ಯೆಗಳುಂ = ಸಂಖ್ಯಾವಾಚಿಗಳುಂ; ಸಲೆ = ಚೆನ್ನಾಗಿ; ವಾಚ್ಯಲಿಂಗಂ = ವಿಶೇಷ್ಯಾಧೀನಲಿಂಗಮೆಂದು; ಈ ಕ್ರಮದಿಂ = ಈ ರೀತಿಯಿಂದೆ; ಬಗೆ = ಭಾವಿಸು.

ವೃತ್ತಿ.— ನೀನ್, ಆನ್, ತಾನ್ ಎಂಬಿವುಂ ಗುಣವಚನಮುಂ ಸರ್ವನಾಮಮುಂ ಬಹುವ್ರೀಹಿಯುಂ ಕೃತ್ತುಂ ತದ್ಧಿತಮುಂ ಸಂಖ್ಯೆಯುಂ ವಿಶೇಷ್ಯಾಧೀನಲಿಂಗಮೆಂದಱಿವುದು.

ಪ್ರಯೋಗಂ.— ನೀನ್ ಆನ್ ತಾನ್ ಎಂಬಿವರ್ಕೆ— ನೀಂ ಕಾಮಂ, ನೀಂ ರತಿ, ನೀಂ ಗಿಳಿ. ಆಂ ಶಿವಂ, ಆಂ ಗೌರಿ, ಆಂ ನಂದಿ. ತಾನವಂ ತಾನವಳ್, ತಾನದು.

ಗುಣವಚನಕ್ಕೆ— ಇನಿಯಂ, ಇನಿಯಳ್, ಇನಿದು.

ಸರ್ವನಾಮಕ್ಕೆ— ಪೆಱಂ, ಪೆಱಳ್, ಪೆಱತು.

ಬಹುವ್ರೀಹಿಗೆ— ಅವಂ ವಿಮಲಮತಿ, ಅವಳ್ ವಿಮಲಮತಿ, ಅದು ವಿಮಲಮತಿ. ಅವಂ ಕುಸಿಗೊರಲಂ, ಅವಳ್ ಕುಸಿಗೊರಲೆ, ಅದು ಕುಸಿಗೊರಲ್.

ಕೃತ್ತಿಂಗೆ— ಪಾಡಿದಂ, ಪಾಡಿದಳ್, ಪಾಡಿದುದು.

ತದ್ಧಿತಕ್ಕೆ— ಓದಾಳಿ ಇವಂ, ಓದಾಳಿ ಇವಳ್, ಓದಾಳಿ ಇದು.

ಸಂಖ್ಯೆಗೆ— ಸಾಯಿರ ಗಂಡರ್, ಸಾಯಿರ ಪೆಂಡಿರ್, ಸಾಯಿರ ಮನೆಗಳ್.

ಸೂತ್ರಂ. || ೯೦ ||

Particles (Indeclinables), though mostly unchangeable, adjust themselves, as it were, to cases, number and gender.

ದೊರೆವಡೆದವ್ಯಯಲಿಂಗಂ |
ಸರಿ ಸರ್ವವಿಭಕ್ತಿಗಂ ತ್ರಿಲಿಂಗಕ್ಕಂ ತಾಂ ||
ಸರಿ ವಚನತ್ರಿತಯಕ್ಕಂ |
ಸರಿಯೆನಿಸಿ ವಿಕಾರಮಿಲ್ಲದರ್ಥಮನೀಗುಂ. || ೧೦೦ ||

ಪದಚ್ಛೇದಂ.— ದೊರೆವಡೆದ ಅವ್ಯಯಲಿಂಗಂ ಸರಿ ಸರ್ವವಿಭಕ್ತಿಗಂ, ತ್ರಿಲಿಂಗಕ್ಕಂ ತಾಂ ಸರಿ, ವಚನತ್ರಿತಯಕ್ಕಂ ಸರಿ ಎನಿಸಿ, ವಿಕಾರಂ ಇಲ್ಲದೆ, ಅರ್ಥಮಂ ಈಗುಂ.

ಅನ್ವಯಂ.— ದೊರೆವಡೆದವ್ಯಯಲಿಂಗಂ ಸರ್ವವಿಭಕ್ತಿಗಂ ಸರಿ, ತ್ರಿಲಿಂಗಕ್ಕಂ ತಾಂ ಸರಿ, ವಚನತ್ರಿತಯಕ್ಕಂ ಸರಿ ಎನಿಸಿ, ವಿಕಾರಂ ಇಲ್ಲದೆ, ಅರ್ಥಮಂ ಈಗುಂ.

ಟೀಕು. — ದೊರೆವಡೆದ = ಪ್ರಸಿದ್ಧವಡೆದ; ಅವ್ಯಯಲಿಂಗಂ = ಅವ್ಯಯಲಿಂಗಂಗಳ್; ಸರ್ವವಿಭಕ್ತಿಗಂ = ಸಪ್ತ ವಿಭಕ್ತಿಗೆಯುಂ; ಸರಿ = ಸಮಾನಂ; ತ್ರಿಲಿಂಗಕ್ಕಂ = ಮೂಱು ಲಿಂಗಕ್ಕೆಯುಂ; ತಾಂ = ತಾಂ; ಸರಿ = ಸಮಾನಂ; ವಚನತ್ರಿತಯಕ್ಕಂ = ಏಕವಚನ ದ್ವಿವಚನ ಬಹುವಚನಂಗಳ್ಗೆಯುಂ; ಸರಿಯೆನಿಸಿ = ಸಮಾನವೆನಿಸಿ; ವಿಕಾರಮಿಲ್ಲದೆ = ರೂಪಾಂತರವನೆಯ್ದದೆ; ಅರ್ಥಮಂ = ಅರ್ಥವಂ; ಈಗುಂ = ಕೊಡುವುವು.

ವೃತ್ತಿ. — ಅವ್ಯಯಲಿಂಗಂ ಸಪ್ತವಿಭಕ್ತಿಗಂ ಲಿಂಗತ್ರಯಕ್ಕಂ ವಚನತ್ರಯಕ್ಕಂ ಸರಿಯಾಗಿರ್ದ ತೆಱದಿನರ್ಥಮಂ ಕುಡುಗುಂ.

ಪ್ರಯೋಗಂ. — ಪ್ರಥಮಾವಿಭಕ್ತಿಗೆ — 'ನಿರ್ನೆರಂ ಬಂದಂ' ಎಂಬಲ್ಲಿ ನಿರ್ನಿಮಿತ್ತಂ ಬಂದನೆಂಬ ಪ್ರಥಮೆಯನಱಿವುದು.

ಸುರತರುನಂದನಂಗಳಿರ ರತ್ನಪಿನದ್ಧವಿಮಾನಕುಟ್ಟಿಮಾಂ- |
ತರಸುರಸಾಲಯಂಗಳಿರ ಚಾರುವಿಲೋಲಕಟಾಕ್ಷಪಾತಸುಂ- ||
ದರಪರಿವಾರದೇವಿಯರಿರಾಕಡುಕೈದು ಕೃತಾಂತನಿಂತು ನಿ- |
ರ್ನೆರಮೆೞೆದುಯ್ಯೆ ಬಾರಿಸದೆ ಕೆಮ್ಮನುಪೇಕ್ಷಿಸಿ ನೋಡುತಿರ್ಪಿರೇ || 191 ||

ದ್ವಿತೀಯಾವಿಭಕ್ತಿಗೆ — 'ಚೆಚ್ಚರಂ ನುಡಿದಂ' ಎಂಬಲ್ಲಿ ಚೆಚ್ಚರಮಂ ನುಡಿದನೆಂಬ ದ್ವಿತೀಯೆಯನಱಿವುದು.

ತೃತೀಯಾವಿಭಕ್ತಿಗೆ — 'ಅವರ್ಕೆ ಅಂತಱಿಂ' ಎಂಬಿವಱಲ್ಲಿ ಪರಿವಿಡಿಯಿಂ ಅದಱಿಂದೆ ಎಂಬ ತೃತೀಯೆಯನಱಿವುದು.

" . . ಅಂತಱಿಂದವರನಾ ಪೊೞಲೊಳ್ ಕಾಣಲ್ಬಂದತ್ತು . . " || 192 ||

ಚತುರ್ಥಿಗೆ — 'ಪಚ್ಚನೆ ಕೆಚ್ಚನೆ ಬಗೆಯಂ' ಎಂಬಲ್ಲಿ ಚತುರ್ಥಿಯನಱಿವುದು.

"ಅವರ್ಕೆಯ್ದೆ ಕವಲ್ಕವಲ್ತು ಪಲವುಂ ಕೊಂಬಾದವೊಳ್ಗೊಂಬುಮಂ" || 193 ||

ಷಷ್ಠಿಗೆ — ಮತ್ತಿನ ಎಂಬಲ್ಲಿ ಷಷ್ಠಿ.

"ಮತ್ತಿನ ಮತ್ತಿನ ಬೇರ್ಗಳ |
ಬಿತ್ತುಗಳಾವೆಡೆಯೊಳೇನೊ ಸುಜನೋತ್ತಂಸಾ" || 194 ||

ತ್ರಿಲಿಂಗಕ್ಕೆ—ಮಿಗೆ ಬೞಲ್ದಂ, ಮಿಗೆ ಬೞಲ್ದಳ್, ಮಿಗೆ ಬೞಲ್ದುದು; ಮತ್ತೆ ನೋಡಿದಂ, ಮತ್ತೆ ನೋಡಿದಳ್, ಮತ್ತೆ ನೋಡಿದುದು.

ವಚನತ್ರಯಕ್ಕೆ—ಭೋಂಕನೋರ್ವಂ ಬಂದಂ, ಮೆಲ್ಲನಿರ್ವರ್ ನುಡಿದರ್, ನೆಟ್ಟನೆಲ್ಲರುಂ ಪೋದರ್.

ಸೂತ್ರಂ. || ೯೧ ||

Only 3 genders are used in Kannada.

ಪುರುಷರೆ ಪುಲ್ಲಿಂಗಂ ಸ್ತ್ರೀ- |
ಯರೆ ತಾಂ ಸ್ತ್ರೀಲಿಂಗಮುೞಿದುವೆಲ್ಲಂ ನಪ್ಪಾ- ||
ಗಿರೆ ಸಲ್ಗುಂ ಕನ್ನಡದೊಳ್ |
ಪರಿವರ್ತಿಸವುೞಿದ ಲಿಂಗಮೊಳವಾಗಿರ್ದುಂ. ||೧೦೧||

ಪದಚ್ಛೇದಂ.—ಪುರುಷರೆ ಪುಲ್ಲಿಂಗಂ, ಸ್ತ್ರೀಯರೆ ತಾಂ ಸ್ತ್ರೀಲಿಂಗಂ, ಉೞಿದುವು ಎಲ್ಲಂ ನಪ್ಪು ಆಗಿ ಇರೆ, ಸಲ್ಗುಂ ಕನ್ನಡದೊಳ್; ಪರಿವರ್ತಿಸವು ಉೞಿದ ಲಿಂಗಂ, ಒಳವು ಆಗಿ ಇರ್ದುಂ.

ಅನ್ವಯಂ.—ಉೞಿದ ಲಿಂಗಂ ಒಳವಾಗಿ ಇರ್ದುಂ, ಪರಿವರ್ತಿಸವು. (ಉಳಿದುದು ಯಥಾನ್ವಯಂ.)

ಟೀಕು.—ಪುರುಷರೆ=ಪುರುಷರಂ ಪೇಳ್ವ ಶಬ್ದಂಗಳ್; ಪುಲ್ಲಿಂಗಂ=ಪುಲ್ಲಿಂಗವೆನಿಪುವು; ಸ್ತ್ರೀಯರೆ=ಸ್ತ್ರೀಯರಂ ಪೇಳ್ವ ಶಬ್ದಂಗಳ್; ತಾಂ=ತಾಂ; ಸ್ತ್ರೀಲಿಂಗಂ=ಸ್ತ್ರೀಲಿಂಗವೆನಿಪುವು; ಉೞಿದುವು=ಪುರುಷರಂ ಸ್ತ್ರೀಯರಂ ಪೇಳದೆ ಉಳಿದ ಶಬ್ದಂಗಳ್; ಎಲ್ಲಂ=ಎಲ್ಲವು; ನಪ್ಪಾಗಿರೆ=ನಪುಂಸಕಲಿಂಗವಾಗಿರೆ; ಸಲ್ಗುಂ=ಸಲ್ಲುವು; ಕನ್ನಡದೊಳ್=ಕರ್ಣಾಟಕ ಶಬ್ದದಲ್ಲಿ; ಉಳಿದ ಲಿಂಗಂ=ಮಿಕ್ಕ ಲಿಂಗಂಗಳ್; ಒಳವಾಗಿರ್ದುಂ=ಉಂಟಾಗಿರ್ದುಂ; ಪರಿವರ್ತಿಸವು=ಪ್ರವರ್ತಿಸವು.

ವೃತ್ತಿ.—ಪುರುಷರಂ ಪೇೞ್ವ ಶಬ್ದಂಗಳ್ ಪುಲ್ಲಿಂಗಂಗಳ್; ಸ್ತ್ರೀಯರಂ ಪೇೞ್ವ ಶಬ್ದಂಗಳ್ ಸ್ತ್ರೀಲಿಂಗಂಗಳ್; ಉೞಿದುವೆಲ್ಲಂ ನಪುಂಸಕಲಿಂಗಂಗಳ್.

ಪ್ರಯೋಗಂ.—ಪುಲ್ಲಿಂಗಕ್ಕೆ—ಶಿವ, ಶಂಕರ, ಭೀಮ, ರಾಮ, ಅರಸ ಇವು ಮೊದಲಾದುವು.

ಸ್ತ್ರೀಲಿಂಗಕ್ಕೆ—ಗೌರಿ, ಪಾರ್ವತಿ, ಲಕ್ಷ್ಮಿ, ಸರಸ್ವತಿ, ಶಚಿ, ರೋಹಿಣಿ, ಕಾಮಿನಿ, ಭಾಮಿನಿ, ರಮಣಿ ಇವು ಮೊದಲಾದುವು.

ನಪುಂಸಕಲಿಂಗಕ್ಕೆ—ಮರ, ಗಿಡು, ಬಳ್ಳಿ, ಪುಲ್, ಪೊದಱ್, ಪುಲಿ, ಕರಡಿ, ಗಟ್ಟ, ಬೆಟ್ಟ, ಜೆಡೆ, ಕೊಡೆ, ಕನ್ನಡಿ, ಕಳಸ.—ಚೇತನಾಚೇತನವಸ್ತುಗಳೆಲ್ಲಂ ನಪುಂಸಕಮೆ.

ಇಂತು ಲಿಂಗತ್ರಯಂ ಕನ್ನಡದೊಳ್ ಪಿರಿದುಂ ಪ್ರಸಿದ್ಧಂ, ಮಿಕ್ಕ ಲಿಂಗಂಗಳೆಲ್ಲ ಕ್ವಚಿತ್ಪ್ರಯೋಗಂಗಳ್.

ಸೂತ್ರಂ. || ೯೨ ||

ಜನ and ಮಹಾಜನ are Neuters; ದುರ್ಜನ, ಸಜ್ಜನ and ಸುಜನ Masculines.

ಜನಶಬ್ದಮದು ನಪುಂಸಕ- |
ಮೆನಿಕುಂ। ದುಸ್ಸತ್ಸುಕಾರಮವು ಪೆಱಗಿರೆ ನೆ- ||
ಟ್ಟನೆ ಪುಲ್ಲಿಂಗಂ। ಮತ್ತಾ |
ಜನಂ ಮಹಚ್ಛಬ್ದಮಿರೆ ನಪುಂಸಕಮಕ್ಕುಂ.|| ೧೦೨ ||

ಪದಚ್ಛೇದಂ.—ಜನಶಬ್ದಂ ಅದು ನಪುಂಸಕಂ ಎನಿಕುಂ; ದುಸ್ಸತ್ಸುಕಾರಂ ಅವು ಪೆಱಗೆ ಇರೆ, ನೆಟ್ಟನೆ ಪುಲ್ಲಿಂಗಂ; ಮತ್ತೆ ಆ ಜನಂ, ಮಹಚ್ಛಬ್ದಂ ಇರೆ, ನಪುಂಸಕಂ ಅಕ್ಕುಂ.

ಟೀಕು, ಯಥಾನ್ವಯಂ.—ಜನಶಬ್ದಂ = ಜನಮೆಂಬ ಶಬ್ದಂ; ಅದು = ಅದು; ನಪುಂಸಕಂ = ನಪುಂಸಕಲಿಂಗಂ; ಎನಿಕುಂ = ಎನಿಸುವುದು; ದುಸ್ ಸತ್ ಸುಕಾರಂ = ದುಃ ಎಂಬುದುಂ, ಸತ್ ಎಂಬುದುಂ, ಸು ಎಂಬುದುಂ; ಅವು = ಅವು; ಪೆಱಗೆ = ಹಿಂದೆ; ಇರೆ = ಇರೆ; ನೆಟ್ಟನೆ = ವ್ಯಕ್ತವಾಗಿ; ಪುಲ್ಲಿಂಗಂ = ಪುಲ್ಲಿಂಗಂ ಎನಿಸುವುದು; ಮತ್ತೆ = ಅದಲ್ಲದೆ; ಆ ಜನಂ = ಆ ಜನಶಬ್ದಂ; ಮಹಚ್ಛಬ್ದಂ = ಮಹತ್ ಎಂಬ ಶಬ್ದಂ; ಇರೆ = ಹಿಂದಿರೆ; ನಪುಂಸಕಂ = ನಪುಂಸಕಲಿಂಗಂ; ಅಕ್ಕುಂ = ಆಪ್ಪುದು.

ವೃತ್ತಿ.—ಜನಶಬ್ದಂ ನಿಜದಿಂ ನಪುಂಸಕಂ; ದುಸ್ ಎಂಬುದುಂ ಸತ್ ಎಂಬುದುಂ ಸು ಎಂಬುದುಂ ಪೆಱಗಿರೆ, ಪುಲ್ಲಿಂಗಮಕ್ಕುಂ; ಮಹಚ್ಛಬ್ದಂ ಪೆಱಗಿರ್ದೊಡಂ, ಮಹಾಜನಮೆಂದು, ನಪುಂಸಕಮಕ್ಕುಂ.

ಪ್ರಯೋಗಂ.—ಪುಲ್ಲಿಂಗಕ್ಕೆ—ದುರ್ಜನಂ, ಸಜ್ಜನಂ, ಸುಜನಂ.

ನಪುಂಸಕಕ್ಕೆ—ಜನಂ, ಮಹಾಜನಂ.

ಸೂತ್ರಂ[1]. || ೯೩ ||

The 7 Cases. Declension of the Singular of a Neuter ending in ಅ.

ಸಂದಿಸಿ ಮಮಿಂಕೆಯದದೊಳ್ |
ಯೆಂದಿರ್ಪುವು ಸಪ್ತವಿಧವಿಭಕ್ತಿಗಳವು ಮಾ- ||
ರ್ಗಂದಪ್ಪದರ್ಥವಶದಿಂ |
ಪಿಂದೆಣಿಸಿದ ವಿವಿಧವಿಧದ ಲಿಂಗಕ್ಕೆಲ್ಲಂ. || ೧೦೩ ||

ಪದಚ್ಛೇದಂ. — ಸಂದಿಸಿ "ಮ್, ಅಂ, ಇಂ, ಕೆ, ಅದ್, ಅದ್, ಒಳ್" ಎಂದು, ಇರ್ಪುವು ಸಪ್ತವಿಧವಿಭಕ್ತಿಗಳ್; ಅವು, ಮಾರ್ಗಂದಪ್ಪದೆ, ಅರ್ಥವಶದಿಂ ಪಿಂದೆ ಎಣಿಸಿದ ವಿವಿಧವಿಧದ ಲಿಂಗಕ್ಕೆ ಎಲ್ಲಂ.

ಅನ್ವಯಂ. — ಪಿಂದೆ ಎಣಿಸಿದ ವಿವಿಧವಿಧದ ಲಿಂಗಕ್ಕೆ ಸಪ್ತವಿಧವಿಭಕ್ತಿಗಳ್; ಅವು ಎಲ್ಲಂ, ಮಾರ್ಗಂದಪ್ಪದೆ, ಅರ್ಥವಶದಿಂ ಸಂದಿಸಿ, ಮಮಿಂ ಕೆ ಅದದೊಳ್ ಎಂದು, ಇರ್ಪುವು.

ಟೀಕು. — ಪಿಂದೆ = ಹಿಂದೆ; ಎಣಿಸಿದ ವಿವಿಧವಿಧದ = ಹೇಳ್ದ ನಾನಾ ಪ್ರಕಾರದ; ಲಿಂಗಕ್ಕೆ = ಲಿಂಗಂಗಳ್ಗೆ; ಸಪ್ತವಿಧ = ಏಳು ತೆರನಾದ; ವಿಭಕ್ತಿಗಳ್ = ಪ್ರತ್ಯಯಂಗಳ್; ಅವು = ಅವು; ಎಲ್ಲಂ = ಎಲ್ಲವು; ಮಾರ್ಗಂದಪ್ಪದೆ = ಕವಿಮಾರ್ಗಂ ತಪ್ಪದೆ; ಅರ್ಥವಶದಿಂ = ಅರ್ಥವಶದಿಂದೆ; ಸಂದಿಸಿ = ಪೊರ್ದುಗೆಯಾಗಿ; ಮಮಿಂಕೆಯದದೊಳ್ = ಮ್, ಅಮ್, ಇಮ್, ಕೆ, ಅತ್, ಅತ್, ಒಳ್ ಎಂಬಿವೆ; ಎಂದು = ಹೀಗೆಂದು; ಇರ್ಪುವು = ಇರ್ಪುವು.

ವೃತ್ತಿ. — ಪಿಂತೆ ಪೇಳ್ದ ನಾನಾ ತೆಱದ ಲಿಂಗಂಗಳ್ಗೆ ಪರಮಾಗಿ ನಾಮ ವಿಭಕ್ತಿಗಳ್, ಮ್, ಅಮ್, ಇಮ್, ಕೆ, ಅತ್, ಅತ್, ಒಳ್ ಎಂದು, ಪ್ರಥಮೆಗಂ

---

1) ತತೋ ವಿಭಕ್ತಯಃ || ಶಾ. ಭೂ. 38. ||
(ಲಿಂಗದತ್ತಣಿಂದ ಪರವಾಗಿ ವಿಭಕ್ತಿಗಳಾಗುವುವು.)
ತಾಸ್ತು ಮಮಿಂಕೆ ಅದದೊಳ್ || ಶಾ. ಭೂ. 39. ||
(ಆ ವಿಭಕ್ತಿಗಳು ಮ್, ಅಮ್, ಇಮ್, ಕೆ, ಅತ್, ಅತ್, ಒಳ್ ಎಂದು ಕ್ರಮವಾಗಿವೆ.)

ಧಾತುವಿವರ್ಜಿತಮರ್ಥೋರ್- |
ಪೇತಂ ಲಿಂಗಂ ಮಮಿಂಕೆಯದದೊಳ್ ಎಂದಿಂ- ||
ತೀ ತೆಱದಿಂದೇೞಕ್ಕುಂ |
ಖ್ಯಾತ ವಿಭಕ್ತಿಗಳದರ್ಕೆ ಕಾರಕವಶದಿಂ || ಶ. ಸ್ಮೃ. 15. ||

ದ್ವಿತೀಯೆಗಂ ತೃತೀಯೆಗಂ ಚತುರ್ಥಿಗಂ ಪಂಚಮಿಗಂ ಷಷ್ಠಿಗಂ ಸಪ್ತಮಿಗಂ ಏೞಾಗಿ, ಕಾರಕವಶದಿಂ[1] ಪತ್ತುಗುಂ. ಆ ಕಾರಕಮೆಂಬುದು ಕ್ರಿಯಾ ನಿಮಿತ್ತಂ; ಅದು ಕರ್ತೃವೆಂದುಂ, ಕರ್ಮಮೆಂದುಂ, ಕರಣಮೆಂದುಂ, ಸಂಪ್ರದಾನ ಮೆಂದುಂ, ಅಪಾದಾನಮೆಂದುಂ, ಅಧಿಕರಣಮೆಂದುಂ ಷಡ್ವಿಧಮಾಗಿರ್ಪುದು; ಷಷ್ಠಿಯೆಂದು, ಸಂಬಂಧಾರ್ಥಂ.

ಪ್ರಯೋಗಂ.—ಮರಂ, ಮರನಂ, ಮರದಿಂ, ಮರಕ್ಕೆ, ಮರದತ್ತಣಿಂ, ಮರದ, ಮರದೊಳ್, ಮರನೆ ಇಂತರ್ಥವಶದಿಂ ವಿಭಕ್ತಿ ಪರಿಣಾಮಿಪುವು. ವಿಭಕ್ತಿವಿಕಾರಮನೆಯ್ದುವುದಱಿಂ ಪದಂ ನಾನಾರೂಪಮಪ್ಪುದು.

ಮರನಿರ್ದುದು ಮರನಂ ಕಡಿ |
ಮರದಿಂ ಮಾಡಾನೆಯಂ ಮರಕ್ಕೆಱೆ ನೀರಂ ||
ಮರದತ್ತಣಿನೆಲೆಯುದಿರ್ದುದು |
ಮರದದು ಪಣ್ ಮರದೊಳಿರು ತಳಿರ್ತಿರು ಮರನೇ!" || 195 ||

ಸೂತ್ರಂ. || ೯೪ ||

There are 2 Numbers in Kannaḍa Singular and Plural. The thought of a Dual is allowed.

ಏಕದ್ವಿತ್ವಬಹುತ್ವಮ- |
ನೇಕದ್ವಿಬಹುತ್ವವಸ್ತುಗಳೊಳಾಚರಿಪರ್ ||
ಸ್ವೀಕಾರಂ ಕನ್ನಡದೊಳ- |
ಗೇಕಬಹುತ್ವಂ ದ್ವಿವಚನಮುಚಿತದೆ ಬರ್ಕುಂ. ||೧೦೪||

---

[1] ಕಾರಕ is the relation which, in a sentence, a noun bears to the verb, Ss. 137 seq. ಕರ್ತೃ agent, ಕರ್ಮ object, ಕರಣ instrument, ಸಂಪ್ರದಾನ bestowing, ಅಪಾದಾನ taking away, ಅಧಿಕರಣ relation to site, ಸಂಬಂಧ connection.

ಪರಿವಿಡಿಯೆ ಕರ್ತೃಕರ್ಮಂ |
ಕರಣಾಖ್ಯಂ ಸಂಪ್ರದಾನಮಪನಯನಾಖ್ಯಾ- ||
ನಿರತಮಪಾದಾನಮುಮಧಿ- |
ಕರಣಮುಮೆನೆ ಕಾರಕಾಂಗಳಾಱುಂ ನೆಗೞ್ಗುಂ! || ಶ. ಸ್ಮ. 16. ||

ಪದಚ್ಛೇದಂ.— ಏಕದ್ವಿತ್ವಬಹುತ್ವಮಂ ಏಕದ್ವಿಬಹುತ್ವವಸ್ತುಗಳೊಳ್ ಆಚರಿಪರ್; ಸ್ವೀಕಾರಂ ಕನ್ನಡದೊಳಗೆ ಏಕಬಹುತ್ವಂ, ದ್ವಿವಚನಂ ಉಚಿತದೆ ಬರ್ಕುಂ.

ಅನ್ವಯಂ.— ಏಕದ್ವಿಬಹುತ್ವವಸ್ತುಗಳೊಳ್ ಏಕದ್ವಿತ್ವಬಹುತ್ವಮಂ ಆಚರಿಪರ್; ಕನ್ನಡದೊಳಗೆ ಏಕಬಹುತ್ವಂ ಸ್ವೀಕಾರಂ, ದ್ವಿವಚನಂ ಉಚಿತದೆ ಬರ್ಕುಂ.

ಟೀಕು.— ಏಕದ್ವಿಬಹುತ್ವವಸ್ತುಗಳೊಳ್ = ಏಕವಸ್ತು ದ್ವಿವಸ್ತು ಬಹುವಸ್ತುಗಳಲ್ಲಿ; ಏಕದ್ವಿತ್ವಬಹುತ್ವಮಂ = ಏಕವಚನ ದ್ವಿವಚನ ಬಹುವಚನಮಂ; ಆಚರಿಪರ್ = ಪೇಳ್ವರ್; ಕನ್ನಡದಲ್ಲಿ = ಕರ್ಣಾಟಭಾಷೆಯಲ್ಲಿ; ಏಕಬಹುತ್ವಂ = ಏಕವಚನಬಹುವಚನಂಗಳ್; ಸ್ವೀಕಾರಂ = ಅಂಗೀಕಾರಂ; ದ್ವಿವಚನಂ = ದ್ವಿವಚನಂ; ಉಚಿತದೆ = ಉಚಿತದಿಂದೆ; ಬರ್ಕುಂ = ಬರ್ಪುದು.

ವೃತ್ತಿ.— ಒಂದೆರಡು ಮೂಱೆಂದು, ಪದಾರ್ಥಮನೆಣಿಸುವೆಡೆಯೊಳ್ ಏಕವಚನ ದ್ವಿವಚನ ಬಹುವಚನಂಗಳಂ ಸ್ವೀಕರಿಸುವರ್; ಏಕವಚನ ಬಹುವಚನಂಗಳ್ ಕನ್ನಡದೊಳತಿವ್ಯಕ್ತಂಗಳ್; ದ್ವಿವಚನಮನೌಚಿತ್ಯದಿನಱಿವುದು.

ಪ್ರಯೋಗಂ.— ಏಕದ್ವಿಬಹುತ್ವಂಗಳ್ಗೆ— ಮೇರುವಿದು; ಕಣ್ಗಳಿವು; ಕುರುಳ್ಗಳಿವು; ಕವಿಯಿವಂ; ಕವಿಗಳಿವರ್.

ಔಚಿತ್ಯದ ದ್ವಿವಚನಕ್ಕೆ— ಭೀಮಾರ್ಜುನರ್, ರಾಮಲಕ್ಷ್ಮಣರ್, ನಕುಲಸಹದೇವರ್ ಎಂಬಂತಱಿವುದು.

ಸೂತ್ರಂ[1]. ॥ ೯೫ ॥

Formation of the Nominative Dual and Plural with

ಸಮನಿಸುಗುಮಾ ವಿಭಕ್ತಿಗ- ।
ಳ ಮೊದಲೊಳಾದಂ ಗಳಾಗಮಂ ದ್ವಿತ್ವಬಹು- ॥

---

1) ದ್ವಿತ್ವಬಹುತ್ವಯೋರ್ಗಳಾದೌ ॥ ಭಾ. ಭೂ. 40. ॥

(ದ್ವಿವಚನಬಹುವಚನಗಳಲ್ಲಿ ವಿಭಕ್ತಿಯ ಮೊದಲಲ್ಲಿ ಗಳಾಗಮು ಬರುವುದು.

ಸರ್ವನಾಮ ಗುಣವಚನಾನಾಮವು ತದಂತೇ ॥ ಭಾ. ಭೂ. 41. ॥

(ಸರ್ವನಾಮ ಗುಣವಚನಗಳಿಗೆ ದ್ವಿತ್ವಬಹುತ್ವಗಳನ್ನು ಹತ್ತಿಸುವಾಗ ಅವುಗಳ ಅಂತ್ಯದಲ್ಲಿ "ಅವು" ಪ್ರತ್ಯಯವು ಬರುವುದು.)

ಅವಱೊಳ್ ದ್ವಿತ್ವಬಹುತ್ವಂ ।
ಬವರಿಸೆ ತಳ್ತಿರ್ಕುಮಲ್ಲಿ ಗಳ್ ಶಬ್ದಂ ಮ- ॥
ತ್ತವು ಸರ್ವನಾಮ ಗುಣವಚ- ।
ನವೃತ್ತಿಯಂ ತಾಳ್ದಿ ನೆಗಱ್ಗುಮವು ಬಹುಳತೆಯಿಂ ॥ ಶ. ಸ್ಮೃ. 17. ॥

ಗಳ್ in (here Neuter) bases. excepting (Neuter) Pronouns and Adjectives in which ಅವು is substituted for ಗಳ್.

ತ್ತಮದಾಗೆ ಗಳಾಗಮಕೆವು |
ಸಮನಿಸುಗುಂ ಸರ್ವನಾಮಗುಣವಚನದೊಳಂ- || ೧೦೫ ||

ಪದಚ್ಛೇದಂ.— ಸಮನಿಸುಗುಂ ಆ ವಿಭಕ್ತಿಗಳ ಮೊದಲೊಳ್ ಅದಂ ಗಳಾಗಮಂ, ದ್ವಿತ್ವಬಹುತ್ವಂ ಅದು ಆಗೆ; ಗಳಾಗಮಕೆ ಅವು ಸಮನಿಸುಗುಂ ಸರ್ವನಾಮಗುಣವಚನದೊಳಂ.

ಅನ್ವಯಂ.— ದ್ವಿತ್ವಬಹುತ್ವಂ ಅದು ಆಗೆ, ಆ ವಿಭಕ್ತಿಗಳ ಮೊದಲೊಳ್ ಅದಂ ಗಳಾಗಮಂ ಸಮನಿಸುಗುಂ; ಸರ್ವನಾಮಗುಣವಚನದೊಳಂ ಗಳಾಗಮಕೆ ಅವು ಸಮನಿಸುಗುಂ.

ಟೀಕು.— ದ್ವಿತ್ವಬಹುತ್ವಂ = ದ್ವಿವಚನ ಬಹುವಚನಂ; ಅದು = ಅದು; ಆಗೆ = ಆಗೆ; ಆ ವಿಭಕ್ತಿಗಳ = ಆ ಸಪ್ತವಿಭಕ್ತಿಗಳ; ಮೊದಲೊಳ್ = ಆದಿಯಲ್ಲಿ; ಅದಂ = ಅದಮೇಂಬ ವಿಶೇಷದಿಂದೆ; ಗಳಾಗಮಂ = ಗಳ್ ಎಂಬಾಗಮಂ; ಸಮನಿಸುಗುಂ = ಪ್ರಾಪ್ತಿಸುವುದು; ಸರ್ವನಾಮಗುಣವಚನದೊಳಂ = ಸರ್ವನಾಮ ಗುಣವಚನಂಗಳಲ್ಲಿ; ಗಳಾಗಮಕೆ = ಗಳ್ ಎಂಬಾಗಮಕ್ಕೆ; ಅವು = ಅವು (ಇವು, ಉವು) ಎಂಬಾಗಮಂ; ಸಮನಿಸುಗುಂ = ಪ್ರಾಪ್ತಿಸುವುದು.

ವೃತ್ತಿ.— ದ್ವಿವಚನಬಹುವಚನವಿವಕ್ಷೆಯಾದೊಡೆ ವಿಭಕ್ತಿಗಳ ಮೊದಲೊಳ್ ಗಳಾಗಮಮಕ್ಕುಂ; ಸರ್ವನಾಮ ಗುಣವಚನಂಗಳೊಳ್ ಗಳಾಗಮಕ್ಕಾದೇಶಮಾಗವುಮಕ್ಕುಂ.

ಪ್ರಯೋಗಂ.— ದ್ವಿವಚನಕ್ಕೆ— ತೊಡೆಗಳ್, ಕಣ್ಗಳ್, ತೋಳ್ಗಳ್.

"ತೊಡೆಗಳ್ ರಂಭಾಸ್ತಂಭ- |
ಕ್ಕಡೆಗಳ್ ಕಣ್ಗಳ್ ಮನೋಜವೀರನ ಗೆಣ್ಗಳ್ ||
ನಿಡಿದೋಳ್ಗಳ್ ದಿಕ್ಕರಿಕರ- |
ದೊಡನಾಡಿಗಳೆನಿಸಿ ಮೆಱೆವುದಾತನ ರೂಪಂ." || 196 ||

ಬಹುವಚನಕ್ಕೆ—

"ಕೊಳಗಳ್ ದಳಿತಾಬ್ಜಂಗಳ್ |
ದಳಿತಾಬ್ಜಂಗಳ್ ಸಮೃದ್ಧಮಧುಗಳ್ ಮಧುಗಳ್ ||
ಚಳದಳಿಕುಳಾಕುಳಂಗಳ್ |
. . . ." || 197 ||

ಸರ್ವನಾಮದ ಅವುವಿಂಗೆ— ಅವು, ಇವು, ಉವು.

"ಅವು ಪಿರಿಯವು ಭಾವಿಪೊಡಿಂ- |
ತಿವು ಕಿಱಿಯುವೆನಿಪ್ಪುದಿದುವೆ ಭೇದಂ ನಿಮಗಾ- ||
ವುವು ಮನಕೇಱುವುವೆಟ್ಟಿಱಿ- |
ನವನಾಯ್ದುಕೊಳ್ಗೊಳ್ಳಿಮೆಂದು ನವರತ್ನಮುಮಂ." || 198 ||

ಗುಣವಚನಂಗಳ್ಗೆ — ಇನಿಯವು, ಮೆಲ್ಲಿದುವು, ಬೆಟ್ಟಿದುವು.

"ಇನಿಯವು ವಿಷಯಸುಖಂ ನಂ- |
ಜಿನ ಸವಿವೊಲ್. . . . . . ." || 199 ||

"ಮೆಲ್ಲಿದುವಪ್ಪ ಕಾಲತಳಮುಂ ಕಡುವೆಟ್ಟಿದುವಪ್ಪ ಹಸ್ತಮುಂ"
|| 200 ||

ಸೂತ್ರಂ.[1] || ೯೬ ||

In joining the ಅವು (S. 95) to the bases of the *Pronouns* mentioned in S. 78, the last syllable of them and the first of ಅವು suffer elision (ಲೋಪಂ). (Tne instances presuppose S. 110). The *Adjectives* with final ದು (S. 77) drop this syllable.

ಸಂಗಡಿಸಿ ಸರ್ವನಾಮದ |
ಲಿಂಗಾಂತ್ಯಾಕ್ಷರಕಮವುವಿನಾದ್ಯಕ್ಷರಕಂ ||
ಪಿಂಗದೆ ಲೋಪಂ ಗುಣವಚ- |
ನಂಗಳೊಳಂತ್ಯಂ ದುಕಾರಮಾದೊಡೆ ಲೋಪಂ.
|| ೧೦೬ ||

ಗುಣೋಕ್ತೇರವಾವುಪಾಂತ್ಯಾವಧೇಃ || ಭಾ. ಭೂ. 47. ||
(ಗುಣವಚನಕ್ಕೆ ದ್ವಿತ್ವಬಹುತ್ವಗಳ "ಅವು" ಎಂಬಾಗಮವು ಪರವಾಗಲು ಆ ಗುಣವಚನದ ಕಡೆಯಕ್ಷರಕ್ಕೆ ಲೋಪವುಂಟು.)

ಸರ್ವನಾಮ್ನಸ್ತದಾದೇರಪಿ || ಭಾ. ಭೂ. 48. ||
(ಸರ್ವನಾಮಕ್ಕೆ "ಅವು" ಪರವಾಗಲು "ಅವು" ಎಂಬುದರ ಆದಿಗೆ ಲೋಪವುಂಟು.

ಅವು ಪರಮಾಗಿರೆ ಲಿಂಗಾಂ- |
ತವರ್ಣಲೋಪಂ ಗುಣೋಕ್ತಿಗಕ್ಕುಂ ಪ್ರಾಯಂ ||
ಸ್ವವಿಧಕ್ತ್ಯಾದ್ಯಕ್ಷರಮಾ- |
ಗಿ ವರ್ತಿಕುಂ ಸರ್ವನಾಮದೊಳ್ ಮತ್ತದವುಂ || ಶ. ಸ್ಮ. 21. ||

ಪದಚ್ಛೇದಂ.— ಸಂಗಡಿಸಿ ಸರ್ವನಾಮದ ಲಿಂಗಾಂತ್ಯಾಕ್ಷರಕಂ ಅವುವಿನ ಆದ್ಯಕ್ಷರಕಂ ಪಿಂಗದೆ ಲೋಪಂ; ಗುಣವಚನಂಗಳೊಳ್ ಅಂತ್ಯಂ ದುಕಾರಂ ಆದೊಡೆ ಲೋಪಂ.

ಅನ್ವಯಂ.— ಸರ್ವನಾಮದ ಲಿಂಗಾಂತ್ಯಾಕ್ಷರಕಂ ಅವುವಿನ ಆದ್ಯಕ್ಷರಕಂ ಸಂಗಡಿಸಿ ಪಿಂಗದೆ ಲೋಪಂ; ಗುಣವಚನಂಗಳೊಳ್ ಅಂತ್ಯಂ ದುಕಾರಂ ಆದೊಡೆ ಲೋಪಂ.

ಟೀಕು.— ಸರ್ವನಾಮದ = ಸರ್ವನಾಮಶಬ್ದದ; ಲಿಂಗ = ಲಿಂಗದ; ಅಂತ್ಯ = ಕಡೆಯಣ; ಅಕ್ಷರಕಂ = ಅಕ್ಕರಕ್ಕೆಯುಂ; ಅವುವಿನ = ಅವು ಎಂಬಾಗಮದ; ಆದಿ = ಮೊದಲ; ಅಕ್ಷರಕಂ = ಅಕ್ಕರಕ್ಕೆಯುಂ; ಸಂಗಡಿಸಿ = ಒಂದಾಗಿ; ಪಿಂಗದೆ = ತೊಲಗದೆ; ಲೋಪಂ = ಅದರ್ಶನಮಪ್ಪುದು; ಗುಣವಚನಂಗಳೊಳ್ = ಗುಣವಚನಂಗಳಲ್ಲಿ; ಅಂತ್ಯಂ = ಕಡೆಯಕ್ಕರಂ; ದುಕಾರ = ದುತ್ವಂ; ಆದೊಡೆ = ಆದೊಡೆ; ಲೋಪಂ ಅದರ್ಶನಮಪ್ಪುದು.

ವೃತ್ತಿ.— ಸರ್ವನಾಮಶಬ್ದದ ಲಿಂಗದ ಕಡೆಯಕ್ಕರಕ್ಕಂ, ಪರದ ಅವುವಿನ ಮೊದಲಕ್ಕರಕ್ಕಂ, ಸಂಗಡದಿಂ ಲೋಪಮಕ್ಕುಂ; ದುಕಾರಾಂತಮಾದ ಗುಣವಚನದ ಕಡೆಗೆ ಲೋಪಂ.

ಪ್ರಯೋಗಂ.—ಸರ್ವನಾಮಕ್ಕೆ—ಪೆಱವಱು, ಪೆಱವಱೊಳ್, ಎಲ್ಲವಱು.

"ಪೆಱವಱು ಧರ್ಮಂಗಳನೇ |
ತೆಱದಿಂದಂ ತಂದು ಪೆಱವಱೊಳ್ ಪತ್ತಿಸಿ ಕ- ||
ಣ್ಡೆಱೆದು ಚತುರೋಕ್ತಿಕೃತಿಯೊಳ್ |
ನೆಱೆದಿರೆ ಪೇೞ್ದಿದು ಸಮಾಧಿಯೆನೆ ಪೆಸರ್ವಡೆಗುಂ" || 201 ||

ಗುಣವಚನಕ್ಕೆ—ಕರಿಯವು, ಪಿರಿಯವು, ಅಸಿಯವು, ಬಿಳಿಯವು.

"ಬಿರಯಿಗಳ ಸುಯ್ಗಳೊಡನೆಯೆ |
ಪಿರಿಯವು ದಿವಸಂಗಳಾದುವವರವರೆಲೆ ವಿ- ||
ಸ್ಫುರಿತಂಗಳೊಡನೆ ಕುಂದಿದು- |
ವಿರುಳ್ಗಳುಮಂ ಮುಂಚಿ ಬಂದ ಜಲದಾಗಮದೊಳ್" || 202 ||

ಸೂತ್ರಂ[1]. || ೯೭ ||

Further in joining the ಅವು to Adjectives ending in ತು this ತು becomes ದು, and partial elision takes place.

ಅಕ್ಕುಂ ಕೂಡೆ ತುಕಾರಾಂ- |
ತಕ್ಕೆ ತೃತೀಯತ್ವಮವುವಿನಾದಿಗೆ ಲೋಪಂ ||
ಮಿಕ್ಕಾ ಸ್ತ್ರೀಪುಲ್ಲಿಂಗದೊ- |
ಳಕ್ಕುಮಿರರ್ದಿರ್ವಿರೆಂದು ಲೋಕೋಕ್ತಿಗಳೊಳ್. || ೧೦೭ ||

Formation of the Nominative Plural of Feminines and Masculines with ಇರ್, ಅರ್, ದಿರ್, ವಿರ್, these being substitutes of ಗಳ್.

ಪದಚ್ಛೇದಂ. — ಅಕ್ಕುಂ ಕೂಡೆ ತುಕಾರಾಂತಕ್ಕೆ ತೃತೀಯತ್ವಂ, ಅವುವಿನ ಆದಿಗೆ ಲೋಪಂ; ಮಿಕ್ಕ ಆ ಸ್ತ್ರೀಪುಲ್ಲಿಂಗದೊಳ್ ಅಕ್ಕುಂ, ಇರ್, ಅರ್, ದಿರ್, ವಿರ್ ಎಂದು, ಲೋಕೋಕ್ತಿಗಳೊಳ್.

ಅನ್ವಯಂ. — ತುಕಾರಾಂತಕ್ಕೆ ತೃತೀಯತ್ವಂ, ಅವುವಿನ ಆದಿಗೆ ಲೋಪಂ ಕೂಡೆ; ಮಿಕ್ಕಾ ಸ್ತ್ರೀಪುಲ್ಲಿಂಗದೊಳ್ ಲೋಕೋಕ್ತಿಗಳೊಳ್, ಇರರ್ದಿರ್ವಿರ್ ಎಂದು, ಅಕ್ಕುಂ.

ಟೀಕು. — ತುಕಾರಾಂತಕ್ಕೆ = ಗುಣವಚನಂಗಳಲ್ಲಿ ತುಕಾರಾಂತಕ್ಕೆ; ತೃತೀಯತ್ವಂ = ಮೂರನೆಯಕ್ಷರದ ಭಾವಂ; ಅವುವಿನ = ಅವಾಗಮದ; ಆದಿಗೆ = ಮೊದಲಕ್ಷರಕ್ಕೆ; ಲೋಪಂ = ಅದರ್ಶನಂ; ಕೂಡೆ = ಒಡನೆ ಆಗುವುದು; ಮಿಕ್ಕಾ = (ನಪುಂಸಕಲಿಂಗದ) ಸರ್ವನಾಮಗುಣವಚನಂಗಳಲ್ಲದುಳಿದ ಆ; ಸ್ತ್ರೀಪುಲ್ಲಿಂಗದೊಳ್ = ಸ್ತ್ರೀಪುಲ್ಲಿಂಗಂಗಳಲ್ಲಿ; ಇರರ್ದಿರ್ವಿರೆಂದು = ಇರ್, ಅರ್, ದಿರ್, ವಿರ್ ಎಂದು; ಲೋಕೋಕ್ತಿಗಳೊಳ್ = ಜನವಾಕ್ಯಂಗಳಲ್ಲಿ; ಅಕ್ಕುಂ = ಅಪ್ಪುದು.

---

[1] ಸ್ತ್ರೀಪುರುಷವಾಚಕೇಷ್ವಿರರ್ ದಿರ್ ವಿರ್ ಕ್ವಚಿತ್ || ಭಾ. ಭೂ. 42. ||
(ಸ್ತ್ರೀಪುರುಷವಾಚಕಗಳಲ್ಲಿ ವಿಭಕ್ತಿಯ ಮೊದಲಲ್ಲಿ ಕೆಲವೆಡೆ ಗಳ್ ಪ್ರತ್ಯಯವೂ ಕೆಲವೆಡೆ ಇರ್, ಅರ್, ದಿರ್, ವಿರ್ ಪ್ರತ್ಯಯಗಳೂ ಬರುತ್ತವೆ.)

ಗುಣೋಕ್ತೇ ಎಂಬಾದಿಯಾದ ಭಾ. ಭೂ. ಸೂತ್ರ 40 ನೋಡಿರಿ (ಪುಟ 139).

ಪುರುಷಸ್ತ್ರೀವಾಚಕಮಾ- |
ಗಿರೆಯುಂ ಮತ್ತಲ್ಲಿ ಸರ್ವನಾಮಂ ಸಯ್ತಂ- ||
ದಿರೆಯುಮಿರರ್ ದಿರ್ ವಿರ್ ಕಳ್ |
ದೊರೆಕೊಂಡನುಸರಿಸುಗುಂ ಜನೋಕ್ತಿಕ್ರಮದಿಂ. || ಶ. ಸ್ಮೃ. 18. ||

ಅವು ಪರವಾಗಿರೆ ಲಿಂಗಾಂತ ಎಂಬಾದಿಯಾದ ಶ. ಸ್ಮೃ. ಸೂತ್ರ 21 ನೋಡಿರಿ (ಪುಟ 139).

ವೃತ್ತಿ.— ಗುಣವಚನದ ತುಕಾರಾಂತಕ್ಕೆ (ವರ್ಗದ) ತೃತೀಯತ್ವಮುಮವುವಿನಾದಿಗೆ ಲೋಪಮುಮಕ್ಕುಂ; (ಪಿಂತೆ ಸೂಚಿಸಿರ್ಪ ನಪುಂಸಕಲಿಂಗದ) ಸರ್ವನಾಮ ಗುಣವಚನಂಗಳಲ್ಲದ ಸ್ತ್ರೀಲಿಂಗಪುಲ್ಲಿಂಗದೊಳ್ ಗಳ್ ಎಂಬುದರ್ಕಾದೇಶಮಾಗಿ ಇರ್ ಅರ್ ದಿರ್ ವಿರ್ ಎಂದಕ್ಕುಂ.

ಪ್ರಯೋಗಂ.— ತೃತೀಯತ್ವಕ್ಕಂ ಅವುವಿನ ಲೋಪಕ್ಕಂ—ಒಳ್ಳಿದುವು, ತೆಳ್ಳಿದುವು, ದಟ್ಟಿದುವು, ಬೆಟ್ಟಿದುವು.

"ಬೆಟ್ಟಿದುವುಮೆನಿಪ್ಪ ಲೋಹಖುರವಳೆಯಂಗಳ್." || 203 ||

ಇರ್ಗೆ—ಪೆಂಡಿರ್, ತೊೞ್ತಿರ್.

"ತುಱುಗಳ ಪೆಂಡಿರ ಪಾರ್ವರ
ಮಱಿವೊಕ್ಕರ. . . . ." || 204 ||

". . . . . .ತದ್ಧಾರಾಪುರಸ್ತ್ರೀಯರಂ |
ತೊೞ್ತಿರ್ಮಾಡಿದ . . . . ." || 205 ||

ಅರ್ಗೆ—ದೇವರ್, ನಂಟರ್, ನಲ್ಲರ್.

". . . ಹುಸಿಯಾದೊಡೆ ದೇವರ ಪಾದದಾಣೆ. . ." || 206 ||

". . . . . .ನಂಟರ
ನಲ್ಲರ ಮಾತುಗಳೆದೋಪನೇ ಪರಮಾತ್ಮಾ" || 207 ||

ದಿರ್ಗೆ—ಇವಳ್ದಿರ್, ಇವಂದಿರ್, ಅವಂದಿರ್.

"ಇವಳ್ದಿರೊಳಿವಂದಿರಂ. . . . . . ." || 208 ||

ವಿರ್ಗೆ—ತಂದೆವಿರ್, ತಾಯ್ವಿರ್, ಸೊಸೆವಿರ್.

"ಅವನತನಾಗಿ ತಂದೆವಿರ ತಾಯ್ವಿರ ಕಲ್ಪಿಸಿದುಕ್ತಿ. ." || 209 ||

ಸೂತ್ರಂ. || ೯೮ ||

ಅರ್ is suffixed to all Feminine and Masculine bases in the Plural, with the necessary elision.

ಒರೆ ಪುಂಸ್ತ್ರೀಲಿಂಗಮುಮಮ- |
ರ್ದಿರೆ ಸಂಖ್ಯಾಸರ್ವನಾಮಕೃದ್ಗುಣವಚನ- ||
ಸ್ಫುರದುರುತದ್ಧಿತಮುಂ ಮುಂ- |
ದರುವಕ್ಕುಮದಂತಲಿಂಗದೊಳ್ ವಿಧಿಲೋಪಂ. ||೧೦೮||

ಪದಚ್ಛೇದಂ.— ಬರೆ ಪುಂಸ್ತ್ರೀಲಿಂಗಮುಂ, ಅಮರ್ದು ಇರೆ ಸಂಖ್ಯಾಸರ್ವನಾಮ ಕೃದ್ಗುಣವಚನಸ್ಫುರದುರುತದ್ಧಿತಮುಂ, ಮುಂದೆ ಅರು ಅಕ್ಕುಂ; ಅದಂತಲಿಂಗದೊಳ್ ವಿಧಿ ಲೋಪಂ.

ಅನ್ವಯಂ.— ಪುಂಸ್ತ್ರೀಲಿಂಗಮುಂ ಬರೆ, ಸಂಖ್ಯಾಸರ್ವನಾಮಕೃದ್ಗುಣವಚನಸ್ಫುರ ದುರುತದ್ಧಿತಮುಂ ಅಮರ್ದು ಇರೆ, ಮುಂದೆ ಅರು ಅಕ್ಕುಂ; ಅದಂತಲಿಂಗದೊಳ್ ವಿಧಿಲೋಪಂ.

ಟೀಕು.— ಪುಂಸ್ತ್ರೀಲಿಂಗಮುಂ=ಪುಲ್ಲಿಂಗ ಸ್ತ್ರೀಲಿಂಗಂಗಳುಂ; ಬರೆ=ಬರೆ; ಸಂಖ್ಯಾ= ಸಂಖ್ಯಾವಾಚಿಗಳುಂ; ಸರ್ವನಾಮ = ಸರ್ವನಾಮಂಗಳುಂ; ಕೃತ್ = ಕೃತ್ತುಗಳುಂ; ಗುಣ ವಚನ = ಗುಣವಚನಂಗಳುಂ; ಸ್ಫುರತ್ = ಪ್ರಕಾಶಿಸಲ್ಪಟ್ಟ; ಉರು = ಉನ್ನತವಾದ; ತದ್ಧಿತ ಮುಂ = ತದ್ಧಿತಂಗಳುಂ; ಅಮರ್ದಿರೆ = ಆ ಪುಂಸ್ತ್ರೀಲಿಂಗಂಗಳಲ್ಲಿ ಪೊರ್ದುಗೆಯಾಗಿರೆ; ಮುಂದೆ = ಅಗ್ರದಲ್ಲಿ; ಅರು = ಗಳಾಗಮಕ್ಕಾದೇಶವಾಗಿ ಅರ್ ಎಂಬಾಗಮಂ; ಅಕ್ಕುಂ = ಆಗು ವುದು; ಅದಂತಲಿಂಗದೊಳ್ = ಅಕಾರಾಂತಲಿಂಗಂಗಳಲ್ಲಿ; ವಿಧಿಲೋಪಂ = ಹಿಂದೆ ಪೇಳ್ದ ವಿಧಿಗೆ ಲೋಪಂ ಅಕ್ಕುಂ.—(ಮುಂದರಕ್ಕುಮತ್ವಾಂತಲಿಂಗದೊಳ್ವಿಧಿಲೋಪಂ ಎಂದು, ಪಾಠಾಂತರಂ). ಅರ್ = ಅರಾಗಮಂ; ಅಕ್ಕುಂ = ಆಗುವುದು; ಅತ್ವಾಂತಲಿಂಗದೊಳ್ = ಅಕಾರಾಂತಲಿಂಗದಲ್ಲಿ; ವಿಧಿಲೋಪಂ = ಪಿಂದೆ ಪೇಳ್ದ ವಿಧಿಗೆ ಲೋಪಂ ಅಕ್ಕುಂ.

ವೃತ್ತಿ.— ಪುಲ್ಲಿಂಗಮುಂ ಸ್ತ್ರೀಲಿಂಗಮುಂ ಪೆಱಗೆವರೆ, ಅರುವಕ್ಕುಂ; ಆ ಪುಂಸ್ತ್ರೀಲಿಂಗದೊಳಮರ್ದ ಸಂಖ್ಯೆಯುಂ ಸರ್ವನಾಮಮುಂ ಕೃತ್ತುಂ ಗುಣ ವಚನಮುಂ ತದ್ಧಿತಮುಮಿರ್ದೊಡಂ ಪರದೊಳರುವಕ್ಕುಂ.

ಪ್ರಯೋಗಂ.— ಪುಲ್ಲಿಂಗಕ್ಕೆ— ಅರಸರ್, ಸಾಮಂತರ್, ಕೋವಿದರ್, ನಂದನರ್.

ಸ್ತ್ರೀಲಿಂಗಕ್ಕೆ— ದೇವಿಯರ್, ಕಾಂತೆಯರ್.

ಸಂಖ್ಯೆಗೆ—

"ಒರ್ವ ಬಿನ್ನಣಿಯಪ್ಪ ಬಡಗಿಯ ಪಾಂಗಿನಿಂದೆಲ್ಲಮಂ ಮಾಳ್ಪ . . ." || 210 ||

". . . . . . . ತಾಮಿರ್ವರುಂ ಕೆಯ್ದುವಂ ಬಿಸುಟರ್
. . . ." || 211 ||

". . . . . . . ಪಯಿಂಛಾಸಿರ್ವರುಂ ಯುದ್ಧದೊಳ್" || 212 ||

ಸರ್ವನಾಮಕ್ಕೆ—ಉವರ್.

"ಪೆಱರುಮನ್ನರಿನಿನ್ನುಮಾರಯಿಸಿಂ ವಿದಗ್ಧರಿನೊಯ್ಯನೆ" || 213 ||

"ಅವರಿವರಳವೆ ಕಾವ್ಯವಿದ್ಯೆಯೊಳ್" || 214 ||

ಕೃತ್ತಿಂಗೆ—ನುಡಿದರ್, ಬೇಡಿದರ್.

"ಕೊಂದರ್ ಖೇಚರರಂ ಸುರ- |
ರೆಂದಱಿಯದೆ . . . . ." || 215 ||

"ನುಡಿಗೆಲ್ಲಂ ಸಲ್ಲದ ಕ- |
ನ್ನಡದೊಳ್ ಚತ್ತಾಣಮುಂ ಬೆದಂಡೆಯುಮೆಂದೀ- ||
ಗಡಿನ ನೆಗಱ್ತೆಯ ಕಬ್ಬದೊ- |
ಳೊಡಂಬಡಂ ಮಾಡಿದರ್ ಪುರಾತನಕವಿಗಳ್" || 216 ||

ಗುಣವಚನಕ್ಕೆ—ಒಳ್ಳಿದರ್, ಬಲ್ಲಿದರ್.

"ಆದ್ಯರುಮಕ್ಕುಮವಂದಿರೊಳ್ಳಿದರಪ್ಪವರೆಂದು" || 217 ||

"ಎನಗೆ ಬಲ್ಲಿದರಾಗಲಾರ್ಪರೆ ಗಾವಿಲರ್ . . . ." || 218 ||

ತದ್ಧಿತಕ್ಕೆ—ಮಣಿಗಾಱರ್, ಕಂಚುಗಾಱರ್, ಒಱೆಗಾಱರ್.

ಪುಲ್ಲಿಂಗಮಪ್ಪದಂತಕ್ಕೆಲ್ಲಿಯುಂ ವಿಧಿಲೋಪಂ—ಸುರರ್, ನರರ್, ಚದುರರ್, ಪಾರ್ವರ್ ಎಂಬಂತೆ.

ಸೂತ್ರಂ. || ೯೯ ||

In Masculine and Feminine bases denoting quantity (ಪವಣ್) and in numerals ಪರ್, ಬರ್, ೦ಬರ್, or, with elision of ಬ್, ಅರ್ occur in the Nominative Plural. Also ಒವರ್ಂ or ಒಬರ್ಂ.

ಪವಣೊಳಮಾ ಸಂಖ್ಯೆಯೊಳಂ |
ವ್ಯವಹರಿಕುಂ ಪತ್ವಮಲ್ಲಿ ಬಶ್ರುತಿಯುಂ ಸಂ- ||
ಭವಿಕುಮದಂತಂ ನಿಲೆ ಬಿಂ- |
ದುವಿಕಲ್ಪಂ ಬತ್ವಮೊರ್ಮೆ ಲೋಪಮನಾಳ್ಗುಂ || ೧೦೯ ||

ಪದಚ್ಛೇದಂ.—ಪವಣೊಳಂ ಆ ಸಂಖ್ಯೆಯೊಳಂ ವ್ಯವಹರಿಕುಂ ಪತ್ವಂ; ಅಲ್ಲಿ ಬಶ್ರುತಿಯುಂ ಸಂಭವಿಕುಂ; ಅದಂತಂ ನಿಲೆ, ಬಿಂದುವಿಕಲ್ಪಂ; ಬತ್ವಂ ಒರ್ಮೆ ಲೋಪಮಂ ಆಳ್ಗುಂ.

ಅನ್ವಯಂ.— ಪವಣೊಳಂ ಆ ಸಂಖ್ಯೆಯೊಳಂ ವತ್ವಂ ವ್ಯವಹರಿಕುಂ. ಉಳಿದುದು ಯಥಾನ್ವಯಂ.

ಟೀಕು.— ಪವಣೊಳಂ = ಆ ಪುಂಸ್ತ್ರೀಲಿಂಗದೊಳಮುರ್ದ ಪ್ರಮಾಣವಾಚಿಗಳಲ್ಲಿಯುಂ; ಆ ಸಂಖ್ಯೆಯೊಳಂ = ಆ ಸಂಖ್ಯಾವಾಚಿಗಳಲ್ಲಿಯುಂ; ವತ್ವಂ = ವಕಾರಂ; ವ್ಯವಹರಿಕುಂ = ವ್ಯವಹರಿಪುದು, ಬರ್ಪುದೆಂಬರ್ಥಂ; ಅಲ್ಲಿ = ಆ ಪುಂಸ್ತ್ರೀಲಿಂಗವಿಷಯವಾಗಿ ಬಂದ ವಕಾರದಲ್ಲಿ; ಬಶ್ರುತಿಯುಂ = ಬಕಾರದ ಶ್ರವಣಮುಂ; ಸಂಭವಿಕುಂ = ಹುಟ್ಟುವುದು; ಅದಂತಂ = ಅಕಾರಾಂತಂ; ಸಿಲೆ = ನೆಲಸೆ; ಬಿಂದು = ಸೊನ್ನೆ; ವಿಕಲ್ಪಂ = ವಿಕಲ್ಪವಾಗಿ ಬರ್ಪುದು; ಬತ್ವಂ = ಬಕಾರಂ; ಒರ್ಮೆ = ಒಂದು ಬಾರಿ; ಲೋಪಮಂ = ಅದರ್ಶನಮುಂ; ಆಳ್ಗುಂ = ತಾಳ್ವುದು.

ವೃತ್ತಿ.— ಆ ಪುಂಸ್ತ್ರೀಲಿಂಗವಿಷಯಮಾದ ಪವಣೊಳಂ ಸಂಖ್ಯೆಯೊಳಂ ವತ್ವಮಕ್ಕುಂ; ಆ ವತ್ವಕ್ಕೊರ್ಮೆ ಬಕಾರಮಕ್ಕುಂ; ಅಕಾರಾಂತಮಾದೆಡೆಯೊಳ್ ಬಿಂದು ವಿಕಲ್ಪದಿಂದಕ್ಕುಂ; ಬಕಾರಕ್ಕೊರ್ಮೆ ಲೋಪಮಕ್ಕುಂ.

ಪ್ರಯೋಗಂ.— ಪವಣೊಳ್ ವಕಾರಕ್ಕೆ— ಎಲ್ಲವರ್.

"ಎಲ್ಲವರಂತೆವೋಲ್ ನುಡಿವರ್" || 219 ||

ಸಂಖ್ಯೆಗೆ— ಮೂವತ್ತುಮೂವರ್, ಈರ್ವರ್, ನೂರ್ವರ್.

". . . . ಮೂವತ್ತುಮೂವರಾದರ್ ದೇವರ್." || 220 ||

ಬಕಾರಕ್ಕೆ— ಅನಿಬರ್, ಇನಿಬರ್, ಎನಿಬರ್, ಒರ್ಬಂ, ಇರ್ಬರ್.

". . . . . . . ನೆರೆದರಸುಗ-
ಳನಿಬರುಮಂ ಕಾದಿ ಗೆಲ್ದನೊರ್ಬನೆ ಪಾರ್ಥಂ." || 221 ||

"ಒರ್ವಂ ಬಂದೊಂದೆ ತೇರೊಳ್ ನೆರೆದ ಕುರುಬಲವ್ಯೂಹಮಂ . ." || 222 ||

ಅಕಾರಾಂತಬಿಂದುಗೆ ವಿಕಲ್ಪಂ— ಪಲಂಬರ್, ಪಲಬರ್; ಕೆಲಂಬರ್, ಕೆಲಬರ್. — ಈಗ ಹಲವರು – ಕೆಲವರು – ಎಂದು 'ವ'ಕಾರ [illegible]

ಬಕಾರಲೋಪಕ್ಕೆ— ಪಲರ್, ಕೆಲರ್, (ಎಲ್ಲರ್).

ಸೂತ್ರಂ. || ೧೦೦ ||

When in the classes of words mentioned in S. 99

ಪವಣಂ ಸೂಚಿಪ ಸಂಖ್ಯೆಯ- |
ನವಿಶೇಷದಿನುಸಿರ್ವ ರೂಢಿಯನಿತಿನಿತೆನಿತ- ||

the ವರ್ (ಬರ್) is put to ಅನಿತು, ಇನಿತು, ಎನಿತು, ಎಲ್ಲವು which express an indefinite quantity (ಪವಣ್), or to ಪಲವು, ಕೆಲವು which express a number (ಸಂಖ್ಯೆ), their last syllable is elided.

ಲ್ಲವು ಕೆಲವು ಪಲವು ತಾಮಂ- ।
ತ್ಯವರ್ಣಲೋಪಮನೆ ವತ್ವಮೊದವಿರೆ ಪಡೆಗುಂ.॥ ೧೧೧ ॥

ಪದಚ್ಛೇದಂ.—ಪವಣಂ ಸೂಚಿಪ ಸಂಖ್ಯೆಯುಂ ಅವಿಶೇಷದಿಂ ಉಸಿರ್ವ ರೂಢಿಯ ಅನಿತು ಇನಿತು ಎನಿತು ಎಲ್ಲವು ಕೆಲವು ಪಲವು ತಾಂ ಅಂತ್ಯವರ್ಣಲೋಪಮನೆ, ವತ್ವಂ ಒದವಿರೆ, ಪಡೆಗುಂ.

ಅನ್ವಯಂ.—ವತ್ವಂ ಒದವಿ ಇರೆ, ಪವಣಂ ಸೂಚಿಪ ಸಂಖ್ಯೆಯುಂ ಅವಿಶೇಷದಿಂ ಉಸಿರ್ವ ರೂಢಿಯ ಅನಿತು ಇನಿತು ಎನಿತು ಎಲ್ಲವು ಕೆಲವು ಪಲವು ತಾಂ ಅಂತ್ಯವರ್ಣಲೋಪಮನೆ ಪಡೆಗುಂ.

ಟೀಕು.—ವತ್ವಂ = ವಕಾರಂ; ಒದವಿರೆ = ಪ್ರಾಪ್ತಿಸಿರೆ; ಪವಣಂ = ಪ್ರಮಾಣಂ; ಸೂಚಿಪ ಸಂಖ್ಯೆಯುಂ = ಸೂಚಿಸುವ ಲೆಕ್ಕವಂ; ಅವಿಶೇಷದಿಂ = ವಿಶೇಷವಲ್ಲದುದರಿಂದೆ; ಉಸಿರ್ವ = ಪೇಳ್ವ; ರೂಢಿಯ = ಪ್ರಸಿದ್ಧಿಯ; ಅನಿತು = ಅನಿತೆಂಬುದು; ಇನಿತು = ಇನಿತೆಂಬುದು; ಎನಿತು = ಎನಿತೆಂಬುದು; ಎಲ್ಲವು = ಎಲ್ಲವೆಂಬುದು; ಕೆಲವು = ಕೆಲವೆಂಬುದು; ಪಲವು = ಪಲವೆಂಬುದು; ತಾಂ = ತಾಂ; ಅಂತ್ಯ = ಕಡೆಯಣ; ವರ್ಣ = ಅಕ್ಷರದ; ಲೋಪಮನೆ = ಅದರ್ಶನವನೆ; ಪಡೆಗುಂ = ಪಡೆವುದು.

ವೃತ್ತಿ.—ಅನಿತು, ಇನಿತು, ಎನಿತು, ಎಲ್ಲವು, ಎಂದು ಪವಣಂ ಪೇಳ್ವ ನಿರ್ವಿಶೇಷಶಬ್ದಂಗಳ್, ಸಂಖ್ಯೆಯಂ ಪೇಳ್ವ ಪಲವು ಕೆಲವು ಎಂಬ ಶಬ್ದಂಗಳ್, ವತ್ವಮಿದಿರೊಳಿರ್ದೊಡಮಂತ್ಯಲೋಪಮಂ ಪಡೆವುವು.

ಪ್ರಯೋಗಂ.—ಅನಿಬರ್, ಇನಿಬರ್, ಎನಿಬರ್, ಎಲ್ಲವರ್, ಪಲವರ್, ಕೆಲಬರ್.

ಸೂತ್ರಂ. ॥ ೧೧೧ ॥

Sometimes the augments (ಆಗಮಂ) ಕಳ್ and ಗಳ್ are suffixed to ಅರ್; ಕಳ್ alone is used too; and in the place of the ವಿರ್ and ವಿರ್, ಗಳ್ appears.

ಏಕಲಂ ಪೆಱವಱೊಳರುವಿಂ- ।
ಗೆ ಕಳಾಗಮಮಂತೆ ಸರ್ವನಾಮದೊಳಂ ತಾಂ ॥
ಪ್ರಕಟಂ ಗಳಾಗಮಂ ತಿಳಿ ।
ಏಕಲ್ಪದಿಂದಪ್ಪುದಲ್ತೆ ಗಳ್ದಿರ್ವಿಗಗಂ. ॥ ೧೧೧ ॥

ಪದಚ್ಛೇದಂ.— ವಿಕಲಂ ಪೆಱವಱೊಳ್ ಅರುವಿಂಗೆ ಕಳಾಗಮಂ; ಅಂತೆ ಸರ್ವನಾಮ ದೊಳಂ ತಾಂ ಪ್ರಕಟಂ ಗಳಾಗಮಂ; ತಿಳಿ! ವಿಕಲ್ಪದಿಂದೆ ಅಪ್ಪುದು ಅಲ್ತೆ ಗಳ್ ದಿರ್ವಿರ್ಗರ್ಗೆ!

ಅನ್ವಯಂ.— ಪೆಱವಱೊಳ್ ಅರುವಿಂಗೆ ಕಳಾಗಮಂ ವಿಕಲಂ; ಅಂತೆ ಸರ್ವನಾಮ ದೊಳಂ ಪ್ರಕಟಂ ಗಳಾಗಮಂ ತಾಂ; ದಿರ್ವಿರ್ಗರ್ಗಂ ಗಳ್ ವಿಕಲ್ಪದಿಂದೆ ಅಪ್ಪುದು, ಅಲ್ತೆ? ತಿಳಿ!

ಟೀಕು.— ಪೆಱವಱೊಳ್ = ಕೆಲವರಲ್ಲಿ; ಅರುವಿಂಗೆ = ಅರಾಗಮಕ್ಕೆ; ಕಳಾಗಮಂ = ಕಳ್ ಎಂಬಾಗಮಂ; ವಿಕಲಂ = ವಿಕಲ್ಪವಾಗಿ ಬರ್ಪುದು; ಅಂತೆ = ಹಾಂಗೆ; ಸರ್ವನಾಮ ದೊಳಂ = ಪುಂಸ್ತ್ರೀಲಿಂಗವಿಷಯವಾದ ಸರ್ವನಾಮಂಗಳಲ್ಲಿಯುಂ; ಪ್ರಕಟಂ = ಪ್ರಸಿದ್ಧವಾದ; ಗಳಾಗಮಂ = ಗಳ್ ಎಂಬಾಗಮಂ; ತಾಂ = ತಾಂ ವಿಕಲ್ಪವಾಗಿ ಬರ್ಪುದು; ದಿರ್ವಿರ್ಗರ್ಗಂ = ದಿರಾಗಮ ವಿರಾಗಮಂಗಳ್ಗೆ; ಗಳ್ = ಗಳಾಗಮಂ; ವಿಕಲ್ಪದಿಂದೆ = ವಿಕಲ್ಪದಿಂದೆ; ಅಪ್ಪುದು = ಆಗುವುದು; ಅಲ್ತೆ = ಅಲ್ಲವೆ; ತಿಳಿ = ಅರಿ.

ವೃತ್ತಿ.— ಮತ್ತೆ ಕೆಲವಱೊಳರುವಿನ ಮೇಲೆ ಕಳಾಗಮಮಕ್ಕುಂ; ಪೆಱವ ಱೊಳರುವಿಲ್ಲದೆಯುಂ ಕಳಾಗಮಮಕ್ಕುಂ; ಸರ್ವನಾಮದೊಳರುವಿನ ಮೇಲೆ ಗಳಾಗಮಮಕ್ಕುಂ; ದಿರ್ವಿರ್ಗೆ ವಿಕಲ್ಪದಿಂ ಗಳಾಗಮಮಕ್ಕುಂ.

ಪ್ರಯೋಗಂ.— ಅರುವಿನ ಮೇಲೆ ಕಳಾಗಮಕ್ಕೆ—ಬುಧರ್ಕಳ್, ಗೋವರ್ಕಳ್, ಪೊಱಱಾಯಿಲರ್ಕಳ್ (ಪೊಱಱಾಯ್ತರ್ಕಳ್).

ಅರುವಿಲ್ಲದಲ್ಲಿ ಕಳ್—ಮಕ್ಕಳ್, ನಾಟ್ಕಿಳ್, ಕೋಟ್ಕಿಳ್.

ಅರುವಿನ ಮೇಲೆ ಸರ್ವನಾಮದೊಳ್ ಗಳಾಗಮಕ್ಕೆ—ಅವರ್ಗಳ್, ಇವರ್ಗಳ್, ಉವರ್ಗಳ್.

ದಿರ್ಗೆ—ಅಣ್ಣಂದಿರ್, ಅಣ್ಣಂಗಳ್; ಭಾವಂದಿರ್, ಭಾವಂಗಳ್; ಮಾವಂದಿರ್, ಮಾವಂಗಳ್; ಅಯ್ಯಂದಿರ್, ಅಯ್ಯಂಗಳ್; ಅಕ್ಕಂದಿರ್, ಅಕ್ಕಂಗಳ್.

ವಿರ್ಗೆ—ಅತ್ತೆವಿರ್, ಅತ್ತೆಗಳ್; ತಾಯ್ವಿರ್, ತಾಯ್ಗಳ್; ತಂದೆವಿರ್, ತಂದೆಗಳ್.

ಸೂತ್ರಂ. || ೧೧೨ ||

The Plural is used instead of the Singular in honour of beloved and respectable persons, or in ridicule.

ಸವನಿಪುದಯತ್ನಕೃತಗೌ- |
ರವಮುಖದೊಳ್ಗುರುಮುನೀಶ್ವರಾದಿವಿಶಿಷ್ಟೋ- ||
ದ್ಭವವಿನಯದೊಳೊಂದಿದಸ- |
ಹ್ಯವೃತ್ತಿಯೊಳ್ ತಾಂ ಬಹುತ್ವಮೇಕತ್ವದೊಳಂ.
|| ೧೧೨ ||

ಪದಚ್ಛೇದಂ. — ಸವನಿಪುದು ಅಯತ್ನಕೃತಗೌರವಮುಖದೊಳ್, ಗುರುಮುನೀಶ್ವರಾದಿ ವಿಶಿಷ್ಟೋದ್ಭವವಿನಯದೊಳ್, ಒಂದಿದ ಅಸಹ್ಯವೃತ್ತಿಯೊಳ್ ತಾಂ ಬಹುತ್ವಂ ಏಕತ್ವದೊಳಂ.

ಅನ್ವಯಂ. — ಅಯತ್ನಕೃತಗೌರವಮುಖದೊಳ್, ಗುರುಮುನೀಶ್ವರಾದಿವಿಶಿಷ್ಟೋದ್ಭವ ವಿನಯದೊಳ್, ಒಂದಿದಸಹ್ಯವೃತ್ತಿಯೊಳ್ ಏಕತ್ವದೊಳಂ ಬಹುತ್ವಂ ತಾಂ ಸವನಿಪುದು.

ಟೀಕು. — ಅಯತ್ನ = ಪ್ರಯತ್ನವಿಲ್ಲದೆ; ಕೃತ = ಮಾಡಲ್ಪಟ್ಟ; ಗೌರವಮುಖದೊಳ್ = ಗುರುತ್ವದ ಮುಖದಲ್ಲಿ; ಗುರು = ಗುರುಗಳ್; ಮುನೀಶ್ವರ = ಮುನೀಶ್ವರರ್; ಆದಿ = ಮೊದಲಾದ; ವಿಶಿಷ್ಟ = ವಿಶಿಷ್ಟರಲ್ಲಿ; ಉದ್ಭವ = ಹುಟ್ಟುವ; ವಿನಯದೊಳ್ = ವಿನಯದಲ್ಲಿ; ಒಂದಿದ ಸಹ್ಯವೃತ್ತಿಯೊಳ್ = ಕೂಡಿದ ಅಸಹ್ಯವಾದ ವೃತ್ತಿಯಲ್ಲಿ; ಏಕತ್ವದೊಳಂ = ಏಕವಚನದಲ್ಲಿಯುಂ; ಬಹುತ್ವಂ = ಬಹುವಚನಂ; ತಾಂ = ತಾಂ; ಸವನಿಪುದು = ಪ್ರಾಪ್ತಿಸುವುದು.

ವೃತ್ತಿ. — ಪಾತ್ರವಿಶೇಷಮಿಲ್ಲದೆಡೆಯೊಳ್ ಪ್ರಯತ್ನಮಲ್ಲದಿರ್ಪ ಗುರುತ್ವದೊಳಂ, ಗುರುಮುನೀಶ್ವರಾದಿವಿಶೇಷತ್ವದೊಳಂ, ಅಸಹ್ಯವೃತ್ತಿಯೊಳಂ, ಏಕವಚನಕ್ಕೆ ಬಹುವಚನಮಪ್ಪುದು.

ಪ್ರಯೋಗಂ. — ಪ್ರಯತ್ನಮಲ್ಲದ ಗುರುತ್ವಕ್ಕೆ—ಎಮ್ಮ ತಂದೆಗಳ್, ಎಮ್ಮಯ್ಯಂಗಳ್, ಎಮ್ಮ ತಾಯ್ಗಳ್.

ಗುರುಮುನಿಜನಂಗಳ್ಗೆ—ಗುರುಗಳ್.

"ಶ್ರೀಮತ್ಸಮಂತಭದ್ರ |
ಸ್ವಾಮಿಗಳ ಜಗತ್ಪ್ರಸಿದ್ಧಕವಿಪರಮೇಷ್ಠಿ ||
ಸ್ವಾಮಿಗಳ ಪೂಜ್ಯಪಾದ |
ಸ್ವಾಮಿಗಳ ಪದಂಗಳೀಗೆ ಶಾಶ್ವತಪದಮಂ" || 223 ||

ಅಸಹ್ಯವೃತ್ತಿಗೆ—

"ಬಡವಾದಿರರಸ ಕಾಲೊಳ್ |
ನಡೆದಪಿರೊಡನಾರುಮಿಲ್ಲ ಕಟಿಲೆಗಳೇಂ ನಿ- ||
ಮ್ಮುಡಿಯೊಳಗೆ ಪಡುವ ದೇಗುಲ- |
ದೆಡೆಯಾವುದು ಕುಡದ ನಿಮಗವಿಾಯೆಡಪಿಾಯ್ತೇ." || 224 ||

ಸೂತ್ರಂ[1]. || ೧೧೩ ||

When to words ending in ಅ of the Masculine and Feminine gender ಗಳ್ or ದಿರ್ is suffixed, the Bindu is put between; when such words are Neuters, its insertion before ಗಳ್ is optional; but when they are Samskṛita Neuters, it is obligatory.

ಉದಯಿಸುಗುಂ ಗಳ್ದಿರ್ಗಳ |
ಮೊದಲೊಳದಂತಕ್ಕೆ ಬಿಂದು ಪುಂಸ್ತ್ರೀಲಿಂಗ- ||
ಕ್ಕದು ನಪ್ಪಿಸೊಳ್ವಿಕಲ್ಪಂ |
ಪುದಿದಿರೆ ಗಳ್ಬಿಂದು ನಿಯತಮದು ಸಂಸ್ಕೃತದೊಳ್ || ೧೧೩ ||

ಪದಚ್ಛೇದಂ.— ಉದಯಿಸುಗುಂ ಗಳ್ದಿರ್ಗಳ ಮೊದಲೊಳ್ ಅದಂತಕ್ಕೆ ಬಿಂದು ಪುಂಸ್ತ್ರೀಲಿಂಗಕ್ಕೆ; ಅದು ನಪ್ಪಿಸೊಳ್ ವಿಕಲ್ಪಂ; ಪುದಿದು ಇರೆ ಗಳ್, ಬಿಂದು ನಿಯತಂ ಅದು ಸಂಸ್ಕೃತದೊಳ್.

ಅನ್ವಯಂ.— ಪುಂಸ್ತ್ರೀಲಿಂಗಕ್ಕೆ ಅದಂತಕ್ಕೆ ಗಳ್ದಿರ್ಗಳ ಮೊದಲೊಳ್ ಬಿಂದು ಉದಯಿಸುಗುಂ; ಅದು ನಪ್ಪಿಸೊಳ್ ವಿಕಲ್ಪಂ; ಸಂಸ್ಕೃತದೊಳ್, ಗಳ್ ಪುದಿದು ಇರೆ, ಬಿಂದು ಅದು ನಿಯತಂ.

---

1) ಅದಂತಾನ್ನಾಗಮಃ ಪೂರ್ವಸ್ಮಿನ್ ಗಳಃ || ಭಾ. ಭೂ. 49. ||

(ಅಕಾರಾಂತವಾದ ಶಬ್ದದತ್ತಣಿಂದ ಪರವಾಗಿ ದ್ವಿತ್ವಬಹುತ್ವಕ್ಕೆ ಹೇಳಲ್ಪಟ್ಟ ಗಳ್ ಪ್ರತ್ಯಯದ ಮೊದಲಲ್ಲಿ ಪ್ರಕೃತಿಯ ಪರದಲ್ಲಿ ನಕಾರಾಗಮವಾಗುವುದು.)

ಕೇವಲಮದಂತಲಿಂಗದೊ- |
ಳಾವರ್ಜಿತಮಪ್ಪ ಮಾರ್ಗಮಂ ಗಳ್ಗಕ್ಕುಂ ||
ತಾವೊಂದಿ ಬಿಂದುಗಳ್ಗ- |
ಧ್ಯಾಪಿಸಿ ನೆಗಟ್ಗುಂ ಮನಂ ಸ್ವರಂ ಸಿಲೆ ಪರದೊಳ್. || ಶ. ಸ್ಮೃ. 20. ||

ಟೀಕು.— ಪುಂಸ್ತ್ರೀಲಿಂಗಕ್ಕೆ = ಪುಲ್ಲಿಂಗ ಸ್ತ್ರೀಲಿಂಗಂಗಳಾದ; ಅದಂತಕ್ಕೆ = ಅಕಾರಾಂತಂಗಳ್ಗೆ; ಗಳ್ದಿರ್ಗಳ = ಗಳಾಗಮ ದಿರಾಗಮಂಗಳ; ಮೊದಲೊಳ್ = ಆದಿಯಲ್ಲಿ; ಬಿಂದು = ಸೊನ್ನೆ; ಉದಯಿಸುಗುಂ = ಪುಟ್ಟುವುದು; ಅದು = ಆ ಬಿಂದು; ನಪ್ಪಿನೊಳ್ = ಅಕಾರಾಂತನಪುಂಸಕಲಿಂಗದಲ್ಲಿ; ವಿಕಲ್ಪಂ = ವಿಕಲ್ಪವಾಗಿ ಜನಿಯಿಸುವುದು; ಸಂಸ್ಕೃತದೊಳ್ = ಸಂಸ್ಕೃತಶಬ್ದಂಗಳಲ್ಲಿ; ಗಳ್ = ಗಳಾಗಮಂ; ಪುದಿದಿರೆ = ಪ್ರವೇಶವಾಗಿರೆ; ಬಿಂದು = ಸೊನ್ನೆ; ಅದು = ಅದು; ನಿಯತಂ = ನಿತ್ಯವಾಗಿ ಬರ್ಪುದು.

ವೃತ್ತಿ.— ಪುಲ್ಲಿಂಗಸ್ತ್ರೀಲಿಂಗದದಂತಕ್ಕೆ ಗಳ್‌ದಿರ್ಗಳ್ ಪರಮಾಗೆ ನಡುವೆ ಬಿಂದುವಕ್ಕುಂ; ಅಕಾರಾಂತನಪುಂಸಕಲಿಂಗದೊಳ್ ಗಳ್ ಬರೆ, ಆ ಬಿಂದು ವಿಕಲ್ಪಂ; ಸಂಸ್ಕೃತದೊಳ್ ಬಿಂದು ನಿತ್ಯಂ.

ಪ್ರಯೋಗಂ.— ಪುಲ್ಲಿಂಗಕ್ಕೆ—ಅಣ್ಣಂಗಳ್, ಅಣ್ಣಂದಿರ್; ಭಾವಂಗಳ್, ಭಾವಂದಿರ್; ಮಾವಂಗಳ್, ಮಾವಂದಿರ್; ಅಯ್ಯಂಗಳ್, ಅಯ್ಯಂದಿರ್.

ಸ್ತ್ರೀಲಿಂಗಕ್ಕೆ—ಅಕ್ಕಂಗಳ್, ಅಕ್ಕಂದಿರ್.

ನಪುಂಸಕಲಿಂಗಕ್ಕೆ— ಮರಂಗಳ್, ಮರಗಳ್; ಪೊಲಂಗಳ್, ಪೊಲಗಳ್; ಪಯಂಗಳ್, ಪಯಗಳ್; ಕೆಲಂಗಳ್, ಕೆಲಗಳ್.

ಸಂಸ್ಕೃತಕ್ಕೆ— ಗುಣಂಗಳ್; ಮದಂಗಳ್; ದೇಶಂಗಳ್; ಕೋಶಂಗಳ್; ಪಾಶಂಗಳ್ ಎಂಬಂತೆ.

ದೋಷಕ್ಕೆ— ದೇಶಗಳ್.

ಸೂತ್ರಂ. || ೧೧೪ ||

When the Bindu is followed by a Vowel, it is changed either into ನ್ or ಮ್; such a ಮ್ again may take the form of ವ್. Also a radical ಮ್ frequently appears as ವ್.

ಪರದೊಳ್ ಸ್ವರಮಿರೆ ಬಿಂದುಗೆ |
ದೊರೆಕೊಳ್ಗುಂ ನತ್ವಮತ್ವಮಾ ಮತ್ವಕ್ಕು- ||
ಚ್ಚರಿಪರ್ ವತ್ವಮನರೆಬರ್ |
ನಿರವದ್ಯಂ ನಿಜಮಕಾರದೆಡೆಗಂ ವತ್ವಂ. || ೧೧೪ ||

ಪದಚ್ಛೇದಂ.— ಪರದೊಳ್ ಸ್ವರಂ ಇರೆ, ಬಿಂದುಗೆ ದೊರೆಕೊಳ್ಗುಂ ನತ್ವ-ಮತ್ವಂ; ಆ ಮತ್ವಕ್ಕೆ ಉಚ್ಚರಿಪರ್ ವತ್ವಮಂ ಅರೆಬರ್; ನಿರವದ್ಯಂ ನಿಜಮಕಾರದ ಎಡೆಗಂ ವತ್ವಂ.

ಅನ್ವಯಂ.—ಪರದೊಳ್ ಸ್ವರಂ ಇರೆ, ಬಿಂದುಗೆ ನತ್ವಮತ್ವಂ ದೊರೆಕೊಳ್ಗುಂ; ಆ ಮತ್ವಕ್ಕೆ ಅರೆಬರ್ ವತ್ವಮಂ ಉಚ್ಚರಿಪರ್; ನಿರವದ್ಯಂ ನಿಜಮಕಾರದ ಎಡೆಗಂ ವತ್ವಂ.

ಟೀಕು.—ಪರದೊಳ್ = ಮುಂದೆ; ಸ್ವರಂ = ಸ್ವರಾಕ್ಷರಂ; ಇರೆ = ಇರೆ; ಬಿಂದುಗೆ = ಸೊನ್ನೆಗೆ; ನತ್ವಮತ್ವಂ = ನಕಾರ ಮಕಾರಂ; ದೊರೆಕೊಳ್ಗುಂ = ಪ್ರಾಪ್ತಿಸುವುದು; ಆ ಮತ್ವಕ್ಕೆ = ಆ ಬಿಂದುವಿಂಗೆ ಬಂದ ಮಕಾರಕ್ಕೆ; ಅರೆಬರ್ = ಕೆಲಂಬರ್; ವತ್ವಮಂ = ವಕಾರಮಂ; ಉಚ್ಚರಿಪರ್ = ಉಚ್ಚರಿಸುವರ್; ನಿರವದ್ಯಂ = ಅವಧಿಯಿಲ್ಲದೆ; ನಿಜಮಕಾರದ = ಬಿಂದುವಿಂಗೆ ಬಂದುದಲ್ಲದ ನಿಜಮಕಾರದ; ಎಡೆಗಂ = ಸ್ಥಾನಕ್ಕೆಯುಂ; ವತ್ವಂ = ವಕಾರಮಪ್ಪುದು.

ವೃತ್ತಿ.—ಸ್ವರಂ ಪರಮಾಗೆ, ಬಿಂದುವಿಂಗೆ ನಕಾರ ಮಕಾರಂಗಳಕ್ಕುಂ; ಆ ಮಕಾರಕ್ಕೊರ್ಮೆ ವಕಾರಮಕ್ಕುಂ. ಸಹಜ ಮಕಾರಕ್ಕಂ ವಕಾರಮಕ್ಕುಂ.

ಪ್ರಯೋಗಂ.—ನಕಾರಕ್ಕೆ—

"ಪೊಲನಱಿಯದ ನೆಲನಱಿಯದ |
ಕೆಲನಱಿಯದ ಮಿಗದ ಮೂಱು ವಿಧವಱಿಯದ . ." || 225 ||

"ಇವಳಾಶೃಂಗಾರಸಾರಂ ಕುಸುಮಶರನೆ ಮೇಣ್ ಮಾಡಿದಂ ಪ್ರೋಲ್ಲಸತ್ಪ- |
ಲ್ಲವಪುಷ್ಪಂ ಮೇಣ್ ಬಸಂತಂ ಬಯಸೆ ಪಡೆದನೆತ್ತಂ ಸುಧಾಸೌಧಮಂ ಸೂ- ||
ಸುವ ಚಂದ್ರಂ ತಾನೆ ಮೇಣ್ ಪುಟ್ಟಿಸಿದನತಿಜಡಂ ಛಾಂದಸಂ ಪದ್ಮಜನ್ನಿ- |
ಕ್ಕುವಮಲ್ಲಂ ಕರ್ತೃತಾನಂದದಿನಿತತಿಶಯಂ ತಾಳ್ದುದೀ ಕನ್ನೆಯಂದಂ" || 226 ||

ಮಕಾರಕ್ಕೆ—

"ಕುಲಮಂ ಚಲಮಂ ವಿದ್ಯಾ- |
ಬಲಮಂ ಶೌರ್ಯಾವಲೇಪಮಂ ಪೊಗೞ್ ನೆಲಂ . ." || 227 ||

"ಆಯಿರ್ದ ಮಾಱ್ಕೆಯೊಳೆ ಪರ- |
ಮ್ಮಾಯುಷ್ಯಾಂತಂಬರಂನಿರಾಕುಳಮಾಗಿ- ||
ಪರ್ಯಿರವಿನ ಜೈನಾಭಿ- |
ಪ್ರಾಯಂಪ್ರಾಯೋಪಗಮನದಿಂ ತೊಱೆಯಿಸಿದಂ" || 228 ||

ವಕಾರಕ್ಕೆ—

". . . . . ಕಣ್ಣಿಂ ಕಾಣೆಂ |
ಕಿವಿಯೊಳ್ ಕೇಳೆಂ ಕಾಣ್ಬಂ- ||
ದವೆಂತು ಕೇಳ್ವಂದವೆಂತು ತಲೆಯಿಲ್ಲದ ನಾಂ" || 229 ||

“. . . . . ಶೌಚಮಣ್ಮು ಪೆ-
ರ್ಮಾತು ಕುಲಂ . . . .” ॥ 230 ॥
“. . . ನಾಸಿಕವಡ್ಡಂ ಬಂದಂದಮನೀಕ್ಷಿಸಿ” ॥ 231 ॥

ನಿಜಮಕಾರದ ವಕಾರಕ್ಕೆ—

ತಾಮರೆ, ತಾವರೆ; ಸಾಮಂತಂ, ಸಾವಂತಂ; ತಿಮಿರ್, ತಿವಿರ್; ತೆಮರ್, ತೆವರ್; ಸಾಮಿ, ಸಾವಿ.

ಸೂತ್ರಂ[1]. ॥ ೧೦೫ ॥

In the Nominative Singular nominal bases terminating in ಅ receive the *Bindu, but all others do not.

ಬಿಂದುವದಂತಕ್ಕುೞಿದೆಡೆ- |
ಗೆಂದುಂ ಪ್ರಥಮೈಕವಚನದೊಳ್ ಲೋಪಮದಂ- ॥
ತಂ ದೊರೆವಡೆದಿದಿರೊಳ್ ಸ್ವರ- |
ಮೊಂದಿರೆ ಪುಲ್ಲಿಂಗದಲ್ಲಿ ನಾಗಮಮಕ್ಕುಂ. ॥ ೧೧೫ ॥

When words with final ಅ are Masculine they insert the augment ನ (ನ್ before a vowel of the (other) terminations of the Singular.

ಪದಚ್ಛೇದಂ.— ಬಿಂದು ಅದಂತಕ್ಕೆ, ಉೞಿದ ಎಡೆಗೆ ಎಂದುಂ — ಪ್ರಥಮೈಕವಚನದೊಳ್ — ಲೋಪಂ; ಅದಂತಂ ದೊರೆವಡೆದು, ಇದಿರೊಳ್ ಸ್ವರಂ ಒಂದಿ ಇರೆ, ಪುಲ್ಲಿಂಗದಲ್ಲಿ ನಾಗಮಂ ಅಕ್ಕುಂ.

---

[1] ಆತೋಽನುಸ್ವಾರಃ ಪ್ರಥಮೈಕವಚನಸ್ಯ. ॥ ಭಾ. ಭೂ. 45. ॥

(ಅಕಾರಾಂತಮಪ್ಪ ಲಿಂಗದತ್ತಣಿಂ ಪರಮಾದ ಪ್ರಥಮೈಕವಚನದ ವಿಭಕ್ತಿಯ ಮಕಾರಕ್ಕೆ ಬಿಂದುವಾಗುವುದು.)

ಅನ್ಯಸ್ಮಾಲ್ಲೋಪಃ ॥ ಭಾ. ಭೂ. 46. ॥

(ಅಕಾರಾಂತವಲ್ಲದುದಱೆಡೆಗೆ ಸ್ವರಾಂತವ್ಯಂಜನಾಂತಂಗಳತ್ತಣಿಂ ಪರಮಾದ ಪ್ರಥಮೈಕವಚನದ ಮಕಾರಕ್ಕೆ ಲೋಪವಾಗುವುದು.)

ಅಕ್ಕುಮನುಸ್ವಾರಮದಂ- |
ತಕ್ಕೆ ಸಮಂತೆಲ್ಲಿಯಾದೊಡಂ ಮತ್ತದಱಿಂ ॥
ಮಿಕ್ಕುವಱೊಳ್ ಲೋಪಂ ತಾ- |
ನಕ್ಕುಂ ಪ್ರಥಮೈಕವಚನಮಂತೊಂದಕ್ಕುಂ ॥ ಶ. ಸ್ಮೃ. 19. ॥

“ಸ್ವರಮಿದಿರೊಳಕಾರಾಂತ- |
ಕ್ಕಿರೆ ನಾಗಮಮಕ್ಕುಮಲ್ಲಿ ಪುಲ್ಲಿಂಗದೊಳ್” ॥ ಶ. ಸ್ಮೃ. 22. ॥

ಅನ್ವಯಂ.— ಪ್ರಥಮೈಕವಚನದೊಳ್ ಅದಂತಕ್ಕೆ ಬಿಂದು, ಉಳಿದೆಡೆಗೆ ಎಂದುಂ ಲೋಪಂ; ಅದಂತಂ ದೊರೆವಡೆದು, ಇದಿರೊಳ್ ಸ್ವರಂ ಒಂದಿರೆ, ಪುಲ್ಲಿಂಗದಲ್ಲಿ ನಾಗಮಂ ಅಕ್ಕುಂ.

ಟೀಕು.— ಪ್ರಥಮೈಕವಚನದೊಳ್ = ಪ್ರಥಮಾವಿಭಕ್ತಿಯ ಏಕವಚನದಲ್ಲಿ; ಅದಂತಕ್ಕೆ = ಅಕಾರಾಂತ ಶಬ್ದಕ್ಕೆ; ಬಿಂದು = ಮಕಾರದ ಸೊನ್ನೆ ಅಪ್ಪುದು; ಉಳಿದೆಡೆಗೆ = ಅಕಾರಾಂತವಲ್ಲದುಳಿದೆಡೆಗೆ; ಎಂದುಂ = ಆವಾಗಲುಂ; ಲೋಪಂ = ಅದರ್ಶನಂ ಅಪ್ಪುದು; ಅದಂತಂ = ಅಕಾರಾಂತಂ; ದೊರೆವಡೆದು = ಪ್ರಸಿದ್ಧಿವಡೆದು; ಇದಿರೊಳ್ = ಮುಂದೆ; ಸ್ವರಂ = ವಿಭಕ್ತಿಸ್ವರಂ; ಒಂದಿರೆ = ಕೂಡಿರೆ; ಪುಲ್ಲಿಂಗದಲ್ಲಿ = ಪುಲ್ಲಿಂಗದಲ್ಲಿ; ನಾಗಮಂ = ನಕಾರಾಗಮಂ; ಅಕ್ಕುಂ = ಅಪ್ಪುದು.

ವೃತ್ತಿ.— ಪ್ರಥಮೈಕವಚನದೊಳಕಾರಾಂತಕ್ಕೆ ಬಿಂದುವಕ್ಕುಂ; ಅಕಾರಾಂತಮಲ್ಲದೆಡೆಯೊಳೆಲ್ಲಂ ಲೋಪಮಕ್ಕುಂ; ಅಕಾರಾಂತಪುಲ್ಲಿಂಗಕ್ಕೆ ಸ್ವರಾದಿ ವಿಭಕ್ತಿ ಪರಮಾಗೆ, ನಕಾರಾಗಮಮಕ್ಕುಂ.

ಪ್ರಯೋಗಂ.— ಬಿಂದುಗೆ—

"ವೇದವಿದಂ ಕಾಲತ್ರಯ |
ವೇದಿ ಬಹುಶ್ರುತನಥರ್ವಕುಶಲಂ ಶುಭವಂ- ||
ಶೋದಯಸುತ್ತಮನಾಶೀ- |
ರ್ವಾದಪರಂ ಪರಹಿತಂ ಪುರೋಹಿತನಕ್ಕುಂ. || 232 ||

ಬಿಂದುಲೋಪಕ್ಕೆ— ಪುಲ್, ಪೊದಱ್, ಗಿಡು, ಬಳ್ಳಿ; ಪುಲಿ, ಕರಡಿ, ಎರಲೆ ಇವು ಮೊದಲಾದುವು.

ಅಕಾರಾಂತಪುಲ್ಲಿಂಗದೊಳ್ ನಕಾರಾಗಮಕ್ಕೆ— ಅವನಂ, ಅವನಿಂ, ಅವನತ್ತಣಿಂ, ಅವನ, ಅವನೊಳ್.

"ಅವನೊಳ್ಳಿದಂ. . . . ." || 233 ||

ಸೂತ್ರಂ[1]. || ೧೦೬ ||

In the Accusative Singular Kanarese bases

ವಿತತನಪುಂಸಕಲಿಂಗ |
ದ್ವಿತೀಯೆಯೊಳ್ ನತ್ವಮತ್ವವಿಧಿ ಮತ್ತಮೆ ಸಂ- ||

1) ನಪುಂಸಕಲಿಂಗೇ ದಃ || || ಭಾ. ಭೂ. 51. ||

(ಅಕಾರಾಂತವಾಗಿರುವ ನಪುಂಸಕಲಿಂಗದಲ್ಲಿ ತೃತೀಯಾವಿಭಕ್ತಿ ಮೊದಲಾದುವುಗಳ ಸ್ವರದ ಆದಿಯಲ್ಲಿ ದಕಾರಾಗಮವಾಗುವುದು.)

with final ಅ, when Neuters, affix either ನ್+ಅಂ (ನಂ) or ಮ್+ಅಂ (ಮಂ);

ಗತಿವಡೆಗುಂ ಸಂಸ್ಕೃತದೊಳ್ |
ತೃತೀಯೆ ಮೊದಲಾದುವರ್ಕೆ ದಾಗಮಮಕ್ಕುಂ.
|| ೧೧೬ ||

but when Saṁskṛita Neuters, only ಮ್+ಅಂ (ಮಂ). — In the Instrumental, Ablative, Genitive and Locative Singular their augment is ದ (ದ್).

ಪದಚ್ಛೇದಂ. — ವಿತತನಪುಂಸಕಲಿಂಗದ್ವಿತೀಯೆಯೊಳ್ ನತ್ವ—ಮತ್ವ—ವಿಧಿ; ಮತ್ವಮೆ ಸಂಗತಿವಡೆಗುಂ ಸಂಸ್ಕೃತದೊಳ್; ತೃತೀಯೆ ಮೊದಲಾದುವರ್ಕೆ ದಾಗಮಮಂ ಅಕ್ಕುಂ.

ಅನ್ವಯಂ. — ವಿತತನಪುಂಸಕಲಿಂಗದ್ವಿತೀಯೆಯೊಳ್ ನತ್ವಮತ್ವವಿಧಿ; ಸಂಸ್ಕೃತದೊಳ್ ಮತ್ವಮೆ ಸಂಗತಿವಡೆಗುಂ; ತೃತೀಯೆ ಮೊದಲಾದುವರ್ಕೆ ದಾಗಮಂ ಅಕ್ಕುಂ.

ಟೀಕು. — ಅದಂತಕ್ಕೆಂಬುದನುವರ್ತನೆ — ವಿತತ = ನಾನಾ ಪ್ರಕಾರವಾದ; ನಪುಂಸಕಲಿಂಗ = ನಪುಂಸಕಲಿಂಗದ; ದ್ವಿತೀಯೆಯೊಳ್ = ದ್ವಿತೀಯಾವಿಭಕ್ತಿಯಲ್ಲಿ; ನತ್ವಮತ್ವವಿಧಿ = ನಕಾರ ಮಕಾರಂಗಳ ವಿಧಿ ಅಪ್ಪುದು; ಸಂಸ್ಕೃತದೊಳ್ = ಸಂಸ್ಕೃತಶಬ್ದದಲ್ಲಿ; ಮತ್ವಮೆ = ಮಕಾರವೆ; ಸಂಗತಿವಡೆಗುಂ = ಸಂಬಂಧವಾಗುವುದು; ತೃತೀಯೆ ಮೊದಲಾದುವರ್ಕೆ = ತೃತೀಯಾವಿಭಕ್ತಿ ಮೊದಲಾದ ಸ್ವರಾದಿವಿಭಕ್ತಿಗೆ; ದಾಗಮಂ = ದಕಾರಾಗಮಂ; ಅಕ್ಕುಂ = ಅಪ್ಪುದು.

ವೃತ್ತಿ.—ಕನ್ನಡದೊಳಕಾರಾಂತನಪುಂಸಕಲಿಂಗಕ್ಕೆ ಪರಮಾದ ದ್ವಿತೀಯೆಗೆ ನಕಾರ ಮಕಾರಂಗಳಪ್ಪುವು; ಸಂಸ್ಕೃತದೊಳ್ ಮಕಾರಮೆ ಅಕ್ಕುಂ; ತೃತೀಯೆ ಮೊದಲಾದ ವಿಭಕ್ತಿಪರಮಾಗೆ, ದಕಾರಾಗಮಮಕ್ಕುಂ.

ಪ್ರಯೋಗಂ. — ನಕಾರಕ್ಕೆ— ಪೊಲನಂ, ನೆಲನಂ, ಬಿಲನಂ, ಕೆಲನಂ.

ಮತ್ವಕ್ಕೆ—ಬೆಟ್ಟಮಂ, ಘಟ್ಟಮಂ, ಹಳ್ಳಮಂ, ಕೊಳ್ಳಮಂ, ಬಳ್ಳಮಂ, ಕೊಳಗಮಂ.

ವಿಭಾಷಯಾಮಿ ವ್ನೌ ॥ ॥ ಭಾ. ಭೂ. 52. ॥

(ಅಕಾರಾಂತದ ನಪುಂಸಕಲಿಂಗದ ಮುಂದೆ ದ್ವಿತೀಯೈಕವಚನದ 'ಅಮ್' ಬರಲು ಆ ಅಮ್ ಎಂಬುದರ ಆದಿಯಲ್ಲಿ ಮಕಾರವು ವಿಕಲ್ಪದಿಂದ ಬರುವುದು.)

"ಎರಡನೆಯ ವಿಭಕ್ತಿಯ ನ- |
ತ್ತಿರಲಿತ್ತು ನಪುಂಸಕಕ್ಕೆ ಮಾಗಮಮಕ್ಕುಂ" ॥ ಶ. ಸ್ಮೃ. 22. ॥

ಮತ್ತಾ ದ್ವಿತೀಯೆಗಂ ಮನ- |
ಮೊತ್ತರಿಸಿಕುರ್ಗಂ ವಿಭಾಷೆಯಿಂ ನಿಧನದೊಳಂ." ॥ ಶ. ಸ್ಮೃ. 23. ॥

ಸಂಸ್ಕೃತ ಮತ್ವಕ್ಕೆ—

"ಕುಲಮಂ ಚಲಮಂ ವಿದ್ಯಾ- |
ಬಲಮಂ ಶೌರ್ಯಾವಲೇಪಮಂ ಪೊಗೞೆ ನೆಲ- |
ನ್ನೆಲಕೆಲ್ಲಂನೆಗಟ್ಟಿದಂದ್ವಿ- |
ಟ್ಕುಲಕುಲನಗದಳನಪಟುಪವಿಪ್ರತಿಮಭುಜಂ" || 234 ||

"ನೂಂಕಿದನೆಂಬೊಂದರ್ಥದೊಳರ್ಧಚಂದ್ರನನಿತ್ತನೆಂದು," ನಕಾರಮುಪಚಾರಮಾಯ್ತು.

ದಕಾರಾಗಮಕ್ಕೆ— ಮನದಿಂ, ಮನದತ್ತಣಿಂ, ಮನದ, ಮನದೊಳ್.

"ಮನದಿಂ ಬೇಗಂ ಪುಟ್ಟಿದ- |
ನನೂನಫಲಕುಸುಮಪಲ್ಲವಭ್ರಾಜಿತಮಂ ||
ಬನದೊಳಗೆ ಪವನನಂದನ- |
ನನಿಂದ್ಯಗುಣನೆಸೆವಶೋಕಧಾತ್ರೀರುಹಮಂ" || 235 ||

ಸೂತ್ರಂ[1]. || ೧೦೭ ||

For the Instrumental (here Singular) the terminations are: ಇಮ್, ಇಮಿಮ್ and ಇಂದೆ. When a word ends in ಅ and is Neuter, the termination ಎ may be used (after the said augment).

ಸಮನಿಸಿ ತೋಱುಸುಗುಮಿವಿಂ- |
ದಮಿಂದೆಯೆಂಬಿವು ತೃತೀಯೆಯೊಳ್ ಮತ್ತಮೆಕಾ- ||
ರಮದೊಂದೆ ಮೇಣ್ ತೃತೀಯೆಗೆ |
ಸಮುಚಿತಮಾದೇಶಮಱಿದು ಕೊಳ್ಗೀ ಕ್ರಮದಿಂ.
|| ೧೧೭ ||

---

1) ಅಂತೇ ದಂ ತೃತೀಯಾಯಾಃ || ಭಾ. ಭೂ. 60. ||
(ತೃತೀಯಾ ವಿಭಕ್ತಿಯ ಕಡೆಯಲ್ಲಿ ಪದದ ಮುಂದೆ ದಂ ಬರುವುದು.)
ಏದಂತತಾ ಚ || ಭಾ. ಭೂ. 61. ||
(ಕೆಲವೆಡೆಯಲ್ಲಿ ಏಕಾರವು ಬರುವುದು.)

ಪತ್ತಿ ನಿವಿರ್ದಮರ್ದು ನಿಲ್ಕುಮು- |
ದಾತ್ತತೆ ಮಿಗೆ ದಂ ತೃತೀಯೆಗೇದಂತಂ ಮೇಣ್ || ಶ. ಸ್ಮೃ. 23. ||

ಪದಚ್ಛೇದಂ.— ಸಮನಿಸಿ ತೋಱಿಸುಗುಂ ಇಮ್ ಇಂದಮ್ ಇಂದೆ ಎಂಬ ಇವು ತೃತೀಯೆಯೊಳ್; ಮತ್ತಂ ಎಕಾರಂ ಅದು ಒಂದೆ ಮೇಣ್ ತೃತೀಯೆಗೆ ಸಮುಚಿತಂ ಆದೇಶಂ: ಅಱಿದುಕೊಳ್ಗೆ ಈ ಕ್ರಮದಿಂ.

ಅನ್ವಯಂ.— ತೃತೀಯೆಯೊಳ್ ಇಮ್ ಇಂದಮ್ ಇಂದೆ ಎಂಬಿವು ಸಮನಿಸಿ ತೋಱಿಸುಗುಂ; ಮತ್ತಂ ಎಕಾರಂ ಅದು ಒಂದೆ ಮೇಣ್ ತೃತೀಯೆಗೆ ಸಮುಚಿತಂ ಆದೇಶಂ; ಈ ಕ್ರಮದಿಂ ಅಱಿದುಕೊಳ್ಗೆ.

ಟೀಕು.— ತೃತೀಯೆಯೊಳ್ = ತೃತೀಯಾವಿಭಕ್ತಿಯಲ್ಲಿ; ಇಮ್ = ಇಮ್ ಎಂದು; ಇಂದಮ್ = ಇಂದಮ್ ಎಂದು; ಇಂದೆ = ಇಂದೆ ಎಂದು; ಎಂಬಿವು = ಎಂಬೀ ಮೂಱು ರೂಪಂಗಳು; ಸಮನಿಸಿ = ಪ್ರಾಪ್ತಿಸಿ; ತೋಱಿಸುಗುಂ = ಕಾಣಿಸುವುವು; ಮತ್ತಂ = ಬಳಿಕಂ; ಎಕಾರಂ = ಎತ್ವಂ; ಅದೊಂದೆ = ಅದು ತಾನೊಂದೆ; ಮೇಣ್ = ವಿಕಲ್ಪದಿಂದೆ; ತೃತೀಯೆಗೆ = ತೃತೀಯಾ ವಿಭಕ್ತಿಗೆ; ಸಮುಚಿತಂ = ಉಚಿತವಾದ; ಆದೇಶಂ = ಆದೇಶವೆಂದು; ಈ ಕ್ರಮದಿಂ = ಈ ರೀತಿಯಿಂದೆ; ಅಱಿದುಕೊಳ್ಗೆ = ತಿಳಿದುಕೊಳ್ಗೆ.

ವಿಚಾರಂ.— ಅಕಾರಾಂತನಪುಂಸಕಲಿಂಗದಲ್ಲಿ ತೃತೀಯಾವಿಭಕ್ತಿಯ ಮೂಱು ರೂಪಿಂಗೆ ವಿಕಲ್ಪದಿಂದೆ ಎಕಾರಾದೇಶವಾಗುವುದೆಂದಱಿವುದು.

ವೃತ್ತಿ.— ಇಮ್, ಇಂದಮ್, ಇಂದೆ, ಎಂದು ತೃತೀಯೆ ಮೂದೆಱನಾಗಿರ್ಪುದು; ಇವರ್ಕಾದೇಶಮಾಗಿ ಬೇಱೊಂದೆಕಾರಮಪ್ಪುದು.

ಪ್ರಯೋಗಂ.— ಇಮಾದಿಗಳ್ಗೆ—

"ಗರುಡಿಯ ಬಳಸಿಂ ಬಿಜ್ಜೋ- |
ದರಗಳದಿಂದಾನೆ ಹೋರಲಿಕ್ಕಿದ ತಱಿಯಿಂ || 236 ||

"ತುರಗದ ವಾಹಳಿಯಿಂ . . . ." || 237 ||

"ಭಯದಿಂದಂ ಮುಳಿಸಿಂದಂ
ಸ್ಮಯದಿಂದಂ ರಾಗದಿಂದಂ . . . ." || 238 ||

ಭಯದಿಂದೆ, ರಾಗದಿಂದೆ

"ತೊಡೆ ಸಂಕಲೆಯಿಕ್ಕಿದವೋಲ್ |
ಕುಡಿಯಳ್ಳೆಗಳಿಂದೆ ಸುರಿದುವಿರ್ಕೆಲಕೆ ಕರುಳ್" || 239 ||

ಆದೇಶದೆಕಾರಕ್ಕೆ—ಕ್ರಮದೆ, ನಯದೆ, ಭಯದೆ.

"ಬಗೆದಂತಾಗೆ ಸುರೇಂದ್ರರಿಂ ಕ್ರಮದೆ ಕಲ್ಯಾಣದ್ವಯಂ ಜೈನದೀ- |
ಕ್ಷೆಗೆ ಪೂಣ್ದು . . . ." || 240 ||

ಸೂತ್ರಂ.[1] || ೧೦೮ ||

In the Instrumental (and Dative, Ablative, Genitive, Locative) Singular nouns ending in ಉ, ಊ, ಋ, ೠ, ಓ, ಔ, some (Adverbs) ending in ಏ insert the augment ಇನ್ before the terminations. Nouns, however, that receive a euphonic ವ (ವ್), use, the augment ಇನ್ optionally, as do also Kanarese Nouns ending in consonants or final ಉ.

ಏದಿತಮುವರ್ಣಋವರ್ಣೌ- |
ತ್ವದೊಳಂ ಹ್ರಸ್ವೈತ್ವದೊಳಮಿನಾಗಮವಿಧಿ ತ- ||
ಪ್ಪದು ವತ್ವಸಂಧಿಯೆಡೆಯೊಳ- |
ಮುದಿತತೃತೀಯೆಯೊಳಮಱಿ ವಿಕಲ್ಪಸ್ಥಿತಿಯಿಂ. || ೧೧೮ ||

ಪದಚ್ಛೇದಂ. — ಏದಿತಂ ಉವರ್ಣಋವರ್ಣೌತ್ವದೊಳಂ ಹ್ರಸ್ವೈತ್ವದೊಳಂ ಇನಾಗಮವಿಧಿ ತಪ್ಪದು, ವತ್ವಸಂಧಿಯ ಎಡೆಯೊಳಂ ಉದಿತತೃತೀಯೆಯೊಳಂ, ಅಱಿ, ವಿಕಲ್ಪಸ್ಥಿತಿಯಿಂ.

ಅನ್ವಯಂ. — ಉದಿತತೃತೀಯೆಯೊಳಂ ಉವರ್ಣಋವರ್ಣೌತ್ವದೊಳಂ ಹ್ರಸ್ವೈತ್ವದೊಳಂ ಏದಿತಂ ಇನಾಗಮವಿಧಿ ತಪ್ಪದು; ವತ್ವಸಂಧಿಯ ಎಡೆಯೊಳಂ ವಿಕಲ್ಪಸ್ಥಿತಿಯಿಂ. ಅಱಿ!

ಟೀಕು. — ಉದಿತ = ಹುಟ್ಟಲ್ಪಟ್ಟ; ತೃತೀಯೆಯೊಳಂ = ತೃತೀಯಾವಿಭಕ್ತಿಯಲ್ಲಿ; ಉವರ್ಣ = ಉ ಊ ಎಂಬ ಸವರ್ಣದಲ್ಲಿ; ಋವರ್ಣ = ಋ ೠ ಎಂಬ ಸವರ್ಣದಲ್ಲಿ; ಔತ್ವದೊಳಂ = ಔಕಾರ ಓಕಾರಂಗಳಲ್ಲಿಯುಂ; ಹ್ರಸ್ವ = ಹ್ರಸ್ವದ; ಐತ್ವದೊಳಂ = ಐಕಾರದಲ್ಲಿಯುಂ; ಏದಿತಂ = ಪ್ರಸಿದ್ಧವಾದ; ಇನಾಗಮವಿಧಿ = ಇನಾಗಮದ ವಿಧಿ; ತಪ್ಪದು = ತೊಲಗದು; ವತ್ವಸಂಧಿಯೆಡೆಯೊಳಂ = ವತ್ವಸಂಧಿಯ ಸ್ಥಾನದಲ್ಲಿಯುಂ; ವಿಕಲ್ಪಸ್ಥಿತಿಯಿಂ = ವಿಕಲ್ಪದ ಸ್ಥಿತಿಯಿಂದೆ; ಅಱಿ = ತಿಳಿ.

---

[1] ಉದಂತಾತ್ತೃತೀಯಾದಿಷ್ವಿನಾಗಮೋ ಬಹುಳಂ || ಶಾ. ಭೂ. 54. ||

(ಉಕಾರಾಂತದ ಲಿಂಗದತ್ತಣಿಂ ತೃತೀಯೆ ಮೊದಲಾದ ವಿಭಕ್ತಿಗಳ್ ಪರವಾಗಲು ವಿಕಲ್ಪದಿಂದ ಇನಾಗಮವು ಬರುವುದು.)

ಅಕ್ಕುಂ ಬಹುಳಮುಕಾರಾಂ- |
ತಕ್ಕೆ ತೃತೀಯಾದಿಗಳೊಳಿನಾಗಮುಮಱುವೆಂ ||
ಪಕ್ಕುಮವು ಸರ್ವನಾಮದ |
ಪಕ್ಕದೊಳಿರೆ ಮೊದಲೊಳಿರ್ದುಕಾರದ ನೆಲೆಯೊಳ್ || ಶ. ಸ್ಮೃ. 24. ||

ವೃತ್ತಿ. — ಪ್ರಸಿದ್ಧಮಪ್ಪ ವರ್ಣದೊಳಂ ಋವರ್ಣದೊಳಂ ಔಕಾರವೋಕಾರದೊಳಂ ಹ್ರಸ್ವಮಪ್ಪೆಕಾರದೊಳಂ ತೃತೀಯೆ ಮೊದಲಾದುವಱೊಳಿನಾಗಮಮಕ್ಕುಂ; ತೃತೀಯೆಯೊಳಂ ವತ್ವಸಂಧಿಯೆಡೆಯೊಳಮಿನಾಗಮಮಂ ವಿಕಲ್ಪದಿಂದಕ್ಕುಂ.

ಪ್ರಯೋಗಂ. — ಉವಾದಿಗಳ್ಗೆ —

"ತಳಿರ್ವಾಸಿನಿಂದೆ ಸೆಜ್ಜೆಗೇತರ್ಕೆ ಕೊಂಡುಪೋದರ್ ವಿರಹಾಕುಲೆಯಂ" || 241 ||

"ಪೂವಿನ ಬಿಲ್ಲಕೊಪ್ಪನೊದೆದೇಱಿಸಿ ತಾವರೆ ನೂಲ ನಾರಿಯಂ
ಜೇವೊಡೆಗೆಯ್ದು . . . ." || 242 ||

ಪಿತೃವಿನ, ಋೂವಿನ, ಗ್ಲಾವಿನ, ಗೋವಿನ, ನಿನ್ನಿನ, ಮೊನ್ನಿನ.

"ಮತ್ತಿನ ಮತ್ತಿನ ಬೇರ್ಗಳ |
ಬಿತ್ತುಗಳಾವೆಡೆಯೊಳೇನೊ ಸುಜನೋತ್ತಂಸಾ" || 243 ||

ವ್ಯಂಜನದೊಳುಂಟು — ಈ ಸೂಱಿನ.

ತೃತೀಯೆಯೊಳ್ ವಿಕಲ್ಪಕ್ಕೆ — ಮಾತಿಂ, ಮಾತಿನಿಂ; ಕಡುಪಿಂ, ಕಡುಪಿನಿಂ.

ವತ್ವಸಂಧಿಯೊಳ್ ವಿಕಲ್ಪಕ್ಕೆ — ಮಡುವಿಂ, ಮಡುವಿನಿಂ; ಮಡುಗೆ, ಮಡುವಿಂಗೆ; ಮಡುವ, ಮಡುವಿನ; ಗುರುವಿಂ, ಗುರುವಿನಿಂ; ಗುರುಗೆ, ಗುರುವಿಂಗೆ; ಮನುವಿಂ, ಮನುವಿನಿಂ; ಗುರುವ, ಗುರುವಿನ; ಗುರುವೊಳ್, ಗುರುವಿನೊಳ್.

"ಮನುವಿನ ಮಾರ್ಗಂ ಸುರಗುರು- |
ವಿನಱಿವು ಪವಮಾನಸೂನುವೊಂದಾಯತಿ ಪೆಂ- ||
ಪಿನೊಳೆಸೆವ ಕರ್ಣನೊಳ್ನುಡಿ |
ತನಗದು ನಿಜಮಾಗೆ ನೆಗಟ್ದಿನಾ ವಿಭುವಿಳೆಯೊಳ್" || 244 ||

ಸೂತ್ರಂ. || ೧೦೯ ||

But the insertion of ಇನ್ takes place only in a very few

ಪಗಲಿರುಳೆಂಬಲ್ಲಿ ವಿಕ- |
ಲ್ಪಗತಿಯಿನಾ ವ್ಯಂಜನಾಂತದೊಳೆ ಪೇಳ್ವರ್ ಸೂ- ||

instances with words ending in consonants; it is optional with ಪಗಲ್ and ಇರುಳ್, necessary with ಈಗಳ್ and ಆಗಳ್.

ರಿಗಳಾಗಳೀಗಳೆಂಬೆಡೆ- |
ಗಗಲ್ಚರುಳಿದೆಡೆಗಿನಾಗಮಂ ದೋಷಕರಂ || ೧೧೯ ||

ಪದಚ್ಛೇದಂ.—ಪಗಲ್ ಇರುಳ್ ಎಂಬಲ್ಲಿ ವಿಕಲ್ಪಗತಿಯಿಂ ಆ ವ್ಯಂಜನಾಂತದೊಳ್ ಪೇಳ್ದರ್ ಸೂರಿಗಳ್; ಆಗಳ್ ಈಗಳ್ ಎಂಬ ಎಡೆಗೆ ಅಗಲ್ಚರ್. ಉಳಿದ ಎಡೆಗೆ ಇನಾಗಮಂ ದೋಷಕರಂ.

ಅನ್ವಯಂ.—ಸೂರಿಗಳ್ ಆ ವ್ಯಂಜನಾಂತದೊಳ್ ಪಗಲ್ ಇರುಳ್ ಎಂಬಲ್ಲಿ ವಿಕಲ್ಪ ಗತಿಯಿಂ ಪೇಳ್ದರ್; ಆಗಳ್ ಈಗಳ್ ಎಂಬೆಡೆಗೆ ಅಗಲ್ಚರ್: ಉಳಿದೆಡೆಗೆ ಇನಾಗಮಂ ದೋಷಕರಂ.

ಟೀಕು.— ಸೂರಿಗಳ್ = ವಿದ್ವಾಂಸರ್; ಆ ವ್ಯಂಜನಾಂತದೊಳ್ = ಆ ಪ್ರಸಿದ್ಧವಾದ ವ್ಯಂಜನಾಂತಶಬ್ದಂಗಳಲ್ಲಿಯೆ; ಪಗಲ್ = ಪಗಲೆಂದು; ಇರುಳ್ = ಇರುಳೆಂದು; ಎಂಬಲ್ಲಿ = ಎಂಬ ಶಬ್ದಂಗಳಲ್ಲಿ; ವಿಕಲ್ಪಗತಿಯಿಂ = ವಿಕಲ್ಪದ ಗತಿಯಿಂದೆ; ಪೇಳ್ದರ್ = ಇನಾಗಮುಮಂ ಪೇಳ್ವರ್; ಆಗಳ್ = ಆಗಳೆಂದು; ಈಗಳ್ = ಈಗಳೆಂದು; ಎಂಬೆಡೆಗೆ = ಎಂಬ ಸ್ಥಾನಕ್ಕೆ; ಅಗಲ್ಚರ್ = ಇನಾಗಮುಮಂ ತೊಲಗಿಸರ್; ಉಳಿದೆಡೆಗೆ = ಮಿಕ್ಕ ವ್ಯಂಜನಾಂತಸ್ಥಾನಕ್ಕೆ; ಇನಾಗಮಂ = ಇನ್ ಎಂಬಾಗಮಂ; ದೋಷಕರಂ = ದೋಷಕರವಪ್ಪುದು.

ವೃತ್ತಿ.—ಪಗಲಿರುಳೆಂಬ ವ್ಯಂಜನಾಂತಶಬ್ದಂಗಳೊಳಿನಾಗಮಂ ವಿಕಲ್ಪದಿನಪ್ಪುದು; ಆಗಳೀಗಳೆಂಬ ವ್ಯಂಜನಾಂತದೊಳಿನಾಗಮಂ ನಿತ್ಯಂ. ಮಿಕ್ಕೆಡೆಯೊಳೆಲ್ಲಂ ದೋಷಂ.

ಪ್ರಯೋಗಂ.—ವಿಕಲ್ಪಕ್ಕೆ—ಪಗಲ, ಪಗಲಿನ; ಇರುಳ, ಇರುಳಿನ.

"ಪಗಲಂತಿರ್ದಚ್ಚವೆಳ್ದಿಂಗಳನಿನಕಿರಣಶ್ರೇಣಿಗೆತ್ತಾಗಳ್ . . . ." || 245 ||

"ಪಗಲಿನ ರವಿಕಿರಣಂಗಳ್ |
ಮಗುಳ್ದಿಗಳ್ . . . ." || 246 ||

"ಇರುಳ ಸರೋಜವಾದುದರಿರಾಯರ ಸಂಸಾರಂ" || 247 ||

"ಇರುಳಿನ ಚಕ್ರಾಹ್ವಯದ ವೋಲಿರ್ದಮಂ ಸುಖಂಬಡೆದಪನೆ" || 248 ||

ನಿತ್ಯಕ್ಕೆ—

"ಅಗಳಿನ ಕಜ್ಜಮನೇಗಮೆ ಗೆಯ್ದಪುದೆಂದು. . . ." || 249 ||

"ಆವ ರೀತಿ ಪೇೞಿಂದೊಡೆ ಬಯ್ತರೀಗಳಿನ ದೆಸೆಗೆವಿಟ್ಟಿ ಮಹಾಕವೀಶ್ವರರ್" || 250 ||

ದೋಷಕ್ಕೆ—ಬೆಮರಿನ, ಮಣಲಿನ, ಮುಗಿಲಿನ; ಇವಱಂತೆ ಮಿಕ್ಕುವಂ ನೋಡಿಕೊಳ್ವುದು.

ಸೂತ್ರಂ. || ೧೧೦ ||

In the Instrumental, Genitive and Locative (Singular and Plural, Neuter Gender) Verbal nominal bases, Pronouns, Adjectives, Numerals and words denoting Quantity (ಪವಣ್). when ending in ಉ insert ಅಱ್. Words denoting Direction (ದಿಗ್ವಾಚಿ) insert ಅಣ್ in the Instrumental Singular, etc.

ಜನಿಯಿಪುದುದಂತಕೃತ್ಸ- |
ರ್ವನಾಮಗುಣವಚನಸಂಖ್ಯೆಗಳ್ಗೆ ಪವಣ್ಗಱ್- ||
ಏನಮಱ್ಕಾರಂ ದಿಗ್ವಾ- |
ಚಿ ನಿಲೆ ತೃತೀಯಾದಿಗಣ್ಪ್ರಯೋಗಿಸಪಡೆಗುಂ ||೧೨೦||

ಪದಚ್ಛೇದಂ.—ಜನಿಯಿಪುದು ಉದಂತಕೃತ್—ಸರ್ವನಾಮ—ಗುಣವಚನ—ಸಂಖ್ಯೆಗಳ್ಗೆ ಪವಣ್ಗೆ ಅಱ್ಎನಂ ಅಱ್ಕಾರಂ; ದಿಗ್ವಾಚಿ ನಿಲೆ, ತೃತೀಯಾದಿಗೆ ಅಣ್ ಪ್ರಯೋಗಿಸಪಡೆಗುಂ.

ಅನ್ವಯಂ.—ಉದಂತಕೃತ್ಸರ್ವನಾಮಗುಣವಚನಸಂಖ್ಯೆಗಳ್ಗೆ ಪವಣ್ಗೆ ಅಱ್ಎನಂ ತೃತೀಯಾದಿಗೆ ಅಱ್ಕಾರಂ ಜನಿಯಿಪುದು; ದಿಗ್ವಾಚಿ ನಿಲೆ, ಅಣ್ ಪ್ರಯೋಗಿಸಪಡೆಗುಂ.

ಟೀಕು.—ಉದಂತಕೃತ್ = ಉಕಾರಾಂತಕೃತ್ತುಗಳ್ಗೆ; ಸರ್ವನಾಮ = ಸರ್ವನಾಮಂಗಳ್ಗೆ; ಗುಣವಚನ = ಗುಣವಚನಂಗಳ್ಗೆ; ಸಂಖ್ಯೆಗಳ್ಗೆ = ಸಂಖ್ಯಾವಾಚಿಗಳ್ಗೆ; ಪವಣ್ಗೆ = ಪ್ರಮಾಣವಾಚಿಗಳ್ಗೆ; ಅಱ್ಎನಂ = ತಿಳಿವುತ್ತಿರೆ; ತೃತೀಯಾದಿಗೆ = ತೃತೀಯಾವಿಭಕ್ತಿ ಮೊದಲಾದುವರ್ಕೆ; ಅಱ್ಕಾರಂ = ಅಱ್ ಎಂಬಾಗಮಂ; ಜನಿಯಿಪುದು = ಹುಟ್ಟುವುದು; ದಿಗ್ವಾಚಿ = ದಿಕ್ಕಂ ಪೇಳ್ವ ಶಬ್ದಂಗಳ್; ನಿಲೆ = ಇರೆ; ಅಣ್ = ಅಣೆಂಬಾಗಮಂ; ಪ್ರಯೋಗಿಸಪಡೆಗುಂ = ಪ್ರಯೋಗಿಸಲ್ಪಡುವುದು.

ವೃತ್ತಿ.—ಉಕಾರಾಂತಮಪ್ಪ ಕೃತ್ತಿಂಗಂ ಸರ್ವನಾಮಕ್ಕಂ ಗುಣವಚನಕ್ಕಂ ಸಂಖ್ಯೆಗಂ ಪವಣ್ಗಂ ತೃತೀಯೆ ಮೊದಲಾದುದಱೊಳಱಾಗಮಂ ಪುಟ್ಟುಗುಂ; ದಿಗ್ವಾಚಕದೊಳಂತೆ ಅಣಾಗಮಮುಮಕ್ಕುಂ.

ಪ್ರಯೋಗಂ.— ಕೃತ್ತಿಂಗೆ— ಮಾಡಿದುದಱಿಂ, ಕೂಡಿದುದಱಿಂ, ನೋಡಿದುದಱಿಂ, ಉಣ್ಬುದರ್ಕೆ.

ಸರ್ವನಾಮಕ್ಕೆ— ಅದಱಲ್ಲಿ, "ಪೆಱವರ ಧರ್ಮಂಗಳಂ," "ಪೆಱವಱೊಳ್." ಅದಱಿನೆಂಬರ್ಥದೊಳ್ ಅಸ್ತಱಿನೆಂದೊಂದು ಶಬ್ದಮುಂಟು.

ಗುಣವಚನಕ್ಕೆ—

"ಕಿಱಿದಱೊಳೆ ಪಿರಿದುವರ್ಥಮ- |
ನಱಿಪಲ್ ನೆಱೆವಾತನಾತನಿಂ ಜಾಣಂ." ॥ 251 ॥
ಗುಣವಚನಮಲ್ಲದಲ್ಲಿಯುಂ ಅಱಾಕಾರಂ ಒರ್ಮೆ ಉಂಟು |
"ಮೇಲುದಱಿ ಸೆರಂಗನೋಸರಿಸುವಂತಿರೆ" ॥ 252 ॥

ಸಂಖ್ಯೆಗೆ— ಮೂಱಱಿಂ, ನಾಲ್ಕಱಿಂ, ಎಯ್ದಱಿಂ.

ಪವಣ್ಗೆ— ಅನಿತಱಿಂ, ಇನಿತಱಿಂ, ಎನಿತಱಿಂ, ಎಲ್ಲವಱಿಂ.

ದಿಗ್ವಾಚಿಯ ಅಣ್ಗೆ— ಮೂಡಣ, ತೆಂಕಣ, ಪಡುವಣ ಇತ್ಯಾದಿ. ಮೂಡಣಿಂ, ತೆಂಕಣಿಂ, ಪಡುವಣಿಂ, ಬಡಗಣಿಂ, ಮೇಗಣಿಂ, ಕೆಳಗಣಿಂ, ನಡುವಣಿಂ, ಕಡೆಯಣಿಂ, ಅತ್ತಣಿಂ, ಇತ್ತಣಿಂ, ಎತ್ತಣಿಂ, ಮುಂದಣಿಂ, ಪಿಂದಣಿಂ, ಮುಂತಣಿಂ, ಪಿಂತಣಿಂ, ಒಳಗಣಿಂ, ಪೊಱಗಣಿಂ, ಕಡೆಯಣಿಂ.

ನಡುವೆಂಬುದು ಶರೀರಮಂ ಕುಱಿತು ದಿಗ್ವಾಚಕಮಲ್ತು; ಮಧ್ಯಮಂ ಕುಱಿತು ದಿಗ್ವಾಚಕಂ. ಎಡೆಯೆಂಬುದು ತೆಱಪಂ ಪೇೞ್ವಲ್ಲಿ ದಿಗ್ವಾಚಕಂ; ಆವೆಡೆಯಣಿನೆಂದಣ್ಪತ್ತುವುದು.

ಸೂತ್ರಂ. ॥ ೧೧೧ ॥

In forming a Masculine base from words of Direction which have inserted ಅಣ್ the augment ಅ (Nom. ಅಂ) is joined; in the others the augment is ದ (Nom. ದಂ.)

ಪುರುಷಪರಮಾದೊಡತ್ವಂ |
ದೊರೆಕೊಳ್ಗುಮದಣ್ತಗುಳ್ದ ದಿಗ್ವಾಚಕಮೊಳ್ ॥
ಪರದಿಗ್ವಾಚಕದೊಳ್ಸಂ- |
ಚರಿಸುವುದಾ ತೆಱದೆ ದತ್ವವಿಧಿ ಶಾಬ್ದಿಕರಿಂ. ॥ ೧೨೧ ॥

ಪದಚ್ಛೇದಂ.— ಪುರುಷಪರಂ ಆದೊಡೆ, ಅತ್ವಂ ದೊರೆಕೊಳ್ಗುಂ ಅದು, ಅಣ್ ತಗುಳ್ದ ದಿಗ್ವಾಚಕದೊಳ್. ಪರದಿಗ್ವಾಚಕದೊಳ್ ಸಂಚರಿಸುವುದು ಆ ತೆಱದೆ ದತ್ವವಿಧಿ ಶಾಬ್ದಿಕರಿಂ.

ಅನ್ವಯಂ.—ಅಣ್ಣುಗುಳ್ಳ ದಿಗ್ವಾಚಕದೊಳ್ ಪುರುಷಪರಂ ಆದೊಡೆ, ಅತ್ವಂ ಅದು ದೊರೆಕೊಳ್ಗುಂ. ಪರದಿಗ್ವಾಚಕದೊಳ್ ಆ ತೆಱದೆ ದತ್ವವಿಧಿ ಶಾಬ್ದಿಕರಿಂ ಸಂಚರಿಸುವುದು.

ಟೀಕು.—ಅಣ್ಣುಗುಳ್ಳ ದಿಗ್ವಾಚಕದೊಳ್ = ಅಣಾಗಮಂ ಪತ್ತಿದ ದಿಗ್ವಾಚಕಂಗಳಲ್ಲಿ; ಪುರುಷಪರಂ = ಪುಲ್ಲಿಂಗಪರಂ; ಆದೊಡೆ = ಆಗೆ; ಅತ್ವಂ = ಅಕಾರಂ; ಅದು = ಅದು; ದೊರೆಕೊಳ್ಗುಂ = ಪ್ರಾಪ್ತಿಸುವುದು; ಪರದಿಗ್ವಾಚಕದೊಳ್ = ಅಣ್ಪತ್ತದ ಮಿಕ್ಕ ದಿಗ್ವಾಚಕಂಗಳಲ್ಲಿ; ಆ ತೆಱದೆ = ಆ ರೀತಿಯಿಂದೆ; ದತ್ವವಿಧಿ = ದಕಾರದ ವಿಧಿ; ಶಾಬ್ದಿಕರಿಂ = ಶಬ್ದಜ್ಞರಿಂದೆ; ಸಂಚರಿಸುವುದು = ವರ್ತಿಸುವದು.

ವೃತ್ತಿ.—ಅಣ್‌ಪತ್ತಿದ ದಿಗ್ವಾಚಕಂ ಪುಲ್ಲಿಂಗಮಪ್ಪೆಡೆಯೊಳಕಾರಮಂ ಕೈಕೊಳ್ಗುಂ; ಅಣ್‌ಪತ್ತದೆ ಮಿಕ್ಕ ದಿಗ್ವಾಚಕದೊಳ್ ದಕಾರಾಗಮಮಕ್ಕುಂ.

ಪ್ರಯೋಗಂ.—ಅಕಾರಕ್ಕೆ—ಮೂಡಣಂ, ತೆಂಕಣಂ, ಬಡಗಣಂ, ಪಡುವಣಂ, ಮೇಗಣಂ, ಕೆಳಗಣಂ, ನಡುವಣಂ, ಕಡೆಯಣಂ, ಎಡೆಯಣಂ, ಒಳಗಣಂ, ಪೊಱಗಣಂ, ಮುಂತಣಂ, ಪಿನ್ತಣಂ, ಅತ್ತಣನಿತ್ತಣಂ.

ದಕಾರಕ್ಕೆ—ಕೆಲದಂ, ಬಲದಂ, ಅಲ್ಲಿದಂ, ಇಲ್ಲಿದಂ, ಎಲ್ಲಿದಂ.

"...... ಕೆಲದನಲ್ಲಿದನಿಲ್ಲಿದನೀಗಳೆಂಬಿನಂ |
ಮುತ್ತಿದನೊಂದೆ ತೇರೊಳಮರೇಂದ್ರಸುತಂ ಕುರುವೃಂದ
ವೆಲ್ಲಮಂ" || 253 ||

"..................ಏನೋ- |
ದದ ಮೊದಲೆಲ್ಲಿದಂ ಸೊಬಗಿನಾಗರಮೆಲ್ಲಿದನಿಚ್ಛೆಯಾಣ್ಮನೆ- ||
ಲ್ಲಿದನೆರ್ದೆಗಾಣ್ಮನೆನ್ನರಸನೆಲ್ಲಿದನೋ ಲಲಿತಾಂಗವಲ್ಲಭಂ" || 254 ||

ಸೂತ್ರಂ. || ೧೧೨ ||

The Nominative of the Pronoun ಏನ್ (S. 79) is either ಎನ್ or ಏತಱ್; its Dative is ಏತರ್ಕೆ or ಏಕೆ (cf. S. 114); for the other cases its theme is ಏತಱ್.

ಏನೇತಱೆನಿಕುಮಾದಿಯೊ- |
ಳ್ ನೆಗೞ್ದ ಚತುರ್ಥಿಗಕ್ಕುಮೇತರ್ಕೇಕೆಂ- ||
ಬೀ ನುಡಿಯೇತಱ್ಪ್ರಕೃತಿಯೆ |
ತಾನಕ್ಕುಂ ತತ್ತೃತೀಯೆ ಮೊದಲಾದುವಱೊಳ್. |
|| ೧೨೨ ||

ಪದಚ್ಛೇದಂ.— ಏನ್ ಏತಱ್ ಎನಿಕುಂ ಆದಿಯೊಳ್; ಆ ನೆಗೞ್ದ ಚತುರ್ಥಿಗೆ ಅಕ್ಕುಂ ಏತರ್ಕೆ ಏಕೆ ಎಂಬ ಈ ನುಡಿ; ಏತರ್ಪ್ರಕೃತಿಯೆ ತಾಂ ಅಕ್ಕುಂ ತತ್ತೃತೀಯೆ ಮೊದಲಾದುವಱೊಳ್.

ಅನ್ವಯಂ.— ಆದಿಯೊಳ್ ಏನ್ ಏತಱ್ ಎನಿಕುಂ; ಆ ನೆಗೞ್ದ ಚತುರ್ಥಿಗೆ ಏತರ್ಕೆ ಏಕೆ ಎಂಬೀ ನುಡಿ ಅಕ್ಕುಂ; ತತ್ತೃತೀಯೆ ಮೊದಲಾದುವಱೊಳ್ ಏತರ್ಪ್ರಕೃತಿಯೆ ತಾಂ ಅಕ್ಕುಂ.

ಟೀಕು.— ಆದಿಯೊಳ್ = ಪ್ರಥಮಾವಿಭಕ್ತಿಯಲ್ಲಿ; ಏನ್ = ಏನೆಂದು; ಏತಱ್ = ಏತಱೆಂದು; ಎನಿಕುಂ = ಎನಿಸುವುದು; ಆ ನೆಗೞ್ದ ಚತುರ್ಥಿಗೆ = ಆ ಪ್ರಸಿದ್ಧವಾದ ಚತುರ್ಥೀವಿಭಕ್ತಿಗೆ; ಏತರ್ಕೆ = ಏತರ್ಕೆ ಎಂದು; ಏಕೆ = ಏಕೆ ಎಂದು; ಎಂಬೀ ನುಡಿ = ಎಂಬೀ ವಾಕ್ಯಂ; ಅಕ್ಕುಂ = ಅಪ್ಪುದು; ತತ್ತೃತೀಯೆ = ಆ ತೃತೀಯೆ; ಮೊದಲಾದುವಱೊಳ್ = ಮೊದಲಾದ ವಿಭಕ್ತಿಗಳಲ್ಲಿ; ಏತರ್ಪ್ರಕೃತಿಯೆ = ಏತಱ್ ಎಂಬ ಪ್ರಕೃತಿಯೆ; ತಾಂ = ತಾಂ; ಅಕ್ಕುಂ = ಆಗುವುದು.

ವೃತ್ತಿ.— ಏನೆಂಬ ಸರ್ವನಾಮದ ಪ್ರಥಮೆಗೆ ಏನೆಂದುಂ ಏತಱೆಂದುಮಕ್ಕುಂ; ಚತುರ್ಥಿಯೊಳೇತರ್ಕೆಂದುಮೇಕೆಂದುಮಕ್ಕುಂ; ತೃತೀಯೆ ಮೊದಲಾದುವರ್ಕೆ ಏತಱೆಂದೆ ಪ್ರಕೃತಿಯಕ್ಕುಂ.

ಪ್ರಯೋಗಂ.— ಪ್ರಥಮೆಗೆ—

"ಅಂದಿನ ನಿಜಭುಜ ವಿಕ್ರಾಂತಮೇನಾದುದು" || 255 ||

"ಏನಾಗಿಯುಮೇನೊ ತಿರ್ದುವುದೆ ತೀರದೊಡಂ" || 256 ||

". . . . . . . ಮಱಿದುಂಬಿಯಾಗಿ ಮೇಣ್
ಗತಿಯಂ ಪಡೆದೇತಱಾತನೇ ಗತಿಯೆಂದಳ್." || 257 ||

ಚತುರ್ಥಿಗೆ— ಏತರ್ಕೆ, ಏಕೆ.

"ಏತರ್ಕೆ ಮುನಿಸೆಂದು ನೊಂದು ನುಡಿದಂ" || 258 ||

"ಏಕೆಂದಱಿಯೆಂ ದಶಧ- |
ರ್ಮಾಕಲಿತಕರಾಗ್ರನಾದನೆನಗಿದು ಚೋದ್ಯಂ" || 259 ||

ತೃತೀಯಾದಿಗೆ— ಏತಱಿಂ, ಏತಱಿತ್ತಣಿಂ, ಏತಱ, ಏತಱೊಳ್.

"ಏತಱ ಮಾತು ಭೂತಳದೊಳರ್ಥವಿಹೀನನ ಶೌಚಮಣ್ಮು . . ."
|| 260 ||

ಸೂತ್ರಂ[1]. || ೧೧೩ ||

The Dative Singular of Masculines ending in ಅ is ಂ + ಗೆ; that of Neuters ending in ಅ is ಕೆ or ಕ್ಕೆ; the Dative of all other bases whether Singular or Plural, Masculine or Feminine, is ಗೆ.

ಒದವುವುದದಂತಪುಲ್ಲಿಂ- |
ಗದೊಳ್ ಗೆಯೆಂದಾದಿಬಿಂದುವಿಂ| ದ್ವಿತ್ವಂ ಮೇ- ||
ಳೊದವುವುದು ನಪುಂಸಕಲಿಂ- |
ಗದೊಳ್/ ಚತುರ್ಥಿಗೆ ಗೆಯಕ್ಕುಮುೞಿದೆಡೆಗೆಲ್ಲಂ/
|| ೧೨೩ ||

ಪದಚ್ಛೇದಂ.—ಒದವುವುದು ಅದಂತಪುಲ್ಲಿಂಗದೊಳ್ ಗೆ ಎಂದು ಆದಿಬಿಂದುವಿಂ; ದ್ವಿತ್ವಂ ಮೇಲ್ ಒದವುವುದು ನಪುಂಸಕಲಿಂಗದೊಳ್ ಚತುರ್ಥಿಗೆ; ಗೆ ಅಕ್ಕುಂ ಉೞಿದ ಎಡೆಗೆ ಎಲ್ಲಂ.

ಅನ್ವಯಂ.—ಚತುರ್ಥಿಗೆ ಅದಂತಪುಲ್ಲಿಂಗದೊಳ್ ಆದಿಬಿಂದುವಿಂ, ಗೆ ಎಂದು, ಒದವುವುದು; ನಪುಂಸಕಲಿಂಗದೊಳ್ ದ್ವಿತ್ವಂ ಮೇಲ್ ಒದವುವುದು; ಉೞಿದೆಡೆಗೆ ಎಲ್ಲಂ ಗೆ ಅಕ್ಕುಂ.

ಟೀಕು.—ಚತುರ್ಥಿಗೆ=ಕೆ ಎಂಬ ಚತುರ್ಥೀವಿಭಕ್ತಿಗೆ; ಅದಂತ = ಅಕಾರಾಂತವಾದ; ಪುಲ್ಲಿಂಗದೊಳ್ = ಪುಲ್ಲಿಂಗದಲ್ಲಿ; ಆದಿಬಿಂದುವಿಂ = ಆದಿಯಲ್ಲಿ ಬಿಂದುವಿನೊಡನೆ; ಗೆ ಎಂದು = ಗೆಯೆಂದು; ಒದವುವುದು = ಪ್ರಾಪ್ತಿಸುವುದು; ನಪುಂಸಕಲಿಂಗದೊಳ್ = ಅಕಾರಾಂತವಾದ

---

[1] ಅತಶ್ಚತುರ್ಥ್ಯಾಸ್ತೃತೀಯೋಽನುಸ್ವಾರಪೂರ್ವಃ ಪುಂಸಿ. || ಭಾ. ಭೂ. 62. ||
(ಅಕಾರಾಂತ ಲಿಂಗಗಳಿಂದ ಪರವಾದ ಚತುರ್ಥೀವಿಭಕ್ತಿಗೆ ಪುಲ್ಲಿಂಗದಲ್ಲಿ ಸೊನ್ನೆಯೊಡನೆ ತನ್ನ ತೃತೀಯಾಕ್ಷರವು ಬರುವುದು.)

ವಾ ನಪುಂಸಕೇ ದ್ವಿತ್ವಂ. || ಭಾ. ಭೂ. 63. ||
(ಅದಕ್ಕೆ ನಪುಂಸಕಲಿಂಗದಲ್ಲಿ ದ್ವಿತ್ವವು ಬರುವುದು.)

ಶೇಷಾತ್ತೃತೀಯತ್ವಂ. || ಭಾ. ಭೂ. 64. ||
(ಅಕಾರಾಂತವಲ್ಲದೆ ಉೞಿದೆಡೆಗಳಲ್ಲಿ ಆ ಕಕಾರಕ್ಕೆ ಗಕಾರವು ಬರುವುದು.)

ಮೊದಲೊಳನುಸ್ವಾರಂ ಬೆರ- |
ಸದಂತ ಪುಲ್ಲಿಂಗದೊಳ್ ಗೆಯಕ್ಕುಂ ದ್ವಿತ್ವಂ ||
ವಿದಿತ ನಪುಂಸಕಲಿಂಗದೊಳ್ ಪ- |
ಕ್ಷದಿಂ ತೃತೀಯಂ ಚತುರ್ಥಿಗಂತುೞಿದುವಱೊಳ್ || ಶ. ಸ್ಮೃ. 25. ||

ನಪುಂಸಕಲಿಂಗದಲ್ಲಿ; ದ್ವಿತ್ವಂ = ದ್ವಿರ್ಭಾವಂ; ವೇಗಳ್ = ವಿಕಲ್ಪದಿಂದೆ; ಒದವುವುದು = ಪ್ರಾಪ್ತಿಸುವುದು; ಉಳಿದೆಡೆಗೆ = ಅಕಾರಾಂತವಲ್ಲದುಳಿದೆಡೆಗೆ; ಎಲ್ಲಂ = ಸ್ತ್ರೀಪುಂನಪುಂಸಕಲಿಂಗಂಗಳಲ್ಲಿಯೆಲ್ಲಂ; ಗೆ = ಗೆಯೆಂದು; ಅಕ್ಕುಂ = ಆಗುವದು.

ವೃತ್ತಿ.—ಅಕಾರಾಂತಪುಲ್ಲಿಂಗದೊಳ್ ಪರವಾದ ಚತುರ್ಥಿಗೆ ಬಿಂದುವೆರಸು ಗೆಯೆಂದಕ್ಕುಂ; ಅಕಾರಾಂತನಪುಂಸಕಲಿಂಗದೊಳ್ ಪರವಾದ ಚತುರ್ಥಿಗೆ ವಿಕಲ್ಪದಿಂ ದ್ವಿತ್ವಮಕ್ಕುಂ; ಅಕಾರಾಂತಮಲ್ಲದುಳಿದ ಸ್ವರವ್ಯಂಜನಾಂತಂಗಳ್ಗೆ ಪರವಾದ ಚತುರ್ಥಿಗೆ, ಲಿಂಗವಚನವ್ಯವಸ್ಥೆಯಿಲ್ಲದೆ, ಗೆಯೆಂದಕ್ಕುಂ.

ಪ್ರಯೋಗಂ.— ಪುಲ್ಲಿಂಗಕ್ಕೆ—ಅರಸಂಗೆ; ಆತಂಗೆ.

"ಅರಸಂಗಮರಸಿಗಂ ಪುಟ್ಟಿ ರಾಜಸುತನೆನಿಸಿ." || 261 ||

"ಆತಂಗಮಾಕೆಗಂ ವಿ- |
ಖ್ಯಾತಯಶಂ ಪುಟ್ಟಿದಂ ಕುಲಕಂ ಚಲಕ್ಕಂ ||
ಭೂತಳದೊಳಾರ್ಗಮಧಿಕಂ |
ನೀತಿಪರಂ ಪರಬಲಾಬ್ಧಿಗೌರ್ವಪ್ರತಿಮಂ." || 262 ||

ನಪುಂಸಕಲಿಂಗದ್ವಿತ್ವವಿಕಲ್ಪಕ್ಕೆ—ಬನಕ್ಕೆ, ಬನಕೆ; ಪೊಲಕ್ಕೆ, ಪೊಲಕೆ.

ಸ್ವರವ್ಯಂಜನಾಂತಂಗಳ್ಗೆ— ಆಕೆಗೆ ಕಡಿಲೆಂದು ಆತಂ ನುಡಿದಂ; ಪೆಣ್ಗೆ; ಕಣ್ಗೆ; ಕುರುಳ್ಗೆ; ಬೆರಲ್ಗೆ; ಅರಲ್ಗೆ; ಬೆಂಗೆ; ಳಕಳ್ಗೆ; ಮುಳ್ಗೆ; ಬಿಲ್ಗೆ; ಅವಲ್ಗೆ; ನೆಗಳ್ಚಿಗೆ; ಪೊಜಿವಾರ್ಗೆ.

". . . . ಕವಿಗೆ ಕೇಡಿಲ್ಲೆಂತುಂ . . . ." || 263 ||

". . . . ತಮಗೆ ಭೂಷಣಂ ಪೊಜಿಯಲ್ತೇ" || 264 ||

"ಆಕೆಗೆ ಕಡಿಲೆಂದಾತಂ ನುಡಿದಂ . . . . ." || 265 ||

ವಚನತ್ರಯಕ್ಕೆ—

" . . ಆವುದು ಸಂಕಟಂ ನಿನಗೆ ನಿಲ್ಲಜ ನಿಲ್ಲಜಾ. . ." || 266 ||

"ಸೈತಿರು ಕಿವಿಗಳ್ಗೆ ಕರ್ಣಪೂರಮನಿಡುವೆಂ" || 267 ||

"ಅವಳ ಕುರುಳ್ಗೆ ಮಾಲೆದುಂಬಿಗಳೆಣೆಯೆ" || 268 ||

ಸೂತ್ರಂ. || ೧೧೪ ||

The formation of the Dative Singular with ಕೆ occasionally occurs also where its appearance, so to say, suggests the idea of a Compound (see s. 8. 19).

ಅಮರ್ದಿರದು ತೃತೀಯತ್ವಂ |
ಸಮಾಸವದ್ಭಾವಮಾದ ತಾಣದೊಳೆಲ್ಲಂ ||
ಸಮ ಸಂದ ಚತುರ್ಥಿಗೆ ಕಾ- |
ವ್ಯಮಾರ್ಗದೊಳ್ ಲಕ್ಷ್ಯಮುಂಟು ತಾನೀ ತೆಱದಿಂ. || ೧೨೪ ||

ಪದಚ್ಛೇದಂ.—ಅಮರ್ದು ಇರದು ತೃತೀಯತ್ವಂ ಸಮಾಸವದ್ಭಾವಂ ಆದ ತಾಣದೊಳ್ ಎಲ್ಲಂ ಸಮ ಸಂದ ಚತುರ್ಥಿಗೆ; ಕಾವ್ಯಮಾರ್ಗದೊಳ್ ಲಕ್ಷ್ಯಂ ಉಂಟು ತಾಂ ಈ ತೆಱದಿಂ.

ಅನ್ವಯಂ.—ಸಮಾಸವದ್ಭಾವಂ ಆದ ತಾಣದೊಳ್ ಎಲ್ಲಂ ಸಮ ಸಂದ ಚತುರ್ಥಿಗೆ ತೃತೀಯತ್ವಂ ಅಮರ್ದು ಇರದು; ಕಾವ್ಯಮಾರ್ಗದೊಳ್ ಈ ತೆಱದಿಂ ಲಕ್ಷ್ಯಂ ತಾಂ ಉಂಟು.

ಟೀಕು.—ಸಮಾಸವದ್ಭಾವಂ = ಸಮಾಸದಂತಪ್ಪ ಭಾವಂ; ಆದ ತಾಣದೊಳ್ = ಆದ ತಾವಿನಲ್ಲಿ; ಎಲ್ಲಂ = ಸರ್ವಂ; ಸಮ ಸಂದ ಚತುರ್ಥಿಗೆ = ಸಮಾನವಾಗಿ ಸಂದ ಚತುರ್ಥೀ ವಿಭಕ್ತಿಗೆ; ತೃತೀಯತ್ವಂ = ಮೂರನೆಯಕ್ಷರದ ಭಾವಂ; ಅಮರ್ದಿರದು = ಪೊರ್ದುಗೆಯಾಗಿರದು; ಕಾವ್ಯಮಾರ್ಗದೊಳ್ = ಕಾವ್ಯಂಗಳ ಮಾರ್ಗದಲ್ಲಿ; ಈ ತೆಱದಿಂ = ಈ ರೀತಿಯಿಂದೆ; ಲಕ್ಷ್ಯಂ = ಉದಾಹರಣೆ; ತಾಂ = ತಾಂ; ಉಂಟು = ಉಂಟಾಗಿರ್ಪುದು.

ವೃತ್ತಿ.—ಸಮಾಸಮಿಲ್ಲದೆಯುಂ ಸಮಾಸಲಕ್ಷಣಮಂ ಪೊಕ್ಕ ಚತುರ್ಥಿಗೆ ತೃತೀಯತ್ವಮಿಲ್ಲ.

ಪ್ರಯೋಗಂ.—ಕಾಟ್ಕೆ, ಕೋಟಿಕ್ಕೆ, ನಾಟಿಕ್ಕೆ, ಏತರ್ಕೆ, ಅದರ್ಕೆ, ಅನಿತರ್ಕೆ; ಏತಕೆಂದುಮುಂಟು.

"ಬಯಲ್ಗೆ ಬಂದಪರೊ ಪೇೞಿನಿತರ್ಕಮೊಳಂ ಪುರಾಂತಕಂ" || 269 ||
"ಶರೀರದ ಭೋಗಮಂ ತೊೞೆವನಿತರ್ಕೆ . . . ." || 270 ||

ಸೂತ್ರಂ || ೧೧೫ ||

The ಗೆ with the augment ಅರ್ of the Dative Plural

ಪಿರಿದುಂ ಚತುರ್ಥಿ ಸಂಸ್ಕೃತ |
ಪುರುಷಸ್ತ್ರೀವಿಷಯವಿಹಿತಬಹುವಚನದೊಳೊಂ- ||

of Saṁskṛita and Kanarese Masculines and Feminines may be treated as a Slack double consonant (S. 42), or ಗೆ may also be doubled.

ದಿರೆ ಶಿಥಿಲವೃತ್ತಿ ತಾನು- |
ಚ್ಚರಿಪರ್ಗೆ ಯಥೇಷ್ಟಮೆಂದು ತಿಳಿಗೀ ಕ್ರಮದಿಂ. || ೧೨೫ ||

ಪದಚ್ಛೇದಂ.— ಪಿರಿದುಂ ಚತುರ್ಥಿ ಸಂಸ್ಕೃತಪುರುಷಸ್ತ್ರೀವಿಷಯವಿಹಿತಬಹುವಚನದೊಳ್ ಬಂದಿ ಇರೆ, ಶಿಥಿಲವೃತ್ತಿ ತಾಂ ಉಚ್ಚರಿಪರ್ಗೆ ಯಥೇಷ್ಟಂ ಎಂದು, ತಿಳಿಗೆ ಈ ಕ್ರಮದಿಂ.

ಅನ್ವಯಂ.— ಪಿರಿದುಂ ಸಂಸ್ಕೃತಪುರುಷಸ್ತ್ರೀವಿಷಯವಿಹಿತಬಹುವಚನದೊಳ್ ಚತುರ್ಥಿ ಬಂದಿ ಇರೆ, ಶಿಥಿಲವೃತ್ತಿ ತಾಂ ಉಚ್ಚರಿಪರ್ಗೆ ಯಥೇಷ್ಟಂ ಎಂದು, ತಿಳಿಗೆ ಈ ಕ್ರಮದಿಂ.

ಟೀಕು.— ಪಿರಿದುಂ = ವಿಶೇಷವಾಗಿ; ಸಂಸ್ಕೃತ = ಸಂಸ್ಕೃತದ; ಪುರುಷಸ್ತ್ರೀ = ಪುಲ್ಲಿಂಗ ಸ್ತ್ರೀಲಿಂಗಂಗಳ; ವಿಷಯ = ವಿಷಯದಲ್ಲಿ; ವಿಹಿತ = ಕೂಡಲ್ಪಟ್ಟ; ಬಹುವಚನದೊಳ್ = ಬಹುವಚನದಲ್ಲಿ; ಚತುರ್ಥಿ = ಚತುರ್ಥೀವಿಭಕ್ತಿ; ಬಂದಿರೆ = ಕೂಡಿರೆ; ಶಿಥಿಲವೃತ್ತಿ = ಶಿಥಿಲದ ವರ್ತನೆ; ತಾಂ = ತಾಂ; ಉಚ್ಚರಿಪರ್ಗೆ = ಓದುವರ್ಗೆ; ಯಥೇಷ್ಟಮೆಂದು = ಇಚ್ಛೆ ಬಂದ ಹಾಗೆ ಎಂದು; ಈ ಕ್ರಮದಿಂ = ಈ ರೀತಿಯಿಂದೆ; ತಿಳಿಗೆ = ಅರಿಗೆ.

ವೃತ್ತಿ.— ಸಂಸ್ಕೃತಪುಲ್ಲಿಂಗಸ್ತ್ರೀಲಿಂಗದ ಬಹುವಚನದೊಳಂ ಪಿರಿದುಮೆಂಬುದರಿಂ ಕನ್ನಡದ ಪುಂಸ್ತ್ರೀಲಿಂಗದೊಳಂ ಚತುರ್ಥಿಗೆ ದ್ವಿತ್ವವಿಕಲ್ಪಂ.

ಪ್ರಯೋಗಂ.— ಸಂಸ್ಕೃತಕ್ಕೆ— ಬುಧರ್ಗೆ, ಬುಧರ್ಗ್ಗೆ; ಬಾಂಧವರ್ಗೆ, ಬಾಂಧವರ್ಗ್ಗೆ; ಕಾಂತೆಯರ್ಗೆ, ಕಾಂತೆಯರ್ಗ್ಗೆ; ಸ್ತ್ರೀಯರ್ಗೆ, ಸ್ತ್ರೀಯರ್ಗ್ಗೆ.
ಕನ್ನಡಕ್ಕೆ— ಎರೆವರ್ಗೆ, ಎರೆವರ್ಗ್ಗೆ; ಸೂಳೆಯರ್ಗೆ, ಸೂಳೆಯರ್ಗ್ಗೆ.

ಸೂತ್ರಂ[1]. || ೧೨೬ ||

The Ablative, the termination of which has been

ಅತ್ತಣಿನೆಂದು ನಿಮಿರ್ಚುವ- |
ರತ್ತೆಂದಾಗಿರ್ದ ಪಂಚಮಿಯನಲ್ಲಿ ಕೆಲರ್ ||

[1]) ಅತ್ತಣಿಂ ತ್ವನುಸಂಧೇಯಃ ಪಂಚಮ್ಯಾಃ || ಭಾ. ಭೂ. 66. ||
(ಪಂಚಮೀವಿಭಕ್ತಿಗೆ ಅತ್ತಣಿಂ ಎಂಬುದನ್ನು ಹತ್ತಿಸುವರು.)

ಅತ್ತಣಿಮೆಂದನುಸಂಧಿಸಿ- |
ಯೊತ್ತಂಬರದಿಂ ತಗುಳ್ಚುವರ್ ಪಂಚಮಿಯೊಳ್ ||
ಬಿತ್ತರಿಸುವರ್ ತೃತೀಯಾ |
ವೃತ್ತಿಯುಮಂ ಪಂಚಮೀಪ್ರಯೋಗದೊಳರೆಬರ್ || ಶ. ಸ್ಮೃ. 26. ||

given as ಅತ್ (S. 93), is fully formed, however, by the termination ಅತ್ತಣಿಂ. This form may also become ಅತ್ತಣಿಂದಂ or ಅತ್ತಣಿಂದೆ; the form ಅತ್ತಣೆ is wrong.

ಪತ್ತಿಸುವರ್ ಮೂದೆದಿನಂ |
ಪೆತ್ತ ತೃತೀಯೆಯನೆಕಾರಮುಂ ಪರಿಹರಿಪರ್. || ೧೨೬ ||

ಪದಚ್ಛೇದಂ.— ಅತ್ತಣಿಂ ಎಂದು ಸಮೆಚುರ್ವರ್, ಅತ್ತು ಎಂದು ಆಗಿ ಇರ್ದ ಪಂಚಮಿಯುಂ; ಅಲ್ಲಿ ಕೆಲರ್ ಪತ್ತಿಸುವರ್ ಮೂದೆದಿನಂ ಪೆತ್ತ ತೃತೀಯೆಯುಂ, ಎಕಾರಮುಂ ಪರಿಹರಿಪರ್.

ಅನ್ವಯಂ.— ಅತ್ತು ಎಂದು ಆಗಿ ಇರ್ದ ಪಂಚಮಿಯುಂ, ಅತ್ತಣಿಂ ಎಂದು, ಸಮೆಚುರ್ವರ್; ಅಲ್ಲಿ ಕೆಲರ್ ಮೂದೆದಿನಂ ಪೆತ್ತ ತೃತೀಯೆಯುಂ ಪತ್ತಿಸುವರ್, ಎಕಾರಮುಂ ಪರಿಹರಿಪರ್.

ಟೀಕು.— ಅತ್ತೆಂದು = ಅತ್ ಎಂದು; ಆಗಿರ್ದ ಪಂಚಮಿಯುಂ = ಆಗಿರ್ದ ಪಂಚಮೀವಿಭಕ್ತಿಯುಂ; ಅತ್ತಣಿಂ = ಅತ್ತಣಿಂ ಎಂದು; ಸಮೆಚುರ್ವರ್ = ನಿರ್ಮಿಸುವರ್; ಅಲ್ಲಿ = ಅತ್ ಎಂಬ ರೂಪಿನಲ್ಲಿ; ಕೆಲರ್ = ಕೆಲಂಬರ್ ಮೂದೆದಿನಂ = ಇಮ್ ಇಂದಮ್ ಇಂದೆ ಎಂಬ ಮೂಱು ಪ್ರಕಾರವಂ; ಪೆತ್ತ = ಪಡೆದ; ತೃತೀಯೆಯುಂ = ತೃತೀಯಾವಿಭಕ್ತಿಯ ರೂಪಂ; ಪತ್ತಿಸುವರ್ ಪೊರ್ದುಗೆಯುಂ ಮಾಡುವರ್; ಎಕಾರಮುಂ = ಉಚಿತವಾಗಿ ಬಂದ ಎಕಾರವುಂ; ಪರಿಹರಿಪರ್ = ಬಿಡುವರ್.

ವೃತ್ತಿ.— ಅತ್ ಎಂಬ ಪಂಚಮಿಯನತ್ತಣಿನೆಂದು ಪೇೞಲಕ್ಕುಂ; ಆ ಪಂಚಮಿಯೊಳ್ ಇಂ ಇಂದಂ ಇಂದೆ ಎಂಬ ತೃತೀಯೆಯ ಮೂಱು ರೂಪಮಂ ಕೆಲಂಬರ್ ಪತ್ತಿಸುವರ್, ಆ ಮೂದೆಱಿಕ್ಕಾದೇಶಮಾದೆಕಾರಮಂ ಬಿಡುವರ್.

ಪ್ರಯೋಗಂ.— ಪಂಚಮಿಯ ನಿಜರೂಪಕ್ಕೆ— ಆತನತ್ತಣಿಂ.

"\. . . . . ಅಳ್ದನ ನಂಟರತ್ತಣಿಂ |
ದವದಳಮಾಯ್ತು ಪೋಯ್ತುರವಣಂ . . . . ." || 271 ||

ತೃತೀಯಾರೂಪಕ್ಕೆ— ಕೆಱೆಯತ್ತಣಿಂ, ಕೆಱೆಯತ್ತಣಿಂದಂ, ಕೆಱೆಯತ್ತಣಿಂದೆ.— ಕೆಱೆಯತ್ತಣೆ ಎನಲಾಗದು.

ಪಂಚಮ್ಯರ್ಥದ ತೃತೀಯೆಗೆ—

"\. . . . ತಿಳಿಗೊಳದಿಂದೆ ಪಾಱಿದುವು ಹಂಸಕುಳಂ" || 272 ||

“ಮತ್ತಹಸ್ತಿಗಳ ಮಸ್ತಕದಿಂ ಬಿದಿರಿಂ ಘಣೋ- |
ದ್ರೋತ್ತಮಾಂಗದಿನಗುರ್ವಿಪ ಪಂದಿಯ ಕೋಱ್ಪಿಳಿಂ” || 273 ||
“ಆಲಿವರಲ್ಗಳುಮಿಂದ್ರಗೋಪಮುಂ ಸೂಸಿದವಭ್ರದಿಂ” || 274 ||

ಸೂತ್ರಂ[1]. || ೧೧೭ ||

The simple sign of the Genitive is ಅ; sometimes the ಅ is lengthened, a lengthening which is also used in Particles, when grief, agitation or command is expressed.

ಆದರಿಪರ್ ಕೆಲಬರ್ ದೀ- |
ರ್ಘಾದೇಶಮನಗ್ರದಲ್ಲಿ ಷಷ್ಠಿಯಕಾರ- ||
ಕ್ಕಾ ದೀರ್ಘಮನಿರದರೆಬರ್ |
ಖೇದದ ಸಂಭ್ರಮದ ವ್ಯೆಯೊಳುತ್ಪಾದಿಸುವರ್. || ೧೫೭ ||

ಪದಚ್ಛೇದಂ. – ಆದರಿಪರ್ ಕೆಲಬರ್ ದೀರ್ಘಾದೇಶಮುಂ ಅಗ್ರದಲ್ಲಿ ಷಷ್ಠಿಯ ಅಕಾರಕ್ಕೆ; ಆ ದೀರ್ಘಮಂ, ಇರದೆ, ಆರೆಬರ್ ಖೇದದ ಸಂಭ್ರಮದ ವ್ಯೆಯೊಳ್ ಉತ್ಪಾದಿಸುವರ್.

ಅನ್ವಯಂ. – ಕೆಲಬರ್ ಷಷ್ಠಿಯ ಅಕಾರಕ್ಕೆ ಅಗ್ರದಲ್ಲಿ ದೀರ್ಘಾದೇಶಮುಂ ಆದರಿಪರ್. ಆ ದೀರ್ಘಮಂ ಇರದೆ, ಆರೆಬರ್ ಖೇದದ ಸಂಭ್ರಮದ ವ್ಯೆಯೊಳ್ ಉತ್ಪಾದಿಸುವರ್.

ಟೀಕು. – ಕೆಲಬರ್ = ಕೆಲಬರ ; ಷಷ್ಠಿಯ = ಷಷ್ಠೀವಿಭಕ್ತಿಯ; ಅಕಾರಕ್ಕೆ = ಅತ್ವಕ್ಕೆ; ಅಗ್ರದಲ್ಲಿ = ತುದಿಯಲ್ಲಿ; ದೀರ್ಘಾದೇಶಮುಂ = ದೀರ್ಘದ ಆದೇಶಮಂ; ಆದರಿಪರ್ = ಬೇಳ್ಪರ್; ಆ ದೀರ್ಘಮಂ = ಆ ದೀರ್ಘಮಂ; ಇರದೆ = ನಿಲ್ಲದೆ; ಆರೆಬರ್ = ಕೆಲಂಬರ್; ಖೇದದ = ದುಃಖದ; ಸಂಭ್ರಮದ = ಸಂಭ್ರಮದ; ವ್ಯೆಯೊಳ್ = ಸ್ವರೂಪದಲ್ಲಿ; ಉತ್ಪಾದಿಸುವರ್ = ಪ್ರತಿಪಾದಿಸುವರ್.

---

1) ದೀರ್ಘಾದೇಶಃ ಷಷ್ಠ್ಯಾ ಯಥೇಷ್ಟಂ. || ಭಾ. ಭೂ. 67. ||
(ಷಷ್ಠೀವಿಭಕ್ತಿಯಲ್ಲಿ ದೀರ್ಘಾದೇಶವು ಯಥೇಷ್ಟವಾಗಿ ಬರುವುದು.)

ತುದಿಯೊಳ್ ದೀರ್ಘಾದೇಶಂ |
ಪೊಬಟ್ಟು ಷಷ್ಠೀವಿಭಕ್ತಿಗರೆಬರ ಮತದಿಂ ||
ಪುದಿದಿರ್ಕುಂ ಕೆಲಬರ್ ಖೇ- |
ದದೊಳಂ ಸಂಭ್ರಮದೊಳಂ ಪ್ರಯೋಗಿಸುವವದಂ || ಶ. ಸ್ಮೃ. 32. ||

ವೃತ್ತಿ. — ಅ ಎಂಬ ಷಷ್ಠಿಯಕಾರಕ್ಕೆ ಕೆಲಬರ್ ದೀರ್ಘಾದೇಶಮನೊಡಂಬಡುವರ್. ಆ ದೀರ್ಘಮಂ ಕೆಲರ್ ಖೇದದೊಳಂ ಸಂಭ್ರಮದೊಳಂ ಪ್ರಯೋಗಿಪರ್.

ಪ್ರಯೋಗಂ. — ಷಷ್ಠಿಯ ದೀರ್ಘಾದೇಶಕ್ಕೆ—

"ಮೃಡನಾ ಗಂಗಾಂಬುಧಾರಾಜಟಿಲಿತ ಜಟನಾ . ." || 275 ||

"ಕಾಲಾಗ್ನಿ ರುದ್ರನೆನಿಸಿದುದು ತೋಳ ಬಾಟಿಲ್ ತೈಲಪನಾ" || 276 ||

"ದೊರೆಯೆನಿಸಿತ್ತು ಭಾರತಕೆ ಗೆಲ್ದ ರಣಂ ಕುವರಾಂಕರಾಮನಾ" || 277 ||

ಖೇದಕ್ಕೆ—

". . . . . ಅಕ್ಕಟಾ ಮರು- |
ಳ್ದುಂಬಿಗಳೇಕೆ ಸಂಪಗೆಗಳೊಳ್ ಪಗೆಗೊಂಡುವೊ ನಿರ್ನಿಮಿತ್ತದಿಂ." || 278 ||

ಸಂಭ್ರಮಕ್ಕೆ—

"ಬೇಡ ಗಡಾ ಬೇಡ ಗಡಾ ನಿನಗಾತನೊಳ್ ಚಲಂ." || 279 ||

ವಿಧಿಯೊಳುಮುಂಟು—

"ಸತ್ಯಮಂ ನುಡಿ ಗಡಾ ನೀನಾತನೊಳ್." || 280 ||

ಸೂತ್ರಂ[1]. || ೧೧೮ ||

Such a lengthening of a vowel is optionally used in the midst of words, and when an Accusative is followed by a Vowel, and also before ಪೋಲ್.

ಅವಿಶೇಷದಿನಾ ದೀರ್ಘ |
ವ್ಯವಹೃತಿ ಶಬ್ದಾಂತರಾಳದೊಳ್ ಪಕ್ಷದಿನು- ||
ದ್ಭವಿಕುಂ ದ್ವಿತೀಯೆಗಂ ಮುಂ- |
ದವತರಿಸಲೊಡಂ ಸ್ವರಪ್ರಪೂರ್ವಪದಂಗಳ್. || ೧೨೮ ||

---

1) ದ್ವಿತೀಯಾಂತಸ್ಯ ವಾ ಸ್ವರೇ || ಭಾ. ಭೂ. 68. ||

(ದ್ವಿತೀಯಾವಿಭಕ್ತ್ಯಂತವಾದ ಪದಕ್ಕೆ ಸ್ವರ ಪರವಾದರೆ ವಿಕಲ್ಪವಾಗಿ ದೀರ್ಘವಾಗುವುದು.)

ಸ್ವರಸಂಜ್ಞಕಂಗಳವರ್ದೊರ್ಣಂ- |
ಬರೆ ಮುಂದೆ ವಿಕಲ್ಪದಿಂ ದ್ವಿತೀಯೆಗೆ ದೀರ್ಘಂ ||
ದೊರೆಕೊಳ್ಗುಮೆಲ್ಲಿಯಾನುಂ ||
ಪುರಾತನೋಕ್ತಿಗಳೊಳಂತದಲ್ಲಿ ಯಥೇಷ್ಟಂ || ಶ. ಸ್ಮೃ. 31. ||

ಪದಚ್ಛೇದಂ. — ಅವಿಶೇಷದಿಂ ಆ ದೀರ್ಘವ್ಯವಹೃತಿ ಶಬ್ದಾಂತರಾಳದೊಳ್ ಪಕ್ಷದಿಂ ಉದ್ಭವಿಕುಂ; ದ್ವಿತೀಯೆಗಂ ಮುಂದೆ ಅವತರಿಸಲೊಡಂ ಸ್ವರಪ್ರಪೂರ್ವಪದಂಗಳ್.

ಟೀಕು, ಯಥಾನ್ವಯಂ. — ಅವಿಶೇಷದಿಂ = ವಿಶೇಷವಲ್ಲದುದರಿಂದೆ; ಆ ದೀರ್ಘ ವ್ಯವಹೃತಿ = ಆ ದೀರ್ಘವ್ಯವಹಾರಂ; ಶಬ್ದ = ಶಬ್ದದ; ಅಂತರಾಳದೊಳ್ = ಮಧ್ಯದಲ್ಲಿ; ಪಕ್ಷದಿಂ = ಕೆಲಂಬರ ಪಕ್ಷದಿಂದೆ; ಉದ್ಭವಿಕುಂ = ಹುಟ್ಟುವುದು; ದ್ವಿತೀಯೆಗಂ = ದ್ವಿತೀಯಾ ವಿಭಕ್ತಿಗೆಯುಂ; ಮುಂದೆ = ಮುಂದುಗಡೆಯಲ್ಲಿ; ಸ್ವರ = ಸ್ವರಂಗಳ್; ಪ್ರಪೂರ್ವ = ಆದಿಯಾದ; ಪದಂಗಳ್ = ಪದಂಗಳ್; ಅವತರಿಸಲೊಡಂ = ಹುಟ್ಟಲೊಡನೆ ಆ ದೀರ್ಘವ್ಯವಹೃತಿ ಹುಟ್ಟುವುದು.

ವೃತ್ತಿ. — ಆ ದೀರ್ಘಂ ಶಬ್ದಾಂತರಾಳದೊಳಂ ದ್ವಿತೀಯಾವಿಭಕ್ತಿಗೆ ಸ್ವರಂ ಪರಮಾಗೆಯುಂ ವಿಕಲ್ಪದಿನಕ್ಕುಂ.

ಪ್ರಯೋಗಂ. — ಶಬ್ದಾಂತರಾಳಕ್ಕೆ—ಇಂದೊಳಂ, ಇಂದೋಳಂ; ಆರೊಗಿಸಿದಂ, ಆರೋಗಿಸಿದಂ; ಎಣೆಗೊಣಂ (ಎಣಗೊಣಂ), ಎಣೆಗೋಣಂ (ಎಣಗೋಣಂ); ಗೆಯಂಗಂ, ಗೆಯಾಂಗಂ.

"ಗೆಯಂಗಕ್ಕೆ ತಾನೆ ಸೋಲ್ವ ವೆಳಜಿವೊಜಂಗಂ" || 281 ||

ದ್ವಿತೀಯೆಗೆ—ಕಲ್ಲನೇಱಿದಂ, ಕಲ್ಲಾನೇಱಿದಂ; ಬಿಲ್ಲನದಂ, ಬಿಲ್ಲಾನದಂ.

"ಎನಿತ್ತೆನಿತ್ತಂಬುಜಪತ್ರನೇತ್ರೆಯಾ |
ಘನಸ್ತನಂಗಳ್ ಬಳೆಗುಂ ಕಿರಾತೆಯಾ ||
ಅನಿತ್ತನಿತ್ತಂ ವನದೊಳ್ ವನೇಚರಂ |
ತನತ್ತು ಬಿಲ್ಲಾನದ್ಧನಂತೆ ಕೇಸುವಂ" || 282 ||

ವೋಲ್ ಪರಮಾದಲ್ಲಿಯುಂ ದೀರ್ಘಮುಂಟು—

"ಈದ ಪುಲಿಯಾ ವೋಲಿರ್ದಳ್" || 283 ||

ಎಂದು ಗುಣವರ್ಮನ ಹರಿವಂಶಪ್ರಯೋಗಂ.

ಸೂತ್ರಂ[1]. || ೧೧೯ ||

The terminations for the Locative are ಅಲ್ಲಿ and ಒಳ್. Bases denoting Direction and ending in ಅ may remain in the Locative as they are, or receive ಅಲ್; such bases with final ಉ may also remain unchanged, or receive ಎ.

ಅಲ್ಲಿಯೊಳೆಂಬಿವು ಮಿಕ್ಕಡೆ- |
ಗೆಲ್ಲಂ ದಿಗ್ವಾಚಿಯಪ್ಪದಂತಕ್ಕಲ್ಮ- ||
ತ್ತಲ್ಲಿಯುದಂತಕ್ಕೆತ್ವಂ |
ಬಲ್ಲರ ಮತದಿಂ ವಿಕಲ್ಪವಿಧಿ ಸಪ್ತಮಿಯೊಳ್. || ೧೭೫ ||

ಪದಚ್ಛೇದಂ. — ಅಲ್ಲಿ ಒಳ್ ಎಂಬಿವು ಮಿಕ್ಕಡೆಗೆ ಎಲ್ಲಂ; ದಿಗ್ವಾಚಿ ಅಪ್ಪ ಅದಂತಕ್ಕೆ ಅಲ್, ಮತ್ತೆ ಅಲ್ಲಿ ಉದಂತಕ್ಕೆ ಎತ್ವಂ ಬಲ್ಲರ ಮತದಿಂ ವಿಕಲ್ಪವಿಧಿ ಸಪ್ತಮಿಯೊಳ್.

ಅನ್ವಯಂ. — ಸಪ್ತಮಿಯೊಳ್ ದಿಗ್ವಾಚಿ ಅಪ್ಪದಂತಕ್ಕೆ ಅಲ್, ಮತ್ತೆ ಅಲ್ಲಿ ಉದಂತಕ್ಕೆ ಎತ್ವಂ ಬಲ್ಲರ ಮತದಿಂ ವಿಕಲ್ಪವಿಧಿ; ಮಿಕ್ಕಡೆಗೆ ಎಲ್ಲಂ ಅಲ್ಲಿ ಒಳ್ ಎಂಬಿವು.

ಟೀಕು. — ಸಪ್ತಮಿಯೊಳ್ = ಒಳ್ ಎಂದಾಗಿರ್ಪ ಸಪ್ತಮೀವಿಭಕ್ತಿಯಲ್ಲಿ; ದಿಗ್ವಾಚಿಯಪ್ಪದಂತಕ್ಕೆ = ದಿಗ್ವಾಚಕಗಳಾದ ಅಕಾರಾಂತಕ್ಕೆ; ಅಲ್ = ಅಲ್ ಎಂದಾಗುವುದು; ಮತ್ತೆ = ಬಳಿಕ; ಅಲ್ಲಿ = ಆ ದಿಗ್ವಾಚಕಂಗಳಲ್ಲಿ; ಉದಂತಕ್ಕೆ = ಉಕಾರಾಂತಕ್ಕೆ; ಎತ್ವಂ = ಹ್ರಸ್ವದ ಎಕಾರವಾಗುವುದು; ಬಲ್ಲರ ಮತದಿಂ = ಬಲ್ಲವರ ಮತದಿಂದೆ; ವಿಕಲ್ಪವಿಧಿ = ವಿಕಲ್ಪವಿಧಿಯಾಗುವುದು; ಮಿಕ್ಕಡೆಗೆ = ದಿಗ್ವಾಚಕಂಗಳಲ್ಲದುಳಿದೆಡೆಗೆ; ಎಲ್ಲಂ = ಎಲ್ಲವುಂ; ಅಲ್ಲಿ = ಅಲ್ಲಿ ಎಂದು; ಒಳ್ = ಒಳ್ ಎಂದು; ಎಂಬಿವು = ಎಂಬೀ ಎರಡು ರೂಪುಗಳ್ ಸಾಮಾನ್ಯದಿಂದೆಯಾಗುವುವು.

---

[1] ಸಪ್ತಮ್ಯಾ ಅಲ್ಲಿ ವಾ || ಭಾ. ಭೂ. 69. ||
(ಲಿಂಗದತ್ತಣಿಂದ ಪರವಾದ ಸಪ್ತಮೀವಿಭಕ್ತಿಯ ಒಳ್ ಎಂಬಲ್ಲಿ ವಿಕಲ್ಪದಿಂದ ಅಲ್ಲಿ ಎಂಬುದು ಬರುವುದು.)

ಸಪ್ತಮ್ಯಾಂ ಚ || ಭಾ. ಭೂ. 58. ||
(ಅಕಾರಾಂತವಾದ ದಿಗ್ವಾಚಕಗಳತ್ತಣಿಂ ಪರವಾದ ಸಪ್ತಮೀವಿಭಕ್ತಿಗೆ ವಿಕಲ್ಪದಿಂದೆ ಅಲ್ ಪ್ರತ್ಯಯ ಬರುವುದು.)

ಉತ್ ಏತ್ || ಭಾ. ಭೂ. 59. ||
(ಸಪ್ತಮೀವಿಭಕ್ತಿ ಪರವಾದರೆ ದಿಗ್ವಾಚಕಗಳ ಕಡೆಯ ಉಕಾರಕ್ಕೆ ಎಕಾರ ಬರುವುದು.)

ವೃತ್ತಿ.—ಅಲ್ಲಿ ಎಂದುಂ ಒಳ್ ಎಂದುಂ ಸಪ್ತಮಿಗೆ ಸಾಮಾನ್ಯದಿನಕ್ಕುಂ; ದಿಗ್ವಾಚಿಯಪ್ಪಕಾರಾಂತದ ಮೇಲೆ ವಿಕಲ್ಪದಿಂದಲ್ ಅಕ್ಕುಂ, ಉಕಾರಾಂತ ದಿಗ್ವಾಚಿಕಂಗಳ್ಗೆತ್ತಮಕ್ಕುಂ.

ಪ್ರಯೋಗಂ.—ಒಳ್ ಅಲ್ಲಿ ಎಂಬವರ್ಕೆ—ಕೊಳದೊಳ್, ಬನದೊಳ್; ಕೊಳದಲ್ಲಿ, ಬನದಲ್ಲಿ; ಸಭೆಯೊಳ್, ಸಭೆಯಲ್ಲಿ.

"ಸಭೆಯೊಳ್ ನುಡಿದಂ ನವಮೇಘನಾದದಿಂ"— || 284 ||

ಅಲ್ಲಿ ಇಲ್ಲಿ ಎಲ್ಲಿ ಉಲ್ಲಿ ಎಂದು, ಸ್ಥಳವಿಶೇಷದೊಳಮಿಾ ಶಬ್ದಮೊಳವು.

"ಸಿರಿನೆಲೆಗೊಂಡುದಲ್ಲಿ ಮದನಂ ಮನೆಗಟ್ಟಿದನಲ್ಲಿ. . ." || 285 ||

". . . . . . . ಅಲ್ಲಿಯ ಪೆಂಡಿರನಗ್ನಿ ಸುತ್ತಿದಂ" || 286 ||

ಪ್ರಥಮೆಗಂ ಸಪ್ತಮಿಗಮಲ್ ಎಂದೇಕರೂಪಮಕ್ಕುಂ.

ಅದಂತದ ವಿಕಲ್ಪದಲ್ಗೆ—ಪಡುವ, ಮೂಡ, ತೆಂಕ, ಬಡಗ, ಅತ್ತ, ಇತ್ತ, ಉತ್ತ, ಎತ್ತ; ಮೂಡಲ್, ಪಡುವಲ್, ತೆಂಕಲ್ ಬಡಗಲ್, ಅತ್ತಲ್, ಇತ್ತಲ್, ಉತ್ತಲ್, ಎತ್ತಲ್.

"ಪಡುವ ಮೂಡ ತೆಂಕ ಬಡಗ ಪೊಡವಿಪತಿಗಳಿಲ್ಲೆನಲ್ |
ನಡೆದು ಗೆಲ್ದು . . . ." . || 287 ||

"ಎತ್ತಿದ ಕೆಯ್ಯೊಳ್ ಮುತ್ತಿದ- |
ನತ್ತಿತ್ತುತ್ತೆತ್ತ ಸಾರ್ವರಿನ್ನಹಿತರ್ಕಳ್" || 288 ||

". . . . . ಮೂಡಲಿರ್ದ ಪದದೊಳ್ ತಾರಾಮನೋವಲ್ಲಭಂ"
|| 289 ||

"ಅತ್ತಲ್ ದೇವೇಂದ್ರಂ ಮ- |
ತ್ತಿತ್ತಲ್ ಭುಜಗೇಂದ್ರನುತ್ತಲಾಶಾಧಿಪರೊಳ್ ||
ಮುತ್ತಿರೆ ಭೇರಿಧ್ವನಿ ಪ- |
ರ್ವಿತ್ತೆತ್ತಲ್ ಮಸಗಿ ಘೋಷಶಿಕ್ಷಾದಕ್ಷಂ || 290 ||

ಉದಂತಕೆತ್ವಕ್ಕೆ ವಿಕಲ್ಪಂ—ಒಳಗು, ಒಳಗೆ; ಪೊಱಗು, ಪೊಱಗೆ; ಪೆಱಗು, ಪೆಱಗೆ; ಮೇಗು, ಮೇಗೆ; ಕೆಳಗು, ಕೆಳಗೆ.

"ಕವಿ ಪೊಱಗಿರೆ ಕೀಳೊಳಗಿರೆ- |
ಯವಿರಳವೋ ತುರಗಬಲಮೊ ನೃಪಮಂದಿರಮೋ" || 291 ||

ನಡುವೆಯೆಂಬಲ್ಲಿ ನಾಮಮಱಿದಪ್ಪುದಾಗಿ ವೆತ್ವಂ ಪೊಕ್ಕುದು.

ಸೂತ್ರಂ. || ೧೨೦ ||

When Locative bases ಮುಂದು, ಪಿಂದು may become ಮುಂತೆ, ಪಿಂತೆ; ಮೇಲ್ becomes ಮೇಲೆ.

ಸವನಿಪುದು ಮುಂದು ಪಿಂದೆಂ- |
ಬಿವಱಿಂತ್ಯಕ್ಕಱಿ ವಿಕಲ್ಪದಿಂದೆ ತುಕಾರಂ||
ವ್ಯವಹರಿಪುದೆತ್ವವಿಧಿ ಬ- |
ಲ್ಲವರಿಂ|ಮೇಲೆಂದು ಪೇೞ್ವ ಬೀಱಿಕ್ಕರಕಂ.|| ೧೩೦ ||

ಪದಚ್ಛೇದಂ.— ಸವನಿಪುದು ಮುಂದು ಪಿಂದು ಎಂಬ ಇವಱ ಅಂತ್ಯಕ್ಕೆ, ಅಱ' ವಿಕಲ್ಪದಿಂದೆ ತುಕಾರಂ; ವ್ಯವಹರಿಪುದು ಎತ್ವವಿಧಿ ಬಲ್ಲವರಿಂ, ಮೇಲ್ ಎಂದು, ಪೇೞ್ವ ಬೀಱಿಕ್ಕರಕಂ.

ಅನ್ವಯಂ.— ಮುಂದು ಪಿಂದು ಎಂಬಿವಱ ಅಂತ್ಯಕ್ಕೆ ವಿಕಲ್ಪದಿಂದೆ ತುಕಾರಂ ಸವನಿಪುದು, ಅಱ! ಮೇಲ್ ಎಂದು, ಪೇೞ್ವ ಬೀಱಿಕ್ಕರಕಂ ಎತ್ವವಿಧಿ ಬಲ್ಲವರಿಂ ವ್ಯವಹರಿಪುದು.

ಟೀಕು.— ಮುಂದು = ಮುಂದು ಎಂದು; ಪಿಂದು = ಪಿಂದು ಎಂದು; ಎಂಬಿವಱ = ಎಂಬೀ ಶಬ್ದಂಗಳ; ಅಂತ್ಯಕ್ಕೆ = ತುದಿಯ ದುಕಾರಕ್ಕೆ; ವಿಕಲ್ಪದಿಂದೆ = ವಿಕಲ್ಪದಿಂದೆ; ತುಕಾರಂ = ತುತ್ವಂ; ಸವನಿಪುದು = ಪ್ರಾಪ್ತಿಸುವುದು; ಅಱ' = ತಿಳಿ; ಮೇಲೆಂದು ಪೇೞ್ವ ಬೀಱಿಕ್ಕರಕಂ = ಮೇಲ್ ಎಂದು ಪೇೞ್ವ ವ್ಯಂಜನಾಕ್ಷರಕ್ಕೆಯುಂ; ಎತ್ವವಿಧಿ = ಎಕಾರದ ವಿಧಿ; ಬಲ್ಲವರಿಂ = ಬಲ್ಲ ವಿದ್ವಾಂಸರಿಂದೆ; ವ್ಯವಹರಿಪುದು = ವ್ಯವಹರಿಸುವುದು.

ವೃತ್ತಿ.— ಮುಂದು ಪಿಂದೆಂಬಿವಱಿಂತ್ಯಕ್ಕೆ ವಿಕಲ್ಪದಿಂ ತುಕಾರಾದೇಶಮಾಗಿ, ಪಿಂದಣಂತೆತ್ವಮಕ್ಕುಂ. ಮೇಲ್ ಎಂಬ ವ್ಯಂಜನಾಂತಕ್ಕಮೆತ್ವಮಕ್ಕುಂ.

ಪ್ರಯೋಗಂ.— ತುಕಾರಕ್ಕೆ— ಮುಂದು, ಮುಂತು; ಪಿಂದು, ಪಿಂತು. ಮುಂದೆ, ಮುಂತೆ; ಪಿಂದೆ ಪಿಂತೆ.

ಮೇಲೆಂಬುದರ್ಕೆ—

". . . . ಆನೆಯ ಮೇಲೆಯುಮಾಳ ಮೇಲೆಯುಂ |
ಕುದುರೆಯ ಮೇಲೆಯುಂ ಪರಿದುದೊಂದೆ ಗಜಂ ಭುವನೈಕ
ರಾಮನಾ" || 292 ||

ಸೂತ್ರಂ[1]. || ೧೨೦ ||

The ಅಲ್ of the Locative appears also in the Nominative and Accusative Singular. Likewise the bases of time ಅಂದು, ಇಂದು, ಉಂದು, ಎಂದು are the same in those three cases.

ಮೊದಲೆರಡು ವಿಭಕ್ತಿಯೊಳಂ |
ಪೊದಲ್ಗಿಗ್ಗಿ ಮಲ್ಕಾಲವಾಚಿಯಂದಿಂದುಂದೆಂ- ||
ಬುದುಮೇಕರೂಪಮಾಗಿ- |
ರ್ಪುದು ಮೊದಲೆರಡುಂ ವಿಭಕ್ತಿಗಂ ಸಪ್ತಮಿಗಂ. || ೧೩೧ ||

ಪದಚ್ಛೇದಂ. — ಮೊದಲ ಎರಡು ವಿಭಕ್ತಿಯೊಳಂ ಪೊದಲ್ಗುಂ ಅಲ್; ಕಾಲವಾಚಿಯ ಅಂದು ಇಂದು ಉಂದು ಎಂಬುದುಂ ಏಕರೂಪಂ ಆಗಿರ್ಪುದು ಮೊದಲ ಎರಡುಂ ವಿಭಕ್ತಿಗಂ ಸಪ್ತಮಿಗಂ.

ಅನ್ವಯಂ. — ಅಲ್ ಮೊದಲ ಎರಡು ವಿಭಕ್ತಿಯೊಳಂ ಪೊದಲ್ಗುಂ; ಕಾಲವಾಚಿಯ ಅಂದು ಇಂದು ಉಂದು ಎಂಬುದುಂ ಮೊದಲ ಎರಡುಂ ವಿಭಕ್ತಿಗಂ ಸಪ್ತಮಿಗಂ ಏಕರೂಪಂ ಆಗಿರ್ಪುದು!

ಟೀಕು. — ಅಲ್ = ಸಪ್ತಮಿಗೆ ಬಂದ ಅಲ್ ಎಂಬುದು; ಮೊದಲ = ಆದಿಯ; ಎರಡು ವಿಭಕ್ತಿಯೊಳಂ = ಪ್ರಥಮೆ ದ್ವಿತೀಯೆ ಎಂಬೆರಡು ವಿಭಕ್ತಿಯೊಳಂ; ಪೊದಲ್ಗುಂ = ಪೊರ್ದುಗೆಯಪ್ಪುದು; ಕಾಲವಾಚಿಯ = ಕಾಲವಾಚಿಶಬ್ದದ; ಅಂದು = ಅಂದೆಂದು; ಇಂದು = ಇಂದೆಂದು; ಉಂದು = ಉಂದೆಂದು; ಎಂಬುದುಂ = ಎಂಬ ರೂಪುಂ; ಮೊದಲೆರಡುಂ ವಿಭಕ್ತಿಗಂ = ಆದಿಯ ಎರಡೂ ವಿಭಕ್ತಿಗೆಯುಂ; ಸಪ್ತಮಿಗಂ = ಸಪ್ತಮೀವಿಭಕ್ತಿಗೆಯುಂ; ಏಕರೂಪಂ = ಒಂದೆ ರೂಪಂ; ಆಗಿರ್ಪುದು = ಆಗಿರ್ಪುದು.

ವೃತ್ತಿ. — ಸಪ್ತಮಿಗೆ ಬಂದ ಅಲ್ ಎಂಬುದು ಪ್ರಥಮೆಗಂ ದ್ವಿತೀಯೆಗಂ ಪತ್ತುಗುಂ; ಕಾಲವಾಚಕಂಗಳಪ್ಪ ಅಂದು ಇಂದು ಉಂದು ಎಂದು ಎಂಬ ಶಬ್ದಂಗಳಲುವಿನಂತೆ ಪ್ರಥಮೆಗಂ ದ್ವಿತೀಯೆಗಂ ಸಪ್ತಮಿಗಂ ಸರಿ.

---

1) ವಾಲತಃ ಪ್ರಥಮಾ ದ್ವಿತೀಯಯೋಃ || ಭಾ. ಭೂ. 57. ||
(ಅಕಾರಾಂತ ದಿಗ್ವಾಚಕಗಳತ್ತಣಿಂ ಪರವಾದ ಪ್ರಥಮಾ ದ್ವಿತೀಯಾ ವಿಭಕ್ತಿಗಳಿಗೆ ಅಲ್ ಪ್ರತ್ಯಯ ಬರುವುದು.)

ಪ್ರಯೋಗಂ.—ಪ್ರಥಮೆ ದ್ವಿತೀಯೆ ಸಪ್ತಮಿಗಳಲುವಿಂಗೆ—ಮೂಡಲ್, ಮೂಡಲ್, ಮೂಡಣಿಂ, ಮೂಡಣ್ಗೆ, ಮೂಡಣತ್ತಣಿಂ, ಮೂಡಣ, ಮೂಡಲ್.

ಅಂದು ಮೊದಲಾದುವರ್ಕೆ—ಅಂದು, ಅಂದು, ಅಂದಿಂ, ಅಂದಿಂಗೆ, ಅಂದಿನತ್ತಣಿಂ, ಅಂದಿನ, ಅಂದು. ಉೞಿದುವರ್ಕೆ ಈ ಪರಿ.

ಸೂತ್ರಂ. || ೧೨೨ಅ ||

There are Feminine and Neuter bases (these when used as Masculine or Feminine) with final ಅ which are declined, also in the Singular, like Masculines ending in ಅ.

ಪುದಿಗುಮದಂತಕೆ ಪುಲ್ಲಿಂ- |
ಗದ ವೋಲ್ ಕಿಱಿದೆಡೆಗಳಲ್ಲಿಯೆಲ್ಲಂ ಸ್ತ್ರೀಲಿಂ- ||
ಗದೊಳಂ ಪುಂನಪ್ಪಿನೊಳಂ |
ಪುದಿಗುಂ ತಿಳಿ ಬಹುಳಮಾದುದಾಹರಣೆಗಳಿಂ. || ೧೩೨ ||

ಪದಚ್ಛೇದಂ.— ಪುದಿಗುಂ ಅದಂತಕೆ ಪುಲ್ಲಿಂಗದ ವೋಲ್ ಕಿಱಿದು ಎಡೆಗಳಲ್ಲಿ ಎಲ್ಲಂ ಸ್ತ್ರೀಲಿಂಗದೊಳಂ; ಪುಂನಪ್ಪಿನೊಳಂ ಪುದಿಗುಂ; ತಿಳಿ ಬಹುಳಂ ಆದ ಉದಾಹರಣೆಗಳಿಂ!

ಅನ್ವಯಂ.— ಸ್ತ್ರೀಲಿಂಗದೊಳಂ ಕಿಱಿದೆಡೆಗಳಲ್ಲಿ ಅದಂತಕೆ ಪುಲ್ಲಿಂಗದ ವೋಲ್ ಎಲ್ಲಂ ಪುದಿಗುಂ; ಪುಂನಪ್ಪಿನೊಳಂ ಪುದಿಗುಂ; ಬಹುಳಂ ಆದುದಾಹರಣೆಗಳಿಂ; ತಿಳಿ!

ಟೀಕು.— ಸ್ತ್ರೀಲಿಂಗದೊಳಂ = ಸ್ತ್ರೀಲಿಂಗದಲ್ಲಿಯುಂ; ಕಿಱಿದೆಡೆಗಳಲ್ಲಿ = ಕಿರಿದು ತಾಣಂಗಳಲ್ಲಿ; ಅದಂತಕೆ = ಅಕಾರಾಂತಕ್ಕೆ; ಪುಲ್ಲಿಂಗದ ವೋಲ್ = ಅಕಾರಾಂತ ಪುಲ್ಲಿಂಗದ ಹಾಂಗೆ; ಎಲ್ಲಂ = ಸಪ್ತವಿಭಕ್ತಿಗಳಾಗಮಂಗಳೆಲ್ಲಂ; ಪುದಿಗುಂ = ಪ್ರವೇಶವಾಗುವುದು; ಪುಂನಪ್ಪಿನೊಳಂ = ಗಂಡಾದ ನಪುಂಸಕಲಿಂಗದಲ್ಲಿಯುಂ ಕಿಱಿದು ತಾಣಂಗಳಲ್ಲಿ ಅಕಾರಾಂತಕ್ಕೆ, ಅಕಾರಾಂತಪುಲ್ಲಿಂಗದ ಹಾಂಗೆ, ಸಪ್ತವಿಭಕ್ತಿಗಳೆಲ್ಲಂ; ಪುದಿಗುಂ = ಪೊರ್ದುಗೆಯಾಗುವುದು; ಬಹುಳಂ = ಬಹುಳಂ; ಆದುದಾಹರಣೆಗಳಿಂ = ಆದುದಾಹರಣೆಗಳಿಂದೆ; ತಿಳಿ; = ಅರಿ.

ವೃತ್ತಿ.— ಸ್ತ್ರೀಲಿಂಗದೊಳಂ ಕಿಱಿದೆಡೆಗಳಲ್ಲಿ ಅಕಾರಾಂತಕ್ಕೆ, ಪುಲ್ಲಿಂಗದ ಹಾಂಗೆ, ಸಪ್ತವಿಭಕ್ತಿಗಳೆಲ್ಲಂ ಪತ್ತುಗುಂ; ಗಂಡಾದ ನಪುಂಸಕಲಿಂಗದಲ್ಲಿಯುಂ ಕಿಱಿದು ಶಬ್ದಂಗಳಲ್ಲಿ, ಅಕಾರಾಂತಪುಲ್ಲಿಂಗದಂತಿರೆ, ಸಪ್ತವಿಭಕ್ತಿಗಳೆಲ್ಲಂ ಪುದಿಗುಂ. ಇವಂ ಬಹುಳಮಾದುದಾಹರಣೆಗಳಿಂ ತಿಳಿವುದು.

ಪ್ರಯೋಗಂ.—ಅದಂತಸ್ತ್ರೀಲಿಂಗಕ್ಕೆ—ಅಕ್ಕಂ, ಅಕ್ಕನಂ, ಅಕ್ಕನಿಂ, ಅಕ್ಕಂಗೆ, ಅಕ್ಕನತ್ತಣಿಂ, ಅಕ್ಕನ, ಅಕ್ಕನೊಳ್. ಅವ್ವಂ, ಅಮ್ಮಂ ಎಂಬಿವರ್ಕಮಂತಱಿವುದು.

ಗಂಡಾದ ಅಕಾರಾಂತನಪುಂಸಕಕ್ಕೆ—ಹರಿಣಂ, ಹರಿಣನಂ, ಹರಿಣನಿಂ, ಹರಿಣಂಗೆ, ಹರಿಣನತ್ತಣಿಂ, ಹರಿಣನ, ಹರಿಣನೊಳ್. ಕೋಣಂ, ಹಂಗಂ, ಹಸುಬಂ, ಸರ್ಪಂ, ಗರುಡಂ, ಕೂರ್ಮಂ, ಕಮಠಂ, ವೃಷಭಂ, ಬಸವಂ ಎಂಬಿವಾದಿಯಾದುವರ್ಕಮಿಂತಱಿವುದು.

ಕೆಱೆದೆಡೆಗಳಲ್ಲಿ ಎಂಬುದಱಿಂ ಭೃಂಗ, ತುರಂಗ, ಹಯ, ಗಜ ಮೊದಲಾದ ಶಬ್ದಂಗಳ್ಗೆ ನಪುಂಸಕರೂಪಮೆ ಪತ್ತುಗುಂ—ಭೃಂಗದಿಂ, ತುರಂಗಕ್ಕೆ, ಹಯದತ್ತಣಿಂ, ಗಜದ.

ವರಾಹಶಬ್ದದೊಳ್ವಿಕಲ್ಪಂ—ವರಾಹದಿಂ, ವರಾಹನಿಂ, ವರಾಹಂಗೆ, ವರಾಹಕ್ಕೆ ಎಂಬಂತೆ.

ಹೆಣ್ಣಾದೊಡಂ ಗಂಡಾದೊಡಂ ಹಂಗಂ ಹಸುಬಂ ಸರ್ಪನೆಂಬಿವಾದಿಯಾದುವರ್ಕೆ ಪುಲ್ಲಿಂಗದಂತೆ ರೂಪು ಪತ್ತುಗುಂ—ಹಂಗನಂ, ಹಸುಬನಿಂ, ಸರ್ಪಂಗೆ, ಗರುಡನತ್ತಣಿಂ ಎಂಬಂತಱಿವುದು.

ಸೂತ್ರಂ. ‖ ೧೨೨ಬ ‖

A Kannaḍa Conjunction (ಉಮು ವಿಧಿ) which is suffixed (also) to the terminations, is ಉಂ or ಅಂ. In the Accusative it is inserted, exceptionally, between the augment and the termination. For the Genitive it is not used.

ಅಮುಮೆಂದುಸಿರ್ವ ಸಮುಚ್ಚಯ- |
ದುಮುವಿಧಿ ನಿರುತಂ ದ್ವಿತೀಯೆಯೊಳ್ ಪೊಕ್ಕಿರ್ಕುಂ ‖
ಸಮನಿಸವೆಂದುಂ ಷಷ್ಠಿಯೊ-
ಳಮುಮವು ಮಿಕ್ಕಿನ ವಿಭಕ್ತಿಗಳ ಮೇಲಿರ್ಕುಂ. ‖ ೧೩೩ ‖

ಪದಚ್ಛೇದಂ.—ಅಂ ಉಂ ಎಂದು ಉಸಿರ್ವ ಸಮುಚ್ಚಯದ ಉಮುವಿಧಿ ನಿರುತಂ ದ್ವಿತೀಯೆಯು ಒಳ ಪೊಕ್ಕು ಇರ್ಕುಂ; ಸಮನಿಸವು ಎಂದುಂ ಷಷ್ಠಿಯೊಳ್ ಅಂ ಉಂ ಅವು; ಮಿಕ್ಕಿನ ವಿಭಕ್ತಿಗಳ ಮೇಲೆ ಇರ್ಕುಂ.

ಅನ್ವಯಂ.— ಅಂ ಉಂ ಎಂದು ಉಸಿರ್ವ ಸಮುಚ್ಚಯದ ಉಮುವಿಧಿ ನಿರುತಂ ದ್ವಿತೀಯೆಯ ಒಳ ಪೊಕ್ಕು ಇರ್ಕುಂ; ಷಷ್ಠಿಯೊಳ್ ಎಂದುಂ ಅಂ ಉಂ ಅವು ಸಮನಿಸವು; ಮಿಕ್ಕಿನ ವಿಭಕ್ತಿಗಳ ಮೇಲೆ ಇರ್ಕುಂ.

ಟೀಕು.— ಅಂ = ಅಂ ಎಂದು; ಉಂ = ಉಂ ಎಂದು; ಉಸಿರ್ವ = ಪೇಳ್ವ; ಸಮುಚ್ಚಯದ = ಸಮುಚ್ಚಯಾರ್ಥದ; ಉಮುವಿಧಿ = ಉಂಕಾರವಿಧಿ; ನಿರುತಂ = ನಿಶ್ಚಯವಾಗಿ; ದ್ವಿತೀಯೆಯ = ದ್ವಿತೀಯಾವಿಭಕ್ತಿಯ; ಒಳ ಪೊಕ್ಕು = ಒಳಗಂ ಪೊಕ್ಕು; ಇರ್ಕುಂ = ಇರ್ಪುದು; ಷಷ್ಠಿಯೊಳ್ = ಷಷ್ಠೀವಿಭಕ್ತಿಯಲ್ಲಿ; ಎಂದುಂ = ಆವಾಗಳುಂ; ಅಂ = ಅಂ ಎಂಬ; ಉಂ = ಉಂ ಎಂಬ; ಅವು = ಅವು; ಸಮನಿಸವು = ಪ್ರಾಪ್ತಿಸವು; ಮಿಕ್ಕಿನ = ಉಳಿದ; ವಿಭಕ್ತಿಗಳ = ಪ್ರತ್ಯಯಂಗಳ; ಮೇಲೆ = ಅಗ್ರದಲ್ಲಿ; ಇರ್ಕುಂ = ಇರ್ಪುವು.

ವೃತ್ತಿ.— ಅಮ್ ಉಮ್ ಎಂದು ಪೇಳ್ವ ಸಮುಚ್ಚಯದ ಉಂ ಎಂಬುದು ದ್ವಿತೀಯೆಯ ನಡುವೆ ಪೊಕ್ಕಿರ್ಕುಂ; ಷಷ್ಠಿಯೊಳ್ ಸಮುಚ್ಚಯಂ ಪತ್ತದು; ಅಮ್ ಉಂಗಳ್ಮಿಕ್ಕ ವಿಭಕ್ತಿಗಳ ಮೇಲೆಯನುರೂಪಮಾಗಿ ಪತ್ತುಗುಂ.

ಪ್ರಯೋಗಂ.— ದ್ವಿತೀಯೆಯೊಳಗಣ ಅಮುವಿಂಗೆ—

"ಅವರ್ಗುಮನಂತಕನೊರ್ಮೆಯೆ ಸವಿನೋಡಲ್" || 293 ||

"ಒಂದೆಡೆಯೊಳ್ ಕಟ್ಟುವುದೆ ಪುಲಿಯುಮಂ ಕಪಿಲೆಯುಮಂ." || 294 ||

ಮಿಕ್ಕ ವಿಭಕ್ತಿಗಳ ಮೇಲಣ ಸಮುಚ್ಚಯಕ್ಕೆ—

"ನರನುಂ ನರನಂದನನುಂ ಗುರುವುಂ" || 295 ||

"ಕಾಲಿಂದೆಯುಂ ಕೆಯ್ಯಿಂದೆಯುಂ ಘಟ್ಟಿಸಿದಂ" || 296 ||

ಚತುರ್ಥಿಯೊಳೆರಡುಂ ಪತ್ತುಗುಂ—

"ದ್ರೋಣಂಗಂ ನಿನಗಂ ಬಿಲ್ |
ಜಾಣಿಕೆಯದು ಸಕ್ಕಸಮನೆ. . . . . . ." || 297 ||

"ವಂಚಿಸಿದವಂಗೆಯುಂ ನಿನಗೆಯುಂ ಸಹಜಂ ಬಿಡಿಸಲ್ಕೆ ಬರ್ಕುಮೆ" || 298 ||

"ಜಾದಿಯತ್ತಣಿಂದೆಯುಂ ಕೇದಗೆಯತ್ತಣಿಂದೆಯುಂ ಕಂಪು ಬಂದುದು." || 299 ||

ಸಪ್ತಮಿಗೆ ಅಮ್ ಪತ್ತುವುದು—

"ಚಲದೊಳಮಾಚಾರದೊಳಂ |
ಕಲಿತನದೊಳಂ. . . . ." || 300 ||

ಅಲ್ಲಿಯೆಂಬುದಱ ಮೇಲೆ ಉಂ ಪತ್ತುಗುಂ—

"ಅಲ್ಲಿಯುಮಿಲ್ಲಿಯುಮೆಲ್ಲಿಯುಂ ನರಂ" || 301 ||

ಸೂತ್ರ.[1] || ೧೨೩ ||

Regarding the Vocative (ಆಮಂತ್ರಣಂ, ಸಂಬುದ್ಧಿ) the termination of the Nominative Singular is merely dropped, or lengthening may be used too.

ಎಲ್ಲಿಯುಮಾಮಂತ್ರಣದೊಳ್ |
ಬಲ್ಲರ್ ಪ್ರಥಮೈಕವಚನಮಂ ಲೋಪಿಸುವರ್ ||
ನಿಲ್ಲದೆ ವಿಕಲ್ಪಮುಖದಿಂ |
ಸೊಲ್ಲಿಸುವರ್ ಹ್ರಸ್ವದೀರ್ಘಕಾಕುಗಳೆರಡಂ. || ೧೩೪ ||

ಪದಚ್ಛೇದಂ.— ಎಲ್ಲಿಯುಂ ಆಮಂತ್ರಣದೊಳ್ ಬಲ್ಲರ್ ಪ್ರಥಮೈಕವಚನಮಂ ಲೋಪಿಸುವರ್; ನಿಲ್ಲದೆ, ವಿಕಲ್ಪಮುಖದಿಂ ಸೊಲ್ಲಿಸುವರ್ ಹ್ರಸ್ವದೀರ್ಘಕಾಕುಗಳ್ ಎರಡಂ.

ಅನ್ವಯಂ.— ಆಮಂತ್ರಣದೊಳ್ ಎಲ್ಲಿಯುಂ ಬಲ್ಲರ್ ಪ್ರಥಮೈಕವಚನಮಂ ಲೋಪಿಸುವರ್; ನಿಲ್ಲದೆ, ವಿಕಲ್ಪಮುಖದಿಂ ಹ್ರಸ್ವದೀರ್ಘಕಾಕುಗಳ್ ಎರಡಂ ಸೊಲ್ಲಿಸುವರ್.

ಟೀಕು.— ಆಮಂತ್ರಣದೊಳ್ = ಸಂಬುದ್ಧಿಯಲ್ಲಿ; ಎಲ್ಲಿಯುಂ = ಆವೆಡೆಯಲ್ಲಿಯುಂ; ಬಲ್ಲರ್ = ಬಲ್ಲ ವಿದ್ವಾಂಸರ್; ಪ್ರಥಮೈಕವಚನಮಂ = ಪ್ರಥಮಾವಿಭಕ್ತಿಯ ಏಕವಚನಮಂ;

---

[1] ಆಮಂತ್ರಣೇ ಪ್ರಥಮೈಕವಚನಸ್ಯ ಲೋಪಃ || ಭಾ. ಭೂ. 70. ||
(ಸಂಬೋಧನೆಯಲ್ಲಿ ಪ್ರಥಮೈಕವಚನದ ಮಕಾರಕ್ಕೆ ಲೋಪವಾಗುವುದು.)
ದೀರ್ಘೋಕ್ತಿರ್ನಯಸೇನಸ್ಯ || ಭಾ. ಭೂ. 73. ||
(ನಯಸೇನನ ಮತಾನುಸಾರವಾಗಿ ದೀರ್ಘಾದೇಶವಾಗುವುದೂ ಉಂಟು.)

ಗುಣದಿಂ ಕ್ರಿಯೆಯಿಂ ಸಿಧಾರ್- |
ರಣೆಯೊಳ್ ಸಪ್ತಮಿಯುಮಕ್ಕುಮಾವಿಯದಾಮಂ- ||
ತ್ರಣದೊಳ್ ನೆಗಱ್ಗುಂ ಸಾಧಾ- |
ರಣದೊಳ್ ಲೋಪಂ ತದೇಕವಚನಕ್ಕಕ್ಕುಂ. || ಶ. ಸ್ಮೃ. 28. ||

ಎಸೆದಿರೆ ನಿಲ್ಕುಂ ಸಂಬೋ- |
ಧಿಸುವೆಡೆಗಳೊಳಮುರ್ದು ದೇಸೆಯಿಂ ಮಾರ್ಗದೊಳಂ ||
ನಿಸದಂ ಕ್ರಮಗತಿಯೊಳತಿ |
ಪ್ರಶಸ್ತಿಯಿಂ ಹ್ರಸ್ವದೀರ್ಘಕಾಕುಗಳೆರಡಂ || ಶ. ಸ್ಮೃ. 30. ||

ಲೋಪಿಸುವರ್ = ಲೋಪಮಂ ಮಾಡುವರ್; ನಿಲ್ಲದೆ = ತಡೆಯದೆ; ವಿಕಲ್ಪಮುಖದಿಂ = ವಿಕಲ್ಪ ಮುಖದಿಂದೆ; ಹ್ರಸ್ವದೀರ್ಘಕಾಕುಗಳ್ = ಹ್ರಸ್ವದೀರ್ಘಕಾಕುಗಳ್; ಎರಡಂ = ಎರಡಂ; ಸೊಲ್ಲಿಸುವರ್ = ಪೇಳ್ವರ್.

ವೃತ್ತಿ.— ಆಮಂತ್ರಣದೊಳ್ ಸ್ವರಾಂತಂಗಳ ಪ್ರಥಮೈಕವಚನಕ್ಕೆಲ್ಲಿಯುಂ ಲೋಪಂ; ಆ ಸಂಬುದ್ಧಿಯೊಳ್ ಹ್ರಸ್ವದೀರ್ಘಮೆಂಬೆರಡು ಕಾಕುಗಳಂ ವಿಕಲ್ಪದಿಂ ಪೇಳ್ವರ್.

ಪ್ರಯೋಗಂ.— ಆಮಂತ್ರಣಕ್ಕೆ—

"ದೇವ ಬಿನ್ನಪಂ" || 302 ||

"ಬೆಸೆಯದಿರ್ ಕುಸುಮಾಯುಧ ನಿನ್ನ ಬಲ್ಪು ಪೆಣ್ಮಕ್ಕಳೊಳಲ್ಲದಿಲ್ಲ" || 303 ||

"ಕೇಳ ಮಾಧವ. . . . . " || 304 ||

ಹ್ರಸ್ವಕಾಕುವಿಂಗೆ—

"ಎಲೆ ಗಣಪ ಎಂಬ ಮಾತು ಬಂದಪುದೀಗಳ್ || 305 ||

"ಎಲೆ ಎಲೆ ರಂಭೆ ಊರ್ವಶಿ ತಿಲೋತ್ತಮೆ ಮೇನಕಿ ಮಂಜುಘೋಷಿ. . . . . ." || 306 ||

ದೀರ್ಘಕಾಕುವಿಂಗೆ—

"ಸುಖಸಂಪದಮಂ ಮಾಡ್ಪಿದೆನಗೆ ಪರಮಜಿನೇಂದ್ರಾ" || 307 ||

" . . . . ತಡೆವಂತೇಂ |
ಕಾರಣಂ ಕುರುಪತೀ ಎಮಗೀಗಳ್" || 308 ||

ಸೂತ್ರಂ.[1] || ೧೨೪ ||

Further ಎ, ಏ may be joined to denote the Voca-

ಅವಿಶೇಷದಿಂದದಂತ- |
ಕ್ಕೆವರ್ಣಮೊದವುವುದೆವರ್ಣಮೊದವಿದದಂತ- ||

[1]) ಏತ್ವಂ ವಾ ತದಂತಸ್ಯ || ಭಾ. ಭೂ. 71. ||
(ಆಮಂತ್ರಣದಲ್ಲಿ ಬರುವ ಪ್ರಥಮಾವಿಭಕ್ತಿಯ ಏಕವಚನದ ಮಕಾರಕ್ಕೆ ಏಕಾರವುಂಟು.)

ಭಾಷೆಯೊಳೇಕತ್ವಕ್ಕೆ ಏ- |
ಶೇಷವಿನೇದಂತಮಲ್ಲಿ ವರ್ತಿಸುಗುಮಿರಾ- ||
ಶ್ಲೇಷಂ ತಾನಕ್ಕುಂ ಪರಿ- |
ಶೇಷದ್ವಿಬಹುತ್ವವಿಷಯಮೆನಿಸಿತನಿಕ್ಕರ್ಗಂ || ಶ. ಸ್ಮೃ. 29. |

tive; such being the case, in the Singular of bases with final ಅ the Bindu (S. 104) occurs between, and in the Vocative Plural the ಅರ್ (S. 98).

ಕ್ಕವತರಿಕುಂ ಬಿಂದುವಬಿಂ- |
ದುವಾಗಿ ಬಹುವಚನದರ್ವನಡರ್ವುದೆವರ್ಣಂ. ||೧೩೪||

ಪದಚ್ಛೇದಂ.— ಅವಿಶೇಷದಿಂದೆ ಅದಂತಕ್ಕೆ ಎವರ್ಣಂ ಒದವುವುದು; ಎವರ್ಣಂ ಒದವಿದ ಅದಂತಕ್ಕೆ ಅವತರಿಕುಂ ಬಿಂದು; ಅಬಿಂದುವಾಗಿ ಬಹುವಚನದ ಅರ್ವಂ ಅಡರ್ವುದು ಎವರ್ಣಂ.

ಅನ್ವಯಂ.— ಅವಿಶೇಷದಿಂದೆ ಅದಂತಕ್ಕೆ ಎವರ್ಣಂ ಒದವುವುದು; ಎವರ್ಣಂ ಒದವಿದ ದಂತಕ್ಕೆ ಬಿಂದು ಅವತರಿಕುಂ; ಅಬಿಂದುವಾಗಿ ಎವರ್ಣಂ ಬಹುವಚನದ ಅರ್ವಂ ಅಡರ್ವುದು.

ಟೀಕು.— ಇಲ್ಲಿ ಆಮಂತ್ರಣದೊಳ್ ಎಂಬುದನುವರ್ತನೆ— ಆಮಂತ್ರಣದೊಳ್ = ಸಂಬುದ್ಧಿಯಲ್ಲಿ; ಅವಿಶೇಷದಿಂ = ವಿಶೇಷವಲ್ಲದುದರಿಂದೆ; ಅದಂತಕ್ಕೆ = ಅಕಾರಾಂತಶಬ್ದಕ್ಕೆ; ಎವರ್ಣಂ = = ಎ ಏ ಎಂಬ ಸವರ್ಣಂ; ಒದವುವುದು = ಪ್ರಾಪ್ತಿಸುವುದು; ಎವರ್ಣಂ = ಎ ಏ ಎಂಬ ಸವರ್ಣಂ; ಒದವಿದ = ಪ್ರಾಪ್ತಿಸಿದ; ಅದಂತಕ್ಕೆ = ಅಕಾರಾಂತಕ್ಕೆ; ಬಿಂದು = ಸೊನ್ನೆ; ಅವತರಿಕುಂ = ಹುಟ್ಟುವುದು; ಅಬಿಂದುವಾಗಿ = ಬಿಂದುವಿಲ್ಲದುದಾಗಿ; ಎವರ್ಣಂ = ಎ ಏ ಎಂಬ ಸವರ್ಣಂ; ಬಹುವಚನದ = ಬಹುವಚನದ; ಅರ್ವಂ = ಅರಾಗಮುವಂ; ಅಡರ್ವುದು = ಪತ್ತುವುದು.

ವೃತ್ತಿ.— ಲಿಂಗತ್ರಯಮೆನ್ನದೆ, ವಚನತ್ರಯಮೆನ್ನದೆ, ಸ್ವರಾಂತ ವ್ಯಂಜನಾಂತಂಗಳೆನ್ನದೆ, ಸಾಮಾನ್ಯದಿಂ ಸಂಬೋಧನೆಯ ಕಡೆಯೊಳ್ವಿಕಲ್ಪದಿಂ ಎ ಏ ಎಂಬಿವಕ್ಕುಂ; ಅಕಾರಾಂತದ ಮೇಲೆ ಎ ಏ ಎಂಬಿವು ಪರಮಾಗೆ, ನಡುವೆ ಬಿಂದುವಕ್ಕುಂ; ಬಿಂದುವಿಲ್ಲದೆ, ಬಹುವಚನದರ್ವಿನ ಮೇಲೆ ಎ ಏ ಎಂಬಿವಕ್ಕುಂ.

ಪ್ರಯೋಗಂ.— ಸ್ವರಾಂತ ವ್ಯಂಜನಾಂತಂಗಳ್ಗೆ—

"ಎಳ ಮಾವೇ ತಳಿರುಯ್ಯಲೇ......" || 309 ||

"ಅಳಿಕುಳ ನೀಲಕುಂತಳೆಯೆ ಕೋಕಿಲನಾದೆಯೆ ಹಂಸಯಾನೆಯೆ........" || 310 ||

"ಮನುವೇ ನಿನ್ನಯ ಮಾರ್ಗಂ |
ಜನಕ್ಕಂ ಸೂತ್ರಮಾಯ್ತು . . . ." || 311 ||
. . . . ಚಂದ್ರನೇ |
ಕೊಳನೇ ನಂದನಮೇ ಲತಾಭವನಮೇ . . . ." || 312 ||

ಬಿಂದುವಿಂಗೆ—ಅರುವಿನಮೇಲಣೆವರ್ಣಕ್ಕೆ—
"ಭಟ್ಟರೆ ಬಂದಿರೇಂ ಮಂದೆಗೆ" || 313 ||
"ದೇವರೇಂ ಕರುಣಿಸಿರೆ. . . . ." || 314 ||

ಏಕವಚನದೊಳೆತ್ವಂ ವಿಕಲ್ಪಂ—ಎಲೆ, ಅಭಿಮನ್ಯು! ಎಲೆ, ಅಭಿಮನ್ಯುವೆ! ಅಭಿಮನ್ಯೊ ಎಂದುಮುಂಟು. ಎಲೆ, ತುಂಬಿ! ಎಲೆ, ತುಂಬಿಯೆ!

ಸೂತ್ರಂ.[1] || ೧೨೫ ||

ಪಿರಿದುಂ ದ್ವಿತ್ವಬಹುತ್ವಂ |
ಬರೆ ಗಳ್ಕಳ್ಗುಂಟಿರಾಗಮಂ ಬಹುವಚನ ||
ಸ್ಫುರಿತಕ್ರಿಯೆಗೇಕತೆ ನಿಜ |
ಪರಿಣತೆ ಮೇಣ್ಧಾತುಗೇಕವಚನದೊಳತ್ವಂ. || ೧೩೬ ||

Further to express the Vocative Dual or Plural ಇರ is joined to ಗಳ್ or ಕಳ್ (S. 101), and also to ಅರ್. In addressing a person the verb may be put in the Plural, and to the Verbal theme used for the 2nd person Singular of the imperative ಅ may be joined.

ಪದಚ್ಛೇದಂ. — ಪಿರಿದುಂ ದ್ವಿತ್ವಬಹುತ್ವಂ ಬರೆ, ಗಳ್ಕಳ್ಗೆ ಉಂಟು ಇರಾಗಮಂ; ಬಹುವಚನಸ್ಫುರಿತಕ್ರಿಯೆಗೆ ಏಕತೆ; ನಿಜ ಪರಿಣತೆ, ಮೇಣ್ ಧಾತುಗೆ ಏಕವಚನದೊಳ್ ಅತ್ವಂ.

ಅನ್ವಯಂ. — ಪಿರಿದುಂ ದ್ವಿತ್ವಬಹುತ್ವಂ ಬರೆ, ಗಳ್ಕಳ್ಗೆ ಇರಾಗಮಂ ಉಂಟು; ಬಹುವಚನಸ್ಫುರಿತಕ್ರಿಯೆಗೆ ಏಕತೆ; ಧಾತುಗೆ ಏಕವಚನದೊಳ್ ನಿಜಪರಿಣತೆ, ಮೇಣ್ ಅತ್ವಂ.

---

1) ಇರಾಶ್ಲೇಷೋ ಗಳಃ ಸಂಬೋಧನ ವಿಷಯೇ || ಭಾ. ಭೂ. 72. ||
(ಸಂಬೋಧನದಲ್ಲಿ ಗಳಾಗಮದ ಮುಂದೆ ಇರಾಗಮವು ಬರುವುದು.)
180ನೇ ಪುಟದಲ್ಲಿ ಕೊಟ್ಟ ಶ. ಸ್ಮೃ. 29ನೆಯ ಸೂತ್ರ ನೋಡಿರಿ.

ಟೀಕು. — ಇಲ್ಲಿ ಅನುವರ್ತನೆ— ಆಮಂತ್ರಣದೊಳ್ ಪಿರಿದುಂ = ವಿಶೇಷವಾಗಿ; ದ್ವಿತ್ವ ಬಹುತ್ವಂ = ದ್ವಿವಚನ ಬಹುವಚನಂಗಳ್; ಬರೆ = ಬರೆ; ಗಳ್ಕಳ್ಗೆ = ಗಳಾಗಮ ಕಳಾಗಮಂಗಳ್ಗೆ; ಇರಾಗಮಂ = ಇರ ಎಂಬಾಗಮಂ; ಉಂಟು = ಉಂಟಾಗಿರ್ಪುದು; ಬಹುವಚನ = ಬಹುವಚನದಲ್ಲಿ; ಸ್ಫುರಿತ = ಪ್ರಕಾಶಿಸಲ್ಪಟ್ಟ; ಕ್ರಿಯೆಗೆ = ಕ್ರಿಯೆಗೆ; ಏಕತೆ = ಏಕವಚನಂ ಉಂಟಾಗಿರ್ಪುದು; ಧಾತುಗೆ = ಧಾತುಗಳ್ಗೆ; ಏಕವಚನದೊಳ್ = ಏಕವಚನದಲ್ಲಿ; ನಿಜ ಪರಿಣತೆ = ಇರ್ದ ಹಾಂಗೆ ಪರಿಣಮಿಸುವುದು, ಉಂಟಾಗಿರ್ಪುದು; ಮೇಣ್ = ವಿಕಲ್ಪದಿಂದೆ; ಅತ್ವಂ = ಅಕಾರಂ ಉಂಟಾಗಿರ್ಪುದು.

ವೃತ್ತಿ.—(ಆಮಂತ್ರಣದೊಳ್ ದ್ವಿವಚನ ಬಹುವಚನಂಗಳಾದ ಗಳ್ಗಂ ಕಳ್ಗಂ ಇರಾಗಮಮುಂಟು;) (ಪಿರಿದುಮೆಂಬುದಱಿಂದರುವಿನ ಮೇಲೆಯುಮುಂಟು.) (ಪಿರಿದುಮೆಂಬ ಪ್ರಚುರಗ್ರಹಣದಿಂ ಗಳ್ ಎಂಬುದಱ ಮೇಲೆ ಆ ಇರಾಗಮಂ ಕಿಱಿದೆಡೆಯೊಳ್ಕಾಣ್ಬುದು.) (ಬಹುವಚನಕ್ರಿಯೆಯೊಳೆ ಏಕವಚನಮುಂಟು.) (ನಿಜ ಧಾತುವೇಕವಚನದೊಳಿರ್ದಂತೆ ಸಲ್ಗುಂ.) (ವಿಕಲ್ಪದಿನಾ ಧಾತುವತ್ವಮಂ ಪಡೆಗುಂ.)

ಪ್ರಯೋಗಂ.— ಗಳ್ಗೆ ಇರಾಗಮಂ— ದೆಸೆಗಳಿರ! ಮುಗಿಲ್ಗಳಿರ! "ಸುರತರು ನಂದನಂಗಳಿರ!"

ಸ್ತ್ರೀಪುರುಷವಾಚಕದೊಳಮದುವೆ.

ಕಳ್ಗೆ—ದೇವಿಯರ್ಕಳಿರ! ಬುಧರ್ಕಳಿರ!

ಅರ್ಗೆ—ನಂಟರಿರ! ನಲ್ಲರಿರ! ದೇವಿಯರಿರ!

ಕಿಱಿದೆಡೆಯೊಳಿಲ್ಲ—

"ಜಳಧಿದ್ವೀಪಾಂತರಾಳಂಗಳನಿರದೆ ಪುಗಿಂ ಪೋಗಿಮುಗ್ರಾರಿಗಳ್" || 315 ||

ಬಹುವಚನಕ್ರಿಯೆಯೊಳೇಕವಚನಕ್ಕೆ—

". . . . . . ವಿಹಂಗಮಮಿದೆಂದೇ ಕಬ್ಬ ನೀಮೇಱಿಪಿರ್" || 316 ||

"ದೇವಾಸುರಮಂ ಕೇಳಿರೆ
ದೇವ. . . . ." || 317 ||

"ಅಱಿಯಿರೆ ನೀಮುಮಾಮುಮೊಡನೋದಿದೆವೆಂಬುದನಣ್ಣ. . . ." || 318 ||

ನಿಜಧಾತುಗೆ—

"ಪಾಡೆಲೆ ತುಂಬಿ ಬಗ್ಗಿಸೆಲೆ ಕೋಗಿಲೆ ತೀಡೆಲೆ ಗಂಧವಾಹ" || 319 ||

ಧಾತುವಿನತ್ವಕ್ಕೆ—

"ಬಾರ ಮರಾಳಿಕಾಗಮನೆ ನೋಡ ಚಕೋರವಿಲೋಲನೇತ್ರೆ ನಿಂ- |
ದಾರಯ ಪೀವರಸ್ತನನಿತಂಬಭರಾಲಸೆ ಕೇಳ ಕಾಮಕಾ- ||
ಳೋರಗಕೇಶಪಾಶೆ ಎನಗುತ್ತರಮಂ ಕುಡ ಚಾರುವೇಣುವೀ |
ಣಾರವೆ ನೀನಾರ ಮಗಳೆಲ್ಲಿಗೆ ಪೋದಪಯಾವುದಾಶ್ರಯಂ" || 320 ||

ಸೂತ್ರಂ.[1] || ೧೨೬ ||

By the Nominative are expressed the specification of things (ಲಿಂಗಂ), their property (ಅರ್ಥಂ), number (ವಚನಂ) and accosting (ಸಂಬೋಧನೆ, cf. note on page 86.) In a sentence it forms the agent or Subject (ಕರ್ತೃ), whereas the Accusative forms the object (ಕರ್ಮಂ).

ಅಭಿರೂಪದಿನಾ ಪ್ರಥಮಾ |
ವಿಭಕ್ತಿ ಲಿಂಗಾರ್ಥವಚನಸಂಬೋಧನದೊಳ್ ||
ಪ್ರಭವಿರ್ಪುದಾ ದ್ವಿತೀಯಾ |
ವಿಭಕ್ತಿ ಕರ್ಮದೊಳನಾಕುಳಂ ವರ್ತಿಸುಗುಂ. || ೧೩೭ ||

ಪದಚ್ಛೇದಂ.— ಅಭಿರೂಪದಿಂ ಆ ಪ್ರಥಮಾವಿಭಕ್ತಿ ಲಿಂಗಾರ್ಥವಚನಸಂಬೋಧನದೊಳ್ ಪ್ರಭವಿರ್ಪುದು; ಆ ದ್ವಿತೀಯಾವಿಭಕ್ತಿ ಕರ್ಮದೊಳ್ ಅನಾಕುಳಂ ವರ್ತಿಸುಗುಂ.

ಟೀಕು, ಯಥಾನ್ವಯಂ.— ಅಭಿರೂಪದಿಂ = ಅಭಿವ್ಯಕ್ತವಾದ ರೂಪದಿಂದೆ; ಆ ಪ್ರಥಮಾವಿಭಕ್ತಿ = ಆ ಪ್ರಥಮೆಯೆಂಬ ವಿಭಕ್ತಿ; ಲಿಂಗ = ಲಿಂಗದಲ್ಲಿ; ಅರ್ಥ = ಅರ್ಥದಲ್ಲಿ; ವಚನ = ವಚನದಲ್ಲಿ; ಸಂಬೋಧನದೊಳ್ = ಸಂಬುದ್ಧಿಯಲ್ಲಿ; ಪ್ರಭವಿರ್ಪುದು = ಹುಟ್ಟಿರ್ಪುದು; ಆ ದ್ವಿತೀಯಾವಿಭಕ್ತಿ = ಆ ದ್ವಿತೀಯೆಯೆಂಬ ವಿಭಕ್ತಿ; ಕರ್ಮದೊಳ್ = ಕರ್ಮದಲ್ಲಿ; ಅನಾಕುಳಂ = ವ್ಯಾಕುಳವಿಲ್ಲದುದಾಗಿ; ವರ್ತಿಸುಗುಂ = ವರ್ತಿಸುವುದು.

---

[1] ಲಿಂಗಾರ್ಥವಚನಮಾತ್ರೇ ಪ್ರಥಮಾ || ಭಾ. ಭೂ. 74. ||
(ಲಿಂಗಾರ್ಥ ವಚನಗಳಲ್ಲಿ ಪ್ರಥಮೆಯಪ್ಪುದು.)
ಸಂಬೋಧನೇ ಚ || ಭಾ. ಭೂ. 75. ||
(ಆ ವಿಭಕ್ತಿಯೇ ಸಂಬೋಧನೆಯಲ್ಲಿಯೂ ಬರುವುದು.)
179ನೇ ಪುಟದಲ್ಲಿ ಕೊಟ್ಟ ಶ. ಸ್ಮೃ. 28ನೆಯ ಸೂತ್ರ ನೋಡಿರಿ.

ವೃತ್ತಿ.—ಲಿಂಗದೊಳಂ ಅರ್ಥದೊಳಂ ವಚನಮಾತ್ರದೊಳಂ ಸಂಬೋಧನೆಯೊಳಂ ಪ್ರಥಮಾವಿಭಕ್ತಿಯಕ್ಕುಂ. ಲಿಂಗಮೆಂಬುದು ವಸ್ತುವಿನ ಕುಱಿಪಂ ಪೇೞ್ವುದು; ಅರ್ಥಮೆಂಬುದು ಭಾವವಿಶೇಷಮಂ ಪೇೞ್ವುದು; ವಚನಮಾತ್ರಮೆಂಬುದು ಗಣನೆಯಂ ಪೇೞ್ವುದು; ಸಂಬೋಧನೆಯೆಂಬುದು ಅಭಿಮುಖೀಕರಣಮಂ ಪೇೞ್ವುದು.

ಪ್ರಯೋಗಂ.—ಲಿಂಗಕ್ಕೆ—ಇಂದ್ರಂ, ಚಂದ್ರಂ, ಮನುಷ್ಯಂ; ಗೋಮಿನಿ, ಕಾಮಿನಿ; ಆನೆ, ಕುದುರೆ, ಮರಂ, ಗಿಡು, ಪಕ್ಕಿ, ಮಿಗಂ.

ಅರ್ಥಕ್ಕೆ—ನಿಡಿಯಂ, ಗುಜ್ಜಂ, ಕೆಂಚಂ, ಕರಿಯಂ, ಅಸಿಯಂ, ಇನಿಯಂ.

ವಚನಕ್ಕೆ—ಒಂದು, ಎರಡು, ಮೂಱು; ಓರ್ವಂ, ಇರ್ವರ್, ಮೂವರ್.

ತೃತೀಯಾರ್ಥದ ಕರ್ತೃವಿನೊಳಂ ಪ್ರಥಮೆಯಕ್ಕುಂ—ಅವಂ ಮಾಡಿದಂ, ಅವನಿಂ ಮಾಡೆ ಪಟ್ಟುದು.

ಸಂಬೋಧನೆಗೆ—ಎಲೆ ದೇವ ರಕ್ಷಿಸು.

"ನೀನುಳ್ಳೊಡುಂಟು ರಾಜ್ಯಂ |
ನೀನುಳ್ಳೊಡೆ ಪಟ್ಟಮುಂಟು ಪೇೞೞ್ಗೆಯುಂಟು ||
ನೀನುಳ್ಳೊಡುಂಟು ಬೆಳ್ಗೊಡೆ |
ನೀನಿಲ್ಲದಿವೆಲ್ಲಮೊಳವೆ ಭಾನುತನೂಜಾ" || 321 ||

"ನಲ್ಲಳೆ ನಿನ್ನ ಕಾಲ್ವಿಡಿದಪೆಂ ತಿಳಿ ಮೌನಮಿದೇಕೆ" || 322 ||

ಸ್ತಂಭಕುಂಭಾದಿಜಡವಸ್ತುಗಳೊಳಂ ದೇವತಾಪ್ರತಿಮೆಯೊಳಂ ಲೋಕಾಂತರದೊಳಂ ಆತ್ಮೀಯಚಿತ್ತದೊಳಂ ಅಭಿಮುಖೀಕರಣಮುಪಚಾರಂ—

"ಎಲೆ ಕನ್ನಡಿಕಳಸಮೆ ಕಥೆಯ ಕೇಳ್" || 323 ||

"ತಳಿರೇ ತಾವರೆಯೇ ಮದಾಳಿಕುಳಮೇ ಕನ್ನೈದಿಲೇ ಮತ್ತಕೋ-|
ಕಿಲಮೇ ಸೀತೆಯ ಕಂಡಿರೇ . . . ." || 324 ||

"ಸೈರಿಸು ಹೃದಯಮ್ಮೆ ಸೈರಿಸು" || 325 ||

"ಎಲೆ ಸರ್ವೇಶ ನಿನ್ನ ನಿಜಮಮಂ ತೋಱು . . ." || 326 ||

" . . . . . . ಆವ ಜಗಮ್ಮಂ ಸಾಧಿಸಲ್ವೋದಯ್ ಪೇ-|
ೞಲೆ ವಿದ್ಯಾಧರಚಕ್ರವರ್ತಿ. . . . ." || 327 ||

ಆವುದು ಮಾಡಲ್ವೇಡಿದುದದುವೆ ಕರ್ಮಂ; ಅದರೊಳ್ದ್ವಿತೀಯಾ ವಿಭಕ್ತಿ ವರ್ತಿಸುಗುಂ. ಕರ್ತೃಕರ್ಮಕ್ಕುದಾಹರಣೆ—

"ಪಡೆದಂ ಪದ್ಮಜನೀ ಜಗತ್ರಯಮಂ . . . . ." || 328 ||

ಸೂತ್ರಂ.[1] || ೧೨೭ ||

The Objects in the Accu ative are of 4 different sorts: a thing to be produced as something new (ನಿರ್ವರ್ತ್ಯಂ), one that undergoes change (ವಿಕಾರ್ಯಂ), one that is to be reached (ಪ್ರಾಪ್ಯಂ), and one that is to be observed by the senses (ವೈಷಯಿಕಂ).

ಪ್ರವಿದಿತತತ್ಕರ್ಮಂ ಕ- |
ರ್ತೃವಿನೀಪ್ಸಿತತಮಪದಾರ್ಥಮದು ನಾಲ್ಕುಂ ಭೇ- ||
ದವನಾಳ್ದಿರ್ಕುಂ ನಿರ್ವ- |
ರ್ತ್ಯ ವಿಕಾರ್ಯಂ ಪ್ರಾಪ್ಯಮೆತ್ತಲುಂ ವೈಷಯಿಕಂ. || ೧೩೮ ||

ಪದಚ್ಛೇದಂ.—ಪ್ರವಿದಿತತತ್ಕರ್ಮಂ ಕರ್ತೃವಿನ ಈಪ್ಸಿತತಮಪದಾರ್ಥಂ; ಅದು ನಾಲ್ಕುಂ ಭೇದವಂ ಆಳ್ದು ಇರ್ಕುಂ, ನಿರ್ವರ್ತ್ಯ, ವಿಕಾರ್ಯಂ, ಪ್ರಾಪ್ಯಂ, ಎತ್ತಲುಂ ವೈಷಯಿಕಂ.

ಅನ್ವಯಂ.—ಪ್ರವಿದಿತತತ್ಕರ್ಮಂ ಕರ್ತೃವಿನ ಈಪ್ಸಿತತಮಪದಾರ್ಥಂ; ಅದು ನಿರ್ವರ್ತ್ಯ, ವಿಕಾರ್ಯಂ, ಪ್ರಾಪ್ಯಂ, ಎತ್ತಲುಂ ವೈಷಯಿಕಂ ನಾಲ್ಕುಂ ಭೇದವಂ ಆಳ್ದು ಇರ್ಕುಂ.

ಟೀಕು.—ಪ್ರ = ವಿಶೇಷವಾಗಿ; ವಿದಿತ = ಪ್ರಸಿದ್ಧವಾದ; ತತ್ಕರ್ಮಂ = ಆ ಕರ್ಮಂ; ಕರ್ತೃವಿನ = ಮಾಡುವಾತನ; ಈಪ್ಸಿತತಮಪದಾರ್ಥಂ = (ಅತಿ) ಇಚ್ಛೈಸಲ್ಪಟ್ಟ ಪದಾರ್ಥಂ; ಅದು = ಆ ಕರ್ಮಂ; ನಿರ್ವರ್ತ್ಯ = ನಿರ್ವರ್ತ್ಯ ಎಂದು; ವಿಕಾರ್ಯಂ = ವಿಕಾರ್ಯಮೆಂದು; ಪ್ರಾಪ್ಯಂ = ಪ್ರಾಪ್ಯಮೆಂದು; ಎತ್ತಲುಂ = ಎಲ್ಲಿಯುಂ; ವೈಷಯಿಕಂ = ವೈಷಯಿಕಮೆಂದು; ನಾಲ್ಕುಂ ಭೇದವಂ = ನಾಲ್ಕು ಭೇದವಂ; ಆಳ್ದು = ತಾಳ್ದು; ಇರ್ಕುಂ = ಇಪ್ಪುದು.

ವೃತ್ತಿ.—ಆ ಕರ್ಮಂ ಮಾಡುವನ ಇಷ್ಟಮಪ್ಪ ವಸ್ತು ಅದು ನಿರ್ವರ್ತ್ಯಮೆಂದುಂ, ವಿಕಾರ್ಯಮೆಂದುಂ, ಪ್ರಾಪ್ಯಮೆಂದುಂ, ವೈಷಯಿಕಮೆಂದುಂ,

---

1) ಕರ್ಮಣಿ ದ್ವಿತೀಯಾ || ಭಾ. ಭೂ. 76. ||
(ಕರ್ಮಾರ್ಥದಲ್ಲಿ ದ್ವಿತೀಯಾವಿಭಕ್ತಿಯಾಗುವುದು; ಆ ಕರ್ಮವು ನಾಲ್ಕು ತೆರನಾಗಿದೆ.)

ನಾಲ್ಕು ತೆಱಿನಪ್ಪುದು. ನಿರ್ವರ್ತ್ಯಮೆಂದು ನಿರ್ವಾಹಮನೆಯ್ದುವುದು; ವಿಕಾರ್ಯಮೆಂದು ರೂಪಾಂತರಮನೆಯ್ದುವುದು; ಪ್ರಾಪ್ಯಮೆಂದು ಎಯ್ದಲ್ ಪಡೆವುದು; ವೈಷಯಿಕಮೆಂದು ನಯನಾದಿಗೆ ವಿಷಯಮಪ್ಪುದು.

ಪ್ರಯೋಗಂ. — ಕರ್ಮಕ್ಕೆ — ತುಡಗೆಯಂ ತೊಟ್ಟಂ; ಪೂವಂ ಮುಡಿದಂ.
ನಿರ್ವರ್ತ್ಯಕ್ಕೆ — ಮನೆಯಂ ಮಾಡಿದಂ; ಕಾವ್ಯಮಂ ಪೇೞ್ದಂ.
ವಿಕಾರ್ಯಕ್ಕೆ — ಪಱಿವಂ ಕಡಿದಂ; ಕಾಯಂ ಪೋೞ್ದಂ.
ಪ್ರಾಪ್ಯಕ್ಕೆ — ಊರನೆಯ್ದಿದಂ; ಮರನಂ ಸಾರ್ದಂ.
ವೈಷಯಿಕಕ್ಕೆ — ನೇಸಱಿಂ ನೋಡಿದಂ; ಗೀತಮಂ ಕೇಳ್ದಂ; ನಲ್ಲಳನಪ್ಪಿದಂ; ರಸಮಂ ಪೀರ್ದಂ; ಪೂವಂ ಮೂಸಿದಂ.

ಸೂತ್ರಂ.[1] || ೧೨೮ ||

ತೊಡರ್ದಿಷ್ಟಾನಿಷ್ಟದೊಳೆಡೆ- |
ಯುಡುಗದೆ ಕಾಲಾಧ್ವದೊಳ್ದ್ವಿತೀಯೆಯೆ ಮತ್ತಂ ||
ನುಡಿಗುಂ ತೃತೀಯೆ ಪೇೞಿ- |
ಲ್ಪಡೆಗುಂ ಸಲೆ ಕರ್ತೃಕರಣಹೇತುಸ್ಥಿತಿಯೊಳ್. || ೧೩೯ ||

Further the Objects in the Accusative are things wished for (ಇಷ್ಟಂ) and not wished for (ಅನಿಷ್ಟಂ), time (ಕಾಲಂ), and space (ಅಧ್ವಂ). A double Accusative (ದ್ವಿಕರ್ಮ) occurs when taking or desiring something from somebody. — The Instrumental denotes either the agent, or the instrument (ಕರಣಂ), or the cause (ಹೇತು), or also association (ಸಂಯೋಗಂ).

ಪದಚ್ಛೇದಂ. — ತೊಡರ್ದು ಇಷ್ಟಾನಿಷ್ಟದೊಳ್ ಎಡೆ ಉಡುಗದೆ ಕಾಲಾಧ್ವದೊಳ್ ದ್ವಿತೀಯೆಯೆ ಮತ್ತಂ ನುಡಿಗುಂ; ತೃತೀಯೆ ಪೇೞಿಲ್ಪಡೆಗುಂ ಸಲೆ ಕರ್ತೃಕರಣಹೇತುಸ್ಥಿತಿಯೊಳ್.

---

1) ಕಾಲಾಧ್ವನೋರವಿಚ್ಛೇದೇ || ಭಾ. ಭೂ. 77. ||
(ದ್ವಿತೀಯೆಯನ್ನು ಕಾಲಾಧ್ವದಲ್ಲಿ ನುಡಿವರು.)
ಕರ್ತೃಕರಣಯೋಸ್ತೃತೀಯಾ || ಭಾ. ಭೂ. 78. ||
ತೃತೀಯೆಯನ್ನು ಕರ್ತೃಕರಣಾರ್ಥಗಳಲ್ಲಿ ಹೇಳುವರು.)
ಹೇತಾವಪಿ || ಭಾ. ಭೂ. 79. ||
(ಅದನ್ನು ಕಾರಣಾರ್ಥದಲ್ಲಿಯೂ ಇಡುವರು.)

ಅನ್ವಯಂ.— ಮತ್ತಂ ದ್ವಿತೀಯೆಯೆ ಇಷ್ಟಾನಿಷ್ಟದೊಳ್ ತೊಡರ್ದು, ಎಡೆ ಉಡುಗದೆ, ಕಾಲಾಧ್ವದೊಳ್ ನುಡಿಗುಂ; ತೃತೀಯೆ ಸಲೆ ಕರ್ತೃಕರಣಹೇತುಸ್ಥಿತಿಯೊಳ್ ಪೇಟಿಲ್ಪಡೆಗುಂ.

ಟೀಕು.— ಮತ್ತಂ = ಮತ್ತೆಯುಂ; ದ್ವಿತೀಯೆಯೆ = ದ್ವಿತೀಯಾವಿಭಕ್ತಿಯೆ; ಇಷ್ಟ = ಇಷ್ಟದಲ್ಲಿ; ಅನಿಷ್ಟ = ಅನಿಷ್ಟದಲ್ಲಿ; ತೊಡರ್ದು = ಪೊರ್ದುಗೆಯಾಗಿ; ಎಡೆಯುಡುಗದೆ = ಎಡೆ ಬಿಡದೆ; ಕಾಲ = ಕಾಲದಲ್ಲಿ; ಅಧ್ವದೊಳ್ = ಪಥದಲ್ಲಿ; ನುಡಿಗುಂ = ನುಡಿವುದು; ತೃತೀಯೆ = ತೃತೀಯಾವಿಭಕ್ತಿ; ಸಲೆ = ಚೆನ್ನಾಗಿ; ಕರ್ತೃ = ಕರ್ತೃವಿನಲ್ಲಿ; ಕರಣ = ಕರಣದಲ್ಲಿ; ಹೇತು ಸ್ಥಿತಿಯೊಳ್ = ಹೇತುವಿನ ಸ್ಥಿತಿಯಲ್ಲಿ; ಪೇಟಿಲ್ಪಡೆಗುಂ = ಪೇಟಿಲ್ಪಡೆವುದು.

ವೃತ್ತಿ.— ಇಷ್ಟದೊಳಂ ಅನಿಷ್ಟದೊಳಂ ಕಾಲದೊಳಂ ಅಧ್ವದೊಳಂ ಎಡವಱಿಯದೆ ದ್ವಿತೀಯೆಯಕ್ಕುಂ; ಕರ್ತೃವಿನೊಳಂ ಕರಣದೊಳಂ ಹೇತುವಿನೊಳಂ ತೃತೀಯೆಯಕ್ಕುಂ.

ಪ್ರಯೋಗಂ.— ಇಷ್ಟಕ್ಕೆ— ನೇವಳಮಂ ತೆಗೆದಂ.

ಅನಿಷ್ಟಕ್ಕೆ— ಪಾವಂ ದಾಂಟಿದಂ.

ಕಾಲಕ್ಕೆ— ಅಯ್ದುದಿಂಗಳಂ ತಳ್ವಿದಂ; ಉಪವಾಸದಿಂ ತ್ರಿರಾತ್ರಮನಿರ್ದಂ; ಜಾವಮಂ ತೊಟಿಲ್ದಂ.

ಅಧ್ವಕ್ಕೆ— ಅರೆ ಗಾವುದಮಂ ಪರಿದಂ; ಮೂಗಾವುದಮಂ ನಡೆದಂ.

ದೋಹನಾದಿಗಳೊಳ್ದ್ವಿಕರ್ಮಕಮುಂಟು— ಗುರುವಂ ಜ್ಞಾನಮಂ ಬೆಸಗೊಂಡಂ; ದಾನಿಯಂ ದಾನಮಂ ಬೇಡಿದಂ; ಪಶುವಂ ಪಾಲಂ ಕಱೆದಂ.

ತೃತೀಯೆಯ ಕರ್ತೃವಿಂಗೆ— ಪದಕಮಕ್ಕಸಾಲೆಯಿಂ ಮಾಡಲ್ ಪಟ್ಟುದು; ಕಾವ್ಯಮೆನ್ನಿಂ ಪೇಟಿ ಪಟ್ಟುದು.

ಕರಣಕ್ಕೆ— ಕೊಡಲಿಯಿಂ ಕಡಿದಂ; ಗದೆಯಿಂ ಮೋದಿದಂ; ಕಣ್ಣಿಂ ನೋಡಿದಂ.

ಹೇತುವಿಂಗೆ— ಓಲಗದಿಂ ಪಡೆದಂ; ತಗಹಿಂ ಸಿಲ್ಕಿದಂ; ದೈವದಿಂ ಬಟ್ಟಿಂ.

ಸಂಯೋಗದೊಳಮುಂಟು — ಸಂಗಡದಿಂ ಬಂದಂ.

ಸೂತ್ರಂ[1]. || ೧೨೯ ಮತ್ತು ೧೩೦ ||

ನುತಸಂಪ್ರದಾನರೂಢಂ |
ಚತುರ್ಥಿಯದು ರುಚಿಯೊಳೀರ್ಷೆಯೊಳ್ಮತ್ಸರದೊಳ್ ||
ಹಿತದೊಳ್ಸಂಭೀತಿಯೊಳು- |
ನ್ನತಿಯೊಳ್ಸ್ವಸ್ತ್ಯಾದಿಯೊಳ್ಸ್ವಭಾವಸ್ಥಿತಿಯೊಳ್ || ೧೪೦ ||
ಪ್ರವಿದಿತಹೇತುವಿನೊಳ್ಸಂ- |
ದವನತೆಯೊಳ್ಪ್ರಾಣ್ಯನಾದರಸ್ಮರಣದೊಳು- ||
ದ್ಭವಿಸಿದನೀಪ್ಸಿತದೊಳ್ಸದೃ- |
ಶವೃತ್ತಿಯೊಳ್ಪ್ರತಿನಿಧಾನದೊಳಮಿಷ್ಟದೊಳಂ. || ೧೪೧ ||

The Dative takes place in bestowing to (ಸಂಪ್ರದಾನಂ), in having a taste for (ರುಚಿ), in being angry with (ಈರ್ಷೆ), in envying somebody (ಮತ್ಸರಂ), in being beneficial to (ಹಿತಂ), in fearing something (ಭೀತಿ), in excelling something (ಉನ್ನತಿ), in giving a blessing to (ಸ್ವಸ್ತಿ), in ascribing natural property to (ಸ್ವಭಾವಂ), in accounting for or being the reason for (ಹೇತು), in making obeisance to (ನಮಸ್ಕಾರಂ), in being unkind to (ಅನಾದರಂ), in showing hostility to (ಅನಿಷ್ಟಂ), in comparing with (ಸಾದೃಶ್ಯಂ), in substituting for (ಪ್ರತಿನಿಧಿ), and tn showing love to (ಇಷ್ಟಂ).

ಪದಚ್ಛೇದಂ. — ನುತಸಂಪ್ರದಾನರೂಢಂ ಚತುರ್ಥಿ; ಅದು ರುಚಿಯೊಳ್, ಈರ್ಷೆಯೊಳ್, ಮತ್ಸರದೊಳ್, ಹಿತದೊಳ್, ಸಂಭೀತಿಯೊಳ್, ಉನ್ನತಿಯೊಳ್, ಸ್ವಸ್ತ್ಯಾದಿಯೊಳ್, ಸ್ವಭಾವಸ್ಥಿತಿಯೊಳ್, — ಪ್ರವಿದಿತಹೇತುವಿನೊಳ್, ಸಂದ ಅವನತೆಯೊಳ್, ಪ್ರಾಣ್ಯನಾದರಸ್ಮರಣದೊಳ್, ಉದ್ಭವಿಸಿದ ಅನೀಪ್ಸಿತದೊಳ್, ಸದೃಶವೃತ್ತಿಯೊಳ್, ಪ್ರತಿನಿಧಾನದೊಳಂ ಇಷ್ಟದೊಳಂ.

ಟೀಕು, ಯಥಾನ್ವಯಂ. — ನುತ = ಕೊಂಡಾಡಲ್ಪಟ್ಟ; ಸಂಪ್ರದಾನ = ಸಂಪ್ರದಾನಕಾರಕದಲ್ಲಿ; ರೂಢಂ = ರೂಢಿಯುಳ್ಳುದು; ಚತುರ್ಥಿ = ಚತುರ್ಥೀವಿಭಕ್ತಿಯೆನಿಸುವುದು; ಅದು =

---

1) ಸಂಪ್ರದಾನೇ ಚತುರ್ಥೀ || ಭಾ. ಭೂ. 80. ||
(ಸಂಪ್ರದಾನಕಾರಕದಲ್ಲಿ ಚತುರ್ಥಿಯಾಗುವುದು.)

ರುಚಿಹಿತೇರ್ಷ್ಯಾಭಯೇಷು ಚ |
ಮನ್ಯಕರ್ಮಣಿ ಚಾನಾದರೇ |
ನಮಸ್ಕ್ರಿಯಾಯಾಂ ಸ್ವಸ್ತ್ಯಾದಿಷು ಚ || ಭಾ. ಭೂ. 81. 82. 83. ||

(ಅದು ರುಚಿ, ಹಿತ, ಈರ್ಷ್ಯೆ, ಭಯ, ಬಗೆಧಾತುವಿನ ಕರ್ಮ, ಅನಾದರ, ನಮಸ್ಕಾರ, ಸ್ವಸ್ತ್ಯಾದಿ ಕ್ರಿಯೆಗಳಲ್ಲಿ ಬರುವುದು.)

ಆ ಚತುರ್ಥಿ; ರುಚಿಯೊಳ್ = ರುಚಿಯಲ್ಲಿ; ಈರ್ಷೆಯೊಳ್ = ಕೋಪದಲ್ಲಿ; ಮಚ್ಚರದೊಳ್ = ಮಚ್ಚರದಲ್ಲಿ; ಹಿತದೊಳ್ = ಹಿತದಲ್ಲಿ; ಸಂಭೀತಿಯೊಳ್ = ಲೇಸಾದ ಭೀತಿಯಲ್ಲಿ; ಉನ್ನತಿಯೊಳ್ = ಪೆರ್ಚುಗೆಯಲ್ಲಿ; ಸ್ವಸ್ತ್ಯಾದಿಯೊಳ್ = ಸ್ವಸ್ತಿಯೆಂಬುದು ಮೊದಲಾದುವರಲ್ಲಿ; ಸ್ವಭಾವಸ್ಥಿತಿಯೊಳ್ = ಸ್ವಭಾವದ ಸ್ಥಿತಿಯಲ್ಲಿ ;—ಪ್ರ = ವಿಶೇಷವಾಗಿ; ವಿದಿತ = ಪ್ರಸಿದ್ಧವಾದ; ಹೇತುವಿನೊಳ್ = ಕಾರಣದಲ್ಲಿ; ಸಂದವನತೆಯೊಳ್ = ಸಲುವಳಿಯಾದ ನಮಸ್ಕಾರದಲ್ಲಿ; ಪ್ರಾಣಿ = ಪ್ರಾಣಿಗಳಲ್ಲಿ; ಅನಾದರ = ಉದಾಸೀನದ; ಸ್ಮರಣದೊಳ್ = ನೆನಹಿನಲ್ಲಿ; ಉದ್ಭವಿಸಿದ = ಹುಟ್ಟಿದ; ಅನೀಪ್ಸಿತದೊಳ್ = ಅನಿಚ್ಛೆಯಲ್ಲಿ; ಸದೃಶವೃತ್ತಿಯೊಳ್ = ಸಮಾನವರ್ತನೆಯಲ್ಲಿ; ಪ್ರತಿನಿಧಾನದೊಳಂ = ಪ್ರತಿನಿಧಿಯಲ್ಲಿಯುಂ; ಇಷ್ಟದೊಳಂ = ಇಷ್ಟದಲ್ಲಿಯುಂ ಬರ್ಪುದು.

ವೃತ್ತಿ.— ಸಂಪ್ರದಾನವೆಂದಾವುದಾನೊಂದು ವಸ್ತುವೆನಿಸಿಕೊಂಬ ಪಾತ್ರಂ; ಅಲ್ಲಿ ಚತುರ್ಥಿಯಕ್ಕುಂ. ಅದು ರುಚಿ, ಈರ್ಷೆ, ಮಚ್ಚರ, ಹಿತ, ಭೀತಿ, ಉನ್ನತಿ, ಸ್ವಸ್ತ್ಯಾದಿ, ಸ್ವಭಾವ, ಕಾರಣ, ನಮಸ್ಕಾರ, ಪ್ರಾಣ್ಯನಾದರಸ್ಮರಣ, ಅಸಿಪ್ಸ, ಸಾದೃಶ್ಯ, ಪ್ರತಿನಿಧಿ, ಇಷ್ಟಮೆಂಬಿನಿತವಱೊಳ್ ವರ್ತಿಸುಗುಂ.

ಪ್ರಯೋಗಂ.— ಸಂಪ್ರದಾನಕ್ಕೆ— ಬ್ರಾಹ್ಮಣಂಗೆ ಗೋವಂ ಕೊಟ್ಟಂ.

ರುಚಿಗೆ— ಕೂಸಿಂಗೆ ಲಡ್ಡುಗೆಯಱ್ತಿ.

ಈರ್ಷೆಗೆ— ಕವಿಗೆ ಕವಿ ಮುನಿವಂ.

ಮಚ್ಚರಕ್ಕೆ— ಸವತಿಗೆ ಸವತಿ ಪುರುಡಿಪಳ್; ಬಿರುದರ್ಗೆ ಬಿರುದರ್ ಸೆಣಸುವರ್.

ಹಿತಕ್ಕೆ— ಪಶುವಿಂಗೆ ತೃಣಂ ಹಿತಂ; ರೋಗಿಗೌಷಧಂ ಹಿತಂ.

ಭೀತಿಗೆ— ಪಾಪಕ್ಕಂಜುಗುಂ ತಕ್ಕಂ.

"ಪುಲಿಗಂಜಿ ಪುತ್ತಮಂ ಪೊಕ್ಕಡರೇ ಪಾವು ಕೊಂದು" ‖ 329 ‖

ಉನ್ನತಿಗೆ— ಲೋಕಕ್ಕೀತನಧಿಕಂ; ಮೇರುವಿಂಗೆ ಈತನಗ್ಗಳಂ.

ಸ್ವಸ್ತ್ಯಾದಿಗೆ— ಸಮನಿಸುಗೆ ಜಗಕ್ಕೆಲ್ಲಿಯುಮಭೀಷ್ಟಂ, ಕ್ಷೇಮವೃತ್ತಿ, ಕುಶಲಂ, ಭದ್ರಂ, ಭಾವುಕಂ, ಭವಿತವ್ಯಂ, ಶ್ರೇಯಂ, ಶಿವಂ, ಶುಭಂ, ಸ್ವಸ್ತಿ, ಮಂಗಳಂ, ಕಲ್ಯಾಣಂ!

ಸ್ವಭಾವಕ್ಕೆ— ಸಿಂಹಕ್ಕೆ ಶೌರ್ಯಂ; ಕಪಿಗೆ ಚಪಲತೆ.

ಹೇತುವಿಂಗೆ— ಸಿರಿಗುದ್ಯೋಗಂ; ಮೞೆಗೆ ಮುಗಿಲ್.

ನಮಸ್ಕಾರಕ್ಕೆ— ದೇವರ್ಗೆ ಪೊಡವಟ್ಟಂ; ಗುರುವಿಂಗೆಱಗಿದಂ.

ಪ್ರಾಣ್ಯನಾದರಸ್ಮರಣಕ್ಕೆ — ಮಾನಿಸರಂ ಪುಲ್ಗೆ ಕಷ್ಟಮಾಗೆ ನೆನೆವಂ.

ಅನಿಷ್ಟಕ್ಕೆ — ಆತಂಗೆ ವಿಷಮನಿಕ್ಕಿದಂ; ಆತಂಗೆ ಕತ್ತಿಯಂ ಮಸೆದಂ.

ಸಾದೃಶ್ಯಕ್ಕೆ — ಆತಂಗೀತಂ ತಕ್ಕಂ; ಐರಾವತಕ್ಕೆ ಸುಪ್ರತೀಕಮೋರಗೆ.

ಪ್ರತಿನಿಧಿಗೆ — ಜೇನ ತುಪ್ಪಕ್ಕೆ ಸಕ್ಕರಿ ಸಲ್ವುದು; ಆ ಕಬ್ಬಕ್ಕೀ ಕಬ್ಬ ಮಾಯ್ತು.

ಇಷ್ಟಕ್ಕೆ — ಭಕ್ತಂಗೆ ವರಮನಿತ್ತಂ; ಕೆಳೆಯಂಗೆ ಸಂತಸವಂ ಮಾಡಿದಂ.

ಸೂತ್ರಂ[1]. ॥ ೧೩೧ ॥

ಆದಂ ಪಂಚಮಿಯಪ್ಪುದ- ।
ಪಾದಾನಸ್ಥಲದೊಳದೆ ದಲೊದವುಗುಮಾತಂ- ॥
ಕಾದಾನೇಷ್ಟಾನಿಷ್ಟಾ- ।
ಪಾದಿತಹೇತುವಿನೊಳುದಯದೊಳ್ಗೌರವದೊಳ್. ॥ ೧೪೨ ॥

The Ablative occurs in separating from (ಅಪಾದಾನಂ), in the proceeding of fearful events from (ಭಯಂ), in being adopted by (ಸ್ವೀಕಾರಂ), in the proceeding of desired objects from (ಇಷ್ಟಂ), in the proceeding of undesired objects from (ಅನಿಷ್ಟಂ). in being the reason for (ಹೇತು), in arising from (ಉದಯಂ), and in excelling somebody (ಗೌರವಂ).

ಪದಚ್ಛೇದಂ. — ಆದಂ ಪಂಚಮಿ ಅಪ್ಪುದು ಅಪಾದಾನಸ್ಥಲದೊಳ್: ಅದೆ ದಲ್ ಒದವುಗುಂ ಆತಂಕಾದಾನೇಷ್ಟಾನಿಷ್ಟಾಪಾದಿತಹೇತುವಿನೊಳ್, ಉದಯದೊಳ್, ಗೌರವದೊಳ್.

ಅನ್ವಯಂ. — ಅಪಾದಾನಸ್ಥಲದೊಳ್ ಆದಂ ಪಂಚಮಿ ಅಪ್ಪುದು; ಅದೆ ದಲ್ ಆತಂಕಾದಾನೇಷ್ಟಾನಿಷ್ಟಾಪಾದಿತಹೇತುವಿನೊಳ್, ಉದಯದೊಳ್, ಗೌರವದೊಳ್ ಒದವುಗುಂ.

ಟೀಕು. — ಅಪಾದಾನಸ್ಥಲದೊಳ್ = ಅಪಾದಾನಕಾರಕಸ್ಥಲದಲ್ಲಿ; ಆದಂ = ಆದಮೆಂಬ ಹೀನಗ್ರಹಣದಿಂದೆ; ಪಂಚಮಿ = ಪಂಚಮೀವಿಭಕ್ತಿ; ಅಪ್ಪುದು = ಆಗುವುದು; ಅದೆ = ಆ ಪಂಚಮಿಯೆ; ದಲ್ = ನಿಶ್ಚಯವಾಗಿ; ಆತಂಕ = ಭಯದಲ್ಲಿ; ಆದಾನ = ಸ್ವೀಕಾರದಲ್ಲಿ; ಇಷ್ಟ = ಇಷ್ಟದಲ್ಲಿ; ಅನಿಷ್ಟ = ಇಷ್ಟವಲ್ಲದುದರಲ್ಲಿ; ಆಪಾದಿತ = ಪ್ರತಿಪಾದಿಸಲ್ಪಟ್ಟ; ಹೇತುವಿನೊಳ್ = ಕಾರಣದಲ್ಲಿ; ಉದಯದೊಳ್ = ಜನನದಲ್ಲಿ; ಗೌರವದೊಳ್ = ಗುರುತ್ವದಲ್ಲಿ; ಒದವುಗುಂ = ಪ್ರಾಪ್ತಿಸುವುದು.

---

1) ಅಪಾದಾನೇ ಪಂಚಮಿ. ॥ ಭಾ. ಭೂ. 84. ॥
(ಅಪಾದಾನಕಾರಕದಲ್ಲಿ ಪಂಚಮಿಯಾಗುವುದು.)

ವೃತ್ತಿ. — ಅಪಾದಾನಮೆಂದಾವುದಾನೊಂದಱಿಂ ತೊಲಗುವುದು; ಅಲ್ಲಿ ಪಂಚಮಿಯಕ್ಕುಂ. ಆ ಪಂಚಮಿ ಭಯ, ಸ್ವೀಕಾರ, ಇಷ್ಟ, ಅನಿಷ್ಟ, ಹೇತು, ಉದಯ, ಗುರುತ್ವವೆಂಬಿನಿತಱೊಳಂ ವರ್ತಿಸುಗುಂ.

ಪ್ರಯೋಗಂ. — ಅಪಾದಾನಕ್ಕೆ — ಮರದತ್ತಣಿಂ ಪಣ್ಣುದಿರ್ದುದು; ಕೆಱೆಯತ್ತಣಿಂ ಬಂದಂ.

ಆತನಿಂ ಪಿರಿಯನೆಂಬಂತಪ್ಪವಱೊಳಪಾದಾನಮಂ ಮಱೆ ಮಾಡಿ, ವಿಕಲ್ಪಿಸುವರ್.

ಕೃಷ್ಣನಿಂ ಪಿರಿಯಂ ಬಲಭದ್ರಂ; ದುರ್ಯೋಧನನಿಂ ಕಿಱಿಯಳ್ ದುಶ್ಶಳೆಯೆಂಬಂತೆ.

ಭಯಕ್ಕೆ — ಅರಸನತ್ತಣಿಂ ದಾೞಿ ಬಂದುದು ಹುಲಿಯತ್ತಣಿಂದಂಜಿದೆಂ.
ಸ್ವೀಕಾರಕ್ಕೆ — ಸ್ವಾಮಿಯತ್ತಣಿಂ ನಿರ್ವಾಹಮಾದುದು.
ಇಷ್ಟಕ್ಕೆ — ರಂಭೆಯತ್ತಣಿಂ ಸುಖಂ ಪ್ರಾಪ್ತಿಸಿದುದು.
ಅನಿಷ್ಟಕ್ಕೆ — ಪಗೆಯತ್ತಣಿಂ ಬಂಧನಂ ಬಂದುದು.
ಹೇತುವಿಗೆ — ಉದ್ಯೋಗದತ್ತಣಿಂ ಸಿರಿ ಬಂದುದು.
ಉದಯಕ್ಕೆ — ಸದ್ವಂಶದತ್ತಣಿಂ ಪುಟ್ಟಿದಂ.
ಪೆರ್ಮೆಗೆ — ಕೃಷ್ಣನತ್ತಣಿಂ ಬಲಭದ್ರಂ ಪಿರಿಯಂ.

ಸೂತ್ರಂ[1]. || ೧೩೨ ||

The Genitive is used to denote connection (relation) of ownership (ಪತಿಸಂಬಂಧಂ), of family (ಕುಲ—),

ಪತಿಕುಲಜಾತ್ಯವಯವವಿ- |
ಶ್ರುತಲಕ್ಷಣಸನ್ನಿಧಾನಸಂಸ್ಪರ್ಶಸಮಾ ||
ಗತಸಂಬಂಧದೊಳಂ ತ- |
ದ್ಗತಸಂಬಂಧದೊಳಮುಂಟು ಷಷ್ಠಿಗೆ ಯೋಗಂ. ||೧೪೩||

---

1) ಸಂಬಂಧೇ ಷಷ್ಠೀ || ಭಾ. ಭೂ. 85. ||
(ಸಂಬಂಧದಲ್ಲಿ ಷಷ್ಠೀವಿಭಕ್ತಿಯಾಗುವುದು.)
ಆದಿವಿಭಕ್ತಿಯೊಳಂ ಸ್ವಾ- |
ದ್ಯಾದಿಯೊಳಂ ಷಷ್ಠಿತಾನದಕ್ಕುಂ. . . . || ಶ. ಸ್ಮೃ. 27. ||

of race (ಜಾತಿ—), of membership (ಅವಯವ—), of marking off (ಲಕ್ಷಣ—), of being near (ಸನ್ನಿಧಾನ—), of touching (ಸಂಸ್ಪರ್ಶ—), of connection (ಸಂಬಂಧ—), of being the remainder (ಶೇಷ—), and of being made of (ವಸ್ತುವಿಕಾರ—).

ಪದಚ್ಛೇದಂ. — ಪತಿಕುಲಜಾತ್ಯವಯವವಿಶ್ರುತಲಕ್ಷಣಸನ್ನಿಧಾನಸಂಸ್ಪರ್ಶಸಮಾಗತ ಸಂಬಂಧದೊಳಂ ತದ್ಗತಸಂಬಂಧದೊಳಂ ಉಂಟು ಷಷ್ಠಿಗೆ ಯೋಗಂ.

ಅನ್ವಯಂ. — ಷಷ್ಠಿಗೆ ಯೋಗಂ ಉಂಟು. ಉಳಿದುದು ಯಥಾನ್ವಯಂ.

ಟೀಕು. — ಪತಿ = ಸ್ವಾಮಿಯಲ್ಲಿ; ಕುಲ = ಕುಲದಲ್ಲಿ; ಜಾತಿ = ಜಾತಿಯಲ್ಲಿ; ಅವಯವ = ಅವಯವದಲ್ಲಿ; ವಿಶ್ರುತ = ಪ್ರಸಿದ್ಧವಾದ; ಲಕ್ಷಣ = ಲಕ್ಷಣದಲ್ಲಿ; ಸನ್ನಿಧಾನ = ಸನ್ನಿಧಿಯಲ್ಲಿ; ಸಂ = ಲೇಸಾದ; ಸ್ಪರ್ಶ = ಸ್ಪರ್ಶನದಲ್ಲಿ; ಸಂ = ಲೇಸಾಗಿ; ಆಗತ = ಬಂದುದಾದ; ಸಂಬಂಧದೊಳಂ = ಸಂಬಂಧದಲ್ಲಿಯುಂ; ತತ್ = ಆ ಸಂಬಂಧದಲ್ಲಿ; ಗತ = ಎಯ್ದಲ್ಪಟ್ಟ; ಸಂಬಂಧದೊಳಂ = ಸಂಬಂಧದಲ್ಲಿಯುಂ; ಷಷ್ಠಿಗೆ = ಷಷ್ಠೀವಿಭಕ್ತಿಗೆ; ಯೋಗಂ = ಕೂಟಂ; ಉಂಟು = ಉಂಟಾಗಿರ್ಪುದು.

ವೃತ್ತಿ. — ಸಂಬಂಧದೊಳ್ ಷಷ್ಠಿಯಕ್ಕುಂ. ಅದು ಸ್ವಾಮಿಸಂಬಂಧ, ಕುಲಸಂಬಂಧ, ಜಾತಿಸಂಬಂಧ, ಅವಯವಸಂಬಂಧ, ಲಕ್ಷಣಸಂಬಂಧ, ಸನ್ನಿಧಾನಸಂಬಂಧ, ಸಂಸ್ಪರ್ಶಸಂಬಂಧ, ಸಂಬಂಧದ ಸಂಬಂಧವೆಂಬಿನಿತಱೊಳಮಕ್ಕುಂ. 8.

ಪ್ರಯೋಗಂ. — ಸ್ವಾಮಿಸಂಬಂಧಕ್ಕೆ—ಊರೊಡೆಯಂ; ನಾಡೆಱೆಯಂ.

ಕುಲಸಂಬಂಧಕ್ಕೆ—ಎಮ್ಮ ಸೊಮ್ಮು; ಎಮ್ಮ ಮೋಱೆ; ಎಮ್ಮಳಿಯಂ; ಎಮ್ಮ ತಮ್ಮಂ.

ಜಾತಿಗೆ—ಆನೆಯ ಘಟೆ; ಕುದುರೆಯ ಥಟ್ಟು; ಗಿಳಿಯ ಪಿಂಡು.

ಅವಯವಕ್ಕೆ—ಮರದ ಕೊಂಬು; ಪೂವಿನೆಸಳ್; ಕೊಡೆಯ ಕಾವು.

ಕುಱುಪಿಂಗೆ—ಟೊಪ್ಪಿಗೆಯ ಮಾನಿಸಂ; ತತ್ತಳದ ರಾವುತಂ; ಸಿಂಧುದೇಶದ ಕುದುರೆ.

ಸನ್ನಿಧಾನಕ್ಕೆ—ಕೆಱೆಯ ಕೋಡಿ; ಊರ ಮುಂದು; ಅದಱ ಕೆಲಂ.

ಸಂಸ್ಪರ್ಶಕ್ಕೆ—ಕಳಸದ ತಳಿರ್; ನೀರ ಹಾವಸೆ; ತೋಳ ಬಂದಿ.

ಸಂಬಂಧದ ಸಂಬಂಧಕ್ಕೆ—ನೊಸಲ ಕಣ್ಣ ದೇವಂ; ತೋಳ ಬಾಳ ಕಾಂತಿ; ಹರಿಯ ಪೊಕ್ಕುೞ ತಾವರೆ.

ಮತ್ತಂ ಶೇಷದೊಳಂ ವಸ್ತುವಿಕಾರದೊಳಮುಂಟು —
ಶೇಷಕ್ಕೆ — ಬಳ್ಳದಱ; ಅದಱ ಮಱ.
ವಸ್ತುವಿಕಾರಕ್ಕೆ — ಪೊನ್ನ ಕೋಲ್.
ಎಲ್ಲಾ ವಿಭಕ್ತಿಗಳ್ ಷಷ್ಠಿಗತಮಾದುವಾಗಿ ಸಂಬಂಧಮೆಂಬರ್.

ಸೂತ್ರಂ[1]. || ೧೩೩ ||

ಧೀರರಿನಾವುದು ತಾನಾ- |
ಧಾರಮದಧಿಕರಣಮಲ್ಲಿ ಸಪ್ತಮಿ ತಿಳಿ ನಿ- ||
ರ್ಧಾರಣವಿಷಯವ್ಯಾಪಕ |
ಸಾರವ್ಯವಹಾರಕಾಲಸತ್ಯರ್ಥಗತಂ. || ೧೪೪ ||

The Locative relates to site (ಅಧಿಕರಣಂ), and takes place in making conspicuous among (ನಿರ್ಧಾರಣಂ), in showing the object (of sense) wherewith (ವಿಷಯಂ), the inherent property or substance in (ವ್ಯಾಪಕಂ), and the action of beings in (ವ್ಯವಹಾರಂ), in denoting the time wherein (ಕಾಲಂ), and in expressing the meaning of the Locative-Infinitive with final ಎ (ಸತಿಸಪ್ತಮಿ).

ಪದಚ್ಛೇದಂ. — ಧೀರರಿಂ ಆವುದು ತಾಂ ಆಧಾರಂ, ಅದು ಅಧಿಕರಣಂ; ಅಲ್ಲಿ ಸಪ್ತಮಿ, ತಿಳಿ; ನಿರ್ಧಾರಣವಿಷಯವ್ಯಾಪಕಸಾರವ್ಯವಹಾರಕಾಲಸತ್ಯರ್ಥಗತಂ.

ಅನ್ವಯಂ. — ಧೀರರಿಂ ಆಧಾರಂ ತಾಂ ಆವುದು, ಅದು ಅಧಿಕರಣಂ; ಅಲ್ಲಿ ಸಪ್ತಮಿ, ತಿಳಿ; ನಿರ್ಧಾರಣವಿಷಯವ್ಯಾಪಕಸಾರವ್ಯವಹಾರಕಾಲಸತ್ಯರ್ಥಗತಂ.

ಟೀಕು. — ಧೀರರಿಂ = ವಿದ್ವಾಂಸರಿಂದೆ; ಆಧಾರಂ = ಆಧಾರಂ; ತಾಂ = ತಾಂ; ಆವುದು = ಆವುದು; ಅದು = ಅದು; ಅಧಿಕರಣಂ = ಅಧಿಕರಣಕಾರಕವೆನಿಸುವುದು; ಅಲ್ಲಿ = ಆ ಅಧಿಕರಣಕಾರಕದಲ್ಲಿ; ಸಪ್ತಮಿ = ಸಪ್ತಮೀವಿಭಕ್ತಿ ಬರ್ಪುದು; ತಿಳಿ = ಅರಿ; ನಿರ್ಧಾರಣ =

---

[1]) ಅಧಿಕರಣೇ ಸಪ್ತಮೀ || ಭಾ. ಭೂ. 86. ||
(ಅಧಿಕರಣವೆಂದರೆ ಆಧಾರ; ಅಧಿಕರಣದಲ್ಲಿ ಸಪ್ತಮೀವಿಭಕ್ತಿಯಾಗುವುದು.)
ನಿರ್ಧಾರಣೇ ಚ || ಭಾ. ಭೂ. 87. ||
(ಅದನ್ನು ನಿರ್ಧಾರಣದಲ್ಲಿಯೂ ನುಡಿವರು.)

ಗುಣದಿಂ ಕ್ರಿಯೆಯಿಂ ನಿರ್ಧಾ- |
ರಣೆಯೊಳ್ ಸಪ್ತಮಿಯುಮಕ್ಕುಂ. . . . . || ಶ. ಸ್ಮೃ. 28. ||

ನಿರ್ಧಾರಣದಲ್ಲಿ; ವಿಷಯ = ವಿಷಯದಲ್ಲಿ; ವ್ಯಾಪಕ = ವ್ಯಾಪಕದಲ್ಲಿ; ಸಾರ = ಶ್ರೇಷ್ಠವಾದ; ವ್ಯವಹಾರ = ವ್ಯವಹಾರದಲ್ಲಿ; ಕಾಲ = ಕಾಲದಲ್ಲಿ; ಸತ್ಯರ್ಥ = ಸತಿಸಪ್ತಮಿಯರ್ಥದಲ್ಲಿ; ಗತಂ = ಎಯ್ದಲ್ಪಡುವುದು.

ವೃತ್ತಿ.—ಆವುದಾಧಾರಮದು ಅಧಿಕರಣಂ; ಅಲ್ಲಿ ಸಪ್ತಮಿಯಕ್ಕುಂ. ಅದು ನಿರ್ಧಾರಣದೊಳಂ ವಿಷಯದೊಳಂ ವ್ಯಾಪಕದೊಳಂ ವ್ಯವಹಾರದೊಳಂ ಕಾಲದೊಳಂ ಸತ್ಯರ್ಥದೊಳಂ ವರ್ತಿಸುಗುಂ.

ಪ್ರಯೋಗಂ.—ಅಧಿಕರಣಕ್ಕೆ—ಪಾಸಿನೊಳ್ನಿದ್ರೆ ಗೆಯ್ದಂ; ಪಱಿಗೋಲೊಳ್ಕುಳ್ಳಿರ್ದಂ.

ನಿರ್ಧಾರಣಮೆಂಬುದು ಗುಣಮೆಂಬ ಕ್ರಿಯೆಯೆಂಬ ಎರಡಱಿಂ ಜಾತಿಯತ್ತಣಿಂ ವಸ್ತುವಂ ಬೇರ್ಕೆಯ್ವುದು.

ಗುಣಕ್ಕೆ—ದೇವರೊಳ್ನಿರ್ದೋಷಿಯಾಪ್ತಂ; ರತ್ನಂಗಳೊಳ್ಮಾಣಿಕ್ಯಮುತ್ತಮಂ.

ಕ್ರಿಯೆಗೆ—ಪರಿಕಾಱಿರೊಳೀತಂ ಕಾಲ್ವಲ್ಲಿದಂ; ಕಾದುವರೊಳೀತಂ ಮೆಯ್ಗಲಿ.

ವಿಷಯಕ್ಕೆ—ಕಿವಿಯೊಳ್ಪಚ್ಚರ್ದಂ; ಮೊಗದೊಳ್ಮೆಲ್ದಂ.

ವ್ಯಾಪಕಕ್ಕೆ—ಪೂವಿನೊಳ್ಕಂಪು; ಕರ್ಬಿನೊಳ್ ರಸಂ; ಎಳ್ಳೊಳ್ ಎಣ್ಣೆ.

ವ್ಯವಹಾರಕ್ಕೆ—ತಪದೊಳ್ನೆಗಟ್ದಿಂ; ವೀರದೊಳೆಸೆದಂ.

ಕಾಲಕ್ಕೆ—ವಸಂತದೊಳ್ ಮಾವು ಬಂದುದು; ಶರದೊಳ್ದಿಗ್ವಿಜಯಮುಚಿತಂ.

ಸತ್ಯರ್ಥಕ್ಕೆ—ಬರೆ ಕಂಡಂ=ಬರ್ಪೆಡೆಯೊಳ್ಕಂಡಂ.

ಸೂತ್ರಂ[1]. || ೧೩೪ ||

It happens that cases are, as it were, interchang-

ಇಂತೀ ಪೇೞ್ದ ವಿಭಕ್ತಿಗ- |
ಳೆಂತುಂ ಪಲ್ಲಟಿಸುಗುಂ ಯಥೇಷ್ಟಂ ಪ್ರಥಮಾ- ||

[1] ಆಸಾಂ ವ್ಯತ್ಯಯೋ ಬಹುಳಂ || ಭಾ. ಭೂ. 88. ||
(ಈ ವಿಭಕ್ತಿಗಳು ವಿಕಲ್ಪದಿಂದ ಪಲ್ಲಟಿಸುವುವು.)
ಶ. ಸ್ಮೃ. 26, 27 ಸೂತ್ರಗಳನ್ನು 167, 192ನೇ ಪುಟಗಳಲ್ಲಿ ನೋಡಿರಿ.

ed; for instance the *Genitive* has been used where the sense seems to require the Nominative or the Accusative.

ರ್ಥಂ ತೋಱಿಯುಂ ದ್ವಿತೀಯಾ- |
ರ್ಥಂ ತೋಱಿಯುಮಲ್ಲಿ ಷಷ್ಠಿ ದೊರೆಕೊಂಡಿರ್ಕುಂ. || ೧೪೫ ||

ಪದಚ್ಛೇದಂ.— ಇಂತು ಈ ಪೇೞ್ದ ವಿಭಕ್ತಿಗಳ್ ಎಂತುಂ ಪಲ್ಲಟಿಸುಗುಂ, ಯಥೇಷ್ಟಂ; ಪ್ರಥಮಾರ್ಥಂ ತೋಱಿಯುಂ ದ್ವಿತೀಯಾರ್ಥಂ ತೋಱಿಯುಂ ಅಲ್ಲಿ ಷಷ್ಠಿ ದೊರೆಕೊಂಡು ಇರ್ಕುಂ.

ಅನ್ವಯಂ.— ಇಂತು ಈ ಪೇೞ್ದ ವಿಭಕ್ತಿಗಳ್ ಯಥೇಷ್ಟಂ ಎಂತುಂ ಪಲ್ಲಟಿಸುಗುಂ; ಪ್ರಥಮಾರ್ಥಂ ತೋಱಿಯುಂ ದ್ವಿತೀಯಾರ್ಥಂ ತೋಱಿಯುಂ ಅಲ್ಲಿ ಷಷ್ಠಿ ದೊರೆಕೊಂಡು ಇರ್ಕುಂ.

ಟೀಕು.— ಇಂತು = ಹೀಗೆ; ಈ ಪೇೞ್ದ ವಿಭಕ್ತಿಗಳ್ = ಈ ಪೇೞ್ದ ಸಪ್ತ ವಿಭಕ್ತಿಗಳ್; ಯಥೇಷ್ಟಂ = ಇಚ್ಛೆ ಬಂದ ಹಾಗೆ; ಎಂತುಂ = ಹೇಗೆಯಾದೊಡಂ; ಪಲ್ಲಟಿಸುಗುಂ = ಪಲ್ಲಟವಾಗುವುವು; ಪ್ರಥಮಾರ್ಥಂ = ಪ್ರಥಮಾವಿಭಕ್ತಿಯರ್ಥಂ; ತೋಱಿಯುಂ = ಕಾಣಿಸೆಯುಂ; ದ್ವಿತೀಯಾರ್ಥಂ = ದ್ವಿತೀಯಾವಿಭಕ್ತಿಯರ್ಥಂ; ತೋಱಿಯುಂ = ಕಾಣಿಸೆಯುಂ; ಅಲ್ಲಿ = ಆ ಸ್ಥಾನದಲ್ಲಿ; ಷಷ್ಠಿ = ಷಷ್ಠೀವಿಭಕ್ತಿ; ದೊರೆಕೊಂಡಿರ್ಕುಂ = ಪ್ರಾಪ್ತಿಸಿರ್ಪುದು.

ವೃತ್ತಿ.— ಈ ಪೇೞ್ದ ವಿಭಕ್ತಿಗಳ್ ಯಥಾಸಂಭವದಿನೆಂತಾದೊಡಂ ಪಲ್ಲಟಿಪುವು; ಅಲ್ಲಿ ಪ್ರಥಮಾರ್ಥದೊಳಂ ದ್ವಿತೀಯಾರ್ಥದೊಳಂ ಷಷ್ಠಿಯಕ್ಕುಂ.

ಪ್ರಯೋಗಂ.— ಪ್ರಥಮಾರ್ಥದ ಷಷ್ಠಿಗೆ—

". . . . . ನಿ-
ಶ್ಯಂಕೆಯಿಂ ನೃಪನ ಪೇೞಿ . . . ." || 330 ||
"ಚಿತ್ತಭವಗ್ರಹದ ಸೋಂಕೆ ಸುಜನೋತ್ತಂಸಾ" || 331 ||

ನೃಪಂ ಪೇೞೆ, ಗ್ರಹಂ ಸೋಂಕೆಯೆಂದಿವರ್ಕರ್ಥಂ.

ದ್ವಿತೀಯಾರ್ಥದ ಷಷ್ಠಿಗೆ—

". . . ಎಲವೊ ನೀನೆನ್ನ ಕೊಂದಯ್ ಕಾಲ್ಪಿಡಿದಪಯೊ. . . ." || 332 ||

". . . . . ತೆಂಕ ನಾಡ ಮಱೆಯಲ್ಕೆಂದುಂ ಮನಂ ಬರ್ಕುಮೇ" || 333 ||

ಎನ್ನಂ ಕೊಂದಯ್, ನಾಡಂ ಮಱೆಯಲ್ಕೆಂದಿವರ್ಕರ್ಥಂ.

ಸೂತ್ರಂ. || ೧೩೫ ||

Thus, instead of the Nominative, the Instrumental, the Dative and the Ablative, the *Accusative* is used; instead of the Instrumental the *Locative;* and instead of the Ablative the *Instrumental.*

ಸ್ವಾರ್ಥಂ ಪ್ರಥಮಾರ್ಥತೃತೀ- |
ಯಾರ್ಥಚತುರ್ಥ್ಯರ್ಥದೊಳ್ದ್ವಿತೀಯೆ ತೃತೀಯೋ- ||
ಕ್ತಾರ್ಥದೊಳಾ ಸಪ್ತಮಿಯೆ ಸ- |
ಮರ್ಥಂ ಪಂಚಮಿಯೊಳಂ ತೃತೀಯೆ ಸಮರ್ಥಂ. |
|| ೧೮೭ ||

ಪದಚ್ಛೇದಂ.—ಸ್ವಾರ್ಥಂ ಪ್ರಥಮಾರ್ಥತೃತೀಯಾರ್ಥಚತುರ್ಥ್ಯರ್ಥದೊಳ್ ದ್ವಿತೀಯೆ; ತೃತೀಯೋಕ್ತಾರ್ಥದೊಳ್ ಆ ಸಪ್ತಮಿಯೆ ಸಮರ್ಥಂ; ಪಂಚಮಿಯೊಳಂ ತೃತೀಯೆ ಸಮರ್ಥಂ.

ಅನ್ವಯಂ.—ಪ್ರಥಮಾರ್ಥತೃತೀಯಾರ್ಥಚತುರ್ಥ್ಯರ್ಥದೊಳ್ ದ್ವಿತೀಯೆ ಸ್ವಾರ್ಥಂ; ತೃತೀಯೋಕ್ತಾರ್ಥದೊಳ್ ಆ ಸಪ್ತಮಿಯೆ ಸಮರ್ಥಂ; ಪಂಚಮಿಯೊಳಂ ತೃತೀಯೆ ಸಮರ್ಥಂ.

ಟೀಕು.—ಪ್ರಥಮಾರ್ಥ = ಪ್ರಥಮಾವಿಭಕ್ತಿಯರ್ಥದಲ್ಲಿ; ತೃತೀಯಾರ್ಥ = ತೃತೀಯಾ ವಿಭಕ್ತಿಯರ್ಥದಲ್ಲಿ; ಚತುರ್ಥ್ಯರ್ಥದೊಳ್ = ಚತುರ್ಥೀವಿಭಕ್ತಿಯರ್ಥದಲ್ಲಿ; ದ್ವಿತೀಯೆ = ದ್ವಿತೀಯಾವಿಭಕ್ತಿ; ಸ್ವಾರ್ಥಂ = ತನ್ನರ್ಥವುಳ್ಳುದಾಗಿರ್ಪುದು; ತೃತೀಯಾ = ತೃತೀಯಾವಿಭಕ್ತಿಯಿಂದೆ; ಉಕ್ತ = ಹೇಳಲ್ಪಟ್ಟ; ಅರ್ಥದೊಳ್ = ಅರ್ಥದಲ್ಲಿ; ಆ ಸಪ್ತಮಿಯೆ = ಆ ಸಪ್ತಮೀವಿಭಕ್ತಿಯೆ; ಸಮರ್ಥಂ = ಸಮರ್ಥವಾಗಿರ್ಪುದು; ಪಂಚಮಿಯೊಳಂ = ಪಂಚಮೀವಿಭಕ್ತಿಯಲ್ಲಿಯುಂ; ತೃತೀಯೆ = ತೃತೀಯಾವಿಭಕ್ತಿ; ಸಮರ್ಥಂ = ಸಮರ್ಥವಾಗಿರ್ಪುದು.

ವೃತ್ತಿ.—ಪ್ರಥಮಾರ್ಥದೊಳಂ ತೃತೀಯಾರ್ಥದೊಳಂ ಚತುರ್ಥ್ಯರ್ಥದೊಳಂ ಸಮುಚ್ಚಯದಿಂ ಪಂಚಮ್ಯರ್ಥದೊಳಂ ದ್ವಿತೀಯೆಯಕ್ಕುಂ; ತೃತೀಯಾರ್ಥದೊಳ್ ಸಪ್ತಮಿಯಕ್ಕುಂ; ಪಂಚಮ್ಯರ್ಥದೊಳ್ ತೃತೀಯೆಯಕ್ಕುಂ.

ಪ್ರಯೋಗಂ.—ಪ್ರಥಮಾರ್ಥದ ದ್ವಿತೀಯೆಗೆ—ನುಣ್ಪುಳ್ಳನೆಂಬಲ್ಲಿ, ನುಣ್ಪನುಳ್ಳಂ ಎಂದಾಯ್ತು.

ತೃತೀಯಾರ್ಥದ ದ್ವಿತೀಯೆಗೆ—ದೇವರಂ ಪೂವಿಂದರ್ಚಿಸಿದನೆಂಬಲ್ಲಿ, ಪೂವನರ್ಚಿಸಿದಂ ಎಂದಾಯ್ತು.

ಚತುರ್ಥ್ಯರ್ಥದ ದ್ವಿತೀಯೆಗೆ—ಪೊನ್ನಂ ಬಡ್ಡಿಗೆ ಕೊಟ್ಟನೆಂಬಲ್ಲಿ, ಪೊನ್ನಂ ಬಡ್ಡಿಯಂ ಕೊಟ್ಟನೆಂದಾಯ್ತು.

ಪಂಚಮ್ಯರ್ಥದ ದ್ವಿತೀಯೆಗೆ— ಮಾಣವಕನತ್ತಣಿಂ ಕಾರ್ಯಮಂ ಬೆಸಗೊಂಡನೆಂಬಲ್ಲಿ, ಮಾಣವಕನಂ ಕಾರ್ಯಮಂ ಬೆಸಗೊಂಡನೆಂದಾಯ್ತು.

ತೃತೀಯಾರ್ಥದ ಸಪ್ತಮಿಗೆ—ಕೊಡಲಿಯಿಂ ಕಡಿದನೆಂಬಲ್ಲಿ, ಕೊಡಲಿಯೊಳ್ಕಡಿದನೆಂದಾಯ್ತು; ಗದೆಯಿಂ ಪೊಯ್ದನೆಂಬಲ್ಲಿ ಗದೆಯೊಳ್ ಪೊಯ್ದನೆಂದಾಯ್ತು; ಕಿವಿಯಿಂ ಕೇಳ್ದನೆಂಬಲ್ಲಿ ಕಿವಿಯೊಳ್ ಕೇಳ್ದನೆಂದಾಯ್ತು.

ಪಂಚಮ್ಯರ್ಥದ ತೃತೀಯೆಗೆ— ಕೆಱೆಯತ್ತಣಿಂ ಬಂದನೆಂಬಲ್ಲಿ, ಕೆಱೆಯಿಂ ಬಂದನೆಂದಾಯ್ತು; ಕರಿಶಿರದತ್ತಣಿಂ ಮುತ್ತೊಕ್ಕುಮೆಂಬಲ್ಲಿ, ಕರಿಶಿರದಿಂ ಮುತ್ತೊಕ್ಕುಮೆಂದಾಯ್ತು.

"ಮತ್ತಹಸ್ತಿಗಳ ಮಸ್ತಕದಿಂ ಬಿದಿರಿಂ ಫಣೀಂ- |
ದ್ರೋತ್ತಮಾಂಗದಿನಗುರ್ವಿಪ ಪಂದಿಯ ಕೋಲ್ಟಿಳಿಂ ||
ಪತ್ತುಪಿಟ್ಟಗನಿಕುಂಜದೊಳೊಕ್ಕೆಳಮುತ್ತನಾ- |
ಯ್ವುತ್ತುಮಿರ್ಪ ಶಬರಪ್ರಿಯಕಾಮಿನಿಯರ್ಕಳಿಂ" || 334 ||
"ಆಲಿವರಲ್ಗಳುಮಿಂದ್ರಗೋಪಮುಂ ಸೂಸಿದುವಭ್ರದಿಂ" |
"ತಿಳಿಗೊಳದಿಂದೆ ಪಾಱಿದುವು ಹಂಸಕುಳಂ". || 335 ||

ಸೂತ್ರಂ. || ೧೩೭ ||

ಕೃತಿಯುಕ್ತಂ ಷಷ್ಠಿಯೊಳಂ |
ದ್ವಿತೀಯೆಯೊಳಮಾ ಚತುರ್ಥಿ ಸಪ್ತಮಿಯೊಳೆ ಸಂ- |
ಗತಮಾ ಪ್ರಥಮಾಷಷ್ಠೀ |
ಚತುರ್ಥಿಗಳ್ ಪ್ರಥಮೆಯುಂ ದ್ವಿತೀಯೆಯೊಳಕ್ಕುಂ.
|| ೧೫೭ ||

Further, instead of the Genitive and the Accusative, the *Dative* is put; instead of the Locative the *Nominative, Genitive* and *Dative* appear; and instead of the Accusative, the *Nominative*.

ಪದಚ್ಛೇದಂ.— ಕೃತಿಯುಕ್ತಂ ಷಷ್ಠಿಯೊಳಂ ದ್ವಿತೀಯೆಯೊಳಂ ಆ ಚತುರ್ಥಿ; ಸಪ್ತಮಿಯೊಳೆ ಸಂಗತಂ ಆ ಪ್ರಥಮಾಷಷ್ಠೀಚತುರ್ಥಿಗಳ್; ಪ್ರಥಮೆಯುಂ ದ್ವಿತೀಯೆಯೊಳ್ ಅಕ್ಕುಂ.

ಅನ್ವಯಂ.— ಷಷ್ಠಿಯೊಳಂ ದ್ವಿತೀಯೆಯೊಳಂ ಆ ಚತುರ್ಥಿ ಕೃತಿಯುಕ್ತಂ; ಸಪ್ತಮಿಯೊಳೆ ಆ ಪ್ರಥಮಾಷಷ್ಠೀಚತುರ್ಥಿಗಳ್ ಸಂಗತಂ; ದ್ವಿತೀಯೆಯೊಳ್ ಪ್ರಥಮೆಯುಂ ಅಕ್ಕುಂ.

ಟೀಕು.—ಷಷ್ಠಿಯೊಳಂ = ಷಷ್ಠೀವಿಭಕ್ತಿಯಲ್ಲಿಯುಂ; ದ್ವಿತೀಯೆಯೊಳಂ = ದ್ವಿತೀಯಾ ವಿಭಕ್ತಿಯಲ್ಲಿಯುಂ; ಆ ಚತುರ್ಥಿ = ಆ ಪ್ರಸಿದ್ಧವಾದ ಚತುರ್ಥೀವಿಭಕ್ತಿ; ಕೃತಿಯುಕ್ತಂ = ಕಾವ್ಯಯುಕ್ತಂ ಅಪ್ಪುದು; ಸಪ್ತಮಿಯೊಳ್ = ಸಪ್ತಮೀವಿಭಕ್ತಿಯಲ್ಲಿಯೆ; ಆ ಪ್ರಥಮಾಷಷ್ಠೀ ಚತುರ್ಥಿಗಳ್ = ಆ ಪ್ರಥಮಾವಿಭಕ್ತಿ ಷಷ್ಠೀವಿಭಕ್ತಿ ಚತುರ್ಥೀವಿಭಕ್ತಿಗಳ್; ಸಂಗತಂ = ಸಂಗತಂಗಳ್ ಅಪ್ಪುವು; ದ್ವಿತೀಯೆಯೊಳ್ = ದ್ವಿತೀಯಾವಿಭಕ್ತಿಯಲ್ಲಿ; ಪ್ರಥಮೆಯುಂ = ಪ್ರಥಮಾ ವಿಭಕ್ತಿಯುಂ; ಅಕ್ಕುಂ = ಅಪ್ಪುದು.

ವೃತ್ತಿ.—ಷಷ್ಠಿಯೊಳಂ ದ್ವಿತೀಯೆಯೊಳಂ ಚತುರ್ಥಿಯಕ್ಕುಂ; ಸಪ್ತಮಿಯೊಳ್ಪ್ರಥಮೆ ಷಷ್ಠಿ ಚತುರ್ಥಿಯಕ್ಕುಂ; ದ್ವಿತೀಯೆಯೊಳ್ಪ್ರಥಮೆಯಕ್ಕುಂ.

ಪ್ರಯೋಗಂ.—ಷಷ್ಠಿಯ ಚತುರ್ಥಿಗೆ—ನಾಡೊಡೆಯಂ ನಾಟಿಕ್ಕೊಡೆಯಂ; ಕೊಡೆಯೊಡೆಯಂ ಕೊಡೆಗೊಡೆಯಂ; ಎರ್ದೆಯಾಣ್ಮಂ ಎರ್ದೆಗಾಣ್ಮಂ.

"....ಎರ್ದೆಗಾಣ್ಮನೆನ್ನರಸನೆಲ್ಲಿದನೋ ಲಲಿತಾಂಗವಲ್ಲಭಂ."

|| 336 ||

ದ್ವಿತೀಯೆಯ ಚತುರ್ಥಿಗೆ—ಶಿಷ್ಯನಂ ಕಲ್ಪಿಸಿದನೆಂಬಲ್ಲಿ, ಶಿಷ್ಯಂಗೆ ಕಲ್ಪಿಸಿದಂ; ಆಕೆಯಂ ತಿಳಿಪಿದನೆಂಬಲ್ಲಿ ಆಕೆಗೆ ತಿಳಿಪಿದಂ.

ಸಪ್ತಮಿಯ ಪ್ರಥಮೆಗೆ—ಒಂದು ದಿವಸದೊಳ್ಬಂದನೆಂಬಲ್ಲಿ, ಒಂದು ದಿವಸಂ ಬಂದಂ.

ಸಪ್ತಮಿಯ ಷಷ್ಠಿಗೆ—ಚಾಗಿಗಳೊಳ್ ಬಲ್ಲಹಂ, ಚಾಗಿಗಳ ಬಲ್ಲಹಂ; ಈವರೊಳ್ದೇವಂ, ಈವರ ದೇವಂ; ರಸಿಕರೊಳ್ ಚಕ್ರವರ್ತಿ, ರಸಿಕರ ಚಕ್ರವರ್ತಿ.

ಸಪ್ತಮಿಯ ಚತುರ್ಥಿಗೆ—ತಾವರೆಯೊಳ್ ಪುಟ್ಟಿದನೆಂಬಲ್ಲಿ, ತಾವರೆಗೆ ಪುಟ್ಟಿದಂ; ಅಲರೊಳ್ ಬೆಳ್ಪೆಂಬಲ್ಲಿ ಅಲರ್ಗೆ ಬೆಳ್ಪು. ಬಿಂಬದೊಳ್ ತೇಜಂ, ಬಿಂಬಕ್ಕೆ ತೇಜಂ.

ದ್ವಿತೀಯೆಯ ಪ್ರಥಮೆಗೆ—ಒಂದು ವರ್ಷಮನಿರ್ದಂ, ಒಂದು ವರ್ಷಮಿರ್ದಂ.

ಇಂತು ನುಡಿವ ಬಿನ್ನಣದಿಂ ಕಾರಕಮಂ ನಿಯತಾರ್ಥಮೆಂದಱಿವುದು.

ಸೂತ್ರಂ. || ೧೩೭ || ೬೩೬

Nouns of class or race (ಜಾತಿ) and others are often put in the Singular with their Verb in the Plural,

ಅಕ್ಕುಂ ಜಾತಿಯೊಳೇಕ- |
ತ್ವಕ್ಕೆ ಬಹುತ್ವಂ। ಬಹುತ್ವದೆಡೆಗೇಕತ್ವಂ ||
ಪೊಕ್ಕು ವಿಶೇಷಣಮಕ್ಕುಂ |
ಮೊಕ್ಕಳಮಾ ಜಾತಿಯಲ್ಲದಲ್ಲಿಯುಮೆಂಬರ್. || ೧೪೮ ||

and the Subject (being Neuter) in the Plural is frequently followed by its Adjective (ವಿಶೇಷಣಂ) in the Singular.

ಪದಚ್ಛೇದಂ.— ಅಕ್ಕುಂ ಜಾತಿಯೊಳ್ ಏಕತ್ವಕ್ಕೆ ಬಹುತ್ವಂ; ಬಹುತ್ವದ ಎಡೆಗೆ ಏಕತ್ವಂ ಪೊಕ್ಕು, ವಿಶೇಷಣಂ ಅಕ್ಕುಂ, ಮೊಕ್ಕಳಂ ಆ ಜಾತಿ ಅಲ್ಲದಲ್ಲಿಯುಂ ಎಂಬರ್.

ಅನ್ವಯಂ.— ಜಾತಿಯೊಳ್ ಏಕತ್ವಕ್ಕೆ ಬಹುತ್ವಂ ಅಕ್ಕುಂ; ಮೊಕ್ಕಳಂ ಆ ಜಾತಿ ಅಲ್ಲದಲ್ಲಿಯುಂ ಬಹುತ್ವದ ಎಡೆಗೆ ಏಕತ್ವಂ ಪೊಕ್ಕು, ವಿಶೇಷಣಂ ಅಕ್ಕುಂ ಎಂಬರ್.

ಟೀಕು.— ಜಾತಿಯೊಳ್ = ಜಾತಿಯಲ್ಲಿ; ಏಕತ್ವಕ್ಕೆ = ಏಕವಚನಕ್ಕೆ; ಬಹುತ್ವಂ = ಕ್ರಿಯಾಪದದ ಬಹುವಚನಂ; ಅಕ್ಕುಂ = ಅಪ್ಪುದು; ಮೊಕ್ಕಳಂ = ಪೆಗ್ಗಳವಾಗಿ; ಆ ಜಾತಿಯಲ್ಲದಲ್ಲಿಯುಂ = ಆ ಜಾತಿಯಲ್ಲದ ಸ್ಥಾನದಲ್ಲಿಯುಂ; ಬಹುತ್ವದ = ಬಹುವಚನದ; ಎಡೆಗೆ = ಸ್ಥಾನಕ್ಕೆ; ಏಕತ್ವಂ = ಏಕವಚನಂ; ಪೊಕ್ಕು = ಪ್ರವೇಶವಾಗಿ; ವಿಶೇಷಣಂ = ವಿಶೇಷಣಂ; ಅಕ್ಕುಂ = ಅಪ್ಪುದು; ಎಂಬರ್ = ಪೇಳ್ವರ್.

ವೃತ್ತಿ.— ಜಾತಿಯೊಳೇಕವಚನಮಿರ್ದುಂ ಬಹುವಚನಮಂ ಪೇೞ್ವುದು; ಅದುಕಾರಣಂ ಕ್ರಿಯಾಪದಂ ಬಹುವಚನಮಾಗಲಾರ್ಪುದು. ಜಾತಿಯಲ್ಲದಲ್ಲಿಯುಂ ಬಹುವಚನಕ್ಕೇಕವಚನಂ ವಿಶೇಷಣಮಾಗಿ ಪೊಕ್ಕು, ಬಹುವಚನಮಂ ಪೇೞ್ವುದು.

ಪ್ರಯೋಗಂ.— ಜಾತಿಗೆ— ಆನೆ ನೂಂಕಿದುವು, ಆನೆಗಳ್ನೂಂಕಿದುವು; ಕುದುರೆ ಏಱಿದುವು, ಕುದುರೆಗಳೇಱಿದುವು; ಕಾಲಾಳ್ಕವಿದುವು, ಕಾಲಾಳ್ಗಳ್ ಕವಿದುವು.

→ ಆ.ಪು – 263.59

ಜಾತಿಯಲ್ಲದಲ್ಲಿಗೆ— "ಮಹೇಂದ್ರಮಹದೈಶ್ವರ್ಯಂಗಳಿವೆಲ್ಲಮಧ್ರುವಂ," ಇವೆಲ್ಲಮಧ್ರುವಂಗಳ್; ಮನಂ ಸಂಚಲಮಾದುವು, ಮನಂಗಳ್ ಸಂಚಲಂಗಳಾದುವು.

ತ್ರಿಭುವನಮಂ ಪೇೞ್ವೊಡಂ, ಕನ್ನಡದೊಳ್ ತ್ರಿಭುವನಂಗಳೆನಲಕ್ಕುಂ.

ಸೂತ್ರಂ.[1] || ೧೩೮ ||

ಏಕತೆಯೆ ತನಗೆ। ಬಹುತೆಯ
ನಾಕರಿಸದು ಜಾತಿ। ತಾಂ ವಿಶೇಷಣಮುಖದಿಂ- |
ದಾ ಕಾರಕಮೇಕತ್ವಮ- |
ನೇಕತ್ವಮನಾ ಕ್ರಿಯಾಪದಂ ಪಡೆಯಲೊಡಂ. || ೧೪೯ ||

But whenever a Kâraka-noun (ಕಾರಕಂ), belonging to class or race and an accompanying Adjective stand in the Singular, and also whenever such a noun and its Predicate (ಕ್ರಿಯಾಪದಂ) stand in the Singular, the Substantive (ವಿಶೇಷ್ಯಂ) always conveys the meaning of the Singular. — For the two Pronouns ಅದು and ಇದು the forms "ಆ" and "ಈ" are often substituted, and these can be put also before nouns of class or race which stand in the Plural or express the sense of the Plural.

ಪದಚ್ಛೇದಂ. — ಏಕತೆಯೆ, ತನಗೆ ಬಹುತೆಯುಂ ಆಕರಿಸದು, ಜಾತಿ ತಾಂ — ವಿಶೇಷಣ ಮುಖದಿಂದೆ ಆ ಕಾರಕಂ ಏಕತ್ವಮುಂ, ಏಕತ್ವಮುಂ ಆ ಕ್ರಿಯಾಪದಂ ಪಡೆಯಲೊಡಂ.

ಅನ್ವಯಂ. — ವಿಶೇಷಣಮುಖದಿಂದೆ ಆ ಕಾರಕಂ ಏಕತ್ವಮುಂ ಆ ಕ್ರಿಯಾಪದಂ ಏಕತ್ವಮುಂ ಪಡೆಯಲೊಡಂ ಜಾತಿ ತಾಂ ಏಕತೆಯೆ; ತನಗೆ ಬಹುತೆಯುಂ ಆಕರಿಸದು.

ಟೀಕು. — ವಿಶೇಷಣಮುಖದಿಂದೆ = ವಿಶೇಷಣದ ಮುಖದಿಂದೆ; ಆ ಕಾರಕಂ = ಆ ಪ್ರಸಿದ್ಧವಾದ ಕಾರಕಪದಂ; ಏಕತ್ವಮುಂ = ಏಕವಚನಮುಂ ಪಡೆಯಲೊಡನೆ; ಆ ಕ್ರಿಯಾಪದಂ = ಆ ಪ್ರಸಿದ್ಧವಾದ ಕ್ರಿಯಾಪದಂ; ಏಕತ್ವಮುಂ = ಏಕವಚನಮುಂ; ಪಡೆಯಲೊಡಂ = ಪಡೆಯಲೊಡನೆ; ಜಾತಿ = ವಿಶೇಷ್ಯವಾದ ಜಾತಿ; ತಾಂ = ತಾಂ; ಏಕತೆಯೆ = ಏಕವಚನವೆ ಅಪ್ಪದು; ತನಗೆ = ವಿಶೇಷ್ಯವಾದ ಜಾತಿ ತನಗೆ; ಬಹುತೆಯುಂ = ಬಹುವಚನಮುಂ; ಆಕರಿಸದು = ಅಂಗೀಕರಿಸದು.

ವೃತ್ತಿ. — ವಿಶೇಷಣಮಾಗಿ ಕಾರಕಮೇಕವಚನದೊಳಿರ್ದೊಡಂ ಕ್ರಿಯಾಪದಮೇಕವಚನದೊಳಿರ್ದೊಡಂ ವಿಶೇಷ್ಯಮಪ್ಪ ಜಾತಿಗೇಕತ್ವಮಲ್ಲದೆ ಬಹುತ್ವವಿಲ್ಲ.

---

[1] ಜಾತಿರೇಕವದ್ವಹ್ವಾಖ್ಯಾಯಾಂ ಬಹುಳಂ || ಭಾ. ಭೂ. ೫೯ ||

(ಜಾತಿಯನ್ನು ಹೇಳ್ವ ಶಬ್ದವು ಬಹುತ್ವವನ್ನು ತೋರಿಸುವಲ್ಲಿ ವಿಕಲ್ಪದಿಂದ ಏಕವಚನವೇ ಆಗುವುದು.)

"ಜಾತಿಯೊಳಂ. . . . . ಏಕವಚನಮೆ ಅಕ್ಕುಂ." ಶ. ಸ್ಮ. 35. ಪುಟ 202 ನೋಡಿರಿ.

ಪ್ರಯೋಗಂ.— ಕಾರಕಕ್ಕೆ— ಇಂತುಟಾನೆ; ಇಂತುಟು ಕುದುರೆ.

ಕ್ರಿಯೆಗೆ— ನಡೆದುದು ಹಂಸೆ; ಕೇಗಿದುದು ಸೋಗೆ; ಉಲಿದುದು ಕೋಗಿಲೆ; ಪಾಡಿದುದು ತುಂಬಿ.

ಅದು ಇದು ಎಂಬೇಕವಚನಕ್ಕೆ ಆ ಈ ಎಂಬಾದೇಶಮಾಗಿ, ಜಾತಿಯ ಏಕವಚನಕ್ಕೆ ಬಹುಳತೆಯಿಂ ಬಹುವಚನಮುಂಟು— ಆಯೆರಳೆ ಪೋದುವು; ಈ ಪುಲ್ಲೆ ಬಂದುವು.

ಸೂತ್ರಂ[1]. ॥ ೧೩೯ ॥

When, however, nouns of a Numerical character (ಸಂಖ್ಯೇಯಂ), Numerals (ಸಂಖ್ಯಾನಂ), and nouns expressing the natural condition of objects (ಭಾವಂ) are in the Singular, they always have the sense of the Plural. Such Substantives in the Singular may be accompanied by Adjectives in the Plural.

ಸೀನಡಿ! ಸಂಖ್ಯೇಯದ ಸಂ- |
ಖ್ಯಾನದ ದೊರೆವೆತ್ತ ಭಾವದೇಕತೆ ಬಹುತಾ- ||
ಧೀನಂ ವಿಶೇಷಣಂ ಬಹು- |
ತಾನತಮೆ ವಿಶೇಷ್ಯಮೇಕವಚನಮೆಯಕ್ಕುಂ. ॥ ೧೪೦ ॥

ಪದಚ್ಛೇದಂ.— ಸೀಂ ಅಡಿ! ಸಂಖ್ಯೇಯದ ಸಂಖ್ಯಾನದ ದೊರೆವೆತ್ತ ಭಾವದ ಏಕತೆ ಬಹುತಾಧೀನಂ; ವಿಶೇಷಣಂ ಬಹುತಾನತಮೆ, ವಿಶೇಷ್ಯಂ ಏಕವಚನಮೆ ಅಕ್ಕುಂ.

ಅನ್ವಯಂ.— ಸಂಖ್ಯೇಯದ ಸಂಖ್ಯಾನದ ದೊರೆವೆತ್ತ ಭಾವದ ಏಕತೆ ಬಹುತಾಧೀನಂ, ಸೀಂ ಅಡಿ! ವಿಶೇಷಣಂ ಬಹುತಾನತಮೆ, ವಿಶೇಷ್ಯಂ ಏಕವಚನಮೆ ಅಕ್ಕುಂ.

---

[1] ಸಂಖ್ಯೇಯೇ ಸಂಖ್ಯಾಸು ಚ ॥ ಭಾ. ಭೂ. 90. ॥

(ಸಂಖ್ಯಾವಸ್ತುವಿನಲ್ಲಿಯೂ ಸಂಖ್ಯೆಯಲ್ಲಿಯೂ ಬಹುವಚನವು ವಿಕಲ್ಪದಿಂದ ಏಕವಚನವಾಗುವುದು.)

ಭಾವವಚನೇಽಪಿ. ॥ ಭಾ. ಭೂ. 91. ॥

(ಭಾವವಚನದಲ್ಲಿಯೂ ಬಹುವಚನಕ್ಕೆ ಏಕವಚನವುಂಟು.)

ಜಾತಿಯೊಳಂ ಸಂಖ್ಯಾನಾ- |
ಖ್ಯಾತಿಯೊಳಂ ಕೂಡಿ ನೆಗಟ್ದ್ಗುಮೇಕಬಹುತ್ವ- ||
ದ್ಯೋತನಪರಮೇಕತ್ವಂ |
ಪೂತೇಂ ಭಾವದೊಳಮೇಕವಚನಮೆ ಅಕ್ಕುಂ ॥ ಶ. ಸ್ಮೃ. 35. ॥

ಟೀಕು.— ಸಂಖ್ಯೇಯದ = ಸಂಖ್ಯಾವಸ್ತುಗಳ; ಸಂಖ್ಯಾನದ = ಸಂಖ್ಯಾವಾಚಿಗಳ; ದೊರೆವೆತ್ತ ಭಾವದ = ಪ್ರಸಿದ್ಧಿ ಪಡೆದ ಭಾವದ; ಏಕತೆ = ಏಕವಚನಂ; ಬಹುತಾಧೀನಂ = ಬಹುವಚನದಧೀನಂ ಅಪ್ಪುದು; ಸೀಂ = ಸೀಂ; ಅದ = ತಿಳಿ; ವಿಶೇಷಣಂ = ವಿಶೇಷಣಪದಂ; ಬಹುತಾನತವೆ = ಬಹುವಚನದಧೀನವೆ; ವಿಶೇಷ್ಯಂ = ವಿಶೇಷ್ಯಪದಂ; ಏಕವಚನಮೆ = ಏಕವಚನವೆ; ಅಕ್ಕುಂ = ಅಪ್ಪುದು.

ವೃತ್ತಿ.— ಸಂಖ್ಯಾವಸ್ತುವಿನೊಳಂ ಸಂಖ್ಯೆಯೊಳಂ ಭಾವದೊಳಂ ನೆಲಸಿದೇಕವಚನಂ ಬಹುವಚನಮಂ ಪೇೞ್ವಿದು; ವಿಶೇಷಣಂ ಬಹುವಚನಮಾಗಲೊಡಂ ವಿಶೇಷ್ಯಮೇಕವಚನಮಾಗಲಕ್ಕುಂ.

ಪ್ರಯೋಗಂ.— ಸಂಖ್ಯೇಯಕ್ಕೆ—ಪತ್ತು ದೆಸೆ, ಪತ್ತು ದೆಸೆಗಳ್; ಮೂಲೋಕಂ, ಮೂಲೋಕಂಗಳ್; ನಾಲ್ಕು ಯುಗಂ, ನಾಲ್ಕು ಯುಗಂಗಳ್.

ಸಂಖ್ಯೆಗೆ— ಒಂದು ನಾಲ್ಕು, ಒಂದು ನಾಲ್ಕುಗಳ್; ಎರಡೈದು, ಎರಡೈದುಗಳ್; ಪತ್ತು ನೂಱು, ಪತ್ತು ನೂಱುಗಳ್.

ಭಾವಕ್ಕೆ— ಕಣ್ಗಳ ಕೂರ್ಪು, ಕಣ್ಗಳ ಕೂರ್ಪುಗಳ್; ಪೂಗಳ ಬೆಳ್ಪು, ಪೂಗಳ ಬೆಳ್ಪುಗಳ್; ಕುರುಳ್ಗಳ ಕರ್ಪು, ಕುರುಳ್ಗಳ ಕರ್ಪುಗಳ್.

ವಿಶೇಷ್ಯದೇಕವಚನಕ್ಕೆ— ನೇರಿದುವು ಬೆರಲ್; ತೋರಿದುವು ಜಘನಂ; ಬಟ್ಟಿದುವು ಮೊಲೆ.

ಸೂತ್ರಂ. || ೧೪೦ || ಅನ್ವಯ-ಪ್ರಕರಣ ವಿಚಾರ.

ವಿದಿತವಿಶೇಷಣಪದಮವು |
ಮೊದಲ ವಿಭಕ್ತಿಗಳನಾಂತು ವಾಕ್ಯದ ಮೊದಲೊಳ್ || ಪ್ರಥಮ
ಪದವೆತ್ತುವಗ್ರಕಾರಕ |
ಪದದ ವಿಭಕ್ತಿಯನೆ ತಳೆವುವನ್ವಯಮುಖದೊಳ್.
|| ೧೫೧ ||

Adjectives which have the form of the Nominative, whereas their respective Substantives appear in other cases, receive, in parsing (ಅನ್ವಯೀಕಾರಂ), the case of their Substantives.

ಪದಚ್ಛೇದಂ.— ವಿದಿತವಿಶೇಷಣಪದಂ ಅವು ಮೊದಲ ವಿಭಕ್ತಿಗಳಂ ಆಂತು, ವಾಕ್ಯದ ಮೊದಲೊಳ್ ಪದವೆತ್ತು, ಉವು ಅಗ್ರಕಾರಕಪದದ ವಿಭಕ್ತಿಯನೆ ತಳೆವುವು ಅನ್ವಯಮುಖದೊಳ್.

ಅನ್ವಯಂ.— ಉವು ಅನ್ವಯಮುಖದೊಳ್ ಅಗ್ರಕಾರಕಪದದ ವಿಭಕ್ತಿಯನೆ ತಳೆವುವು. ಉಳಿದುದು ಯಥಾನ್ವಯಂ.

ಟೀಕು.— ವಿದಿತ = ಪ್ರಸಿದ್ಧವಾದ; ವಿಶೇಷಣಪದಂ = ವಿಶೇಷಣಪದಂಗಳ್; ಮೊದಲ ವಿಭಕ್ತಿಗಳಂ = ಪ್ರಥಮಾವಿಭಕ್ತಿಗಳಂ; ಅಂತು = ತಾಳ್ದು; ವಾಕ್ಯದ = ವಾಕ್ಯಂಗಳ; ಮೊದಲೊಳ್ = ಆದಿಯಲ್ಲಿ; ಪದವೆತ್ತು = ಪದವಾಗಿ; ಉವು = ಆ ಪ್ರಥಮಾಂತವಾದ ಪದಂಗಳ್; ಅನ್ವಯಮುಖದೊಳ್ = ಅರ್ಥದ ಮುಖದಲ್ಲಿ; ಅಗ್ರ = ತುದಿಯ; ಕಾರಕಪದದ = ಕಾರಕವಾದ ಪದದ; ವಿಭಕ್ತಿಯನೆ = ವಿಭಕ್ತಿಯರ್ಥವನೆ; ತಳೆವುವು = ಧರಿಸುವುವು.

ವೃತ್ತಿ.— ವಿಶೇಷಣಪದಂಗಳ್ ಪ್ರಥಮಾವಿಭಕ್ತಿಯಂ ಪಡೆದು, ವಾಕ್ಯದ ಮೊದಲೊಳಿರ್ದು, ಅನ್ವಯಿಸುವಲ್ಲಿ ತುದಿಯ ಕಾರಕಪದದ ವಿಭಕ್ತಿಯನೆ ತಳೆವುವು.

ಪ್ರಯೋಗಂ.— "ವೀರನುದಾರಂ ಶುಚಿಗಂ
ಭೀರಂ ನಯಶಾಲಿ ಕೈದುವೊತ್ತರದೇವಂ |
ಗಾರೆಬಿಗನ್ನೃಪತುಂಗಂಗೆ. . . ." || 337 ||

ವೀರಂಗೆ ಉದಾರಂಗೆ ಶುಚಿಗೆ ಗಂಭೀರಂಗೆ ನಯಶಾಲಿಗೆ ಕೈದುವೊತ್ತರದೇವಂಗೆ ನೃಪತುಂಗಂಗೆ ಆರೆಬಿಗರೆಂಬುದನ್ವಯಂ.

"ಸಂಗತಸತ್ವಂ ಕುರುರಾ- |
ಜಂಗಂ ಕರ್ಣಂಗಂ. . . . . . ." || 338 ||

ಎಂಬಲ್ಲಿ ಸಂಗತಸತ್ವಂಗೆ ಕುರುರಾಜಂಗೆ ಕರ್ಣಂಗೆಂಬುದನ್ವಯಂ.

ಸೂತ್ರಂ. || ೧೪೧ ||

ಕೂಡಿ ನುಡಿವೆಡೆಯೊಳೆಂದುಂ |
ಕೂಡದು ಲಿಂಗತ್ರಯಕ್ಕೆ ತರತಮಭಾವಂ ||
ನೀಡುಂ ವಾಕ್ಯದ ಕಡೆಯೊಳ್ |
ಕೂಡಿರ್ದುದದಾವುದದುವೆ ಮುಖ್ಯಮೆನಿಕ್ಕುಂ. ||೧೫೨||

When Subjects of different *genders* have one Predicate (which must be in the Plural, S. 142), it cannot be said that one gender is domineering over the other; in such a case the Predicate simply conforms itself to the gender of the Subject last in place.

ಪದಚ್ಛೇದಂ.— ಕೂಡಿ ನುಡಿವ ಎಡೆಯೊಳ್ ಎಂದುಂ ಕೂಡದು ಲಿಂಗತ್ರಯಕ್ಕೆ ತರತಮಭಾವಂ; ನೀಡುಂ ವಾಕ್ಯದ ಕಡೆಯೊಳ್ ಕೂಡಿ ಇರ್ದುದು ಅದು ಆವುದು, ಅದುವೆ ಮುಖ್ಯಂ ಎನಿಕ್ಕುಂ.

ಅನ್ವಯಂ.— ಕೂಡಿ ನುಡಿವೆಡೆಯೊಳ್ ಎಂದುಂ ಲಿಂಗತ್ರಯಕ್ಕೆ ತರತಮಭಾವಂ ಕೂಡದು; ನೀಡುಂ ವಾಕ್ಯದ ಕಡೆಯೊಳ್ ಕೂಡಿರ್ದುದು ಅದು ಆವುದು, ಅದುವೆ ಮುಖ್ಯಂ ಎನಿಕ್ಕುಂ.

ಟೀಕು.— ಕೂಡಿ = ಒಂದಾಗಿ; ನುಡಿವೆಡೆಯೊಳ್ = ಹೇಳ್ವ ಸ್ಥಾನದಲ್ಲಿ; ಎಂದುಂ = ಆವಾಗಳುಂ; ಲಿಂಗತ್ರಯಕ್ಕೆ = ಸ್ತ್ರೀಪುಂನಪುಂಸಕಂಗಳೆಂಬ ಲಿಂಗತ್ರಯಕ್ಕೆ; ತರತಮಭಾವಂ = ತಾರತಮ್ಯಭಾವಂ; ಕೂಡದು = ಪೊರ್ದುಗೆಯಾಗದು; ನೀಡುಂ = ವಿಶೇಷವಾಗಿ; ವಾಕ್ಯದ = ವಾಕ್ಯಂಗಳ; ಕಡೆಯೊಳ್ = ಅಂತ್ಯದಲ್ಲಿ; ಕೂಡಿರ್ದುದು = ಪೊರ್ದುಗೆಯಾಗಿರ್ದುದು; ಅದು = ಅದು; ಆವುದು = ಆವುದು; ಅದುವೆ = ಆ ಲಿಂಗವೆ; ಮುಖ್ಯಂ = ವಿಶೇಷಂ, ಎನಿಕ್ಕುಂ = ಎನಿಸುವುದು.

ವೃತ್ತಿ.— ಕೂಡಿ ನುಡಿವ ಲಿಂಗತ್ರಯಕ್ಕೆ ತಮ್ಮೊಳ್ ಮುಖ್ಯತೆಯಮುಖ್ಯತೆಯುಮಿಲ್ಲ; ವಾಕ್ಯದ ಕಡೆಯೊಳಾವ ಲಿಂಗಮಿರ್ದೊಡದುವೆ ಮುಖ್ಯಮಕ್ಕುಂ.

ಪ್ರಯೋಗಂ.— ಸೇನೆಯುಮರಸಿಯುಮರಸನುಂ ಬಂದರ್; ಆನೆಯುಮರಸನುಮರಸಿಯುಂ ಬಂದರ್; ಅರಸನುಮರಸಿಯುಂ ಬಂದರ್; ಅರಸನುಂ ಅರಸಿಯುಂ ಚತುರಂಗಬಲಮುಂ ಬಂದುವು.

ಸೂತ್ರಂ. || ೧೪೨ ||

ವ್ಯವಹರಿಸುವಿನಂ ಪ್ರಥಮೈ- |
ಕವಚನಮಂ ಪಲವನೋದಿ ವಾಕ್ಯದ ನಿರ್ವಾ- ||
ಹವನಳವಡಿಪೆಡೆಯೊಳ್ಪುಗಿ- |
ಸುವರ್ಕ್ರಿಯಾನೇಕವಚನಮಂ ಮಾರ್ಗವಿದರ್. ||೧೪೨||

The Verb at the end of a sentence (ವಾಕ್ಯನಿರ್ವಾಹಕಂ) preceded by several subjects in the Singular, takes the form of the Plural by way of supplying (or inference, ಅಧ್ಯಾಹಾರಂ).

ಪದಚ್ಛೇದಂ.— ವ್ಯವಹರಿಸುವಿನಂ ಪ್ರಥಮೈಕವಚನಮಂ ಪಲವಂ ಓದಿ ವಾಕ್ಯದ ನಿರ್ವಾಹವಂ ಅಳವಡಿಪ ಎಡೆಯೊಳ್ ಪುಗಿಸುವರ್ ಕ್ರಿಯಾನೇಕವಚನಮಂ ಮಾರ್ಗವಿದರ್.

ಅನ್ವಯಂ.— ಪ್ರಥಮೈಕವಚನಮಂ ಪಲವಂ ಓದಿ ವ್ಯವಹರಿಸುವಿನಂ ವಾಕ್ಯದ ನಿರ್ವಾಹವಂ ಅಳವಡಿಪೆಡೆಯೊಳ್ ಕ್ರಿಯಾನೇಕವಚನಮಂ ಮಾರ್ಗವಿದರ್ ಪುಗಿಸುವರ್.

ಟೀಕು. — ಪ್ರಥಮೈಕವಚನಮಂ = ಪ್ರಥಮಾವಿಭಕ್ತಿಯ ಏಕವಚನವಂ; ಪಲವಂ = ಹಲವಂ; ಓದಿ = ಹೇಳಿ; ವ್ಯವಹರಿಸುವಿನಂ = ವ್ಯವಹರಿಸುತ್ತಿರೆ; ವಾಕ್ಯದ = ವಾಕ್ಯಂಗಳ; ನಿರ್ವಾಹವಂ = ನಿರ್ಣಯಮಂ; ಅಳವಡಿಪೆಡೆಯೊಳ್ = ಅಳವಡಿಸುವ ಸ್ಥಾನದಲ್ಲಿ; ಕ್ರಿಯಾ = ಕ್ರಿಯಾಪದದ; ಅನೇಕವಚನವಂ = ಬಹುವಚನಮಂ; ಮಾರ್ಗವಿದರ್ = ವೈಯಾಕರಣಮಾರ್ಗವಿದರ್; ಪುಗಿಸುವರ್ = ಪ್ರವೇಶವಂ ಮಾಡುವರ್.

ವೃತ್ತಿ. — ಪ್ರಥಮೈಕವಚನಮಂ ಮೊದಲೊಳ್ಪಲವಂ ಪೇೞ್ದು, ವಾಕ್ಯನಿರ್ವಾಹದೊಳ್ ಕ್ರಿಯಾಬಹುವಚನಮಂ ಪುಗಿಸುವರ್.

ಪ್ರಯೋಗಂ. —

"ಅವತಂಸೋತ್ಪಲತಾಡನಂ ಕನಕಕಾಂಚೀಬಂಧನಂ ನೂಪುರಾ |
ರವಝುಂಕಾರಿತಚಾರುವಾಮಚರಣಾಘಾತಂ ಚಲದ್ಭ್ರೂಲತಾ- ||
ಗ್ರವಿಭಾಗೋತ್ಕಟತರ್ಜನಂ ತರಳತಾತಾಮ್ರಾಧರಂ ಚಕ್ರಿಗಿ- |
ತ್ತುವಲಂಪಂ ಪ್ರಣಯಪ್ರಕೋಪಸಮಯಪ್ರಾರಂಭದೊಳ್ಕಾಂತೆಯಾ ||
|| 339 ||

ಚಕ್ರಿಗಿತ್ತುವು ಅಲಂಪಂ ಎಂಬಲ್ಲಿ ಇವೆಲ್ಲಮೆಂಬುದಧ್ಯಾಹಾರಮಾಗಿ ಬಹುವಚನಂ ಸಲ್ವುದು.

ಸೂತ್ರಂ. || ೧೪೩ ||

ಅವನವಳದೆಂಬಿವಿರ್ದಂ- |
ತೆವೊಲಿರ್ದಪುವಾವನಾವಳಾವುದು ತಾನೆಂ- ||
ಬಿವವಂ ಪಾರದೆ ನಿಲಲಱಿ |
ಯವನ್ವಯಂ ತಾಗುವಲ್ಲಿ ವಾಕ್ಯೋಪದರಿಂ. || ೧೫೪ ||

ಅವಂ, ಅವಳ್, ಅದು may, in the connexion of words (ಅನ್ವಯಂ), stand by themselves (at the end of a relative-demonstrative compound or where such a compound might be construed, cf. S. 73); but ಆವಂ, ಆವಳ್, ಆವುದು where they occur in such a connexion, require a following ಅವಂ, ಅವಳ್, ಅದು. This last rule holds good also, in its way, regarding ತಾಂ.

ಪದಚ್ಛೇದಂ. — ಅವಂ ಅವಳ್ ಅದು ಎಂಬ ಇವು ಇರ್ದ ಅಂತೆವೊಲ್ ಇರ್ದಪುವು; ಆವಂ ಆವಳ್ ಆವುದು ತಾಂ ಎಂಬ ಇವು ಅವಂ ಪಾರದೆ, ನಿಲಲ್ ಅಱಿಯವು, ಅನ್ವಯಂ ತಾಗುವಲ್ಲಿ ವಾಕ್ಯೋಪದರಿಂ.

ಅನ್ವಯಂ.— ವಾಕ್ಯೋಕ್ತಿವಿದರಿಂ ಅನ್ವಯಂ ತಾಗುವಲ್ಲಿ. ಉಳಿದುದು ಯಥಾನ್ವಯಂ.

ಟೀಕು.— ವಾಕ್ಯೋಪಿದರಿಂ = ವಾಕ್ಯಾರ್ಥದಿಂದ; ಅನ್ವಯಂ ತಾಗುವಲ್ಲಿ = ಸಂಘಟನೆಯಾಗುವಲ್ಲಿ; ಅವಂ = ಅವನೆಂದು; ಅವಳ್ = ಅವಳೆಂದು; ಅದು = ಅದೆಂದು; ಎಂಬಿವು = ಎಂಬೀ ಪದಂಗಳ್; ಇರ್ದಂತೆವೊಲ್ = ಇರ್ದ ಹಾಗೆ; ಇರ್ದಪುವು = ಇರುತ್ತಿರ್ಪುವು; ಆವಂ = ಆವನೆಂದುಂ; ಆವಳ್ = ಆವಳೆಂದುಂ; ಆವುದು = ಆವುದೆಂದುಂ; ತಾಂ = ತಾನೆಂದುಂ; ಎಂಬಿವು = ಎಂಬೀ ಪದಂಗಳ್; ಅವಂ = ಆ ಪದಂಗಳಂ; ಪಾರದೆ = ಬಯಸದೆ; ನಿಲಲಱಿಯವು = ಇರಲರಿಯವು.

ವೃತ್ತಿ.—ಅವಂ ಅವಳ್ ಅದು ಎಂಬಿವನ್ವಯಸ್ವತಂತ್ರಂಗಳ್; ಆವಂ ಆವಳ್ ಆವುದು ತಾನೆಂಬಿವು ಅವಂ ಅವಳ್ ಅದು ಎಂಬಿವಂ ಪಾರದೆ ಅನ್ವಯಿಸಿ ಕೊಳಲಱಿಯವಾಗಿ, ಪರತಂತ್ರಂಗಳ್.

ಪ್ರಯೋಗಂ.—ಸ್ವತಂತ್ರಾನ್ವಯಕ್ಕೆ—ಪೊನ್ನುಳ್ಳವನೆ ಕುಲೀನನೆಂದೊಡೆ, ಆವಂ ಪೊನ್ನುಳ್ಳವನೆ ಕುಲೀನನೆನವೇಡ; ಸೊಬಗುಳ್ಳವಳೆ ಪೆಣ್ಣೆಂದೊಡೆ, ಆವಳ್ ಸೊಬಗುಳ್ಳವಳೆ ಪೆಣ್ಣೆನವೇಡ; ಅದೆ ರೂಢಿಯೆಂದೊಡೆ, ಆವುದು ರೂಢಿಯನುಳ್ಳದುವೆ ಲೇಸೆನವೇಡ.

ಪರತಂತ್ರಾನ್ವಯಕ್ಕೆ—ಆವನಧಿಕಪುಣ್ಯನವನೆ ಸೇವ್ಯಂ; ಆವಳ್ ಪತಿವ್ರತೆಯವಳೆ ಮಾನ್ಯೆ; ಆವುದು ಚೆಲ್ವಾದುದದು ದರ್ಶನೀಯಂ;—ತಾನವಂ ಚದುರಂ; ತಾನವಳ್ ಚದುರೆ; ತಾನದು ಪಿರಿದು. ಇದು ವಾಕ್ಯಾನ್ವಯಂ.

ಸೂತ್ರಂ. ॥ ೧೪೪ ॥

ಯುಗಳಾರ್ಥದ ಬಹುವಚನ- ।
ಕ್ಕೊಗೆತಂದಾವಿಷ್ಟಲಿಂಗದೆಡೆಗೇಕತ್ವಂ ॥
ನೆಗಟ್ಟಿಗಂ ಕ್ರಿಯಾವಿಶೇಷಣ- ।
ಮಗಲದೆ ನಿಂದೆಡೆಗಮಱಿವರಿಂದೇಕತ್ವಂ. ॥ ೧೪೪ ॥

In words denoting a Pair (ಯುಗಳಾರ್ಥಂ) and in comprising nominal bases (ಆವಿಷ್ಟಲಿಂಗಂ) the Singular may be used instead of the Plural. ಕ್ರಿಯಾವಿಶೇಷಣಂಗಳ್ stand in the Singular.

ಪದಚ್ಛೇದಂ.— ಯುಗಳಾರ್ಥದ ಬಹುವಚನಕ್ಕೆ ಒಗೆತಂದ ಆವಿಷ್ಟಲಿಂಗದ ಎಡೆಗೆ ಏಕತ್ವಂ ನೆಗಟ್ಟಿಗಂ; ಕ್ರಿಯಾವಿಶೇಷಣಂ ಅಗಲದೆ ನಿಂದೆಡೆಗಂ ಅಱಿವರಿಂದೆ ಏಕತ್ವಂ.

ಟೀಕು, ಯಥಾನ್ವಯಂ. — ಯುಗಳಾರ್ಥದ = ಎರಡು ವಸ್ತುವಿನರ್ಥದ; ಬಹುವಚನಕ್ಕೆ = ಬಹುವಚನಕ್ಕೆ; ಒಗೆತಂದ = ಹುಟ್ಟಿ ಬಂದ; ಆವಿಷ್ಟಲಿಂಗದ = ಆವಿಷ್ಟವೆಂಬ ಲಿಂಗದ; ಎಡೆಗೆ = ಸ್ಥಾನಕ್ಕೆ; ಏಕತ್ವಂ = ಏಕವಚನಂ; ನೆಗಟ್ಟಿಗುಂ = ಪ್ರಾಪ್ತಿಸುವುದು; ಕ್ರಿಯಾವಿಶೇಷಣಂ = ಕ್ರಿಯಾವಿಶೇಷಣಂ; ಅಗಲದೆ = ತೊಲಗದೆ; ಸಿಂದೆಡೆಗಂ = ನೆಲೆಗೊಂಡ ಸ್ಥಾನಕ್ಕೆಯುಂ; ಅರಿವರಿಂದೆ = ಬಲ್ಲವರಿಂದೆ; ಏಕತ್ವಂ = ಏಕವಚನಂ ಪ್ರಾಪ್ತಿಸುವುದು.

ವೃತ್ತಿ.—ಯುಗಳಾರ್ಥದೊಳ್ ವರ್ತಿಸುವ ಬಹುವಚನಕ್ಕಮಾವಿಷ್ಟಲಿಂಗಕ್ಕಂ ಕ್ರಿಯಾವಿಶೇಷಣಕ್ಕಂ ಬಲ್ಲರಿಂದೇಕವಚನಮಕ್ಕುಂ.

ಪ್ರಯೋಗಂ— ಪದಯುಗಳಂಗಳ್ಗೆ— ಪದಯುಗಂ.

ಆವಿಷ್ಟಲಿಂಗಕ್ಕೆ— ವೇದಂಗಳ್ಪ್ರಮಾಣಂ.

"....ಪ್ರತಿಭೆಯುಮಭ್ಯಾಸಮುಂ ವಿದ್ವತ್ಸೇವೆಯುಂ ಕಾವ್ಯಪರಿ
ಚಯಮುಂ ಕವಿತೆಗೆ ಕಾರಣಂ. . . . ." || 340 ||

ಕ್ರಿಯಾವಿಶೇಷಣಕ್ಕೆ—'ಏನೆಂಬ ಪೆಂಪೊ' 'ಎಂತಹವರ್ಗಳೆಂಬ ಪೇರ್ಮೆಯೊ' ಎಂಬಲ್ಲಿ ಏನ್ ಎಂಬೀ ಕ್ರಿಯೆಗೆ ಏನ್ ಎಂಬ ಕಾರಕಂ ವಿಶೇಷಣಮಾಗಿ, ಬಹುವಚನಮಾಯ್ತು.

ಏನೆಂಬ ಪೆಂಪೊ ಮನುವುಂ |
ತಾನುಂ ಸಚ್ಚರಿತರಮರಕುಜಮುಂ ತಾನುಂ ||
ದಾನಿಗಳಂಭೋನಿಧಿಯುಂ |
ತಾನುಂ ಗಂಭೀರನೆನಿಪನುದಯಾದಿತ್ಯಂ || 341 ||

ತಿಬ್ಬಂ ಮಾಡಿದಂ = ತಿಬ್ಬವೆಹಗಹುದಹಗೆ ಮಾಡಿದಂ; ದೋಷರಹಿತಂ ಪೇಳ್ದಿಂ = ದೋಷರಹಿತವೆಹಗಹುದಹಗೆ ಪೇಳ್ದಿಂ. ಇದೀಗ ಕ್ರಿಯಾವಿಶೇಷಣಂ.

ಸೂತ್ರಂ. || ೧೪೫ || *

In each sentence there must be a proper Conclusion (ನೇಯಂ; s. S. 281). Thus the Kâraka noun, the

ಸಾರಮುದಧ್ಯಾರೋಪಂ |
ಕಾರಕಕಂ ಕ್ರಿಯೆಗಮಗಲೆ ನೇಯದ ದೋಷಂ ||
ಧೀರರ್ಕಳಿಂ ವಿಶಂಕೆಯೆ |
ಕಾರಕ್ಕಂ ಪೇಳ್ವಿದಾ ಸಮುಚ್ಚಯದ್ವುಗಂ. || ೧೪೫ ||

meaning of the verb (ಕ್ರಿಯೆ), whether to be inferred or whether expressed, the ಎ which expresses suspicion or uncertainty (ವಿಶಂಕೆ), and the different ಉಂ which express conjunction (ಸಮುಚ್ಚಯಂ), and the proper cases must be rightly assigned (ಅಧ್ಯಾರೋಪಂ).

ಪದಚ್ಛೇದಂ. — ಸಾರಂ ಅದು ಅಧ್ಯಾರೋಪಂ ಕಾರಕಕಂ ಕ್ರಿಯೆಗಂ, ಅಗಲೆ ನೇಯದ ದೋಷಂ; ಧೀರರ್ಕಳಿಂ ವಿಶಂಕೆಯ ಎಕಾರಕ್ಕಂ ಪೇೞ್ವುದು ಆ ಸಮುಚ್ಚಯದ ಉಮುಗಂ.

ಅನ್ವಯಂ. — ಕಾರಕಕಂ ಕ್ರಿಯೆಗಂ ಅಧ್ಯಾರೋಪಂ ಅದು ಸಾರಂ, ಅಗಲೆ ನೇಯದ ದೋಷಂ; ಧೀರರ್ಕಳಿಂ ವಿಶಂಕೆಯ ಎಕಾರಕ್ಕಂ ಆ ಸಮುಚ್ಚಯದ ಉಮುಗಂ ಪೇೞ್ವುದು.

ಟೀಕು. — ಕಾರಕಕಂ = ಕಾರಕಕ್ಕೆಯುಂ; ಕ್ರಿಯೆಗಂ = ಕ್ರಿಯೆಗೆಯುಂ; ಅಧ್ಯಾರೋಪಂ = ಅಧ್ಯಾಹಾರಂ; ಅದು = ಅದು; ಸಾರಂ = ಶ್ರೇಷ್ಠವಾಗಿರ್ಪುದು; ಅಗಲೆ = ಹೊಂದುಗೆಯಾಗದಿರೆ; ನೇಯದ ದೋಷಂ = ನೇಯದ ದೋಷಂ ಬರ್ಪುದು; ಧೀರರ್ಕಳಿಂ = ವಿದ್ವಾಂಸರಿಂದೆ; ವಿಶಂಕೆಯ = ವಿಶಂಕಾರ್ಥದ; ಎಕಾರಕ್ಕಂ = ಎತ್ವಕ್ಕೆಯುಂ; ಆ ಸಮುಚ್ಚಯದ = ಆ ಸಮುಚ್ಚಯಾರ್ಥದ; ಉಮುಗಂ = ಉಂಕಾರಕ್ಕೆಯುಂ; ಪೇೞ್ವುದು = ಅಧ್ಯಾಹಾರಮಂ ಪೇೞ್ವುದು.

ವೃತ್ತಿ. — ಕಾರಕಕ್ಕಂ ಕ್ರಿಯೆಗಂ ನೇಯದ ದೋಷಮಿಲ್ಲದಂತಧ್ಯಾರೋಪಮಂ ಮಾೞ್ಪುದು; ವಿಶಂಕೆಯ ಎತ್ವಕ್ಕೆಯುಂ ಸಮುಚ್ಚಯದುಮುವಿಗಂ ಅಧ್ಯಾರೋಪಮುಂಟು. ತಾಂ ಮಾಡಿದಧ್ಯಾರೋಪಮಸಮರ್ಥಮಾಗಿ ಮತ್ತೆ ಕೆಲವರ್ಕೆ ಪತ್ತುವೊಡದು ನೇಯದ ದೋಷಂ.

ಪ್ರಯೋಗಂ. — ನೇಯಕ್ಕೆ —

“ಆರಕ್ತಮಾಗಿ ನೇಱಿಲ
ದೋರೆಯನನುಕರಿಪುದಾದುದಾಗಸಮೆನೆ ಸಂ-
ಧ್ಯಾರುಚಿಯಿನಕ್ಕುಮೆಂದವ-
ಧಾರಿಸಿ ನೆಱಿಯಱಿದುಕೊಳ್ವುದಿದು ನೇಯಾರ್ಥಂ.” || 342 ||

ಸಂಧ್ಯಾರುಚಿಯಿನೆಂದು ಬಗೆವುದನೇಯಂ, ಕೆಂಧೂಳಿಯಿಂದಾಗಸಂ ಕೆಂಪಾದುದಾಗಿ.

ಕಾರಕಕ್ಕೆ —

“ಏಕೆ ನಿರ್ವಹಣಕ್ಕೆ ಸಲ್ಗುಮೊ ಪೂಣ್ದೊಡಂ ಕೃತಿಬಂಧಮಂ” || 343 ||

ಎಂಬಲ್ಲಿ ಕೃತಿಬಂಧಮೆಂಬುದಧ್ಯಾಹಾರ್ಯಂ.

"ಕರ್ಣನುಂ ದಾನಿ ಮೇಣೀತನುಂ. . ." || 344 ||

ಎಂಬಲ್ಲಿ ದಾನಿಯೆಂಬುದಧ್ಯಾರೋಪಂ.

(3) ಕ್ರಿಯೆಗೆ—ಪುರುಷೋತ್ತಮಂ ಮನುಷ್ಯಮಾತ್ರಮೆ। ಎನೆ ಅಲ್ಲಮೆಂಬುದಧ್ಯಾಹಾರ್ಯಂ.

"ಧೃತರಾಷ್ಟ್ರಂ ನುಡಿದಾರ್ತನೆ। ಹರಿಬವಂ ಗೈದಾರ್ತನೇ. . . ." || 345 ||

ಎಂದೊಡೆ "ಆಱಿನೆಂಬುದಧ್ಯಾಹಾರ್ಯಂ.

(4) ವಿಶಂಕೆಯ ಎತ್ತಕ್ಕೆ—

ತ್ರಿ. ಷ "ಉಱಿಮಂಜಿಮೆ ಬೆರ್ಚಿಮೆ ಬೆಸ- |
ಕೆಱಿಗೆಮೆ ದೇವ. . . . ." || 346 ||

ಎಂಬಲ್ಲಿ ಉಱಿಮೆ ಎಂಬೆತ್ತಮಧ್ಯಾಹಾರ್ಯಂ.

(5) ಸಮುಚ್ಚಯದುಮುವಿಂಗೆ—

". . . . . .ಆಯುಂ
ಸಿರಿ ತಾಯುಂ ತಂದೆ ಕಣ್ಣುಂ ಸುಗತಿಯೆನಿಸಿದಪಂ ಸಿಂಹಸೇನಕ್ಷಿ
ಪತಿಂಕುಂ. ಸುಗತಿಯುಂ ತೀಶಂ" || 347 ||

ಎಂಬಲ್ಲಿ ಕಡೆಯ ಸಮುಚ್ಚಯದುಮ್ ಅಧ್ಯಾಹಾರ್ಯಂ.

(6) ವಾಕ್ಯದೀಪಕಂ ಪ್ರತ್ಯೇಕಸಂಬಂಧಂ—ಆತನುಮವನುಂ ಬಂದನೆಂಬಲ್ಲಿ ಆತನುಂ ಬಂದಂ, ಅವನುಂ ಬಂದನೆಂದು ಮಾಡಿಪ್ಪುದು.

(7) ಕಾರಕಮುಖದಿಂ ವಿಭಕ್ತಿಪರಿಣಾಮಿಸುವುದಾಗಿ, ವಿಭಕ್ತಿಪರಿಣಾಮಕ್ಕೆ—

"ಕಡುಗಲಿ ಸೆಣಸುವ ಭಟರಾರ್||
ಒಡೆಯಂಗತಿಹಿತವರಾರ್। ಧುರಕ್ಕೊದಗುವರಾರ್'||
ತೊಡರ್ದೊಡೆ ಭಂಗಂ ಬರ್ಕುಂ||
ಸಡಗರಮಿದು ಜಯಮೆ ಮೆಱೆವುದಱಿ ಬೊಪ್ಪಲನಂ" || 348 ||

ಕಡುಗಲಿಯೆಂಬಲ್ಲಿ ಆತನೆಂಬ ಪ್ರಥಮೆಯುಂ, ಸೆಣಸುವ ಭಟರಾರ್ ಎಂಬಲ್ಲಿ ಆತನನೆಂಬ ದ್ವಿತೀಯೆಯುಂ, ಒಡೆಯಂಗತಿಹಿತವರಾರ್ ಎಂಬಲ್ಲಿ ಆತನಿಂ ಎಂಬ ತೃತೀಯೆಯುಂ, ಧುರಕ್ಕೊದಗುವರಾರ್ ಎಂಬಲ್ಲಿ ಆತಂಗೆಂಬ ಚತುರ್ಥಿ

ಯಂ, ತೊಡರ್ದೊಡೆ ಭಂಗಂ ಬರ್ಕುಮೆಂಬಲ್ಲಿ ಆತನತ್ತಣಿಂದೆಂಬ ಪಂಚಮಿಯಂ, ಸಡಗರಮಿದೆಂಬಲ್ಲಿ ಆತನ ಎಂಬ ಷಷ್ಠಿಯಂ, ಜಯಮೆ ಮೆಱೆವುದೆಂಬಲ್ಲಿ ಆತನೊಳೆಂಬ ಸಪ್ತಮಿಯಂ; ಈ ತೆಱದಿನರ್ಥ್ಯಾರೋಪಿಸಿಕೊಳ್ವುದು.

ಸೂತ್ರಂ[1]. || ೧೪೭ ||

The Declension of the Pronouns ಆಂ, ನೀಂ, ತಾಂ in the Singular.

ಪೀನಂ ಪ್ರಥಮೆಗೆ ನೀನಾ- |
ನ್ತಾನೆಂದಱಿ ನಿನಗೆಯೆನಗೆ ತನಗೆಂದು ಚತು- ||
ರ್ಥೀನಿರ್ದೇಶಕ್ಕಿತರ |
ಸ್ಥಾನಕ್ಕಸ್ವರದಿನಿರ್ಪ ನಿನ್ ಎನ್ ತಂಗಳ್. || ೧೫೭ ||

ಪದಚ್ಛೇದಂ.— ಪೀನಂ, ಪ್ರಥಮೆಗೆ ನೀಂ ಆಂ ತಾಂ ಎಂದು, ಅಱಿ! ನಿನಗೆ ಎನಗೆ ತನಗೆ ಎಂದು, ಚತುರ್ಥೀ ನಿರ್ದೇಶಕ್ಕೆ; ಇತರ ಸ್ಥಾನಕ್ಕೆ ಅಸ್ವರದಿಂ ಇರ್ಪ ನಿನ್ ಎನ್ ತಂಗಳ್.

ಅನ್ವಯಂ.— ಇತರ ಸ್ಥಾನಕ್ಕೆ ಅಸ್ವರದಿಂ ಇರ್ಪ ನಿನ್ನೆಂತಂಗಳ್ ಪೀನಂ ಪ್ರಥಮೆಗೆ, ನೀಂ ಆಂ ತಾಂ ಎಂದು, ಅಱಿ! ಚತುರ್ಥೀನಿರ್ದೇಶಕ್ಕೆ ನಿನಗೆ ಎನಗೆ ತನಗೆ ಎಂದು.

ಟೀಕು.— ಇತರ ಸ್ಥಾನಕ್ಕೆ = ಪ್ರಥಮೆ ಚತುರ್ಥಿಯಲ್ಲದುಳಿದ ವಿಭಕ್ತಿಸ್ಥಾನಕ್ಕೆ; ಅಸ್ವರದಿಂ = ವ್ಯಂಜನರೂಪದಿಂದೆ; ಇರ್ಪ ನಿನ್ನೆಂತಂಗಳ್ = ಇರ್ಪ ನಿನ್ ಎನ್ ತನ್ ಎಂಬಿವು; ಪೀನಂ = ವಿಶೇಷವಾಗಿ; ಪ್ರಥಮೆಗೆ = ಪ್ರಥಮಾವಿಭಕ್ತಿಗೆ; ನೀಂ = ನೀನೆಂದು; ಆಂ = ಆನೆಂದು; ತಾಂ = ತಾನೆಂದು; ಅಱಿ = ತಿಳಿ; ಚತುರ್ಥೀನಿರ್ದೇಶಕ್ಕೆ = ಚತುರ್ಥೀವಿಭಕ್ತಿಯ ನಿರ್ಣಯಕ್ಕೆ; ನಿನಗೆ = ನಿನಗೆ ಎಂದು; ಎನಗೆ = ಎನಗೆ ಎಂದು; ತನಗೆ = ತನಗೆ ಎಂದು ತಿಳಿ.

---

1) ನೀನಾನ್ತಾನಃ ಪ್ರಥಮಾವಿಭಕ್ತೌ ನಿನೆನ್ತನಾಂ || ಭಾ. ಭೂ. 92. ||
(ನಿನ್ ಎನ್ ತನ್ ಎಂಬಿವಕ್ಕೆ ಪ್ರಥಮಾವಿಭಕ್ತಿ ಪರವಾಗಲು ನೀಂ ಆಂ ತಾಂ ಎಂದು ಆದೇಶಗಳಾಗುವುವು.)

ನಿನ ಎನ ತನಾಶ್ಚತುರ್ಥ್ಯಾಂ ತೃತೀಯತ್ವಂ ಚಾಸ್ಯಾಃ || ಭಾ. ಭೂ. 93. ||
(ನಿನ್ ಎನ್ ತನ್ ಎಂಬಿವಕ್ಕೆ ಚತುರ್ಥೀವಿಭಕ್ತಿ ಪರವಾಗಲು ನಿನ ಎನ ತನ ಎಂಬಾದೇಶಗಳಾಗಿ, ಆ ಚತುರ್ಥಿಗೆ ಗತ್ವವು ಬರುವುದು.)

ನೀನಾಂತಾನೆನಿಕುಂ ಪ್ರಥ- |
ಮಾನಿರ್ದೇಶಕ್ಕೆ ನಿನಗೆಯೆನಗೆತನಗೆಯೆಂ- ||
ಬೀ ನುಡಿ ಚತುರ್ಥಿಯೊಳ್ ನಲೆ |
ತಾನಕ್ಕುಂ ಯುಷ್ಮದಸ್ಮದನ್ಯೋಕ್ತಿಗಳೊಳ್ || ಶ. ಸ್ಮೃ. 36. ||

ವೃತ್ತಿ.— ಪಿರಿದುಂ ಪ್ರಥಮೆಗೆ ನೀನ್ ಆನ್ ತಾನ್ ಎಂದಱಿವುದು; ಚತುರ್ಥಿಗೆ ನಿನಗೆ ಎನಗೆ ತನಗೆ ಎಂದಱಿವುದು. ಮಿಕ್ಕೆಡೆಯೊಳ್ ಸ್ವರರಹಿತಮಾಗಿ, ನಿನ್ ಎನ್ ತನ್ ಎಂದು, ಪ್ರಕೃತಿಯಪ್ಪುವು.

ಪ್ರಯೋಗಂ.— ವಿಭಕ್ತಿಯೋಗಕ್ಕೆ— ನಿನ್ನಂ, ನಿನ್ನಿಂ, ನಿನ್ನತ್ತಣಿಂ, ನಿನ್ನ, ನಿನ್ನೊಳ್.

"ನೀನಾರ್ಗಾನಾರ್ಗೆ ತಾನಾರ್ಗೆನೆನಗುಸಿರಲ್ವೇಡ" || 349 ||

"ನಿನಗೆನಗೆ ತನಗೆ ತೀರ್ಗುಮೆ |
ಹನುಮಂತನ ಶಕ್ತಿಸಾಹಸಂ ರಿಪುವಿಜಯಂ" || 350 ||

ಸೂತ್ರಂ[1]. || ೧೪೭ ||

ನಿನತೆನತು ತನತೆನಿಪ್ಪಿವು |
ಜನಿಯಿಸುಗುಂ ನಿನ್ನದೆನ್ನದುಂ ತನ್ನದೆನಿ- ||
ಪ್ಪಿನಿತಱೊಳಂ ಮೇಣ್ ದ್ವಿತ್ವದಿ- |
ನನೇಕದೊಳ್ನತ್ವದೆಡೆಗೆ ಮತ್ವಂ ಬರೆಯುಂ || ೧೫೮ ||

For ನಿನ್ನದು (ನಿನ್ನ+ಅದು), ಎನ್ನದು, ತನ್ನದು may be substituted ನಿನತು, ಎನತು, ತನತು, or ನಿನತ್ತು, ಎನತ್ತು, ತನತ್ತು. Their Plural is ನಿಮತು, ಎಮತು, ತಮತು, or ನಿಮತ್ತು, ಎಮತ್ತು, ತಮತ್ತು.

ಪದಚ್ಛೇದಂ.— ನಿನತು ಎನತು ತನತು ಎನಿಪ್ಪ ಇವು ಜನಿಯಿಸುಗುಂ ನಿನ್ನದು ಎನ್ನದುಂ ತನ್ನದು ಎನಿಪ್ಪ ಇನಿತಱೊಳಂ ಮೇಣ್ ದ್ವಿತ್ವದಿಂ, ಅನೇಕದೊಳ್ ನತ್ವದ ಎಡೆಗೆ ಮತ್ವಂ ಬರೆಯುಂ.

ಅನ್ವಯಂ.— ನಿನ್ನದು ಎನ್ನದು ತನ್ನದು ಎನಿಪ್ಪಿನಿತಱೊಳಂ ನಿನತು ಎನತು ತನತು ಎನಿಪ್ಪಿವು ಮೇಣ್ ದ್ವಿತ್ವದಿಂ ಜನಿಯಿಸುಗುಂ, ಅನೇಕದೊಳ್ ನತ್ವದ ಎಡೆಗೆ ಮತ್ವಂ ಬರೆಯುಂ.

ಟೀಕು.— ನಿನ್ನದು = ನಿನ್ನದೆಂದು; ಎನ್ನದು = ಎನ್ನದೆಂದು; ತನ್ನದು = ತನ್ನದೆಂದು; ಎನಿಪ್ಪ = ಎನಿಸುವ; ಇನಿತಱೊಳಂ = ಇಷ್ಟರಲ್ಲಿಯುಂ; ನಿನತು = ನಿನತೆಂದು; ಎನತು = ಎನತೆಂದು; ತನತು = ತನತೆಂದು; ಎನಿಪ್ಪ = ಎನಿಸುವ; ಇವು = ಈ ಶಬ್ದಂಗಳ್; ಮೇಣ್ =

---

1) ದ್ವಿಬಹ್ವೋರ್ನಸ್ಯ ಮಃ || ಶಾ. ಭೂ. 94. ||
(ಆ ಶಬ್ದಗಳಿಗೆ ದ್ವಿತ್ವಬಹುತ್ವಗಳನ್ನು ನುಡಿವಲ್ಲಿ ನಕಾರಕ್ಕೆ ಮಕಾರಮುಂಟು.)

ವಿಕಲ್ಪದಿಂದೆ; ದ್ವಿತ್ವದಿಂ = ಒತ್ತಿನೊಡನೆ; ಜನಿಯಿಸುಗುಂ = ಹುಟ್ಟುವುವು; ಅನೇಕದೊಳ್ = ಬಹುವಚನದಲ್ಲಿ; ನತ್ವದ = ನಿನ್ನದೆನ್ನದು ತನ್ನದೆಂಬ ನಕಾರದ; ಎಡೆಗೆ = ಸ್ಥಾನಕ್ಕೆ; ಮತ್ವಂ = ನಿಮ್ಮದೆಮ್ಮದು ತಮ್ಮದೆಂದು ಮಕಾರಂ; ಬರೆಯುಂ = ಬಂದೊಡಂ, ವಿಕಲ್ಪದಿಂದೆ, ನಿಮತ್ತು ಎಮತ್ತು ತಮತ್ತು ಎಂದು, ದ್ವಿತ್ವದಿಂ ಹುಟ್ಟುವುದು.

ವೃತ್ತಿ.—ನಿನ್ನದು ಎನ್ನದು ತನ್ನದು ಎಂಬಿವರ್ಕೆ ನಿನತು ಎನತು ತನತು ಎಂದಾದೇಶಮಕ್ಕುಂ; ಮೇಣೆಂಬ ವಿಕಲ್ಪದಿಂದವರ್ಕೆ ದ್ವಿತ್ವಮುಂಟು—ನಿನತ್ತು ಎನತ್ತು ತನತ್ತು ಎಂದು. ನಿನತು ಎನತು ತನತು ಎಂಬ ನಕಾರಕ್ಕೆ ಬಹುವಚನದೊಳ್ ಮತ್ವಮುಂಟು—ನಿಮತು ಎಮತು ತಮತು. ವಿಕಲ್ಪದಿಂದವಱ ದ್ವಿರ್ಭಾವಮುಂಟು—ನಿಮತ್ತು ಎಮತ್ತು ತಮತ್ತು ಎಂದು.

ಪ್ರಯೋಗಂ.—ನಿನತಾದಿಗೆ—

ನಿನತು ಬಲವೆನತು ಶೌರ್ಯಂ ।
ತನತು ಮಹಾಧೈರ್ಯಮವನಿಪತಿಗೆ" || 351 ||

ಇವಱ ದ್ವಿರ್ಭಾವಕ್ಕೆ—

"ಮುನಿಸಿದು ನಿನತ್ತು ಸೈರಣೆ ।
ಯೆನತ್ತು ಕೆಳದಿಗೆ ತನತ್ತು ಸಂದಿಸುವೆಸಕಂ" || 352 ||

ಸೂತ್ರಂ || ೧೪೮ ||

Insertion of ಉತು between ನಿಮ್ಮ, ಎಮ್ಮ, ತಮ್ಮ and Numerals with an initial Vowel, excepting ಒಂದು (ಒಂಬತ್ತು).

ಇದಿರೊಳ್ಸ್ವರಾದಿಸಂಖ್ಯೆಗ- ।
ಳೊದವಿರೆ, ನಿಮ್ಮೆಮ್ಮ ತಮ್ಮೆನಿಪ್ಪಿವು ಪಿಂತ- ||
ಣ್ಗೊದವಿರೆ, ನಡುವಣ್ಗುತುವ- ।
ಪ್ಪುದಿವಱ ಬಹುವಚನದಲ್ಲಿ ಪುಗಿಸದಿರೊಂದಂ. (1)
|| ೧೫೯ ||

ಪದಚ್ಛೇದಂ.—ಇದಿರೊಳ್ ಸ್ವರಾದಿಸಂಖ್ಯೆಗಳ್ ಒದವಿ ಇರೆ, ನಿಮ್ಮ ಎಮ್ಮ ತಮ್ಮ ಎನಿಪ್ಪ ಇವು ಪಿಂತಣ್ಗೆ ಒದವಿ ಇರೆ, ನಡುವಣ್ಗೆ ಉತು ಅಪ್ಪುದು. ಇವಱ ಬಹುವಚನದಲ್ಲಿ ಪುಗಿಸದಿರ್ ಒಂದಂ.

ಅನ್ವಯಂ.—ಇವಱ ಬಹುವಚನದಲ್ಲಿ ಒಂದಂ ಪುಗಿಸದಿರ್. ಉಳಿದುದು ಯಥಾನ್ವಯಂ.

ಟೀಕು. — ಇದಿರೊಳ್ = ಪರದಲ್ಲಿ; ಸ್ವರಾದಿಸಂಖ್ಯೆಗಳ್ = ಸ್ವರಾಕ್ಷರಂಗಳಾದಿಯಾದ ಸಂಖ್ಯಾವಾಚಿಗಳ್; ಒದವಿರೆ = ಪ್ರಾಪ್ತಿಸಿರೆ; ನಿಮ್ಮ = ನಿಮ್ಮ ಎಂದು; ಎಮ್ಮ = ಎಮ್ಮ ಎಂದು; ತಮ್ಮ = ತಮ್ಮ ಎಂದು; ಎನಿಪ್ಪ = ಎನಿಸುವ; ಇವು = ಈ ಪದಂಗಳ್; ಪಿಂತಣ್ಗೆ = ಹಿಂದು ಗಡೆಗೆ; ಒದವಿರೆ = ಪ್ರಾಪ್ತಿಸಿರೆ; ನಡುವಣ್ಗೆ = ಮಧ್ಯಕ್ಕೆ; ಉತು = ಉತು ಎಂದು; ಅಪ್ಪುದು = ಅಕ್ಕುಂ; ಇವರಿ = ಈ ಪದಂಗಳ; ಬಹುವಚನದಲ್ಲಿ = ಬಹುತ್ವದಲ್ಲಿ; ಒಂದಂ = ಒಂದೆಂಬುದಂ; ಪುಗಿಸದಿರ್ = ಪ್ರವೇಶವಂ ಮಾಡದಿರ್.

ವೃತ್ತಿ. — ಸ್ವರಾದಿಸಂಖ್ಯೆಗಳ್ ಪರಮಾಗೆ, ಮೊದಲೊಳ್ ನಿಮ್ಮ ಎಮ್ಮ ತಮ್ಮ ಎಂಬಿವು ಬರೆ, ಮಧ್ಯದೊಳುತುವಕ್ಕುಂ. ಒಂದೆಂಬುದೇಕವಚನ ಮಾಗದು.

ಪ್ರಯೋಗಂ. — ನಿಮ್ಮುತಿರ್ವರುಂ, ಎಮ್ಮುತೈವರುಂ, ತಮ್ಮುತಱುವರುಂ; ಏೞ್ಬರುಂ ಎಣ್ಬರುಂ ಎಂಬಿವರ್ಕಮಂತೆ. (ಒಂಬತ್ತೆಂಬುದರ್ಕೆ ಲಕ್ಷಣ ಮುಂಟಾದೊಡಮುಚ್ಚಾರಣಶುಭಗಮಲ್ಲಾಗಿ, ಮಾಣ್ದುದು.)

ಸೂತ್ರಂ. ॥ ೧೪೯ ॥

For ಎತ್ತಣದು and ಆರದು may be substituted ಎತ್ತಣ್ತು and ಆರ್ತು.

ಎತ್ತಣದೆಂಬೀ ಶಬ್ದಮ- ।
ನೆತ್ತಣ್ತೆಂದಿಂತು ಕೂಡಿ ನುಡಿಯಲ್ಕಕ್ಕುಂ ॥
ಮತ್ತಾರದೆಂಬುದಂ ವಿಬು- ।
ಧೋತ್ತಮರಾರ್ತೆಂದು ಕೂಡಿ ನುಡಿಯಲ್ಕಕ್ಕುಂ. ॥ ೧೫೦ ॥

ಪದಚ್ಛೇದಂ. — ಎತ್ತಣದು ಎಂಬ ಈ ಶಬ್ದಮಂ, ಎತ್ತಣ್ತು ಎಂದು, ಇಂತು ಕೂಡಿ ನುಡಿಯಲ್ಕೆ ಅಕ್ಕುಂ; ಮತ್ತೆ ಆರದು ಎಂಬುದಂ ವಿಬುಧೋತ್ತಮರ್, ಆರ್ತು ಎಂದು, ಕೂಡಿ ನುಡಿಯಲ್ಕೆ ಅಕ್ಕುಂ.

ಟೀಕು, ಯಥಾನ್ವಯಂ. — ಎತ್ತಣದು = ಎತ್ತಣದು; ಎಂಬೀ ಶಬ್ದಮಂ = ಎಂಬೀ ಶಬ್ದಮಂ; ಎತ್ತಣ್ತು = ಎತ್ತಣ್ತೆಂದು; ಇಂತು = ಹೀಗೆ; ಕೂಡಿ ನುಡಿಯಲ್ಕೆ = ಕೂಡಿ ನುಡಿ ವುದರ್ಕೆ; ಅಕ್ಕುಂ = ಅಪ್ಪುದು; ಮತ್ತೆ = ಬಳಿಕಂ; ಆರದೆಂಬುದಂ = ಆರದೆಂಬ ಶಬ್ದಮಂ; ವಿಬುಧೋತ್ತಮರ್ = ವಿದ್ವಚ್ಛ್ರೇಷ್ಠರ್; ಆರ್ತೆಂದು = ಆರ್ತು ಎಂದು; ಕೂಡಿ ನುಡಿಯಲ್ಕೆ = ಕೂಡಿ ನಡಿವುದರ್ಕೆ; ಅಕ್ಕುಂ = ಅಪ್ಪುದು.

ವೃತ್ತಿ.—ಎತ್ತಣದೆಂಬೀ ಶಬ್ದಕ್ಕೆ ಎತ್ತಣ್ತೆಂದುಂ, ಆರದೆಂಬ ಶಬ್ದಕ್ಕೆ ಆರ್ತೆಂದುಮಾದೇಶಮಕ್ಕುಂ.

ಪ್ರಯೋಗಂ.—

"ದೆಸೆಯೆತ್ತಣ್ತಾಗಸಮೆತ್ತಣ್ತೆತ್ತಣ್ತುರ್ವಿಯೆನಿಸಿ ಪರ್ಬಿದುದು
ತಮಂ." || 353 ||

"ಆರ್ತೀತುರಂಗವಿಂತಿದ- |
ನಾರ್ತಂದರ್ ದಿವ್ಯವಸ್ತುಮಂ . . . ." || 354 ||

ಸೂತ್ರಂ[1]. || ೧೫೦ ||

Derivation of the Masculines ಅವಂ, ಇವಂ, ಉವಂ and ಅತಂ, ಈತಂ, ಊತಂ from the Neuters ಅದು, ಇದು, ಉದು. Their Plural with ಅರ್ and ಂಗಳ್.

ಅದುವಿದುವುದುವೆಂಬಿವಱಿಂ- |
ತ್ಯದುಕಾರಕ್ಕೊದವುಗುಂ ವಕಾರಂ ಪುಲ್ಲಿಂ- ||
ಗದೊಳಲ್ಲಿ ತಕಾರಂ ಮೇ- |
ಣೊದವಿರೆ ಚೆಜ್ಜರದೆ ಬರ್ಪುದಾದಿಗೆ ದೀರ್ಘಂ. || ೧೬೧ ||

ಪದಚ್ಛೇದಂ.—ಆದು ಇದು ಉದು ಎಂಬ ಇವಱ ಅಂತ್ಯದುಕಾರಕ್ಕೆ ಒದವುಗುಂ ವಕಾರಂ ಪುಲ್ಲಿಂಗದೊಳ್; ಅಲ್ಲಿ ತಕಾರಂ ಮೇಣ್ ಒದವಿ ಇರೆ, ಚೆಜ್ಜರದೆ ಬರ್ಪುದು ಆದಿಗೆ ದೀರ್ಘಂ.

ಅನ್ವಯಂ.—ಪುಲ್ಲಿಂಗದೊಳ್ ಆದು ಇದು ಉದು ಎಂಬಿವಱ ಅಂತ್ಯದುಕಾರಕ್ಕೆ ವಕಾರಂ ಒದವುಗುಂ; ಅಲ್ಲಿ ಮೇಣ್ ತಕಾರಂ ಒದವಿ ಇರೆ, ಚೆಜ್ಜರದೆ ಆದಿಗೆ ದೀರ್ಘಂ ಬರ್ಪುದು.

ಟೀಕು.—ಪುಲ್ಲಿಂಗದೊಳ್ = ಪುಲ್ಲಿಂಗದಲ್ಲಿ; ಅದು = ಅದೆಂದು; ಇದು = ಇದೆಂದು; ಉದು = ಉದೆಂದು; ಎಂಬಿವಱ = ಎಂಬೀ ಶಬ್ದಂಗಳ; ಅಂತ್ಯದುಕಾರಕ್ಕೆ = ಕಡೆಯ ದುಕಾರಕ್ಕೆ;

---

[1] ಅದು ಇದು ಉದೂನಾಮಂತೇ ವತೌ ಪುಂಸಿ || ಭಾ. ಭೂ. 95. ||
(ಪುಲ್ಲಿಂಗದಲ್ಲಿ ಅದು, ಇದು, ಉದುವೆಂಬೀ ಶಬ್ದಗಳ ಅಂತ್ಯಕ್ಕೆ ವಕಾರವೂ ಏಕಲ್ಪದಿಂದೆ ತಕಾರವೂ ಬರುವುದು.)
ದೀರ್ಘಸ್ತಕಯೋಃ || ಭಾ. ಭೂ. 97. ||
(ಆ ದುಕಾರಕ್ಕಾದೇಶವಾದ ತಕಾರಕ್ಕೆ ಪೂರ್ವದಲ್ಲಿ ದೀರ್ಘ ಬರುವುದುಂಟು.)

ವಕಾರಂ = ವತ್ವಂ; ಒದವುಗುಂ = ಪ್ರಾಪ್ತಿಸುತ್ತದು; ಅಲ್ಲಿ = ಈ ಶಬ್ದಂಗಳ್ಪುಲ್ಲಿಂಗವಾಗುವಲ್ಲಿ; ಮೇಣ್ = ಎಕಲ್ಪದಿಂದೆ; ತಕಾರಂ = ತತ್ವಂ ಬಂದು; ಒದವಿರೆ = ಪ್ರಾಪ್ತಿಸಿರೆ; ಜೆಕ್ಕರದೆ = ತೀವ್ರದಿಂದೆ; ಆದಿಗೆ = ಮೊದಲಕ್ಷರಕ್ಕೆ; ದೀರ್ಘಂ = ದೀರ್ಘಂ; ಬರ್ಪುದು = ಬರ್ಪುದು.

ವೃತ್ತಿ.— ಅದು ಇದು ಉದು ಎಂಬಿವಱ ಕಡೆಯ ದುಕಾರಕ್ಕೆ ವಕಾರಾದೇಶಮಕ್ಕುಂ; ಆ ದುಕಾರಕ್ಕೊರ್ಮೆ ಪೂರ್ವಕ್ಕೆ ದೀರ್ಘಂ ಬೆರಸುತ್ತಕಾರಾದೇಶಮಕ್ಕುಂ.

ಪ್ರಯೋಗಂ.— ವಕಾರಾದೇಶಕ್ಕೆ—ಅವಂ, ಇವಂ, ಉವಂ.
ಬಹುವಚನಕ್ಕೆ— ಅವರ್, ಇವರ್, ಉವರ್.
ತಕಾರಾದೇಶಕ್ಕೆ— ಆತಂ, ಈತಂ, ಊತಂ.

"ಆತಂ ದ್ರೋಣಂ ನೆಗೞ್ದಿಂ- |
ತೀತಂ ರವಿಜಾತನೂತನಶ್ವತ್ಥಾಮಂ" || 355 ||

ಬಹುವಚನಕ್ಕೆ— ಆತಂಗಳ್, ಈತಂಗಳ್, ಊತಂಗಳ್.

ಸೂತ್ರಂ. || ೧೫೧ ||

Derivation of the Masculines ಅವಂ and its Plural ಅರ್ from ಅವುದು. From ಎಲ್ಲದು comes ಎಲ್ಲಂ for all the three genders in the Singular.

ಅವುದೆನಿಪ್ಪೀ ಶಬ್ದ- |
ಕ್ಕಾವಂ ಬಹುವಚನದೆಡೆಯೊಳಾರೆಲ್ಲದೆನಿ- ||
ಪ್ಪಾ ವಚನಮದೇಕತ್ವಮ- |
ನಾವರಿಸಿದೊಡೆಲ್ಲಮೆಂದೆ ಆಯ್ತಾದೇಶಂ. || ೧೭೨ ||

ಪದಚ್ಛೇದಂ.— ಅವುದು ಎನಿಪ್ಪ ಈ ಶಬ್ದಕ್ಕೆ ಅವಂ, ಬಹುವಚನದ ಎಡೆಯೊಳ್ ಅರ್. ಎಲ್ಲದು ಎನಿಪ್ಪ ಆ ವಚನಂ ಅದು ಏಕತ್ವಮಂ ಆವರಿಸಿದೊಡೆ, ಎಲ್ಲಂ ಎಂದೆ, ಆಯ್ತು ಆದೇಶಂ.

ಅನ್ವಯಂ.— ಆದೇಶಂ ಆಯ್ತೆಂಬುದನ್ವಯಂ.

ಟೀಕು.— ಅನುವರ್ತನೆ— ಪುಲ್ಲಿಂಗದೊಳ್ = ಪುಲ್ಲಿಂಗದಲ್ಲಿ; ಅವುದು = ಅವುದೆಂಬ; ಎನಿಪ್ಪ = ಎನಿಸುವ; ಈ ಶಬ್ದಕ್ಕೆ = ಈ ಸರ್ವನಾಮಶಬ್ದಕ್ಕೆ; ಅವಂ = ಅವಂ ಎಂದಾಗುವುದು; ಬಹುವಚನದ = ಬಹುತ್ವದ; ಎಡೆಯೊಳ್ = ಸ್ಥಾನದಲ್ಲಿ; ಅರ್ = ಅರೆಂದಾಗುವುದು; ಎಲ್ಲ

ದು = ಎಲ್ಲದೆಂದು; ಎನಿಪ್ಪ = ಎನಿಸುವ; ಆ ವಚನಂ = ಆ ಬಹುವಚನಂ; ಅದು = ಅದು; ಏಕತ್ವಂ = ಏಕವಚನಮುಂ; ಅವರಿಸಿದೊಡೆ = ಅವಗ್ರಹಿಸಿದೊಡೆ; ಎಲ್ಲಮೆಂದೆ = ಎಲ್ಲಂ ಎಂದೆ; ಆದೇಶಂ = ಆದೇಶಂ; ಆಯ್ತು = ಆಯ್ತು.

ವೃತ್ತಿ — ಆವುದೆಂಬ ಶಬ್ದಕ್ಕೆ ಪುಲ್ಲಿಂಗದೇಕವಚನದೊಳಾವನೆಂದುಂ ಬಹುವಚನದೊಳಾರೆಂದುಮಾದೇಶಂ; ಎಲ್ಲದೆಂಬ ಶಬ್ದಕ್ಕೆ ಲಿಂಗತ್ರಯದಲ್ಲಿಯುಂ ಎಲ್ಲಮೆಂದಾದೇಶಂ.

ಪ್ರಯೋಗಂ. — ಆವುದೆಂಬುದರ್ಕೆ —

"ಆವಂ ಮುರನಂ ಕೊಂದನ- |
ದಾವಂ ಬಕಕಂಸಕೇಶಿಗಳನದಟಲೆದಂ" || 356 ||

"ಆರ್ಮೈಯ್ದೋರ್ಪರಾರ್ಮಲೆವರಾರ್ಪೊಣರ್ವರಾರ್ ತೂಳ್ದುವರ್" || 357 ||

"ಆರವಂ ಜನಮೇನೆಂದರ್" || 358 ||

ಎಲ್ಲದೆಂಬುದರ್ಕೆ —

"ಎಲ್ಲಂಗಮೆಲ್ಲ ಧನಮುಮ- |
ನೆಲ್ಲೆಡೆಯೊಳಮೆಲ್ಲ ತೆಱದೊಳಂ ಕುಡುಗುಮೆ. . . ." || 359 ||

"ಎಲ್ಲರುಮಾ ಕರ್ಣನಂತಿರೇಂ ಚಾಗಿಗಳೇ" || 360 ||

ಸೂತ್ರಂ. || ೧೫೨ ||

Derivation of the Masculines ಪೆಱಂ, ಪೆಱರ್ from ಪೆಱತು of the Masculines ಇನಿಯಂ, etc. from ಇನಿದು, etc., and of the Masculines ಒಳ್ಳಿದಂ etc. from ಒಳ್ಳಿತು, etc.

ಪೆಱತೆಂಬಿವಱಂತ್ಯಾಕ್ಷರ- |
ಮಱ್ಗುಂ। ಗುಣವಚನದಂತ್ಯದುತ್ವಕ್ಕತ್ವಂ ||
ನೆಱ್ಗುಂ। ತುಕಾರಮಿರೆ ಬಂ- |
ದೆಱಗುಗುಮಾ ತಾಣದೊಳ್ದಕಾರಾದೇಶಂ. || ೧೬೩ ||

ಪದಚ್ಛೇದಂ. — ಪೆಱತು ಎಂಬ ಇವಱ ಅಂತ್ಯಾಕ್ಷರಂ ಅಱ್ಗುಂ; ಗುಣವಚನದ ಅಂತ್ಯದುತ್ವಕ್ಕೆ ಅತ್ವಂ ನೆಱ್ಗುಂ; ತುಕಾರಂ ಇರೆ, ಬಂದು ಎಱಗುಗುಂ ಆ ತಾಣದೊಳ್ ದಕಾರದೇಶಂ.

ಅನ್ವಯಂ. — ತುಕಾರಂ ಇರೆ ಆ ತಾಣದೊಳ್ ದಕಾರಾದೇಶಂ ಬಂದು ಎಱಗುಗುಂ ಎಂಬುದನ್ವಯಂ.

ಟೀಕು.— ಅನುವರ್ತನೆ — ಪುಲ್ಲಿಂಗದೊಳ್ ಪೆಱಿತೆಂಬಿವಱಿ = ಪೆಱಿತು ಪೆಱಿದು ಎಂಬೀ ಶಬ್ದಂಗಳ; ಅಂತ್ಯಾಕ್ಷರಂ = ಕಡೆಯಣಕ್ಷರಂ; ಅೞಿಗುಂ = ಲೋಪವಾಗುವುದು; ಗುಣವಚನದ = ಗುಣವಚನಂಗಳ; ಅಂತ್ಯದುತ್ವಕ್ಕೆ = ಅಂತ್ಯದ ದುಕಾರಕ್ಕೆ; ಅತ್ವಂ = ಅಕಾರಂ; ನೆಱಿಗುಂ = ಬರ್ಪುದು; ತುಕಾರಂ = ತುತ್ವಂ; ಇರೆ = ಇರೆ; ಆ ತಾಣದೊಳ್ = ಆ ತಾವಿನಲ್ಲಿ; ದಕಾರಾದೇಶಂ = ದಕಾರಾದೇಶಂ; ಬಂದು = ಬಂದು; ಎಱಿಗುಗುಂ = ಪೊರ್ದುಗೆಯಾಗುವುದು.

ವೃತ್ತಿ.— ಪೆಱಿತು ಪೆಱಿದು ಎಂಬ ಶಬ್ದಂಗಳ ಕಡೆಯಕ್ಕರಕ್ಕೆ ಲೋಪಂ; ಗುಣವಚನದ ಕಡೆಯ ದುಕಾರಕ್ಕಕಾರಾದೇಶಂ; ಆ ಗುಣವಚನಂ ತುಕಾರಾಂತಮಾಗಿರೆ, ದಕಾರಾದೇಶಂ.

ಪ್ರಯೋಗಂ. — ಅಂತಾಕ್ಷರಲೋಪಕ್ಕೆ —

"ನರನೆಂಬಾತಂ ಪೆಱಿನಲ್ಲೀತನಾಗಲೆವೇೞ್ಕುಂ" || 361 ||

ಬಹುವಚನಕ್ಕೆ — "ಪೆಱಿರುಮೆಂದರ್" || 362 ||

ಅಕಾರಾದೇಶಕ್ಕೆ—ಕಿಱಿಯಂ, ಬಱಿಯಂ, ಅಸಿಯಂ, ಬಸಿಯಂ, ಕಡಿಯಂ, ನಿಡಿಯಂ.

"ಇನಿಯನೆ ಬೆಲ್ಲದಿಂದಿನಿಯನೀವನೆ ಆಃ ಪಿರಿದೀವನಿತ್ತುದಂ |
ನೆನೆವನೆ ಚೀಃ ಅದಂ ನೆನೆಯಂ. . . . . . ." || 363 ||

ದಕಾರಾದೇಶಕ್ಕೆ— ಒಳ್ಳಿದಂ, ತೆಳ್ಳಿದಂ, ಮೆಲ್ಲಿದಂ, ಬೆಟ್ಟಿದಂ, ತೋರಿದಂ, ನೇರಿದಂ, ಕೂರಿದಂ.

". . . . ಕೂರಿದನುಂ |
ಕೂರಸಿಯಂತೆನಿಸಿ ಮೆಱೆವನಾ ನರನಾಥಂ" || 364 ||

ಸೂತ್ರಂ. || ೧೫೩ ||

Derivation of the Masculines ಎಳೆಯಂ, ಪೞೆಯಂ and of the Feminines ಎಳೆಯಳ್, ಪೞೆಯಳ್ from ಎಳದು, ಪೞಿದು of ಬಱುವಂ from ಬಱವು, and of ಪೊಸಬಂ from ಪೊಸತು.

ಎಳದು ಪೞಿದೆಂಬ ಶಬ್ದಂ- |
ಗಳ ಮಧ್ಯಕ್ಕುಂಟೆಕಾರಮುತ್ವಂ ಬಱಿದೆಂ ||
ದೊಳಱಿವ ಱಕಾರದೊಳ್ಳೀಂ |
ತಿಳಿ ಪೊಸತಱಿ ಕಡೆಗೆ ಬಿಂದುವೆರಸುಬಕಾರಂ. || ೧೬೪ ||

ಪದಚ್ಛೇದಂ.— ಎಳದು ಪಱಿದು ಎಂಬ ಶಬ್ದಂಗಳ ಮಧ್ಯಕ್ಕೆ ಉಂಟು ಎಕಾರಂ; ಉತ್ವಂ ಬಱಿದು ಎಂದು ಒಳಱುವ ಱಿಕಾರದೊಳ್; ನೀಂ ತಿಳಿ, ಪೊಸತಱ ಕಡೆಗೆ ಬಿಂದುವೆರಸುಬಕಾರಂ.

ಅನ್ವಯಂ.— ಎಳದು ಪಱಿದು ಎಂಬ ಶಬ್ದಂಗಳ ಮಧ್ಯಕ್ಕೆ ಎಕಾರಂ ಉಂಟು; ಬಱಿದು ಎಂದು ಒಳಱುವ ಱಿಕಾರದೊಳ್ ಉತ್ವಂ; ಪೊಸತಱ ಕಡೆಗೆ ಬಿಂದುವೆರಸುಬಕಾರಂ ನೀಂ ತಿಳಿ!

ಟೀಕು.— ಅನುವರ್ತನೆ— ಪುಲ್ಲಿಂಗದೊಳ್ = ಗುಣವಚನಪುಲ್ಲಿಂಗದಲ್ಲಿ; ಎಳದು = ಎಳದೆಂದು; ಪಱಿದು = ಪಱಿದೆಂದು; ಎಂಬ ಶಬ್ದಂಗಳ = ಎಂಬ ಶಬ್ದಂಗಳ; ಮಧ್ಯಕ್ಕೆ = ನಡುವಣಕ್ಷರಕ್ಕೆ; ಎಕಾರಂ = ಎತ್ವಂ; ಉಂಟು = ಉಂಟಾಗುವುದು; ಬಱಿದೆಂದು = ಬಱಿದು ಎಂದು; ಒಳಱುವ = ಧ್ವನಿಗೆಯ್ವ; ಱಿಕಾರದೊಳ್ = ಱಿಕಾರದಲ್ಲಿ; ಉತ್ವಂ = ಉಕಾರಂ ಉಂಟಾಗುವುದು; ಪೊಸತಱ = ಪೊಸತೆಂಬ ಶಬ್ದದ; ಕಡೆಗೆ = ಅಂತ್ಯಾಕ್ಷರಕ್ಕೆ; ಬಿಂದುವೆರಸುಬಕಾರಂ = ಆದಿಯಲ್ಲಿ ಬಿಂದುಗೂಡಿದ ಬಕಾರಂ ಉಂಟಾಗುವುದು; ನೀಂ = ನೀಂ; ತಿಳಿ = ಅಱಿ.

ವೃತ್ತಿ.— ಎಳದು ಪಱಿದು ಎಂಬ ಶಬ್ದಂಗಳ್ಗೆ ಪುಲ್ಲಿಂಗದಕಾರಂ ಬರೆ, ಮಧ್ಯಕ್ಕೆ ಹ್ರಸ್ವಮಪ್ಪೆತ್ವಮಕ್ಕುಂ; ಬಱಿದೆಂಬ ಶಬ್ದದ ಱಿಕಾರಕ್ಕೆ ಉಕಾರಾದೇಶಂ; ಪೊಸತೆಂಬುದಱ ತುಕಾರಕ್ಕೆ ಬಿಂದುವೆರಸುಬಕಾರಾದೇಶಮಕ್ಕುಂ.

ಪ್ರಯೋಗಂ.— ಎಳದು ಪಱಿದೆಂಬುವರ್ಕೆ— ಎಳೆಯಂ, ಪಱೆಯಂ; ಸ್ತ್ರೀಲಿಂಗದಳ್ ಪರಮಾಗೆಯುಮಂತೆ – ಎಳೆಯಳ್, ಪಱೆಯಳ್.

ಬಱಿದೆಂಬುದರ್ಕೆ — ಬಱುವಂ.

ಪೊಸತರ್ಕೆ — ಪೊಸಂಬಂ.

"ವಿಚಾರಿಸದುಂತೆ ಪೊಸಂಬರೊತ್ತೆಯುಂ ಕೊಳ್ವುದು ತಕ್ಕುದಲ್ತು". || 365 ||

ಸೂತ್ರಂ[1]. || ೧೫೪ ||

Derivation of the Feminines ಅವಳ್, ಇವಳ್, ಉವಳ್ and ಆಕೆ, ಈಕೆ, ಊಕೆ from ಅದು, ಇದು, ಉದು.

ಅದುವಿದುವುದುವೆಂಬಿವಱಿಂ- |
ತ್ಯದೊಳ್ವಳಾದೇಶವಿಧಿ ಕೆಕಾರಂ ಮೇಣ್ಬಂ- ||
ದೊದವಿರೆ ಬರ್ಕುಂ ಸ್ತ್ರೀಲಿಂ- |
ಗದೊಳಂ ಪುಲ್ಲಿಂಗದಂತಿರಾದಿಗೆ ದೀರ್ಘಂ | ||೧೬೫||

1) ವಳ್ ಕೇಚಸ್ತ್ರಿಯಾಂ || ಭಾ. ಭೂ. 96. ||
(ಅದು ಇದು ಉದು ಎಂಬಿವಕ್ಕೆ ಸ್ತ್ರೀಲಿಂಗದಲ್ಲಿ ವಳ್ ಕೆ ಎಂದಾದೇಶಗಳು ಬರುವುವು.)

ಪದಚ್ಛೇದಂ.— ಅದು ಇದು ಉದು ಎಂಬ ಇವಱ ಅಂತ್ಯದೊಳ್ ವಳ್ ಆದೇಶವಿಧಿ; ಕೆಕಾರಂ ಮೇಣ್ ಬಂದು ಒದವಿ ಇರೆ, ಬರ್ಕುಂ ಸ್ತ್ರೀಲಿಂಗದೊಳಂ— ಪುಲ್ಲಿಂಗದಂತೆ ಇರೆ— ಆದಿಗೆ ದೀರ್ಘಂ.

ಅನ್ವಯಂ.— ಸ್ತ್ರೀಲಿಂಗದೊಳಂ ಅದು ಇದು ಉದು ಎಂಬಿವಱ ಅಂತ್ಯದೊಳ್ ವಳಾದೇಶವಿಧಿ; ಮೇಣ್ ಕೆಕಾರಂ ಬಂದು ಒದವಿರೆ, ಪುಲ್ಲಿಂಗದಂತಿರೆ ಆದಿಗೆ ದೀರ್ಘಂ ಬರ್ಕುಂ.

ಟೀಕು.— ಸ್ತ್ರೀಲಿಂಗದೊಳಂ = ಸ್ತ್ರೀಲಿಂಗದಲ್ಲಿಯುಂ; ಅದು = ಅದೆಂದು; ಇದು = ಇದೆಂದು; ಉದು = ಉದೆಂದು; ಎಂಬಿವಱ = ಎಂಬೀ ಶಬ್ದಂಗಳ; ಅಂತ್ಯದೊಳ್ = ಕಡೆಯಕ್ಷರದಲ್ಲಿ; ವಳಾದೇಶವಿಧಿ = ವಳ್ ಎಂಬಾದೇಶದ ವಿಧಿ ಬರ್ಪುದು; ಮೇಣ್ = ವಿಕಲ್ಪದಿಂದೆ; ಕೆಕಾರಂ = ಕೆಕಾರಂ; ಬಂದು = ಆದೇಶವಾಗಿ ಬಂದು; ಒದವಿರೆ = ಪ್ರಾಪ್ತಿಸಿರೆ; ಪುಲ್ಲಿಂಗದಂತಿರೆ = ಪುಲ್ಲಿಂಗದ ಹಾಗೆ ಸ್ತ್ರೀಲಿಂಗದಲ್ಲಿಯುಂ; ಆದಿಗೆ = ಮೊದಲಕ್ಷರಕ್ಕೆ; ದೀರ್ಘಂ = ದೀರ್ಘಂ; ಬರ್ಕುಂ = ಬರ್ಪುದು.

ವೃತ್ತಿ.— ಅದು ಇದು ಉದು ಎಂಬಿವಱ ದುಕಾರಕ್ಕೆ ಸ್ತ್ರೀಲಿಂಗದೊಳ್ ವಳಾದೇಶಂ; ಆ ದುಕಾರಕ್ಕೆ ಮೇಣ್ಕೆಕಾರಮುಮಾದಿಗೆ ಪುಲ್ಲಿಂಗದಂತಿರೆ ದೀರ್ಘಮುಮಕ್ಕುಂ.

ಪ್ರಯೋಗಂ.— ವಳ್ಗೆ— ಆವಳ್, ಈವಳ್, ಊವಳ್.
ಕೆಕಾರಕ್ಕೆ— ಆಕೆ. ಈಕೆ, ಊಕೆ.

ಸೂತ್ರಂ. || ೧೫೫ ||

Many words which are either Masculines or Feminines in Samskṛita are Neuters in Kannaḍa; for instance also ಸಜ್ಜನಂ becomes such a neuter when denoting a woman of good family.

ಕೆಲ ಕೆಲವು ಸಕ್ಕದದ ಮೂ- |
ಡಱ ಲಿಂಗಮುಂ ರೂಢಿವೆತ್ತ ಕರ್ಣಾಟಕದೊಳ್ ||
ನಿಲೆ ನಪ್ಪೆಱ ಸಜ್ಜನವಧು |
ಕುಲವಧುವೆಂಬಲ್ಲಿ ಕನ್ನಡಂ ನಪ್ಪದುವುಂ. || ೧೬೭ ||

ಪದಚ್ಛೇದಂ.— ಕೆಲ ಕೆಲವು ಸಕ್ಕದದ ಮೂಡಱ ಲಿಂಗಮುಂ ರೂಢಿವೆತ್ತ ಕರ್ಣಾಟಕದೊಳ್ ನಿಲೆ ನಪ್ಪು, ಅಱ! ಸಜ್ಜನವಧು ಕುಲವಧು ಎಂಬ ಅಲ್ಲಿ ಕನ್ನಡಂ ನಪ್ಪು ಆದುವುಂ.

ಅನ್ವಯಂ.— ಕನ್ನಡಂ ಅದುವುಂ ನಪ್ಪು ಎಂಬುದನ್ವಯಂ.

ಟೀಕು.— ಕೆಲ ಕೆಲವು = ಹಲವು ಕೆಲವು; ಸಕ್ಕದದ = ಸಂಸ್ಕೃತದ; ಮೂಱು ಲಿಂಗಮುಂ = ಸ್ತ್ರೀಪುಂನಪುಂಸಕಂಗಳೆಂಬ ಮೂರು ಲಿಂಗಮುಂ; ರೂಢಿವೆತ್ತ ಕರ್ಣಾಟಕದೊಳ್ = ರೂಢಿಯಾದ ಕನ್ನಡದಲ್ಲಿ; ನಿಲೆ = ನೆಲಸೆ; ನಪ್ಪು = ನಪುಂಸಕಲಿಂಗಮಾಗುವುವು; ಅಱ = ತಿಳಿ; ಸಜ್ಜನವಧು = ಸಜ್ಜನವಧುವೆಂದು; ಕುಲವಧು = ಕುಲವಧುವೆಂದು; ಎಂಬಲ್ಲಿ = ಎಂಬೆಡೆಯಲ್ಲಿ; ಕನ್ನಡಂ = ಕನ್ನಡವಾಗಿ; ಅದುವುಂ = ಆ ಶಬ್ದವುಂ; ನಪ್ಪು = ನಪುಂಸಕಲಿಂಗವಾಗುವುದು, ತಿಳಿ!

ವೃತ್ತಿ.— ಕೆಲ ಕೆಲವು ಸಕ್ಕದದ ಮೂಱು ಲಿಂಗಮುಂ ಕನ್ನಡಕ್ಕೆ ಬಂದಲ್ಲಿ ನಪುಂಸಕಮಕ್ಕುಂ; ಸಜ್ಜನಶಬ್ದಂ ಕುಲಸ್ತ್ರೀಯಂ ಪೇೞ್ವಲ್ಲಿ ಕನ್ನಡದೊಳೆಂದುಂ ನಪುಂಸಕಮೆಯಕ್ಕುಂ.

ಪ್ರಯೋಗಂ.— ಸಂಸ್ಕೃತಲಿಂಗತ್ರಯಂಗಳೊಳ್ ಪುಲ್ಲಿಂಗಕ್ಕೆ— ವೃಕ್ಷಂ ತಳಿರ್ತುದು; ವಾಯು ತೀಡಿದುದು.

ಸ್ತ್ರೀಲಿಂಗಕ್ಕೆ— ಪ್ರೀತಿಯಾದುದು, ಧರೆ ಬೆಳೆದುದು, ನದಿ ಬಂದುದು, ಮತಿ ಪೆರ್ಚಿದುದು.

ನಪುಂಸಕಕ್ಕೆ— ಕುಲಂ ಮೇಲೆನಿಸಿದುದು.

ಸಜ್ಜನಶಬ್ದಕ್ಕೆ— ಆಸತ್ತಿ ಸಜ್ಜನಮ್ಹಾಟಿಕ್ಕಿಯಿನೆಂದುಂಟು.

ಸಮುಚ್ಚಯದಿಂ ಅಪತ್ಯ ಕಳತ್ರ (ಎಂಬ) ಶಬ್ದಂಗಳ್ ಸ್ತ್ರೀವಾಚಕಮಾಗಿಯುಂ ಜನಶಬ್ದ ಲೋಕಶಬ್ದಂಗಳ್ ಪುರುಷವಾಚಕಂಗಳಾಗಿಯುಂ ನಪುಂಸಕಂ—ಇದು ಕಳತ್ರಂ; ಇದಪತ್ಯಂ. ಇದು ಜನಂ; ಇದು ಲೋಕಂ.

ಸೂತ್ರಂ. ॥ ೧೫೭ ॥

In Metaphorical language (ರೂಪಕಂ) the gender of a Substantive (ವಿಶೇಷ್ಯಂ) may be altered according to its being shown by the Attribute (ವಿಶೇಷಣಂ), and vice versa.

ನೆಲಸಿರ್ದ ವಿಶೇಷಣದಿ- ।
ಷ್ಟಲಿಂಗಮೆನಿಪುದು ವಿಶೇಷ್ಯಮದಱೊಷ್ಟದಿನ- ॥
ಗ್ಗಲಿಕುಂ ವಿಶೇಷಣದ ಲಿಂ- ।
ಗಲಕ್ಷಣಂ ದೋಷರಹಿತಮಿದು ರೂಪಕದೊಳ್. ॥೧೬೭॥

ಪದಚ್ಛೇದಂ.—ನೆಲಸಿ ಇರ್ದ ವಿಶೇಷಣದ ಇಷ್ಟಲಿಂಗಂ ಎನಿಪುದು ವಿಶೇಷ್ಯಂ; ಅದಱ ಇಷ್ಟದಿಂ ಅಗ್ಗಳಿಕುಂ ವಿಶೇಷಣದ ಲಿಂಗಲಕ್ಷಣಂ. ದೋಷರಹಿತಂ ಇದು ರೂಪಕದೊಳ್.

ಅನ್ವಯಂ.—ನೆಲಸಿ ಇರ್ದ ವಿಶೇಷಣದ ಇಷ್ಟಲಿಂಗಂ ಎನಿಪುದು ವಿಶೇಷ್ಯಂ; ಅದಱ ಇಷ್ಟದಿಂ ವಿಶೇಷಣದ ಲಿಂಗಲಕ್ಷಣಂ ಅಗ್ಗಳಿಕುಂ. ಇದು ರೂಪಕದೊಳ್ ದೋಷರಹಿತಂ.

ಟೀಕು.—ನೆಲಸಿರ್ದ=ನೆಲೆಗೊಂಡು ಇರ್ದ; ವಿಶೇಷಣದ=ವಿಶೇಷಣಶಬ್ದದ; ಇಷ್ಟಲಿಂಗಂ=ಇಷ್ಟವಾದ ಲಿಂಗಂ; ಎನಿಪುದು=ಎನಿಸುವುದು; ವಿಶೇಷ್ಯಂ=ವಿಶೇಷ್ಯಲಿಂಗಂ; ಅದಱ=ಆ ವಿಶೇಷ್ಯದ; ಇಷ್ಟದಿಂ=ಇಷ್ಟದಿಂದೆ; ವಿಶೇಷಣದ=ವಿಶೇಷಣಶಬ್ದದ; ಲಿಂಗಲಕ್ಷಣಂ=ಲಿಂಗದ ಲಕ್ಷಣಂ; ಅಗ್ಗಳಿಕುಂ=ಪೆರ್ಚುಗೆವಡೆವುದು; ಇದು=ಈ ಪ್ರಯೋಗಂ; ರೂಪಕದೊಳ್=ರೂಪಕದಲ್ಲಿ; ದೋಷರಹಿತಂ=ನಿರ್ದೋಷವಪ್ಪುದು.

ವೃತ್ತಿ.—ವಿಶೇಷಣದ ಲಿಂಗದಿಷ್ಟದಿಂ ವಿಶೇಷ್ಯಮುಮನಾಲಿಂಗಮಾಗಿ ಯೋಚಿಸಿಕೊಳ್ವುದು; ವಿಶೇಷ್ಯಲಿಂಗದಿಷ್ಟದಿಂ ವಿಶೇಷಮುಮನಾಲಿಂಗಮಾಗಿ ಯೋಚಿಸಿಕೊಳ್ವುದು. ರೂಪಕದೊಳಿದು ನಿರ್ದೋಷಂ.

ಪ್ರಯೋಗಂ.—ವಿಶೇಷಣಬಲಕ್ಕೆ—

"ಉದಯಾಸ್ತೋನ್ನತ ಶೈಲ ಸೇತು ಹಿಮವತ್ಕುತ್ಕೀಲ ಪರ್ಯಂತ ಸಂ- |
ಪದೆಯಂ ವಾರ್ಧಿತರಂಗಶಕ್ತ ನಿನದತ್ ಕಾಂಚೀ ಕಲಾಪಾಂಚಿತಾ- ||
ಸ್ಪದೆಯಂ ಸಾಧಿಸಿ ಕಬ್ಬಿಗಂಗೆ ನೆಲನಂ ನಿರ್ವ್ಯಾಜದಿಂದಂ ನಿಮಿ- |
ರ್ಚಿದಗೆಲ್ಲಂ ಭುವನೈಕರಾಮಮಹಿಪಂಗಕ್ಕುಂ ಪೆಱರ್ಗಕ್ಕುಮೇ"
|| 366 ||

ಎಂಬಲ್ಲಿ ನೆಲನೆಂಬ ನಪುಂಸಕಲಿಂಗಮಂ ಬಿಟ್ಟು, ಧರಾವನಿತೆಯೆಂದು, ಯೋಚಿಸಿಕೊಳ್ವುದು.

ವಿಶೇಷ್ಯಬಲಕ್ಕೆ—ಆತಂ ಜಗದ್ದರ್ಪಣಂ; ಆ ಪೆಣ್ಜಗದ್ದರ್ಪಣಂ; ಅದು ಜಗದ್ದರ್ಪಣಂ.

ಸೂತ್ರಂ[1]. ॥ ೧೫೭ ॥

In the midst of Kannaḍa words a ವ (ಅವು) may become an ಔ, and a ಯ (ಅಯಿ) an ಐ; final ಅ (ಅಂ) may become ಒ (ಒಂ).

ಪದಮಧ್ಯವತ್ವಯತ್ವ- ।
ಕ್ಕೊದವುಗುಮೌತ್ವೈತ್ವವಿಧಿಯದಂತಕ್ಕೊತ್ವಂ ॥
ಪುದಿದಿರ್ಕುಂ ಹ್ರಸ್ವತೆಯಿಂ ।
ವಿದಿತವಿಕಲ್ಪಂತಗುಳ್ಗುವೀ ಮೂಱಱೊಳಂ. ॥ ೧೬೮ ॥

ಪದಚ್ಛೇದಂ. — ಪದಮಧ್ಯವತ್ವಯತ್ವಕ್ಕೆ ಒದವುಗುಂ ಔತ್ವೈತ್ವವಿಧಿ; ಅದಂತಕ್ಕೆ ಒತ್ವಂ ಪುದಿದು ಇರ್ಕುಂ ಹ್ರಸ್ವತೆಯಿಂ; ವಿದಿತವಿಕಲ್ಪಂ ತಗುಳ್ಗುಂ ಈ ಮೂಱಱೊಳಂ.

ಅನ್ವಯಂ. — ಪದಮಧ್ಯವತ್ವಯತ್ವಕ್ಕೆ ಔತ್ವೈತ್ವವಿಧಿ ಒದವುಗುಂ; ಅದಂತಕ್ಕೆ ಹ್ರಸ್ವತೆಯಿಂ ಒತ್ವಂ ಪುದಿದು ಇರ್ಕುಂ; ಈ ಮೂಱಱೊಳಂ ವಿದಿತವಿಕಲ್ಪಂ ತಗುಳ್ಗುಂ.

ಟೀಕು. — ಪದ = ಪದಂಗಳ; ಮಧ್ಯ = ನಡುವಣ; ವತ್ವಯತ್ವಕ್ಕೆ = ವಕಾರ ಯಕಾರಂಗಳ್ಗೆ; ಔತ್ವೈತ್ವವಿಧಿ = ಔಕಾರದ ಐಕಾರದ ವಿಧಿ; ಒದವುಗುಂ = ಪ್ರಾಪ್ತಿಸುವುದು; ಅದಂತಕ್ಕೆ = ಅಕಾರಾಂತಕ್ಕೆ; ಹ್ರಸ್ವತೆಯಿಂ = ಹ್ರಸ್ವತ್ವದಿಂದೆ; ಒತ್ವಂ = ಒಕಾರಂ; ಪುದಿದಿರ್ಕುಂ = ಪ್ರವೇಶವಾಗಿರ್ಪುದು; ಈ ಮೂಱಱೊಳಂ = ಈ ಮೂಱಱಲ್ಲಿಯುಂ; ವಿದಿತ = ಪ್ರಸಿದ್ಧವಾದ; ವಿಕಲ್ಪಂ = ವಿಕಲ್ಪಂ; ತಗುಳ್ಗುಂ = ಎಯ್ದುವುದು.

ವೃತ್ತಿ. — ಪದಮಧ್ಯವಕಾರ ಯಕಾರಂಗಳ್ಗೆ ಔಕಾರಮುಂ ಐಕಾರಮುಮಕ್ಕುಂ; ಪದಾಂತ್ಯದ ಅಕಾರಕ್ಕೆ ಹ್ರಸ್ವೋತ್ವಮಕ್ಕುಂ; ಇವಱೊಳ್ವಿಕಲ್ಪಮುಂಟು.

---

[1] ಯವಯೋರನಾದಿಸ್ಥಯೋರ್ಐ ಔ ಸ್ವರೇಣ ವಾ ॥ ಭಾ. ಭೂ. 123. ॥
(ಆದಿಯಲ್ಲದಿರುವ ಯಕಾರವಕಾರಗಳಿಗೆ ಸ್ವರದೊಂದಿಗೆ ಕ್ರಮವಾಗಿ ಐ ಔ ಎಂದಾಗುವುದು.)

ಕೆಲಬರುಪಾಂತ್ಯದಕಾರದ ।
ನೆಲೆಯೊಳೋಕಾರಂ ವಯದ್ವಯಕ್ಕೌದೈತ್ವಂ ॥
ಸಲೆ ಕೂಡೆ ಣಕಾರಂ ಕೇ- ।
ವಲಂ ನಕಾರಕ್ಕೆ ಣತ್ವಮಕ್ಕುಮದೆಂಬರ್ ॥ ಶ. ಸ್ಮೃ. 66. ॥

ಪ್ರಯೋಗಂ. — ಔಕಾರಕ್ಕೆ — ಕವುಂಗು, ಕೌಂಗು; ಕವುಂಕುಱಿ, ಕೌಂಕುಱಿ; ಅವುಂಕಿದಂ, ಔಂಕಿದಂ; ಅವುಂಡು, ಔಂಡು; ಕವುಂಡೆ, ಕೌಂಡೆ; ತವುಂಕಲ್, ತೌಂಕಲ್.

ಐಕಾರಕ್ಕೆ — ತೇರಯ್ಯಿಸಿದಂ, ತೇರೈಸಿದಂ; ಕೋರಯಿಸಿದಂ, ಕೋರೈಸಿದಂ; ತೆಲ್ಲಯಿಸಿದಂ, ತೆಲ್ಲೈಸಿದಂ; ಹೊಲ್ಲಯಿಸಿದಂ, ಹೊಲ್ಲೈಸಿದಂ; ಕಯ್ವಾರಂ, ಕೈವಾರಂ.

ಒತ್ವಕ್ಕೆ — ಆವೆಂ, ಆವೊಂ; ನುಡಿದಂ, ನುಡಿದೊಂ; ಪಾಡಿದಂ, ಪಾಡಿದೊಂ.

ಸೂತ್ರಂ[1]. || ೧೫೮ ||

In the course of a sentence or in compounds ನ preceded by ಣ್ may be changed into ಣ.

ಅಸಮಾಸದೊಳಂ ದೊರೆವೆ- |
ತ್ತ ಸಮಾಸದೊಳಂ ಣಕಾರದಿಂ ಪರದೊಳ್ಸಂ- ||
ದಿಸಿದ ನಕಾರಂ ಣತ್ವಂ |
ಪ್ರಸಿದ್ಧಮುಚ್ಚರಿಸುವರ್ಗೆ ದುಷ್ಕರಮದುವುಂ. || ೧೬೯ ||

ಪದಚ್ಛೇದಂ — ಅಸಮಾಸದೊಳಂ ದೊರೆವೆತ್ತ ಸಮಾಸದೊಳಂ ಣಕಾರದಿಂ ಪರದೊಳ್ ಸಂದಿಸಿದ ನಕಾರಂ ಣತ್ವಂ ಪ್ರಸಿದ್ಧಂ; ಉಚ್ಚರಿಸುವರ್ಗೆ ದುಷ್ಕರಂ ಅದುವುಂ.

ಅನ್ವಯಂ. — ಅದುವುಂ ಉಚ್ಚರಿಸುವರ್ಗೆ ದುಷ್ಕರಂ.

ಟೀಕು. — ಅಸಮಾಸದೊಳಂ = ಸಮಾಸವಲ್ಲದಲ್ಲಿಯುಂ; ದೊರೆವೆತ್ತ = ಪ್ರಸಿದ್ಧಿವಡೆದ; ಸಮಾಸದೊಳಂ = ಸಮಾಸದಲ್ಲಿಯುಂ; ಣಕಾರದಿಂ = ಣತ್ವದಿಂದೆ; ಪರದೊಳ್ = ಪರದಲ್ಲಿ; ಸಂದಿಸಿದ ನಕಾರಂ = ಸಂದಿಸಿದ ನತ್ವಂ; ಣತ್ವಂ = ಣಕಾರವಪ್ಪುದು; ಪ್ರಸಿದ್ಧಂ = ಪ್ರಸಿದ್ಧಂ; ಅದುವುಂ = ಆ ಪ್ರಯೋಗವುಂ; ಉಚ್ಚರಿಸುವರ್ಗೆ = ಓದುವರ್ಗೆ; ದುಷ್ಕರಂ = ದುಷ್ಕರಮಾಗಿ ರ್ಪುದು.

ವೃತ್ತಿ. — ಭಿನ್ನಪದದೊಳಂ ಸಮಾಸಪದದೊಳಂ ಣಕಾರಕ್ಕೆ ಪರಮಾದ ನಕಾರಂ ಣಕಾರಮನೆಯ್ದುಗುಂ; ಪ್ರಯೋಗಮುಂಟಾದೊಡಮಾಯುಚ್ಚಾರಣಂ ಸುಭಗಮಿಲ್ಲ.

[1] ಣೋಃ ನಸ್ಯ ಣೇನ. || ಧಾ. ಭೂ. 114. ||
(ಣಕಾರದೋಂದಿಗೆ ಕೂಡಿದ ನಕಾರಕ್ಕೆ ಣಕಾರ ಬರುವುದು.)
(ಶ. ಸ್ಮೃ. 66ನೆಯ ಸೂತ್ರ 223ನೆಯ ಪುಟ ನೋಡಿರಿ.)

ಪ್ರಯೋಗಂ.—ಭಿನ್ನಪದಕ್ಕೆ—ಕಣ್ ನೊಂದಪುದು, ಕಣ್ಣೊಂದಪುದು; ಪುಣ್ ನಾಳಿವೋದಪುದು, ಪುಣ್ಣಾಳಿವೋದಪುದು; ಜಾಣ್ ನೆರೆದಪುದು, ಜಾಣ್ಣೆರೆದಪುದು.

ಸಮಾಸಕ್ಕೆ—ತಣ್+ನೆಳಲ್, ತಣ್ಣೆಳಲ್; ಕಣ್+ನೀರ್, ಕಣ್ಣೀರ್; ಕಣ್+ನೋಟಂ, ಕಣ್ಣೋಟಂ.

ಸೂತ್ರಂ[1]. || ೧೫೯ ||

The single ಪ of pure Kannada words (ದೇಶಿ) is often changed into ಹ.

ಸಂದ ಪಕಾರಕ್ಕೆ ಹಕಾ- |
ರಂ ದೊರೆಕೊಳ್ಗುಂ ವಿಕಲ್ಪದಿಂ ಸಂಯೋಗಂ ||
ಸಂದಿಸಿದೊಡೆ ದುಷ್ಕರಮದು |
ಸುಂದರಮಾ ದೇಶಿಯಿಂದಮೆಂಬರ್ವಿಬುಧರ್. ||೧೭೦||

ಪದಚ್ಛೇದಂ.—ಸಂದ ಪಕಾರಕ್ಕೆ ಹಕಾರಂ ದೊರೆಕೊಳ್ಗುಂ ವಿಕಲ್ಪದಿಂ; ಸಂಯೋಗಂ ಸಂದಿಸಿದೊಡೆ ದುಷ್ಕರಂ ಅದು, ಸುಂದರಂ ಆ ದೇಶಿಯಿಂದಂ ಎಂಬರ್ ವಿಬುಧರ್.

ಅನ್ವಯಂ.—ಸಂದ ಪಕಾರಕ್ಕೆ ಹಕಾರಂ ವಿಕಲ್ಪದಿಂ ದೊರೆಕೊಳ್ಗುಂ; ಸಂಯೋಗಂ ಸಂದಿಸಿದೊಡೆ ಅದು ದುಷ್ಕರಂ, ಆ ದೇಶಿಯಿಂದಂ ಸುಂದರಂ ವಿಬುಧರ್ ಎಂಬರ್.

ಟೀಕು.—ಸಂದ ಪಕಾರಕ್ಕೆ = ಕನ್ನಡದಲ್ಲಿ ಸಂದ ಪತ್ವಕ್ಕೆ; ಹಕಾರಂ = ಹತ್ವಂ; ವಿಕಲ್ಪದಿಂ = ವಿಕಲ್ಪದಿಂದೆ; ದೊರೆಕೊಳ್ಗುಂ = ಪ್ರಾಪ್ತಿಸುವುದು; ಸಂಯೋಗಂ = ದ್ವಿತ್ವಾಕ್ಷರಂ; ಸಂದಿಸಿದೊಡೆ = ಬಂದೊಡೆ; ಅದು = ಅದು; ದುಷ್ಕರಂ = ಮಾಡಬಾರದು; ಆ ದೇಶಿಯಿಂದಂ = ಪ್ರಸಿದ್ಧವಾದ ದೇಶೀಯ ಭಾಷೆಯಿಂದಂ; ಸುಂದರಂ = ಸೌಂದರ್ಯವೆಂದು; ವಿಬುಧರ್ = ವಿದ್ವಾಂಸರ್; ಎಂಬರ್ = ಪೇಳ್ವರ್.

ವೃತ್ತಿ.—ಕರ್ಣಾಟಕಶಬ್ದದ ಪಕಾರಕ್ಕೆ ವಿಕಲ್ಪದಿಂ ಹಕಾರಮಕ್ಕುಂ; ದ್ವಿತ್ವದೊಳ್ಪಿರಿದುಂ ಪಕಾರಕ್ಕೆ ಹಕಾರಮಿಲ್ಲ.

ಪ್ರಯೋಗಂ.—ಹಕಾರಕ್ಕೆ—ಪಲಗೆ, ಹಲಗೆ; ಪಂದರ್, ಹಂದರ್; ಪಾಸು, ಹಾಸು; ಪಂದಿ, ಹಂದಿ; ಪುಲಿ, ಹುಲಿ; ಪಲಸು, ಹಲಸು; ಇದು ದೇಶಿಯೊಳ್ ಚೆಲ್ವು.

[1] ಪೇ ಹೋ ವಾ. || ಭಾ. ಭೂ. 114. ||
(ಪಕಾರಕ್ಕೆ ವಿಕಲ್ಪದಿಂದ ಹಕಾರವುಂಟು).

ದ್ವಿತ್ವಕ್ಕಿಲ್ಲದುದರ್ಕೆ—ತಪ್ಪು; ಸೊಪ್ಪು; ಮುಪ್ಪು; ಹೆಪ್ಪು; ಟೆಪ್ಪರಂ; ಉಪ್ಪರಂ; ಟಿಪ್ಪಣಂ; ಮುಪ್ಪುರಿ; ಬಿಪ್ಪಂಡಂ; ಕಪ್ಪುರಮೆಂಬಂತೆ.

ಸೂತ್ರಂ. ॥ ೧೭೦ ॥

But also a double ಪ is changed into (a single) ಹ in ಅಂತಪ್ಪಂ, ಇಂತಪ್ಪಂ, ಉಂತಪ್ಪಂ, ಎಂತಪ್ಪಂ, when they are thought to stand before the Particle ಗಡ, which, besides, take the forms: ಅಂನಂ, ಇಂನಂ, ಉಂನಂ, ಎಂನಂ.

ಅಂತಹನಿಂತಹನುಂತಹ- ।
ನೆಂತಹನೆಂದಿಂತು ಪದ್ವಿರುಕ್ತಿಗೆ ಹತ್ವಂ ॥
ಭ್ರಾಂತೆಂ ಗಡಾರ್ಥದೊಳ್ಮೇ- ।
ಣಂತವಱೆಡೆಗಂನನಿಂನನುಂನಮುಮೆಂನಂ. ॥ ೧೭೧ ॥

ಪದಚ್ಛೇದಂ.—ಅಂತಹಂ ಇಂತಹಂ ಉಂತಹಂ ಎಂತಹಂ ಎಂದು, ಇಂತು ಪದ್ವಿರುಕ್ತಿಗೆ ಹತ್ವಂ, ಭ್ರಾಂತೆಂ, ಗಡಾರ್ಥದೊಳ್; ಮೇಣ್ ಅಂತು ಅವಱ ಎಡೆಗೆ ಅಂನಂ ಇಂನಂ ಉಂನಮುಂ ಎಂನಂ.

ಅನ್ವಯಂ.—ಪದ್ವಿರುಕ್ತಿಗೆ ಅಂತಹಂ ಇಂತಹಂ ಉಂತಹಂ ಎಂತಹಂ ಎಂದು, ಇಂತು ಹತ್ವಂ. ಉಳಿದುದು ಯಥಾನ್ವಯಂ.

ಟೀಕು.—ಪದ್ವಿರುಕ್ತಿಗೆ = ಅಂತಪ್ಪನಿಂತಪ್ಪನುಂತಪ್ಪನೆಂತಪ್ಪನೆಂಬ ಪಕಾರದ ದ್ವಿರ್ಭಾವಕ್ಕೆ; ಅಂತಹಂ = ಅಂತಹನೆಂದು; ಇಂತಹಂ = ಇಂತಹನೆಂದು; ಉಂತಹಂ = ಉಂತಹನೆಂದು; ಎಂತಹಂ = ಎಂತಹನೆಂದು; ಇಂತು = ಹೀಗೆ; ಹತ್ವಂ = ಹಕಾರಮಪ್ಪುದು; ಭ್ರಾಂತೆಂ = ಭ್ರಮೆಯೆಂ; ಗಡಾರ್ಥದೊಳ್ = ಗಡಶಬ್ದದರ್ಥದಲ್ಲಿ; ಮೇಣ್ = ವಿಕಲ್ಪದಿಂದೆ; ಅಂತು = ಹಾಗೆ; ಅವಱ = ಅಂತಹಂ ಗಡ, ಇಂತಹಂ ಗಡ, ಉಂತಹಂ ಗಡ, ಎಂತಹಂ ಗಡ ಎಂಬಾ ಶಬ್ದಂಗಳ; ಎಡೆಗೆ = ಸ್ಥಾನಕ್ಕೆ; ಅಂನಂ = ಅಂನಂ ಎಂದು; ಇಂನಂ = ಇಂನಂ ಎಂದು; ಉಂನಮುಂ = ಉಂನಂ ಎಂದುಂ; ಎಂನಂ = ಎಂನಂ ಎಂದು, ಆಗುವುದು.

ವೃತ್ತಿ.—ಪ್ರಕಾರಕಾಲಾರ್ಥದ ಗಡಶಬ್ದಮಪ್ಪಲ್ಲಿ ಅಂತಪ್ಪಂ ಇಂತಪ್ಪಂ ಉಂತಪ್ಪಂ ಎಂತಪ್ಪಂ ಎಂಬಿವರ್ಕೆ ಹಕಾರಮಕ್ಕುಂ; ಮೇಣೆಂಬುದಱಿಂದವರ್ಕೆ ಅಂನಂ ಇಂನಂ ಉಂನಂ ಎಂನಂ ಎಂದುಮಕ್ಕುಂ.

ಪ್ರಯೋಗಂ. — ಅಂತಪ್ಪಂ ಮೊದಲಾದುವಱ ಹಕಾರಕ್ಕೆ—ಅಂತಹಂ, ಇಂತಹಂ, ಉಂತಹಂ, ಎಂತಹಂ.

ಅಂನಮಾದಿವಿಕಲ್ಪಕ್ಕೆ—

"ಸಿಡಿಲನ್ನಂ ಸಿಂಗದನ್ನಂ ಪುರಹರನುರಿಗಣ್ಣನ್ನನೀ ನಾರಸಿಂಹಂ" || 367 ||

"ಮನಸಿಜನೆನ್ನನಿನ್ನನರುಣಪ್ರಿಯನಂದನನೆನ್ನನಿನ್ನನಾ |
ದಿನಕರನೆನ್ನನಿನ್ನಂ . . . ." || 368 ||

ಸೂತ್ರಂ[1]. || ೧೬೧ ||

Final ಮ್ and ನ್ are usually changed into the Bindu; but they may also be changed into the Nasal of the class to which a following consonant belongs.

ಮನಕಾರದ ಪರದೊಳ್ವ್ಯಂ- |
ಜನಮಿರ್ದೊಡಮಿಲ್ಲದೊಡಮನುಸ್ವಾರಂ ಸಂ- ||
ಜನಿಯಿಪುದು| ವರ್ಗಮಿದಿರಿರೆ |
ತನಗೆ ವಿಕಲ್ಪದೆ ತದೀಯಪಂಚಮಮಕ್ಕುಂ| || ೧೬೧ ||

ಪದಚ್ಛೇದಂ. — ಮನಕಾರದ ಪರದೊಳ್ ವ್ಯಂಜನಂ ಇರ್ದೊಡಂ ಇಲ್ಲದೊಡಂ ಅನುಸ್ವಾರಂ ಸಂಜನಿಯಿಪುದು; ವರ್ಗಂ ಇದಿರ್ ಇರೆ ತನಗೆ ವಿಕಲ್ಪದೆ ತದೀಯಪಂಚಮಂ ಅಕ್ಕುಂ.

ಅನ್ವಯಂ. — ತನಗೆ ವರ್ಗಂ ಇದಿರಿರೆ, ತದೀಯಪಂಚಮಂ ಅಕ್ಕುಂ ಎಂಬುದನ್ವಯಂ.

ಟೀಕು. — ಮನಕಾರದ = ಮಕಾರ ನಕಾರಂಗಳ; ಪರದೊಳ್ = ಮುಂದೆ; ವ್ಯಂಜನಂ = ವ್ಯಂಜನಾಕ್ಷರಂ; ಇರ್ದೊಡಂ = ಇರ್ದೊಡೆಯುಂ; ಇಲ್ಲದೊಡಂ = ಇಲ್ಲದಿರ್ದೊಡಂ; ಅನು

---

[1] ಮನಯೋರ್ಬಿನ್ದುಃ || ಭಾ. ಭೂ. 112. ||
(ಮಕಾರನಕಾರಗಳಿಗೆ ಬಿಂದುವಾಗುವುದು.)
ವರ್ಗೇ ತದ್ವರ್ಗಾನ್ತ್ಯಃ || ಭಾ. ಭೂ. 113. ||
(ಆ ಮಕಾರನಕಾರಗಳಿಗೆ ವರ್ಗಾಕ್ಷರವು ಪರವಾದರೆ ಆ ವರ್ಗದ ಪಂಚಮಾಕ್ಷರವು ಬರುವುದು.)

ಅನುಸಂಧಿಸಿ ಕೃತ್ಸ್ನವ್ಯಂ- |
ಜನಂಗಳಿರೆ ಮುಂದೆ ಬಿಂದು ಪರಿವರ್ತಿಸುಗುಂ ||
ಮನದೊಳ್ ವರ್ಗಂ ಪರಮಾ- |
ಗಿ ನಿಲೆ ವಿಕಲ್ಪದೆ ತದೀಯ ಪಂಚಮಮಕ್ಕುಂ || ಶ. ಸ್ಮೃ. 44. ||

ಸ್ವಾರಂ = ಸೊನ್ನೆ; ಸಂಜನಿಯಿಪುದು = ಹುಟ್ಟುವುದು; ತನಗೆ = ಆ ಸೊನ್ನೆಯಾದ ತನಗೆ; ವರ್ಗಂ = ವರ್ಗಾಕ್ಷರಂ; ಇದಿರಿರೆ = ಇದಿರಲ್ಲಿರೆ; ವಿಕಲ್ಪದೆ = ವಿಕಲ್ಪದಿಂದೆ; ತದೀಯಪಂಚಮಂ = ಆ ವರ್ಗದೈದನೆಯಕ್ಷರಂ; ಅಕ್ಕುಂ = ಅಪ್ಪುದು.

ವೃತ್ತಿ. — ಮನಕಾರಂಗಳ್ಗೆ ಪರಮಾಗಿ ವ್ಯಂಜನಮಿರ್ದೊಡಮಿಲ್ಲದೊಡಂ ಬಿಂದುವಕ್ಕುಂ. ಆ ಬಿಂದುವಿಂಗಿದಿರಾಗಿ ವರ್ಗಮಿರೆ ವಿಕಲ್ಪದಿನಾ ವರ್ಗದ ಪಂಚಮಮಕ್ಕುಂ.

ಪ್ರಯೋಗಂ. — ಮಕಾರಕ್ಕೆ — ನೀಮ್ ಯೋಗ್ಯರ್, ನೀಂ ಯೋಗ್ಯರ್; ಆಮ್ ಸುಖಿಗಳ್, ಆಂ ಸುಖಿಗಳ್; ತಾಮ್ ಸೇವ್ಯರ್, ತಾಂ ಸೇವ್ಯರ್.

ನಕಾರಕ್ಕೆ — ಆನ್ ವಾದಿ, ಆಂ ವಾದಿ; ನೀನ್ ಶುಚಿ, ನೀಂ ಶುಚಿ; ತಾನ್ ಸುಜನಂ, ತಾಂ ಸುಜನಂ.

ಪರವ್ಯಂಜನಶೂನ್ಯಕ್ಕೆ — ನೀನ್, ಆನ್, ತಾನ್; ನೀಮ್, ಆಮ್, ತಾಮ್; ನೀಂ, ಆಂ, ತಾಂ.

ವರ್ಗಪಂಚಮಕ್ಕೆ — ಅವಙ್ಕಡುಗಲಿ, ಅವಂ ಕಡುಗಲಿ; ಅವಞ್ಚಲವಾದಿ, ಅವಂ ಚಲವಾದಿ; ಕರಣ್ಟಕ್ಕಂ, ಕರಂ ಟಕ್ಕಂ; ಕೆನ್ದಳಿರ್, ಕೆಂದಳಿರ್; ಕೆಮ್ಮಣ್, ಕೆಂಮಣ್; ಹೊಮ್ಬಣ್ಣಂ, ಹೊಂಬಣ್ಣಂ; ಪೊಮ್ಮದಿರ್, ಪೊಂಮದಿರ್.

ಗದ್ಯಂ. — ಇದು ಸಮಸ್ತಶಾಬ್ದಿಕಜನಮನೋಜನಿತಶಬ್ದಸಂದೇಹಶಲ್ಯಚಾರುಚುಂಬಕಾಯಮಾನಾನೂನಕರ್ಣಾಟಕಲಕ್ಷಣಶಿಕ್ಷಾಚಾರ್ಯಸುಕವಿಕೇಶಿರಾಜವಿರಚಿತಮಪ್ಪ ಶಬ್ದಮಣಿದರ್ಪಣದೊಳ್ ನಾಮನಿಯಾಮಲಕ್ಷಣಮೆಂಬ ದ್ವಿತೀಯಸಂಧಿ ಸಂಪೂರ್ಣಂ.

೨ನೆಯ ಅಧ್ಯಾಯಂ ಸಮಾಪ್ತಂ.

೩ನೆಯ ಅಧ್ಯಾಯಂ. III. CHAPTER.

ಸಮಾಸಪ್ರಕರಣಂ.

ON COMPOUNDS.

❋ ಸೂತ್ರಂ[1]. || ೧೬೨ ||

Regarding Compounds (ಸಮಾಸಂ) it is first to be stated that Nouns with Suffixes, when forming the first word, drop their Suffixes.

ಕಱು ತಾಯ ಬೞಿಯನುೞಿಯದ |
ತೆಱದಿಂದಂ ನಾಮಪದಮದರ್ಥಾನುಗಮಾ- ||
ಗೆಱಗೆ ಸಮಾಸಂ ನೆಗೞ್ಗುಂ |
ನೆಱೆ ಪೋಕುಂ ಮಧ್ಯಗತವಿಭಕ್ತಿಗಳವಱೊಳ್. ||
|| ೧೬೩ ||

ಪದಚ್ಛೇದಂ.—ಕಱು ತಾಯ ಬೞಿಯುಂ ಉೞಿಯದ ತೆಱದಿಂದಂ ನಾಮಪದಂ ಅದು ಅರ್ಥಾನುಗಂ ಆಗಿ ಎಱಗೆ, ಸಮಾಸಂ ನೆಗೞ್ಗುಂ; ನೆಱೆ ಪೋಕುಂ ಮಧ್ಯಗತವಿಭಕ್ತಿಗಳ್ ಅವಱೊಳ್.

ಅನ್ವಯಂ.—ಅವಱೊಳ್ ಮಧ್ಯಗತವಿಭಕ್ತಿಗಳ್ ನೆಱೆ ಪೋಕುಂ ಎಂಬುದನ್ವಯಂ.

ಟೀಕು.—ಕಱು = ಕರು; ತಾಯ ಬೞಿಯಂ = ತಾಯ ಬೆಂಬಳಿಯಂ; ಉೞಿಯದ ತೆಱದಿಂದಂ = ಬಿಡದ ರೀತಿಯಿಂದೆ; ನಾಮಪದಂ = ನಾಮಪದಂ; ಅದು = ಅದು; ಅರ್ಥಾ

[1] ನಾಮ್ನಾಂ ಸಮಾಸಃ ಸಂಗತಾರ್ಥಃ || ಭಾ. ಭೂ. 124. ||
(ನಾಮಪದಗಳನ್ನು ಕೂಡಿ ನುಡಿವ ಅರ್ಥವೇ ಸಮಾಸ.)
ತತ್ರಾಂತರ್ವರ್ತಿನ್ಯೋ ವಿಭಕ್ತಯೋ ಲೋಪ್ಯಾಃ || ಭಾ. ಭೂ. 125. ||
(ಆ ಸಮಾಸಗಳಲ್ಲಿ ನಡುವಣ ವಿಭಕ್ತಿಪ್ರತ್ಯಯಗಳು ಲೋಪವಾಗುವುವು.)

ಸಂಗತಿಯಿಂದಂ ನಾಮಪ- |
ದಂಗಳವೇಕಾರ್ಥಗತಿಯೊಳಾಗೆ ಸಮಾಸಂ ||
ಸಂಗಳಿಸುಗುಂ ವಿಭಕ್ತಿಗ- |
ಳಂಗಳ್ಗಂತರದೊಳಲ್ಲಿ ಲೋಪಮದಕ್ಕುಂ. || ಶ. ಸ್ಮೃ. 45. ||

ನುಗಂ = ಅರ್ಥದ ಬೆಂಬಳಿವಿಡಿದೆಯ್ದುವುದು; ಆಗಿ = ಆಗಿ; ಎಱಗೆ = ಪೊರ್ದುಗೆಯಾಗೆ; ಸಮಾಸಂ = ಸಮಾಸಪದಂ; ನೆಗೞ್ಗುಂ = ಪ್ರಸಿದ್ಧಿವಡೆವುದು; ಅವಱೊಳ್ = ಆ ಸಮಾಸಂಗಳಲ್ಲಿ; ಮಧ್ಯಗತವಿಭಕ್ತಿಗಳ್ = ನಡುವಿರ್ದ ಪ್ರತ್ಯಯಂಗಳ್; ನೆಱೆ = ಚೆನ್ನಾಗಿ; ಪೋಕುಂ = ಲೋಪವಾಗಿ ಹೋಗುವುವು.

ವೃತ್ತಿ. — ತಾಯ ಬೞಿಯ ಕಱುವಿನಂತೆ ನಾಮಪದಂಗಳರ್ಥಾನುಗತಂಗಳಾಗೆ, ಸಮಾಸಂ ಘಟಿಸುಗುಂ; ಅಂತರಾಳದೊಳಿರ್ದ ವಿಭಕ್ತಿಯೆಲ್ಲಂ ಪೋಕುಂ.

ಪ್ರಯೋಗಂ. — ತೊಱೆಯ ಮಾವು = ತೊಱೆಮಾವು; ತೊಡೆಯ ಸೆಕ್ಕೆ = ತೊಡೆಸೆಕ್ಕೆ; ಎಡೆಯ ನುಡಿ = ಎಡೆನುಡಿ; ನೀರಂ ಕುಡಿದಂ = ನೀರ್ಗುಡಿದಂ; ಮರನಂ ಪಾಯ್ದಂ = ಮರವಾಯ್ದಂ; ಪುಯಲ್ಗೆ ಪೋದಂ = ಪುಯಲ್ವೋದಂ; ಮೆಲ್ಲಿತ್ತು ಅಡಿ = ಮೆಲ್ಲಡಿ.

ಸೂತ್ರಂ. || ೧೬೩ ||

Definition of Augment (ಆಗಮಂ) and Substitute (ಆದೇಶಂ). In Compounds the Augment together with the Suffixes (ವಿಭಕ್ತಿ) suffers elision; a Substitute is supplied.

ಇರ್ದುದನಱಿಯದೆ ನಯದಿಂ |
ಪೊರ್ದುವುವಾಗಮವವೆಯ್ದೆ ಪೋಪುವು ಲೋಪಂ ||
ಬೊರ್ದೆ ವಿಭಕ್ತಿಯ ಬೞಿವಿಡಿ- |
ದಿರ್ದುದನಱಿದಿರ್ಪುದರಿಯ ಪೋಲಾದೇಶಂ. || ೧೬೪ ||

ಪದಚ್ಛೇದಂ. — ಇರ್ದುದಂ ಅಱಿಯದೆ ನಯದಿಂ ಪೊರ್ದುವುವು ಆಗಮಂ; ಅವು ಎಯ್ದೆ ಪೋಪುವು ಲೋಪಂ ಬೊರ್ದೆ, ವಿಭಕ್ತಿಯ ಬೞಿವಿಡಿದು, ಇರ್ದುದಂ ಅಱಿದು ಇರ್ಪುದು ಅರಿಯ ಪೋಲ್ ಆದೇಶಂ.

ಅನ್ವಯಂ. — ಇರ್ದುದಂ ಅಱಿಯದೆ ನಯದಿಂ ಪೊರ್ದುವುವು ಆಗಮಂ; ಅವು ಎಯ್ದೆ, ವಿಭಕ್ತಿಯ ಬೞಿವಿಡಿದು, ಲೋಪಂಬೊರ್ದೆ ಪೋಪುವು. ಇರ್ದುದಂ ಅಱಿದು ಇರ್ಪುದು ಅರಿಯ ಪೋಲ್ ಆದೇಶಂ.

ಟೀಕು. — ಇರ್ದುದಂ = ಶಬ್ದಂಗಳಲ್ಲಿರ್ದುದಂ; ಅಱಿಯದೆ = ಲೋಪವಂ ಮಾಡದೆ; ನಯದಿಂ = ಹಿತದಿಂದೆ; ಪೊರ್ದುವುವು = ಪೊರ್ದುಗೆಯಾಗುವುವು; ಆಗಮಂ = ಆಗಮವೆನಿಸುವುವು; ಅವು = ಆ ಆಗಮಂಗಳ್; ಎಯ್ದೆ = ಚೆನ್ನಾಗಿ; ವಿಭಕ್ತಿಯ ಬೞಿವಿಡಿದು = ವಿಭಕ್ತಿಗಳ

ಬೆಂಬಳಿವಿಡಿದು; ಲೋಪಂಬೊರ್ದಿ = ಲೋಪವಂ ಪೊರ್ದಿ; ಪೋಪುವು = ಹೋಗುವುವು; ಇರ್ದು ದಂ = ಮೊದಲಿರ್ದುದಂ; ಅದಿ'ದು = ಲೋಪಿಸಿ; ಇರ್ಪುದು = ಇರ್ಪುದು; ಅರಿಯ ವೋಲ್ = ಹಗೆಯ ಹಾಗೆ; ಆದೇಶಂ = ಆದೇಶವೆನಿಸುವುದು.

ವೃತ್ತಿ.— ಇರ್ದುದಂ ಕೆಡಿಸದೆ ಪತ್ತುವುವಾಗಮಂ; ಅವು ವಿಭಕ್ತಿಯೊಡನೆ ಲೋಪಮಪ್ಪುವು. ಪಗೆಯಂತಿರ್ಪುದಂ ಕೆಡಿಸಿ ಬರ್ಪುದಾದೇಶಂ.

ಪ್ರಯೋಗಂ.— ಆಗಮಕ್ಕೆ— ಮಾತಿನ (=ಮಾತು+ಇನ್+ಅ) ಬಲ್ಲಹಂ; ನೂಱಱ ಪತ್ತು; ತೆಂಕಣ ವಂಕಂ.

ಆಗಮವಿಭಕ್ತಿಗಳ ಲೋಪಕ್ಕೆ—ಮಾತುವಲ್ಲಹಂ; ನೂಱುಪತ್ತು; ತೆಂಕ ವಂಕಂ.

"ತೆಂಕವಂಕದೊಳಸಂಖ್ಯ ಬಲಂ. . . . . " || 369 ||

ಆದೇಶಕ್ಕೆ— ಕಿಱುಕೊಂಬು; ಒರ್ಮೊದಲ್; ಇರ್ಮೆಯ್; ಕುತ್ತಡಿ.

"ಕುತ್ತಡಿ ಸಿಲ್ಕುತ್ತಿರ್ಕೆ. . . . . ." || 370 ||

ಸೂತ್ರಂ[1]. || ೧೬೪ ||

First 3 Samskrita Compounds: ತತ್ಪ

ಪರಪದದೊಳರ್ಥವರ್ತನ- |
ಮಿರೆ ತತ್ಪುರುಷಂ ಸಮಂತದೇಕಾಶ್ರಯಮಾ- ||

---

1) ಉತ್ತರ ಪದಾರ್ಥ ವೃತ್ತಿಸ್ತತ್ಪುರುಷಃ || ಭಾ. ಭೂ. 126. ||
(ಮುಂದಣ ಪದದಲ್ಲಿ ಅರ್ಥವಿದ್ದರೆ ತತ್ಪುರುಷಸಮಾಸಂ.)
ಸ ಏವೈಕಾಶ್ರಯಃ ಕರ್ಮಧಾರಯಃ || ಭಾ. ಭೂ. 127. ||
(ಆ ತತ್ಪುರುಷ ಸಮಾಸವು ಏಕಾಶ್ರಯವಾದರೆ ಕರ್ಮಧಾರಯವೆನಿಸುವುದು.)
ಸಂಖ್ಯಾದಿಶ್ಚೇತ್ ದ್ವಿಗುಃ || ಭಾ. ಭೂ. 128. ||
(ಕರ್ಮಧಾರಯದಲ್ಲಿ ಸಂಖ್ಯಾಪದವು ಮೊದಲಲ್ಲಿದ್ದರೆ ದ್ವಿಗುಸಮಾಸವಾಗುವುದು.)

ಉತ್ತರ ಪದದರ್ಥಂ ಮೆ |
ವೆತ್ತಿರೆ ತತ್ಪುರುಷಮಂತದೇಕಾಶ್ರಯಮಾ- ||
ಗುತ್ತುಮಿರೆ ಕರ್ಮಧಾರಯ |
ಮೆತ್ತಂ ದ್ವಿಗುಸಂಜ್ಞಮದುವೆ ಸಂಖ್ಯಾಪಿಪದಂ || ಶ. ಸ್ಮೃ. 46. ||

ರುಷಂ, ಕರ್ಮಧಾರಯಂ, ದ್ವಿಗು. ಗಿರೆ ಕರ್ಮಧಾರಯಂ ನೆಲ- |
ಸಿರೆ ಮೊದಲೊಳ್ಸಂಖ್ಯೆಯದೆ ವಲಂ ದ್ವಿಗುವಕ್ಕುಂ. || ೧೭೫ ||

ಪದಚ್ಛೇದಂ.—ಪರಪದದೊಳ್ ಅರ್ಥವರ್ತನಂ ಇರೆ, ತತ್ಪುರುಷಂ; ಸಮಂತು ಅದು ಏಕಾಶ್ರಯಂ ಆಗಿ ಇರೆ, ಕರ್ಮಧಾರಯಂ; ನೆಲಸಿ ಇರೆ ಮೊದಲೊಳ್ ಸಂಖ್ಯೆ, ಅದೆ ವಲಂ ದ್ವಿಗು ಅಕ್ಕುಂ.

ಅನ್ವಯಂ.—ಮೊದಲೊಳ್ ಸಂಖ್ಯೆ ನೆಲಸಿ ಇರೆ, ಅದೆ ವಲಂ ದ್ವಿಗು ಅಕ್ಕುಂ ಎಂಬುದನ್ವಯಂ.

ಟೀಕು.—ಪರಪದದೊಳ್ = ಮುಂದಣ ಪದದಲ್ಲಿ; ಅರ್ಥವರ್ತನಂ = ಅರ್ಥದ ವರ್ತನೆ; ಇರೆ = ಇರೆ; ತತ್ಪುರುಷಂ = ತತ್ಪುರುಷಸಮಾಸಂ ಅಪ್ಪುದು; ಸಮಂತು = ಹಾಗೆ; ಅದು = ಆ ಸಮಾಸಂ; ಏಕಾಶ್ರಯಂ = ಅನ್ಯೋನ್ಯಾಶ್ರಯಂ; ಆಗಿ = ಆಗಿ; ಇರೆ = ಇರೆ; ಕರ್ಮಧಾರಯಂ = ಕರ್ಮಧಾರಯಸಮಾಸಂ ಅಪ್ಪುದು; ಮೊದಲೊಳ್ = ಮೊದಲ ಪದದಲ್ಲಿ; ಸಂಖ್ಯೆ = ಸಂಖ್ಯಾವಾಚಿಗಳ್; ನೆಲಸಿರೆ = ನೆಲೆಗೊಂಡಿರೆ; ಅದೆ = ಅದು ತಾನೆ; ವಲಂ = ನಿಶ್ಚಯವಾಗಿ; ದ್ವಿಗು = ದ್ವಿಗುಸಮಾಸಂ; ಅಕ್ಕುಂ = ಅಪ್ಪುದು.

ವೃತ್ತಿ.—ಮುಂದಣ ಪದದೊಳರ್ಥಂ ಪ್ರವರ್ತಿಸೆ, ತತ್ಪುರುಷಸಮಾಸಂ; ಆ ತತ್ಪುರುಷಮೇಕಾಶ್ರಯಮಾಗೆ, ಕರ್ಮಧಾರಯಮಕ್ಕುಂ; ಅದು ಸಂಖ್ಯಾಪೂರ್ವಕಮಾಗೆ, ದ್ವಿಗುವಕ್ಕುಂ.

ಪ್ರಯೋಗಂ.—ತತ್ಪುರುಷಕ್ಕೆ—ಮಲ್ಲಿಗೆನನೆ; ಮಾಣಿಕಗೆಂಪು; ಅಲರ್ವಕ್ಕೆ; ಕನ್ನಡವಕ್ಕಿ; ಕಡೆಸೆಜಿಂಗು; ಉಡೆನೂಲ್.

ಕರ್ಮಧಾರಯಕ್ಕೆ—ತೆಳ್ಗದಂಪು; ಒಳ್ಗನ್ನಡಂ; ಮೆಲ್ನುಡಿ; ಬಲ್ಮುಗುಳ್; ಕಿಱುಗೂಸು.

"ಕಿಱುಗೂಸಾಗಿಯುಪಾಯಮಮ್ಮಱಿದನೆ . . . ." || 371 ||

ದ್ವಿಗುವಿಂಗೆ—ಎರೞಿಮ್ಮಾತು, ಎರಟ್ತಿರಂ; ಇರ್ಪಾಳ್, ಇರ್ಪೆಂಡಿರ್; ಮೂವಾಳ್.

"ಇರ್ಪಾಳ್ ಮೂವಾಳಿಕ್ಕಿರ್ದುರ್ವರೆಯೊಳ್ . . . ." || 372 ||

ಸೂತ್ರಂ[1]. || ೧೬೫ ||

The other 3 Samskṛita Compounds; ಬಹುವ್ರೀಹಿ, ದ್ವಂದ್ವಂ, ಅವ್ಯಯೀಭಾವಂ.

ಪದನೆರಡುಂ ಮೇಣ್ಪಲವುಂ |
ಪದಾರ್ಥಮಂ ಬಯಸುತಿರೆ ಬಹುವ್ರೀಹಿ ಪದಾ- ||
ರ್ಥದ ಗಡಣಂ ದ್ವಂದ್ವಮೆನಿ- |
ಪ್ಪುದವ್ಯಯೀಭಾವಮಾದಿಪದಮುಖ್ಯತೆಯಿಂ. || ೧೨೬ ||

ಪದಚ್ಛೇದಂ.— ಪದಂ ಎರಡುಂ ಮೇಣ್ ಪಲವುಂ ಪದಾರ್ಥಮಂ ಬಯಸುತೆ ಇರೆ, ಬಹುವ್ರೀಹಿ; ಪದಾರ್ಥದ ಗಡಣಂ ದ್ವಂದ್ವಂ ಎನಿಪ್ಪುದು; ಅವ್ಯಯೀಭಾವಂ ಆದಿಪದ ಮುಖ್ಯತೆಯಿಂ.

ಅನ್ವಯಂ.— ಆದಿಪದಮುಖ್ಯತೆಯಿಂ ಅವ್ಯಯೀಭಾವಂ ಎಂಬುದನ್ವಯಂ.

ಟೀಕು.— ಪದನೆರಡುಂ = ಎರಡು ಪದಂಗಳುಂ; ಮೇಣ್ = ಅದಲ್ಲದೆ; ಪಲವುಂ = ಪಲವಾದ ಪದಂಗಳುಂ; ಪದಾರ್ಥಮಂ = ಮತ್ತೊಂದನ್ಯಪದಾರ್ಥವಂ; ಬಯಸುತೆ; = ಬಯಸುತೆ; ಇರೆ = ಇರೆ; ಬಹುವ್ರೀಹಿ = ಬಹುವ್ರೀಹಿಸಮಾಸಂ ಎನಿಸುವುದು; ಪದಾರ್ಥದ = ಪದಾರ್ಥಂಗಳ; ಗಡಣಂ = ಸಮೂಹಂ; ದ್ವಂದ್ವಂ = ದ್ವಂದ್ವಸಮಾಸಂ; ಎನಿಪ್ಪುದು = ಎನಿಸುವುದು; ಆದಿಪದ = ಮೊದಲ ಪದದ; ಮುಖ್ಯತೆಯಿಂ = ಮುಖ್ಯತ್ವದಿಂದೆ; ಅವ್ಯಯೀಭಾವಂ = ಅವ್ಯಯೀಭಾವಸಮಾಸಂ ಎನಿಸುವುದು.

ವೃತ್ತಿ.— ಎರಡು ಪದಂ ಪಲವು ಪದಂ ಮೇಣನ್ಯಪದಾರ್ಥಮಂ ಬಯಸುತ್ತಿರೆ, ಬಹುವ್ರೀಹಿಯಕ್ಕುಂ; ಪದಾರ್ಥಂಗಳ ಸಮುದಾಯಂ ದ್ವಂದ್ವಮಕ್ಕುಂ; ಪೂರ್ವಪದಂ ಪ್ರಧಾನಮಾದೊಡೆ ಅವ್ಯಯೀಭಾವಮಕ್ಕುಂ.

---

1) ಪೂರ್ವಪದಾರ್ಥಪ್ರಧಾನೋऽವ್ಯಯೀಭಾವಃ || ಧಾ. ಭೂ. 129. ||
(ಮೊದಲ ಪದದ ಅರ್ಥವನ್ನೇ ಮುಖ್ಯವಾಗುಳ್ಳುದು ಅವ್ಯಯೀಭಾವಸಮಾಸವು.)
ಸರ್ವ ಪದಾರ್ಥಪ್ರಧಾನೋ ದ್ವಂದ್ವಃ || ಧಾ. ಭೂ. 130. ||
(ಎಲ್ಲಾ ಪದಗಳ ಅರ್ಥವನ್ನೇ ಮುಖ್ಯವಾಗುಳ್ಳುದು ದ್ವಂದ್ವಸಮಾಸವು.)
ಅನ್ಯ ಪದಾರ್ಥಪ್ರಧಾನೋ ಬಹುವ್ರೀಹಿಃ || ಧಾ. ಭೂ. 131. ||
(ಮತ್ತೊಂದು ಪದದ ಅರ್ಥವನ್ನೇ ಮುಖ್ಯವಾಗುಳ್ಳುದು ಬಹುವ್ರೀಹಿಸಮಾಸವು.)

ದ್ವಿಪದಂ ಮೇಣ್ ಬಹುಪದಮ- |
ನ್ಯಪದಾರ್ಥದೊಳೊಂದಿ ನಿಲೆ ಬಹುವ್ರೀಹಿ ಸಮ- ||
ಸ್ತ ಪದಾರ್ಥಂ ದ್ವಂದ್ವಂ ಪೂ- |
ರ್ವಪದಪ್ರಾಧಾನ್ಯಮವ್ಯಯೀಭಾವಾಖ್ಯಂ. || ಶ. ಸ್ಮೃ. 47. ||

ಕಡುಚಾಗವುಳ್ಳವನೆ ಕಡುಚಾಗಿ; ಚಲವಾದ ವೃತ್ತವುಳ್ಳನೆ ಚಲವಾದಿ; ಮೆಲ್ಪಿನ್ನಣ ವೃತ್ತವುಳ್ಳನೆ ಮೆಲ್ಪಿನ್ನಣಿ.

ಪ್ರಯೋಗಂ. — ಬಹುವ್ರೀಹಿಗೆ — *ಕಡುಚಾಗಿ; ಚಲವಾದಿ; ಮೆಲ್ಪಿನ್ನಣಿ; ಕಡುಗೇಡಿ; ನಿಡುಮೂಗಿ; ಹೆಱುಗಾಲಿ.

ದ್ವಂದ್ವಕ್ಕೆ — ಮರಗಿಡುಬಳ್ಳಿಪುಲ್ಲೊಪ್ಪದಱುಪಕ್ಕಿಮಿಗಂಗಳ್; ಆಟಪಾಟಕೂಟಂಗಳ್.

"ಆಟಪಾಟಕೂಟಂಗಳ ಕೇಳಿಗೈದಿಸದು ತೊೞ್ತು." || 373 ||

ಅವ್ಯಯೀಭಾವಕ್ಕೆ — ಅಂಗಯ್; ಮೇಂಗಾಲ್; ಮೇಂಗಯ್; ಪಿಂತಿಲ್; ಪಿಂತೊಲೆ; ಕಿೞ್ಪೊಡೆ; ಕಿೞ್ಕೆಱೆ; ಕಿೞ್ಪಿರೆ; ಬೆಂಬಿಸಲ್; ಬೆಂಗಾಲ್; ಬಯ್ಗಿರುಳ್.

ಸೂತ್ರಂ[1]. || ೧೬೬ ||

In Adverbial compounds ಅಂ = ಅಡಿ, ಮೇಂ = ಮೇಗು, ಮುಂ = ಮುಂದು, ಪಿಂ = ಪಿಂದು, ಕಿೞ್ = ಕೆಳಗು, ಪಿಂತು = ಪೆಱಗು.

ಅಡಿ ಮೇಗುಗಳಂತ್ಯಾಕ್ಷರ- |
ದೆಡೆಗಕ್ಕುಂ ಬಿಂದು ಮುಂದು ಪಿಂದುಗಳಂತ್ಯ- ||
ಕ್ಕೊಡರಿಸುಗುಂ ಲೋಪಂ ನೋ- |
ೞ್ಪೊಡವ್ಯಯೀಭಾವದೊಳ್ಕೆಳಗು ಕಿೞೆನಿಕ್ಕುಂ ||
|| ೧೬೬ ||

ಪದಚ್ಛೇದಂ. — ಅಡಿ ಮೇಗುಗಳ ಅಂತ್ಯಾಕ್ಷರದ ಎಡೆಗೆ ಅಕ್ಕುಂ ಬಿಂದು; ಮುಂದು ಪಿಂದುಗಳ ಅಂತ್ಯಕ್ಕೆ ಒಡರಿಸುಗುಂ ಲೋಪಂ; ನೋೞ್ಪೊಡೆ ಅವ್ಯಯೀಭಾವದೊಳ್ ಕೆಳಗು ಕಿೞ್ ಎನಿಕ್ಕುಂ.

ಅನ್ವಯಂ. — ಅವ್ಯಯೀಭಾವದೊಳ್ ನೋೞ್ಪೊಡೆ ಅಡಿ ಮೇಗುಗಳ ಅಂತ್ಯಾಕ್ಷರದ ಎಡೆಗೆ ಬಿಂದು ಅಕ್ಕುಂ; ಮುಂದು ಪಿಂದುಗಳ ಅಂತ್ಯಕ್ಕೆ ಲೋಪಂ ಒಡರಿಸುಗುಂ; ಕೆಳಗು ಕಿೞ್ ಎನಿಕ್ಕುಂ.

ಟೀಕು. — ಅವ್ಯಯೀಭಾವದೊಳ್ = ಅವ್ಯಯೀಭಾವಸಮಾಸದಲ್ಲಿ; ನೋೞ್ಪೊಡೆ = ನೋಡುವೊಡೆ; ಅಡಿಮೇಗುಗಳ = ಅಡಿ ಮೇಗು ಎಂಬ ಶಬ್ದಂಗಳ; ಅಂತ್ಯಾಕ್ಷರದ = ಕಡೆಯುಣಕ್ಷರದ; ಎಡೆಗೆ = ಸ್ಥಾನಕ್ಕೆ; ಬಿಂದು = ಸೊನ್ನೆ; ಅಕ್ಕುಂ = ಅಪ್ಪುದು; ಮುಂದು ಪಿಂದುಗಳ = ಮುಂದು ಪಿಂದು ಎಂಬ ಶಬ್ದಂಗಳ; ಅಂತ್ಯಕ್ಕೆ = ಕಡೆಯುಣಕ್ಷರಕ್ಕೆ; ಲೋಪಂ = ಲೋಪಂ; ಒಡರಿಸುಗುಂ = ಬರ್ಪುದು; ಕೆಳಗು = ಕೆಳಗು ಎಂಬ ಶಬ್ದಂ; ಕಿೞ್ = ಕಿೞೆಂದು; ಎನಿಕ್ಕುಂ = ಎನಿಸುವುದು.

ವೃತ್ತಿ.—ಅವ್ಯಯೀಭಾವದೊಳಡಿ ಮೇಗೆಂಬ ಶಬ್ದಂಗಳ ಕಡೆಯಕ್ಕರಕ್ಕೆ ಬಿಂದುವಕ್ಕುಂ; ಮುಂದು ಪಿಂದೆಂಬಿವಱ ಕಡೆಯಕ್ಕರಕ್ಕೆ ಲೋಪಮಕ್ಕುಂ; ಕೆಳಗೆಂಬುದರ್ಕೆ ಕಿಱ್ ಎಂದಾದೇಶಮಕ್ಕುಂ; ಪೆಱಗೆಂಬುದುಮಾ ತೆಱದಿಂ ಪಿಂತೆಂದಕ್ಕುಂ.

ಪ್ರಯೋಗಂ.—ಅಂಗಯ್, ಅಂಗಾಲ್; ಮೇಂಗಯ್, ಮೇಂಗಾಲ್; ಮುಂಗಯ್, ಮುಂಗಾಲ್, ಮುಂಜೂರ್, ಮುಂಬಗಲ್, ಮುಂಮಾಗಿ; ಪಿಂಗಾಲ್, ಪಿಂಬೆದೆ, ಪಿಂಬೊಟ್ಟು; ಕಿಱ್ಕಿಱಿ, ಕಿಱ್ಬೊಡೆ, ಕಿಱ್ಬೆರೆ; ಪಿಂತಿಲ್, ಪಿಂತೊಲೆ.

"ಉದ್ದಮಾಗಿ ಬಿಗಿದ ಮೇಂಗಾಲ್ . . . . ." || 374 ||

ಸೂತ್ರಂ[1]. || ೧೬೭ ||

Kannaḍa Verbal Compounds (ಕ್ರಿಯಾಸಮಾಸಂ) are a 7th class of compounds. They occur when a kâraka-noun and a verb are joined together. In forming them the Bindu must be added to Saṃskṛit words ending in ಅ; with such Kannaḍa words this is optional, also when they end in ಉ. In Verbal compounds incongruous Compositions (ಅರಿಸಮಾಸಂ, S. 174) are allowed.

ವಿದಿತಂ ಕ್ರಿಯಾಸಮಾಸಂ |
ಮೊದಲೊಳ್ ಕಾರಕಮುಮಗ್ರದೊಳ್ ಕ್ರಿಯೆಯುಂ ಸಂ- ||
ಸ್ಥಿದಮಾಗೆ ಬಿಂದು ಸಕ್ಕದ- |
ದದಂತದೊಳ್ ಕನ್ನಡಕ್ಕೆ ಮೇಣುತ್ವದೊಳಂ || ೧೬೮ ||

---

1) ಕಾರಕಂ ಪರೇಣ ಸಮರ್ಥ ಕ್ರಿಯಾಪದೇನ. || ಭಾ. ಭೂ. 133. ||
(ಮೊದಲಪದದಲ್ಲಿ ಕಾರಕವೂ ಮುಂದಣ ಪದದಲ್ಲಿ ಕ್ರಿಯಾಪದವೂ ಇರೆ ಕ್ರಿಯಾ ಸಮಾಸವು.)

ಅಕಾರಾಂತಾನ್ಮಃ || ಭಾ. ಭೂ. 134. ||
(ಅಕಾರಾಂತ ಕಾರಕದಿಂದ ಪರವಾದರೆ ಮಕಾರಾಗಮವು ಬರುವುದು.)

ಪತ್ತಿರೆ ಕಾರಕದೊಳ್ ಮುಂ- |
ದೊತ್ತಿ ಸಮರ್ಥ ಕ್ರಿಯಾಪದಂ ಪದವಿಧಿ ತಾ- ||
ನೊತ್ತರಿಸುಗುಮದರೊಳ್ ತ- |
ಳ್ತಿತ್ತಮುದಂತಕ್ಕೆ ಬಿಂದು ಸಂಧಿಸಿ ನಿಲ್ಕುಂ. || ಶ. ಸ್ಮೃ. 48. ||

ಪದಚ್ಛೇದಂ.— ವಿದಿತಂ ಕ್ರಿಯಾಸಮಾಸಂ, ಮೊದಲೊಳ್ ಕಾರಕಮುಂ ಅಗ್ರದೊಳ್ ಕ್ರಿಯೆಯುಂ ಸನ್ನಿದಂ ಆಗೆ, ಬಿಂದು ಸಕ್ಕದದ ಅದಂತದೊಳ್, ಕನ್ನಡಕ್ಕೆ ಮೇಣ್ ಉತ್ವದೊಳಂ.

ಅನ್ವಯಂ.— ಮೊದಲೊಳ್ ಕಾರಕಮುಂ ಅಗ್ರದೊಳ್ ಕ್ರಿಯೆಯುಂ ಸನ್ನಿದಂ ಆಗೆ, ವಿದಿತಂ ಕ್ರಿಯಾಸಮಾಸಂ. ಸಕ್ಕದದ ಅದಂತದೊಳ್ ಬಿಂದು; ಕನ್ನಡಕ್ಕೆ ಮೇಣ್ ಉತ್ವದೊಳಂ.

ಟೀಕು.— ಮೊದಲೊಳ್ = ಆದಿಯಲ್ಲಿ; ಕಾರಕಮುಂ = ಕಾರಕಪದಮುಂ; ಅಗ್ರದೊಳ್ = ಪರದಲ್ಲಿ; ಕ್ರಿಯೆಯುಂ = ಕ್ರಿಯಾಪದಮುಂ; ಸನ್ನಿದಂ = ಸಂಬಂಧಂ; ಆಗೆ = ಆಗೆ; ವಿದಿತಂ = ಪ್ರಸಿದ್ಧವಾದ; ಕ್ರಿಯಾಸಮಾಸಂ = ಕ್ರಿಯಾಸಮಾಸವಪ್ಪುದು; ಸಕ್ಕದದ = ಸಂಸ್ಕೃತದ; ಅದಂತದೊಳ್ = ಅಕಾರಾಂತದಲ್ಲಿ; ಬಿಂದು = ಸೊನ್ನೆ ಬರ್ಪುದು; ಕನ್ನಡಕ್ಕೆ = ಕರ್ನಾಟಕಶಬ್ದಕ್ಕೆ; ಮೇಣ್ = ವಿಕಲ್ಪದಿಂದೆ; ಉತ್ವದೊಳಂ = ಉಕಾರಾಂತದಲ್ಲಿಯುಂ; ಬಿಂದು = ಸೊನ್ನೆ ಬರ್ಪುದು. ಅಂ ಎಂಬ ಸಮುಚ್ಚಯದಿಂದೆ ಅಕಾರಾಂತದಲ್ಲಿಯುಂ ಬಿಂದು ಬರ್ಪುದು.

ವೃತ್ತಿ.— ಮೊದಲೊಳ್ ಕಾರಕಮುಂ ಪರದೊಳ್ ಕ್ರಿಯೆಯುಂ ಅರ್ಥವ್ಯಕ್ತಿಯಂ ಕೂಡೆ, ಕ್ರಿಯಾಸಮಾಸಂ; ಅಲ್ಲಿ ಸಂಸ್ಕೃತದಕಾರಾಂತಕ್ಕೆ ಬಿಂದು ನಿತ್ಯಂ; ಕನ್ನಡದದಂತಕ್ಕಮುದಂತಕ್ಕಂ ಬಿಂದುವಿಕಲ್ಪಂ.

ಪ್ರಯೋಗಂ.— ಕ್ರಿಯಾಸಮಾಸಕ್ಕೆ— ಬಳೆದೊಟ್ಟಂ; ಕೆಳೆಗೊಟ್ಟಂ; ತೆಱೆದೆತ್ತಂ; ಮಱೆವೊಕ್ಕಂ.

ಸಂಸ್ಕೃತದ ನಿತ್ಯಬಿಂದುಗೆ — ಗುಣಂಗೊಂಡಂ; ಕಾಲಂಗಂಡಂ; ಪ್ರಿಯಂ ನುಡಿದಂ; ಧನಂಬಡೆದಂ; ರಂಗಂಬೊಕ್ಕಂ.

ಕನ್ನಡತ್ವದೊಳ್ವಿಕಲ್ಪಬಿಂದುವಿಂಗೆ — ಮೊಗಂನೋಡಿದಂ, ಮೊಗನೋಡಿದಂ; ಪದಂಗೊಂಡಂ, ಪದಗೊಂಡಂ; ಬೆಸಂಬಡೆದಂ, ಬೆಸವಡೆದಂ; ಕೆಯ್ವೊಲಂಗಾದಂ, ಕೆಯ್ವೊಲಗಾದಂ; ಮನಂಸಂದಂ, ಮನಸಂದಂ; ಕಡಂಗೊಂಡಂ, ಕಡಗೊಂಡಂ.

". . . . ಕಡಗೊಂಡನೊ ಬಡ್ಡಿಗೊಂಡನೊ" || 375 ||

ಉತ್ವಕ್ಕೆ — ಪುದುಂಗೊಳಿಸಿದಂ, ಪುದುಗೊಳಿಸಿದಂ; ಮಾತುಂಗುಟ್ಟಿದಂ, ಮಾತುಗುಟ್ಟಿದಂ; ಅಸುಂಗೊಂಡಂ, ಅಸುಗೊಂಡಂ.

"ಬಱಿಮಾತುಗುಟ್ಟಿ ಪೋಪರೆ ಗಂಡರುಂ . . . ." || 376 ||

"ಮೂಗುವಟ್ಟಿರೆ ಕೃಷ್ಣಂ ಮಾತುಗುಟ್ಟಿದಂ" || 377 ||

"ನಿನ್ನಸುಂಗೊಂಡಡೆ ದೋಷಮಾದುದೆ" || 378 ||

ಅರ್ಥವ್ಯಕ್ತಿ ಕೆಡುವೊಡೆ ಬಿಂದುವಂ ಕಳೆಯಲಾಗದು — ಪಯಣಂಬೋದಂ; ಪಸರಂಬಡೆದಂ; ಗಡಣಂಗೊಂಡಂ; ಬಿಜಯಂಗೈದಂ; ಕೆಲಸಂಬೊಕ್ಕಂ; ಕರಗಂಬೊತ್ತಂ.

"ಕರಗಂಬೊತ್ತಂ ಜವಂ ಮೃಡನೊಳ್" || 379 ||

"ಕಾದುವ ಕಾಲಮಾನೆ ಕರಗಂಬೊತ್ತಂ" || 380 ||

ಇದಱೊಳರಿಪದಂ (=ಅರಿಸಮಾಸಂ) ನಿರ್ದೋಷಂ—

ಸವಣಂ ಬಳಪಂಗೊಳೆ ಗಾಂ- |
ಡಿವಿ ಬಿಲ್ಗೊಳೆ ಬಲವಿರೋಧಿ ವಜ್ರಂಗೊಳೆ ದಾ- ||
ನವರಿಪು ಚಕ್ರಂಗೊಳೆ ಕೌ- |
ರವಾರಿ ಗದೆಗೊಳೆ ಪೊಣರ್ಕೆಗಾವಂ ನಿಲ್ವಂ || 381 ||

ಸೂತ್ರಂ. || ೧೬೮ ||

The 8th class of Compounds: Kannada Consecutive Compounds (ಗಮಕಸಮಾಸಂ). They occur when a Kâraka-Noun is preceded by a Numeral, Pronoun, Adjective or a Verbal Noun-base (ಕೃತ್). In them also incongruous composition is allowed (S. 167); Adjectives with final ಇ insert an ಅ before the noun.

ಜನಿಯಿಸುಗುಂ ಸಂಖ್ಯಾಸ- |
ರ್ವನಾಮಗುಣವಚನಕೃತ್ಪ್ರಪೂರ್ವಂ ಗಮಕಂ ||
ತನಗತ್ವಂ ಪೆಱಗಿತ್ವಂ |
ತನಗರಿಪದನಿಲ್ಲ ಕರ್ಮಧಾರಯಮದುವುಂ. || ೧೭೯ ||

ಪದಚ್ಛೇದಂ.— ಜನಿಯಿಸುಗುಂ ಸಂಖ್ಯಾಸರ್ವನಾಮಗುಣವಚನಕೃತ್ಪ್ರಪೂರ್ವಂ ಗಮಕಂ; ತನಗೆ ಅತ್ವಂ ಪೆಱಗೆ ಇತ್ವಂ; ತನಗೆ ಅರಿಪದಂ ಇಲ್ಲ; ಕರ್ಮಧಾರಯಂ ಅದುವುಂ.

ಅನ್ವಯಂ.— ಸಂಖ್ಯಾಸರ್ವನಾಮಗುಣವಚನಕೃತ್ಪ್ರಪೂರ್ವಂ ಗಮಕಂ ಜನಿಯಿಸುಗುಂ; ತನಗೆ ಅತ್ವಂ ಪೆಱಗೆ ಇತ್ವಂ; ತನಗೆ ಅರಿಪದಂ ಇಲ್ಲ; ಅದುವುಂ ಕರ್ಮಧಾರಯಂ.

ಟೀಕು.— ಸಂಖ್ಯಾ = ಸಂಖ್ಯಾವಾಚಿಗಳ್; ಸರ್ವನಾಮ = ಸರ್ವನಾಮಂಗಳ್; ಗುಣವಚನ = ಗುಣವಚನಂಗಳ್; ಕೃತ್ = ಕೃತ್ತುಗಳ್; ಪ್ರಪೂರ್ವಂ = ಆದಿಯಾಗೆ; ಗಮಕಂ = ಗಮಕಸಮಾಸಂ; ಜನಿಯಿಸುಗುಂ = ಹುಟ್ಟುವುದು; ತನಗೆ = ಗಮಕಸಮಾಸವಾದ ತನಗೆ;

ಅತ್ವಂ = ಮಧ್ಯಕ್ಕೆ ಅಕಾರಂ; ಪೆಱಗೆ = ಅತ್ವದ ಪಿಂದುಗಡೆಯಲ್ಲಿ; ಇತ್ವಂ = ಇಕಾರಂ ಹುಟ್ಟುವುದು; ತನಗೆ = ಗಮಕಸಮಾಸವಾದ ತನಗೆ; ಅರಿಪದಂ = ಅರಿಸಮಾಸಂ; ಇಲ್ಲ = ಉಂಟಾಗದು; ಅದುವುಂ = ಆ ಗಮಕಸಮಾಸವುಂ; ಕರ್ಮಧಾರಯಂ = ಕರ್ಮಧಾರಯಸಮಾಸವೆನಿಸುವುದು. — ಉಂ ಎಂಬ ಸಮುಚ್ಚಯದಿಂದೆ ಎತ್ತಾನುಂ ತತ್ಪುರುಷಮುಮಪ್ಪುದು.

ವೃತ್ತಿ- — ಪರಪದದೊಳ್ ಕಾರಕಮಂ ಪೂರ್ವಪದದೊಳ್ ಸಂಖ್ಯಾಸರ್ವನಾಮಗುಣವಚನಕೃತ್ಪದಂಗಳಾವುವಿರ್ದೊಡಂ ಗಮಕಸಮಾಸಮಕ್ಕುಂ; ಗುಣವಚನದೊಳಂತರಾಳಕ್ಕೆ ಒಂದಕಾರಂ ಪಿಂತಣ ಮೆಯ್ಯೊಳ್ ಇಕಾರಮಕ್ಕುಂ. ಇದಱೊಳ್ ಅರಿಸಮಾಸದೋಷಮಿಲ್ಲ; ಅದು ಕರ್ಮಧಾರಯದ ಭೇದಂ; ಎತ್ತಾನುಂ ತತ್ಪುರುಷಮಪ್ಪುದು.

ಪ್ರಯೋಗಂ. — ಸಂಖ್ಯೆಗೆ — ಇರ್ಪತ್ತೈದು; ನೂಱುಪತ್ತು; ಮೂವತ್ತಾಱು.

"ಮೂವತ್ತಾಱುಂ ಗುಣಂಗಳ್ ತಮಗಮರ್ದಿರೆ" || 382 ||

ಸರ್ವನಾಮಕ್ಕೆ — ಆವಮಾತು; ಆವಕಾರ್ಯಂ; ಆವನಾಯಕಂ; ಆವಕಾಂತೆ.

"ಆವರಾವುತರಾವವಾಜಿಗಳಾವವಾನೆಗಳಾವನಾ- |
ಳಾವನಾಯಕ. . . . ನಿಮ್ಮ. . . . ವ್ಯೂಹದೊಳ್." || 383 ||

ಗುಣವಚನದತ್ವಮಿತ್ವಕ್ಕೆ — (ಅಸಿ+ಅ+ನಡು=) ಅಸಿಯನಡು; ಪಸಿಯಬಣ್ಣಂ; ಬಿಳಿಯಕರ್ಬು; ನಿಡಿಯನಾಲಗೆ; ಪಿರಿಯಮಗಂ, ಕಿಱಿಯಮಗಂ.

ಕೃತ್ತಿಂಗೆ —

"ಪಾಡುವ ತುಂಬಿ ಕೋಡುವ ಪುಱಿಲ್ . . . ." || 384 ||

"ಆಡಿದಪೊಲಸುಂಡಮರ್ದು ಕಂಡವಿಚಾರಂ" || 385 ||

ಅರಿಸಮಾಸದ ನಿರ್ದೋಷಕ್ಕೆ — ಬೀಸುವಚಾಮರಂ; ಪೊಡೆವಭೇರಿ; ಪೂರೈಸುವಶಂಖಂ; ಪಿಡಿವಕಹಳೆ; ಪೂಸಿದಭಸ್ಮಪರಾಗಂ.

"ಆದ್ರವಿಷ್ಣುವಿಜಯಾದಿತ್ಯಂ" || 386 ||

"ಪೊಣ್ಮುವ ಘರ್ಮಜಲಂಗಳಾ ಪಾಂಗುಂ" || 387 ||

ಸೂತ್ರಂ. || ೧೬೯ ||

In Consecutive Compounds ಆ, ಈ, ಊ are used instead of ಅದು, ಇದು, ಉದು.

ಅದುವಿದುವುದುಗಾಯೀಯೂ |
ವೊದವುಗುಮಾದೇಶಮಾಗಿ ಗಮಕದೊಳಾಯೆಂ- ||
ಬುದು ಪೂರ್ವಪರಾಮರ್ಶಿಗ- |
ಮೊದವುಗುಮಾ ರೂಢಿಗಂ ಕವೀಶ್ವರಮತದಿಂ. || ೧೭೦ ||

ಪದಚ್ಛೇದಂ.— ಅದುವಿದುವುದುಗೆ ಆಯೀಯೂ ಒದವುಗುಂ ಆದೇಶಂ ಆಗಿ ಗಮಕದೊಳ್; ಆಯೆಂಬುದು ಪೂರ್ವ ಪರಾಮರ್ಶಿಗಂ ಒದವುಗುಂ ಆ ರೂಢಿಗಂ ಕವೀಶ್ವರಮತದಿಂ.

ಅನ್ವಯಂ.— ಗಮಕದೊಳ್ ಅದುವಿದುವುದುಗೆ ಆಯೀಯೂ ಆದೇಶಂ ಆಗಿ ಒದವುಗುಂ; ಕವೀಶ್ವರಮತದಿಂ ಆಯೆಂಬುದು ಪೂರ್ವಪರಾಮರ್ಶಿಗಂ ಆ ರೂಢಿಗಂ ಒದವುಗುಂ.

ಟೀಕು.— ಗಮಕದೊಳ್ = ಗಮಕಸಮಾಸದಲ್ಲಿ; ಅದುವಿದುವುದುಗೆ = ಅದು ಇದು ಉದು ಎಂಬ ಶಬ್ದಂಗಳ್ಗೆ; ಆಯೀಯೂ = ಆ ಎಂಬುದು ಈ ಎಂಬುದು ಊ ಎಂಬುದು; ಆದೇಶವಾಗಿ = ಆದೇಶವಾಗಿ; ಒದವುಗುಂ = ಪ್ರಾಪ್ತಿಸುವುದು; ಕವೀಶ್ವರಮತದಿಂ = ಕವೀಶ್ವರಮತದಿಂದೆ; ಆಯೆಂಬುದು = ಆ ಎಂಬ ಶಬ್ದಂ; ಪೂರ್ವಪರಾಮರ್ಶಿಗಂ = ಪೂರ್ವ ಸ್ಮರಣಕ್ಕೆಯುಂ; ಆ ರೂಢಿಗಂ = ಆ ಪ್ರಸಿದ್ಧಿಗೆಯುಂ; ಒದವುಗುಂ = ಪ್ರಾಪ್ತಿಸುವುದು.

ವೃತ್ತಿ.— ಗಮಕಸಮಾಸದೊಳ್ ಅದು ಇದು ಉದು ಎಂಬ ಸರ್ವನಾಮಕ್ಕೆ ಆ ಈ ಊ ಎಂಬಿವಾದೇಶಮಕ್ಕುಂ; ಆ ಎಂಬುದು ಪೂರ್ವಸ್ಮರಣದೊಳಂ ಪ್ರಸಿದ್ಧಿಯೊಳಮುಂಟು.

ಪ್ರಯೋಗಂ.— ಆ ಈ ಊ ಎಂಬ ಆದೇಶಕ್ಕೆ—

"ಆ ಮನೆ ಸಿರಿಯ ತವರ್ಮನೆ ಪಲದೆವಸಕ್ಕೆ ಕಂಡೆವಣ್ಣಾ" || 388 ||
"ಈ ಮನೆಯತ್ತಲೆ ಬಾರೀಕೆಗಿನ್ನಲಸದಿರಕ್ಕ" || 389 ||
"ಕಱಿಯ ತಡೆದತ್ತು ಕಂದನುಣಲೂಮನೆಯೂಕೆಗಳುಯ್ದರ್" || 390 ||

". . . . . ಆಬನವೀಬನ
ವೂಬನವೆನ್ನದೆ ತೊಱಿಲ್ದು ಪೂಗೊಯ್ದರವರ್" || 391 ||

೪. ಸ್ಮರಣಕ್ಕೆ— "ನೆನೆದನ್ನಾಹಿರಣ್ಯಕನಂದು ಬಿಜ್ಜಿಂದಮಂ" || 392 ||
"ಬಿದ್ದಿಗಾಪೊಟಿಲಿಚರ್ ಮಾಸ್ಯದೊಕ್ಕಲ್." || 393 ||
೫. ಪ್ರಸಿದ್ಧಿಗೆ— "ಗಜಹಯರೂಢಿಯೊಳ್ ಭಗದತ್ತನಿನ್ನಾನಳನಿಂ
ಮಿಗಿಲಾದಂ." || 394 ||

ಸೂತ್ರಂ. || ೧೭೦ ||

ಗದಬಜಕಾರಮವಿದಿರಿರೆ ।
ಮೊದಲ ಪದಂ ತಾಂ ಕೃದಂತಮಾಗಿರೆ, ದೊರಕೊ- ||
ಳ್ವುದನುಸ್ವಾರಮುದಂತದೊ- |
ಳಿದಂತದೊಳ್, ಕರ್ಮಧಾರಯಂ ಬರೆ ಬಹುಳಂ. |
|| ೧೮೧ ||

In ಕರ್ಮಧಾರಯ compounds, before nouns with initial ಗ, ದ, ಬ, ಜ, the final ಉ of Verbal noun-bases (ಕೃತ್); which are formed of roots ending in ಉ or ಇ, uses to get the Bindu.

ಪದಚ್ಛೇದಂ.— ಗದಬಜಕಾರಂ ಅವು ಇದಿರ್ ಇರೆ, ಮೊದಲ ಪದಂ ತಾಂ ಕೃದಂತಂ ಆಗಿ ಇರೆ, ದೊರೆಕೊಳ್ವುದು ಅನುಸ್ವಾರಂ ಉದಂತದೊಳ್ ಇದಂತದೊಳ್, ಕರ್ಮಧಾರಯಂ ಬರೆ, ಬಹುಳಂ.

ಅನ್ವಯಂ.— ಕರ್ಮಧಾರಯಂ ಬರೆ, ಗದಬಜಕಾರಂ ಅವು ಇದಿರಿರೆ, ಮೊದಲ ಪದಂ ತಾಂ ಕೃದಂತಂ ಆಗಿ ಇರೆ, ಉದಂತದೊಳ್ ಇದಂತದೊಳ್ ಬಹುಳಂ ಅನುಸ್ವಾರಂ ದೊರೆಕೊಳ್ವುದು.

ಟೀಕು.— ಕರ್ಮಧಾರಯಂ = ಕರ್ಮಧಾರಯಸಮಾಸಂ; ಬರೆ = ಬರೆ; ಗದಬಜಕಾರಂ = ಗಕಾರ ದಕಾರ ಬಕಾರ ಜಕಾರಂಗಳ್; ಅವು = ಅವು; ಇದಿರಿರೆ = ಇದಿರಾಗಿರೆ; ಮೊದಲ ಪದಂ = ಆದಿಯ ಪದಂ; ತಾಂ = ತಾಂ; ಕೃದಂತಂ = ಕೃಲ್ಲಿಂಗಂ; ಆಗಿರೆ = ಆಗಿರೆ; ಉದಂತದೊಳ್ = ಉಕಾರಾಂತದಲ್ಲಿ; ಇದಂತದೊಳ್ = ಇಕಾರಾಂತದಲ್ಲಿ; ಬಹುಳಂ = ಬಹುಳವಾಗಿ; ಅನುಸ್ವಾರಂ = ಸೊನ್ನೆ; ದೊರೆಕೊಳ್ವುದು = ಪ್ರಾಪ್ತಿಸುವುದು.

ವೃತ್ತಿ.— ಕರ್ಮಧಾರಯದೊಳ್ ಗದಬಜಕಾರಾದಿಪದಂಗಳ್ ಪರದೊಳಿರೆ, ಪೂರ್ವಪದಂ ಕೃತ್ತಾಗಿ, ಉಕಾರಾಂತಮಿಕಾರಾಂತಮಾಗಿರೆ, ಬಿಂದು ವಕ್ಕುಂ; ಬಹುಳದಿಂ, ಕೆಲದೆಡೆಯೊಳಿಲ್ಲ.

ಪ್ರಯೋಗಂ.— ಉಕಾರಾಂತದೊಳ್ ಗಕಾರಂ ಪರಮಾದುದರ್ಕೆ— ಎತ್ತುಂಗೋಲ್; ಕುತ್ತುಂಗಱಿ; ಪೊತ್ತುಂಗೊಱಡು; ಪುಟ್ಟುಂಗುರುಡಂ; ಸುರ್ಕುಂಗುರುಳ್; ಕರ್ಚುಂಗಲ್ಲಂ; ಚುರ್ಚುಂಗೊಳ್ಳಿ; ಇರ್ಕುಂಗಾಱ್; ಇಡುಕುಂಗಬ್ಬಂ.

"ಇಡುಕುಂಗಬ್ಬಂ ಮುಕ್ತಕ- |
ಮೊಡಂಬಡೆ . . . ." || 395 ||

ದಕಾರಕ್ಕೆ— ಕಡುಕುಂದಱಿ; ಉರ್ಕುಂದೊಱೆ; ತೂಗುಂದೊಟ್ಟಿಲ್; ಆಡುಂದೊಲೆ; ತೂಗುಂದಲೆ.

" . . . . . . ಎತ್ತುವೇತದಾಡುಂದೊಲೆಯಂತೆ ಕಣ್ಗೆಸೆದುದಿಭಂ
ಕದನತ್ರಿನೇತ್ರನಾ || 396 ||

"ತೂಪ ತೂಗುಂದಲೆ ಬಾೞ್ಪಿಣಂ ಪೊಡರೆ ಬಳ್ಕುವ ಸಮ್ಮನ
ಶೂಲವಾಲದೊಳ್" || 397 ||

ಬಕಾರಕ್ಕೆ—ಬತ್ತುಂಬಯಂ; ಬತ್ತುಂಬಱಿ; ಅಟ್ಟುಂಬರಿ; ಆಡುಂಬೊಲಂ; ಮಿಂಚುಂಬುೞು; ಪೆರ್ಚುಂಬುರುಳ್; ತೋಱುಂಬೊಣೆ; ಹೆಱುಂಬಳೆ; ಪಾಱುಂಬಳೆ.

"ಪಾಱುಂಬಳೆ ನಾರಾಚಂ |
ತೂಱುವ ಸರಲ್ . . . ." || 398 ||

ಜಕಾರಕ್ಕೆ— ತೂಗುಂಜೊಡರ್; ಅಟ್ಟುಂಜಗಳಂ; ಕಟ್ಟುಂಜುರಿಗೆ; ಕಟ್ಟುಂಜೋಳಂ; ಏಱುಂಜವ್ವನಂ.

"ಏಱುಂಜವ್ವನದೊಳ್ ಸೊ- |
ಕ್ಕೇಱಿದ ನೀಱೆಯರ . . . ." || 399 ||

ಇಕಾರಾಂತದೊಳ್ — ಸಿಡಿಯುಂದಲೆ; ಇಱಿಯುಂಬೊೞ್ತು. ಇಲ್ಲಿ ಉಕಾರಂ ಪೊಕ್ಕುದು.

ಬಹುಳದಿಂ ಕೃತ್ತಿಲ್ಲದಲ್ಲಿಯುಂ ಬಿಂದುವುಂಟು—ಬಿಟ್ಟುಂಬೊಱೆ ಎಂದು.

ಸೂತ್ರಂ. || ೧೭೧ ||

But there are a few exceptions, such as ಸುಡುಗಾಡು, ಇಡುಗಿಚ್ಚು, etc.

ಸುಡುಗಾಡಿಡುಗಿಚ್ಚಡುಗೂ- |
ೞುಡುಗೊಱೆಯುಂ ಮಾಱುದಾಂಟು ಬಿಡುಗಣ್ ಬಿಡುವಾ [ಯ್ ||
ತುಡುಜೊಡರಱುಗೆಱೆಯೆಂಬಿವು |
ಪಡೆಯವು ಬಿಂದುವನುದಂತವೃತ್ತಿಯನಾಳ್ದುಂ. || ೧೮೨ ||

ಪದಚ್ಛೇದಂ.— ಸುಡುಗಾಡು, ಇಡುಗಿಚ್ಚು, ಅಡುಗೂೞ್, ಉಡುಗೊಱೆಯುಂ, ಮಾಱುದಾಂಟು, ಬಿಡುಗಣ್, ಬಿಡುವಾಯ್, ತುಡುಜೊಡರ್, ಅಱುಗೆಱೆ ಎಂಬ ಇವು ಪಡೆಯವು ಬಿಂದುವಂ, ಉದಂತವೃತ್ತಿಯಂ ಆಳ್ದುಂ.

ಅನ್ವಯಂ.— ಉದಂತವೃತ್ತಿಯಂ ಆಳ್ದುಂ, ಬಿಂದುವಂ ಪಡೆಯವು ಎಂಬುದನ್ವಯಂ.

ಟೀಕು.— ಸುಡುಗಾಡು = ಸುಡುಗಾಡೆಂದು; ಇಡುಗಿಚ್ಚು = ಇಡುಗಿಚ್ಚೆಂದು; ಅಡುಗೂೞ್ = ಅಡುಗೂೞೆಂದು; ಉಡುಗೊಱೆಯುಂ = ಉಡುಗೊಱೆಯೆಂದುಂ; ಮಾಱುದಾಂಟು = ಮಾಱುದಾಂಟೆಂದು; ಬಿಡುಗಣ್ = ಬಿಡುಗಣ್ಣೆಂದು; ಬಿಡುವಾಯ್ = ಬಿಡುವಾಯ್ಯೆಂದು; ತುಡುಜೊಡರ್ = ತುಡುಜೊಡರೆಂದು; ಅಱುಗೆಱೆ = ಅಱುಗೆಱೆಯೆಂದು; ಎಂಬಿವು = ಎಂಬೀ ಸಮಾಸಪದಂಗಳ್; ಉದಂತವೃತ್ತಿಯಂ = ಉಕಾರಾಂತದ ವರ್ತನೆಯಂ; ಆಳ್ದುಂ = ತಾಳ್ದುಂ; ಬಿಂದುವಂ = ಸೊನ್ನೆಯಂ; ಪಡೆಯವು = ಪಡೆಯವು.

ವೃತ್ತಿ.— ಇದರ್ಕಿದೆ ವೃತ್ತಿ.

ಸೂತ್ರಂ. || ೧೭೨ ||

Also Nouns which are no Verbal noun-bases and terminate in ಉ or ಅ, receive the Bindu (cf. S. 167);

ಕೃತ್ತಿರದೆಯುಮುತ್ವಾತ್ವಾ- |
ಯತ್ತಮನುಸ್ವಾರಮಸ್ವರದ ನಣಕತ್ವಂ ||
ಮತ್ತೆ ೞಕಾರಕ್ಕುತ್ವಂ |
ಪತ್ತಲೊಡಂ ಬಿಂದು ಬಂದು ನೆಲೆಗೊಂಡಿರ್ಕುಂ. || ೧೮೩ ||

likewise words with final ನ್ and ಣ್ when getting the augment ಅ, and those with final ೞ್ when getting the augment ಉ, receive the Bindu.

ಪದಚ್ಛೇದಂ.— ಕೃತ್ತು ಇರದೆಯುಂ ಉತ್ವಾತ್ವಾಯತ್ತಂ ಅನುಸ್ವಾರಂ; ಅಸ್ವರದ ನಣಕೆ ಅತ್ವಂ ಮತ್ತೆ ೞಕಾರಕ್ಕೆ ಉತ್ವಂ ಪತ್ತಲೊಡಂ, ಬಿಂದು ಬಂದು, ನೆಲೆಗೊಂಡು ಇರ್ಕುಂ.

ಅನ್ವಯಂ.— ಕೃತ್ತು ಇರದೆಯುಂ ಅನುಸ್ವಾರಂ ಉತ್ವಾತ್ವಾಯತ್ತಂ; ಅಸ್ವರದ ನಣಕೆ ಅತ್ವಂ ಮತ್ತೆ ೞಕಾರಕ್ಕೆ ಉತ್ವಂ ಪತ್ತಲೊಡಂ, ಬಿಂದು ಬಂದು, ನೆಲೆಗೊಂಡು ಇರ್ಕುಂ.

ಟೀಕು. — ಕೃತ್ತು = ಕೃತ್ಪದಂ; ಇರದೆಯುಂ = ಇಲ್ಲದೆಯುಂ; ಅನುಸ್ವಾರಂ = ಸೊನ್ನೆ; ಉತ್ವ = ಉಕಾರದಲ್ಲಿ; ಅತ್ವ = ಅಕಾರದಲ್ಲಿ; ಆಯುತ್ತಂ = ಸಂಬಂಧವಪ್ಪುದು; ಅಸ್ವರದ = ವ್ಯಂಜನದ; ನಣಕೆ = ನಕಾರ ಣಕಾರಂಗಳ್ಗೆ; ಅತ್ವಂ = ಅಕಾರಂ; ಮತ್ತೆ = ಬಳಿಕ; ಳಕಾರಕ್ಕೆ = ವ್ಯಂಜನದ ಳಕಾರಕ್ಕೆ; ಉತ್ವಂ = ಉಕಾರಂ; ಪತ್ತಲೊಡಂ = ಪತ್ತಲೊಡನೆ; ಬಿಂದು = ಸೊನ್ನೆ; ಬಂದು = ಬಂದು; ನೆಲೆಗೊಂಡು = ನೆಲಸಿ; ಇರ್ಕುಂ = ಇರ್ಪುದು.

ವೃತ್ತಿ. — ಕೃತ್ತಿಲ್ಲದುದಂತಕ್ಕಂ ಅದಂತಕ್ಕಂ ಬಿಂದು ಸಂದಿಸುಗುಂ; ವ್ಯಂಜನದ ನಕಾರ ಣಕಾರಂಗಳ್ಗೆ ಅತ್ವಮುಂ, ಳಕಾರಕ್ಕುಕಾರಮುಂ ಪತ್ತಲೊಡಂ, ಸೊನ್ನೆಯವತರಿಸುಗುಂ.

ಪ್ರಯೋಗಂ.—ಉದಂತಕ್ಕೆ—ಕುಕ್ಕುಂದಱೆ, ದಕ್ಕುಂದಲೆ, ತಾಱುಂಬಱೆ.

"ತಾಱುಂಬಱೆಯೆಟ್ಟಿ ಚುಂಚು ಬೆಮರಿಂ ಕಡೆಗೆನ್ನೆಯ ಬಾನಲಾದ
ಬೊಟ್ಟು" || 400 ||

ಅದಂತಕ್ಕೆ—ಚಿಕ್ಕಂಬಯಲ್, ಕಳ್ಳಂಗಡಲೆ, ಜಕ್ಕಂದೊಟಿಲಿ.

"ಜವನೇಱೆದೊಂದು ಜಕ್ಕಂದೊಟಿಲಿಯಂತೆ ಕಣ್ಗೆಸೆದುದೇಱೆದಿಭಂ
ಚಲದಂಕರಾಮನಾ" || 401 ||

ನಕಾರಕ್ಕೆ—ಮೀನಂಬುಟ್ಟಿ, ಬಾನಂಗುಳಿಗೆ.

ಣತ್ವಕ್ಕೆ—ಕಣ್ಣಂದೊಟಿಲಿ.

ಳಕಾರಕ್ಕೆ—ಬೆಳ್ಳುಂಬಟ್ಟೆ.

ಸೂತ್ರಂ. || ೧೭೩ ||

ಪೆಱಗು becomes ಪೆಡಂ or ಪೆಡ.

ಪೆಡವೆಂಬಾದೇಶಂ ಬಂ- |
ದೆಡೆಗೊಳ್ಗುಂ ಪೆಱಗೆನಿಪ್ಪ ಶಬ್ದದೊಳದು ತಾಂ ||
ಪಡೆಗುಂ ಬಿಂದುಮನೆರೆಬರ್ |
ತಡಗಾಲೆಂಬಂತಬಿಂದುವುಮನಾಚರಿಪರ್. || ೧೮೪ ||

ಪದಚ್ಛೇದಂ. — ಪೆಡಂ ಎಂಬ ಆದೇಶಂ ಬಂದು ಎಡೆಗೊಳ್ಗುಂ ಪೆಱಗು ಎನಿಪ್ಪ ಶಬ್ದದೊಳ್; ಅದು ತಾಂ ಪಡೆಗುಂ ಬಿಂದುವುಂ; ಅರೆಬರ್ ತಡಗಾಲ್ ಎಂಬ ಅಂತೆ ಅಬಿಂದುವುಮಂ ಆಚರಿಪರ್.

ಅನ್ವಯಂ. — ಪೞಿಗೆನಿಪ್ಪ ಶಬ್ದದೊಳ್ ಪೆಡವೆಂದಾದೇಶಂ ಬಂದು ಎಡೆಗೊಳ್ಗುಂ; ಅದು ತಾಂ ಬಿಂದುವುಂ ಪಡೆಗುಂ; ಆರೆಬರ್ ತಡಗಾಲ್ ಎಂಬಂತೆ ಅಬಿಂದುವುಮಂ ಆಚರಿಪರ್.

ಟೀಕು. — ಪೞಿಗು = ಪೞಿಗೆಂದು; ಎನಿಪ್ಪ ಶಬ್ದದೊಳ್ = ಎನಿಸುವ ಶಬ್ದದಲ್ಲಿ; ಪೆಡಂ = ಪೆಡಂ ಎಂದು; ಎಂಬಾದೇಶಂ = ಎಂಬಾದೇಶಂ; ಬಂದು = ಬಂದು; ಎಡೆಗೊಳ್ಗುಂ = ಎಡೆಗೊಂಬುದು; ಅದು ತಾಂ = ತಾನದು; ಬಿಂದುವುಂ = ಸೊನ್ನೆಯುಂ; ಪಡೆಗುಂ = ಪಡೆವುದು; ಆರೆಬರ್ = ಕೆಲಂಬರ್; ತಡಗಾಲೆಂಬಂತೆ = ತಡಗಾಲೆಂಬ ಹಾಗೆ; ಅಬಿಂದುವುಮಂ = ಬಿಂದುವಿಲ್ಲದುದನಾಗಿಯುಂ; ಆಚರಿಪರ್ = ಪೇೞ್ವರ್.

ವೃತ್ತಿ. — ಪೞಿಗೆಂಬುದರ್ಕೆ ಪೆಡವೆಂದಾದೇಶಮಾದುದರ್ಕೆ ಬಿಂದುವಕ್ಕುಂ; ಕೆಲರ್ ತಡಗಾಲೆಂಬವೊಲ್ ಅದರ್ಕೆ ಬಿಂದುವಿಲ್ಲದೆಯುಂ ಒಲ್ವರ್.

ಪ್ರಯೋಗಂ. — ಪೆಡಮಾದೇಶಕ್ಕೆ — ಪೆಡಂಗಯ್; ಪೆಡಂದಲೆ; ಪೆಡಂಮೆಟ್ಟು; — ತಡಂಗಾಲ್ ಎಂಬಂತೆ.

"ಪೆಡಂಮೆಟ್ಟದೆ ಸೂೞ್ಗಿರೆವಂದಿಱಿದುದೇಱಿದಿಭಂ ಭುವನೈಕ
ರಾಮನಾ" || 402 ||

ಅಬಿಂದುವಿಗೆ — ಪೆಡಗಯ್; ಪೆಡದಲೆ; ಪೆಡಮೆಟ್ಟು; — ತಡಗಾಲ್ ಎಂಬಂತೆ.

" . . ಪೆಡಮೆಟ್ಟಿ ಬರ್ಪ ದುರ್ಯೋಧನನನಿಭಘಟೆಯುಂ" || 403 ||

ಸೂತ್ರಂ[1]. || ೧೭೪ ||

Compounds of incongruous words (ಅರಿಸಮಾಸಂ, ಏರು

ಪದವಿಧಿ ಕನ್ನಡಕಂ ಸ- |
ಕ್ಕದಕ್ಕಮಿಲ್ಲಾದ್ಯರಿಂದೆ ಸಂದುವನಱಿದಿ- ||

1) ಸಮಸಂಸ್ಕೃತಂ ದೇಶೀಯ ಪದೇನ ಸಮಂ ಸಮಸ್ಯತೇ || ಭಾ. ಭೂ. 132. ||
(ಸಮಸಂಸ್ಕೃತ ಪದಗಳು ಕನ್ನಡ ಪದಗಳೊಡನೆ ಸಮಾಸವಾಗುವುವು.)

ಬೆರಸಿ ಸಮಸಂಸ್ಕೃತಂಗಳ್ |
ಬರೆ ಕನ್ನಡದೊಳಗೆ ಸಮತೆಯಿಂದಂ ಸಲ್ಗುಂ ||
ನಿರವದ್ಯಮಾಗಿ ಪದವಿಧಿ |
ವಿರುದ್ಧಮಕ್ಕುಂ ತದನ್ಯಥಾವೃತ್ತಿಗಳೊಳ್. || ಶ. ಸ್ಮೃ. 63. ||

ದ್ಧಸಮಾಸಂ, Ss. 167; 168) are allowed in the 6 Compounds of Samskrita character only when sanctioned by poets of old, as they are, for instance, in honorary language (ಬಿರುದು).

ರ್ಪುದು ಬಿರುದಾವಳಿಯೊಳ್ಪೇ- |
ೞ್ವುದು ಪೆಱವಱೊಳಾಗದಿದು ವಿರುದ್ಧಸಮಾಸಂ.
|| ೧೮೫ ||

ಪದಚ್ಛೇದಂ.— ಪದವಿಧಿ ಕನ್ನಡಕಂ ಸಕ್ಕದಕ್ಕಂ ಇಲ್ಲ. ಆದ್ಯರಿಂದೆ ಸಂದುವಂ ಅಱಿದು ಇರ್ಪುದು; ಬಿರುದಾವಳಿಯೊಳ್ ಪೇೞ್ವುದು; ಪೆಱವಱೊಳ್ ಆಗದು. ಇದು ವಿರುದ್ಧಸಮಾಸಂ.

ಅನ್ವಯಂ.— ಕನ್ನಡಕಂ ಸಕ್ಕದಕ್ಕಂ ಪದವಿಧಿ ಇಲ್ಲ ಎಂಬುವನ್ವಯಂ.

ಟೀಕು.— ಕನ್ನಡಕಂ = ಕರ್ಣಾಟಕಶಬ್ದಕ್ಕೆಯುಂ; ಸಕ್ಕದಕ್ಕಂ = ಸಂಸ್ಕೃತಶಬ್ದಕ್ಕೆಯುಂ; ಪದವಿಧಿ = ಸಮಾಸವಿಧಿ; ಇಲ್ಲ = ಉಂಟಾಗದು; ಆದ್ಯರಿಂದೆ = ಪುರಾತನಕವಿಗಳಿಂದ; ಸಂದುವಂ = ಸಲುವಳಿಯಾದುವಂ; ಅಱಿದಿರ್ಪುದು = ತಿಳಿದಿರ್ಪುದು; ಬಿರುದಾವಳಿಯೊಳ್ = ಬಿರುದಾವಳಿಯಲ್ಲಿ; ಪೇೞ್ವುದು = ಹೇಳ್ವುದು; ಪೆಱವಱೊಳ್ = ಅನ್ಯವಾದುವಱಲ್ಲಿ; ಆಗದು = ಆಗದು; ಇದು = ಇದು; ವಿರುದ್ಧಸಮಾಸಂ = ಅರಿಸಮಾಸವೆನಿಸುವುದು.

ವೃತ್ತಿ.— ಕನ್ನಡಕ್ಕಂ ಸಂಸ್ಕೃತಕ್ಕಂ ಸಮಾಸಮಿಲ್ಲ. ಆದಿಮಾರ್ಗದಿನೆಂತರ್ಕೆ ಕೆಲವಂ ಸಂದುವನಱಿದಿರ್ಪುದು; ಬಿರುದಾವಳಿಯೊಳ್ನೆಱೆದಂತೆ ಪೇೞ್ವುದು; ಮಿಕ್ಕೆಡೆಯೊಳ್ಮಾಣ್ಬುದು.

ಪ್ರಯೋಗಂ.— ಅರಿಸಮಾಸಕ್ಕೆ— ಮುಖತಾವರೆ; ಅರಸುಕುಮಾರಂ; ಕೆಳದಿಸಮೇತಂ. ಇವು ಅರಿಸಮಾಸಂ.

ಮಾರ್ಗದೊಳುಳ್ಳವರ್ಕೆ— ಕಡುರಾಗಂ; ಮೊಗರಾಗಂ; ಅಱಿಕೆನಾಯಕಂ; ಗುಣಕಱಿಗೊಂಡಂ; ಕಟ್ಟೇಕಾಂತಂ; ಕೂರಸಿ; ಮಾರ್ಬಲಂ; ಇರ್ಬಲಂ; ಪೆರ್ಬಲಂ; ಆಱಿಜನಂ; ತುರಗದಱಿ; ಮಂಗಳಾರತಿ; ಮಂಗಳವಸದನಂ; ಮಂಗಳವಱಿ; ಅರಸುಗುಣಂ; ಕಡುದರ್ಪಂ.— ಪೆಱವುಮನೀ ತೆಱದಿನಱಿವುದು. ಇವಱಿಂತೆ ಬೇಱೆ ಮಾಡಲಾಗದು.

ಬಿರುದಿಂಗೆ— ಗಜದುಳಿ; ಗಜಪಾಱಿ; ನರಲೋಕದಲ್ಲಣಂ; ಮಾಸವಳಮದನಮಹೇಶಂ; ಅಂಕತ್ರಿನೇತ್ರಂ; ಗುಣಕ್ಕೆನಲ್ಲಗಣೇಶಂ; ದಱಿಮುಖಧವಳಂ; ದಱಿಮುಖಾದಿತ್ಯಂ; ರಾಯಕೋಳಾಹಳಂ. ಈ ತೆಱದಿ ಬಿರುದಿನೊಳ್ ಎತ್ತಾನುಂ ಸಲ್ವುದು.

ಸೂತ್ರಂ.[1] || ೧೭೫ ||

In Compounds, ಎಲ್ಲ retains its form or becomes ಎಲ್ಲಾ; ಮಹತ್ becomes ಮಾ These forms may freely enter into compounds with Kanarese and Samskṛita bases.

ಸಮನಿಸುವುದೆಲ್ಲಶಬ್ದ- |
ಕ್ಕೆ ವಿಕಲ್ಪದೆ ದೀರ್ಘವಿಧಿ। ಮಹಚ್ಛಬ್ದಕ್ಕು- |
ದ್ಭವಿಕುಂ ಮಾದೇಶಂ; ದೋ- |
ಷವಿಲ್ಲ ಸಂಸ್ಕೃತಪದಂ ಪರಕ್ಕೊದವಲೊಡಂ. || ೧೮೭ ||

ಪದಚ್ಛೇದಂ.— ಸಮನಿಸುವುದು ಎಲ್ಲಶಬ್ದಕ್ಕೆ ವಿಕಲ್ಪದೆ ದೀರ್ಘವಿಧಿ; ಮಹಚ್ಛಬ್ದಕ್ಕೆ ಉದ್ಭವಿಕುಂ ಮಾದೇಶಂ. ದೋಷಂ ಇಲ್ಲ, ಸಂಸ್ಕೃತಪದಂ ಪರಕ್ಕೆ ಒದವಲೊಡಂ.

ಅನ್ವಯಂ.— ಎಲ್ಲಶಬ್ದಕ್ಕೆ ವಿಕಲ್ಪದೆ ದೀರ್ಘವಿಧಿ ಸಮನಿಸುವುದು; ಮಹಚ್ಛಬ್ದಕ್ಕೆ ಮಾದೇಶಂ ಉದ್ಭವಿಕುಂ. ಸಂಸ್ಕೃತಪದಂ ಪರಕ್ಕೆ ಒದವಲೊಡಂ, ದೋಷಂ ಇಲ್ಲ.

ಟೀಕು.— ಎಲ್ಲಶಬ್ದಕ್ಕೆ = ಎಲ್ಲ ಎಂಬ ಶಬ್ದಕ್ಕೆ; ವಿಕಲ್ಪದೆ = ವಿಕಲ್ಪದಿಂದೆ; ದೀರ್ಘವಿಧಿ = ದೀರ್ಘದ ವಿಧಿ; ಸಮನಿಸುವುದು = ಬರ್ಪುದು; ಮಹಚ್ಛಬ್ದಕ್ಕೆ = ಮಹತ್ ಎಂಬ ಶಬ್ದಕ್ಕೆ; ಮಾದೇಶಂ = ಮಾ ಎಂಬಾದೇಶಂ; ಉದ್ಭವಿಕುಂ = ಹುಟ್ಟುವುದು; ಸಂಸ್ಕೃತಪದಂ = ಸಂಸ್ಕೃತದ ಪದಂ; ಪರಕ್ಕೆ = ಮುಂದುಗಡೆಗೆ; ಒದವಲೊಡಂ = ಪ್ರಾಪ್ತಿಸಲೊಡನೆ; ದೋಷಂ = ಅರಿಸಮಾಸದ ದೋಷಂ; ಇಲ್ಲ = ಉಂಟಾಗದು.

ವೃತ್ತಿ.— ಎಲ್ಲ ಎಂಬ ಶಬ್ದಕ್ಕೆ ವಿಕಲ್ಪದಿಂ ದೀರ್ಘಮಕ್ಕುಂ; ಮಹಚ್ಛಬ್ದಕ್ಕೆ ಮಾ ಎಂಬಾದೇಶಮಕ್ಕುಂ. ಇವರ್ಕೆ ಸಂಸ್ಕೃತಪದಂ ಪರಮಾದೊಡಂ ದೋಷಮಿಲ್ಲ.

ಪ್ರಯೋಗಂ.— ದೀರ್ಘವಿಕಲ್ಪಕ್ಕೆ— ಎಲ್ಲಕಾರ್ಯಂ, ಎಲ್ಲಾಕಾರ್ಯಂ; ಎಲ್ಲರತ್ನಂ, ಎಲ್ಲಾರತ್ನಂ; ಎಲ್ಲಧನಂ, ಎಲ್ಲಾಧನಂ; ಎಲ್ಲಾಪುರುಷರ್; ಎಲ್ಲಾಕಾಂತೆಯರ್.

---

1) ಆತ್ವಮೆಲ್ಲಸ್ಯ || ಭಾ. ಭೂ. 149. ||
(ಸಮಾಸದಲ್ಲಿ ಪೂರ್ವಪದವಾಗಿರುವ ಎಲ್ಲ ಎಂಬುದಕ್ಕೆ ಆಕಾರಾದೇಶವುಂಟು.)

ಪ್ರಾಯಿಕಮಕ್ಕುಂ ದೀರ್ಘಾ- |
ಮ್ನಾಯಮದಂತೆಲ್ಲ ಶಬ್ದದೊಳ್ ವೃತ್ತಿಗತಂ ||
ಮಾಯೆಂಬುದು ಮಹಿಮಾಭಿ- |
ಪ್ರಾಯದೊಳೊಂದಿರ್ಕುವೊಂದಿ ಮಹತೆಂಬುದರೊಳ್ || ಶ. ಸ್ಮೃ. 55. ||

ಎಲ್ಲ "ಎಲ್ಲಂಗಮೆಲ್ಲ ಧನಮುಮ- |
ನೆಲ್ಲೆಡೆಯೊಳಮೆಲ್ಲ ತೆಱದೊಳುಂ ಕುಡುಗೆಮಗೆ . . ." || 404 ||

ಎಲ್ಲಾ "ಎಲ್ಲಾ ರತ್ನಂಗಳುಮನೊಳಕೊಂಡೊಳ್ಪನಂಭೋಧಿ ಲೋಕ |
ಕ್ಕೆಲ್ಲಂ ಬೀಱಲ್ . . . ." || 405 ||

ಮಾ ಮಹಚ್ಛಬ್ದಕ್ಕೆ— ಮಾದೇವಂ; ಮಾಕಾಳಿ; ಮಾದಾನಿ; ಮಾಶೌರ್ಯಂ.
ಕನ್ನಡಕ್ಕೆ— ಮಾಸಾವಂತಂ; ಮಾಲಕುಮಿ; ಮಾಸಾಮಿ.

ಸೂತ್ರಂ[1]. || ೧೭೬ ||

In ತತ್ಪುರುಷ Compounds the final letter of the first word is often elided, and also a homogeneous (ಉಚಿತ) letter is often supplied with or without Elision. ಕೆಳಗು becomes ಕಿಱ್ and (before ನ) ಕಿನ್.

ನೆಲೆಗೊಳ್ಗುಂ ಪೂರ್ವಪದಾಂ- |
ತ್ಯಲೋಪಮದು ಬಹುಳದಿಂದೆ ತತ್ಪುರುಷಕ್ಕ- ||
ಗ್ಗಲಿಪುದುಚಿತಾಕ್ಷರಾಗಮ- |
ಮೊಲೆಗುಂ ಕೆಳಗಗ್ಗೆ ಕಿಱ್ಕಿನೆಂಬಾದೇಶಂ. || ೧೭೬ ||

ಪದಚ್ಛೇದಂ.— ನೆಲೆಗೊಳ್ಗುಂ ಪೂರ್ವಪದಾಂತ್ಯಲೋಪಂ ಅದು ಬಹುಳದಿಂದೆ ತತ್ಪುರುಷಕ್ಕೆ; ಅಗ್ಗಲಿಪುದು ಉಚಿತಾಕ್ಷರಾಗಮಂ; ಒಲೆಗುಂ ಕೆಳಗಗ್ಗೆ ಕಿಱ್ ಕಿನ್ ಎಂಬ ಆದೇಶಂ.

ಅನ್ವಯಂ.— ತತ್ಪುರುಷಕ್ಕೆ ಪೂರ್ವಪದಾಂತ್ಯಲೋಪಂ ಅದು ಬಹುಳದಿಂದೆ ನೆಲೆಗೊಳ್ಗುಂ; ಉಚಿತಾಕ್ಷರಾಗಮಂ ಅಗ್ಗಲಿಪುದು; ಕೆಳಗಗ್ಗೆ ಕಿಱ್ ಕಿನ್ ಎಂಬಾದೇಶಂ ಒಲೆಗುಂ.

---

1) ತತ್ಪುರುಷೇ ಪೂರ್ವಪದಾಂತ್ಯಲೋಪಃ ಪ್ರಾಯೋ ಯಥೋಚಿತಾಗಮಶ್ಚ
|| ಭಾ. ಭೂ. 148. ||

(ತತ್ಪುರುಷಸಮಾಸದಲ್ಲಿ ಪೂರ್ವಪದದ ಅಂತ್ಯಕ್ಕೆ ಪ್ರಾಯಿಕವಾಗಿ ಲೋಪವುಂಟು; ಉಚಿತಾಗಮವು ಬರುವುದುಂಟು.)

ತತ್ಪುರುಷಸಮಾಸದೊಳು- |
ದ್ಯತ್ಪೂರ್ವಪದಾಂತ್ಯಲೋಪಮಕ್ಕುಂ ಪ್ರಚುರಂ ||
ವ್ಯತ್ಯಾದಿಕಲ್ಕೆ ಪಡೆಗುಂ |
ತತ್ಪರದೊಳ್ ಒದೆಯುಮುಚಿತ ವರ್ಣಾಗಮಮುಂ || ಶ. ಸ್ಮೃ. 54. ||

ಟೀಕು.— ತತ್ಪುರುಷಕ್ಕೆ = ತತ್ಪುರುಷಸಮಾಸಕ್ಕೆ; ಪೂರ್ವಪದ = ಮೊದಲ ಪದದ; ಅಂತ್ಯ = ಕಡೆಯಣಕ್ಷರದ; ಲೋಪಂ = ಅದರ್ಶನಂ; ಅದು = ಅದು; ಬಹುಳದಿಂದೆ = ಬಹುಳದಿಂದೆ; ನೆಲೆಗೊಳ್ಗುಂ = ನೆಲೆಗೊಂಬುದು; ಉಚಿತ = ಉಚಿತವಾದ; ಅಕ್ಷರ = ಅಕ್ಷರದ; ಆಗಮಂ = ಆಗಮಂ; ಅಗ್ಗಲಿಪುದು = ಬರ್ಪುದು; ಕೆಳಗಣ್ಗೆ = ಕೆಳಗೆಂಬ ಶಬ್ದಕ್ಕೆ; ಕಿೞ್ = ಕಿೞೆಂದು; ಕಿನ್ = ಕಿನ್ನೆಂದು; ಎಂಬಾದೇಶಂ = ಎಂಬಾದೇಶಂ; ಒಲೆಗುಂ = ಬರ್ಪುದು.— ಅಗ್ಗಲಿಪುದೆಂದೊಡೆ ವೆಗ್ಗಳವಪ್ಪುದು; ಒಲೆಗುಂ ಎಂದೊಡೆ ಒಲೆವುದೆಂಬುದರ್ಥಂ = ಔಚಿತ್ಯದಿಂ ಬರ್ಪುದೆಂಬುದರ್ಥಂ.

ವೃತ್ತಿ.— ತತ್ಪುರುಷಕ್ಕೆ ಬಹುಳದಿಂ ಕೆಲವೆಡೆಯೊಳ್ಮೊದಲ ಪದದ ಕಡೆಯಕ್ಕರಕ್ಕೆ ಲೋಪಂ; ಕೆಲವೆಡೆಯೊಳ್ ಲೋಪಂಬೆರಸುಚಿತಾಕ್ಷರಾಗಮಂ; ಕೆಳಗೆಂಬುದರ್ಕೆ ಕಿೞೆಂದುಂ ಕಿನ್ ಎಂದುಮಾದೇಶಮಕ್ಕುಂ.

ಪ್ರಯೋಗಂ.— ಪದಾಂತ್ಯಲೋಪಕ್ಕೆ— ಒಳಕೋಂಟೆ; ಹೊಱವೇಲಿ; ಜೇನೆಯ್; ತೆಂಗಾಳಿ; ಅರಮನೆ.

ಉಚಿತಾಕ್ಷರಾಗಮಕ್ಕೆ— ತೆಂಬೆಲರ್; ದಾಂಗುಡಿ; ಮಾಂಗಾಯ್; ಅಂಗ್ರೊಳಗು; ಅಂಗೊಳಂ; ಕಮ್ಮಂಗಣೆ; ಕಡಲಾನ್ತೊಂಗೊಳಗಿರಂ.

"ಕಮ್ಮಂಗಣೆಯಿಂದೆಚ್ಚಪ- |
ನಿಮ್ಮಾವಿನ ಪೊದೞೊಳಿರ್ದು......" || 406 ||

ಲೋಪಮಿಲ್ಲದುಚಿತಾಕ್ಷರಾಗಮಕ್ಕೆ— ನಟ್ಟೆವಾನ್; ನಟ್ಟೆವನೆ; ನಟ್ಟೆಗೊಂಬು; ನಟ್ಟೆವನಿ. ಇಲ್ಲಿ ಎಕಾರಮುಚಿತವರ್ಣಾಗಮಂ.

ಕಿೞಾದೇಶಕ್ಕೆ— ಕಿೞ್ಕೊಂಬು; ಕಿೞ್ಕಿವಲ್; ಕಿೞ್ಕಿಣೆ; ಕಿೞ್ಕಿಟ್ಟು; ಕಿೞ್ಕಿಡಲ್.

ಕಿನಾದೇಶಕ್ಕೆ— ಕಿನ್ನೀರ್; ಕಿನ್ನೆಲಂ.

ಸೂತ್ರಂ. || ೧೭೭ ||

Also in ಕರ್ಮಧಾರಯ and other Compounds such Elision takes place.

ಅಕ್ಕುಂ ಪದಾಂತ್ಯಲೋಪಂ |
ತಕ್ಕಂತಿರೆ ಕರ್ಮಧಾರಯಕ್ಕಂ ದ್ವಿಗುಗಂ |
ಮಿಕ್ಕಾ ದ್ವಂದ್ವಕ್ಕಂ ಮೇ- |
ಲಕ್ಕರಿಗರಿನಾ ಕ್ರಿಯಾಸಮಾಸೋಪೇತಂ. || ೧೭೭ ||

ಪದಚ್ಛೇದಂ. — ಅಕ್ಕುಂ ಪದಾಂತ್ಯಲೋಪಂ ತಕ್ಕ ಅಂತೆ ಇರೆ ಕರ್ಮಧಾರಯಕ್ಕಂ ದ್ವಿಗುಗಂ ಮಿಕ್ಕ ಆ ದ್ವಂದ್ವಕ್ಕಂ; ಮೇಲೆ ಅಕ್ಕರಿಗರಿಂ ಆ ಕ್ರಿಯಾಸಮಾಸೋಪೇತಂ.

ಅನ್ವಯಂ. — ಕರ್ಮಧಾರಯಕ್ಕಂ ದ್ವಿಗುಗಂ ಮಿಕ್ಕಾ ದ್ವಂದ್ವಕ್ಕಂ ತಕ್ಕಂತಿರೆ ಪದಾಂತ್ಯಲೋಪಂ ಅಕ್ಕುಂ; ಮೇಲೆ ಅಕ್ಕರಿಗರಿಂ ಆ ಕ್ರಿಯಾಸಮಾಸೋಪೇತಂ.

ಟೀಕು. — ಕರ್ಮಧಾರಯಕ್ಕಂ = ಕರ್ಮಧಾರಯಸಮಾಸಕ್ಕೆಯುಂ; ದ್ವಿಗುಗಂ = ದ್ವಿಗುಸಮಾಸಕ್ಕೆಯುಂ; ಮಿಕ್ಕಾ = ಉಳಿದ ಆ; ದ್ವಂದ್ವಕ್ಕಂ = ದ್ವಂದ್ವಸಮಾಸಕ್ಕೆಯುಂ; ತಕ್ಕಂತಿರೆ = ತಕ್ಕ ಹಾಗೆ; ಪದಾಂತ್ಯಲೋಪಂ = ಪೂರ್ವ ಪದದ ಕಡೆಯಕ್ಷರದ ಲೋಪಂ; ಅಕ್ಕುಂ = ಅಪ್ಪುದು; ಮೇಲೆ = ಆ ಮೇಲೆ; ಅಕ್ಕರಿಗರಿಂ = ಅಕ್ಷರಜ್ಞರಿಂದೆ; ಆ ಕ್ರಿಯಾಸಮಾಸೋಪೇತಂ = ಆ ಕ್ರಿಯಾಸಮಾಸದಲ್ಲಿಯುಂ ಕೂಡಿರ್ಪುದು.

ವೃತ್ತಿ. — ಕರ್ಮಧಾರಯಕ್ಕಂ ದ್ವಿಗುವಿಂಗಂ ದ್ವಂದ್ವಕ್ಕಂ ಕ್ರಿಯಾಸಮಾಸಕ್ಕಂ ಪೂರ್ವಪದಾಂತ್ಯಲೋಪಂ ಕೆಲವೆಡೆಯೊಳಕ್ಕುಂ.

ಪ್ರಯೋಗಂ. — ಕರ್ಮಧಾರಯಕ್ಕೆ — ಬಡವುನಡು, ಬಡನಡು; ಅರಸುನೇಱಿಲ್, ಅರನೇಱಿಲ್; ಪೊಲ್ಲದುಮೊಗಂ, ಪೊಲ್ಲಮೊಗಂ.

"ಪೊಲ್ಲಮಾನಿಸರ ಪೊಲ್ಲಮೊಗಂಗಳಂ . . . . ." || 407 ||

ದ್ವಿಗುವಿಂಗೆ — ಪಲವುದೆವಸಂ, ಪಲದೆವಸಂ; ಪಲವುಕಣ್, ಪಲಗಣ್; ಪಲವುಪಣ್, ಪಲವಣ್.

ದ್ವಂದ್ವಕ್ಕೆ — ತಮ್ಮತಮ್ಮರಾಜ್ಯಂ, ತಂತಮ್ಮ ರಾಜ್ಯಂ; ತಂತಮ ಮಹಾವಿಭೂತಿ; ತಂತಮ ಬಲಂ.

"ಪಾದರಿಗಂ ಪಲವಣ್ಣನದೇನನೀವಂ. . . . ." || 408 ||

ಕ್ರಿಯಾಸಮಾಸಕ್ಕೆ — ಪೋಗುತಂದಂ, ಪೋತಂದಂ; ಕೆಳಗುಸಾರ್ದಂ, ಕೆಳಸಾರ್ದಂ; ಎಯ್ದುತಂದಂ, ಎಯ್ತಂದಂ; ಕಳವಸುತ್ತಿದಂ, ಕಳಸುತ್ತಿದಂ; ಏನಪೇಱ್ದಿಂ,

"ಏವೇೞ್ದಿನವನ ಚಾಗದ ಪೆಂಪಂ;"

ಏತರ್ಕೆ ಬಂದಂ, ಏವಂದಂ; ಏತರ್ಕೆ ಪೋದಂ, ಏವೋದಂ.

"ಏವಂದರೇವೋದರೆನ್ನದೆ ಕಾಲ್ತರಿಸಲ್ವಮೆಂದು." || 409 ||

ಸೂತ್ರಂ. || ೧೭೮ ||

In the midst of ಕರ್ಮಧಾರಯ Compounds an ಅ will appear and so to say an Elision of ಅಂತಪ್ಪ occurs.

ದೊರೆಕೊಳ್ವುದತ್ವವಿಧಿಯಂ- |
ತರಾಳದೊಳ್ಬಹುಳಮಾಗಿ ಮಧ್ಯಪದಕ್ಕಂ ||
ದೊರೆಕೊಳ್ವುದದರ್ಶನವಿಧಿ |
ವಿರಳತೆಯಿಂ ಕರ್ಮಧಾರಯಕ್ಕಱಿವವರಿಂ. || ೧೮೯ ||

ಪದಚ್ಛೇದಂ. — ದೊರೆಕೊಳ್ವುದು ಅತ್ವವಿಧಿ ಅಂತರಾಳದೊಳ್ ಬಹುಳಂ ಆಗಿ, ಮಧ್ಯ ಪದಕ್ಕಂ ದೊರೆಕೊಳ್ವುದು ಅದರ್ಶನವಿಧಿ ವಿರಳತೆಯಿಂ ಕರ್ಮಧಾರಯಕ್ಕೆ ಅಱಿವವರಿಂ.

ಅನ್ವಯಂ. — ಕರ್ಮಧಾರಯಕ್ಕೆ ಅಂತರಾಳದೊಳ್ ಅತ್ವವಿಧಿ ಬಹುಳಂ ಆಗಿ ದೊರೆಕೊಳ್ವುದು, ಅಱಿವವರಿಂ ಮಧ್ಯಪದಕ್ಕಂ ವಿರಳತೆಯಿಂ ಅದರ್ಶನವಿಧಿ ದೊರೆಕೊಳ್ವುದು.

ಟೀಕು. — ಕರ್ಮಧಾರಯಕ್ಕೆ = ಕರ್ಮಧಾರಯಸಮಾಸಕ್ಕೆ; ಅಂತರಾಳದೊಳ್ = ಮಧ್ಯದಲ್ಲಿ; ಅತ್ವವಿಧಿ = ಅಕಾರದ ವಿಧಿ; ಬಹುಳಮಾಗಿ = ಬಹುಳವಾಗಿ; ದೊರೆಕೊಳ್ವುದು = ಪ್ರಾಪ್ತಿಸುವುದು; ಅಱಿವವರಿಂ = ಬಲ್ಲವರಿಂದೆ; ಮಧ್ಯಪದಕ್ಕಂ = ನಡುವಣ ಪದಕ್ಕೆಯುಂ; ವಿರಳತೆಯಿಂ = ವಿರಳತ್ವದಿಂದೆ; ಅದರ್ಶನವಿಧಿ = ಲೋಪದ ವಿಧಿ; ದೊರೆಕೊಳ್ವುದು = ಬರ್ಪುದು.

ವೃತ್ತಿ.— ಕರ್ಮಧಾರಯದೊಳೆತ್ತಾನುಂ ಮಧ್ಯದೊಳೊಂದಕಾರಮಕ್ಕುಂ; ಕೆಲವೆಡೆಯೊಳ್ಮಧ್ಯಪದಕ್ಕೆ ಲೋಪಮಕ್ಕುಂ.

ಪ್ರಯೋಗಂ.— ಅತ್ವಕ್ಕೆ— ಬಟ್ಟಿತ್ತುತೊಡೆ, ಬಟ್ಟದೊಡೆ; ಬೆಟ್ಟವೆಸಗೆ, ದಟ್ಟವಳ್ಳಿ ಇವುಮಂತೆ.

ಮಧ್ಯಪದಲೋಪಕ್ಕೆ— ಅಲರಂತಪ್ಪ ಕಣ್ ಎಂಬಲ್ಲಿ ಅಂತಪ್ಪ ಎಂಬುದರ್ಕೆ ಲೋಪವಾಗಿ ಅಲರ್ಗಣ್ ಎಂದಾಯ್ತು; ಪೆಱೆನೊಸಲ್, ತೊಂಗಲ್ಗುರುಳ್, ತುಂಬಿಗುರುಳ್; ಇವುಮಂತೆ.

ಸೂತ್ರಂ[1]. || ೧೭೯ ||

Further the final syllable together with the penultimate vowel of the first word (Adjective) is elided, and the vowel of the first syllable of this word, when ಇ, often changed into ಎ.

ಮುಂದಣ ಪದಂ ವಿಶೇಷ್ಯದೊ- |
ಳೊಂದಿರೆ ಪಿಂದಿರ್ದ ಪದದುಪಾಂತ್ಯಸ್ವರದಿಂ ||
ಸಂದಿಪುದು ಲೋಪಮಾದಿಯೊ- |
ಳೊಂದಿದಿಕಾರಕ್ಕೆಕಾರವಿಧಿ ಬಹುಳತೆಯಿಂ || ೧೮೦ ||

ಪದಚ್ಛೇದಂ.— ಮುಂದಣ ಪದಂ ವಿಶೇಷ್ಯದೊಳ್ ಒಂದಿ ಇರೆ, ಪಿಂದೆ ಇರ್ದ ಪದದ ಉಪಾಂತ್ಯಸ್ವರದಿಂ ಸಂದಿಪುದು ಲೋಪಂ; ಆದಿಯೊಳ್ ಒಂದಿದ ಇಕಾರಕ್ಕೆ ಎಕಾರವಿಧಿ ಬಹುಳತೆಯಿಂ.

ಅನ್ವಯಂ.— ಉಪಾಂತ್ಯಸ್ವರದಿಂ ಲೋಪಂ ಸಂದಿಪುದು; ಆದಿಯೊಳ್ ಒಂದಿದಿಕಾರಕ್ಕೆ ಬಹುಳತೆಯಿಂ ಎಕಾರವಿಧಿ ಎಂಬುದನ್ವಯಂ.

ಟೀಕು.— ಮುಂದಣ = ಅಗ್ರದ; ಪದಂ = ಪದಂ; ವಿಶೇಷ್ಯದೊಳ್ = ವಿಶೇಷ್ಯದಲ್ಲಿ; ಒಂದಿರೆ = ಕೂಡಿರೆ; ಪಿಂದೆ = ಹಿಂದೆ; ಇರ್ದ ಪದದ = ಇರ್ದ ಪದದ; ಉಪಾಂತ್ಯಸ್ವರದಿಂ = ಉಪಾಂತ್ಯಸ್ವರದೊಡನೆ; ಲೋಪಂ = ಅದರ್ಶನಂ; ಸಂದಿಪುದು = ಸಂದಿಸುವುದು; ಆದಿಯೊಳ್ = ಮೊದಲಲ್ಲಿ; ಒಂದಿದಿಕಾರಕ್ಕೆ = ಕೂಡಿದ ಇಕಾರಕ್ಕೆ; ಬಹುಳತೆಯಿಂ = ಬಹುಳತ್ವದಿಂದೆ; ಎಕಾರ ವಿಧಿ = ಎಕಾರದ ವಿಧಿ ಸಂದಿಪುದು.

---

1) ವಿಶೇಷ್ಯೋತ್ತರಪದ ಪೂರ್ವಪದಸ್ಯೋಪಾಂತಸ್ವರಾದೇರ್ಲೋಪಃ
|| ಭಾ. ಭೂ. 135. ||

(ಪರಪದವು ವಿಶೇಷವಾಗಿರೆ ಪೂರ್ವಪದದ ಉಪಾಂತ್ಯಸ್ವರವನ್ನು ಆದಿಯಾಗುಳ್ಳ ಅವಯವಕ್ಕೆ ಲೋಪವು.)

ಇಕಾರಸ್ಯೈತ್ವಃ || ಭಾ. ಭೂ. 136. ||
(ಅಂತಹ ಸಮಾಸದಲ್ಲಿ ಮೊದಲ ಇಕಾರಕ್ಕೆ ಎಕಾರವುಂಟು.)
ನ ಚ ಕ್ವಚನ || ಭಾ. ಭೂ. 137. ||
(ಕೆಲವೆಡೆಯಲ್ಲಿ ಆ ಇಕಾರವು ಎಕಾರವಾಗದು.)

ಉತ್ತರಪದಂ ವಿಶೇಷ್ಯದೊ- |
ಳೊತ್ತರಿಸಿರೆ ಪೂರ್ವಪದದುಪಾಂತ್ಯಸ್ವರದಿಂ- ||
ದತ್ತಿರ್ದುವರ್ಕೆ ಲೋಪಂ |
ಮತ್ತಮಿಕಾರಕ್ಕೆ ಬಹುಳಮಕ್ಕುಮೆಕಾರಂ. || ಶ. ಸ್ಮೃ. 49. ||

ವೃತ್ತಿ.— ಪರಪದಂ ವಿಶೇಷ್ಯಮಾಗಿರೆ, ಪೂರ್ವಪದದುಪಾಂತ್ಯಸ್ವರದಿಂ ಲೋಪಂ; ಪದದಾದಿಯಿಕಾರಕ್ಕೆ ಬಹುಳದಿಂದೆಕಾರಮಕ್ಕುಂ.

ಪ್ರಯೋಗಂ.— ಉಪಾಂತ್ಯಸ್ವರಲೋಪಕ್ಕೆ— (ತೆಳಿತ್ತು + ಬಸಿಱ್) = ತೆಳ್ಪಸಿಱ್; (ಒಳಿತ್ತು + ನುಡಿ) = ಒಳ್ನುಡಿ; (ಬಲಿತು + ಮುಗುಳ್) = ಬಲ್ಮುಗುಳ್; (ಮೆಲ್ಲಿತು + ಅಡಿ) = ಮೆಲ್ಲಡಿ.

ಎತ್ವಕ್ಕೆ— (ಪಿರಿದು + ಮೊಲೆ) = ಪೆರ್ಮೊಲೆ; ಪೆರ್ಮರಂ; ಪೆರ್ಮಾತು; (ಬಿಳಿದು + ತಿಂಗಳ್) = ಬೆಳ್ದಿಂಗಳ್; ಬೆಳ್ಮುಗಿಲ್; ಬೆಳ್ಪಲ್; ಬೆಳ್ಪಯಲ್.

ಬಹುಳಕ್ಕೆ— (ಬಿಣಿತು + ಕೊನೆ) = ಬಿಣ್ಕೊನೆ; ಬಿಣ್ಪೊಱೆ; (ಇನಿದು + ಮಾವು) = ಇಮ್ಮಾವು.

ಸೂತ್ರಂ.[1] || ೧೮೦ ||

ಅಗುರುಪದಾದಿಗೆ ದೀರ್ಘಂ |
ನೆಗೞ್ಗುಂ ಮತ್ತಲ್ಲಿ ಬಂದು ಣಟಳನತಂಗಳ್ ||
ಪುಗೆ ಪೆಱತೆಂ ದ್ವಿಭಾರ್ವಂ |
ನೆಗೞ್ಗುಂ ಸ್ವರಮಿದಿರೊಳೊದವೆ ಬಹುಳತೆಯಿಂದಂ || ೧೯೧ ||

Further chiefly when, after the Elision, the final consonant of the first word (Adjective, Numeral) meets a vowel, its own vowel is lengthened; and when its final consonant has become ಣ್, ಟ್, ಳ್, ನ್, or ತ್, it is doubled (cf. S. 69).

---

1) ಸ್ವರಾದೌ ದೀರ್ಘಸ್ತ್ವಗುರೋಃ || ಭಾ- ಭೂ. 138. ||
(ಸ್ವರವು ಪರವಾಗಲು ಗುರ್ವಕ್ಷರವಿಲ್ಲದ ಪೂರ್ವಪದಕ್ಕೆ ದೀರ್ಘವಾಗುವುದು.)
ಣಟಳನತಾನಾಂ ದ್ವಿಭಾರ್ವಃ || ಭಾ. ಭೂ. 139. ||
(ಣ ಟ ಳ ನ ತ ಎಂಬಿವಕ್ಕೆ ದ್ವಿತ್ವವುಂಟು.)

ಸ್ವರಪೂರ್ವಮಾದಿಯಪ್ಪವವು ಮುಂ- |
ತಿರೆ ದೀರ್ಘಂ ಮೊದಲೊಳಗುರುಗಕ್ಕುಂತದವಾಂ- ||
ತರದೊಳ್ ಣಟಳನತಂಗಳ್ |
ದೊರೆಕೊಳೆ ತಳೆಗುಂ ದ್ವಿರುಕ್ತಿಯುಂ ಬಹುಳತೆಯಿಂ. || ಶ. ಸ್ಮೃ. 50. ||

ಪದಚ್ಛೇದಂ.— ಅಗುರುಪದಾದಿಗೆ ದೀರ್ಘಂ ನೆಗಳ್ಗುಂ, ಮತ್ತೆ ಅಲ್ಲಿ ಬಂದು ಣ ಟ ಳ ನ ತಂಗಳ್ ಪುಗೆ, ಪೆಱತೆಂ, ದ್ವಿರ್ಭಾವಂ ನೆಗಳ್ಗುಂ, ಸ್ವರಂ ಇದಿರೊಳ್ ಒದವೆ, ಬಹುಳತೆಯಿಂದಂ.

ಅನ್ವಯಂ.— ಸ್ವರಂ ಇದಿರೊಳ್ ಒದವೆ, ಬಹುಳತೆಯಿಂದಂ ಅಗುರುಪದಾದಿಗೆ ದೀರ್ಘಂ ನೆಗಳ್ಗುಂ; ಮತ್ತೆ ಅಲ್ಲಿ ಣ ಟ ಳ ನ ತಂಗಳ್ ಬಂದು ಪುಗೆ, ಪೆಱತೆಂ, ದ್ವಿರ್ಭಾವಂ ನೆಗಳ್ಗುಂ.

ಟೀಕು.— ಸ್ವರಂ = ಸ್ವರಾಕ್ಷರಂ; ಇದಿರೊಳ್ = ಪರದಲ್ಲಿ; ಒದವೆ = ಪ್ರಾಪ್ತಿಸೆ; ಬಹುಳತೆಯಿಂದಂ = ಬಹುಳದಿಂದೆ; ಅಗುರು = ಲಘುವಾದ; ಪದ = ಪದಂಗಳ; ಆದಿಗೆ = ಮೊದಲ್ಗೆ; ದೀರ್ಘಂ = ದೀರ್ಘಂ; ನೆಗಳ್ಗುಂ = ಪ್ರಸಿದ್ಧಿವಡೆವುದು; ಮತ್ತೆ = ಆ ಮೇಲೆ; ಅಲ್ಲಿ = ಆ ಸ್ವರಾಕ್ಷರಂಗಳಿದಿರಾದಲ್ಲಿ; ಣ ಟ ಳ ನ ತಂಗಳ್ = ಣಕಾರ ಟಕಾರ ಳಕಾರ ನಕಾರ ತಕಾರಂಗಳ್; ಬಂದು = ಬಂದು; ಪುಗೆ = ಪ್ರವೇಶವಾಗೆ; ಪೆಱತೆಂ = ಅನ್ಯವೆಂ; ದ್ವಿರ್ಭಾವಂ = ದ್ವಿತ್ವಂ; ನೆಗಳ್ಗುಂ = ಪ್ರಸಿದ್ಧಿವಡೆವುದು.

ವೃತ್ತಿ.— ಸ್ವರಂ ಪರಮಾಗೆ, ಪದದಾದಿಯ ಹ್ರಸ್ವಕ್ಕೆ ದೀರ್ಘಮಕ್ಕುಂ; ಪೂರ್ವಪದಾಂತ್ಯದೊಳ್ ಣ ಟ ಳ ನ ತಂಗಳಿರೆ, ದ್ವಿರ್ಭಾವಮಕ್ಕುಂ.

ಪ್ರಯೋಗಂ.— ದೀರ್ಘಕ್ಕೆ— (ಪಿರಿದು + ಆನೆ = ಪೆರಾನೆ) = ಪೇರಾನೆ, ಪೇರಡವಿ, ಪೇರೊಕ್ಕಲ್, ಪೇರಡಿ, ಪೇರೊಡಲ್; ಓರೆಂಜಲ್ ಈರೈದು, ಈರೊತ್ತೆ.

ಬಹುಳದಿಂ ವ್ಯಂಜನಪರಮಾದಲ್ಲಿಯುಂ ದೀರ್ಘಮಾಯ್ತು— (ಇನಿದು + ಸ್ವರಂ = ಇಂಚರಂ) = ಈಂಚರಂ, ಈಂಬುಳಿ, ಈಂಗಡಲ್, ಈಂದುಟಿ, ಈಂದೋಳ್.

"ಈಂಗಡಲೊಳ್ಪುವೆತ್ತ ಪಸೆಕನ್ನಡಿ ಚಂದ್ರಮ. . ." || 410 ||

ದ್ವಿತ್ವಕ್ಕೆ— (ಪೆಣ್ + ಉಡೆ) = ಪೆಣ್ಣುಡೆ, (ನುಣಿತು + ಅರಿಸಿನಂ) = ನುಣ್ಣರಿಸಿನಂ, ತಣ್ಣೆಲರ್;— ಕಟ್ಟಾಯಂ, ಕಟ್ಟೇಱಿಗ್ಗೆ, ಕಟ್ಟಳ್ಕೆ;— ನಿಟ್ಟೆಯ್ದೆ, ನಿಟ್ಟೆಸಳ್, ಕಟ್ಟುಬ್ಬಟೆ;— ಬೆಳ್ಳಾನೆ, ಒಳ್ಳುಣಿಸು, ಅಳ್ಳೇಱು, ಬೆಳ್ಳಾಳ್;— ಇನ್ನುಣಿಸು;— ಕಿತ್ತಡಿ, ಕುತ್ತಡಿ, ಕಿತ್ತಿಳೆ, ಕಿತ್ತಾಚಂ, ಕುತ್ತಳೆ, ಕುತ್ತಿವಂ, ಕುತ್ತೆಸಳ್.

"ಒಳ್ಳಾಳೆಡೆಗೋದನೊದಱೆ ಚಟ್ಟನೊಳೊವಜಂ." || 411 ||

ಸೂತ್ರಂ[1]. || ೧೮೦ ||

ಕಡಿದು ನಿಡಿದೆಂಬ ನಡುವೆಂ- |
ಬ ಡಕಾರಂ ಟತ್ವಮಾಯ್ತು ಕಿೞ್ದರ್ಕೆ, ಕುೞೆಂ- ||
ಬೆಡೆಯಲ್ಲಿ ತಕಾರಂ ಸ್ವರ- |
ಮಡಸೆ ಪರಕ್ಕುತ್ವಮಸ್ವರಂ ನಿಲೆ ಪರದೊಳ್ || ೧೯೨ ||

Remark on S. 180; ಕಡಿದು, ನಿಡಿದು, ನಡುವು, before Vowels, become ಕಟ್ಟು, ನಿಟ್ಟು, ನಟ್ಟು; but, before Consonants, ಕಡು, ನಿಡು, ನಡು. — ಕಿೞು and ಕುೞು (from ಕಿೞ್ದು), before Vowels, become ಕಿತ್ತು, ಕುತ್ತು; before Consonants they do not change.

ಪದಚ್ಛೇದಂ. — ಕಡಿದು ನಿಡಿದು ಎಂಬ ನಡುವು ಎಂಬ ಡಕಾರಂ ಟತ್ವಂ ಆಯ್ತು, ಕಿೞ್ದರ್ಕೆ ಕುೞು ಎಂಬ ಎಡೆಯಲ್ಲಿ ತಕಾರಂ, ಸ್ವರಂ ಅಡಸೆ ಪರಕ್ಕೆ; ಉತ್ವಂ, ಅಸ್ವರಂ ನಿಲೆ ಪರದೊಳ್.

ಅನ್ವಯಂ. — ಪರಕ್ಕೆ ಸ್ವರಂ ಅಡಸೆ, ಕಡಿದು ನಿಡಿದೆಂಬ ನಡುವೆಂಬ ಡಕಾರಂ ಟತ್ವಂ ಆಯ್ತು; ಕಿೞ್ದರ್ಕೆ ಕುೞು ಎಂಬೆಡೆಯಲ್ಲಿ ತಕಾರಂ; ಪರದೊಳ್ ಅಸ್ವರಂ ನಿಲೆ, ಉತ್ವಂ.

ಟೀಕು. — ಪರಕ್ಕೆ = ಮುಂಗಡೆಗೆ; ಸ್ವರಂ = ಸ್ವರಾಕ್ಷರಂ; ಅಡಸೆ = ಪೊರ್ದುಗೆಯಾಗೆ; ಕಡಿದು ನಿಡಿದೆಂಬ ನಡುವೆಂಬ ಡಕಾರಂ = ಕಡಿದು ನಿಡಿದು ನಡುವೆಂಬ ಶಬ್ದಗಳ ಡಕಾರಂ; ಟತ್ವಂ = ಟಕಾರಂ; ಆಯ್ತು = ಆಯಿತು; ಕಿೞ್ದರ್ಕೆ = ಕಿೞ್ದೆಂಬ ಶಬ್ದಕ್ಕೆ; ಕುೞೆಂಬೆಡೆಯಲ್ಲಿ = ಕುೞು ಎಂಬಾದೇಶಂ ಬಂದಲ್ಲಿ; ತಕಾರಂ = ತತ್ವಂ ಆಯ್ತು; ಪರದೊಳ್ = ಮುಂದೆ; ಅಸ್ವರಂ = ವ್ಯಂಜನಂ; ನಿಲೆ = ನೆಲೆಗೊಳೆ; ಉತ್ವಂ = ಈ ಪೇೞ್ದ ಶಬ್ದಂಗಳ ಕಡೆಯಣಕ್ಷರಕ್ಕೆ ಉಕಾರಂ ಆಯ್ತು.

---

[1] ಕಡಿದು ನಿಡಿದು ದ್ವಯಸ್ಯಾದ್ಯೈಕ ಸ್ವರಾತ್ಪರಸ್ಯ ಟಃ || ಭಾ. ಭೂ. 140. ||
(ಸ್ವರ ಪರವಾಗಲು, ಕಡಿದು ನಿಡಿದು ಎಂಬಿವುಗಳಲ್ಲಿನ ಡಕಾರಕ್ಕೆ ಟಕಾರವುಂಟು.)
ನಡೋಶ್ಚ. || ಭಾ. ಭೂ. 141. ||
(ನಡು ಎಂಬುದರಲ್ಲಿನ ಡಕಾರಕ್ಕೂ ಟಕಾರವುಂಟು.)
ಕಿೞ್ದೋಸ್ತಃ || ಭಾ. ಭೂ. 142. ||
(ಕಿೞ್ದು ಎಂಬುಡರಲ್ಲಿನ ಅಂತ್ಯಾಕ್ಷರಕ್ಕೆ ಲೋಪವುಂಟು.)
ತೇಷಾಮುದಂತತ್ವಂ ವ್ಯಂಜನೇಷು. || ಭಾ. ಭೂ. 143. ||
(ವ್ಯಂಜನವು ಪರವಾದರೆ ಕಡಿದು ಮೊದಲಾದ ಶಬ್ದಗಳ ಅಂತ್ಯಕ್ಕೆ ಉಕಾರವು ಬರುವುದು.)

ಕಡಿದು ನಿಡಿದೆಂಬಿವೆರಡಱ |
ಕಡೆಯೊಳ್ ಟತ್ವಂ ತಕಾರಮಕ್ಕುಂ ಕಿೞ್ದೆಂ- ||
ಬೆಡೆಯೊಳ್ ಸ್ವರಮಿರೆ ತಾಮುವು |
ಪಡೆಗುಮುಕಾರಾಂತ ಭಾವಮಂ ವ್ಯಂಜನದೊಳ್ || ಶ. ಸ್ಮೃ. 51. ||

ವೃತ್ತಿ.—ಸ್ವರಂ ಪರಮಾಗೆ, ಕಡಿದು ನಿಡಿದು ನಡುವೆಂಬ ಡಕಾರಕ್ಕೆ ಟಕಾರಮಕ್ಕುಂ; ಕಿಱಿದೆಂಬ ಱಕಾರಕ್ಕಂ ಕುಱು ಎಂಬ ಱಕಾರಕ್ಕಂ ವ್ಯಂಜನದ ತಕಾರಮಕ್ಕುಂ; ವ್ಯಂಜನ ಪರಮಾದೆಡೆಯೊಳಿವರ್ಕೆ ಉಕಾರಮಕ್ಕುಂ.

ಪ್ರಯೋಗಂ.—ಟಕಾರಕ್ಕೆ—ಕಟ್ಟಾಳ್, ಕಟ್ಟುಬ್ಬಸಂ;—ನಿಟ್ಟಡಕಿಲ್, ನಿಟ್ಟಿರ್ಕೆ—ನಟ್ಟಡವಿ, ನಟ್ಟಾಳಂ, ನಟ್ಟಿರುಳ್.

ತಕಾರಕ್ಕೆ—ಕಿತ್ತಡಿ, ಕಿತ್ತಿಳಿ, ಕಿತ್ತೆಸಳ್;—ಕುತ್ತಡಿ, ಕುತ್ತೆಸಳ್.

ಉಕಾರಕ್ಕೆ—ಕಡುಗುದುರೆ, ಕಡುಗಾಳಿ;—ನಿಡುದೋಳ್, ನಿಡುವಯಣಂ;—ನಡುಸೆಱಂಗು.

"ನಿಡುಮಾಳಂ ಮುಂದೆ ನೀರಿಲ್ಲಣಮೆಮಗುಳ್ಳಡಂ ಪಿಂತಣೂರ್ಗೆಂಟು"
|| 412 ||

ಕಿಱುಗೂಸು, ಕಿಱುನೆಲ್ಲಿ ಕಿಱುವಿದಿರ್, ಕಿಱುವಲೆ, ಕಿಱುನಾಯ್;—ಕುಱುದಡಿ, ಕುಱುಗಿಡ.

ಸೂತ್ರಂ[1]. || ೧೮೨ ||

Further, before Consonants, ಪಚ್ಚನೆ, ಕೆಚ್ಚನೆ, ಬೆಚ್ಚನೆ be-

ಜನಿಯಿಸುಗುಂ ಪಚ್ಚನೆ ಕೆ- |
ಚ್ಚನೆ ಬೆಚ್ಚನೆಗಳ ಚಕಾರದೊಳ್ಮತ್ವಂ ಕೆ- ||

---

1) ಕೆಚ್ಚನೆ ಬೆಚ್ಚನೆ ಪಚ್ಚನೆ ಶಬ್ದಾನಾಂ ಚಾದೇರ್ಮತ್ವಂ || ಭಾ. ಭೂ. 145. ||

(ಕೆಚ್ಚನೆ ಬೆಚ್ಚನೆ ಪಚ್ಚನೆ ಎಂಬಿವುಗಳಲ್ಲಿ ಚಕಾರಕ್ಕೆ ವ್ಯಂಜನವು ಪರವಾಗುವಲ್ಲಿ ಮಕಾರವುಂಟು.)

ಸ್ವಂತತಾ ಚ || ಭಾ. ಭೂ. 146. ||

(ಆ ಶಬ್ದಗಳಿಗೆ ವ್ಯಂಜನವು ಪರವಾಗಲು ಸುಕಾರಾಂತತೆಯುಂಟು.)

ಇಕಾರೋ ವಿಭಾಷಯಾ ಚೈತಃ || ಭಾ. ಭೂ. 147. ||

(ಆ ಶಬ್ದಗಳಿಗೆ ಸುಕಾರಾಂತವಾದಲ್ಲಿ ಏಕಾರಕ್ಕೆ ವಿಕಲ್ಪದಿಂದ ಇಕಾರವುಂಟು.)

ಪಚ್ಚನೆಯುಂ ಕೆಚ್ಚನೆಯುಂ |
ಬೆಚ್ಚನೆಯುಮೆನಿಪ್ಪ ಶಬ್ದದಂತಕ್ಕಕ್ಕುಂ ||
ಬೆಚ್ಚಂತಿರೆ ಮತ್ತಂ ಕೆಲ- |
ರಿಚ್ಚೈಯಿಪರ್ ಸ್ವಂತಮುಮನಿಕಾರೈತ್ವಮುಮಂ || ಶ. ಸ್ಮೃ. 52. ||

come ಪಂ, ಕೆಂ, ಬೆಂ; ಕೆಚ್ಚನೆ becomes also ಬೆಂ; and ಕೆಚ್ಚನೆ,

ಚ್ಚನೆಯಾದಿಗೆ ಚತ್ವಂ ಮೇ- |
ಣನಿತಱ ಮತ್ವಂ ಸುಕಾರಮೆತ್ವಕ್ಕಿತ್ವಂ. || ೧೯೩ ||

ಬೆಚ್ಚನೆ, ಪಚ್ಚನೆ, appear also as ಕಿಸು (or ಕೆಸು), ಬಿಸು and ಪಸು. Before Vowels ಪಚ್ಚನೆ becomes ಪಚ್ಚು.

ಪದಚ್ಛೇದಂ.—ಜನಿಯಿಸುಗುಂ ಪಚ್ಚನೆ ಕೆಚ್ಚನೆ ಬೆಚ್ಚನೆಗಳ ಚಕಾರದೊಳ್ ಮತ್ವಂ; ಕೆಚ್ಚನೆಯ ಆದಿಗೆ ಚತ್ವಂ; ಮೇಣ್ ಅನಿತಱ ಮತ್ವಂ ಸುಕಾರಂ, ಎತ್ವಕ್ಕೆ ಇತ್ವಂ.

ಅನ್ವಯಂ.—ಪಚ್ಚನೆ ಕೆಚ್ಚನೆ ಬೆಚ್ಚನೆಗಳ ಚಕಾರದೊಳ್ ಮತ್ವಂ ಜನಿಯಿಸುಗುಂ ಎಂಬುದನ್ವಯಂ.

ಟೀಕು.—ಅಸ್ವರಂ ನಿಲೆ, ಪರದೊಳೆಂಬುದನುವರ್ತನೆ—ಪಚ್ಚನೆ ಕೆಚ್ಚನೆ ಬೆಚ್ಚನೆಗಳ = ಪಚ್ಚನೆ ಕೆಚ್ಚನೆ ಬೆಚ್ಚನೆ ಎಂಬ ಶಬ್ದಂಗಳ; ಚಕಾರದೊಳ್ = ಚಕಾರದಲ್ಲಿ; ಮತ್ವಂ = ಮಕಾರಂ; ಜನಿಯಿಸುಗುಂ = ಹುಟ್ಟುವುದು; ಕೆಚ್ಚನೆಯ = ಕೆಚ್ಚನೆ ಎಂಬ ಶಬ್ದದ; ಆದಿಗೆ = ಮೊದಲ್ಗೆ; ಚತ್ವಂ = ಚಕಾರಂ ಜನಿಯಿಸುಗುಂ; ಮೇಣ್ = ಎಕಲ್ಪದಿಂದೆ; ಅನಿತಱ = ಅಷ್ಟು ಶಬ್ದಂಗಳ; ಮತ್ವಂ = ಮಕಾರಂ; ಸುಕಾರಂ = ಸುಕಾರಮಪ್ಪುದು; ಎತ್ವಕ್ಕೆ = ಆದಿಯ ಎಕಾರಕ್ಕೆ; ಇತ್ವಂ = ಇಕಾರ ಬರ್ಪುದು.

ವೃತ್ತಿ.—ಪಚ್ಚನೆ ಕೆಚ್ಚನೆ ಬೆಚ್ಚನೆಯೆಂಬಿವಱ ಚಕಾರಕ್ಕೆ ಮ್ ಎಂಬುದಕ್ಕುಂ; ಕೆಚ್ಚನೆಯಾದಿಯ ಕಕಾರಕ್ಕೊರ್ಮೆ ಚಕಾರಮಕ್ಕುಂ; ಈ ಶಬ್ದಂಗಳ ಕಡೆಯ ಮಕಾರಕ್ಕೆ ಸುಕಾರಮುಮಾದಿಯ ಎತ್ವಕ್ಕಿತ್ವಮುಮಕ್ಕುಂ.

ಪ್ರಯೋಗಂ.—ಮಕಾರಕ್ಕೆ—ಪಂದೊಲ್, ಪಂದೊವಲ್, ಪಂದಲೆ, ಪಂದಳಿರ್.

"ಪಂದಳಿರ ತೋರಣಂ ತ- |
ಳ್ತೊಂದಿದ ಕೆಂಗುಡಿಯ ಪುಡಿಯ ಮುತ್ತಿನ ಕೊಡೆ ಚೆ- ||
ಲ್ವಿಂದೆಸೆವ ಮಂಗಳಾನಕ- |
ದೊಂದುರವಂಬಗೆಗೆವಂದುದಂದರಮನೆಯೊಳ್" || 413 ||

ಕೆಂಗಾಱಿ (ಕೆಂಗಱಿ), ಕೆಂಗಱಿ, ಕೆಂಜೆಡೆ, ಕೆಂಗೊಡೆ, ಕೆಂದಳಿರ್, ಕೆಂಬಿಸಿಲ್, ಕೆಂಬಟ್ಟೆ;—ಬೆಂಗಲ್, ಬೆಂಗದಿರ್, ಬೆಂಬೊಳಲೆ, ಬೆನ್ನೀರ್.

"ಎನಿತುಂ ಕಾಯ್ದುಂ ಬೆನ್ನೀರ್ |
ಮನೆ ಸುಡದೆಂಬಂತೆ ನಿನಗವರ್ ನಿಲೆ ಕಾಯ್ದುಂ ||

ಮನದೊಳ್ಪೊಲ್ಲಮನೆಂದುಂ |
ನೆನೆಯರದಂ ನಂಬು ಕುರುಕುಲಾನ್ವಯಭಾನೂ" || 414 ||

ಚಕಾರಕ್ಕೆ—ಚೆಂಗಣಗಿಲೆ, ಚೆಂದೆಂಗು, ಚೆನ್ನೆಯ್ದಿಲ್, ಚೆಂಬೊನ್, ಚೆಂಬೋತಂ, ಚೆಂಗೊರಲ್, ಚೆಂದುಟಿ, ಚೆಂಗೋಲ್.

"ಅಲರ್ದಂಭೋರುಹಷಂಡಮುಳ್ಳಲರ್ದ ಚೆನ್ನೈದಿಲ್ಗೊಳಂ. . . ." || 415 ||

ಆದಿಯಿತ್ವಂ ಬೆರಸುಸುಕಾರಕ್ಕೆ – ಕಿಸುಗಣಗಿಲೆ, ಕಿಸುಗಲ್, ಕಿಸುಗಟ್ಟು, ಕಿಸುವೊನಲ್, ಕಿಸುವೊನ್, ಕಿಸುಸಂಜೆ; – ಬಿಸುಗದಿರ್, ಬಿಸುನೆತ್ತರ್, ಬಿಸುನೀರ್, ಬಿಸುಗಾಳಿ.

"ಪೋಲ್ತಂ ಕಿಸುಸಂಜೆ ಕವಿದ ನೀಲಾಚಲಮಂ" || 416 ||

"ಬಿಸುನೆತ್ತರ ಧಾರೆಗೆ ಬಾಯನೊಡ್ಡಿಮೆಯ್ವೆಣದೆ" || 417 ||

ಪಚ್ಚನೆ ಎಂಬುದರ್ಕೆ ಆದಿಯಿತ್ವಮಿಲ್ಲಾಗಿ— ಪಸುಂಗೞಿ ಪಸುರ್ವಂದರೆಂದಾಯ್ತು.

ಸ್ವರಂ ಪರಮಾಗೆ— ಪಚ್ಚೋಲೆ, ಪಚ್ಚಡಕೆ, ಪಚ್ಚೆಲೆ.

"ಪಚ್ಚೋಲೆ ಪಚ್ಚದೊಳೊಡಂಬಡೆ ಬಂದುವಿದಗ್ಧ. . ." || 418 ||

ಕೆಚ್ಚನೆ ಎಂಬುದರ್ಕೆ, ಮೇಣೆಂಬುದಱಿಂ— ಕೆಸಡಿ, ಕೆಸುರಿ, ಕೆಸೆಕ್ಕಿ.

ಸೂತ್ರಂ[1]. || ೧೮೩ ||

When, in (or without) compounds, ಡ್ is followed by

ಪದದ ಕಡೆಯ ಡಕಾರ- |
ಕ್ಕುದಯಿಪುದು ಱಕಾರಮಾ ಱಕಾರಕ್ಕೊದವಿ- |

[1]) ಱಕಾರಃ ಪದವಿಧೌ ಡಸ್ಯ ವ್ಯಂಜನೇಷು || ಭಾ. ಭೂ. 119. ||
(ವ್ಯಂಜನವು ಪರವಾದರೆ ಸಮಾಸವಿಧಿಯಲ್ಲಿ ಡಕಾರಕ್ಕೆ ಱಕಾರವುಂಟು.)
ಱಕಾರಸ್ಯ ರೇಫಃ || ಭಾ. ಭೂ. 121. ||
(ಱಕಾರಕ್ಕೆ ಸಮಾಸವಿಧಿಯಲ್ಲಿ ರಕಾರವುಂಟು.)

ಪಲ್ಲಟಿಸಿ ಡಕಾರದ ನೆಲೆ- |
ಯಲ್ಲಿ ಱಕಾರಂ ಱಕಾರದೊಳ್ ರೇಫಂ ತಾ- ||
ನೆಲ್ಲಿಯುಮಕ್ಕುಂ ಪದವಿಧಿ- |
ಯಲ್ಲಿ ಪರಂ ವ್ಯಂಜನಾದಿಯಾಗಿರೆ ಬಹುಳಂ || ಶ. ಸ್ಮೃ. 65. ||

a Consonant, it often becomes ೞ್; under the same circumstances ೞ್ often becomes ರ್.

ರ್ಪುದು ರೇಫಂ ವ್ಯಂಜನಪದ- |
ಮಿದಿರೊಳ್ಸಂದಿಸೆ ಸಮಾಸದೊಳ್ಬಹುಳತೆಯಿಂ. || ೧೯೪ ||

ಪದಚ್ಛೇದಂ.— ಪದದ ಕಡೆಯಣ ಡಕಾರಕ್ಕೆ ಉದಯಿಪುದು ೞಕಾರಂ, ಆ ೞಕಾರಕೆ ಒದವಿ ಇರ್ಪುದು ರೇಫಂ, ವ್ಯಂಜನಪದಂ ಇದಿರೊಳ್ ಸಂದಿಸೆ, ಸಮಾಸದೊಳ್ ಬಹುಳತೆಯಿಂ.

ಅನ್ವಯಂ.— ಸಮಾಸದೊಳ್ ಬಹುಳತೆಯಿಂ, ವ್ಯಂಜನಪದಂ ಇದಿರೊಳ್ ಸಂದಿಸೆ, ಪದದ ಕಡೆಯಣ ಡಕಾರಕ್ಕೆ ೞಕಾರಂ ಉದಯಿಪುದು; ಆ ೞಕಾರಕ್ಕೆ ರೇಫಂ ಒದವಿ ಇರ್ಪುದು.

ಟೀಕು.— ಸಮಾಸದೊಳ್ = ಸಮಾಸದಲ್ಲಿ; ಬಹುಳತೆಯಿಂ = ಬಹುಳದಿಂದೆ ಸಮಾಸವಲ್ಲದಲ್ಲಿಯುಂ; ವ್ಯಂಜನಪದಂ = ವ್ಯಂಜನಾದಿಯ ಪದಂ; ಇದಿರೊಳ್ = ಪರದಲ್ಲಿ; ಸಂದಿಸೆ = ಇದಿರಾಗೆ; ಪದದ = ಪದಂಗಳ; ಕಡೆಯಣ = ಅಂತ್ಯದ; ಡಕಾರಕ್ಕೆ = ಡತ್ವಕ್ಕೆ; ೞಕಾರಂ = ೞವೆಂಬ ೞಕಾರಂ; ಉದಯಿಪುದು = ಹುಟ್ಟುವುದು; ಆ ೞಕಾರಕ್ಕೆ = ಆ ಪದದ ಕಡೆಯಣ ೞಕಾರಕ್ಕೆ; ರೇಫಂ = ರೇಫೆ; ಒದವಿರ್ಪುದು = ಪ್ರಾಪ್ತಿಸಿರ್ಪುದು.

ವೃತ್ತಿ.— ವ್ಯಂಜನಂ ಪರದೊಳಿರೆ, ಸಮಾಸದೊಳ್ ಮೊದಲ ಪದದ ಕಡೆಯಣ ಡಕಾರಕ್ಕೆ ೞಕಾರಮಕ್ಕುಂ; ೞಕಾರಕ್ಕೆ ರೇಫೆಯಕ್ಕುಂ; ಬಹುಳದಿಂದೆ ಅಸಮಾಸದೊಳಮಂತೆ.

ಪ್ರಯೋಗಂ.— ೞಕಾರಕ್ಕೆ— ಕಾೞ್ಕಿಚ್ಚು; ಕೋೞ್ಕಿಟ್ಟು; ನಾೞ್ಕಿಡಿ; ನೀೞ್ಕಿರಿಸಿದಂ; ಎರೞ್ಕಿಡಿ; ಎರೞ್ತಿರಂ; ಎರೞ್ಮಾರು; ಎರೞ್ಮಾತು.

“ . . . . ಎರೞ್ಮಾತಾಡಿ ಬೞ್ದಂ ಜಗ- |
ದ್ವಳಯಕ್ಕೊಳ್ನುಡಿಕಾಱನಾದ . . . . . .” || 419 ||

ರೇಫಕ್ಕೆ— ಕೆಸರ್ಮಲ್ಲಿಗೆ; ನೇಸರ್ವಯಣಂ; ಬೇಸರ್ನುಡಿ.

“ . . . . ಏರ್ಪೆತ್ತರೇರ್ಪೆತ್ತರಂ |
ಪದುಳಂ ಮಾೞ್ಪುದುಚಿತಂ . . . .” || 420 ||

ಅಸಮಾಸದ ೞಕಾರಕ್ಕೆ— ನೋೞ್ಪಿಂ; ಮಾೞ್ಪಿಂ; ಬೇೞ್ಪಿಂ; ಬಿಸುೞ್ಪಿಂ; ಬೆಗೞ್ಪಿಂ.

೧“ . . . ನಿನ್ನ ಬಗೆಗಳ ಭಂಗಿ ಕರಮುಕ್ಕೆವಮಾಗಿ ಮನಕೆ ತೋಱುಗುಂ” || 421 ||

ರೇಫೆಗೆ—ಕೆಸರ್ಮಸಗಿದುದು; ಏರ್ಮಾಣ್ದುದು; ಎರ್ಪೊತ್ತುದು; ನೇಸರ್ಮೂಡಿದುದು.

"ನೇಸರ್ಮೂಡಿದುದು ಮಿಱ್ಱಿ ಮೂಡುವ ತೆಱದಿಂ." || 422 ||

ಸೂತ್ರಂ || ೧೮೪ ||

In Compounds ಕಿಱಿದು becomes ಕುಱು, ಬೆಟ್ಟಿತು becomes ಬಿಱು, ಕೊಂಕು becomes ಕುಡು. In (and without) Compounds the Consonant before an ಱ may be doubled.

ಕಿಱಿದರ್ಕ್ಕಾದೇಶಂ ಕುಱು ||
ಬಿಱುವೆಂಬುದು ಬೆಟ್ಟಿತರ್ಕ್ಕೆ | ಕೊಂಕಿಂಗೆ ಕುಡೆಂ- ||
ದಱಿ | ರೇಫೆ ತಳ್ತ ವರ್ಣ- |
ಕ್ಕೆಱಗಿರ್ಕುಂ ದ್ವಿತ್ವವೃತ್ತಿಯಸಮಾಸದೊಳಂ. || ೧೯೫ ||

ಪದಚ್ಛೇದಂ.—ಕಿಱಿದರ್ಕ್ಕೆ ಆದೇಶಂ ಕುಱು; ಬಿಱುವೆಂಬುದು ಬೆಟ್ಟಿತರ್ಕ್ಕೆ; ಕೊಂಕಿಂಗೆ ಕುಡು ಎಂದು, ಅಱಿ! ರೇಫೆ ತಳ್ತ ವರ್ಣಕ್ಕೆ ಎಱಗಿ ಇರ್ಕುಂ ದ್ವಿತ್ವವೃತ್ತಿ ಅಸಮಾಸದೊಳಂ.

ಅನ್ವಯಂ.—ಕಿಱಿದರ್ಕ್ಕೆ ಕುಱು (ಎಂದು) ಆದೇಶಂ; ಬೆಟ್ಟಿತರ್ಕ್ಕೆ ಬಿಱುವೆಂಬುದು; ಕೊಂಕಿಂಗೆ ಕುಡು ಎಂದು, ಅಱಿ! ಅಸಮಾಸದೊಳಂ ರೇಫೆ ತಳ್ತ ವರ್ಣಕ್ಕೆ ದ್ವಿತ್ವವೃತ್ತಿ ಎಱಗಿ ಇರ್ಕುಂ.

ಟೀಕು.—ಕಿಱಿದರ್ಕ್ಕೆ = ಕಿಱಿದೆಂಬ ಶಬ್ದಕ್ಕೆ; ಕುಱು = ಕುಱು ಎಂದು; ಆದೇಶಂ = ಆದೇಶಂ ಬರ್ಪುದು; ಬೆಟ್ಟಿತರ್ಕ್ಕೆ = ಬೆಟ್ಟಿತೆಂಬ ಶಬ್ದಕ್ಕೆ; ಬಿಱು = ಬಿಱು ಎಂದು; ಎಂಬುದು = ಎಂಬಾದೇಶಂ ಬರ್ಪುದು; ಕೊಂಕಿಂಗೆ = ಕೊಂಕೆಂಬ ಶಬ್ದಕ್ಕೆ; ಕುಡು = ಕುಡು ಎಂದು; ಅಱಿ = ತಿಳಿ; ಅಸಮಾಸದೊಳಂ = ಸಮಾಸವಲ್ಲದಲ್ಲಿಯುಂ; ರೇಫೆ ತಳ್ತ ವರ್ಣಕ್ಕೆ = ರೇಫೆಗೂಡಿದಕ್ಷರಕ್ಕೆ; ದ್ವಿತ್ವವೃತ್ತಿ = ದ್ವಿತ್ವದ ವರ್ತನೆ; ಎಱಗಿರ್ಕುಂ = ಬರ್ಪುದು.

ವೃತ್ತಿ.—ಕಿಱಿದರ್ಕ್ಕೆ ಕುಱು ಎಂದು, ಬೆಟ್ಟಿತರ್ಕ್ಕೆ ಬಿಱು ಎಂದು, ಕೊಂಕಿಂಗೆ ಕುಡು ಎಂದು, ಆದೇಶಮಕ್ಕುಂ; ಸಮಾಸದೊಳಮಸಮಾಸದೊಳಂ ರೇಫೆಯಡರ್ದಕ್ಕರಕ್ಕೆ ದ್ವಿತ್ವಮಕ್ಕುಂ.

ಪ್ರಯೋಗಂ.—ಕುಱು, ಬಿಱು, ಕುಡು ಎಂಬವರ್ಕ್ಕೆ—ಕುಱುಗಿಡಂ, ಕುಱುದಡ್ಡಿ, ಕುಱುಗಡ್ಡಂ, ಕುಱುಗಂಟು, ಕುಱುದಱಿ ಕುಱುಗಯ್;

ಬಿಱುವೊಯಲ್, ಬಿಱುಬಿರ್ದಂ, ಬಿಱುವಡೆ, ಬಿಱುಗಾಳಿ; ಕುಡುವುರ್ವು, ಕುಡುಗೋಲ್, ಕುಡುವೆಱೆ, ಕುಡುದಾಡೆ, ಕುಡುಮಿಂಚು.

"ಬೀಸುವ ಬಿಱುಗಾಳಿ ಕೊಳ್ವ ಮಱೆ ಪೊಯ್ವ ಸಿಡಿಲ್ ಚಿಳಿಲೆಂಬ ಮಿಂಚು . . . ." || 423 ||

"ಕುಡುವೆಱೆ ತೋರ್ಪ ಕುಡುದಾಡೆ . . . ." || 424 ||

"ಕುಡುಮಿಂಚಂ ಮಸೆದನ್ನರಪ್ಪ ಪಲರೊಳ್ ಪೆಂಡಿರ್ . . ." || 425 ||

ದ್ವಿತ್ವಕ್ಕೆ— ನೀರ್ಗಿಚ್ಚು; ಊರ್ಪೇಲಿ; ನೀರ್ವಾನಸೆ; ಕಾರ್ಗಾಲ್.

"ನೀರ್ವಾನಸೆಯಂತೆ ವಿಜಯವಧು ನೆಲಸಿರ್ಪಳ್" || 426 ||

"ಕಾರ್ಗಾಲದಂತೆ ಮಿಂಚಿ ಪೊಳೆದುವೊ ಬಾಳ್ಗಳ್" || 427 ||

" ಅಸಮಾಸಕ್ಕೆ— ಬೇರ್ಪಱಿದುದು ತೇರ್ಪರಿದುದು; ನೀರ್ತಿಳಿದುದು; ಕೇರ್ಕೆಡೆದುದು.

"ಬೆಳಗಿದುದೆಂಟು ದೆಸೆ ನೀರ್ತಿಳಿದುದು" || 428 ||

ಸೂತ್ರಂ. || ೧೮೫ ||

Words denoting "Battle" are formed by a sort of ಬಹುವ್ರೀಹಿ in which one and the same word occurs twice, the first ending in ಅ, the second in ಇ.

ಇತರೇತರಕ್ರಿಯಾಸಂ- |
ಹತಮದು ತಾನಾವುದಲ್ಲಿ ಮತ್ತೆ ಬಹುವ್ರೀ- ||
ಹಿ ತಗುಳ್ಗುಮತ್ವವಿಧಿಸಂ- |
ಗತಮಾದಿಪದಾಂತ್ಯದಲ್ಲಿ ಚರಮಕ್ಕಿತ್ವಂ. || ೧೯೬ ||

ಪದಚ್ಛೇದಂ.— ಇತರೇತರಕ್ರಿಯಾಸಂಹತಂ ಅದು ತಾಂ ಅವುದು, ಅಲ್ಲಿ ಮತ್ತೆ ಬಹುವ್ರೀಹಿ ತಗುಳ್ಗುಂ; ಅತ್ವವಿಧಿಸಂಗತಂ ಆದಿಪದಾಂತ್ಯದಲ್ಲಿ, ಚರಮಕ್ಕೆ ಇತ್ವಂ.

ಅನ್ವಯಂ.— ಇತರೇತರಕ್ರಿಯಾಸಂಹತಂ ಅದು ತಾಂ ಆವುದು, ಅಲ್ಲಿ ಮತ್ತೆ ಬಹುವ್ರೀಹಿ ತಗುಳ್ಗುಂ; ಆದಿಪದಾಂತ್ಯದಲ್ಲಿ ಅತ್ವವಿಧಿ ಸಂಗತಂ, ಚರಮಕ್ಕೆ ಇತ್ವಂ.

ಟೀಕು.— ಇತರೇತರ = ಅನ್ಯೋನ್ಯವಾದ; ಕ್ರಿಯಾ = ಕ್ರಿಯೆಯಿಂದೆ; ಸಂಹತಂ = ಕಾದುವುದು; ಅದು ತಾಂ = ತಾನದು; ಆವುದು = ಆವುದುಂಟು; ಅಲ್ಲಿ = ಆ ಯುದ್ಧದಲ್ಲಿ; ಮತ್ತೆ = ಬಱಿಕಂ; ಬಹುವ್ರೀಹಿ = ಬಹುವ್ರೀಹಿಸಮಾಸಂ; ತಗುಳ್ಗುಂ = ಎಯ್ದುವುದು; ಆದಿ

ಪದಾಂತ್ಯದಲ್ಲಿ = ಮೊದಲ ಪದದ ಕಡೆಯಲ್ಲಿ; ಅತ್ವವಿಧಿ = ಅಕಾರದ ವಿಧಿ; ಸಂಗತಂ = ಎಯ್ದಲ್ಪಡುವುದು; ಚರಮಕ್ಕೆ = ಕಡೆಯ ಪದದಂತ್ಯಕ್ಕೆ; ಇತ್ವಂ = ಇಕಾರಂ ಎಯ್ದಲ್ಪಡುವುದು.

ವೃತ್ತಿ.— ಓರೊಂದಱ ಕ್ರಿಯೆಯನೋರೊಂದು ಕೈಕೊಂಡು ಮಾಡುವೆಡೆಯೊಳ್ ನೆಱೆವಣಿಗೆಯಂ ಪಡೆವುದದುವುಂ ಮತ್ತೆ ಬಹುವ್ರೀಹಿಯಕ್ಕುಂ; ಅದಱ ಮೊದಲ ಪದದ ಕಡೆಗಾತ್ವಮುಂ ಪರಪದದ ಕಡೆಗಿತ್ವಮುಮಕ್ಕುಂ.

ಪ್ರಯೋಗಂ.— ಖಡ್ಗದಿಂ ಖಡ್ಗದಿಂ ಮಾಡುವ ಯುದ್ಧಮಾವುದದು— ಖಡ್ಗಾಖಡ್ಗಿ.

ಮುಷ್ಟಿಯಿಂ ಮುಷ್ಟಿಯಿಂ ಮೈಯೊಡ್ಡಿ ಮಾಡುವ ಯುದ್ಧಮಾವುದದು— ಮುಷ್ಟಾಮುಷ್ಟಿ. ಹೆಲ್ಲಾಹೆಲ್ಲಿ; ದಾಱಾದಾಱಿ; ದೆಖ್ಖಾದೆಖ್ಖಿ; ಹಾಣಾಹಾಣಿ.— ಇಲ್ಲಿ ಘಟ್ಟಾಘಟ್ಟಿ ಎಂಬ ಯುದ್ಧಮುಂ ಮಲ್ಲಾಮಲ್ಲಿ ಎಂಬ ಯುದ್ಧಮುಂ ತತ್ಸಮಂಗಳ್.

ಸೂತ್ರಂ[1]. ‖ ೧೮೬ ‖

ಬಹುವ್ರೀಹಿ compounds terminate either in ಅ or ಇ. ಇಲ್ಲ at the end of the first word becomes ಇಲಿ; ಕೊಳ್ at the end of a compound becomes ಕುಲಿ.

ಅಡಸುವುದು ಬಹುವ್ರೀಹಿಯ ।
ಕಡೆಗತ್ವಂ ಬಹುಳಮಗ್ರಮಿಲ್ಲೆಂದಿರೆ ತಾಂ ‖
ಕಡೆಗಕ್ಕುಂ ಲಿತ್ವಂ ಕೊ- ।
ಳ್ವೆಡೆಯೊಳ್ಕುಲಿಯೆಂಬುದಕ್ಕುಮಂತ್ಯಾದೇಶಂ. ‖ ೧೯೬ ‖

1) ಬಹುವ್ರೀಹಾವದಂತೇ ‖ ಭಾ. ಭೂ. 150. ‖
(ಬಹುವ್ರೀಹಿಯಲ್ಲಿ ಕಡೆಯಲ್ಲಿ ಆಕಾರವುಂಟು; ಕೆಲವೆಡೆಯಲ್ಲಿ ಇಲ್ಲ.)
ಇಲ್ಲಸ್ಯೇಲಿಃ ‖ ಭಾ. ಭೂ. 151. ‖
(ಆ ಸಮಾಸದಲ್ಲಿ ಇಲ್ಲ ಎಂಬ ಶಬ್ದಕ್ಕೆ ಇಲಿ ಎಂಬಾದೇಶವು ಬರುವುದು.)

ಪಂಗದಿತ ಬಹುವ್ರೀಹಿಗೆ ।
ಚರಮದೊಳಕ್ಕುಂ ಯಥಾಪ್ರಯೋಗಮಕಾರಂ ‖
ಪರಪದಮಿಲ್ಲೆಂಬೊಂದಿದು ।
,ದೊರೆಕೊಂಡಿರೆ ಲಿತ್ವಮಂತ್ಯವರ್ಣಕ್ಕಕ್ಕುಂ ‖ ಶ. ಸ್ಮೃ. 53. ‖

ಪದಚ್ಛೇದಂ.— ಅಡಸುವುದು ಬಹುವ್ರೀಹಿಯ ಕಡೆಗೆ ಅತ್ವಂ ಬಹುಳಂ; ಅಗ್ರಂ ಇಲ್ಲ ಎಂದು ಇರೆ, ತಾಂ ಕಡೆಗೆ ಅಕ್ಕುಂ ಲಿತ್ವಂ; ಕೊಲ್ವ ಎಡೆಯೊಳ್ ಕುಲಿ ಎಂಬುದು ಅಕ್ಕುಂ ಅಂತ್ಯಾದೇಶಂ.

ಅನ್ವಯಂ.— ಬಹುವ್ರೀಹಿಯ ಕಡೆಗೆ ಬಹುಳಂ ಅತ್ವಂ ಅಡಸುವುದು; ಅಗ್ರಂ ಇಲ್ಲ ಎಂದು ಇರೆ, ಕಡೆಗೆ ಲಿತ್ವಂ ತಾಂ ಅಕ್ಕುಂ; ಕೊಲ್ವ ಎಡೆಯೊಳ್ ಕುಲಿ ಎಂಬುದು ಅಂತ್ಯಾದೇಶಂ ಅಕ್ಕುಂ.

ಟೀಕು.— ಬಹುವ್ರೀಹಿಯ = ಬಹುವ್ರೀಹಿಯ ಸಮಾಸದ; ಕಡೆಗೆ = ಅಂತ್ಯಕ್ಕೆ; ಬಹುಳಂ = ಬಹುಳವಾಗಿ; ಅತ್ವಂ = ಅಕಾರಂ; ಅಡಸುವುದು = ಪೊರ್ದುಗೆಯಪ್ಪದು, ಬಹುಳವೆಂಬುದರಿಂದೆ ಇಕಾರಮುಂ ಬರ್ಪುದೆಂಬುದರ್ಥಂ; ಅಗ್ರಂ = ಪದಾಂತ್ಯಂ; ಇಲ್ಲೆಂದು = ಇಲ್ಲವೆಂದು; ಇರೆ = ಇರೆ; ಕಡೆಗೆ = ಅಂತ್ಯಕ್ಕೆ; ಲಿತ್ವಂ = ಲಿಕಾರಂ; ತಾಂ = ತಾಂ; ಅಕ್ಕುಂ = ಆಗುವುದು; ಕೊಲ್ವೆಡೆಯೊಳ್ = ಕೊಲ್ವನೆಂಬೆಡೆಯಲ್ಲಿ; ಕುಲಿಯೆಂಬುದು = ಕುಲಿ ಎಂಬುದು; ಅಂತ್ಯಾದೇಶಂ = ಕಡೆಯಣ ಪದಕ್ಕಾದೇಶಂ; ಅಕ್ಕುಂ = ಅಪ್ಪುದು.

ವೃತ್ತಿ.— ಬಹುವ್ರೀಹಿಯ ಕಡೆಯೊಳಕಾರಮುಂ ಬಹುಳದಿನಿಕಾರಮುಮಕ್ಕುಂ; ಪರದೊಳಿಲ್ಲವೆಂದಿರೆ, ಕಡೆಯಕ್ಕರಕ್ಕೆ ಲಿತ್ವಮಕ್ಕುಂ; ಪರದೊಳ್ ಕೊಲ್ ಎಂದಿರೆ, ಕುಲಿ ಎಂದಾದೇಶಮಕ್ಕುಂ.

ಪ್ರಯೋಗಂ.— ಅತ್ವಕ್ಕೆ— ಅಲರ್ಗಣ್ಣಂ; ಬಟ್ಟದೊಡೆಯಂ; ಕೇಸಡಿಯಂ, ಕುಡುವಿಲ್ಲಂ; ಬಲ್ದಲೆಯಂ; ಅಗಲ್ದರದಂ.

"ಕುಡುವಿಲ್ಲನೆಚ್ಚ ಕೋಲು- |
ನ್ನಡೆದು ದಲನ್ದೊರ್ವನೆರ್ದೆಯನೊಳ್ಗಬ್ಬಮುಮೊ- ||
ಳ್ನುಡಿಯುಂಗೇಯಮುಮುರ್ಚ್ಚದ |
ಕಡುಗಲ್ಲೆರ್ದೆಯೆರ್ದೆಯನಮ್ಮು ಮೇಣುರ್ಚುಗುಮೇ" || 429 ||

ಇತ್ವಕ್ಕೆ— ಕಡುಗೆಲಸಿ; ನಿಡುಮೂಗಿ; ಚಲವಾದಿ; ಕಿತನಾಸಿ [ಕ್ರುತ್ತನಾಸಿ?]; ಕಡುಚಾಗಿ.

ಲಿಕಾರಕ್ಕೆ—ಪಲ್ಲಿಲಿವಾಯ್; ಅಗಿಲಿಲಿಗಂಧಂ; ಕೂರಿಲಿಕುಡುಗೋಲ್; ಬೆಳಗಿಲಿಗಣ್; ನಾಣಿಲಿವೆಣ್.

"ಸೊಗಯಿಸುಗುಮೆ ಪಲ್ಲಿಲಿವಾ- |
ಯಗಿಲಿಲಿಗಂಧಂ ಸಮಂತು ಕೂರಿಲಿಕುಡುಗೋಲ್ ||

ಮಿಗೆ ನಾಣಿಲಿಯೆನಿಸುವ ವಧು- |
ನಗೆಗೆಡೆಯಕ್ಕುಂ ಸಮಸ್ತಜಗತೀತಳದೊಳ್." || 430 ||

ಕುಲಿ ಎಂಬುದರ್ಕ್ಕೆ — ಮೀಂಗುಲಿ; ಆಱಿಗುಲಿ.

ಸಂಖ್ಯಾವಾಚಕಗಳು.

ಸೂತ್ರಂ[1]. || ೧೮೨ ||

ದೊರೆಕೊಳ್ವುದಖಿಳ ವೈಯಾ- |
ಕರಣರಿನೊಂದೆಂಬುದರ್ಕೊರೆಂಬಾದೇಶಂ ||
ಎರಡರ್ಕಮಿರಾದೇಶಂ |
ದೊರೆಕೊಳ್ಗುಮದಲ್ಲದಂದುಕಾರಾಭಾವಂ. || ೧೯೮ ||

For ಒಂದು the form ಒರ್ is substituted, for ಎರಡು the form ಇರ್ (regarding ಓರ್ and ಈರ್ see S. 180); the change of ಎರಡ್ into ಎರಬ್, etc. is taught by s. 183.

ಪದಚ್ಛೇದಂ. — ದೊರೆಕೊಳ್ವುದು ಅಖಿಳ ವೈಯಾಕರಣರಿಂ ಒಂದು ಎಂಬುದರ್ಕೆ ಒರ್ ಎಂಬ ಆದೇಶಂ; ಎರಡರ್ಕಂ ಇರಾದೇಶಂ ದೊರೆಕೊಳ್ಗುಂ, ಅದು ಅಲ್ಲದ ಅಂದು ಉಕಾರಾಭಾವಂ.

ಅನ್ವಯಂ. — ಅಖಿಳ ವೈಯಾಕರಣರಿಂ ಒಂದು ಎಂಬುದರ್ಕೆ ಒರ್ ಎಂಬಾದೇಶಂ ದೊರೆಕೊಳ್ವುದು; ಎರಡರ್ಕಂ ಇರಾದೇಶಂ ದೊರೆಕೊಳ್ಗುಂ, ಅದಲ್ಲದಂದು ಉಕಾರಾಭಾವಂ.

ಟೀಕು. — ಅಖಿಳ ವೈಯಾಕರಣರಿಂ = ಸಮಸ್ತ ವ್ಯಾಕರಣಜ್ಞರಿಂದ; ಒಂದೆಂಬುದರ್ಕೆ = ಒಂದೆಂಬ ಶಬ್ದಕ್ಕೆ; ಒರೆಂಬಾದೇಶಂ = ಒರ್ ಎಂಬಾದೇಶಂ; ದೊರೆಕೊಳ್ವುದು = ಬರ್ಪುದು; ಎರಡರ್ಕಂ = ಎರಡೆಂಬ ಶಬ್ದಕ್ಕೆಯುಂ; ಇರಾದೇಶಂ = ಇರ್ ಎಂಬಾದೇಶಂ;

---

1) ಏಕಾರ್ಥವಾಚಕಸ್ಯ ರೋಽನ್ತೇ || ಭಾ. ಭೂ. 153. ||
(ಒಂದು ಎಂಬುದಕ್ಕೆ ಕಡೆಯಲ್ಲಿ ರಕಾರವು ಬರುವುದು.)
ಇರಾದೇಶೋ ದ್ವ್ಯರ್ಥಸ್ಯ || ಭಾ. ಭೂ. 154. ||
(ಪೂರ್ವಪದವಾಗಿ ಬರುವ ಎರಡು ಎಂಬ ಶಬ್ದಕ್ಕೆ ಇರಾದೇಶವುಂಟು.)

ಒಂದೆಂಬುದರ್ಕೆ ರೇಫಂ |
ಸಂದಿಸುಗುಂ ಕಡೆಯೊಳೆರಡೆನಿಪ್ಪುದಱೊಳ್ತ- ||
ನೊಂದಿ ನೆಲಸುಗುಮಿರಾದೇ- |
ಶಂ ದಲ್ ಮೇಣ್ಮೇಲುಕಾರ ಲೋಪಮುದಕ್ಕುಂ || ಶ. ಸ್ಮೃ. 57. ||

ದೊರೆಕೊಳ್ಗುಂ = ಪ್ರಾಪ್ತಿಸುವುದು; ಅದಲ್ಲದಂದು = ಆ ಇರಾದೇಶಂ ಬಾರದಂದು; ಉಕಾರ = ಉಕಾರದ; ಅಭಾವಂ = ಅದರ್ಶನಂ ಪ್ರಾಪ್ತಿಸುವುದು. ಉಕಾರಾಭಾವವೆಂಬುದು ಉಕಾರಂ ಪೋಗಿ, ಪೂರ್ವಸೂತ್ರದಿಂ ಱಿಕಾರಾದೇಶಂ ಬರ್ಪುದೆಂಬುದರ್ಥಂ.

ವೃತ್ತಿ.—ಒಂದೆಂಬುದರ್ಕೊರಾದೇಶಂ; ಎರಡೆಂಬುದರ್ಕೆ ಇರಾದೇಶಂ; ಅದಲ್ಲದಂದುಕಾರಂ ಲೋಪವಾಗಿ, ಱಿಟಿಂ.

ಪ್ರಯೋಗಂ.— ಒರ್ನುಡಿ, ಒರ್ಪೆಸರ್, ಒರ್ಮೊದಲ್, ಒರ್ಪಿಡಿಗೂಳ್;—

“ಒರ್ಪಿಡಿಗೂೞಿಂ ಸಿತಗನ |
ಕಪ್ಪಡಮುಂ ರಾಜಸೇವೆಯಿಲ್ಲದೆ. . . .” || 431 ||

ಇರ್ಬೇನೆ, ಇರ್ತೆಱಿ, ಇರ್ಕಟ್ಟು, ಇರ್ತಡಿ.

“ಇರ್ತಡಿಯ ಪೂಮರಂಗಳ |
ಪೊರ್ತಂ ಕಪಿಕುಲದೊಳಾದೊಡಮೊಕ್ಕಲರಿಂ. . ” || 432 ||

ಉಕಾರಲೋಪಕ್ಕೆ— ಎರಟ್ಪಿಕ್ಕಿದುರೆ, ಎರಟ್ಪೆಮ್ಮತು.

ಉಕಾರಾಭಾವಮೆಂಬುದು ಸಲಕ್ಷಣವಾಗಿ ವ್ಯಂಜನಡಕಾರಕ್ಕೆ ಟಿಕಾರಾದೇಶವೆಲ್ಲಕ್ಕೆಯುಂ ಬರ್ಪುದು— ಮಾಟ್ಪಿದು, ಬಿಸುಟ್ಪಿದು ಎಂಬಂತೆ.

ಮೂಱು > ಮೂ (ಮು) (ಮುಂಕ್ಕ) ಮೂ

ಸೂತ್ರಂ.[1] || ೧೮೮ ||

ಮೂಱು becomes ಮೂ before Consonants, ಮುಯ್ಕ್ be-

ಚರಮಕ್ಕದರ್ಶನಂ ಮೂ- |
ಱಿರೆ ಬರೆ ಕಪವರ್ಗಮಗ್ರದೊಳ್ ದ್ವಿಭಾವಂ ||

[1]) ಕಪವರ್ಗಯೋಸ್ತ್ರ್ಯಾಖ್ಯಸ್ಯ ತಾವಾಗಮೌ ಬಹುಳಂ ಹ್ರಸ್ವಪೂರ್ವಾ ಚ || ಭಾ. ಭೂ. 155.||

(ದ್ವಿಗುವಿನಲ್ಲಿ ಕಪವರ್ಗಗಳು ಪರವಾದರೆ ಮೂಱು ಎಂಬುದರ ಪ್ರಥಮಕ್ಕೆ ವಿಕಲ್ಪವಾಗಿ ಹ್ರಸ್ವವು ಬರುವುದು.)

ತ್ರ್ಯಾದೀನಾಂ ವ್ಯಂಜನೇಷ್ವೇವ || ಭಾ. ಭೂ. 156 ||

(ವ್ಯಂಜನವು ಪರವಾದರೆ ಮೂಱು ಎಂಬ ಶಬ್ದದ ಕಡೆಯಕ್ಷರಕ್ಕೆ ಲೋಪವುಂಟು; ಆದರೆ ಸ್ವರಾದಿ ಶಬ್ದವು ಪರದೊಳಿರೆ ಅದಕ್ಕೆ ಲೋಪವಿಲ್ಲ.)

ಅದಿದೆನ್ನದೆ ಮೂಱಿಂಬೀ |
ಪದದಂತಂ ಲೋಪವೆಯ್ದುಗುಂ ಕಪವರ್ಗಂ ||
ತುದಿಯೊಳ್ ತಗುಳ್ದು ಪುದಿದಿರೆ |
ತದಾಗಮಂ ಹ್ರಸ್ವಪೂರ್ವಮಕ್ಕುಂ ಬಹುಳಂ || ಶ. ಸ್ಮೃ. 58. ||

fore Vowels. Before Consonants ಮೂ appears also as ಮು in which case the consonant is doubled.

ಪಿರಿದುಂ ಹ್ರಸ್ವಂ ಮೊದಲೊಳ್ |
ಸ್ವರಮಿದಿರಿರೆ ಮೂಱಿಱಿಲ್ಲಿ ಮುಯ್ಯಾದೇಶಂ. || ೧೯೯ ||

ಪದಚ್ಛೇದಂ.—ಚರಮಕ್ಕೆ ಅದರ್ಶನಂ, ಮೂಱು ಇರೆ; ಬರೆ ಕಪವರ್ಗಂ ಅಗ್ರದೊಳ್ ದ್ವಿರ್ಭಾವಂ; ಪಿರಿದುಂ ಹ್ರಸ್ವಂ ಮೊದಲೊಳ್; ಸ್ವರಂ ಇದಿರ್ ಇರೆ, ಮೂಱಿಱಿಲ್ಲಿ ಮುಯ್ಯಾದೇಶಂ.

ಅನ್ವಯಂ.—ಮೂಱು ಇರೆ, ಚರಮಕ್ಕೆ ಅದರ್ಶನಂ; ಕಪವರ್ಗಂ ಅಗ್ರದೊಳ್ ಬರೆ, ದ್ವಿರ್ಭಾವಂ; ಪಿರಿದುಂ ಮೊದಲೊಳ್ ಹ್ರಸ್ವಂ; ಸ್ವರಂ ಇದಿರಿರೆ, ಮೂಱಿಱಿಲ್ಲಿ ಮುಯ್ಯಾದೇಶಂ.

ಟೀಕು.—ಮೂಱು = ಮೂಱೆಂಬ ಶಬ್ದಂ; ಇರೆ = ಇರೆ; ಚರಮಕ್ಕೆ = ಅಂತ್ಯಕ್ಕೆ; ಅದರ್ಶನಂ = ಲೋಪವಪ್ಪುದು; ಕಪವರ್ಗಂ = ಕವರ್ಗ ಪವರ್ಗಂಗಳ್; ಅಗ್ರದೊಳ್ = ಮುಂದುಗಡೆಯಲ್ಲಿ; ಬರೆ = ಬರೆ; ದ್ವಿರ್ಭಾವಂ = ದ್ವಿತ್ವವಪ್ಪುದು; ಪಿರಿದುಂ = ವಿಶೇಷವಾಗಿ; ಮೊದಲೊಳ್ = ಆದಿಯಲ್ಲಿ; ಹ್ರಸ್ವಂ = ಹ್ರಸ್ವಂ ಬರ್ಪುದು; ಸ್ವರಂ = ಸ್ವರಾಕ್ಷರಂ; ಇದಿರಿರೆ = ಮುಂದಿರೆ; ಮೂಱಿಱಿಲ್ಲಿ = ಮೂಱೆಂಬ ಸಂಖ್ಯಾವಾಚಿಯಲ್ಲಿ; ಮುಯ್ಯಾದೇಶಂ = ಮುಯ್ಯೆಂಬಾದೇಶಂ ಬರ್ಪುದು.

ವೃತ್ತಿ.—ವ್ಯಂಜನಂ ಪರಮಾಗೆ, ಮೂಱೆಂಬುದಱ ಕಡೆಯಕ್ಕರಕ್ಕೆ ಲೋಪಂ; ಕವರ್ಗಪವರ್ಗಂಗಳ್ ಪರಮಾಗೆ, ತಮಗೆ ದ್ವಿತ್ವಮುಂ ಮೊದಲ್ಗೆ ಹ್ರಸ್ವಮುಮಕ್ಕುಂ; ಸ್ವರಂ ಪರಮಾಗೆ, ಮೂಱೆಂಬುದರ್ಕೆ ಮುಯ್ಯಾದೇಶಂ.

ಪ್ರಯೋಗಂ.—ಅಂತ್ಯಲೋಪಕ್ಕೆ—ಮೂಗೊಂಕು, ಮೂವಿಟ್ಟೆ, ಮೂವೆಳಸು, ಮೂನೂಱು, ಮೂಲೋಕ, ಮೂದಲೆ.

". . . . . ಮೂಲೋಕಕ್ಕೆ ಪೆಂಪಿಂದಗುಂ- |
ದಲೆಯಾಗಿರ್ದುದು. . . . ." || 433 ||

"ಮೂದಲೆವಾರದೆ ಮಾಣ್ಬುದೆ ದೇವ" || 434 ||

ಹ್ರಸ್ವದ್ವಿತ್ವಂಗಳ್ಗೆ—ಮುಕ್ಕಪ್ಪೆ, ಮುಕ್ಕೊಡೆ, ಮುಗ್ಗುಡ್ಡೆ, ಮುಪ್ಪೊಟಿಲ್, ಮುಪ್ಪುರಿ, ಮುಮ್ಮಾಱು.

"ಮುಕ್ಕೊಡೆ ಪುಷ್ಪವೃಷ್ಟಿ ಸುರದುಂದುಭಿ. . ." || 435 ||

ಪಿರಿದೆಂಬುದಱಿಂ ಕವರ್ಗಪವರ್ಗಮಲ್ಲದಲ್ಲಿಯುಮೀ ಲಕ್ಷಣಮಾಯ್ತು—ಮುಚ್ಚೊಟು, ಮುಚ್ಚವಡಿ, ಮುಚ್ಚೆರೆ, ಮುಚ್ಚಾಲ್.

ಪಿರಿದೆಂಬುದಱಿಂ ಕಪವರ್ಗಮಿರ್ದುಂ ಕೆಲವಱೊಳೀ ಮಾರ್ಗಮಿಲ್ಲ— ಮೂಗೇಣ್, ಮೂಗಾವುದಂ, ಮೂಗೋಱಿ, ಮೂಗಯ್.

"ಕಿಡೆ ಮೂಗೋಱಿಂ ಬೋಱಿಸಿ |
ನಡುದಲೆಯೊಳ್ ಮೆಱಿಸನೊಡೆದು. . . . ." || 436 ||

". . . . .ಪಣೆಯುಂ ಮೂಗಯ್ಯ ಮೂಗಯ್ಯನಿ- |
ತ್ತಾವಕ್ಕೆಯ್ದೆ ಕವಲ್ಕವಲ್ತು ಪಲವುಂ. . . ." || 437 ||

ಮುಯ್ಯೆಂಬುದರ್ಕೆ— ಮುಯ್ಯೆಂದಂ, ಮುಯ್ಯಡಿ; ಮುಯ್ಯಿರ್ಪ್ಯಾರಡಿ.

"ಚಲದಿಂ ಮುಯ್ಯೇೞಿರ್ ಸೂೞಿರ್ ಕ್ಷತ್ರಿಯರನಱಿಸಿ ಕೊಂದಿಕ್ಕಿ
ದಂ ಜಾಮದಗ್ನ್ಯಂ." || 438 ||

ಸೂತ್ರಂ.[1] || ೧೯೯ ||

ನಾಲ್ಕು, ಐದು and ಎಂಟು lose their last syllable; ಆಱು becomes ಅಱು, ಏೞು becomes ಏೞ್.

ಅಕ್ಕುಂ ಲೋಪಂ ನಾಲ್ಕೈ- |
ದರ್ಕ್ಕಂತ್ಯಕಾಱಱಾದಿಯೊಳ್ ಹ್ರಸ್ವಂ ತಾ- ||
ನಕ್ಕುಮದೇೞಿರ್ಕೇೞಿಂ- |
ದಕ್ಕುಂ ಚರಮಕ್ಕೆ ಲೋಪಮೆಣ್ಟರ್ಕ್ಕಕ್ಕುಂ || ೨೦೦ ||

ಪದಚ್ಛೇದಂ.— ಅಕ್ಕುಂ ಲೋಪಂ ನಾಲ್ಕು ಐದರ್ಕ್ಕೆ ಅಂತ್ಯಕ್ಕೆ; ಆಱು ಆದಿಯೊಳ್ ಹ್ರಸ್ವಂ ತಾಂ ಅಕ್ಕುಂ ಅದು; ಏೞರ್ಕೆ ಏೞ್ ಎಂದು ಅಕ್ಕುಂ; ಚರಮಕ್ಕೆ ಲೋಪಂ ಎಂಟರ್ಕ್ಕೆ ಅಕ್ಕುಂ.

---

1) ನ ಷಡರ್ಥವಾಚಕಸ್ಯಾಪಿ ತು ಹ್ರಸ್ವಸ್ತದಾದೇಃ || ಭಾ. ಭೂ. 157. ||
(ಆರು ಎಂಬ ಶಬ್ದದ ಆದಿಯ ಆಕಾರಕ್ಕೆ ಹ್ರಸ್ವವು ಬರುವುದು.)
ಸಪ್ತಾರ್ಥಾಭಿಧಾಯಿನಸ್ತು || ಭಾ. ಭೂ. 158. ||
(ಏಳು ಎಂಬ ಶಬ್ದದ ಉಪಾಂತ್ಯವ್ಯಂಜನಕ್ಕೆ ಲೋಪವಿಲ್ಲ.)

ಉಪಹತಿ ನಾಲ್ಕಯ್ದೆಂಬಿವ- |
ದುಪಧೆಯೊಳಾಱೆಂಬಿದರ್ಕೆ ಮೊದಲೊಳ್ ಹ್ರಸ್ವಂ ||
ಸ್ವಪರಸ್ವರ ಲೋಪಂ ವ- |
ರ್ತಿಪುದೇೞಱೊಳಂತ್ಯಲೋಪಮೆಂಟರ್ಕಕ್ಕುಂ || ಶ. ಸ್ಮೃ. 59. ||

ಅನ್ವಯಂ.— ನಾಲ್ಕೈದರ್ಕೆ ಅಂತ್ಯಕ್ಕೆ ಲೋಪಂ ಅಕ್ಕುಂ; ಆಱಱ ಆದಿಯೊಳ್ ಹ್ರಸ್ವಂ ತಾಂ ಅದು ಅಕ್ಕುಂ; ಏೞರ್ಕೆ ಏೞ್ ಎಂದು ಅಕ್ಕುಂ; ಎಂಟರ್ಕೆ ಚರಮಕ್ಕೆ ಲೋಪಂ ಅಕ್ಕುಂ

ಟೀಕು.— ನಾಲ್ಕೈದರ್ಕೆ = ನಾಲ್ಕೈದು ಎಂಬಾ ಸಂಖ್ಯಾವಾಚಿಗಳ್ಗೆ; ಅಂತ್ಯಕ್ಕೆ = ಕಡೆಯಣಕ್ಷರಕ್ಕೆ; ಲೋಪಂ = ಅದರ್ಶನಂ; ಅಕ್ಕುಂ = ಅಪ್ಪುದು; ಆಱಱ = ಆಱೆಂಬಾ ಸಂಖ್ಯಾವಾಚಿಯ; ಆದಿಯೊಳ್ = ಮೊದಲಲ್ಲಿ; ಹ್ರಸ್ವಂ = ಹ್ರಸ್ವಂ; ತಾನದು = ಅದು ತಾಂ; ಅಕ್ಕುಂ = ಅಪ್ಪುದು; ಏೞರ್ಕೆ = ಏೞೆಂಬ ಸಂಖ್ಯಾವಾಚಿಗೆ; ಏೞೆಂದು = ಏೞ್ ಎಂದು; ಅಕ್ಕುಂ = ಅಪ್ಪುದು; ಎಂಟರ್ಕೆ = ಎಂಟೆಂಬ ಸಂಖ್ಯಾವಾಚಿಗೆ; ಚರಮಕ್ಕೆ = ಅಂತ್ಯಾಕ್ಷರಕ್ಕೆ; ಲೋಪಂ = ಅದರ್ಶನಂ; ಅಕ್ಕುಂ = ಆಗುವುದು.

ವೃತ್ತಿ.— ನಾಲ್ಕೈದೆಂಬಿವರ ಕಡೆಯಕ್ಕರಕ್ಕೆ ಸ್ವರಂಬೆರಸುಲೋಪಮಕ್ಕುಂ; ಆಱೆಂಬುದಱ ಆದಿಗೆ ಹ್ರಸ್ವಂ; ಏೞು ಎಂಬುದರ್ಕೆ ಏೞ್ ಎಂದಾದೇಶಂ; ಎಂಟಱ ಕಡೆಗೆ ಲೋಪಂ.

ಪ್ರಯೋಗಂ.— ನಾಲ್ಕರ್ಕೆ— ನಾಲ್ವಡಿ, ನಾಲ್ವತ್ತು, ನಾಲ್ವೆರಲ್;

"ಉರಗಂ ಕೊಂಡಲ್ಲಿಂ ನಾ- |
ಲ್ವೆರಲನಿತಂ ಕಳೆದು, ಕಟ್ಟಿ ಮೇಗಂ ಬೇಗಂ ||
ಸರೆವಿಡುಗೆ, ಸುಡುಗೆ, ಕಡಿದಿರ- |
ದರಿದಿಕ್ಕುಗೆ, ನೀವಿ ಕಳೆಗೆ ನಿರ್ವಿಷಮಕ್ಕುಂ" || 439 ||

ಐದರ್ಕೆ— ಐವಡಿ, ಐಯ್ಗಂಡುಗಂ, ಐಸಾಸಿರಂ;

"ಕೇಱಿ ಪುಗಲೆನೆಯುಮೆಂತುಂ |
ಮೀಱಿದನಂ ಪೊಕ್ಕು ಸಾಲೆಯಂ ಶಾರ್ಙ್ಗಮನಂ- ||
ದೇಱಿಸಿದಪನಹಿಶಯ್ಯೆಯ |
ನೇಱಿದನೈಯ್ದಾಯಶಂಖಮಂ ಪೂರಿಸಿದಂ" || 440 ||

ಆಱರ್ಕೆ— ಅಱುವಡಿ; ಅಱುವತ್ತು; ಅಱುನೂಱು; ಅಱುದಿಂಗಳ್;

"ಅಱುದಿಂಗಳಾಯುಮುಂಟಿನೆ |
ಮಱುಗುವುದುಂ ನಲ್ಲರಲ್ಲಿ ತಮ್ಮಿಂ ಮುನ್ನಂ ||
ಪಱಿವಟ್ಟು ಬರೆ ಕನಲ್ವುದು
ಘುಱಿಪದೆ ನಾಲ್ವರ್ಗೆ ನರಕದುಃಖದ ತೆಱನಂ || 441 ||

ಏಟಿರ್ಕೆ — ಏಪ್ಪತ್ತು, ಏಪ್ಕಡಲ್, ಏೞ್ಕೋಟಿ, ಏೞ್ಪೊರೆ, ಏೞ್ಕಿರಿ.

ಪರಿಮರ್ದಿಸುವುದು ದುತ್ತೂ-
ರರಸಮನಿಂಬಾಗಿ ಪಿರಿದು ನೆಲದೊಳ್ ಲವಣಂ
ಬೆರಸೊರಸಿ ಕೊಂಡು ಪೂಸುಗೆ
ಕರಗುಗುಮೇೞ್ಪೊರೆಯೆನಿಪ್ಪ ಕುರುವುಂ ಬೇಗಂ. || 442 ||

ಎಂಟರ್ಕೆ — ಎಣ್ದೆಸೆ; ಎಣ್ಪತ್ತು; ಎಣ್ಬಾಸಿರಂ.

". . . . ನಿಜಸೈನ್ಯಭಾರದಿಂದೆಣ್ದೆಸೆಯಾನೆಗಳ್ ಕುಸಿದು ಕುರ್ಗಿದುವು. . . ." || 443 ||

ಸೂತ್ರಂ[1]. || ೧೯೦ ||

ಒಂಬತ್ತು before ಪತ್ತು becomes ತೊಂ; before ನೂಱು and ಸಾಸಿರ it becomes ಒಂಬಯ್.

ಪತ್ತು ಪರಮಾಗಲೊಡಮೊಂ- |
ಬತ್ತು ತೊಮ್ಮೆಂದಕ್ಕುಮಗ್ರದೊಳ್ನೂಱಿರೆ ಮೇಣ್ ||
ಮತ್ತಂ ಸಾಸಿರಮಿರೆ ನೆಲ- |
ಸಿತ್ತೊಂಬಯ್ಯೆಂದು ವಿಬುಧರಿಂದಾದೇಶಂ. || ೨೦೧ ||

ಪದಚ್ಛೇದಂ.— ಪತ್ತು ಪರಂ ಆಗಲೊಡಂ ಒಂಬತ್ತು, ತೊಮ್ ಎಂದು, ಅಕ್ಕುಂ; ಅಗ್ರದೊಳ್ ನೂಱು ಇರೆ ಮೇಣ್, ಮತ್ತಂ ಸಾಸಿರಂ ಇರೆ, ನೆಲಸಿತ್ತು, ಒಂಬಯ್ ಎಂದು, ವಿಬುಧರಿಂದೆ ಆದೇಶಂ.

---

1) ನವಾಖ್ಯಾಯಾಸ್ತೋಮಾದೇಶಃ ಪಙ್ಕ್ತೌ ಹತೌ || ಭಾ. ಭೂ. 159. ||
(ಒಂಬತ್ತು ಎಂಬ ಶಬ್ದಕ್ಕೆ ಪತ್ತು ಎಂಬುದು ಪರವಾದರೆ ತೊಂ ಎಂದಾದೇಶವಾಗುವುದು).
ಒಂಬಯ್ ಶತೇ || ಭಾ. ಭೂ. 160. ||
(ಒಂಬತ್ತು ಎಂಬುದಕ್ಕೆ ನೂರು ಎಂಬುದು ಪರವಾದರೆ ಒಂಬಯ್ ಎಂಬಾದೇಶವಾಗುವುದು).
ಸಹಸ್ರೇ ಚ || ಭಾ. ಭೂ. 161. ||
(ಸಾಸಿರ ಎಂಬ ಶಬ್ದವು ಪರವಾದರೆ ಒಂಬತ್ತಕ್ಕೆ ಒಂಬಯ್ ಎಂದಾಗುವುದು).

ಒಂಬತ್ತು ದಶಾಹತಿಯಿಂ |
ತೊಂಬತ್ತೆನೆ ಸಲ್ಗುಮಗ್ರದೊಳ್ ನೂಱಿರೆ ಮ- ||
ತ್ತೊಂಬಯ್ಯಾದೇಶಮನವ- ||
ಲಂಬಿಸುಗುಮದಂತೆ ಮುಂತೆ ಸಾಸಿರಮಿರೆಯುಂ || ಶ. ಸ್ಮೃ. 60. ||

ಅನ್ವಯಂ.— ಪತ್ತು ಪರಂ ಆಗಲೊಡಂ ಒಂಬತ್ತು, ತೊಮ್ ಎಂದು, ಅಕ್ಕುಂ; ಮೇಣ್ ಅಗ್ರದೊಳ್ ನೂಱು ಇರೆ, ಮತ್ತಂ ಸಾಸಿರಂ ಇರೆ, ವಿಬುಧರಿಂದೆ, ಒಂಬಯ್ ಎಂದು, ಆದೇಶಂ ನೆಲಸಿತ್ತು.

ಟೀಕು.— ಪತ್ತು = ಪತ್ತೆಂಬ ಸಂಖ್ಯಾವಾಚಿ; ಪರಂ = ಮುಂದಣ ಪದಂ; ಆಗಲೊಡಂ = ಆಗಲೊಡನೆ; ಒಂಬತ್ತು = ಒಂಬತ್ತೆಂಬುದು; ತೊಮೆಂದು = ತೊಮ್ ಎಂದು; ಅಕ್ಕುಂ = ಆಗುವುದು; ಮೇಣ್ = ಅಽಲ್ಲದೆ; ಅಗ್ರದೊಳ್ = ಮುಂದೆ; ನೂಱು = ನೂಱೆಂಬ ಸಂಖ್ಯಾವಾಚಿ; ಇರೆ = ಇರೆ; ಮತ್ತಂ = ಅದಲ್ಲದೆ; ಸಾಸಿರಂ = ಸಾಸಿರವೆಂಬುದು; ಇರೆ = ಪರದಲ್ಲಿರೆ; ವಿಬುಧರಿಂದೆ = ವಿದ್ವಾಂಸರಿಂದೆ; ಒಂಬಯ್ಯೆಂದು = ಒಂಬಯ್ ಎಂದು; ಆದೇಶಂ = ಆದೇಶಂ; ನೆಲಸಿತ್ತು = ನೆಲೆಗೊಂಡಿತ್ತು.

ವೃತ್ತಿ.— ಪತ್ತೆಂಬುದು ಪರಮಾದೊಡೆ ಒಂಬತ್ತರ್ಕೆ ತೊಮ್ ಎಂದಾದೇಶಮಕ್ಕುಂ; ಪರದೊಳ್ನೂಱಿರ್ದೊಡಂ ಮೇಣ್ಸಾಸಿರಮಿರ್ದೊಡಂ ಒಂಬತ್ತರ್ಕೆ ಒಂಬಯ್ ಎಂದಾದೇಶಮಕ್ಕುಂ.

ಪ್ರಯೋಗಂ.— ತೊಂಬತ್ತು; ಒಂಬಯ್ನೂಱು, ಒಂಬಯ್ಸಾಸಿರಂ.

" . . . . ತೊಂಬತ್ತೊಂಬ-
ಯ್ಸಾಸಿರ ಯೋಜನಮಂ ನೆಗೆ- |
ದೀ ಸುರಗಿರಿ . . . . " || 444 ||

ಸೂತ್ರಂ[1]. || ೧೯೦ ||

ಪತ್ತು before ಸಾಸಿರ becomes ಪಯಿನ್; (before Vowels and Consonants) ನೂಱು and ಸಾಸಿರ may become ನೂಱ್, ಸಾಸಿರ್.

ಪತ್ತರ್ಕೆ ಪಯಿಂನೆಂದಾ- |
ದತ್ತಾದೇಶಂ ಸಮಂತು ಸಾಸಿರಮಿದಿರೊಳ್ |
ಪತ್ತುಗೆಗೊಳೆ ನೂಱಿರ್ಕಂ |
ಮತ್ತಂ ಸಾಸಿರಕಮಂತ್ಯಲೋಪಂ ವಿರಳಂ. || ೨೦೨ ||

1) ದಶಾಖ್ಯಾಯಾಃ ಪಯಿನ್ || ಭಾ. ಭೂ. 162. ||
(ಪತ್ತು ಎಂಬುದಕ್ಕೆ ಸಾಸಿರ ಎಂಬ ಶಬ್ದವು ಪರವಾದರೆ ಪಯಿನ್ ಎಂಬಾದೇಶವಾಗುವುದು.)

ಸಾಸಿರಮಿರೆ ಮುಂದೊತ್ತಿ ಸ- |
ಮಾಸದೊಳಕ್ಕುಂ ಪಯಿನ್ನದರ್ಕೆ ಯಥೋಕ್ತಂ ||
ಶಾಸಿಸುವರ್ ನೂಱಿರ್ಕಂ |
ಸಾಸಿರಕಂ ಪ್ರಾಂತಲೋಪಮಂ ಕೆಲವೆಡೆಯೊಳ್ || ಶ. ಸ್ಮೃ. 62. ||

ಪದಚ್ಛೇದಂ.— ಪತ್ತರ್ಕೆ, ಪಯಿನ್ ಎಂದು, ಆದತ್ತು ಆದೇಶಂ ಸಮಂತು, ಸಾಸಿರಂ ಇದಿರೊಳ್ ಪತ್ತುಗೆಗೊಳೆ; ನೂಱಿರ್ಕಂ ಮತ್ತಂ ಸಾಸಿರಕಂ ಅಂತ್ಯಲೋಪಂ ವಿರಳಂ.

ಅನ್ವಯಂ.— ಸಾಸಿರಂ ಇದಿರೊಳ್ ಪತ್ತುಗೆಗೊಳೆ, ಪತ್ತರ್ಕೆ, ಪಯಿನ್ನೆಂದು, ಸಮಂತು ಆದೇಶಂ ಆದತ್ತು; ನೂಱಿರ್ಕಂ ಮತ್ತಂ ಸಾಸಿರಕಂ ವಿರಳಂ ಅಂತ್ಯಲೋಪಂ.

ಟೀಕು.— ಸಾಸಿರಂ = ಸಾಸಿರವೆಂಬ ಶಬ್ದಂ; ಇದಿರೊಳ್ = ಮುಂತೆ; ಪತ್ತುಗೆಗೊಳೆ = ಪೊರ್ದುಗೆಗೊಳೆ; ಪತ್ತರ್ಕೆ = ಪತ್ತೆಂಬುದಕ್ಕೆ; ಪಯಿನ್ನೆಂದು = ಪಯಿನ್ ಎಂದು; ಸಮಂತು = ಹಾಗೆ; ಆದೇಶಂ = ಆದೇಶಂ; ಆದತ್ತು = ಆಯಿತ್ತು; ನೂಱಿರ್ಕಂ = ನೂಱೆಂಬುದಕ್ಕಂ; ಮತ್ತಂ = ಬಳಿಕಂ; ಸಾಸಿರಕಂ = ಸಾಸಿರವೆಂಬುದಕ್ಕಂ, ಸ್ವರವ್ಯಂಜನಂಗಳಾವುವು ಪರವಾದೊಡಂ; ವಿರಳಂ = ನೂಱು ಎಂಬುದಱ ಉಕಾರಂ ಸಾಸಿರವೆಂಬುವದಱ ಅಕಾರಂ ವಿರಳವಾಗಿ; ಅಂತ್ಯಲೋಪಂ = ಅಂತ್ಯದ ಲೋಪಂ ಆಯಿತ್ತು.

ವೃತ್ತಿ.— ಸಾಸಿರಂ ಪರದೊಳಿರೆ, ಪತ್ತರ್ಕೆ ಪಯಿನ್ನೆಂದು, ಆದೇಶಂ; ನೂಱಿರ್ಕಂ ಮತ್ತಂ ಸಾಸಿರಕ್ಕಂ ಕಿಱಿದೆಡೆಯೊಳ್ ಅಂತ್ಯಲೋಪಮಕ್ಕುಂ.

ಪ್ರಯೋಗಂ.— ಪತ್ತರ್ಕೆ — ಪಯಿಂಛಾಸಿರಂ.

"ಪಡಲಿಟ್ಟಂತಿರೆ ಮಾಱ್ಪಿನೋವದೆ ಪಯಿಂಛಾಸಿರ್ವರಂ ಯುದ್ಧದೊಳ್" || 445 ||

ಅಂತ್ಯಲೋಪಕ್ಕೆ — ನೂರ್ಮಡಿ, ನೂರ್ಮಾತು, ನೂರ್ಛಾಸಿರಂ; ಸಾಸಿರ್ಮಡಿ, ಸಾಸಿರ್ವರ್, ಸಾಸಿರ್ವಸಿತೆಯರ್.

"......ಅಯ್ಸಾಸಿರ್ವರ್ ಪ್ರಿಯತನೂಭವರ್" || 446 ||

ಸೂತ್ರಂ[1]. || ೧೯೨ ||

ಪತ್ತು before ಒಂದು and ಎರಡು becomes ಪನ್, be-

ಪತ್ತರ್ಕೆ ಪನ್ನೆನಿಕ್ಕುಮು-|
ದುತ್ತರಕೊಂದೆರಡು ನೆಲಸೆ ಪದಿಯೆಂದಕ್ಕುಂ ||

---

1) ಪನ್ನೇಕದ್ವ್ಯರ್ಥಯೋಃ || ಶಾ. ಭೂ. 163. ||
(ಪತ್ತು ಎಂಬ ಶಬ್ದಕ್ಕೆ ಒಂದು, ಎರಡು ಎಂಬಿವು ಪರವಾದರೆ ಪನ್ ಎಂಬಾದೇಶವಾಗುವುದು).

fore ಮೂಱು and ನಾಲ್ಕು it is ಪದಿ, before all other numbers with an initial Vowel (excepting ಒಂಬತ್ತು) ಪದಿನ್.

ಮತ್ತೊದವಿ ಮೂಱು ನಾಲ್ಕಿರೆ |
(ಸುತ್ತೆಂ)ಸ್ವರಮಿರೆ ನಕಾರವಿಧಿ ಮುಂದೆಲ್ಲಂ. || ೨೦೩ ||

ಪದಚ್ಛೇದಂ.— ಪತ್ತರ್ಕೆ ಪನ್ ಎನಿಕ್ಕುಂ ಅದು, ಉತ್ತರಕೆ ಒಂದು ಎರಡು ನೆಲಸೆ; ಪದಿ ಎಂದು ಅಕ್ಕುಂ, ಮತ್ತೆ ಒದವಿ ಮೂಱು ನಾಲ್ಕು ಇರೆ; ಸುತ್ತೆಂ, ಸ್ವರಂ ಇರೆ, ನಕಾರವಿಧಿ ಮುಂದೆ ಎಲ್ಲಂ.

ಅನ್ವಯಂ.— ಉತ್ತರಕೆ ಒಂದು ಎರಡು ನೆಲಸೆ, ಪತ್ತರ್ಕೆ ಪನ್ ಅದು ಎನಿಕ್ಕುಂ; ಮತ್ತೆ ಮೂಱು ನಾಲ್ಕು ಒದವಿ ಇರೆ, ಪದಿ ಎಂದು, ಅಕ್ಕುಂ; ಸುತ್ತೆಂ, ಸ್ವರಂ ಮುಂದೆ ಇರೆ, ಎಲ್ಲಂ ನಕಾರವಿಧಿ.

ಟೀಕು;— ಉತ್ತರಕೆ = ಮುಂದಣ್ಗೆ; ಒಂದು = ಒಂದೆಂಬ ಶಬ್ದಂ; ಎರಡು = ಎರಡೆಂಬ ಶಬ್ದಂ; ನೆಲಸೆ = ನೆಲೆಗೊಳೆ; ಪತ್ತರ್ಕೆ = ಪತ್ತೆಂಬುದರ್ಕೆ; ಪನ್ = ಪನ್ ಎಂದು; ಅದು = ಅದು; ಎನಿಕ್ಕುಂ = ಎನಿಸುವುದು; ಮತ್ತೆ = ಬಳಿಕಂ; ಮೂಱು = ಮೂಱೆಂಬ ಶಬ್ದಂ; ನಾಲ್ಕು = ನಾಲ್ಕೆಂಬ ಶಬ್ದಂ ಮುಂದಣ್ಗೆ; ಒದವಿರೆ = ಪ್ರಾಪ್ತಿಸಿರೆ; ಪದಿಯೆಂದು = ಪದಿ ಎಂದು; ಅಕ್ಕುಂ = ಅಪ್ಪುದು; ಸುತ್ತೆಂ = ಭ್ರಮೆಯೆಂ; ಸ್ವರಂ = ಸ್ವರಾದಿಸಂಖ್ಯೆಗಳ್; ಇರೆ = ಮುಂದಿರೆ; ಮುಂದೆ = ಮುಂತೆ; ಎಲ್ಲಂ = ಎಲ್ಲಂ; ನಕಾರವಿಧಿ = ಪದಿ ಎಂಬುದರ ಮೇಲೆ ನಕಾರವಿಧಿ ಅಪ್ಪುದು.

ಅನ್ಯತ್ರ ಪದಿಃ || ಭಾ. ಭೂ. 164. ||
(ಮಿಕ್ಕ ಸಂಖ್ಯಾವಾಚಿಗಳು ಪರವಾದರೆ ಅದಕ್ಕೆ ಪದಿ ಎಂದಾದೇಶವಾಗುವುದು.)
ಸ್ವರಾದೌ ನಾಗಮಃ || ಭಾ. ಭೂ. 165. ||
(ಆ ಶಬ್ದಕ್ಕೆ ಸ್ವರಾದಿಯಾದ ಸಂಖ್ಯಾವಾಚಿಯು ಪರವಾದರೆ ಪದಿ ಎಂದಾದೇಶವಾಗುವುದು; ಮತ್ತು ಮುಂದೆ ನಕಾರಾಗಮು ಬರುವುದು).

ಒಂದೆರಡೆಂಬಿವು ಪರದೊಳ್ |
ಸಂದಿಸೆ ಪತ್ತರ್ಕೆ ಪನ್ನೆನಿಕ್ಕುಂ ರೂಪಂ ||
ಮುಂದೆ ಪೆಱವೊಂದಿ ನಿಲೆ ಪದಿ |
ಯೆಂದಕ್ಕುಂ ಸ್ವರದೊಳಮದರ್ಕೆ ನಾಗಮಮಕ್ಕುಂ || ಶ. ಸ್ಮೃ. 61. ||

ವೃತ್ತಿ.—ಒಂದೆಂಬುದುಮೆರಡೆಂಬುದುಂ ಪರಮಾಗೆ, ಪತ್ತರ್ಕೆ ಪನ್ ಎಂದಾದೇಶಮಕ್ಕುಂ; ಮತ್ತೆ ಮೂಱು ಮೇಣ್ ನಾಲ್ಕು ಪರಮಾಗೆ, ಪತ್ತರ್ಕೆ, ಪದಿ ಎಂದು, ಆದೇಶಂ; ಸ್ವರಪರಮಾಗೆ, ಮುಂದೆಲ್ಲಂ ನಕಾರಾಗಮಮಕ್ಕುಂ.

ಪ್ರಯೋಗಂ.—ಪನ್ ಎಂಬುದರ್ಕೆ—ಪನ್ನೊಂದು, ಪನ್ನೆರಡು.
ಪದಿ ಎಂಬುದರ್ಕೆ—ಪದಿಮೂಱು, ಪದಿನಾಲ್ಕು.

"ಸಾರಲ್ ಸಲ್ಲದು ಪನ್ನೆರಚ್ಛಿರಿಸಮುಂ ನಾಡಂ" || 447 ||

"ಪದಿನಾಲ್ಕು ಬಾಯಂ ತೆಱೆದೊಡೆ ಪದಿನಾಲ್ಕು ಲೋಕದಂತಿರ್ಪುದು" || 448 ||

ನಕಾರಕ್ಕೆ—ಪದಿನೈದು, ಪದಿನಾಱು, ಪದಿನೇೞು, ಪದಿನೆಂಟು. ಎಲ್ಲವೆಂಬುದಱಿಂದೊಂಬತ್ತರ್ಕಿಲ್ಲ.

ಸೂತ್ರ. || ೧೯೩ ||

> A 9th class of Compounds appears in Repetition-compounds (ವೀಪ್ಸಾಸಮಾಸಂ). In forming them of Adverbs (ಅವ್ಯಯಂ) and imitative sounds (ಅನುಕೃತಿ) ending in ನೆ, the ನೆ of the first word is dropped so that it ends in ಅ. Such a final ಅ originates also in Non-adverbs, ನಡು and ಕಡೆ receiving the forms ನಟ್ಟ, ಕಟ್ಟ.

ಅತಿಶಯತರಾರ್ಥವೀಪ್ಸಾ- |
ನ್ವಿತನಾಂತಾವ್ಯಯಪದಕ್ಕಮನುಕೃತಿಪದಕಂ ||
ಕೃತಮಂತ್ಯಲೋಪಮಿತರಾ- |
ಗತಮತ್ವಂ ನಡುವಿನಂತೆ ಕಡೆಗಂ ಟತ್ವಂ. || ೨೦೪ ||

ಪದಚ್ಛೇದಂ.—ಅತಿಶಯತರಾರ್ಥವೀಪ್ಸಾನ್ವಿತನಾಂತಾವ್ಯಯಪದಕ್ಕಂ ಅನುಕೃತಿಪದಕಂ ಕೃತಂ ಅಂತ್ಯಲೋಪಂ; ಇತರಾಗತಂ ಅತ್ವಂ, ನಡುವಿನಂತೆ ಕಡೆಗಂ ಟತ್ವಂ.

ಅನ್ವಯಂ.—ಅತಿಶಯತರಾರ್ಥವೀಪ್ಸಾನ್ವಿತನಾಂತಾವ್ಯಯಪದಕ್ಕಂ ಅನುಕೃತಿಪದಕಂ ಅಂತ್ಯಲೋಪಂ ಕೃತಂ; ಅತ್ವಂ ಇತರಾಗತಂ, ನಡುವಿನಂತೆ ಕಡೆಗಂ ಟತ್ವಂ.

ಟೀಕು.—ಅತಿಶಯತರ=ಅತ್ಯಂತಾತಿಶಯವಾದ; ಅರ್ಥ=ಅರ್ಥವನುಳ್ಳ; ವೀಪ್ಸಾ=ಇಚ್ಛೆಯೊಡನೆ; ಅನ್ವಿತ=ಕೂಡಲ್ಪಟ್ಟ; ನಾಂತ=ನಕಾರಾಂತವಾದ; ಅವ್ಯಯಪದಕ್ಕಂ=ಅವ್ಯಯ

ಪದಂಗಳ್ಗೆಯುಂ; ಅನುಕೃತಿಪದಂ = ಅನುಕರಣಪದಂಗಳ್ಗೆಯುಂ; ಅಂತ್ಯಲೋಪಂ = ಕಡೆಯ ಅಕ್ಷರದ ಲೋಪಂ; ಕೃತಂ = ಮಾಡಲ್ಪಡುವುದು; ಅತ್ವಂ = ದ್ವಿರುಕ್ತಿಯಾದ ನಡು ಕಡೆ ಎಂಬ (ಎರಡು) ಶಬ್ದಂಗಳ ಮೊದಲ ಪದದ ಕಡೆಗೆ ಅಕಾರಂ; ಇತರ = ಅನ್ಯವಾಗಿ; ಅಗತಂ = ಬರ್ಪುದು; ನಡುವಿನಂತೆ = ನಡುವೆಂಬ ಶಬ್ದದ ಹಾಗೆ; ಕಡೆಗಂ = ಕಡೆಯೆಂಬ ಶಬ್ದದ ಡಕಾರಕ್ಕಂ; ಟತ್ವಂ = ಟಕಾರಂ ಬರ್ಪುದು.

ವೃತ್ತಿ.—ಅತಿಶಯತರಾರ್ಥಮಂ ನುಡಿವ ವೀಪ್ಸೆಯ ನಾಂತಂಗಳಪ್ಪ ವ್ಯಯಂಗಳ್ಗಂ ಅನುಕೃತಿಪದಂಗಳ್ಗಂ ಮೊದಲ ಪದದ ಕಡೆಯಕ್ಕರಕ್ಕೆ ಲೋಪಂ; ಅವ್ಯಯಮನುಕರಣಮಲ್ಲದ ಕೆಲವು ಪದಂಗಳೊಳಕಾರಮುಂ ಮುಂತೆ ಪೇೞ್ದ ನಡುವೆಂಬುದಱಂತೆ ಕಡೆಯೆಂಬುದಱ ಡಕಾರಕ್ಕೆ ಟಕಾರಮುಮಕ್ಕುಂ.

ಪ್ರಯೋಗಂ.—ಅವ್ಯಯಪದಾಂತಲೋಪಕ್ಕೆ—ಕಮ್ಮಕಮ್ಮನೆ; ತಣ್ಣತಣ್ಣನೆ; ಮೆಲ್ಲಮೆಲ್ಲನೆ; ಸಪ್ಪಸಪ್ಪನೆ; ತೊಪ್ಪತೊಪ್ಪನೆ; ನೊಪ್ಪನೊಪ್ಪನೆ.

"ತೆಪ್ಪತೆಪ್ಪನೆ ಪುರುಳ್. . . . ." || 449 ||

"ನೊಪ್ಪನೊಪ್ಪನೆ ಪೇೞ್ವಿಂದು. . . . ." || 450 ||

ಅನುಕರಣಾಂತಲೋಪಕ್ಕೆ—

". . . . . .ತಱತಱನೆ |
ನೇಸಮರ್ಿಡಿದುದು ಮಿೞ್ತು ಮೂಡುವ ತೆಱದಿಂ." || 451 ||

"ಗಱಗಱನೆ ಕಣ್ಣೀರ್ ಸುರಿಯೆ ಚಿಂತಿಪ ಪಾರ್ವನ. ." || 452 ||

". . . . . .ಚ- |
ಳಚಳನೆ ಮಿಂಚಿತ್ತು ಸಿಡಿಲ ಕೈದೀವಿಗೆವೊಲ್" || 453 ||

ಅತ್ವಂ ಬೆರಸುಟಕಾರಕ್ಕೆ—ನಟ್ಟನಡು; ಕಟ್ಟಕಡೆ.

". . . ಕಟ್ಟಕಡೆ ಪೆರ್ವಟ್ಟೆಯಂ ಕರಂಗೊಂಡು. . ." || 454 ||

ಸೂತ್ರಂ. || ೧೯೪ ||

In the same manner ತುದಿ and ಮೊದಲ್ become ತುತ್ತ, ಮೊತ್ತ.

ತುದಿ ಮೊದಲೆಂಬ ದಕಾರ- |
ಕ್ಕುದಯಿಸುಗುಂ ದ್ವಿತ್ವವೃತ್ತಿಯಿಂದೆ ತಕಾರಂ ||
ಮೊದಲೆಂಬ ಲಕಾರಕ್ಕ- |
ಪ್ಪುದದರ್ಶನವಿಧಿ ವಿಶೇಷಮಂ ನುಡಿವೆಡೆಯೊಳ್. || ೨೦೫ ||

ಪದಚ್ಛೇದಂ.— ತುದಿ ಮೊದಲ್ ಎಂಬ ದಕಾರಕ್ಕೆ ಉದಯಿಸುಗುಂ ದ್ವಿತ್ವವೃತ್ತಿಯಿಂದೆ ತಕಾರಂ; ಮೊದಲ್ ಎಂಬ ಲಕಾರಕ್ಕೆ ಅಪ್ಪುದು ಅದರ್ಶನವಿಧಿ ವಿಶೇಷಮಂ ನುಡಿವ ಎಡೆಯೊಳ್.

ಅನ್ವಯಂ.— ವಿಶೇಷಮಂ ನುಡಿವೆಡೆಯೊಳ್ ತುದಿ ಮೊದಲೆಂಬ ದಕಾರಕ್ಕೆ ದ್ವಿತ್ವವೃತ್ತಿಯಿಂದೆ ತಕಾರಂ ಉದಯಿಸುಗುಂ; ಮೊದಲ್ ಎಂಬ ಲಕಾರಕ್ಕೆ ಅದರ್ಶನವಿಧಿ ಅಪ್ಪುದು.

ಟೀಕು.— ವಿಶೇಷಮಂ ನುಡಿವೆಡೆಯೊಳ್ = ವಿಶೇಷವಂ ಪೇಳ್ವೆಡೆಯಲ್ಲಿ; ತುದಿ ಮೊದಲೆಂಬ ದಕಾರಕ್ಕೆ = ತುದಿ ಮೊದಲ್ ಎಂಬ ದತ್ವಕ್ಕೆ; ದ್ವಿತ್ವವೃತ್ತಿಯಿಂದೆ = ದ್ವಿರ್ಭಾವದ ವರ್ತನೆಯಿಂದೆ; ತಕಾರಂ = ತತ್ವಂ; ಉದಯಿಸುಗುಂ = ಹುಟ್ಟುವುದು; ಮೊದಲೆಂಬ ಲಕಾರಕ್ಕೆ = ಮೊದಲ್ ಎಂಬ ಶಬ್ದದ ಲತ್ವಕ್ಕೆ; ಅದರ್ಶನವಿಧಿ = ಲೋಪದ ವಿಧಿ; ಅಪ್ಪುದು = ಆಗುವುದು.

ವೃತ್ತಿ.— ವಿಶೇಷಿಸಿ ನುಡಿವೆಡೆಯೊಳ್ ತುದಿ ಮೊದಲೆಂಬಿವಱ ದಕಾರಕ್ಕೆ ದ್ವಿತ್ವಮಪ್ಪ ತಕಾರಾದೇಶಮುಂ ಮೊದಲೆಂಬುದಱ ಲಕಾರಕ್ಕೆ ಲೋಪಮುಮಕ್ಕುಂ.

ಪ್ರಯೋಗಂ.— ತುತ್ತತುದಿ; ಮೊತ್ತಮೊದಲ್.

ಸೂತ್ರಂ[1]. || ೧೯೪ ||

Regarding S. 193, also in pointing at a distant object (ದೂರಂ), in looking at (ಅಭೀಕ್ಷ್ಣಂ), in successive order (ವೀಪ್ಸೆ), in imitative sounds (ಅನುಕೃತಿ, ಅನುಕರಣಂ), in repeating

ದೂರಾಭೀಕ್ಷ್ಣವೀಪ್ಸೋ- |
ದಾರಾನುಕೃತಿಕ್ರಿಯಾಸಮಭಿಹಾರಸಮೀ- ||
ಪ್ಯೋರುತರಚಾಪಳಾದಿಗೆ |
ಸಾರಂ ಬುಧರಿಂ ಪದಕ್ಕೆ ಯುಗಳೋಚ್ಚರಣಂ. || ೨೦೬ ||

1) ವೀಪ್ಸಾನುಕರಣಾಭೀಕ್ಷ್ಣ್ಯೇ ಕ್ರಿಯಾಸಮಭಿಹಾರ ಸಾಮೀಪ್ಯಚಾಪಲಾದೌ ಪದಸ್ಯ ದ್ವಿರ್ವಚನಂ || ಭಾ. ಭೂ. 192. ||

(ವೀಪ್ಸೆ, ಅನುಕರಣ, ಆಭೀಕ್ಷ್ಣ್ಯ, ಕ್ರಿಯಾಸಮಭಿಹಾರ, ಸಾಮೀಪ್ಯ, ಚಾಪಲ ಮೊದಲಾದ ಅರ್ಥವಿರುವ ಪದಗಳಿಗೆ ದ್ವಿರಾವೃತ್ತಿಯುಂಟು.)

ಚಾಪಲ ವೀಪ್ಸಾಭೀಕ್ಷ್ಣ್ಯೇ ಸ- |
ಮೀಪಾನುಕೃತಿಕ್ರಿಯಾಸಮಭಿಹಾರಾದಿ ||
ವ್ಯಾಪನೆಯೊಳ್ ಪದಕಕ್ಕುಂ |
ರೂಪದ್ವಿತ್ವಂ ಯಥಾಪ್ರಯೋಗಾನುಗತಂ || ಶ. ಸ್ಮೃ. 64. ||

an action (ಕ್ರಿಯಾಸಮಭಿಹಾರಂ cf. S. 230), in pointing at a near object (ಸಮೀಪಂ), in agitation (fickleness, ಚಪಳಂ), Repetition of words (ಪದಯುಗಳೋಚ್ಚರಣಂ) is used.

ಪದಚ್ಛೇದಂ. — ದೂರಾಭೀಕ್ಷ್ಣವೀಪ್ಸೋದಾರಾನುಕೃತಿಕ್ರಿಯಾಸಮಭಿಹಾರಸಮೀಪೋರುತರಚಾಪಳಾದಿಗೆ ಸಾರಂ ಬುಧಾಂ ಪದಕ್ಕೆ ಯುಗಳೋಚ್ಚರಣಂ.

ಅನ್ವಯಂ. — ಬುಧರಿಂ ಪದಕ್ಕೆ ಯುಗಳೋಚ್ಚರಣಂ ಸಾರಂ ಎಂಬುದನ್ವಯಂ.

ಟೀಕು. — ದೂರ = ದೂರಕ್ಕೆ; ಅಭೀಕ್ಷ್ಣ = ಅಭಿಮುಖವಾಗಿ ನೋಡುವುದರ್ಕೆ; ವೀಪ್ಸಾ = ಇಚ್ಛೆಗೆ; ಉದಾರ = ಉದಾರವಾದ; ಅನುಕೃತಿ = ಅನುಕರಣಕ್ಕೆ; ಕ್ರಿಯಾಸಮಭಿಹಾರ = ಕ್ರಿಯೆಯನಭಿಮುಖವಾಗಿ ಮಾಡಿಕೊಂಬುದರ್ಕೆ; ಸಮೀಪ = ಸಮೀಪಕ್ಕೆ; ಉರುತರಚಾಪಳಾದಿಗೆ = ದೊಡ್ಡಿತ್ತಾದ ಚಪಲತ್ವಂ ಮೊದಲಾದುದರ್ಕೆ; ಬುಧರಿಂ = ವಿದ್ವಾಂಸರಿಂದೆ; ಪದಕ್ಕೆ = ಪದಂಗಳ್ಗೆ; ಯುಗಳೋಚ್ಚರಣಂ = ಎರಡು ವೇಳೆಯುಚ್ಚರಿಸುವುದು; ಸಾರಂ = ಶ್ರೇಷ್ಠವಪ್ಪದು.

ವೃತ್ತಿ. — ದೂರದೊಳಂ ಪ್ರತಿಮುಖಾವಲೋಕನದೊಳಂ ವೀಪ್ಸೆಯೊಳಂ ಅನುಕರಣದೊಳಂ ಕ್ರಿಯೆಯನಭಿಮುಖವಾಗಿ ತೆಗೆದುಕೊಳ್ವೆಡೆಯೊಳಂ ಸಮೀಪದೊಳಂ ಚಪಳತೆಯೊಳಂ ಪದನೆರಡು ಸೂಟಿಯುಚ್ಚರಿಪುದು.

ಪ್ರಯೋಗಂ. — ದೂರಕ್ಕೆ—"ಆತೋರ್ಪುದಾತೋರ್ಪುದೆ ಬಾನೊಳ್ ಧ್ವಜಪಟಂ." || 455 ||

ಅಭೀಕ್ಷ್ಣಕ್ಕೆ—

"ಗಿಳಿಯೊಡನೋದಿಯೋದಿ ನುಡಿಗಲ್ತು ಮದಾಲಸರಾಜಹಂಸಮಂ- |
ಡಳಿಯೊಡನಾಡಿಯಾಡಿ ನಡೆಗಲ್ತು ಕಳಾಪಿಗಳಾಟಮಂ ಮನಂ- ||
ಗೊಳೆ ನಡೆನೋಡಿನೋಡಿ ಕುಣಿಯಲ್ ನೆರೆಗಲ್ತು ಕಳಾಗುಣಂ ಪೊದ- |
ಟ್ಟಿಳವಡೆ ಬಾಲಭಾವದೊಳೆ ಬಾಲಕಿಯರ್ ಬಳೆವರ್ ನಿರಂತರಂ."
|| 456 ||

ವೀಪ್ಸೆಗೆ— "ಊರೂರೊಳ್ಕೇರಿಕೇರಿಯೊಳ್ಮನೆಮನೆಯೊಳ್." || 457 ||

ಅನುಕರಣಕ್ಕೆ— ಫುಲ್ಫುಲ್ಲೆನೆ; ಭೋರ್ಭೋರ್ರೆನೆ.

". . . . . ಭೋರ್ಭೋರ್- |
ರೆನೆ ಪಾಯ್ವುದು ಹಿಮನಗಕ್ಕೆ ಗಂಗಾಸ್ರೋತಂ". || 458 ||

ಕ್ರಿಯಾಸಮಭಿಹಾರಕ್ಕೆ—"ನಡೆನಡೆಯೆಂದು ನಡೆದರ್" || 459 ||

"ಇದಿರ್ಚಿದಿರ್ಚೆನೆ ಜಟಾಯು. . ." || 460 ||

ಸಮೀಪಕ್ಕೆ—"ಇದೆಯಿದೆ ಸಾರ್ಕೆಸಾರ್ಕೆ ಗಣಕ್ರಾವಳಿ ಪೇೞ್ದ ಮುಹೂರ್ತಂ || 461 ||

ಚಪಳತೆಗೆ—ಒಪ್ಪಿಸೊಪ್ಪಿಸು; ಅಣ್ಮಣ್ಮು—

ಇವರ್ಕೆಲ್ಲಂ ತ್ರಿಪ್ರಯೋಗಮೊಳವು—

"ಬೆಳಗೆಯ್ಗಳೊಳಿರ್ದ್ದೆತ್ತಂ |
ಕಳರವದಿಂ ಕಯ್ಯನೆತ್ತಿಥಲಲಲೆ ಎನುತುಂ ||
ಬಳೆಗಳ್ ಫುಲ್ಲುಫುಲ್ಲೆನೆ |
ಗಿಳಿಸೋವಾಕೆಗಳಿನೊಪ್ಪಗುಂ ಕೆಲವೆಡೆಯೊಳ್" || 462 ||

"ಒಡ್ಡೊಡ್ಡೊಡ್ಡೆನುತೊಡ್ಡಿ ಮೇಳದವಳ್ಕುಂಕುಮವಾರಿ ಕುಪ್ಪಳಿಸಿ ಪೊಯ್ದಳ್" || 463 ||

The Author says that he has done his best to elucidate the Compounds as they occur in the works of poets.

ಕವಿಮಾರ್ಗಗತಸಮಾಸಮ- |
ನವನೆನ್ನಱಿವನಿತನೆಯ್ದೆ ಪೇೞ್ದೆಂ ಲೋಕ- ||
ವ್ಯವಹಾರದಿಂದಮಿನ್ನುೞಿ- |
ದುವನಱಿವುದು ಶಬ್ದಪಾರಮಾರ್ಗಮಶಕ್ಯಂ. ||೨೦೭||

ಟೀಕು.—ಕವಿ = ಕವಿಗಳ; ಮಾರ್ಗ = ಮಾರ್ಗದಲ್ಲಿ; ಗತ = ಎಯ್ದಲ್ಪಟ್ಟ; ಸಮಾಸಮಂ = ಸಮಾಸಪದವಂ; ಅವಂ = ಆವಂ; ಎನ್ನಱಿವನಿತಂ = ಎನಗೆ ತಿಳಿವಷ್ಟಂ; ಎಯ್ದೆ = ಚೆನ್ನಾಗಿ; ಪೇೞ್ದೆಂ = ಹೇಳ್ದೆಂ; ಲೋಕವ್ಯವಹಾರದಿಂದಂ = ವೈಯಾಕರಣಲೋಕವ್ಯವಹಾರದಿಂದೆ; ಇನ್ನುೞಿದುವಂ = ಇನ್ನುಳಿದ ಸಮಾಸಂಗಳಂ; ಅಱಿವುದು = ತಿಳಿವುದು; ಶಬ್ದ = ಶಬ್ದಂಗಳ; ಪಾರಮಾರ್ಗಂ = ಕಡೆಯುನೆಯ್ದುವುದು; ಅಶಕ್ಯಂ = ಶಕ್ಯವಲ್ತು.

ಗದ್ಯಂ.— ಇದು ಸಮಸ್ತಶಾಬ್ದಿಕಜನಮನೋಜನಿತಶಬ್ದಸಂದೇಹಶಲ್ಯಚಾರುಚುಂಬಕಾಯಮಾನಾನೂನಕರ್ನಾಟಕಲಕ್ಷಣಶಿಕ್ಷಾಚಾರ್ಯಸುಕವಿಕೇತಿರಾಜವಿರಚಿತಮಪ್ಪ ಶಬ್ದಮಣಿದರ್ಪಣದೊಳ್ ಸಮಾಸಭೇದವಿವರಣಮೆಂಬ ತೃತೀಯಸಂಧಿ ಸಂಪೂರ್ಣಂ.

೩ನೆಯ ಅಧ್ಯಾಯಂ ಸಮಾಪ್ತಂ.

೪ನೆಯ ಅಧ್ಯಾಯಂ. IV. CHAPTER.

ತದ್ಧಿತಪ್ರಕರಣಂ.

ON SECONDARY NOMINAL BASES.

ಸೂತ್ರಂ[1]. || ೧೯೬ ||

ಪರಿನಿರ್ಮಿಪ ಮಾಱಾಡುವ |
ದೊರೆವಡೆದ ನಿಯೋಗದನೃತದಱಿತದ ಋಣದಾ- ||
ಚರಣದ ಶಿಲ್ಪದ ಮೂಲದ |
ನರನಂ ಪೇೞ್ವಲ್ಲಿ ಮಾೞ್ಕಿಗಪ್ರತ್ಯಯಮಂ. || ೨೦೮ ||

By the Suffix (ಪ್ರತ್ಯಯಂ) ಇಗ Nouns are formed denoting makers, changers (dealers), persons in employment, persons of untruth, of knowledge, of debt, of a certain profession and of manual art, and men of ancient times.

ಪದಚ್ಛೇದಂ.— ಪರಿನಿರ್ಮಿಪ ಮಾಱಾಡುವ ದೊರೆವಡೆದ ನಿಯೋಗದ ಅನೃತದ ಅಱಿತದ ಋಣದ ಆಚರಣದ ಶಿಲ್ಪದ ಮೂಲದ ನರನಂ ಪೇೞ್ವಲ್ಲಿ ಮಾೞ್ಕೆ ಇಗಪ್ರತ್ಯಯಮಂ.

ಅನ್ವಯಂ.— ಇಗಪ್ರತ್ಯಯಮಂ ಮಾೞ್ಕೆ ಎಂಬುದನ್ವಯಂ.

---

1) ತದಸ್ಯ ಪಣ್ಯಂ ಶಿಲ್ಪಂ ನಿಯೋಗಕ್ಷೇತ್ಯಸ್ಮಿನ್ನಿಗಃ || ಭಾ. ಭೂ. 166. ||
(ಅದು ಈತನಿಗೆ ವ್ಯವಹಾರ, ಕೆಲಸ, ನಿಯೋಗ ಎಂಬೀ ಅರ್ಥದಲ್ಲಿ ಇಗಪ್ರತ್ಯಯವಾಗುವುದು.)
ತದ್ವೇತ್ತ್ಯಧೀತೇ ವಾ || ಭಾ. ಭೂ. 167. ||
(ಇಗಪ್ರತ್ಯಯವನ್ನು ಅರಿತವ ಓದುವ ಎಂಬರ್ಥದಲ್ಲಿಯೂ ಇಡುವರು.)
ತದಾಚರತಿ || ಭಾ. ಭೂ. 168. ||
(ಆಚರಿಸುವ ಎಂಬ ಅರ್ಥದಲ್ಲಿ ಇಗಪ್ರತ್ಯಯವು ಬರುವುದು.)

ಇವು ಪಣ್ಯಮಿವರ್ಗೆ ಮೇಣಿಂ- |
ತಿವು ಶಿಲ್ಪಂ ಮೇಣ್ ನಿಯೋಗಮಿವನಱಿವಂ ಮೇ- ||
ಣಿವನಾಚರಿಸುವನೆಂದಿಂ- |
ತಿವಱೊಳಿಗಪ್ರತ್ಯಯಂ ಯಥೋಕ್ತಯನಕ್ಕುಂ || ಶ. ಸ್ಮೃ. 68. ||

ಟೀಕು.—ಪರಿನಿರ್ಮಿಪ = ಆವುದನಾದೊಡಂ ಮಾಡುವ; ಮಾಱಾಡುವ = ಆವುದನಾದೊಡಂ ಮಾರಿಯಾಡುವ; ದೊರೆವಡೆದ ನಿಯೋಗದ = ಪ್ರಸಿದ್ಧಿವಡೆದ ನಿಯೋಗದ; ಅನೃತದ = ಸಟೆಯ; ಅಱಿತದ = ತಿಳಿವಳಿಕೆಯ; ಋಣದ = ಸಾಲದ; ಆಚರಣದ = ಆಚರಣೆಯ; ಶಿಲ್ಪದ = ಶಿಲ್ಪದ ಕೆಲಸ?; ಮೂಲದ = ಮೂಲದ; ನರನಂ = ಮನುಷ್ಯನಂ; ಪೇೞ್ದಲ್ಲಿ = ಪೇೞ್ದೆಡೆಯಲ್ಲಿ; ಇಗಪ್ರತ್ಯಯಮಂ = ಇಗ ಎಂಬ ಪ್ರತ್ಯಯಮಂ; ಮಾೞ್ಕೆ = ಮಾಡುಗೆ.

ವೃತ್ತಿ.—ಮಾಡುವನೊಳಂ ಮಾಱುವನೊಳಂ ನಿಯೋಗಿಯೊಳಂ ಅನೃತದಲ್ಲಿಯುಂ ಅಱಿತದಲ್ಲಿಯುಂ ಋಣಿಯೊಳಂ ವರ್ತಕನೊಳಂ (ಆಚರಣದಲ್ಲಿಯುಂ) ಶಿಲ್ಪಕನಲ್ಲಿಯುಂ ಮೂಲದಲ್ಲಿಯುಂ ಇಗಪ್ರತ್ಯಯಮಕ್ಕುಂ.

ಪ್ರಯೋಗಂ.—ಮಾಡುವಂಗೆ—ಕಬ್ಬಿಗಂ; ಸರವಂದಿಗಂ; ಸಿಂಗರಿಗಂ; ತೋಂಟಿಗಂ.

"ಕಬ್ಬಿಗಗಳ್ಗಂದು ಕೂಸಾಡಿಸಬಾರದಕ್ಕರದ ರಾಜ್ಯದೊಳೀ ಕವಿ
ಚಕ್ರವರ್ತಿಯಾ" || 464 ||

ಮಾಱುವಂಗೆ—ಗಂದಿಗಂ; ದೂಸಿಗಂ; ತಂಬುಲಿಗಂ.

"ಗಂದಿಗನೆರವಣಿಗಂ ಸರ- |
ವಂದಿಗನಾ ಪಟ್ಟಸಾಲಿಗಂ ಬಾಣಸಿಗಂ ||
ಮಾಂದುರಿಗಂ ಜೋಯಿಸಿಗಂ |
ಸಂದಱಿಕೆಯ ಕಬ್ಬಿಗಂ ಸಮಂಜಸನೊಳನೇ" || 465 ||

ನಿಯೋಗಕ್ಕೆ—ಅಡಪಿಗಂ; ಚಾಮರಿಗಂ; ಕರಹಟ್ಟಿಗಂ (ಕರಹಟಿಗಂ).
ಅನೃತಕ್ಕೆ—ಅಟಮಟಿಗಂ; ಮಾಳಿಗಂ; ಪುಸಿಗಂ.
ಅಱಿತಕ್ಕೆ—ಜೋಯಿಸಿಗಂ; ಲೆಕ್ಕಿಗಂ; ಪೊಲಂಬಿಗಂ.
ಋಣಕ್ಕೆ—ಸಾಲಿಗಂ; ಹಂಗಿಗಂ.
ಆಚರಣಕ್ಕೆ—ದೇಗುಲಿಗಂ; ಅಕ್ಕರಿಗಂ; ಭಾಂಡಸಿಗಂ.
ಶಿಲ್ಪಕ್ಕೆ—ಚಿಪ್ಪಿಗಂ
ಮೂಲಕ್ಕೆ—ಮೂಲಿಗಂ.

ಸೂತ್ರಂ.[1] || ೧೯೭ || ವಳ - ವಳ್ಳ - ಆಯ್ತ

By the Suffixes ವಳ, ವಳ್ಳ and ಆಯ್ತ Nouns are formed denoting people in their employment; by ವಡಿಗ Nouns denoting people who put (for sale).

ನಡೆಯಿಸುವನೀತನಿದನೆಂ-|
ಬೆಡೆಯೊಳ್ವಳವಳ್ಳಮಕ್ಕುಮಾಯ್ತಮುಮಕ್ಕುಂ || ವಳ, ವಳ್ಳ, ಆಯ್ತ
ವಡಿಗಪ್ರತ್ಯಯಮಕ್ಕುಂ |
ಬಿಡದಿಕ್ಕುವನೀತನಿದನೆನಿಪ್ಪೊಂದೆಡೆಯೊಳ್. || ೨೦೯ ||

ಪದಚ್ಛೇದಂ.— ನಡೆಯಿಸುವಂ ಈತಂ ಇದಂ ಎಂಬ ಎಡೆಯೊಳ್ ವಳವಳ್ಳಂ ಅಕ್ಕುಂ, ಆಯ್ತಮುಂ ಅಕ್ಕುಂ; ವಡಿಗಪ್ರತ್ಯಯಂ ಅಕ್ಕುಂ ಬಿಡದೆ ಇಕ್ಕುವಂ ಈತಂ ಇದಂ ಎನಿಪ್ಪ ಒಂದು ಎಡೆಯೊಳ್.

ಅನ್ವಯಂ.—ಈತಂ ಇದಂ ನಡೆಯಿಸುವಂ ಎಂಬೆಡೆಯೊಳ್ ವಳ ವಳ್ಳಂ ಅಕ್ಕುಂ, ಆಯ್ತಮುಂ ಅಕ್ಕುಂ; ಈತಂ ಇದಂ ಬಿಡದೆ ಇಕ್ಕುವಂ ಎನಿಪ್ಪೊಂದೆಡೆಯೊಳ್ ವಡಿಗಪ್ರತ್ಯಯಂ ಅಕ್ಕುಂ.

ಟೀಕು.—ಈತಂ = ಇವಂ; ಇದಂ = ಈ ಪ್ರಯೋಜನವಂ; ನಡೆಯಿಸುವಂ = ನಡೆಯಿಸುವಾತಂ; ಎಂಬೆಡೆಯೊಳ್ = ಎಂಬ ತಾವಿನಲ್ಲಿ; ವಳವಳ್ಳಂ = ವಳಪ್ರತ್ಯಯ ವಳ್ಳಪ್ರತ್ಯಯಂಗಳ್; ಅಕ್ಕುಂ = ಅಪ್ಪವು; ಆಯ್ತಮುಂ = ಆಯ್ತ ಪ್ರತ್ಯಯಮುಂ; ಅಕ್ಕುಂ = ಅಪ್ಪುದು; ಈತಂ = ಇವಂ; ಇದಂ = ಇದಂ; ಬಿಡವಿಕ್ಕುವಂ = ಬಿಡದೆ ಇಕ್ಕುವಂ; ಎನಿಪ್ಪ = ಎನಿಸುವ; ಒಂದೆಡೆಯೊಳ್ = ಒಂದು ತಾವಿನಲ್ಲಿ; ವಡಿಗಪ್ರತ್ಯಯಂ = ವಡಿಗ ಎಂಬ ಪ್ರತ್ಯಯಂ; ಅಕ್ಕುಂ = ಅಪ್ಪುದು.

ವೃತ್ತಿ.— ಈ ನಿಯೋಗಮನೀತಂ ನಡೆಯಿಸುವನೆಂಬಲ್ಲಿ ವಳ ವಳ್ಳಂ ಆಯ್ತ ಪ್ರತ್ಯಯಂಗಳಕ್ಕುಂ; ಇದನಿವನಿಕ್ಕುವನೆಂಬೆಡೆಯೊಳ್ ವಡಿಗಪ್ರತ್ಯಯಮಕ್ಕುಂ.

---

1) ವಳವಳ್ಳಾ ತತ್ರಾಧಿಕೃತೇ || ಭಾ. ಭೂ. 170. ||
(ಇವನಿಗೆ ಅಲ್ಲಿ ಅಧಿಕಾರಂ ಎಂಬರ್ಥದಲ್ಲಿ ವಳ ವಳ್ಳ ಎಂಬೆರಡು ಪ್ರತ್ಯಯಗಳು ಬರುವುವು.)

ಇವಡಿೊಳಿವಂ ವ್ಯಾಪೃತನೆನೆ |
ತದಗ್ರದೊಳ್ ಕಾಡಿಸಲ್ಪ ಮಕ್ಕುಂ ಕೈಕೊಂ- ||
ಡಿದನೀತಂ ನಡೆಯಿಪನೆನೆ |
ತೊಡಳೇಂ ವಳಮೆಂದು ವಳ್ಳಮೆಂದಿವು ನೆಗಳ್ಗುಂ || ಶ. ಸ್ಮೃ. 69. ||

ಪ್ರಯೋಗಂ.—ವಳಕ್ಕೆ—ಅಡಪವಳಂ; ಮೂಸವಳಂ; ಮಡಿವಳಂ; ಪಡೆವಳಂ; ಸೆಜ್ಜೆವಳಂ; ಅಡುವಳಂ.

ವಳ್ಳಕ್ಕೆ—ಅಡಪವಳ್ಳಂ; ಮೂಸವಳ್ಳಂ; ಮಡಿವಳ್ಳಂ; ಪಡೆವಳ್ಳಂ; ಸೆಜ್ಜೆವಳ್ಳಂ; ಅಡುವಳ್ಳಂ.

ಆಯ್ತಕ್ಕೆ—ಝುಳಂಬಾಯ್ತರ್; ಸೂೞಾಯ್ತರ್; ಕಲ್ಲಾಯ್ತರ್; ಕಡಂಗಾಯ್ತರ್; ಅಚ್ಚುಳಾಯ್ತರ್.

"ಮಡಿವಳ್ಳಮಡಪವಳ್ಳಂ |
ಪಡೆವಳ್ಳಂ ಸೆಜ್ಜೆವಳ್ಳನಜ್ಜಂ ಬೆಜ್ಜಂ ||
ಅಡುವಳನೆಂದಿಂತಿವರಂ |
ಕಡಂಗಿ ಬಿಡೆ ಜಡಿಯದಿರ್ಕೆನಯವಱಿವರಸಂ" || 466 ||

"ಆಯ್ತಬ್ಧಿಯೆ ಘೂರ್ಣಿಸುವಂ- |
ತಾಯ್ತರಮನೆಯೊಳಗೆ ಪುಗುವ ಪೊಱಮಡುವ ಝುಳಂ- ||
ಬಾಯ್ತರ ಸೂೞಾಯ್ತರ ಕ- |
ಲ್ಲಾಯ್ತರ ಕಡಂಗಾಯ್ತರಚ್ಚುಳಾಯ್ತರ ರಭಸಂ." || 467 ||

ವಡಿಗಕ್ಕೆ—ಕುಂಚವಡಿಗಂ; ಪುಲ್ಲವಡಿಗಂ (ಕಳ್ವಡಿಗಂ).

ಸೂತ್ರಂ.[1] || ೧೪೮ ||

By the Suffix ಕಾಱಿ Nouns are formed denoting

ಇವಱೊಳ್ ವ್ಯವಹರಿಪಂ ಮಾ- |
ಡುವನಿವನೆಂಬಲ್ಲಿ ಕಾಱಿ ಗಾಱಿಂಗಳ್ಸಂ- ||

---

1) ವ್ಯಾಪೃತೇ ಪ್ರವಣೇ ಚಕಾಱಿಃ || ಭಾ. ಭೂ. 171. ||
(ಇದರಲ್ಲಿ ಈತನು ಆಸಕ್ತನೆಂಬರ್ಥದಲ್ಲಿ ಕಾರ ಪ್ರತ್ಯಯ.)
ತತ್ಕರೋತೀತ್ಯಸ್ಮಾದ್ಗಾಱಿಃ || ಭಾ. ಭೂ. 185. ||
(ಅದನ್ನು ಮಾಡುವನೆಂಬರ್ಥದಲ್ಲಿ ಗಾರ ಪ್ರತ್ಯಯ.)
ಅಪಭ್ರಂಶೇಽಪ್ಯೇವಂ ಕಾರಸ್ಯ || ಭಾ. ಭೂ. 187. ||
(ಅಪಭ್ರಂಶವಿಷಯದಲ್ಲಿ ಕಾರ ಎಂಬ ಶಬ್ದಕ್ಕೆ ಗಾಱಾದೇಶವಾಗುವುದು.)

ಇದಸೀತಂ ಮಾಡ್ಪನೆನಿ- |
ಪ್ಪುದಱೊಳ್ ಗಾಱಿಪ್ರಯೋಗಮುಕ್ಕುಮಪಭ್ರಂ- ||
ಶದೊಳಮದೆ ವರ್ತಿಕಂ ಮ- |
ತ್ತದರ್ಕೆ ಕರ್ಮಾದಿಯಾದೊಡಾದಿಗೆ ಲೋಪಂ || ಶ. ಸ್ಮೃ. 70. ||

people who practise anything or observe a certain conduct; by ಗಾಱಿ Nouns denoting people who fabricate. After ಕಮ್ಮ and ಕುಂಬ the ಗಾ of ಗಾಱಿ disappears.

ಭವಿಕುಂ ಗಾಱಾದಿಗೆ ಲೋ- |
ಪವಾದಿಯೊಳ್ ಕಮ್ಮಕುಂಬಯುಗಮೊದವಲೊಡಂ.
|| ೨೧೦ ||

ಪದಚ್ಛೇದಂ.— ಇವಱೊಳ್ ವ್ಯವಹರಿಪಂ ಮಾಡುವಂ ಇವಂ ಎಂಬಲ್ಲಿ ಕಾಱಿ ಗಾಱಿಂಗಳ್ ಸಂಭವಿಕುಂ; ಗಾಱಾದಿಗೆ ಲೋಪಂ, ಆದಿಯೊಳ್ ಕಮ್ಮಕುಂಬಯುಗಂ ಒದವಲೊಡಂ.

ಅನ್ವಯಂ.— ಇವಱೊಳ್ ವ್ಯವಹರಿಪಂ ಇವಂ ಮಾಡುವಂ ಎಂಬಲ್ಲಿ ಕಾಱಿ ಗಾಱಿಂಗಳ್ ಸಂಭವಿಕುಂ; ಆದಿಯೊಳ್ ಕಮ್ಮಕುಂಬಯುಗಂ ಒದವಲೊಡಂ ಗಾಱಾದಿಗೆ ಲೋಪಂ.

ಟೀಕು.— ಇವಱೊಳ್ = ಇವರಲ್ಲಿ; ವ್ಯವಹರಿಪಂ = ವ್ಯವಹರಿಸುವಂ; ಇವಂ = ಈ ಕೆಲಸಂಗಳಂ; ಮಾಡುವಂ = ಮಾಳ್ಪಂ; ಎಂಬಲ್ಲಿ = ಎಂಬ ತಾವಿನಲ್ಲಿ; ಕಾಱಿ ಗಾಱಿಂಗಳ್ = ಕಾಱಿಪ್ರತ್ಯಯ ಗಾಱಿಪ್ರತ್ಯಯಂಗಳ್; ಸಂಭವಿಕುಂ = ಹುಟ್ಟುವುವು; ಆದಿಯೊಳ್ = ಮೊದಲಲ್ಲಿ; ಕಮ್ಮಕುಂಬಯುಗಂ = ಕಮ್ಮಕುಂಬವೆಂಬೆರಡು ಶಬ್ದಂಗಳ್; ಒದವಲೊಡಂ = ಪ್ರಾಪ್ತಿಸಲೊಡನೆ; ಗಾಱಾದಿಗೆ = ಗಾಱಿ ಎಂಬ ಪ್ರತ್ಯಯದ ಮೊದಲಕ್ಷರಕ್ಕೆ; ಲೋಪಂ = ಅದರ್ಶನಂ ಬರ್ಪುದು.

ವೃತ್ತಿ.— ಇವಱೊಳಿವಂ ವ್ಯವಹರಿಪನೆಂಬಲ್ಲಿ ಕಾಱಿಪ್ರತ್ಯಯಮಕ್ಕುಂ; ಇದನೀತಂ ಮಾಡುವನೆಂಬಲ್ಲಿ ಗಾಱಿಪ್ರತ್ಯಯಮಕ್ಕುಂ; ಕಮ್ಮಕುಂಬಶಬ್ದಂಗಳ್ಗೆಱಗಿರೆ, ಗಾಱಿಪ್ರತ್ಯಯದ ಗಕಾರಕ್ಕೆ ಲೋಪಮಕ್ಕುಂ.

ಪ್ರಯೋಗಂ.— ಕಾಱಿಕ್ಕೆ— ನಡೆವಳಿಕಾಱಿಂ; ನುಡಿವಳಿಕಾಱಿಂ; ಇಚ್ಛೆಕಾಱಿಂ; ಕೈದುಕಾಱಿಂ; ಬಂದಿಕಾಱಿಂ; ಗಱಿಕಾಱಿಂ; ಬೇಹುಕಾಱಿಂ; ನಗೆವಡಿಕಾಱಿಂ; ನೀಱಿಂಬಗೆಕಾಱಿಂ; ಪಾಱಿಕಾಱಿಂ; ಒಳ್ನುಡಿಕಾಱಿಂ; ಪಗೆಕಾಱಿಂ; ಬಗೆಕಾಱಿಂ.

ಗಾಱಿಕ್ಕೆ— ಮಾಲೆಗಾಱಿಂ; ಕಂಚಗಾಱಿಂ; ಬಳೆಗಾಱಿಂ; ಗೆಜ್ಜೆಗಾಱಿಂ; ಮಣಿಗಾಱಿಂ; ಒಱೆಗಾಱಿಂ.

"ಅಣಿಯರಮೆಸೆದೊಪ್ಪಿರ್ಪುವು |
ಮಣಿಗಾಱಿರ ಕಂಚಗಾಱಿರೊಱೆಗಾಱಿರ ತಿಂ- ||

ತಿಣಿಯೆನಿಪ ಮಾಲೆಗಾಜಿರ |
ಗಣನಾತೀತಂಗಳಾಪಣಂಗಳೆ ಪೊಱಲೊಳ್." || 468 ||

ಗಕಾರಲೋಪಕ್ಕೆ—ಕಮ್ಮಱಿಂ; ಕುಂಬಱಿಂ.

ಸೂತ್ರಂ[1]. || ೧೯೯ ||

When a word with final ಉ precedes ಗಾಱ, the ಉ may receive the Bindu or be elided.—The Suffix ಇಚ is used to denote persons born of or in; the penultimate of the word to which it is added may be shortened.

ಪರದೊಳ್ಗಾಱಿಪ್ರತ್ಯಯ- |
ಮಿರೆ ಸಲ್ಗುಂ ಬಿಂದು ಮೇಣಕಾರಮುದಂತ- ||
ಕ್ಕೊರೆವರಿಚಪ್ರತ್ಯಯಮಂ |
ಪಿರಿದುಂ ತದ್ಭವನೊಳುಪಧೆಗಕ್ಕುಂ ಹ್ರಸ್ವಂ. || ೨೧೧ ||

ಪದಚ್ಛೇದಂ.—ಪರದೊಳ್ ಗಾಱಿಪ್ರತ್ಯಯಂ ಇರೆ, ಸಲ್ಗುಂ ಬಿಂದು, ಮೇಣ್ ಅಕಾರಂ ಉದಂತಕ್ಕೆ. ಒರೆವರ್ ಇಚಪ್ರತ್ಯಯಮಂ ಪಿರಿದುಂ ತದ್ಭವನೊಳ್; ಉಪಧೆಗೆ ಅಕ್ಕುಂ ಹ್ರಸ್ವಂ.

ಅನ್ವಯಂ.—ಪರದೊಳ್ ಗಾಱಿಪ್ರತ್ಯಯಂ ಇರೆ, ಉದಂತಕ್ಕೆ ಬಿಂದು ಸಲ್ಗುಂ, ಮೇಣ್ ಅಕಾರಂ. ಪಿರಿದುಂ ತದ್ಭವನೊಳ್ ಇಚಪ್ರತ್ಯಯಮಂ ಒರೆವರ್; ಉಪಧೆಗೆ ಹ್ರಸ್ವಂ ಅಕ್ಕುಂ.

ಟೀಕು.—ಪರದೊಳ್=ಮುಂದೆ; ಗಾಱಿಪ್ರತ್ಯಯಂ=ಗಾಱಿಪ್ರತ್ಯಯಂ; ಇರೆ=ಇರೆ; ಉದಂತಕ್ಕೆ=ಉಕಾರಾಂತಕ್ಕೆ; ಬಿಂದು=ಸೊನ್ನೆ; ಸಲ್ಗುಂ=ಸಲ್ಲುವದು; ಮೇಣ್=ಅದಲ್ಲದೆ; ಅಕಾರಂ=ಅತ್ವಂ ಸಲ್ಲುವದು; ತದ್ಭವನೊಳ್=ಅದಱೊಳ್ಪುಟ್ಟಿದವನಲ್ಲಿ; ಇಚಪ್ರತ್ಯಯಮಂ=

---

1) ಉದಂತಾನ್ಮಾಗಮೋ ಬಹುಳಂ || ಭಾ. ಭೂ. 186. ||

(ಉಕಾರಾಂತ ಶಬ್ದಗಳಿಂದ ಪರವಾಗಿ ಗಾಱಿ ಪ್ರತ್ಯಯವು ಬಂದರೆ ವಿಕಲ್ಪದಿಂದ ಮಕಾರಾಗಮ ಬರುವುದು.)

ಇಚಸ್ತತ್ರ ಜಾತೇ ಭವೇ ವಾ || ಭಾ. ಭೂ. 169. ||

(ಇದರಲ್ಲಿ ಹುಟ್ಟಿದವನು, ವರ್ತಿಸುವವನು ಎಂಬರ್ಥದಲ್ಲಿ ಇಚಪ್ರತ್ಯಯವು ಬರುವುದು.)

ಅಲ್ಲಿದ ಪುಟ್ಟಿದನಿಂತಿವ- |
ನಲ್ಲಿಯೆ ತಾಂ ಬಳೆದನೆಂದು ಪೇೞ್ವರ್ಥದೊಳಂ- ||
ತೆಲ್ಲಮಿಚಪ್ರತ್ಯಯಮಿಂ- |
ತಲ್ಲಿ ಯಥಾಲಕ್ಷ್ಯಮಾದಿಗಕ್ಕುಂ ಹ್ರಸ್ವಂ || ಶ. ಸ್ಮೃ. 73. ||

ಇಚ ಎಂಬ ಪ್ರತ್ಯಯಮುಂ; ಒರೆವರ್ = ಪೇಳ್ವರ್; ಪಿರಿದುಂ = ವಿಶೇಷವಾಗಿ; ಉಪಧೆಗೆ = ಅಂತ್ಯದ ಮೊದಲ್ಗೆ; ಹ್ರಸ್ವಂ = ಹ್ರಸ್ವಂ; ಅಕ್ಕುಂ = ಅಪ್ಪುದು.

ವೃತ್ತಿ.— ಗಾಱಿಪ್ರತ್ಯಯಂ ಪರದೊಳಿರೆ, ಪೂರ್ವದುದಂತಕ್ಕೆ ಬಿಂದುವುಂ ಅಕಾರಮುಮಕ್ಕುಂ. ಅದಱೊಳವಂ ಪುಟ್ಟಿದನೆಂಬಲ್ಲಿ ಇಚಪ್ರತ್ಯಯಮಕ್ಕುಂ; ಕಿಱಿದೆಡೆಯೊಳುಪಧೆಗೆ ಹ್ರಸ್ವಮಕ್ಕುಂ.

ಪ್ರಯೋಗಂ.— ಬಿಂದುಗೆ— ಪಾಡುಂಗಾಱಿಂ; ಅಲಸುಂಗಾಱಿಂ; ಓದುಂಗಾಱಿಂ; ಜೂದುಂಗಾಱಿಂ.

ಅತ್ವಕ್ಕೆ— ಕಂಚಗಾಱಿಂ.

ಇಚಪ್ರತ್ಯಯಕ್ಕೆ— ಅಲರಿಚಂ; ಪೊಟಿಲಿಚಂ.

ಕೆಲವಱೊಳುಪಧೆಗೆ ಹ್ರಸ್ವಂ— (ಕಾಲೂರು + ಇಚಂ) ಕಾಲುರಿಚಂ.

ಸೂತ್ರಂ. || ೨೦೦ ||

By the Suffixes ಕುಟಿಗ and ಗ people are introduced who are occupied in; by ಉಳಿಗ beings who live on or by.

ಘನಮಾಗಿ ವರ್ತಿಸುವನೀ- |
ತನಿವಱೊಳೆಂಬಲ್ಲಿ ಕುಟಿಗಗ-ಪ್ರತ್ಯಯಮುಂ- ||
ಟೆನಿಸುಗುಮುಳಿಗಪ್ರತ್ಯಯ- |
ಮನುಕೂಲಂ ಬಾಳ್ವಿನಿದಱೊಳಿವನೆಂಬೆಡೆಯೊಳ್.
|| ೨೧೨ ||

ಪದಚ್ಛೇದಂ.— ಘನಂ ಆಗಿ ವರ್ತಿಸುವಂ ಈತಂ ಇವಱೊಳ್ ಎಂಬಲ್ಲಿ ಕುಟಿಗ-ಗಪ್ರತ್ಯಯಂ ಉಂಟು ಎನಿಸುಗುಂ; ಉಳಿಗಪ್ರತ್ಯಯಂ ಅನುಕೂಲಂ ಬಾಳ್ವಿಂ ಇದಱೊಳ್ ಇವಂ ಎಂಬ ಎಡೆಯೊಳ್.

ಅನ್ವಯಂ.— ಈತಂ ಇವಱೊಳ್ ಘನಂ ಆಗಿ ವರ್ತಿಸುವಂ ಎಂಬಲ್ಲಿ ಕುಟಿಗಗಪ್ರತ್ಯಯಂ ಉಂಟು ಎನಿಸುಗುಂ; ಇವಂ ಇದಱೊಳ್ ಅನುಕೂಲಂ ಬಾಳ್ವಿಂ ಎಂಬೆಡೆಯೊಳ್ ಉಳಿಗ ಪ್ರತ್ಯಯಂ.

ಟೀಕು.— ಈತಂ = ಇವಂ; ಇವಱೊಳ್ = ಇವರಲ್ಲಿ; ಘನಮಾಗಿ = ವೆಗ್ಗಳವಾಗಿ; ವರ್ತಿಸುವಂ = ಪ್ರವರ್ತಿಸುವಂ; ಎಂಬಲ್ಲಿ = ಎಂಬರ್ಥದಲ್ಲಿ; ಕುಟಿಗಗಪ್ರತ್ಯಯಂ = ಕುಟಿಗ ಪ್ರತ್ಯಯ ಗಪ್ರತ್ಯಯಂಗಳ್; ಉಂಟೆನಿಸುಗುಂ = ಉಂಟಾಗುವುವು; ಇವಂ = ಈತಂ; ಇದ

ಇದರೊಳ್ = ಇದರಲ್ಲಿ; ಅನುಕೂಲಂ = ಅನುಕೂಲವಾಗಿ; ಬಾಳ್ವಂ = ಬದುಕುವಂ; ಎಂಬೆಡೆ ಯೊಳ್ = ಎಂಬ ತಾವಿನಲ್ಲಿ; ಉಳಿಗಪ್ರತ್ಯಯಂ = ಉಳಿಗ ಎಂಬ ಪ್ರತ್ಯಯಂ ಉಂಟೆನಿಸುವುದು.

ವೃತ್ತಿ.—ಇವನಿದರೊಳ್ ಪಿರಿದು ವರ್ತಿಸುವನೆಂಬಲ್ಲಿ ಕುಟಿಗಗಪ್ರತ್ಯಯಮಕ್ಕುಂ; ಇದರೊಳಿವಂ ಬಾಳ್ವನೆಂಬಲ್ಲಿ ಉಳಿಗಪ್ರತ್ಯಯಮಕ್ಕುಂ.

ಪ್ರಯೋಗಂ.—ಕುಟಿಗಪ್ರತ್ಯಯಕ್ಕೆ—ಕಲ್ಕುಟಿಗಂ; ನೀರ್ಕುಟಿಗಂ; ಮರ ಕ್ಕುಟಿಗಂ; ಕಬ್ಬಿಣಕುಟಿಗಂ; ಕಟ್ಟಿಗೆಕುಟಿಗಂ.

ಗಪ್ರತ್ಯಯಕ್ಕೆ—ಮಾತುಗಂ; ಬೂತುಗಂ; ಕಂತೆಗಂ; ಬೊಂತೆಗಂ; ಬಿದಿ ಗಂ; ಸಟೆಗಂ; ನವಸಿಗಂ; ಎಡಗಂ.

ಉಳಿಗಪ್ರತ್ಯಯಕ್ಕೆ—ದೇವುಳಿಗಂ; ಮಣ್ಣುಳಿಗಂ, (ಮಣ್ಣೊಳ್ಜೀವಿಸುವ ಪಾವು ಮಣ್ಣುಳಿಗಂ).

ಸೂತ್ರಂ. || ೨೦೧ ||

By the Suffix ಗುಳಿ with the Bindu before it people are marked who have an inclination for; by ಉಣಿ people who feed on.

ಒದವುವುದು ಗುಳಿಪ್ರತ್ಯಯ- |
ಮದು ಪೂರ್ವದ ಬಿಂದುವೆರಸು ಶೀಲಗ್ರಹಣಾ- ||
ರ್ಥದೊಳೆತ್ತಮುಣಿಪ್ರತ್ಯಯ- |
ಮೊದವುಗುಮನ್ವಿತದಿನುಣ್ಬನಿದನೆಂಬೆಡೆಯೊಳ್. ||೨೧೪||

ಪದಚ್ಛೇದಂ.—ಒದವುವುದು ಗುಳಿಪ್ರತ್ಯಯಂ ಅದು ಪೂರ್ವದ ಬಿಂದುವೆರಸುಶೀಲ ಗ್ರಹಣಾರ್ಥದೊಳ್; ಎತ್ತಂ ಉಣಿಪ್ರತ್ಯಯಂ ಒದವುಗುಂ ಅನ್ವಿತದಿಂ ಉಣ್ಬಂ ಇದಂ ಎಂಬ ಎಡೆಯೊಳ್.

ಅನ್ವಯಂ.—ಶೀಲಗ್ರಹಣಾರ್ಥದೊಳ್ ಪೂರ್ವದ ಬಿಂದುವೆರಸುಗುಳಿಪ್ರತ್ಯಯಂ ಅದು ಒದವುವುದು; ಇದಂ ಅನ್ವಿತದಿಂ ಉಣ್ಬಂ ಎಂಬೆಡೆಯೊಳ್ ಎತ್ತಂ ಉಣಿಪ್ರತ್ಯಯಂ ಒದವುಗುಂ.

ಟೀಕು.—ಶೀಲಗ್ರಹಣಾರ್ಥದೊಳ್ = ಆವುದಾನೊಂದು ಶೀಲಗ್ರಹಣಾರ್ಥದಲ್ಲಿ; ಪೂರ್ವದ = ಆದಿಯ; ಬಿಂದುವೆರಸು = ಬಿಂದುಗೂಡಿದ; ಗುಳಿಪ್ರತ್ಯಯಂ = ಗುಳಿ ಎಂಬ ಪ್ರತ್ಯಯಂ; ಒದವುವುದು = ಪ್ರಾಪ್ತಿಸುವುದು; ಇದಂ = ಇದಂ; ಅನ್ವಿತದಿಂ = ಹಿತದಿಂದೆ; ಉಣ್ಬಂ = ಊಟವಂ ಮಾಡುವಂ; ಎಂಬೆಡೆಯೊಳ್ = ಎಂಬ ತಾವಿನಲ್ಲಿ; ಎತ್ತಂ = ಆವ ದೆಸೆಯಲ್ಲಿಯುಂ; ಉಣಿಪ್ರತ್ಯಯಂ = ಉಣಿ ಎಂಬ ಪ್ರತ್ಯಯಂ; ಒದವುಗುಂ = ಬರ್ಪುದು.

ವೃತ್ತಿ.— ಶೀಲಗ್ರಹಣಾರ್ಥಂಗಳೊಳ್ ಬಿಂದುವೆರಸುಗುಳಿಪ್ರತ್ಯಯಮಕ್ಕುಂ; ಈ ವಸ್ತುವನೀತನುಣ್ಬನೆಂಬಲ್ಲಿ ಉಣಿಪ್ರತ್ಯಯಮಕ್ಕುಂ.

ಪ್ರಯೋಗಂ.— ಗುಳಿಪ್ರತ್ಯಯಕ್ಕೆ— ಆಟಂಗುಳಿ; ಸಾಲಂಗುಳಿ; ಲಂಚಂಗುಳಿ; ಕುತ್ತಂಗುಳಿ.

ಉಣಿಪ್ರತ್ಯಯಕ್ಕೆ— ಅಮರ್ದುಣಿ; ಕಳ್ಳುಣಿ; ತುಡುಗುಣಿ.,

ಸೂತ್ರಂ[1]. ॥ ೨೦೨ ॥

In many of the mentioned instances the Suffixes ಉಕ, ಕುಳಿ, ಅಳಿ, ಇಕ and ಅಡಿಗ may also be used.

ಉಕಕುಳಿಯಾಳಿಪ್ರತ್ಯಯ- ।
ಮಿಕಮುಂ ಶೀಲಾದಿವಿಶ್ರುತಾರ್ಥದೊಳಡಿಗ ॥
ಪ್ರಕಟಪ್ರತ್ಯಯಮಕ್ಕುಂ ।
ಸುಕವಿಗಳಿಂ ತದನುಕೂಲವರ್ತನವಿಧಿಯೊಳ್. ॥ ೨೧೪ ॥

ಪದಚ್ಛೇದಂ.— ಉಕ-ಕುಳಿ-ಆಳಿಪ್ರತ್ಯಯಂ ಇಕಮುಂ ಶೀಲಾದಿವಿಶ್ರುತಾರ್ಥದೊಳ್; ಅಡಿಗಪ್ರಕಟಪ್ರತ್ಯಯಂ ಅಕ್ಕುಂ ಸುಕವಿಗಳಿಂ ತದನುಕೂಲವರ್ತನವಿಧಿಯೊಳ್.

ಅನ್ವಯಂ.— ಶೀಲಾದಿವಿಶ್ರುತಾರ್ಥದೊಳ್ ಉಕಕುಳಿಯಾಳಿಪ್ರತ್ಯಯಂ ಇಕಮುಂ; ಸುಕವಿಗಳಿಂ ತದನುಕೂಲವರ್ತನವಿಧಿಯೊಳ್ ಅಡಿಗಪ್ರಕಟಪ್ರತ್ಯಯಂ ಅಕ್ಕುಂ.

ಟೀಕು.— ಶೀಲಾದಿ = ಶೀಲ ಮೊದಲಾದ; ವಿಶ್ರುತಾರ್ಥದೊಳ್ = ಪ್ರಸಿದ್ಧವಾದರ್ಥದಲ್ಲಿ; ಉಕಕುಳಿಯಾಳಿಪ್ರತ್ಯಯಂ = ಉಕಪ್ರತ್ಯಯ ಕುಳಿಪ್ರತ್ಯಯ ಆಳಿಪ್ರತ್ಯಯಂಗಳ್; ಇಕಮುಂ = ಇಕ ಎಂಬ ಪ್ರತ್ಯಯಮುಂ ಅಪ್ಪುದು; ಸುಕವಿಗಳಿಂ = ಸತ್ಕವೀಶ್ವರರಿಂದೆ; ತದನು

---

[1] ಆಳಿಸ್ತಾಚ್ಛೀಲ್ಯೇ ॥ ಭಾ. ಭೂ. 183. ॥
(ಅದು ಈತನಿಗೆ ಶೀಲ ಎಂಬರ್ಥದಲ್ಲಿ ಆಳಿಪ್ರತ್ಯಯ.)
ಕುಳಿಶ್ಚ ॥ ಭಾ. ಭೂ. 184. ॥
(ಅದೇ ಅರ್ಥದಲ್ಲಿ ಕುಳಿ ಎಂಬ ಪ್ರತ್ಯಯವೂ ಬರುವುದು.)

ಆಳಿಪ್ರತ್ಯಯಮಕ್ಕುಂ ।
ಶೀಳಾದ್ಯರ್ಥಂಗಳಂ ವಿವಕ್ಷಿಸೆ ಪೆಜಿತೊಂ- ॥
ದಾಳಾಪಮುಂತದೇನೊ ಯ- ।
ಥಾಳೋಕನಿರೂಪಿತೋಕ್ತಿಗಳ್ಗನುಸಾರಂ ॥ ಶ. ಸ್ಮೃ. 78. ॥

ಕೂಲ = ಆ ಶೀಲಾದಿವಿಶ್ರುತಾರ್ಥದೊಳನುಕೂಲವಾದ; ವರ್ತನವಿಧಿಯೊಳ್ = ವರ್ತನದ ವಿಧಿಯಲ್ಲಿ; ಅಡಿಗ = ಅಡಿಗ ಎಂಬ; ಪ್ರಕಟ = ಪ್ರಸಿದ್ಧವಾದ; ಪ್ರತ್ಯಯಂ = ಪ್ರತ್ಯಯಂ; ಅಕ್ಕುಂ = ಆಗುವುದು.

ವೃತ್ತಿ. — ಶೀಲಾದಿನಿಖಿಲಾರ್ಥಂಗಳೊಳ್ ಉಕಪ್ರತ್ಯಯಮುಂ, ಕುಳಿಪ್ರತ್ಯಯಮುಂ ಆಳಿಪ್ರತ್ಯಯಮುಂ ಇಕಪ್ರತ್ಯಯಮುಂ ಅಕ್ಕುಂ; ತದನುಕೂಲವರ್ತನದೊಳ್ ಅಡಿಗಪ್ರತ್ಯಯಮಕ್ಕುಂ.

ಪ್ರಯೋಗಂ. — ಉಕಪ್ರತ್ಯಯಕ್ಕೆ — ಕಟ್ಟುಕಂ; ತಟ್ಟುಕಂ; ಅಂಟುಕಂ; ಕಾರುಕಂ; ಸಣ್ಣುಕಂ; ಬಂದುಕಂ (ಬೊಂದುಕಂ); ದಿಂಡುಕಂ.

ಕುಳಿಪ್ರತ್ಯಯಕ್ಕೆ — ಪೋರ್ಕುಳಿ; ಓಡುಕುಳಿ; ಹುಡುಕುಳಿ; ಮಱುಕುಳಿ; (ಕುಱುಕುಳಿ); ಪೇಂಕುಳಿ; ಇಱುಕುಳಿ; ಆಯ್ಕುಳಿ.

ಆಳಿಪ್ರತ್ಯಯಕ್ಕೆ — ಓದಾಳಿ; ಜೂದಾಳಿ; ಮಾಱಾಳಿ; ಏಱಾಳಿ; ಪಡಪಾಳಿ; ಮಾತಾಳಿ; ಕೇಡಾಳಿ; ಸಿಗ್ಗಾಳಿ.

"ಮಾಱಾಳಿಯುಮೋದಾಳಿಯು- |
ಮೇಱಾಳಿಯುಮಪ್ಪನಾಗಿ ಪಡೆಪಾಳಿಯ ಕೇಳ್ ||
ನೀಱಿಂ ಜೂದಾಳಿ ಕರಂ |
ನೀಱಿಂ ಮಾತಾಳಿ ಕರೆಯೆ ಸಿಗ್ಗಾಳಿಯಿವಳ್" || 469 ||

ಇಕಪ್ರತ್ಯಯಕ್ಕೆ — ಕರಿಕಂ; ಅಸಿಕಂ; ದಸಿಕಂ; ಹಿಸಿಕಂ; ಬಾರಿಕಂ.

ಅಡಿಗಪ್ರತ್ಯಯಕ್ಕೆ — ದೇವಡಿಗಂ; ಪಾವಡಿಗಂ; ಪೂವಡಿಗಂ.

ಸೂತ್ರಂ. || ೨೦೩ ||

By the Suffix ಉಗ Nouns are formed which denote people who deal in, or are engaged in or meddle with; by ಅಟಿಗ Nouns for rope-dancers, light-bearers, and blade-dealers.

ವ್ಯವಹರಣತದಾಚರಣ |
ಪ್ರವಣನೊಳಕ್ಕುಂ ಸಮಂತುಗಪ್ರತ್ಯಯಮೊಂ- ||
ದುವುದಟಿಗಪ್ರತ್ಯಯಮಾ- |
ಡುವ ದೀವಿಗೆವಿಡಿವ ಹರದುಗೆಯ್ವ ನಿಬರೊಳಂ. || ೨೧೫ ||

ಪದಚ್ಛೇದಂ. — ವ್ಯವಹರಣತದಾಚರಣಪ್ರವಣನೊಳ್ ಅಕ್ಕುಂ ಸಮಂತು ಉಗಪ್ರತ್ಯಯಂ; ಒಂದುವುದು ಅಟಿಗಪ್ರತ್ಯಯಂ ಆಡುವ ದೀವಿಗೆವಿಡಿವ ಹರದುಗೆಯ್ವ ಅನಿಬರೊಳಂ.

ಅನ್ವಯಂ.— ವ್ಯವಹರಣತದಾಚರಣಪ್ರವಣನೊಳ್ ಸಮಂತು ಉಗಪ್ರತ್ಯಯಂ ಅಕ್ಕುಂ; ಆಡುವ ದೀವಿಗೆವಿಡಿವ ಹರದುಗೆಯ್ವಸಿಬರೊಳಂ ಅಟಿಗಪ್ರತ್ಯಯಂ ಒಂದುವುದು.

ಟೀಕು.— ವ್ಯವಹರಣ = ವ್ಯವಹಾರದಲ್ಲಿ; ತದಾಚರಣ = ಅದರಾಚರಣೆಯಲ್ಲಿ; ಪ್ರವಣನೊಳ್ = ಪ್ರಸಿದ್ಧವಾದವನಲ್ಲಿ; ಸಮಂತು = ಹಾಗೆ; ಉಗಪ್ರತ್ಯಯಂ = ಉಗ ಎಂಬ ಪ್ರತ್ಯಯಂ; ಅಕ್ಕುಂ = ಆಗುವುದು; ಆಡುವ = ಗಳೆವಿಡಿದಾಡುವ; ದೀವಿಗೆವಿಡಿವ = ದೀವಿಗೆಯುಂ ಪಿಡಿವ; ಹರದುಗೆಯ್ವ = ಬೇಹಾರವಂ ಮಾಡುವ; ಅಸಿಬರೊಳಂ = ಅಸಿಬರಲ್ಲಿಯುಂ; ಅಟಿಗ ಪ್ರತ್ಯಯಂ = ಅಟಿಗ ಎಂಬ ಪ್ರತ್ಯಯಂ; ಒಂದುವುದು = ಪೊಂದುಗೆಯಾಗುವುದು.

ವೃತ್ತಿ.— ವ್ಯವಹರಿಸುವನೊಳಂ ಅಲ್ಲಿ ವರ್ತಿಸುವನೊಳಂ ಉಗಪ್ರತ್ಯಯಮಕ್ಕುಂ; ಗಳೆವಿಡಿದಾಡುವ, ದೀವಿಗೆವಿಡಿವ ಎಲೆವರಿದಾಡುವನೊಳಂ, ಅಟಿಗ ಪ್ರತ್ಯಯಮಕ್ಕುಂ.

ಪ್ರಯೋಗಂ.— ಉಗಪ್ರತ್ಯಯಕ್ಕೆ— ನಾರುಗಂ; ಬೇರುಗಂ; ಊರುಗಂ; ಕಾಱುಗಂ; ನೇಣುಗಂ; ಹೆಣ್ಣುಗಂ; ಮಣ್ಣುಗಂ.

ಅಟಿಗಪ್ರತ್ಯಯಕ್ಕೆ— ಕೊಲ್ಲಟಿಗಂ; ದೀವಟಿಗಂ; ಮಾವಟಿಗಂ.

ಸೂತ್ರಂ. ॥ ೨೦೪ ॥

The Suffix ಕ is used for denoting persons of a certain condition; ಇಲ for denoting persons occupied with or following a profession, or abiding in.

ಏನಾನುಮೊಂದು ಭಾವಮ- ।
ನಾನಲ್ ಸಲ್ವವನೊಳಱಿಗೆ ಕಪ್ರತ್ಯಯಮಂ ॥
ಪೀನಂ ತದ್ವರ್ತನಗತ ।
ಮಾನವನೊಳ್ ತಿಳಿಗೆ ಮತ್ತಿಲಪ್ರತ್ಯಯಮಂ. ॥ ೨೧೬ ॥

ಪದಚ್ಛೇದಂ.— ಏನಾನುಂ ಒಂದು ಭಾವಮಂ ಆನಲ್ ಸಲ್ವವನೊಳ್ ಅಱಿಗೆ ಕಪ್ರತ್ಯಯಮಂ; ಪೀನಂ ತದ್ವರ್ತನಗತಮಾನವನೊಳ್ ತಿಳಿಗೆ ಮತ್ತೆ ಇಲಪ್ರತ್ಯಯಮಂ.

ಅನ್ವಯಂ.— ಏನಾನುಂ ಒಂದು ಭಾವಮಂ ಆನಲ್ ಸಲ್ವವನೊಳ್ ಕಪ್ರತ್ಯಯಮಂ ಅಱಿಗೆ; ಪೀನಂ ತದ್ವರ್ತನಗತಮಾನವನೊಳ್ ಮತ್ತೆ ಇಲಪ್ರತ್ಯಯಮಂ ತಿಳಿಗೆ.

ಟೀಕು.— ಏನಾನುಮೊಂದು = ಅವುದಾನೊಂದು; ಭಾವಮಂ = ಭಾವಮಂ; ಆನಲ್ = ಧರಿಸಲ್; ಸಲ್ವವನೊಳ್ = ಸಲ್ವವನಲ್ಲಿ; ಕಪ್ರತ್ಯಯಮಂ = ಕ ಎಂಬ ಪ್ರತ್ಯಯಮಂ; ಅಱಿಗೆ =

ತಿಳಿಗೆ; ಪೀನಂ = ವಿಶೇಷವಾಗಿ; ತದ್ವರ್ತನ = ಆ ವರ್ತನೆಯಲ್ಲಿ; ಗತ = ಎಯ್ದಲ್ಪಟ್ಟ; ಮಾನವನೊಳ್ = ಮನುಷ್ಯನಲ್ಲಿ; ಮತ್ತೆ = ಬಳಿಕಂ; ಇಲಪ್ರತ್ಯಯಮಂ = ಇಲ ಎಂಬ ಪ್ರತ್ಯಯಮಂ; ತಿಳಿಗೆ = ಅರಿಗೆ.

ವೃತ್ತಿ.—ಆವುದಾನೊಂದು ಭಾವಮಂ ತಳೆದಿರ್ಪವನೊಳ್ ಕಪ್ರತ್ಯಯಮಕ್ಕುಂ; ಅದಱಿಕೊಳೀತಂ ವರ್ತಿಪನೆಂಬಲ್ಲಿ ಇಲಪ್ರತ್ಯಯಮಕ್ಕುಂ.

ಪ್ರಯೋಗಂ.—ಕಪ್ರತ್ಯಯಕ್ಕೆ—ಬಡಕಂ; ನಿಡುಕಂ; ಒಣಕಂ; ಕಿಡುಕಂ; ಬಣುಕಂ; ಅಱಿಕಂ; ಬೆಳುಕಂ; ತೊಳಕಂ.

ಇಲಪ್ರತ್ಯಯಕ್ಕೆ—ಪಚ್ಚೆಯಿಲಂ (ಪಚ್ಚಾಯಿಲಂ), ಪಡೆಯಿಲಂ; ಗಾವಿಲಂ; ಫೆಳಯಿಲಂ.

ಸೂತ್ರಂ[1]. || ೨೦೫ ||

By the Suffixes ಉಳ್ಳ, ಒಡೆಯ and …ತ persons are denoted who possess; by ವಣಿಗ persons whose delight is eating (or taking).

ಇದಱೊಳಿದುಂಟೆಂಬರ್ಥದೊ- |
ಳುದಯಿಪುದುಳ್ಳೊಡೆಯವಂತಶಬ್ದಂ ಕೈಕೊ- ||
ಳ್ವುದು ವಣಿಗಪ್ರತ್ಯಯಮು- |
ಣ್ಬುದು ಜೀವಿತಮಾಗಿ ಬಱಿದೆ ತಿನುತಿರ್ಪವನೊಳ್. || ೩೧೭ ||

ಪದಚ್ಛೇದಂ.—ಇದಱೊಳ್ ಇದು ಉಂಟು ಎಂಬ ಅರ್ಥದೊಳ್ ಉದಯಿಪುದು ಉಳ್ಳ ಒಡೆಯ ವಂತ ಶಬ್ದಂ; ಕೈಕೊಳ್ವುದು ವಣಿಗಪ್ರತ್ಯಯಂ, ಉಣ್ಬುದು ಜೀವಿತಂ ಆಗಿ, ಬಱಿದೆ ತಿನುತೆ ಇರ್ಪ ಅವನೊಳ್.

ಅನ್ವಯಂ.—ಉಣ್ಬುದು ಜೀವಿತಂ ಆಗಿ, ಬರಿದೆ ತಿನುತೆ ಇರ್ಪವನೊಳ್ ವಣಿಗ ಪ್ರತ್ಯಯಂ ಕೈಕೊಳ್ವುದು.

ಟೀಕು.—ಇದಱೊಳ್ = ಇದರಲ್ಲಿ; ಇದು = ಇದು; ಉಂಟೆಂಬರ್ಥದೊಳ್ = ಉಂಟೆಂಬ ಅರ್ಥದಲ್ಲಿ; ಉಳ್ಳೊಡೆಯವಂತಶಬ್ದಂ = ಉಳ್ಳ ಎಂಬ, ಒಡೆಯ ಎಂಬ, ವಂತ ಎಂಬ ಶಬ್ದಂ;

---

1) ತದಾಸ್ಯಾಸ್ತೀತಿ ವಂತಃ || ಭಾ. ಭೂ. 172. ||
(ಅದು ಇವನಿಗುಂಟು ಎಂಬರ್ಥದಲ್ಲಿ ವಂತಪ್ರತ್ಯಯವು ಬರುವುದು.)

ಅಲ್ಲಿ ಇದುಂಟೆಂಬರ್ಥದೊ- |
ಳೆಲ್ಲಿಯುಮುಳ್ಳೊಡೆಯ ವಂತ ಶಬ್ದಮುಮಕ್ಕುಂ || ಶ. ಸ್ಮೃ. 74. ||

ಉದಯಿಪುದು = ಹುಟ್ಟುವುದು; ಉಣ್ಬುದು = ತಿಂಬುದು; ಜೀವಿತವಾಗಿ = ಬಾಳ್ವೆಯಾಗಿ; ಬಱಿದೆ = ಸುಮ್ಮನೆ; ತಿನುತಿರ್ಪವನೊಳ್ = ತಿನುತಿರ್ಪವನಲ್ಲಿ; ವಣಿಗಪ್ರತ್ಯಯಂ = ವಣಿಗ ಎಂಬ ಪ್ರತ್ಯಯಂ; ಕೈಕೊಳ್ವುದು = ಸ್ವೀಕಾರವಪ್ಪುದು.

ವೃತ್ತಿ.—ಇಲ್ಲಿ ಈ ವಸ್ತುವುಂಟೆಂಬರ್ಥದೊಳ್ ಉಳ್ಳವೊಡೆಯವಂತ ಪ್ರತ್ಯಯಮಕ್ಕುಂ; ಊಟಮೇ ಜೀವಿತವಾಗಿ ಬಾೞ್ವನೊಳ್ ವಣಿಗಪ್ರತ್ಯಯಮಕ್ಕುಂ.

ಪ್ರಯೋಗಂ.—ಉಳ್ಳ ಪ್ರತ್ಯಯಕ್ಕೆ—ಧನಮುಳ್ಳಂ; ಧಾನ್ಯಮುಳ್ಳಂ; ಗುಣಮುಳ್ಳಂ; ಓದುಳ್ಳಂ; ತೇಜಮುಳ್ಳಂ.

ಒಡೆಯ ಪ್ರತ್ಯಯಕ್ಕೆ—ಪೆರ್ಮೆಯೊಡೆಯಂ; ಜಗದೊಡೆಯಂ; ನೆಲನೊಡೆಯಂ; ಕೊಡೆಯೊಡೆಯಂ; ಬಾಣೊಡೆಯಂ.

ವಂತ ಪ್ರತ್ಯಯಕ್ಕೆ—ಸಿರಿವಂತಂ; ಜಯವಂತಂ; ಜಸವಂತಂ; ಹೂಣ್ಯವಂತಂ.

ವಣಿಗ ಪ್ರತ್ಯಯಕ್ಕೆ—ಕೂೞ್ವಣಿಗಂ.

ಮತ್ತೆ ಕೆಲವಱೊಳುಂಟು—ಲಂಚವಣಿಗಂ; ಸಾಲವಣಿಗಂ.

ಸೂತ್ರಂ[1]. || ೨೦೬ ||

The Suffix ಅನೆಯ is used for denoting grades

ಅನೆಯಪ್ರತ್ಯಯಮನಿತಿನಿ- |
ತೆನಿತೆಂಬ ಅಸತ್ತ್ರಮಾಣಪೂರಣದೊಳ್- ||

[1]) ಸಂಖ್ಯಾಯಾಃ ಪೂರಣೇಽನೆಯಃ || ಭಾ. ಭೂ. 176. ||
(ಸಂಖ್ಯೆಯ ಪೂರಣಾರ್ಥದಲ್ಲಿ ಅನೆಯ ಪ್ರತ್ಯಯಂ.)
ವಾರಾರ್ಥೇ ಮೇ ವಾ || ಭಾ. ಭೂ. 177. ||
(ಸೂಟಿ ಎಂಬರ್ಥದಲ್ಲಿ ವಿಕಲ್ಪವಾಗಿ ಮೆ ಪ್ರತ್ಯಯ.)

ಒಂದೆರಡು ಮೂಱು ನಾಲ್ಕ- |
ಯ್ದೆಂದೆನಿತರ್ಕಂ ಬಹುತ್ವವಾಚಿಗಳ ಮರ್ದಂ ||
ತೋಱಿ ನೆಗಳ್ಗುಂ ವಿಕಲ್ಪಂ |
ಸಂಧಿಸಿ ನಲಸಿರೆ ಮೆಯೆಂಬುದಕ್ಕುಂ ಸೂಟಿಯೊಳ್ || ಶ. ಸ್ಮೃ. 77. ||

ಗಣನಾ ವಿಶೇಷಪರಿಪೂ- |
ರಣದೊಳವನಿತಿನಿತೆನಿತ್ತು ಶಬ್ದಂಗಳ ಪೂ- ||
ರಣದೊಳವನೆಯ ಪ್ರತ್ಯಯ |
ಮೊಣರ್ದು ಸಮಂತೊಂದಿ ತೋಱುಗುಂ ತದ್ಧಿತದೊಳ್ || ಶ. ಸ್ಮೃ. 81. ||

in quantity and number; ಮೆ for denoting so and so many times.

ಟ್ಟನೆ ಸಂಖ್ಯಾಪೂರಣದೊಳ್ ।
ಜನಿಯಿಪುದು ಮೆಯೆಂಬುದಕ್ಕುಮೆಣಿಸುವ ಸೂೞೊಳ್ ॥
‖ ೨೧೮ ‖

ಪದಚ್ಛೇದಂ. — ಅನೆಯಪ್ರತ್ಯಯಂ ಅನಿತು ಇನಿತು ಎನಿತು ಎಂಬ ಲಸತ್ಪ್ರಮಾಣ ಪೂರಣದೊಳ್ ನೆಟ್ಟನೆ ಸಂಖ್ಯಾಪೂರಣದೊಳ್ ಜನಿಯಿಪುದು; ಮೆ ಎಂಬುದು ಅಕ್ಕುಂ ಎಣಿಸುವ ಸೂೞೊಳ್.

ಅನ್ವಯಂ. — ಅನಿತಿನಿತೆನಿತೆಂಬ ಲಸತ್ಪ್ರಮಾಣಪೂರಣದೊಳ್ ನೆಟ್ಟನೆ ಸಂಖ್ಯಾಪೂರಣ ದೊಳ್ ಅನೆಯಪ್ರತ್ಯಯಂ ಜನಿಯಿಪುದು; ಎಣಿಸುವ ಸೂೞೊಳ್ ಮೆಯೆಂಬುದಕ್ಕುಂ.

ಟೀಕು. — ಅನಿತು = ಅನಿತೆಂದು; ಇನಿತು = ಇನಿತೆಂದು; ಎನಿತು = ಎನಿತೆಂದು; ಎಂಬ = ಎಂಬ; ಲಸತ್ = ಒಪ್ಪಲ್ಪಟ್ಟ; ಪ್ರಮಾಣಪೂರಣದೊಳ್ = ಪ್ರಮಾಣಪೂರಣದಲ್ಲಿ; ನೆಟ್ಟನೆ = ವ್ಯಕ್ತವಾಗಿ; ಸಂಖ್ಯಾ = ಲೆಕ್ಕದ; ಪೂರಣದೊಳ್ = ಪೂರಣದಲ್ಲಿ; ಅನೆಯಪ್ರತ್ಯ ಯಂ = ಅನೆಯ ಎಂಬ ಪ್ರತ್ಯಯಂ; ಜನಿಯಿಪುದು = ಹುಟ್ಟುವುದು; ಎಣಿಸುವ ಸೂೞೊಳ್ = ಎಣಿಸುವ ಸೂಳಲ್ಲಿ; ಮೆ ಎಂಬುದು = ಮೆ ಎಂಬ ಪ್ರತ್ಯಯಂ; ಅಕ್ಕುಂ = ಆಗುವುದು.

ವೃತ್ತಿ. — ಅನಿತಿನಿತೆನಿತೆಂಬ ಪ್ರಮಾಣಪೂರಣದೊಳಂ ಸಂಖ್ಯಾಪೂರಣ ದೊಳಂ ಅನೆಯಪ್ರತ್ಯಯಮಕ್ಕುಂ; ಎಣಿಸುವ ಸೂೞೊಳ್ ಮೆಯೆಂಬು ದಕ್ಕುಂ.

ಪ್ರಯೋಗಂ. — ಅನೆಯಪ್ರತ್ಯಯಕ್ಕೆ — ಅನಿತನೆಯಂ; ಇನಿತನೆಯಂ; ಎನಿತನೆಯಂ; ಒಂದನೆಯಂ; ಎರಡನೆಯಂ; ಮೂಱನೆಯಂ; ಪದಿನಾಱನೆ ಯಂ; ನೂಱನೆಯಂ; ಐನೂಱನೆಯಂ.

ಮೆ ಪ್ರತ್ಯಯಕ್ಕೆ — ಒರ್ಮೆ; ಇರ್ಮೆ; ಮೂರ್ಮೆ; ಸಾಸಿರ್ಮೆ; ಪಲರ್ಮೆ.

ಸೂತ್ರಂ[1]. ‖ ೨೧೯ ‖

In forming Feminines chiefly from bases with

ಕಾಂತಾವಿಷಯದೊಳಾದಮ- ।
ದಂತಕ್ಕಿತಿಯುಂ ತದಾದಿಲೋಪಮುಮಕ್ಕುಂ ॥

---

1) ಸ್ತ್ರೀಯಾಮಿತಿ ಚ ‖ ಶಾ. ಭೂ. 188. ‖
(ಸ್ತ್ರೀವಿಷಯದಲ್ಲಿ ಮೊದಲೊಳಿದ್ದ ಪದದ ಕಡೆಯಲ್ಲಿ ಇತಿಪ್ರತ್ಯಯ.)

final ಅ, the Suffixes ಇತಿ, ತಿ, ಅಳ್ or ಎ are added.

ಭ್ರಾಂತೆಂನಳಂತಮುಂ ನೆಗ- |
ಳ್ಗಿಂ ತೋಱದದರ್ಕದಂತದಲ್ಲಿ ವಿಕಲ್ಪಂ. || ೨೧೯ ||

ಪದಚ್ಛೇದಂ. — ಕಾಂತಾವಿಷಯದೊಳ್ ಅದಂ ಅದಂತಕ್ಕೆ ಇತಿಯುಂ ತದಾದಿಲೋಪಮುಂ ಅಕ್ಕುಂ; ಭ್ರಾಂತೆಂ, ಅಳಂತಮುಂ ನೆಗಳ್ಗಿಂ, ತೋಱದು ಅದರ್ಕೆ ಅದಂತದಲ್ಲಿ ವಿಕಲ್ಪಂ.

ಅನ್ವಯಂ. — ಅದರ್ಕೆ ಅದಂತದಲ್ಲಿ ವಿಕಲ್ಪಂ ತೋಱದು ಎಂಬುದನ್ವಯಂ.

ಟೀಕು. — ಕಾಂತಾವಿಷಯದೊಳ್ = ಸ್ತ್ರೀವಿಷಯದಲ್ಲಿ; ಅದಂ = ಅದಂ ಎಂಬ ಪೀಠ ಗ್ರಹಣದಿಂದೆ; ಅದಂತಕ್ಕೆ = ಅಕಾರಾಂತಕ್ಕೆ; ಇತಿಯುಂ = ಇತಿಯೆಂಬ ಪ್ರತ್ಯಯಮುಂ; ತದಾದಿಲೋಪಮುಂ = ಆ ಇತಿಪ್ರತ್ಯಯದಾದಿಗೆ ಲೋಪಮುಂ; ಅಕ್ಕುಂ = ಅಪ್ಪುದು; ಭ್ರಾಂತೆಂ = ಭ್ರಮೆಯೆಂ; ಅಳಂತಮುಂ = ಅಳ್ ಎಂಬ ಪ್ರತ್ಯಯಾಂತಮುಂ; ನೆಗಳ್ಗಿಂ = ಪ್ರಸಿದ್ಧಿವಡೆವುದು; ಅದರ್ಕೆ = ಆ ಅಳ್ ಎಂಬ ಪ್ರತ್ಯಯಕ್ಕೆ; ಅದಂತದಲ್ಲಿ = ಅಕಾರಾಂತದಲ್ಲಿ; ವಿಕಲ್ಪಂ = ವಿಕಲ್ಪಂ; ತೋಱದು = ಬಾರದು.

ವೃತ್ತಿ. — ಸ್ತ್ರೀವಿಷಯದೊಳದಂತಕ್ಕೆ ಇತಿಪ್ರತ್ಯಯಮುಂ, ಆದಿಯಿತ್ವಕ್ಕೆ ಲೋಪಮುಮ್ ಆದಮೆಂಬುದಱಿಂ ಕಿಱಿದೆಡೆಯೊಳಂ ಅದಂತಮಲ್ಲದಲ್ಲಿಯುಂ ಅದಂತಕ್ಕೆ ವಿಕಲ್ಪಮಿಲ್ಲದಳ್ಪ್ರತ್ಯಯಮುಂ ಆದಮೆಂಬುದಱಿಂದಂತಕ್ಕೆತ್ವಮುಮಕ್ಕುಂ.

ಇಲೋಪಃ ಪರಿಣಾಮಿನಃ || ಭಾ. ಭೂ. 189. ||
(ಆದೇಶ ಪಡೆದ ಶಬ್ದದಿಂದ ಪರವಾದ ಇತಿಪ್ರತ್ಯಯದಲ್ಲಿ ಇಕಾರಕ್ಕೆ ಲೋಪವು.)
ಅಳೀ ಚ ಗುಣವಚನೇಭ್ಯಃ || ಭಾ. ಭೂ. 190. ||
(ಗುಣವಚನಶಬ್ದಗಳಿಂದ ಪರವಾದ ಸ್ತ್ರೀಲಿಂಗವಿಷಯದಲ್ಲಿ ಅಳ್ ಎ ಪ್ರತ್ಯಯಗಳುಂಟು.)

ಈ ಪೇೞ್ದಸಿತುಂ ಶಬ್ದಕ- |
ಳಾಪಂ ಸ್ತ್ರೀವಿಷಯಮಾದೊಡಿತಿಪದಮಕ್ಕುಂ ||
ರೂಪಾನ್ಯತ್ವದೊಳಾದಿಗೆ |
ಲೋಪಂ ತತ್ಪ್ರತ್ಯಯಕ್ಕೆ ಸಂಭವಿಸಿರ್ಕುಂ || ಶ. ಸ್ಮೃ. 71. ||

ಇಂತಿದು ವಿಭಾಷೆಯಿಂ ವ- |
ರ್ಣಾಂತರದೊಳಮಕ್ಕುಮುಱದ ಗುಣವಚನಮುಕಾ- ||
ರಾಂತಮಳಂತಂ ಸ್ತ್ರೈಣದೊ- |
ಳಂತವಱಿಂ ಪೆಱವು ಪುಂಸ್ತ್ವದೊಳ್ ಸಮರೂಪಂ || ಶ. ಸ್ಮೃ. 72. ||

ಪ್ರಯೋಗಂ.— ಇತಿಗೆ — ಚಾಮರಿಗಿತಿ; ಮದ್ದಳಿಗಿತಿ; ಆವುಜಿಗಿತಿ; ಕನ್ನಡಿಗಿತಿ; ಲೇಪಾಳಿಗಿತಿ; ಪಂಚಮಿಗಿತಿ; ವೇರಡಿಗಿತಿ; ಕುಱುಂಬಿತಿ; ತೆಲುಂಗಿತಿ; ಚಿಪ್ಪಿಗಿತಿ; ಒಕ್ಕಲಿಗಿತಿ (ಒಕ್ಕಲಿತಿಯೆಂದುಮುಂಟು).

"ಒಕ್ಕಲಿತಿ ಜೋಡೆಯಾದಂ |
ತಕ್ಕುಮವಳ್ ಸಿತಗೆ ಪತಿಗೆ ಮಿಗೆ ಕಾಯ್ವಳ್ ನೋ- ||
ಟಕ್ಕೆ ಕಡುಸೊಂದಿ ನಾಣಿಲಿ |
ಒಕ್ಕಂಬಯಲೊಳಮದಾರುಮಂ ಭಂಜಿಸುವಳ್" || 470 ||

ಅದಂತಮಲ್ಲದಲ್ಲಿಯುಂ — ಅಕ್ಕಸಾಲಿತಿ; ಒಕ್ಕಲಿತಿ.

ಇತ್ವಲೋಪಕ್ಕೆ — ಮಣಿಗಾರ್ತಿ; ಕಂಚಗಾರ್ತಿ; ಗಾಡಿಗಾರ್ತಿ; ಗಾಡಿಕಾರ್ತಿ; ಬೇಟಕಾರ್ತಿ; ಸಜ್ಜೆವಳ್ತಿ; ಘಟ್ಟಿವಳ್ತಿ. ಪೊಲತಿ, ನರತಿ, ಎಡತಿ ಎಂಬ ಮೂಱು ಶಬ್ದದೆತ್ವಕ್ಕೆ ಸಮಾಸದಂತಿರತ್ವಂ.

ವಿಕಲ್ಪಮಿಲ್ಲದ ಅಳ್ಪ್ರತ್ಯಯಕ್ಕೆ — ಅವಳ್, ಇವಳ್, ಉವಳ್; ಆವಳ್; ಪೆಱಳ್; ಕಿಱಿಯಳ್; ಪಿರಿಯಳ್; ಅಸಿಯಳ್; ಇನಿಯಳ್; ಇಮ್ಮಿದಳ್; ಕಮ್ಮಿದಳ್.

ಕೃತ್ತಿನೊಳಮಪ್ಪುದರ್ಕೆ — ಓಸರಿಸಿದಳ್; ರಾಗಿಸಿದಳ್; ಭೋಗಿಸಿದಳ್; ಪಾಡಿಸಿದಳ್; ನೋಡಿದಳ್; ಒಸೆದಳ್; ಬೆಸೆದಳ್.

ಏತ್ವಕ್ಕೆ — ಜೋಡೆ; ಸಿತಗೆ; ಚದುರೆ; ಪಾಣ್ಬೆ.

ಸೂತ್ರಂ[1]. || ೨೦೮ ||

In the formation of Secondary nominal bases

ಚರಮಸ್ವರಕ್ಕೆ ಚರಮಾ- |
ಕ್ಷರಕಕ್ಕುಂ ಲೋಪಮಗ್ರದೊಳ್ ತದ್ಧಿತಮೊಂ- ||

---

1) ಅತ್ರಾಪಿ ಲೋಪಾದಿಕಾರ್ಯಂ ಸಮಾಸವತ್ || ಭಾ. ಭೂ. 193. ||
(ತದ್ಧಿತಪ್ರತ್ಯಯಗಳು ಪರದಲ್ಲಿರೆ ಲೋಪಾದಿಕಾರ್ಯಗಳು ಸಮಾಸದಂತೆ ಆಗುವುವು.)

ಇರೆ ತದ್ಧಿತಪ್ರಯೋಗಂ |
ಪರದೊಳ್ ಚರಮಸ್ವರಕ್ಕೆ ಲೋಪಮುದಕ್ಕುಂ ||
ನಿರವಿಸಿ ಮುನ್ನ ಸಮಾಸಾಂ- |
ತರದೊಳ್ ಪೇಱ್ದೊಂದು ಕಾರ್ಯಮುಂ ಬಂದಿರ್ಕುಂ || ಶ. ಸ್ಮೃ. 82. ||

there appears also an Elision of vowels and consonants, and a Changing of consonants similar to what we see in the chapters Compounds (III) and Verbs (V).

ದಿರೆ ತನ್ನೊಳಾ ಸಮಾಸಾಂ- ||
ತರದಾಖ್ಯಾತಕದ ಲಕ್ಷಣಂ ವ್ಯವಹರಿಕುಂ. || ೨೨೦ ||

ಪದಚ್ಛೇದಂ.— ಚರಮಸ್ವರಕ್ಕೆ ಚರಮಾಕ್ಷರಕೆ ಅಕ್ಕುಂ ಲೋಪಂ, ಅಗ್ರದೊಳ್ ತದ್ಧಿತಂ ಒಂದಿ ಇರೆ; ತನ್ನೊಳ್ ಆ ಸಮಾಸಾಂತರದ ಆಖ್ಯಾತಕದ ಲಕ್ಷಣಂ ವ್ಯವಹರಿಕುಂ.

ಅನ್ವಯಂ.— ಅಗ್ರದೊಳ್ ತದ್ಧಿತಂ ಒಂದಿರೆ, ಚರಮಸ್ವರಕ್ಕೆ ಚರಮಾಕ್ಷರಕೆ ಲೋಪಂ ಅಕ್ಕುಂ; ತನ್ನೊಳ್ ಆ ಸಮಾಸಾಂತರದ ಆಖ್ಯಾತಕದ ಲಕ್ಷಣಂ ವ್ಯವಹರಿಕುಂ.

ಟೀಕು.— ಅಗ್ರದೊಳ್ = ಮುಂದೆ; ತದ್ಧಿತಂ = ತದ್ಧಿತಪ್ರತ್ಯಯಂ; ಒಂದಿರೆ = ಕೂಡಿರೆ; ಚರಮಸ್ವರಕ್ಕೆ = ಅಂತ್ಯದ ಸ್ವರಕ್ಕೆ; ಚರಮಾಕ್ಷರಕೆ = ಅಂತ್ಯದಕ್ಷರಕ್ಕೆ; ಲೋಪಂ = ಅದರ್ಶನಂ; ಅಕ್ಕುಂ = ಅಪ್ಪುದು; ತನ್ನೊಳ್ = ತದ್ಧಿತವೊಂದಿದ ಪದಂ ತನ್ನಲ್ಲಿ; ಆ ಸಮಾಸಾಂತರದ = ಆ ಸಮಾಸಪ್ರಕರಣಮಧ್ಯದ; ಆಖ್ಯಾತಕದ = ಆಖ್ಯಾತಪ್ರಕರಣದ; ಲಕ್ಷಣಂ = ಲಕ್ಷಣವಾದ ಸೂತ್ರಂ; ವ್ಯವಹರಿಕುಂ = ವ್ಯವಹರಿಸುವುದು.

ವೃತ್ತಿ.— ತದ್ಧಿತಪ್ರತ್ಯಯಂ ಪರದೊಳಿರೆ, ಅಂತ್ಯಸ್ವರಕ್ಕಮಂತ್ಯಾಕ್ಷರಕ್ಕಂ ಲೋಪಂ; ಸಮಾಸಾಂತರಾಳಲಕ್ಷಣಮುಂ ಆಖ್ಯಾತಲಕ್ಷಣಮುಂ ತದ್ಧಿತದೊಳೆ ವ್ಯವಹರಿಸುಗುಂ.

ಪ್ರಯೋಗಂ.— ಸ್ವರಲೋಪಕ್ಕೆ — ಘಟ್ಟಿವಳ್ತಿ; ಸೆಜ್ಜೆವಳ್ತಿ; ತೆಲುಂಗಿತಿ; ಜೋಸರಗಿತಿ; ದೇಸಿಗಿತಿ; ಕಮ್ಮಱಿತಿ; ನಾವಿದಿತಿ; ಹಾದರಿಗಿತಿ.

(ಱು, ದು ಎಂಬ) ಅಕ್ಷರಂಗಳ ಲೋಪಕ್ಕೆ—ಏೞುತಕ್ಕೆ ಏತಂ; ಓದಿಂಗೆ ಓತಂ.

ಸಮಾಸಲಕ್ಷಣಕ್ಕೆ— ಮಾಲೆಗಾಱನೆಂಬುದಱ ಱಕಾರಕ್ಕೆ ರೇಫಮಾದುದಾಗಿ ಮಾಲೆಗಾರ್ತಿ; ಕಂಚಗಾರ್ತಿ; ಜಾಲಗಾರ್ತಿ; ಬಳೆಗಾರ್ತಿ; ಪಂಚಗಾರ್ತಿ, ಒಲಗಾರ್ತಿ.

ಆಖ್ಯಾತಲಕ್ಷಣಕ್ಕೆ— ಆಟಂ; ಪಾಟಂ; ನೋಟಂ; ಕೂಟಂ.

ಸೂತ್ರಂ. || ೨೧೯ ||

One class of Abstract nouns (ಭಾವಾರ್ಥಂಗಳ್) is formed by adding ಎ, ವು or ವೆ to (Verbal) themes, in which case ಅ frequently generates before the Suffixes (cf. S. 218);—another class by adding ತ or ತೆ.

ಇತ್ವದೊಳುತ್ವದೊಳಾ ಹ್ರ- |
ಸ್ವೈತ್ವದೊಳೊಂದಿದ ವಕಾರಮಕ್ಕುಂ ಭಾವ- ||
ಕ್ಕತ್ವಂ ಪಿರಿದುಂ ಪೆಱಗುಂ- |
ಟತ್ವಂ ಹ್ರಸ್ವೈತ್ವತತ್ವಮದು ಕೆಲವೆಡೆಯೊಳ್. || ೨೨೧ ||

ಪದಚ್ಛೇದಂ.— ಇತ್ವದೊಳ್ ಉತ್ವದೊಳ್ ಆ ಹ್ರಸ್ವೈತ್ವದೊಳ್ ಒಂದಿದ ವಕಾರಂ ಅಕ್ಕುಂ ಭಾವಕ್ಕೆ; ಅತ್ವಂ ಪಿರಿದುಂ ಪೆಱಗೆ ಉಂಟು. ಅತ್ವಂ ಹ್ರಸ್ವೈತ್ವತತ್ವಂ ಅದು ಕೆಲವೆಡೆಯೊಳ್.

ಅನ್ವಯಂ.— ಭಾವಕ್ಕೆ ಇತ್ವದೊಳ್ ಉತ್ವದೊಳ್ ಆ ಹ್ರಸ್ವೈತ್ವದೊಳ್ ಒಂದಿದ ವಕಾರಂ ಅಕ್ಕುಂ; ಅತ್ವಂ ಪಿರಿದುಂ ಪೆಱಗೆ ಉಂಟು. ಕೆಲವೆಡೆಯೊಳ್ ಅತ್ವಂ ಹ್ರಸ್ವೈತ್ವತತ್ವಂ ಅದು.

ಟೀಕು.— ಭಾವಕ್ಕೆ = ಭಾವಾರ್ಥಕ್ಕೆ; ಇತ್ವದೊಳ್ = ಇಕಾರದಲ್ಲಿ; ಉತ್ವದೊಳ್ = ಉಕಾರದಲ್ಲಿ; ಆ ಹ್ರಸ್ವೈತ್ವದೊಳ್ = ಆ ಹ್ರಸ್ವವಾದೆಕಾರದಲ್ಲಿ; ಒಂದಿದ ವಕಾರಂ = ಕೂಡಿದ ವಕಾರಂ; ಅಕ್ಕುಂ = ಆಗುವುದು; ಅತ್ವಂ = ಅಕಾರಂ; ಪಿರಿದುಂ = ವಿಶೇಷವಾಗಿ; ಪೆಱಗೆ = ಹಿಂದೆ; ಉಂಟು = ಉಂಟಾಗುವುದು; ಕೆಲವೆಡೆಯೊಳ್ = ಕೆಲವು ತಾವಿನಲ್ಲಿ; ಅತ್ವಂ ಹ್ರಸ್ವೈತ್ವ ತತ್ವಂ = ಅಕಾರಮುಂ ಹ್ರಸ್ವದೆಕಾರಮುಂ ಕೂಡಿದ ತಕಾರಂ; ಅದು = ಅದು ಆಗುವುದು.

ವೃತ್ತಿ.— ಇಕಾರದೊಳಂ ಉಕಾರದೊಳಂ ಎಕಾರದೊಳಂ ಕೂಡಿದ ಭಾವಾರ್ಥದ ವಕಾರಮಿರ್ದೊಡೆ ಅದಱ ಪಿಂದೆ ಅಕಾರಮಕ್ಕುಂ; ಅತ್ವಮೆತ್ವಮಂ ತಳೆದ ತಕಾರಂ ಕೆಲವೆಡೆಯೊಳಕ್ಕುಂ.

ಪ್ರಯೋಗಂ.— ವಕಾರಕ್ಕೆ— ತೋಱವಿ, ಅಳವಿ, ಬಳವಿ; ಉಱವು, ಪೆಳವು (ಪೆಱವು), ಕೆಳವು, ತೆರವು, ಎರವು; ಮಱವೆ, ತೆಱವೆ, ಪಳವೆ, ಎಳವೆ.

ವ್ಯಂಜನದ ಮೇಲಣತ್ವಕ್ಕೆ— ನಿಲವು; ಒಲವು; ಬಲವು; ಸಲವು; ಗೆಲವು; ಇರವು; ಬರವು; ಕಳವು.

ಪಿರಿದೆಂಬುದಱಿಂದತ್ವಮಿಲ್ಲದಲ್ಲಿಯುಂ ಇವಾದುವು— ಉಱುವು; ಕಳೆವು; ತಿಳಿವು; ಅಱಿವು; ಪಱಿವು.

ತಕಾರಕ್ಕೆ— ಅಱಿತಂ, ಕಡಿತಂ, ಉಱಿತಂ; ಏತಂ, ಓತಂ, ಎರ್ತಂ, ಪೊರ್ತಂ.

ತೆಕಾರಕ್ಕೆ— ಅಗಲ್ತೆ, ಪೊಗಳ್ತೆ, ನೆಗಟ್ತೆ, ಪುಗುತ್ತೆ.

ಸೂತ್ರಂ[1]. || ೨೧೦ || ಇಕೆ-ತನಂ-ಉಮೆ-ಅಮೆ-ಗೆ-ಕೆ-ಮೆ-ಪು-ಪಿ-ಉ

ಪ್ರಕಟಂ ಚೇತನಭಾವದೊ- |
ಳಿಕೆ ತನಮುಮೆಯಕ್ಕುಮುೞಿದ ಭಾವದೊಳಮೆಯುಂ ||
ಗೆ ಕೆ ಮೆಗಳುಮುತ್ವದಿತ್ವದ |
ಪಕಾರಮುಂ ಮತ್ತುಕಾರಮುಂ ಸಮನಿಸುಗುಂ. || ೨೨೨ ||

Further, Abstract nouns denoting distinction (ಚೇತನಂ) are formed by the Suffixes ಇಕೆ, ಇಕ್ಕೆ (being added to bases with a final vowel), and ತನ (not to be added to Samskṛit bases). Others are formed by means of ಉಮೆ, ಅಮೆ, ಗೆ, ಕೆ, ಮೆ, ಪು, ಪಿ and ಉ.

ಪದಚ್ಛೇದಂ. — ಪ್ರಕಟಂ ಚೇತನಭಾವದೊಳ್ ಇಕೆ ತನಂ ಉಮೆ ಅಕ್ಕುಂ; ಉೞಿದ ಭಾವದೊಳ್ ಅಮೆಯುಂ ಗೆ ಕೆ ಮೆಗಳುಂ ಉತ್ವದ ಇತ್ವದ ಪಕಾರಮುಂ ಮತ್ತೆ ಉಕಾರಮುಂ ಸಮನಿಸುಗುಂ.

ಅನ್ವಯಂ. — ಚೇತನಭಾವದೊಳ್ ಇಕೆ ತನಂ ಉಮೆ ಪ್ರಕಟಂ ಅಕ್ಕುಂ. ಉಳಿದುದು ಯಥಾನ್ವಯಂ.

ಟೀಕು. — ಚೇತನಭಾವದೊಳ್ = ಚೈತನ್ಯಭಾವದಲ್ಲಿ; ಇಕೆ = ಇಕೆ ಎಂಬ ಪ್ರತ್ಯಯಂ; ತನಂ = ತನಂ ಎಂಬ ಪ್ರತ್ಯಯಂ; ಉಮೆ = ಉಮೆ ಎಂಬ ಪ್ರತ್ಯಯಂ; ಪ್ರಕಟಂ = ಪ್ರಸಿದ್ಧಂ; ಅಕ್ಕುಂ = ಆಗುವುದು; ಉೞಿದ ಭಾವದೊಳ್ = ಚೈತನ್ಯಭಾವವಲ್ಲದುಳಿದ ಭಾವದಲ್ಲಿ; ಅಮೆಯುಂ = ಅಮೆ ಎಂಬ ಪ್ರತ್ಯಯಮುಂ; ಗೆ ಕೆ ಮೆಗಳುಂ = ಗೆ ಪ್ರತ್ಯಯ, ಕೆ ಪ್ರತ್ಯಯ, ಮೆ ಪ್ರತ್ಯಯಂಗಳುಂ; ಉತ್ವದ = ಉಕಾರದ; ಇತ್ವದ = ಇಕಾರದ; ಪಕಾರಮುಂ = ಪತ್ವಮುಂ; ಮತ್ತೆ = ಬಳಿಕಂ; ಉಕಾರಮುಂ = ಉ ಪ್ರತ್ಯಯಮುಂ; ಸಮನಿಸುಗುಂ = ಬರ್ಪುವು.

---

[1] ಭಾವೇ ಕೆಪೂ || ಭಾ. ಭೂ. 178. ||
(ಭಾವಾರ್ಥದಲ್ಲಿ ಕೆ, ಪು ಎಂಬ ಪ್ರತ್ಯಯಗಳುಂಟು.)
ಚೇತನೇಽಪ್ಯಿಕೆ ಉಮೆತನಾನಿ || ಭಾ. ಭೂ. 179. ||
(ಚೇತನವಿಷಯದಲ್ಲಿ ಭಾವಾರ್ಥಕ್ಕೆ ಇಕೆ, ಉ, ಮೆ, ತನ ಎಂಬ ಪ್ರತ್ಯಯಗಳುಂಟು.)

ತನಮಿಕೆಯುಮೆಂಬಿವುಂ ಚೇ- |
ತನಭಾವದೊಳಕ್ಕುಮುೞಿದ ಭಾವಾರ್ಥದೊಳಂ ||
ತನಿತಱೊಳಂ ಪುಕೆಯೆಂಬಿವು |
ಜನಿಯಿಕುಮಂತಲ್ಲಿ ಕಬ್ಬಿರುಕ್ತ ವಿಕಲ್ಪಂ || ಶ. ಸ್ಮೃ. 76. ||

ವೃತ್ತಿ.—ಚೇತನಭಾವದೊಳಿಕೆಯೆಂಬುದುಂ ತನಮೆಂಬುದುಂ ಉಮೆಯೆಂಬುದುಂ ಅಕ್ಕುಂ; ಉಱಿದ ಭಾವದೊಳ್ ಅಮೆ ಎಂದುಂ, ಗೆ ಎಂದುಂ, ಕೆ ಎಂದುಂ, ಮೆ ಎಂದುಂ, ಪು ಎಂದುಂ, ಪಿ ಎಂದುಂ, ಉ ಎಂದುಂ ಅಕ್ಕುಂ.

ಪ್ರಯೋಗಂ.—ಇಕೆಗೆ—ಉನ್ನತಿಕೆ; ಉದ್ಧತಿಕೆ; ಪನ್ನತಿಕೆ; ಆಯತಿಕೆ; ಬಲ್ಗಂಡಿಕೆ; ಮಾನಸಿಕೆ.

ಇಕೆಗೆ ದ್ವಿತ್ವಮುಂಟು—ಉನ್ನತಿಕ್ಕೆ ಉದ್ಧತಿಕ್ಕೆ.

ವ್ಯಂಜನಾಂತದ ಮೇಲೆ ಇಕೆಯಂ ಪತ್ತಿಸಲಾಗದು—ಕಾಣಿಕೆ, ಪೂಣಿಕೆ, ಜಾಣಿಕೆ, ತೆರಳಿಕೆ ಎಂದೊಡೆ ದೋಷಂ.

ತನಕ್ಕೆ—ಕಲಿತನಂ ಚದುರತನಂ, ಆಳ್ತನಂ, ಎಗ್ಗತನಂ, ಮರುಳ್ತನಂ, ಪೆಣ್ತನಂ. ಸಂಸ್ಕೃತದೊಳಿದು ಸಲ್ಲದು; ಆರೋಹಕತನಮೆಂಬುದಬದ್ಧಂ.

ಉಮೆಗೆ—ತಕ್ಕುಮೆ.

ಅಮೆಗೆ—ತೀರಮೆ; ಅಟ್ಟಿಮೆ.

ಗೆಕಾರಕ್ಕೆ—ಉಡುಗೆ; ಪಸುಗೆ; ಪೊಲ್ಗೆ; ಬಿಸುಗೆ; ಪಣ್ಣುಗೆ; ಪತ್ತುಗೆ.

ಕೆಕಾರಕ್ಕೆ—ಮಡಿಕೆ; ಹಡಿಕೆ; ಕಾಣ್ಕೆ; ಪೂಣ್ಕೆ; ತೆರಳ್ಕೆ; ನಿಮಿರ್ಕೆ; ತೋರ್ಕೆ.

ಮೆಕಾರಕ್ಕೆ—ಒಲ್ಮೆ; ಬಲ್ಮೆ; ಜಾಣ್ಮೆ; ಕಡುಮೆ; ಮೈಮೆ; ಕೂರ್ಮೆ; ಪೆರ್ಮೆ.

ಪುಕಾರಕ್ಕೆ—ಪಡೆಪು; ಕಡುಪು; ಪರೆಪು; ಬಲ್ಪು; ಮೆಲ್ಪು; ತಣ್ಪು; ನುಣ್ಪು; ಕರ್ಪು; ಪಸುರ್ಪು; ಕೆಂಪು; ಪೆಂಪು; ಬಿಸುಪು.

ಪಿಕಾರಕ್ಕೆ—ಕಲ್ಪಿ.

ಉಕಾರಕ್ಕೆ—ಉಗ್ಗು; ಸಿಗ್ಗು; ಎಗ್ಗು; ಕಿವ್ವುಡು; ಕೆಂಚು; ಗುಜ್ಜು; (ಬೆಜ್ಜು).

ಸೂತ್ರಂ ॥ ೨೧೧ ॥

The Noun ಪೆಂಪು mentioned under S. 211, is formed from ಪಿರಿದು.

ಪಿರಿದೆಂಬೀ ರೇಫಕ್ಕಾ-।
ಚರಿಪರ್ ಭಾವಾರ್ಥಮಪ್ಪುದೊಂದು ಪುಕಾರಂ ॥
ಪರಮಾಗೆ ಬಿಂದುವಂ ವಾ-।
ಕ್ಪರಿಣತರಿಂ ಸಿದ್ಧಮಾಯ್ತು ಪೆಂಪೆಂಬ ಪದಂ. ॥ ೨೨೩ ॥

ಪದಚ್ಛೇದಂ. — ಪಿರಿದು ಎಂಬ ಈ ರೇಫಕ್ಕೆ ಆಚರಿಪರ್, ಭಾವಾರ್ಥಂ ಅಪ್ಪುದು ಒಂದು ಪುಕಾರಂ ಪರಂ ಆಗೆ, ಬಿಂದುವಂ; ವಾಕ್ಪರಿಣತರಿಂ ಸಿದ್ಧಂ ಆಯ್ತು ಪೆಂಪು ಎಂಬ ಪದಂ.

ಅನ್ವಯಂ. — ಭಾವಾರ್ಥಂ ಅಪ್ಪುದು ಒಂದು ಪುಕಾರಂ ಪರಂ ಆಗೆ, ಪಿರಿದು ಎಂಬೀ ರೇಫಕ್ಕೆ ಬಿಂದುವಂ ಆಚರಿಪರ್; ವಾಕ್ಪರಿಣತರಿಂ ಪೆಂಪು ಎಂಬ ಪದಂ ಸಿದ್ಧಂ ಆಯ್ತು.

ಟೀಕು. — ಭಾವಾರ್ಥಂ = ಭಾವಾರ್ಥಂ; ಅಪ್ಪುದು = ಆಗುವುದು; ಒಂದು ಪುಕಾರಂ = ಒಂದು ಪುಪ್ರತ್ಯಯಂ; ಪರಮಾಗೆ = ಪರವಾಗೆ; ಪಿರಿದೆಂಬೀ ರೇಫಕ್ಕೆ = ಪಿರಿದು ಎಂಬ ಶಬ್ದದ ರೇಫೆಗೆ; ಬಿಂದುವಂ = ಸೊನ್ನೆಯಂ; ಆಚರಿಪರ್ = ಪೇಳ್ವರ್; ವಾಕ್ಪರಿಣತರಿಂ = ವಾಕ್ಪ್ರೌಢರಿಂದೆ; ಪೆಂಪೆಂಬ ಪದಂ = ಪೆಂಪು ಎಂಬ ಪದಂ; ಸಿದ್ಧಂ = ಪ್ರಸಿದ್ಧಂ; ಆಯ್ತು = ಆಯಿತ್ತು.

ವೃತ್ತಿ. — ಭಾವಾರ್ಥದ ಪುಕಾರಂ ಪರಮಾಗೆ, ಪಿರಿದೆಂಬ ರೇಫಕ್ಕೆ ಬಿಂದುವುಂ ಪಿರಿಗಣಿತ್ವಕ್ಕೆತ್ವಮುಮಕ್ಕುಂ.

ಪ್ರಯೋಗಂ. — ಪೆಂಪು. — ಭಾವದೊಳ್ ಕಪ್ರತ್ಯಯಮುಂಟು, ಉಡುಕಂ ನಡುಕಮೆಂಬಂತೆ.

ಸೂತ್ರಂ[1]. || ೨೧೨ ||

Besides, Abstract nouns are formed by changing the Verbal theme, viz. its penultimate; when ಇ, it may become ಎ; when ಉ, ಒ; when short, long; when ಡು, ಟ. — Also the Verbal theme itself may form an Abstract noun.

ಮೊದಲಿತ್ವಕ್ಕೇತ್ವಮುಮು- |
ತ್ವದೊಳೋತ್ವಮುಮೆಸೆವ ದೀರ್ಘಮುಂ ಚರಮಕ್ಕ- ||
ತ್ವದ ವಿಧಿಯುಂ ಧಾತುಗೆ ಭಾ- |
ವದೊಳಕ್ಕುಂ ಧಾತು ನಿಜದೆ ಭಾವಮದಕ್ಕುಂ. ||೨೨೪||

ಪದಚ್ಛೇದಂ. — ಮೊದಲ ಇತ್ವಕ್ಕೆ ಏತ್ವಮುಂ, ಉತ್ವದೊಳ್ ಓತ್ವಮುಂ, ಎಸೆವ ದೀರ್ಘಮುಂ, ಚರಮಕ್ಕೆ ಅತ್ವದ ವಿಧಿಯುಂ ಧಾತುಗೆ ಭಾವದೊಳ್ ಅಕ್ಕುಂ; ಧಾತು ನಿಜದೆ ಭಾವಂ ಅದು ಅಕ್ಕುಂ.

---

1) ಅತಿ ಟಃ || ಭಾ. ಭೂ. 120. ||
(ಡಕಾರಕ್ಕೆ ಅ ಪ್ರತ್ಯಯವು ಪರವಾದರೆ ಟಕಾರವಾಗುವುದು.)

ಅನ್ವಯಂ.— ಧಾತುಗೆ ಭಾವದೊಳ್ ಮೊದಲ ಇತ್ವಕ್ಕೆ ಏತ್ವಮುಂ, ಉತ್ವದೊಳ್ ಓತ್ವಮುಂ, ಎಸೆವ ದೀರ್ಘಮುಂ, ಚರಮಕ್ಕೆ ಅತ್ವದ ವಿಧಿಯುಂ ಅಕ್ಕುಂ; ಧಾತು ಅದು ನಿಜದೆ ಭಾವಂ ಅಕ್ಕುಂ.

ಟೀಕು.— ಧಾತುಗೆ = ಧಾತುಗಳ್ಗೆ; ಭಾವದೊಳ್ = ಭಾವಾರ್ಥದಲ್ಲಿ; ಮೊದಲ = ಆದಿಯ; ಇತ್ವಕ್ಕೆ = ಇಕಾರಕ್ಕೆ; ಏತ್ವಮುಂ = ಏಕಾರಮುಂ; ಉತ್ವದೊಳ್ = ಉಕಾರದಲ್ಲಿ; ಓತ್ವಮುಂ = ಓಕಾರಮುಂ; ಎಸೆವ = ಒಪ್ಪುವ; ದೀರ್ಘಮುಂ = ದೀರ್ಘವುಂ; ಚರಮಕ್ಕೆ = ಅಂತ್ಯಕ್ಕೆ; ಅತ್ವದ ವಿಧಿಯುಂ = ಅಕಾರದ ವಿಧಿಯುಂ; ಅಕ್ಕುಂ = ಅಪ್ಪುದು; ಧಾತು = ಧಾತು; ನಿಜದೆ = ನಿಜದಿಂದೆ; ಭಾವಂ = ಭಾವಾರ್ಥಂ; ಅಕ್ಕುಂ = ಆಗುವುದು.

ವೃತ್ತಿ.— ಭಾವದೊಳ್ಧಾತುವಿನ ಮೊದಲಿಕಾರಕ್ಕೇಕಾರಮುಂ ಉತ್ವದೊಳೋತ್ವಮುಂ ಹ್ರಸ್ವಕ್ಕೆ ದೀರ್ಘಮುಮಕ್ಕುಂ; ಧಾತುವಿನ ಕಡೆಯೊಳತ್ವಮಕ್ಕುಂ; ಸಹಜಧಾತುವುಂ ಭಾವಮಕ್ಕುಂ.

ಪ್ರಯೋಗಂ.— ಏತ್ವಕ್ಕೆ—(ಕಿಡು ಇಸು ಧಾತುಗಳ್ಗೆ) ಕೇಡು, ಏಸು.

ಓತ್ವಕ್ಕೆ— ತೋಡು; ಕೋಡು. ತೋಡೆಂಬುದು ಜೆಟ್ಟಿಯೊಳಮೆಣೆಯೊಳಮುಂಟು.

ದೀರ್ಘಕ್ಕೆ— ಈಡು; ಬೀಡು; ಸೂಡು.

ಕಡೆಯಣತ್ವಕ್ಕೆ— ಆಟಂ; ಪಾಟಂ; ತೀಟಂ; ನೋಟಂ.

ನಿಜಧಾತುಗೆ— ತಡೆ; ನಡೆ; ಬಿಸು; ಪೆರ್ಚು; ಮರ್ಚು; ಉರ್ಕು; ಸೊರ್ಕು; ದಾಂಟು; ಕೊಂಟು.

ಸೂತ್ರಂ[1]. || ೨೧೩ ||

ಪೋಲ್ may form a Compound with ಅಂತೆ (ಅಂತಪೋಲ್),

ಪೋಲೆಂಬಂತೆಂಬೆರಡುಂ |
ಪೋಲಿಸುವೆಡೆಗಾದುವಂತೆವೋಲೆನಲಕ್ಕುಂ ||

[1]) ಉಪಮಾನೇ ಪೋಲ್ || ಭಾ. ಭೂ. 173. ||
(ಉಪಮಾನಾರ್ಥದಲ್ಲಿ ಪೋಲ್ ಪ್ರತ್ಯಯ.)
ಹ್ರಸ್ವೋಽಪಿ ವಾ || ಭಾ. ಭೂ. 174. ||
(ಆ ಪ್ರತ್ಯಯಕ್ಕೆ ವಿಕಲ್ಪದಿಂದ ಹ್ರಸ್ವವುಂಟು.)
ಅಕಾರಾಂತಾನ್ನಾಗಮೋ ಬಶ್ರುತಿಶ್ಚ || ಭಾ. ಭೂ. 175. ||

or may become ವೋಲ್; following a word with final ಅ (and forming a kind of Compound) the Bindu is inserted and ವೋಲ್ becomes ಬೋಲ್.

ವೋಲೊಳ್ ಹ್ರಸ್ವಮುಮಕ್ಕುಂ |
ಮೇಲತ್ವಕ್ಕುಂಟು ಬಿಂದು ವತ್ವಂ ಬತ್ವಂ. || ೨೨೫ ||

ಪದಚ್ಛೇದಂ.— ವೋಲ್ ಎಂಬ ಅಂತೆ ಎಂಬ ಎರಡುಂ ಪೋಲಿಸುವ ಎಡೆಗೆ ಆದುವು; ಅಂತೆವೋಲ್ ಎನಲ್, ಅಕ್ಕುಂ; ವೋಲೊಳ್ ಹ್ರಸ್ವಮುಂ ಅಕ್ಕುಂ; ಮೇಲೆ ಅತ್ವಕ್ಕೆ ಉಂಟು ಬಿಂದು, ವತ್ವಂ ಬತ್ವಂ.

ಅನ್ವಯಂ.— ಪೋಲಿಸುವೆಡೆಗೆ ವೋಲೆಂಬಂತೆಂಬೆರಡುಂ ಆದುವು; ಅಂತೆವೋಲೆನಲ್, ಅಕ್ಕುಂ; ವೋಲೊಳ್ ಹ್ರಸ್ವಮುಂ ಅಕ್ಕುಂ; ಮೇಲೆ ಅತ್ವಕ್ಕೆ ಬಿಂದು ಉಂಟು, ವತ್ವಂ ಬತ್ವಂ.

ಟೀಕು.— ಪೋಲಿಸುವೆಡೆಗೆ = ಪೋಲಿಸುವ ತಾವಿಂಗೆ; ವೋಲೆಂಬಂತೆಂಬೆರಡುಂ = ವೋಲ್ ಎಂಬ ಅಂತೆ ಎಂಬ ಎರಡುಂ; ಆದುವು = ಸಲುವಳಿಯಾದುವು; ಅಂತೆವೋಲೆನಲ್ = ಅಂತೆವೋಲ್ ಎಂದು, ಪೇಳಲ್; ಅಕ್ಕುಂ = ಆಗುವುದು; ವೋಲೊಳ್ = ವೋಲ್ ಎಂಬುದರಲ್ಲಿ; ಹ್ರಸ್ವಮುಂ = ಹ್ರಸ್ವಮುಂ; ಅಕ್ಕುಂ = ಆಗುವುದು; ಮೇಲೆ = ಆ ಮೇಲೆ; ಅತ್ವಕ್ಕೆ = ಅಕಾರಾಂತಶಬ್ದಕ್ಕೆ; ಬಿಂದು = ಸೊನ್ನೆ; ಉಂಟು = ಉಂಟಾಗುವುದು; ವತ್ವಂ = ವಕಾರಂ; ಬತ್ವಂ = ಬಕಾರಂ ಆಗುವುದು.

ವೃತ್ತಿ.— ವೋಲೆಂಬುದುಂ ಅಂತೆ ಎಂಬುದುಂ ಉಪಮೆಯೊಳ್ ಪ್ರತ್ಯೇಕಂ ಪತ್ತುಗುಂ; ಅಂತೆವೋಲೆಂಬೆರಡುಮನೊಂದು ಮಾಡಿ ಪೇೞ್ದೊಡಂ ಪುನರುಕ್ತ ದೋಷಮಿಲ್ಲ; ವೋಲೆಂಬುದು ವಿಕಲ್ಪದಿಂ ಹ್ರಸ್ವಮುಮಕ್ಕುಂ; ಅದಂತಕ್ಕೆ ಮುಂದೆ ವಕಾರಂ ಬಿಂದುವೆರಸು ಬಕಾರಮಕ್ಕುಂ.

(ಅಕಾರಾಂತಶಬ್ದದಿಂದ ವೋಲ್ ಪರವಾದರೆ ಆ ಶಬ್ದದ ಮುಂದೆ ಮಕಾರಾಗಮವೂ ವೋಲ್ ಎಂಬ ಶಬ್ದದ ವಕಾರಕ್ಕೆ ಬಕಾರವೂ ಬರುವುದು.)

ಎಲ್ಲಂದದೊಳಂ ಪೋಲಿಸು- |
ವಲ್ಲಿ ಗುಣಾಧಿಕರೊಳಂತೆವೋಲ್ ತಾನಕ್ಕುಂ || ಶ. ಸ್ಮೃ. 74. ||

ಅವಱೊಳ್ ವೋಲ್ಗಕ್ಕುಂ ಹ್ರ |
ಸ್ವವಿಧಾನಂ ಪಾಕ್ಷಿಕಂ ಮಕಾರಾಗಮದಿಂ ||
ವ್ಯವಧಾನಮವರ್ಣಕ್ಕ- |
ಕ್ಕವಲ್ಲಿ ಬಶ್ರುತಿ ವಕಾರದೊಳ್ ನೆಲೆಗೊಳ್ಗುಂ || ಶ. ಸ್ಮೃ. 75. ||

ಪ್ರಯೋಗಂ.—

"ಜಲನಿಧಿಯ ವೋಲ್ ಗಭೀರಂ |
ಬಲವೈರಿಯ ವೋಲ್ ಸಮಗ್ರವಿಭವಸನಾಥಂ ||
ಕುಲಗಿರಿವೋಲ್ ನಿಷ್ಕಂಪಂ |
ಬಲಿಯಂತೆವೋಲಧಿಕದಾನಿ ದಾನವಿನೋದಂ" || 471 ||

"ಗಿರಿಯಂತೆ ಬಿಣ್ಪಿದಂ ಸುರ- |
ಕರಿಯಂತೆ ಬಲಾಢ್ಯನಬ್ಧಿಯಂತೆ ಗಭೀರಂ" || 472 ||

". . . ರವಿಸುತನಂತೆವೋಲಧಿಕದಾನಿ ಪರಾಕ್ರಮಿ ಸಿಂಹದಂತೆವೋಲ್" || 473 ||

"ಆ ಮುನೀಶ್ವರಂ ಶಾಂತರಸದ ಕಡಲ ವೋಲಿರ್ದಂ" || 474 ||

"ನಿಜತೇಜಂ ನೀಳ್ದ ಕರ್ನೆಯ್ದಿಲ ವೊಲಿರೆ ತನುಚ್ಛಾಯೆಯಿಂ. . . ." || 475 ||

"ಇಂದ್ರಂಬೋಲ್ ವಿಭವಯುತಂ |
ಚಂದ್ರಂಬೋಲ್ ಕಾಂತಿವಂತನಾದಿತ್ಯಂಬೋಲ್ ||
ಸಾಂದ್ರಪರಿಪೂರ್ಣತೇಜನು |
ಪೇಂದ್ರಂಬೋಲ್ ನೀತಿನಿಪುಣನಾ ನರನಾಥಂ" || 476 ||

ಸೂತ್ರಂ. || ೨೧೪ ||

The Author mentions two other Suffixes: ಆಯಿಲ (put as well to Saṁskṛita as Kanarese bases) and ವಳಿ; and for further ones refers his readers to the writings of other grammarians.

ಒದವಿರ್ಕುಂ ಸಂಸ್ಕೃತವೆ- |
ನ್ನದೆ ಕನ್ನಡವೆನ್ನದಾಯಿಲಪ್ರತ್ಯಯಮಂ- ||
ತದು ತಾನಿವು ಮೊದಲಾಗಱಿ- |
ವುದನ್ವಿತರ್ ಮಿಕ್ಕ ತದ್ಧಿತಪ್ರತ್ಯಯಮಂ. || ೨೨೬ ||

ಪದಚ್ಛೇದಂ.— ಒದವಿ ಇರ್ಕುಂ— ಸಂಸ್ಕೃತಂ ಎನ್ನದೆ ಕನ್ನಡಂ ಎನ್ನದೆ— ಆಯಿಲ ಪ್ರತ್ಯಯಂ ಅಂತು ಅದು ತಾಂ. ಇವು ಮೊದಲ್ ಆಗಿ ಅಱಿವುದು ಅನ್ವಿತರ್ ಮಿಕ್ಕ ತದ್ಧಿತ ಪ್ರತ್ಯಯಮಂ.

ಅನ್ವಯಂ.— ಸಂಸ್ಕೃತಂ ಎನ್ನದೆ ಕನ್ನಡಂ ಎನ್ನದೆ, ಆಯಿಲಪ್ರತ್ಯಯಂ ಅಂತು ಅದು ತಾಂ ಒದವಿರ್ಕುಂ. ಇವು ಮೊದಲ್ ಆಗಿ ಅನ್ವಿತರ್ ಮಿಕ್ಕ ತದ್ಧಿತಪ್ರತ್ಯಯಮಂ ಅಱಿವುದು.

ಟೀಕು.— ಸಂಸ್ಕೃತವೆನ್ನದೆ = ಸಂಸ್ಕೃತಶಬ್ದವೆನ್ನದೆ; ಕನ್ನಡವೆನ್ನದೆ = ಕರ್ಣಾಟಕ ಶಬ್ದವೆನ್ನದೆ; ಆಯಿಲಪ್ರತ್ಯಯಂ = ಆಯಿಲ ಎಂಬ ಪ್ರತ್ಯಯಂ; ಅಂತು = ಹಾಗೆ; ಅದು ತಾಂ = ತಾನದು; ಒದವಿರ್ಕುಂ = ಪ್ರಾಪ್ತಿಸಿರ್ಪುದು; ಇವು ಮೊದಲಾಗಿ = ಇವಾದಿಯಾಗಿ; ಅನ್ವಿತರ್ = ವಿದ್ವಾಂಸರ್; ಮಿಕ್ಕ ತದ್ಧಿತಪ್ರತ್ಯಯಮಂ = ಉಳಿದ ತದ್ಧಿತಪ್ರತ್ಯಯಂಗಳಂ; ಅಱಿವುದು = ತಿಳಿವುದು.

ವೃತ್ತಿ.— ಸಂಸ್ಕೃತವೆಂಬ ಕರ್ಣಾಟಕವೆಂಬ ವಿವರಣೆಯಿಲ್ಲದೆ ಆಯಿಲ ಪ್ರತ್ಯಯಮೆಲ್ಲಿಯುಂ ಪತ್ತುಗುಂ.

ಪ್ರಯೋಗಂ.— ಸಂಸ್ಕೃತಕ್ಕೆ, ಆಯಿಲಪ್ರತ್ಯಯಕ್ಕೆ— ಗಾಢಾಯಿಲಂ; ರೇಖಾಯಿಲಂ.

ಕನ್ನಡಕ್ಕೆ— ಓಜಾಯಿಲಂ; ಅಡ್ಡಾಯಿಲಂ; ಗೋಟಿಾಯಿಲಂ; ಪುಗ್ಗಾಯಿಲಂ.

ಈ ಪೇೞ್ದಿವು ಮೊದಲಾಗಿ, ನಡೆವಳಿ ನುಡಿವಳಿ ಸಲ್ವಳಿ ಎಂಬಂತೆ, ವಳಿ ಪ್ರತ್ಯಯ ಮುಂತಾದುೞಿದ ಪ್ರತ್ಯಯಂಗಳಂ ಶಾಬ್ದಿಕರಿನನ್ವಿತರಱಿವುದು.

ಗದ್ಯಂ.— ಇದು ಸಮಸ್ತಶಾಬ್ದಿಕಜನಮನೋಜನಿತಶಬ್ದಸಂದೇಹಕಲ್ಯಹಾರುಚುಂಬಕಾಯಮಾನಾನೂನಕರ್ಣಾಟಕಲಕ್ಷಣಶಿಕ್ಷಾಚಾರ್ಯಸುಕವಿಕೇಶಿರಾಜವಿರಚಿತಮಪ್ಪ ಶಬ್ದಮಣಿದರ್ಪಣದೊಳ್ ತದ್ಧಿತಪ್ರತ್ಯಯನಿರೂಪಣಮೆಂಬ ಚತುರ್ಥಸಂಧಿ ಸಂಪೂರ್ಣಂ.

೪ನೆಯ ಅಧ್ಯಾಯಂ ಸಮಾಪ್ತಂ.

೫ನೆಯ ಅಧ್ಯಾಯಂ. V. CHAPTER.

ಆಖ್ಯಾತಪ್ರಕರಣಂ.

ON THE CONJUGATION OF VERBS.

ಸೂತ್ರಂ[1]. || ೨೧೫ || ಧಾತು ವೆಂದರೇನು?

ಕ್ರಿಯೆಯರ್ಥದ ಮೂಲಂ।ಪ್ರ- |
ತ್ಯಯರಹಿತಂ।ಧಾತುವದನಭಾವಕ್ರಿಯೆಯೊ- ||
ಳ್ನಿಯತಂ ನಿಶ್ಚಯಿಪುದು ಬುಧ- |
ಚಯಮೊ ಧಾತುಗೆ ವಿಭಕ್ತಿಯಾಱಾಗಿರ್ಕುಂ।|| ೨೨೭ ||

The basis (ಮೂಲಂ) of a verb's meaning (ಕ್ರಿಯಾರ್ಥಂ) is that form of the verb (ಆಖ್ಯಾತಂ) which has no Suffixes (ಪ್ರತ್ಯಯಂ, ವಿಭಕ್ತಿ); it is called the Root (ಧಾತು). This is found when the Suffix ಅಂ of the 3rd Person Masculine Singular of the Negative mood (ಪ್ರತಿಷೇಧಂ) is removed and an elided. ಉ restituted.—There are 6 Personal Suffixes (ಪುರುಷವಿಭಕ್ತಿ,excepting the specific feminine and neuter ones).

ಪದಚ್ಛೇದಂ. — ಕ್ರಿಯೆಯ ಅರ್ಥದ ಮೂಲಂ ಪ್ರತ್ಯಯರಹಿತಂ ಧಾತು; ಅದಂ ಅಭಾವ ಕ್ರಿಯೆಯೊಳ್ ನಿಯತಂ ನಿಶ್ಚಯಿಪುದು ಬುಧಚಯಂ; ಆ ಧಾತುಗೆ ವಿಭಕ್ತಿ ಆಱು ಆಗಿ ಇರ್ಕುಂ.

ಅನ್ವಯಂ. — ನಿಯತಂ ಬುಧಚಯಂ ನಿಶ್ಚಯಿಪುದು ಎಂಬುದನ್ವಯಂ.

ಟೀಕು. — ಕ್ರಿಯೆಯ = ಕ್ರಿಯೆಯ; ಅರ್ಥದ = ಅರ್ಥಕ್ಕೆ; ಮೂಲಂ = ಮೊದಲಾದುದು; ಪ್ರತ್ಯಯ = ವಿಭಕ್ತಿಯಿಂದೆ; ರಹಿತಂ = ವಿರಹಿತವಾದುದು; ಧಾತು = ಧಾತುವೆನಿಸುವುದು; ಅದಂ = ಆ ಧಾತುವಂ; ಅಭಾವಕ್ರಿಯೆಯೊಳ್ = ಪ್ರತಿಷೇಧದ ಕ್ರಿಯೆಯಲ್ಲಿ; ನಿಯತಂ = ಕಟ್ಟಾಗಿ; ಬುಧಚಯಂ = ವಿದ್ವತ್ಸಮೂಹಂ; ನಿಶ್ಚಯಿಪುದು = ನಿಶ್ಚಯಿಸುವುದು; ಆ ಧಾತುಗೆ = ಆ ಧಾತುಗಳ್ಗೆ; ವಿಭಕ್ತಿ = ಪ್ರತ್ಯಯಂ; ಆಱಾಗಿ = ಆರು ತೆರನಾಗಿ; ಇರ್ಕುಂ = ಇರ್ಪುದು.

1) ಕ್ರಿಯಾರ್ಥೋ ಧಾತುಃ || ಭಾ. ಭೂ. 194. ||
(ಕ್ರಿಯಾರ್ಥವುಳ್ಳುದೇ ಧಾತು.)

ವೃತ್ತಿ.—ಕ್ರಿಯಾರ್ಥದ ಮೂಲಂ ವಿಭಕ್ತಿರಹಿತಮುಂ ಧಾತುವೆಂಬುದು; ಆ ಧಾತುವಂ, ಪ್ರತಿಷೇಧಕ್ರಿಯೆಯಂ ಕಳೆಯೆ, ಕಾಣಲಕ್ಕುಂ; ಆ ಧಾತುಗಳ್ಗೆ ವಿಭಕ್ತಿಗಳಾಱಾಗಿರ್ಪುವು.

ಪ್ರಯೋಗಂ.—ಧಾತು ನಿಶ್ಚಯಕ್ಕೆ—ಮಾಡಿದಂ ಎಂಬ ಕ್ರಿಯೆಗೆ ಪ್ರತಿಷೇಧಮಾಗೆ, ಮಾಡಂ ಎಂದಿರ್ಪುದು; ಅಲ್ಲಿ ಅಮ್ ಎಂಬ ವಿಭಕ್ತಿಯಂ ಕಳೆಯೆ, ಮಾಡು ಎಂದೆ ನಿಲ್ವುದು. ಈ ತೆಱದಿಂ—ಕೂಡು, ನೋಡು, ತೀಡು, ಕಾಡು, ಸೂಡು ಎಂಬಿವಾದಿಯಾಗಱ್ವುದು[1].

ಸೂತ್ರಂ[2]. || ೨೧೬ ||

The 6 Suffixes for the 3 Persons (ಪುರುಷಂ) are: *a.*, for the 2 first persons (ಉತ್ತಮಪುರುಷಂ): ಎನ್, ಎವು; *b.*, for the 2 second persons (ಮಧ್ಯಮಪುರುಷಂ): ಅಯ್, ಇರ್; *c.*, for the 2 third persons (ಪ್ರಥಮಪುರುಷಂ): ಅಮ್, ಅರ್.

ಅಮರಯಿರೆನೆವ್ವುಗಳಕ್ಕುಂ |
ಕ್ರಮದೇಕಾನೇಕವಚನದೊಳ್ ಪ್ರತ್ಯೇಕಂ ||
ಸಮನಿಸೆ ಯುಗಳತೆಯಾಖ್ಯಾ- |
ತಮಾರ್ಗದೊಳ್ ನೆಲಸಿ ನಿಂದ ಪುರುಷತ್ರಯಕಂ || ೨೨೮ ||

ಪದಚ್ಛೇದಂ.—ಅಮ್ ಅರ್, ಅಯ್, ಇರ್, ಎನ್ ಎವುಗಳ್ ಅಕ್ಕುಂ ಕ್ರಮದೆ ಏಕಾನೇಕವಚನದೊಳ್, ಪ್ರತ್ಯೇಕಂ ಸಮನಿಸೆ ಯುಗಳತೆ, ಆಖ್ಯಾತಮಾರ್ಗದೊಳ್ ನೆಲಸಿ ನಿಂದ ಪುರುಷತ್ರಯಕಂ.

---

[1] This does not put in question the existence of original verbal-themes (ಪ್ರಕೃತಿ) ending in half-consonants, for which see the list of verbs in chapter VI, and their being called roots (ಧಾತು; see S. 230).

[2] ತಸ್ಮಾದಮರಯಿರೆನೆವೋ ವಿಭಕ್ತಯಃ || ಶಾ. ಭೂ. 195. ||

(ಆ ಧಾತುವಿನಿಂದ ಪರವಾಗಿ ಅಮ್, ಅರ್, ಅಯ್, ಇರ್, ಎನ್, ಎವ್ ಎಂಬ ವಿಭಕ್ತಿಗಳಾಗುವುವು).

ಕವದಿನಮರಯಿರೆನೆವೆನಿ |
ಪ್ಪವು ವರ್ತಿಕಮನ್ಯಯುಷ್ಮದಸ್ಮದ್ವಿಷಯ ||
ವ್ಯವಹೃತಿಗಳ್ಗೇಕಾನೇ- |
ಕವಚನದಿಂ ಪ್ರತಿವಿಭಕ್ತಿಪುರುಷಾಖ್ಯಂಗಳ್ || ಶ. ಸ್ಮೃ. 84. ||

ಅನ್ವಯಂ.— ಆಖ್ಯಾತಮಾರ್ಗದೊಳ್ ನೆಲಸಿ ನಿಂದ ಪುರುಷತ್ರಯಕಂ ಕ್ರಮದೆ ಏಕಾನೇಕವಚನದೊಳ್, ಪ್ರತ್ಯೇಕಂ ಯುಗಳತೆ ಸಮನಿಸೆ, ಅಮರಯಿರೆನೆವ್ವುಗಳ್ ಅಕ್ಕುಂ.

ಟೀಕು.— ಆಖ್ಯಾತಮಾರ್ಗದೊಳ್ = ಕ್ರಿಯಾಪದಸಿದ್ಧಿಯಂ ಮಾಡುವಾಖ್ಯಾತಮಾರ್ಗದಲ್ಲಿ; ನೆಲಸಿ = ನೆಲೆಗೊಂಡು; ನಿಂದ ಪುರುಷತ್ರಯಕಂ = ನಿಂದ ಪ್ರಥಮಪುರುಷ ಮಧ್ಯಮಪುರುಷ ಉತ್ತಮಪುರುಷಂಗಳೆಂಬ ಪುರುಷತ್ರಯಕ್ಕೆಯುಂ; ಕ್ರಮದೆ = ತರುವಾಯಿಂದೆ; ಏಕಾನೇಕವಚನದೊಳ್ = ಏಕವಚನ ಬಹುವಚನಂಗಳಲ್ಲಿ; ಪ್ರತ್ಯೇಕಂ = ಬೇರೆ ಬೇರೆ; ಯುಗಳತೆ = ಎರಡೆರಡಾಗಿ; ಸಮನಿಸೆ = ಪ್ರಾಪ್ತಿಸೆ; ಅಮರಯಿರೆನೆವ್ವುಗಳ್ = ಅಮ್ ಅರ್, ಅಯ್ ಇರ್, ಎನ್ ಎವು ಎಂಬಾರು ವಿಭಕ್ತಿಗಳ್; ಅಕ್ಕುಂ = ಅಪ್ಪುವು.

ವೃತ್ತಿ.— ಆಖ್ಯಾತದೊಳ್ವರ್ತಿಪ ಪ್ರಥಮಮಧ್ಯಮೋತ್ತಮಪುರುಷಂಗಳ್ಗೆ ಅಮ್ ಅರ್, ಅಯ್ ಇರ್, ಎನ್ ಎವು ಎಂಬಾಱು ವಿಭಕ್ತಿಗಳ್ ಪರಿವಿಡಿಯಿಂದೇಕವಚನ ಬಹುವಚನಂಗಳೊಳ್ ಪ್ರತ್ಯೇಕಮೆರಡೆರಡೊಂದಾಗಿ ಪತ್ತುವುವು.

ಪ್ರಯೋಗಂ.— ಅಂಗೆ— ಎಸೆದಂ, ಬೆಸೆದಂ, ಒಸೆದಂ, ಎತ್ತಿ ನಡೆದಂ, ನುಡಿದಂ, ಒಗೆದಂ, ಬಗೆದಂ.

" . . .ಶೀಘ್ರಂ ಚಕ್ರಾಯುಧಮೆತ್ತಿ ನಡೆದಂ ವೈರೀಭಕಂಠೀರವಂ" || 477 ||

ಅರ್ಗೆ— ಆಡಿದರ್, ಪಾಡಿದರ್, ಕಟ್ಟಿದರ್, ಮುಟ್ಟಿದರ್, ಮೆಟ್ಟಿದರ್.

"....... ಕವಿಗಳ್ ಕೃತಿಬಂಧದೊಳಲ್ತೆ ಕಟ್ಟಿದರ್ |
ಮುಟ್ಟಿದರಿಕ್ಕಿಮೆಟ್ಟಿದರ್. . . . . . ." || 478 ||

ಅಯ್ಗೆ— ತೆಗೆದಯ್, ಬಗೆದಯ್, ಪೊರ್ದಿದಯ್, ನೋಡಿದಯ್, ಪಾಡಿದಯ್, ಆಡಿದಯ್.

"ತೆಗೆದಯ್ ಮೋಕ್ಷದ ಬಟ್ಟೆಯಂ. . . . ." || 479 ||
". . . .ಭೀಮ ಭೀಮಗದೆಯಿಂ ಪಂಚತ್ವಮಂ ಪೊರ್ದಿದಯ್" || 480 ||

ಇರ್ಗೆ— ಪೊರ್ದುವಿರ್, ತಿರ್ದುವಿರ್.

". . . . . .ವಿಹಂಗಮಮಿಂದಿಂಡೆ ಕಬ್ಬಿನಿನೇಱಿಪಿರ್" || 481 ||

ಎನ್ಗೆ — ಅಮರ್ಚಿದೆಂ; ನಿಮಿರ್ಚಿದೆಂ.

"...ಜನೋದಯಂಗಿದಂ ಪೇೞಿಲೊಡರ್ಚಿದೆಂ..." || 482 ||

"....ಬಣ್ಣಿಪೆನಾಂ ಜಯದಂಕಕಾಱಿನಂ" || 483 ||

ಎವುಗೆ — ಕೇಳ್ದೆವು; ಕಂಡೆವು; ಉಸಿರ್ದೆವು.

"....ಕೃಪನಂ ಸಂಗ್ರಾಮದೊಳಾಂಪೆವರಾತಿಯಂ.." || 484 ||

ಸೂತ್ರಂ. || ೨೧೭ ||

The Root ಬೆಳೆ is used only literally; when speaking figuratively, ಬಳೆ is used instead. (Shown by their respective abstract nouns.)

ಬೆಳೆಯೆಂಬ ಧಾತು ಸಸ್ಯಾ- |
ವಳಿಯೊಳ್|ಬಳೆಯೆಂಬ ಧಾತು ಮಿಕ್ಕೆಡೆಯೊಳ್ಸಂ- ||
ಗಳಿಕುಂ|ತಿಳಿಯಲ್ಬರ್ಪುದು |
ಬೆಳೆಬಳವಿಗಳೆಂಬ ಭಾವವಚನದ್ವಯದೊಳ್. || ೨೨೯ ||

ಪದಚ್ಛೇದಂ. — ಬೆಳೆ ಎಂಬ ಧಾತು ಸಸ್ಯಾವಳಿಯೊಳ್, ಬಳೆ ಎಂಬ ಧಾತು ಮಿಕ್ಕ ಎಡೆಯೊಳ್ ಸಂಗಳಿಕುಂ; ತಿಳಿಯಲ್ ಬರ್ಪುದು ಬೆಳೆ ಬಳವಿಗಳ್ ಎಂಬ ಭಾವವಚನದ್ವಯದೊಳ್.

ಅನ್ವಯಂ. — ಸಸ್ಯಾವಳಿಯೊಳ್ ಬೆಳೆ ಎಂಬ ಧಾತು, ಮಿಕ್ಕೆಡೆಯೊಳ್ ಬಳೆ ಎಂಬ ಧಾತು ಸಂಗಳಿಕುಂ; ಬೆಳೆ ಬಳವಿಗಳ್ ಎಂಬ ಭಾವವಚನದ್ವಯದೊಳ್ ತಿಳಿಯಲ್ ಬರ್ಪುದು.

ಟೀಕು. — ಸಸ್ಯಾವಳಿಯೊಳ್ = ಸಸಿಗಳ ಸಮೂಹದಲ್ಲಿ; ಬೆಳೆಯೆಂಬ ಧಾತು = ಬೆಳೆ ಎಂಬ ಧಾತು; ಸಂಗಳಿಕುಂ = ಬರ್ಪುದು; ಮಿಕ್ಕೆಡೆಯೊಳ್ = ಸಸ್ಯಾವಳಿಯಲ್ಲದುಳಿದ ತಾವಿನಲ್ಲಿ; ಬಳೆಯೆಂಬ ಧಾತು = ಬಳೆ ಎಂಬ ಧಾತು ಬರ್ಪುದು; ಬೆಳೆ ಬಳವಿಗಳ್ = ಬೆಳೆ ಬಳವಿಗಳೆಂದು; ಎಂಬ ಭಾವವಚನದ್ವಯದೊಳ್ = ಎಂಬ ಭಾವವಚನಂಗಳೆರಡರಲ್ಲಿ; ತಿಳಿಯಲ್ಬರ್ಪುದು = ಅರಿಯಲ್ಬರ್ಪುದು.

ವೃತ್ತಿ. — ಸಸ್ಯಾದಿತರುಲತಾವಳಿಯ ಪೆರ್ಚುಗೆಯಂ ಪೇೞ್ವ ಧಾತುವಿನೊಳ್ ಬೆಳೆಯೆನಲ್ವೇೞ್ಕುಂ; ಉೞಿದ ವಸ್ತುವಿನ ಪೆರ್ಚುಗೆಯಂ ಪೇೞ್ವ ಧಾತುವಿನೊಳ್ ಬಳೆಯೆಂದಕ್ಕುಂ. ಬೆಳೆಯೆಂಬ ಧಾತುವಿನ ಭಾವವಚನಂ ಬೆಳೆಯೆಂದುಂ, ಬೆಳಸೆಂದುಮಿರ್ಪುದು; ಬಳೆಯೆಂಬ ಧಾತುವಿನ ಭಾವವಚನಂ ಬಳವಿಯೆಂದಿರ್ಪುದು.

ಪ್ರಯೋಗಂ.—

"ನೆಲ್ಲುಂ ಕೌಂಗುಂ ಮಾವುಂ |
ಮಲ್ಲಿಗೆಯುಂ ಬೆಳೆವುವಲ್ಲಿ ಕಬ್ಬಿನ ರಸದಿಂ" || 485 ||

"ಬೆಳೆಗಳ್ ಕಳನಂ ಪೊಕ್ಕುವು |
ಬೆಳಸುಂ ಕುಂದದು. . . . ಪಾಱಿನೊಳೆಂದುಂ" || 486 ||

ಬಳೆಯೆಂಬುದರ್ಕೆ—

". . . . . ಮೃದುಮುಗ್ಧಾ- |
ಲಾಪಂ ಬಳೆದಂ ಸರಸ್ವತೀಮಣಿಹಾರಂ" || 487 ||

ಭಾವಕ್ಕೆ—

"ತನುಜನ ಬಳವಿಯನೆ ನೋಡಿ ಜನಕಂ ನಲಿದಂ" || 488 ||

ಸೂತ್ರಂ. || ೨೧೮ ||

Also Adjectives, Pronouns, Numerals and other Nouns are conjugated by adding the Personal Suffixes.

ವಿನುತಗುಣವಚನದೊಳ್ ಸ- |
ರ್ವನಾಮದೊಳ್ ಸಂಖ್ಯೆಯೊಳ್ ಪ್ರವರ್ತಿಪುವಾಖ್ಯಾ- ||
ತನಿಯುಕ್ತವಿಭಕ್ತಿಗಳವು |
ಘನತರಸಂಸ್ಕೃತಗುಣೋಕ್ತಿಯೊಳಮರ್ದಿರ್ಕುಂ.
|| ೨೩೦ ||

ಪದಚ್ಛೇದಂ.— ವಿನುತಗುಣವಚನದೊಳ್ ಸರ್ವನಾಮದೊಳ್ ಸಂಖ್ಯೆಯೊಳ್ ಪ್ರವರ್ತಿಪುವು ಆಖ್ಯಾತನಿಯುಕ್ತವಿಭಕ್ತಿಗಳ್ ಅವು; ಘನತರಸಂಸ್ಕೃತಗುಣೋಕ್ತಿಯೊಳಂ ಅಮರ್ದು ಇರ್ಕುಂ.

ಅನ್ವಯಂ.— ವಿನುತಗುಣವಚನದೊಳ್ ಸರ್ವನಾಮದೊಳ್ ಸಂಖ್ಯೆಯೊಳ್ ಆಖ್ಯಾತನಿಯುಕ್ತವಿಭಕ್ತಿಗಳ್ ಅವು ಪ್ರವರ್ತಿಪುವು; ಘನತರಸಂಸ್ಕೃತಗುಣೋಕ್ತಿಯೊಳಂ ಅಮರ್ದು ಇರ್ಕುಂ.

ಟೀಕು.— ವಿನುತ=ಕೊಂಡಾಡಲ್ಪಟ್ಟ; ಗುಣವಚನದೊಳ್=ಗುಣವಚನಂಗಳಲ್ಲಿ; ಸರ್ವನಾಮದೊಳ್ = ಸರ್ವನಾಮಂಗಳಲ್ಲಿ; ಸಂಖ್ಯೆಯೊಳ್ = ಸಂಖ್ಯಾವಾಚಿಗಳಲ್ಲಿ; ಆಖ್ಯಾತ= ಆಖ್ಯಾತವಲ್ಲಿ; ನಿಯುಕ್ತ = ಕೂಡಲ್ಪಟ್ಟ; ವಿಭಕ್ತಿಗಳ್ = ಪ್ರತ್ಯಯಂಗಳ್; ಅವು = ಅವು; ಪ್ರವ

ತಿರ್ಪುವು = ಪ್ರವರ್ತಿಸುವುವು; ಘನತರ = ದೊಡ್ಡಿತ್ತಾದ; ಸಂಸ್ಕೃತ = ಸಂಸ್ಕೃತದ; ಗುಣೋಕ್ತಿಯೊಳಂ = ಗುಣವಚನಂಗಳಲ್ಲಿಯುಂ; ಅಮರ್ದು = ಪೊರ್ದುಗೆಯಾಗಿ; ಇರ್ಕುಂ = ಇರ್ಪುವು.

ವೃತ್ತಿ.—ಗುಣವಚನದೊಳಂ ಸರ್ವನಾಮದೊಳಂ ಸಂಖ್ಯೆಯೊಳಂ ಸಂಸ್ಕೃತ ಗುಣೋಕ್ತಿಯೊಳಂ ಆಖ್ಯಾತವಿಭಕ್ತಿಗಳ್ ವರ್ತಿಸುಗುಂ.

ಪ್ರಯೋಗಂ.—ಕನ್ನಡಗುಣವಚನಕ್ಕೆ—ಒಳ್ಳಿದಂ, ಒಳ್ಳಿದರ್; ಒಳ್ಳಿದಯ್, ಒಳ್ಳಿದಿರ್, ಒಳ್ಳಿದರಿರ್; ಒಳ್ಳಿದೆನ್, ಒಳ್ಳಿದೆವು, ಒಳ್ಳಿದರೆವು.

ಸರ್ವನಾಮಕ್ಕೆ—ಪೆಱಂ, ಪೆಱರ್; ಪೆಱಯ್, ಪೆಱಿರ್, ಪೆಱರಿರ್; ಪೆಱೆನ್, ಪೆಱನೆನ್, ಪೆಱೆವು, ಪೆಱರೆವು.

ಸಂಖ್ಯೆಗೆ—ಒರ್ವಂ, ಒರ್ವರ್; ಒರ್ವಯ್, ಒರ್ವಿರ್, ಒರ್ವರಿರ್; ಒರ್ವೆನ್, ಒರ್ವನೆನ್; ಒರ್ವೆವು, ಒರ್ವರೆವು.

ಸಂಸ್ಕೃತಗುಣವಚನಕ್ಕೆ—ಉದ್ಧತಂ, ಉದ್ಧತರ್; ಉದ್ಧತಯ್, ಉದ್ಧತರಿರ್; ಉದ್ಧತನೆನ್, ಉದ್ಧತರೆವು.

ಸಮುಚ್ಚಯದಿಂ ಗುಣವಚನಮಲ್ಲದಲ್ಲಿಯುಮುಂಟು—ಕವಿಕೇಶವನೆಂ; ಮಲ್ಲಿಕಾರ್ಜುನಸುತನೆಂ; ದೌಹಿತ್ರನೆಂ; ಪೆಂಡತಿಯೆಂ.

ಸೂತ್ರಂ. || ೨೧೯ ||

ಆದೇಶಮಾಗಿ ಮುಂಗ- |
ಳ್ಗಾದರುವದು ನಿಲ್ಕುಮಿರ್ಗಮೆವುಗಂ ಪೂರ್ವ- ||
ಕ್ಕಾದಿಗೆ ನತ್ವಮದೆನ್ಪರ- |
ಮಾದೊಡೆ ಕೆಲರಿಂದೆ ಬಿಂದುವೆವುವಿನ ವತ್ವಂ. || ೨೩೧ ||

Regarding S. 218 it is to be remarked that before the Suffixes ಇರ್ and ಎವು the syllable ಅರ್ may be inserted in Kannaḍa words; when Saṁskṛita Adjectives (or Nouns) are conjugated, this must be done. Further, before ಎನ್ the letter ನ (ನ್) may be inserted.—The ಎವು (1st Person Plural) may become ಎಂ (*i. e.* like the 1st Person Singular).

ಪದಚ್ಛೇದಂ.—ಆದೇಶಂ ಆಗಿ ಮುಂಗಳ್ಗೆ ಆದ ಅರು ಅದು ನಿಲ್ಕುಂ ಇರ್ಗಂ ಎವುಗಂ ಪೂರ್ವಕ್ಕೆ; ಆದಿಗೆ ನತ್ವಂ ಅದು ಎನ್ ಪರಂ ಆದೊಡೆ; ಕೆಲರಿಂದೆ ಬಿಂದು ಎವುವಿನ ವತ್ವಂ.

ಎ. ೨. ವಿಶ್ವ ವೃತ್ತಿ – ಪಿರಿಯನ್ + ಎನ್ = ಪಿರಿಯನೆನ್ ಆಗುತ್ತದೆ.

ಅನ್ವಯಂ.— ಮುಂಗಳ್ಗೆ ಆದೇಶಂ ಆಗಿ ಆದ ಅರು ಅದು ಇರ್ಗಂ ಎವುಗಂ ಪೂರ್ವಕ್ಕೆ ನಿಲ್ಕುಂ; ಎನ್ ಅದು ಪರಂ ಆದೊಡೆ ಆದಿಗೆ ನತ್ವಂ; ಕೆಲರಿಂದೆ ಎವುವಿನ ವತ್ವಂ ಬಿಂದು.

ಟೀಕು.— ಮುಂಗಳ್ಗೆ = ಮುನ್ನಿನ ಗಳಾಗಮಕ್ಕೆ; ಆದೇಶಮಾಗಿ = ಆದೇಶವಾಗಿ; ಆದರು = ಆದ ಅರು (ಅರ್) ಆಗಮಂ; ಅದು = ಅದು; ಇರ್ಗಂ = ಇರೆಂಬಾಖ್ಯಾತವಿಭಕ್ತಿಗಂ; ಎವುಗಂ = ಎವು ಎಂಬಾಖ್ಯಾತವಿಭಕ್ತಿಗಂ; ಪೂರ್ವಕ್ಕೆ = ಮೊದಲ್ಗೆ; ನಿಲ್ಕುಂ = ಆಗಮವಾಗಿ ನಿಲ್ವುದು; ಎನ್ = ಎನ್ ಎಂಬುದು; ಅದು = ಅದು; ಪರಮಾದೊಡೆ = ಪರವಾದೊಡೆ; ಆದಿಗೆ = ಮೊದಲ್ಗೆ; ನತ್ವಂ = ನಕಾರವಪ್ಪುದು; ಕೆಲರಿಂದೆ = ಕೆಲಂಬರಿಂದೆ; ಎವುವಿನ = ಎವು ಎಂಬ ವಿಭಕ್ತಿಯ; ವತ್ವಂ = ವಕಾರಂ; ಬಿಂದು = ಸೊನ್ನೆಯಾಗುವುದು.

ವೃತ್ತಿ.— ಪುರುಷಸ್ತ್ರೀವಿಷಯದೊಳ್ ಬಹುವಚನದ ಗಳಾದೇಶಮಾಗಿ ಬಂದ ಅರ್ ಎಂಬುದು ಮಧ್ಯಮಪುರುಷದ ಇರ್ ಎಂಬುದರಾದಿಯೊಳಂ ಉತ್ತಮಪುರುಷದೆವುವಿನಾದಿಯೊಳಂ ಕನ್ನಡದೊಳ್ವಿಕಲ್ಪದಿಂ ಪತ್ತುಗುಂ; ಸಂಸ್ಕೃತಗುಣವಚನದೊಳ್ನಿತ್ಯಂ; ಉತ್ತಮಪುರುಷದೆನ್ ಎಂಬುದರಾದಿಗೆ ನತ್ವಮಕ್ಕುಂ.— ಎವುವಿನ ಉಕಾರಂ ಕೆಲರಿಂ ಬಿಂದುವಕ್ಕುಂ.

ಪ್ರಯೋಗಂ.— ಕನ್ನಡದೊಳ್ ವಿಕಲ್ಪದ ಅರ್ಗೆ— ಕೂರಿದರಿರ್, ಕೂರಿದಿರ್; ನೇರಿದರಿರ್; ನೇರಿದಿರ್.

"ಕೂರಿದರಿರ್ ಕಾಳೆಗದೊಳ್" || 489 ||

"ನೇರಿದರಿರ್ ಕೂಡಿದವರೊಳೇನ್ . . . . . ." || 490 ||

ಪಿರಿಯರೆವು, ಪಿರಿಯೆವು. ಪಿರಿಯ + ಅರ್ + ಎವು ; ಪಿರಿಯ + ಎವು .

". . . ಪಿರಿಯರೆವೆಂದು ಧಿಕ್ಕರಿಸಿ ಬಯ್ವುದು ತಕ್ಕುದೆ" || 491 ||

ಸಂಸ್ಕೃತದೊಳ್ ನಿತ್ಯದ ಅರ್ಗೆ—ಕುಲವೃದ್ಧರಿರ್, ಆಪ್ತರಿರ್, ಅತಿಬಲರಿರ್; ನಯವಿದರೆವು. ಆಪ್ತ + ಅರ್ + ಇರ್

"ಸಹೋದರರೆವೆಂದೊಸೆದಾಳ್ವುದು ಭೃತ್ಯವಿತಾನಮಂ" || 492 ||

ನಕಾರಕ್ಕೆ—ಪಿರಿಯನೆನ್, ಅಸಿಯನೆನ್. ಪಿರಿಯ + ನ್ + ಎನ್

"ಅಸಿಯಂತೆವೊಲಸಿಯನೆನ್ . . . ." || 493 ||

"ಆಂ ಪಿರಿಯನೆಂದು ಬಗೆಯಲಿವಿರಾಗಳ್" || 494 ||

"ಆನೊರ್ವನೆನೊರ್ವನೆಂ ಸಮರಕೇಳಿಯೊಳ್" || 495 ||

"ಅತಿಚದುರನೆಂ ಕಳಾಪಂಡಿತನೆಂ ಕೃತಿಲಕ್ಷಣಾವಧಾನನೆಂ" || 496 ||

ಎವ್ವುವಿನೊಳ್ ಬಿಂದುವಿನ ವಿಕಲ್ಪಕ್ಕೆ—ನೋಡುವೆವ್ವು, ನೋಡುವೆಂ; ಪಾಡುವೆವ್ವು, ಪಾಡುವೆಂ.

"ಅವರ್ಗಾರುಮೆಮ್ಮಾಳ್ದನೆಡಬಿನಾಮೆ ತಿರ್ದುವೆಂ" || 497 ||

ಏಕವಚನದೆಂಗಾದ ಬಿಂದುವುಂ ಆ ಬಹುವಚನದೆವ್ವುಗಾದ ಬಿಂದುವುಂ ತಮ್ಮೊಳೇಕರೂಪಮಾಗಿರ್ಪುವು; ಅವಂ ಕ್ರಮಣದಿನಱಿವುದು.

ಕೋಂಟೆಯಂ ಪತ್ತುವೆಂ; ವ್ಯಾಕರಣಮನೆಲ್ಲರುಂ ಕೇಳ್ವೆಂ ತಿಳಿವಿನಂ ಎಂಬಂತೆ.

ಸೂತ್ರಂ[1]. || ೨೨೦ ||

Of the 3 Tense-augments (ಕಾಲಾಗಮಂ) ದ is used for the Past (Imperfect), ದಪ for the Present, and ವ for the Future. — Verbs ending in ಉ insert ಇತ್ (ಇ) before ದ and ದಪ.

ದದಪವಕಾರಂಗಳ್ತ- |
ಪ್ಪದೆ ಕಾಲತ್ರಯವಿಭಕ್ತಿಮೂಲದೊಳಕ್ಕುಂ ||
ದದಪಾದಿಗಿದಾಗಮಮ- |
ಪ್ಪುದು ವತ್ವಕ್ಕಿಲ್ಲದುಂ ತ್ರಿವಚನಾನುಗತಂ. || ೨೩೨ ||

ಪದಚ್ಛೇದಂ.—ದ || ದಪ || ವಕಾರಂಗಳ್, ತಪ್ಪದೆ, ಕಾಲತ್ರಯವಿಭಕ್ತಿಮೂಲದೊಳ್ ಅಕ್ಕುಂ; ದದಪಾದಿಗೆ ಇತ್ಆಗಮಮುಂ ಅಪ್ಪುದು; ವತ್ವಕ್ಕೆ ಇಲ್ಲ; ಅದುಂ ತ್ರಿವಚನಾನುಗತಂ.

---

1) ದದಪವಕಾರಾದ್ಯಾಸ್ತಾ ಭೂತವತೀವರ್ತಮಾನಾಭವಿಷ್ಯಂತ್ಯಃ || ಭಾ. ಭೂ. 196. ||
(ಆ ವಿಭಕ್ತಿಗಳು ದ ದಪ ವ ಎಂಬಿವು ಕ್ರಮವಾಗಿ ಭೂತವತಿ, ವರ್ತಮಾನ, ಭವಿಷ್ಯಂತಿ ಎಂಬ ಸಂಜ್ಞೆಗಳನ್ನು ಪಡೆವುವು.)

ದಾದಾವಿದಾಗಮೋ ಬಹುಳಂ. || ಭಾ. ಭೂ. 210. ||
(ದಕಾರವನ್ನು ಆದಿಯಾಗುಳ್ಳ ವಿಭಕ್ತಿ ಪರವಾದರೆ ಬಹುಳವಾಗಿ ಇಕಾರಾಗಮವು ಬರುವುದು.)

ದದಪವಕಾರಂಗಳ್ ಮೂ- |
ಲದೊಳಕ್ಕುಂ ಭೂತವರ್ತಮಾನ ಭವಿಷ್ಯ- ||
ದ್ವಿದಿತ ವಿಭಕ್ತಿತ್ರಯ- |
ಕ್ಕದೆಲ್ಲ ವಚನಂಗಳೊಳವಿದಾಗಮಮುಮಕ್ಕುಂ. || ಶ. ಸ್ಮೃ. 86. ||

ಅನ್ವಯಂ.— ಕಾಲತ್ರಯವಿಭಕ್ತಿಮೂಲದೊಳ್, ತಪ್ಪದೆ, ದ ‖ ದಪ ‖ ವಕಾರಂಗಳ್ ಆಕ್ಕುಂ; ದದಪಾದಿಗೆ ಇದಾಗಮಮುಂ ಅಪ್ಪುದು; ವತ್ವಕ್ಕೆ ಇಲ್ಲ; ಅದುಂ ತ್ರಿವಚನಾನುಗತಂ.

ಟೀಕು.— ಕಾಲತ್ರಯವಿಭಕ್ತಿಮೂಲದೊಳ್ = ಭೂತಕಾಲ ವರ್ತಮಾನಕಾಲ ಭವಿಷ್ಯತ್ಕಾಲಂಗಳೆಂಬ ಕಾಲತ್ರಯದ ವಿಭಕ್ತಿಗಳ ಮೊದಲಲ್ಲಿ; ತಪ್ಪದೆ = ತೊಲಗದೆ; ದದಪವಕಾರಂಗಳ್ = ದಕಾರ ದಪಕಾರ ವಕಾರಂಗಳ್; ಆಕ್ಕುಂ = ಅಪ್ಪುವು; ದದಪಾದಿಗೆ = ದಕಾರ ದಪಕಾರಂಗಳ ಮೊದಲ್ಗೆ; ಇದಾಗಮಮುಂ = ಇತ್ ಎಂಬಾಗಮಮುಂ; ಅಪ್ಪುದು = ಉಕಾರಾಂತಧಾತುವಿಂಗೆ ಆಗುವುದು; ವತ್ವಕ್ಕೆ = ಭವಿಷ್ಯಂತಿಯ ವಕಾರಕ್ಕೆ; ಇಲ್ಲ = ಇದಾಗಮಮುಂ ಬಾರದು; ಅದುಂ = ಆ ಇದಾಗಮಮುಂ; ತ್ರಿವಚನ = ಏಕವಚನ ದ್ವಿವಚನ ಬಹುವಚನಂಗಳೆಂಬ ತ್ರಿವಚನಂಗಳಲ್ಲಿ; ಅನುಗತಂ = ಎಯ್ದುಲ್ಪಡುವುದು.

ವಿಚಾರಂ.— ಉಕಾರಾಂತಧಾತುಗಳ್ಗೆ ಇದಾಗಮಮುಂ ಬರ್ಪುದು.

ವೃತ್ತಿ.— ದ ದಪ ವ ಎಂಬಾಗಮಂಗಳ್ ಪೋದ ವರ್ತಿಪ ಬರ್ಪ ಕಾಲತ್ರಯಂಗಳ್ಗೆ ಸೂಚಕಂಗಳಾಗಿ, ಪುರುಷತ್ರಯಂಗಳ ವಿಭಕ್ತಿಗಳ ಮೊದಲೊಳಪ್ಪುವು; ದ ದಪಂಗಳ ಪೆಱಗೆ, ವಚನತ್ರಯದ ಮೇರೆಯಿಲ್ಲದೆ, ಉಕಾರಾಂತಕ್ಕೆ ಇದಾಗಮಮಕ್ಕುಂ; ಭವಿಷ್ಯಂತಿಯ ವಕಾರಕ್ಕೆಯುಂ ಎಕಾರಾಂತ ಇಕಾರಾಂತ ವ್ಯಂಜನಾಂತಂಗಳ್ಗೆ ಪರಮಾದ ದ ದಪಂಗಳ್ಗೆಯುಂ ಇದಾಗಮಮಿಲ್ಲ.

ಪ್ರಯೋಗಂ.— ದಕಾರಕ್ಕೆ— ಪಡೆದಂ, ಗೆಲ್ದಂ, ಇಡಿದಂ, ಕೇಳ್ದಂ.

"ಪಡೆದಂ ರಜೋಧಿಕಂ ಬಿದಿ- |
ಪೆಡೆವಣಿಯಂ ಫಣಿಯ . . . . . ." ‖ 498 ‖

". . . . . . . ಒರ್ಬನೆ ಗೆಲ್ದಂ." ‖ 499 ‖

ದಪಕ್ಕೆ— ಎತ್ತಿದಪಂ, ಒತ್ತಿದಪಂ, ತಂದಪಂ, ಮಾಡಿದಪಂ.

"ವಸಂತರಾಜನೆಟ್ಟಿಂದಪನಿಂದು ನಾಳೆ ಬರ್ದುಕಿಲ್ಲ ವಿಯೋಗಿಗೆ" ‖ 500 ‖

"ಮಾಡಿದಪಂ ಖಳಸಮಿತಿಗೆ |
ಕೇಡಂ. . . . ." ‖ 501 ‖

ವಕಾರಕ್ಕೆ— ಕುಡುವಂ, ಉಡುವಂ, ಪಿಡಿವಂ.

". . . . ಬಿಡುವಂತೆ ಕೈದುವಿಡಿವಂ." ‖ 502 ‖

". . . . ವಿಷ್ಣುಪಡೆದಂ ಮತ್ಸ್ಯಾವತಾರಕ್ಕೆ. . ." ‖ 503 ‖

ಉಕಾರಾಂತಕ್ಕೆ ಇದಾಗಮಮಪ್ಪುದರ್ಕೆ— ನೋಡಿದಂ, ಬೇಡಿದಂ, ಸಾರಿಸಿದಂ, ತೂಗಿದಂ, ಬಾಗಿದಂ, ಮಾಡಿದಪಂ, ಎತ್ತಿದಪಂ.

"ಒರ್ಬನೆ ಮತ್ಸ್ಯನಂತುಳಿರೆ ತಾಗಿದನಾಜಿಯೊಳ್" || 504 ||
". . . . . . . .ನೃಪತಿ ಕೆಡಿಸಿದನಾ ನಾಡಂ" || 505 ||
. . . . .ಅಂಜಿಸಿದಪಂ ಮೂಲೋಕಮಂ ತಾರಕಂ" || 506 ||
"ಸಾಧಿಸಿದಪನಿಂತು ಕಂತು ವಿರಹಿವ್ರಜಮಂ" || 507 ||

ಭವಿಷ್ಯಂತಿಯ ವಕಾರಕ್ಕೆಯುಂ ಎಕಾರಾಂತ ಇಕಾರಾಂತ ವ್ಯಂಜನಾಂತಂಗಳ್ಗೆ ಇದಾಗಮಮಿಲ್ಲದುದರ್ಕೆ—ಬಿರಿವಂ, ಮುಚ್ಚುವಂ, ನಡೆವಂ, ಮಾಡುವಂ;—ಪಡೆದಂ, ಪಡೆದಪಂ; ಸಿಡಿದಂ, ಸಿಡಿದಪಂ; ಕಟ್ಟಿಲ್ದಂ; ಕಟ್ಟಿಲ್ದಪಂ.

". . . . . ಇನಂ- |
ತುಹಿನಾದ್ರೀಂದ್ರಮನೊತ್ತುಗೊಂಡು ನಡೆವಂ. . . . .
. . . . .ಮರುತ್ತರಂಗಿಣಿಯನಂದಾಲಿಂಗನಂ ಮಾಡುವಂ"
|| 508 ||

ಸೂತ್ರಂ. || ೨೨೦ ||

The Negative with the Personal Suffixes is used for all tenses, also for the Past.

ಪರಿಭಾವಿಸೆ ಕಾಲತ್ರಯ |
ಪರಿಣಾಮಿಗಳೆನಿಸಿ ನೆಗಟ್ದ ಮೂಱುಂ ಕ್ರಿಯೆಯೊಳ್ ||
ನಿರುತಂ ಪ್ರತಿಷೇಧಕ್ರಿಯೆ |
ಬರೆ ಭೂತಾರ್ಥದೊಳೆ ಸಲ್ವುದೆಂಬರ್ ಪಿರಿಯರ್. || ೨೩೩ ||

ಪದಚ್ಛೇದಂ.—ಪರಿಭಾವಿಸೆ, ಕಾಲತ್ರಯಪರಿಣಾಮಿಗಳ್ ಎನಿಸಿ ನೆಗಟ್ದ ಮೂಱುಂ ಕ್ರಿಯೆಯೊಳ್ ನಿರುತಂ ಪ್ರತಿಷೇಧಕ್ರಿಯೆ ಬರೆ, ಭೂತಾರ್ಥದೊಳೆ ಸಲ್ವುದು ಎಂಬರ್ ಪಿರಿಯರ್.

ಅನ್ವಯಂ.—ಪ್ರತಿಷೇಧಕ್ರಿಯೆ ಬರೆ, ಪಿರಿಯರ್ ಭೂತಾರ್ಥದೊಳೆ ಸಲ್ವುದು ಎಂಬರ್. ಉಳಿದುದು ಯಥಾನ್ವಯಂ.

ಟೀಕು.—ಪರಿಭಾವಿಸೆ = ವಿಚಾರಿಸೆ; ಕಾಲತ್ರಯದ = ಕಾಲತ್ರಯದಲ್ಲಿ; ಪರಿಣಾಮಿಗಳ್ = ಪರಿಣಾಮವುಳ್ಳವು; ಎನಿಸಿ = ಎನಿಸಿ; ನೆಗಟ್ದ ಮೂಱುಂ ಕ್ರಿಯೆಯೊಳ್ = ಪ್ರಸಿದ್ಧ ಪಡೆದ ಮೂರೂ ಕ್ರಿಯೆಗಳಲ್ಲಿ; ನಿರುತಂ = ನಿಶ್ಚಯವಾಗಿ; ಪ್ರತಿಷೇಧಕ್ರಿಯೆ = ಪ್ರತಿಷೇಧಕ್ರಿಯೆ;

ಬರೆ = ಬಂದೊಡೆ; ಪಿರಿಯರ್ = ವಿದ್ವಾಂಸರ್; ಭೂತಾರ್ಥದೊಳೆ = ಭೂತಕಾಲದರ್ಥದಲ್ಲಿಯೆ; ಸಲ್ವುದು = ಸಲ್ವುದೆಂದು; ಎಂಬರ್ = ಪೇಳ್ವರ್.

ವೃತ್ತಿ.—ಕಾಲತ್ರಯಂಗಳಂ ಪೇೞ್ವ ಮೂಱು ಕ್ರಿಯಾಪದಂಗಳಲ್ಲಿ ಪ್ರತಿಷೇಧಕ್ರಿಯೆ ಬರೆ, ಭೂತವತಿಯಾಗಿಯೇ ಸಲ್ವುದು.

ಪ್ರಯೋಗಂ.—ಮಾಡಿದನೆಂಬುದರ್ಕೆ ಮಾಡಂ, ಮಾಡಿದಪನೆಂಬುದರ್ಕಂ ಮಾಡಂ, ಮಾಡುವನೆಂಬುದರ್ಕಂ ಮಾಡಂ.

ಸೂತ್ರಂ[1]. || ೨೨೨ ||

ಪುರುಷತ್ರಯಮುಂ ಸ್ವಾರ್ಥೋ- |
ಚ್ಚರಿತಂಗಳ್ ಯುಗಪದುಕ್ತಿಗುತ್ತಮಪುರುಷಂ ||
ಪರಮದನುೞಿದಿರೆ ಮಧ್ಯಮ |
ಪುರುಷಂ ಕ್ರಮಗಣನಮಿರೆಯುಮೊಲ್ದಂತಿರೆಯುಂ.
|| ೨೩೪ ||

Each of the 3 Persons, when by itself with its respective Pronoun, is quite independent. When, in a sentence, all the 3 Persons (as personal pronouns) are made the Subject, the Predicate stands in the 1st Person Plural; when the 2nd and 3rd Persons only form the Subject, the Predicate is put in the 2nd Person Plural.

ಪದಚ್ಛೇದಂ.—ಪುರುಷತ್ರಯಮುಂ ಸ್ವಾರ್ಥೋಚ್ಚರಿತಂಗಳ್; ಯುಗಪದುಕ್ತಿಗೆ ಉತ್ತಮಪುರುಷಂ ಪರಂ; ಅದಂ ಉೞಿದು ಇರೆ, ಮಧ್ಯಮಪುರುಷಂ; ಕ್ರಮಗಣನಂ ಇರೆಯುಂ ಒಲ್ದ ಅಂತೆ ಇರೆಯುಂ.

---

[1] ಯುಗಪತ್ಪ್ರಯೋಗೇ ಪರಸ್ತೇಷಾಂ. || ಭಾ. ಭೂ. 201. ||
(ಪುರುಷತ್ರಯಗಳ ಏಕಕಾಲಪ್ರಯೋಗದಲ್ಲಿ ಆವುದು ಮುಂದಿದೆಯೋ ಅದೇ ಪುರುಷ ವಾಗುವುದು.)

ಸ್ವಾರ್ಥೇ ಕಾಲೇ. || ಭಾ. ಭೂ. 202. ||
(ಅವು ತಂತಮ್ಮ ಅರ್ಥದಲ್ಲಿಯೂ ತಂತಮ್ಮ ಕಾಲದಲ್ಲಿಯೂ ಬರುವುವು; ಭೂತಕಾಲದಲ್ಲಿ ಭೂತವತಿ, ವರ್ತಮಾನದಲ್ಲಿ ವರ್ತಮಾನ, ಭವಿಷ್ಯತ್ಕಾಲದಲ್ಲಿ ಭವಿಷ್ಯಂತಿ ವಿಭಕ್ತಿಗಳಾಗುವುವು.)

ಮಿಗದಾಸ್ವಾರ್ಥದೊಳಂತವು |
ನೆಗೞ್ಗುಂ ತಂತಮ್ಮ ಸಾಧನಂಗಳೊಳನಿತುಂ ||
ಯುಗಪತ್ಪ್ರಯೋಗವಾದಂ- |
ದು ಗಣನೆಯೊಳ್ ಮುಂದೆ ನಿಂದುದಾವುದದಕ್ಕುಂ || ಶ. ಸ್ಮೃ. 85. ||

ಅನ್ವಯಂ.— ಪುರುಷತ್ರಯಮುಂ ಸ್ವಾರ್ಥೋಚ್ಚರಿತಂಗಳ್; ಕ್ರಮಗಣನಂ ಇರೆಯುಂ ಒಲ್ದಂತೆ ಇರೆಯುಂ, ಯುಗಪದುಕ್ತಿಗೆ ಉತ್ತಮಪುರುಷಂ ಪರಂ; ಅದಂ ಉೞಿದು ಇರೆ, ಮಧ್ಯಮಪುರುಷಂ.

ಟೀಕು.— ಪುರುಷತ್ರಯಮುಂ = ಪ್ರಥಮಮಧ್ಯಮೋತ್ತಮಂಗಳೆಂಬ ಪುರುಷತ್ರಯಮುಂ; ಸ್ವಾರ್ಥೋಚ್ಚರಿತಂಗಳ್ = ಸ್ವತಂತ್ರಂಗಳಾಗಿ ತಮ್ಮರ್ಥದಲ್ಲಿ ಉಚ್ಚರಿಸಲ್ಪಟ್ಟುವು; ಕ್ರಮಗಣನಂ = ಕ್ರಮದಿಂ ಗಣನೆಯಾಗಿ; ಇರೆಯುಂ = ಇರ್ದೊಡೆಯುಂ; ಒಲ್ದಂತೆ = ಪಲ್ಲಟವಾಗಿ, ಇಚ್ಛೆ ಬಂದಂತೆ; ಇರೆಯುಂ = ಇರ್ದೊಡೆಯುಂ; ಯುಗಪದುಕ್ತಿಗೆ = ಒಂದಾಗಿ ನುಡಿಯುವುದಕ್ಕೆ; ಉತ್ತಮಪುರುಷಂ = ಉತ್ತಮಪುರುಷಂ; ಪರಂ = ಮುಖ್ಯಂ; ಅದಂ = ಆ ಉತ್ತಮಪುರುಷಮಂ; ಉೞಿದಿರೆ = ಬಿಟ್ಟರೆ; ಮಧ್ಯಮಪುರುಷಂ = ಮಧ್ಯಮಪುರುಷಂ ಮುಖ್ಯವಾಗುವುದು.

ವೃತ್ತಿ.— ಪುರುಷತ್ರಯಂಗಳ್ ತಮ್ಮರ್ಥಂಗಳೊಳ್ ಸ್ವತಂತ್ರಂಗಳ್; ಪುರುಷತ್ರಯಂ ಕ್ರಮದಿನಿರ್ದೊಡಂ ವ್ಯತ್ಯಯಮಾಗಿರ್ದೊಡಂ ಕೂಡಿ ನುಡಿವೆಡೆಯೊಳ್ ಉತ್ತಮಪುರುಷಕ್ಕೆ ಮುಖ್ಯತ್ವಂ; ಉತ್ತಮಪುರುಷಂ ಕಳೆದುೞಿದ ಪ್ರಥಮಮಧ್ಯಮಪುರುಷಂಗಳನುಕ್ರಮದಿನಿರ್ದೊಡಂ ವ್ಯತ್ಯಯದಿನಿರ್ದೊಡಂ ಮಧ್ಯಮಪುರುಷಕ್ಕೆ ಮುಖ್ಯತ್ವಂ; ಯುಗಪದುಕ್ತಿಯೊಳ್ ಪ್ರಥಮಪುರುಷಕ್ಕೆ ಮುಖ್ಯತ್ವಮಿಲ್ಲ.

ಪ್ರಯೋಗಂ.—ಸ್ವತಂತ್ರಾರ್ಥಕ್ಕೆ—ತಾನಿರ್ದಂ, ತಾಮಿರ್ದರ್; ನೀನ್ ಕಂಡಯ್, ನೀಂ ಕಂಡಿರ್; ಆನ್ ಕೇಳ್ದೆಂ, ಆಂ ಕೇಳ್ದೆವು.

ಉತ್ತಮಪುರುಷಮುಖ್ಯತ್ವಕ್ಕೆ—

"ಆತನುಂ ನೀನುಂ ಆನುಂ ಪೊಱಗಾಗಿರ್ದಪೆವುರ್ವೀಪತಿಗೆ ಪಿಸುಣರಿಂ." || 509 ||

ವ್ಯತ್ಯಯಕ್ಕೆ—"ನೀನುಮಾತನುಮಾನುಂ ಮಣಿಕೂಟನಗರಕ್ಕೆ ಪೋಪೆವು." || 510 ||

"ಆತನುಮಾನುಂ ನೀನುಂ ಕಜ್ಜದ ತೆಱವನಱಿದು ಪೇೞ್ದಿವು." || 511 ||

"ಆನುಂ ನೀನು ಮಾತನುಂ ಬೆಸಕೆಯ್ವೆವು." || 512 ||

ಮಧ್ಯಮಪುರುಷಮುಖ್ಯತ್ವಕ್ಕೆ—"ಆತನುಂ ನೀನುಂ ಕೂಡಿದಿರಪ್ಪೊಡೆ ಆಹವಕ್ಕೆ ಕಿಚ್ಚುಂ ಗಾಳಿಯುಂ ಕೂಡಿದಂತೆ." || 513 ||

ವ್ಯತ್ಯಯಕ್ಕೆ—"ನಾಳಿನ ದಿನದೊಳ್ನೀನುಮಾತನುಂ ಕೂಡಿದಪಿರ್." || 514 ||

ಸೂತ್ರಂ[1]. || ೨೨೩ |

ತಾಂ, ನೀಂ, ಆಂ are the forms of the 3 Personal Pronouns, for the Singular and Plural, on which the 3 Personal Suffixes depend.

ತಿಳಿ ತಾಂ ನೀನಾನೆಂಬ- |
ರ್ಥಳಂಬಿಗಳ್ ಪ್ರಥಮಮಧ್ಯಮೋತ್ತಮಪುರುಷಂ- ||
ಗಳವೇಕವಚನಮೊರ್ವನ |
ಬಳಕೆಗೆ ಬಹುವಚನಮೆಲ್ಲರಂ ಪೇೞ್ವೆಡೆಯೊಳ್.
|| ೨೩೫ ||

ಪದಚ್ಛೇದಂ. — ತಿಳಿ, ತಾಂ ನೀಂ ಆಂ ಎಂಬ ಅರ್ಥಳಂಬಿಗಳ್ ಪ್ರಥಮಮಧ್ಯಮೋತ್ತಮಪುರುಷಂಗಳ್; ಅವು ಏಕವಚನಂ ಒರ್ವನ ಬಳಕೆಗೆ, ಬಹುವಚನಂ ಎಲ್ಲರಂ ಪೇೞ್ವೆಡೆಯೊಳ್.

ಅನ್ವಯಂ. — ತಾಂ ನೀಂ ಆಂ ಎಂಬರ್ಥಳಂಬಿಗಳ್ ಪ್ರಥಮಮಧ್ಯಮೋತ್ತಮಪುರುಷಂಗಳ್, ತಿಳಿ! ಅವು ಒರ್ವನ ಬಳಕೆಗೆ ಏಕವಚನಂ, ಎಲ್ಲರಂ ಪೇೞ್ವೆಡೆಯೊಳ್ ಬಹುವಚನಂ.

ಟೀಕು. — ತಾಂ = ತಾನೆಂದು; ನೀಂ = ನೀನೆಂದು; ಆಂ = ಆನೆಂದು; ಎಂಬ = ಎಂಬ; ಅರ್ಥ = ಅರ್ಥದಲ್ಲಿ; ಳಂಬಿಗಳ್ = ಆಲಂಬಮುಳ್ಳ ಶಬ್ದಂಗಳ್; ಪ್ರಥಮಮಧ್ಯಮೋತ್ತಮಪುರುಷಂಗಳ್ = ಪ್ರಥಮಪುರುಷ ಮಧ್ಯಮಪುರುಷ ಉತ್ತಮಪುರುಷಂಗಳೆಂದು; ತಿಳಿ = ಅರಿ; ಅವು = ಆ ಪುರುಷತ್ರಯಂಗಳ್; ಒರ್ವನ = ಒರ್ವನ; ಬಳಕೆಗೆ = ಹೇಳುವದಕ್ಕೆ; ಏಕವಚನಂ = ಏಕವಚನಂ ಬರ್ಪುದು; ಎಲ್ಲರಂ = ಸರ್ವರಂ; ಪೇೞ್ವೆಡೆಯೊಳ್ = ಪೇೞ್ವ ತಾವಿನಲ್ಲಿ; ಬಹುವಚನಂ = ಬಹುವಚನಂ ಬರ್ಪುದು.

ವೃತ್ತಿ. — ತಾನ್ ನೀನ್ ಆನ್ ಎಂಬರ್ಥಮನಾಶ್ರಯಿಸಿ, ಪುರುಷತ್ರಯಂಗಳಿರ್ಪುವು; ಅಲ್ಲಿಯೊರ್ವನಂ ಪೇೞ್ವೆಡೆಯೊಳೇಕವಚನಮಕ್ಕುಂ, ಪಲಂಬರಂ ಪೇೞ್ವೆಡೆಯೊಳ್ಬಹುವಚನಮಕ್ಕುಂ.

---

1) ಅನ್ಯಾರ್ಥೇ ಪ್ರಥಮಃ || ಭಾ. ಭೂ. 199. ||
(ತಾಂ ಎಂಬರ್ಥದಲ್ಲಿ ಪ್ರಥಮಪುರುಷ.)
ಯುಷ್ಮದಸ್ಮದೋರ್ಮಧ್ಯಮೋತ್ತಮೌ || ಭಾ. ಭೂ. 200. ||
(ನೀಂ ಆಂ ಎಂಬರ್ಥಗಳಲ್ಲಿ ಮಧ್ಯಮೋತ್ತಮಪುರುಷಗಳು ಕ್ರಮವಾಗಿ ಬರುವುವು.)
ಏಕಸ್ಮಿನ್ನೇಕವಚನಂ || ಭಾ. ಭೂ. 203. ||
(ಏಕಾರ್ಥವನ್ನು ನುಡಿಯುವಲ್ಲಿ ಏಕವಚನ.)
ದ್ವಿತ್ವಬಹುತ್ವಯೋರನ್ಯತ್ || ಭಾ. ಭೂ. 204. ||
(ದ್ವಿತ್ವಬಹುತ್ವಗಳಲ್ಲಿ ಬಹುವಚನವು.)

ಪ್ರಯೋಗಂ. — ತಾಂ ಎಂಬುದರ್ಕೆ—

"ತಾನೆಚ್ಚಂ ಪೊಚ್ಚಮಲ್ಲದರಿವಾಹಿನಿಯಂ" || 515 ||

". . . . .ತಾಂ ಸವ್ಯಸಾಚಿಯೊಳೆ ತೊಡರ್ದಿಱಿಯರ್" || 516 ||

ನೀಂ ಎಂಬುದರ್ಕೆ — ನೀಂ ಪೇೞ್ದಿರ್.

". . . . . .ಮರಣಕ್ಕೆನ್ನಿಂದೆ ನೀಂ ಮುಂಚಿದಯ್" || 517 ||

"ನೀಂ ಬಂದಿರ್ ಮೊನೆಯೊಳ್ ಸೂೞ್ತಿಡವಾಯ್ತು" || 518 ||

"ನೀಮಿರೆ ಮತ್ತವಾರಣಮುಂ ತಾರಕಚಕ್ರವರ್ತಿಗೆ. . ." || 519 ||

"ದೇವಾಸುರಮಂ ಕೇಳಿರೆ ದೇವಾ. . . . . . ." || 520 ||

ಆಂ ಎಂಬುದರ್ಕೆ—

"ಆನಱಿವೆಂ ಪೃಥೆಯಱಿವಳ್ |
ದಾನವರಿಪುವಱಿವನರ್ಕನಱಿವಂ ದಿವ್ಯ ||
ಜ್ಞಾನಿಸಹದೇವನಱಿವಂ |
ನೀನಾರ್ಗೆಂದಾರುಮಱಿಯರಂಗಾಧಿಪತೀ" || 521 ||

"ಆಮಱಿವೊಡಮುಸಿರಲಮ್ಮೆವಾಳ್ದನ ಗತಿಯಂ" || 522 ||

ಸೂತ್ರಂ[1]. || ೨೨೪ ||

For the 3rd Person Singular and Plural the Neuter

ಉದುವುವುವೆಂಬಾದೇಶಂ |
ಪುದಿದಿರ್ಕುಂ ಪ್ರಥಮಪುರುಷದೇಕಬಹುತ್ವ- ||

---

1) ಉದು ಉವು ನಪಿ ಪ್ರಥಮಸ್ಯ || ಭಾ. ಭೂ. 205. ||

(ನಪುಂಸಕದಲ್ಲಿ ಪ್ರಥಮಪುರುಷಕ್ಕೆ ಏಕವಚನಬಹುವಚನಗಳಲ್ಲಿ ಉದು, ಉವು ಎಂಬಾದೇಶಗಳು ಕ್ರಮವಾಗಿ ಬರುವುವು.)

ಭಾವೇ ಚ || ಭಾ. ಭೂ. 206. ||

(ಭಾವಾರ್ಥದಲ್ಲಿಯೂ ಉದು, ಉವು ಎಂಬಾದೇಶಗಳುಂಟು.)

ಅವಱೊಳಗೆ ನಪುಂಸಕಲಿಂ- |
ಗವಿಷಯವಾದಲ್ಲಿ ಮೊದಲಪುರುಷಂಗುದುವೆಂ. ||
ಬುವೆ ಅಲ್ ಸಮನಿಸುಗುಂ ಸ್ತ್ರೀ |
ವಿವಕ್ಷೆಯೊಳ್ ನೆಗೞ್ದುಮೇಕವಚನಮಾಳಂತಂ || ಶ. ಸ್ಮೃ. 88. ||

personal Suffixes are: ಉದು, ಉವು.— The form with ಉದು is used also as an Abstract noun, and in the sense of the Imperative.

ಕ್ಕೊದವಿರ್ದ ನಪುಂಸಕಲಿಂ |
ಗದೊಳುದು ಭಾವಾರ್ಥದಲ್ಲಿಯುಂ ಸಂಗಳಿಕುಂ. || ೨೩೭ ||

ಪದಚ್ಛೇದಂ. — ಉದು ಉವು ಎಂಬ ಆದೇಶಂ ಪುದಿದು ಇರ್ಕುಂ ಪ್ರಥಮಪುರುಷದ ಏಕಬಹುತ್ವಕ್ಕೆ ಒದವಿ ಇರ್ದ ನಪುಂಸಕಲಿಂಗದೊಳ್; ಉದು ಭಾವಾರ್ಥದಲ್ಲಿಯುಂ ಸಂಗಳಿಕುಂ.

ಅನ್ವಯಂ. — ಒದವಿ ಇರ್ದ ನಪುಂಸಕಲಿಂಗದೊಳ್ ಪ್ರಥಮಪುರುಷದ ಏಕಬಹುತ್ವಕ್ಕೆ ಉದು ಉವು ಎಂಬಾದೇಶಂ ಪುದಿದು ಇರ್ಕುಂ; ಉದು ಭಾವಾರ್ಥದಲ್ಲಿಯುಂ ಸಂಗಳಿಕುಂ.

ಟೀಕು. — ಒದವಿರ್ದ = ಪ್ರಾಪ್ತಿಸಿ ಇರ್ದ; ನಪುಂಸಕಲಿಂಗದೊಳ್ = ನಪುಂಸಕಲಿಂಗದಲ್ಲಿ; ಪ್ರಥಮಪುರುಷದ = ಅನ್ಯಪುರುಷದ; ಏಕಬಹುತ್ವಕ್ಕೆ = ಏಕವಚನ ಬಹುವಚನಂಗಳ್ಗೆ; ಉದು = ಉದು ಎಂದು; ಉವು = ಉವು ಎಂದು; ಎಂಬಾದೇಶಂ = ಎಂಬಾದೇಶಂ; ಪುದಿದು = ಪ್ರವೇಶವಾಗಿ; ಇರ್ಕುಂ = ಇರ್ಪುವು; ಭಾವಾರ್ಥದಲ್ಲಿಯುಂ = ಭಾವಾರ್ಥದೊಳಂ; ಉದು = ಉದು ಎಂಬುದು; ಸಂಗಳಿಕುಂ = ಸಂಬಂಧವಾಗುವುದು. ಉಂ ಎಂಬ ಸಮುಚ್ಚಯದಿಂ ವಿಧ್ಯರ್ಥದಲ್ಲಿಯುಂ ಬರ್ಪುದೆಂಬರ್ಥಂ.

ವೃತ್ತಿ. — ಪ್ರಥಮಪುರುಷದೇಕವಚನಬಹುವಚನಕ್ಕಾದೇಶಮಾಗಿ ನಪುಂಸಕಲಿಂಗದೊಳುದುವೆಂಬುದುಂ ಉವುವೆಂಬುದುಮಪ್ಪುವು. ಭಾವಾರ್ಥದೊಳುದುವುಂಟು.

ಪ್ರಯೋಗಂ. — ಏಕವಚನಕ್ಕೆ — ಬರೆದುದು; ನೆರೆದುದು; ಕರೆದುದು.

"ಜಲಗಂ ಪರೆದುದು". || 523 ||

"ಮುತ್ತುದು ನೇಸರ್ವಿ ತೇಜಂ |
ಸತ್ತುದು ದಾವಾಗ್ನಿ. . . . . ." || 524 ||

ಬಹುವಚನಕ್ಕೆ —

"ನಿಮಿರ್ದುವು ಪೊಳೆದುವಳುಂಕಿದು |
ವಮರ್ದುವು ಚುಂಬಿಸಿದುವರ್ಪಿದುವು ಸಂಭ್ರಮದಿಂ ||

ಎಸೆಗುಂ ಭಾವದೊಳಮುದೇ- |
ಕಸಂಜ್ಞಾವಚನಂ ಕ್ರಿಯಾಸಮಭಿಹಾರಂ ವ- ||
ರ್ತಿಸುತಿರೆ ತಾನಕ್ಕುಂ ಸ- |
ರ್ವಸಾಧನೀಯಮಿಧ್ಯವ್ಯೈಕವಚನಮುದೆಂದುಂ || ಶ. ಸೂ. 95. ||

ಸಮದೃಷ್ಟಿಯಾಗಿ ಸಿಲ್ಕಿದು |
ವೆಮೆಯಿಕ್ಕಲ್ಕಱಿದುವವಳಧವಳಕಟಾಕ್ಷಂ." || 525 ||

ಭಾವಕ್ಕೆ—"ಈವುದು ಕರ್ಣಂಗೆ ಸಹಜಮಾರೋಪಿತಮೇ" || 526 ||

ಕೂರ್ಪುದು; ಇರ್ಪುದು; ಮಾಪ್ಪಿದು.

ಸಮುಚ್ಚಯವಶದಿಂ ವಿಧ್ಯರ್ಥದೊಳುದುವುಂಟು—ರಕ್ಷಿಪುದೆನ್ನಂ; ಅವ ಧರಿಪುದು ಬಿನ್ನಪಮಂ ಎಂಬಂತೆ.

ಸೂತ್ರಂ[1]. || ೨೨೫ ||

Instead of the ಉದು for the 3rd Person Neuter Singular also ಇತು, ಇತ್ತು, ಅತ್ತು are in use.

ನೆಗಱ್ದ ನಪುಂಸಕೈಕೋ- |
ಕ್ತಿಗೆ ಕೆಲರಿತುವಿತ್ತುವತ್ತುವೆಂದುಸಿರ್ವರ್ ನೆ- ||
ಟ್ಟಗೆ॥ಪುಗಿಸುವರಂತೇಕೋ- |
ಕ್ತಿಗೆ ತಾಂ ಸ್ತ್ರೀವಿಷಯಮಾಗೆಳಂತಸ್ಥಿತಿಯಂ. || ೨೩೩ ||

The Feminine Personal suffix for the 3rd Person Singular is ಅಳ್.

ಪದಚ್ಛೇದಂ.—ನೆಗಱ್ದ ನಪುಂಸಕೈಕೋಕ್ತಿಗೆ ಕೆಲರ್, ಇತು ಇತ್ತು ಅತ್ತು ಎಂದು, ಉಸಿರ್ವರ್; ನೆಟ್ಟಗೆ ಪುಗಿಸುವರ್ ಅಂತು ಏಕೋಕ್ತಿಗೆ ತಾಂ, ಸ್ತ್ರೀವಿಷಯಂ ಆಗೆ, ಅಳಂತ ಸ್ಥಿತಿಯಂ.

ಅನ್ವಯಂ.—ಸ್ತ್ರೀವಿಷಯಂ ಆಗೆ, ಅಂತು ಏಕೋಕ್ತಿಗೆ ಅಳಂತಸ್ಥಿತಿಯಂ ತಾಂ ನೆಟ್ಟಗೆ ಪುಗಿಸುವರ್ ಎಂಬುದನ್ವಯಂ.

---

1) ತದೇಕವಚನಸ್ಯತುತ್ತೂ ವಾಸ್ಯೇಷಾಂ || ಭಾ. ಭೂ. 207. ||

(ನಪುಂಸಕದಲ್ಲಿ ಪ್ರಥಮಪುರುಷದ ಏಕವಚನಕ್ಕೆ ಕೆಲಬರ ಮತದಿಂದ ತು ತ್ತು ಎಂಬಾದೇಶಗಳು ವಿಕಲ್ಪವಾಗಿ ಬರುವುವು.)

ಸ್ತ್ರೀಯಾಮಳಂತೇ || ಭಾ. ಭೂ. 208. ||

(ಸ್ತ್ರೀಲಿಂಗದಲ್ಲಿ ಪ್ರಥಮಪುರುಷದ ಕೊನೆಗೆ ಅಳ್ ಪ್ರತ್ಯಯವು ಬರುವುದು.)

315ನೆಯ ಪುಟದಲ್ಲಿ ಕೊಟ್ಟ ಶ. ಸ್ಮೃ. 88ನೆಯ ಸೂತ್ರ ನೋಡಿರಿ.

ಅಱೆಬರ್ ತದೇಕವಚನಾಂ- |
ತರಂ ನಪುಂಸಕದೊಳಗೆ ತುತ್ತ್ವನ್ಯತರಂ ||
ದೊರೆಕೊಳ್ಗುಮೆಂಬರವು ಮುಂ- |
ತಿರೆ ಪೊರ್ದುಗುಮುಮುರ್ದಿಕಾರಮಕ್ಕೆಯಕಾರಂ. || ಶ. ಸ್ಮೃ. 89. ||

ಟೀಕು.— ನೆಗಟ್ಟ = ಪ್ರಸಿದ್ಧವಡೆದ; ಆ ನಪುಂಸಕೈಕೋಕ್ತಿಗೆ = ಆ ಉದುವೆಂಬ ನಪುಂಸಕಲಿಂಗದ ಏಕವಚನಕ್ಕೆ; ಕೆಲರ್ = ಕೆಲಂಬರ್; ಇತು = ಇತು ಎಂದು; ಇತ್ತು = ಇತ್ತು ಎಂದು; ಅತ್ತು = ಅತ್ತು ಎಂದು; ಉಸಿರ್ವರ್ = ಬಹುಳದಿಂ ಪೇಳ್ವರ್; ಸ್ತ್ರೀವಿಷಯಂ = ಸ್ತ್ರೀಲಿಂಗದ ವಿಷಯಂ; ಆಗೆ = ಆಗೆ; ಅಂತು = ಹಾಗೆ; ಏಕೋಕ್ತಿಗೆ = ಏಕವಚನಕ್ಕೆ; ಅಳಂತಸ್ಥಿತಿಯಂ = ಅಳ್ ಎಂಬ ಪ್ರತ್ಯಯಾಂತದ ಸ್ಥಿತಿಯಂ; ತಾಂ = ವಿದ್ವಾಂಸರ್ ತಾಂ; ನೆಟ್ಟಗೆ = ವ್ಯಕ್ತವಾಗಿ; ಪುಗಿಸುವರ್ = ಪ್ರವೇಶವಂ ಮಾಡುವರ್.

ವಿಚಾರಂ. (not found in the Mḍb. Ms.)—ನಪುಂಸಕಲಿಂಗದ ಭೂತಕಾಲದ ಪ್ರಥಮಪುರುಷದೇಕವಚನಕ್ಕೆ ಇತು ಇತ್ತು ಅತ್ತು ಎಂಬಿವರ್ಕೆ ಆ ಭೂತಕಾಲದ ದಕಾರಂ ಬಹುಳವಾಗಿ ಬರ್ಪುದು; ಅದೆಂತೆಂದೊಡೆ—ಈ, ಓ, ಕಾ, ಕೀ, ಕೇ, ಪೂ, ಬೇ, ಬಾ, ಮೇ ಎಂಬೇಕಾಕ್ಷರಧಾತುಗಳ್ಗೆ ಪರದಲ್ಲಿ ದಕಾರಂ ನಿತ್ಯಂ; ಎಕಾರಾಂತಂಗಳಲ್ಲಿ ಇತು ಇತ್ತು ಎಂಬಿವರ್ಕೆ ದತ್ವಮಿಲ್ಲ; ವರ್ಗತೃತೀಯಾಂತದ ವರ್ಗಪ್ರಥಮಂಗಳಾಗುವಲ್ಲಿ ನಿತ್ಯಂ; ಇಕಾರಾಂತಂಗಳಲ್ಲಿ ವಿಕಲ್ಪಂ; ವ್ಯಂಜನಾಂತಂಗಳಲ್ಲಿ ಬಹುಳಂ; ಸರ್ವಧಾತುಗಳಲ್ಲಿಯುಂ ಅತ್ತು ಎಂಬುದರ್ಕೆ ದತ್ವಂ ನಿತ್ಯವಾಗಿ ಬರ್ಪುದು. ಇವನುದಾಹರಣೆಯ ಮುಖಂದಿದರಿವುದು.

ವೃತ್ತಿ.— ನಪುಂಸಕಲಿಂಗದೇಕವಚನಕ್ಕೆ ಇತುವೆಂದುಂ ಇತ್ತುವೆಂದುಂ ಅತ್ತುವೆಂದುಂ ಅಕ್ಕುಂ; ಪ್ರಥಮಪುರುಷದೇಕವಚನಕ್ಕೆ, ಸ್ತ್ರೀವಿವಕ್ಷೆಯಾಗೆ, ಅಳ್ ಎಂದಕ್ಕುಂ.

ಪ್ರಯೋಗಂ.— ಇತುಗೆ— ಮುಟ್ಟಿತು; ಮೆಟ್ಟಿತು.

"ಮುಟ್ಟಿತು ಮುಟ್ಟದು ದಿವಮಂ ।
ಮೆಟ್ಟಿತು ಮೆಟ್ಟದು ರಸಾತಳಾಗ್ರಮನೆಮ್ಬೊ- ॥
ಳ್ಪಿಟ್ಟಳಮಾಗಿರೆ ದಿವಿಜರ ।
ದಿಟ್ಟಿಗೆ ಸೊಗಯಿಪುದು ಮುಂದೆ ಮಂದರಶೈಲಂ" ॥ 527 ॥

ಇತ್ತುಗೆ— ಅಲ್ಲಾಡಿತ್ತು; ಓಡಿತ್ತು.

". . . . ಈಶ್ವರನ ಮನಮಲ್ಲಾಡಿತ್ತೋಡಿತ್ತು ಕಿನ್ನರ ಸೈನ್ಯಂ" ॥ 528 ॥

ಅತ್ತುಗೆ— ಇರ್ದತ್ತು; ಪಸರಿಸಿದತ್ತು.

". . . . . ಶಿರಃ ಕರೋಟಿ ನಗುವಂತಿರ್ದತ್ತು ರಾಗಾ- ।
ಧರನಂ. . . . ." ॥ 529 ॥

"ಪಸರಿಸಿದಳ್ ಮೂಡದೆಸೆಯೊಳ್ ಬೆಳಗೆಂಪು. . ." ॥ 530 ॥

ಅಳ್ಗೆ — ಕಡೆದಳ್; ಪಡೆದಳ್;

"ಅಱಿದಳ್ ಪಾಂಡುತನೂಜರ |
ತೆಱನೆಲ್ಲಮನೀಕೆ. . . . . . ." || 531 ||

ಸೂತ್ರಂ[1]. || ೨೨೬ ||

ಸವನಾಗಿ ಭೂತದೊಳ್ ಲಿಂ- |
ಗವಚನದೊಳ್ತೆಳ್ತು ವರ್ತಮಾನಭವಿಷ್ಯ- ||
ದ್ವ್ಯವಹೃತಿಗಳ ಗುಂ ಕುಂ ಸ- |
ಲ್ವುವು ತಾವನ್ಯೈಕವಚನದೊಳ್ನೆಲಸಿರ್ದುಂ. || ೨೩೮ ||

There are two other Affixes for the 3rd Person: ಗುಂ and ಕುಂ. The forms created by them (are, like the forms with ಉದು of S. 225, a sort of verbal noun, and) may be used for all tenses, even also the Past, for all numbers and all genders.

ಪದಚ್ಛೇದಂ. — ಸವಂ ಆಗಿ ಭೂತದೊಳ್ ಲಿಂಗವಚನದೊಳ್ ತಳ್ತು, ವರ್ತಮಾನ ಭವಿಷ್ಯದ್ವ್ಯವಹೃತಿಗಳ ಗುಂ ಕುಂ ಸಲ್ವುವು, ತಾಂ ಅನ್ಯೈಕವಚನದೊಳ್ ನೆಲಸಿ ಇರ್ದುಂ.

ಅನ್ವಯಂ. — ವರ್ತಮಾನಭವಿಷ್ಯದ್ವ್ಯವಹೃತಿಗಳ ಗುಂ ಕುಂ, ತಾಂ ಅನ್ಯೈಕವಚನದೊಳ್ ನೆಲಸಿ ಇರ್ದುಂ, ಭೂತದೊಳ್ ಲಿಂಗವಚನದೊಳ್ ತಳ್ತು, ಸವಂ ಆಗಿ ಸಲ್ವುವು.

ಟೀಕು. — ವರ್ತಮಾನ = ವರ್ತಮಾನಕಾಲದ; ಭವಿಷ್ಯತ್ = ಭವಿಷ್ಯತ್ಕಾಲದ; ವ್ಯವಹೃತಿಗಳ = ವ್ಯವಹಾರಂಗಳ; ಗುಂ = ಗುಂಕಾರಂ; ಕುಂ = ಕುಂಕಾರಂ; ತಾಂ = ತಾ; ಅನ್ಯ = ಪ್ರಥಮಪುರುಷದ; ಏಕವಚನದೊಳ್ = ಏಕವಚನದಲ್ಲಿ; ನೆಲಸಿರ್ದುಂ = ನೆಲೆಗೊಂಡಿರ್ದುಂ; ಭೂತದೊಳ್ = ಭೂತಕಾಲದಲ್ಲಿ; ಲಿಂಗವಚನದೊಳ್ = ಲಿಂಗತ್ರಯ ವಚನತ್ರಯಂಗಳಲ್ಲಿ; ಸವನಾಗಿ = ಸಮಾನವಾಗಿ; ತಳ್ತು = ಪೊರ್ದುಗೆಯಾಗಿ; ಸಲ್ವುವು = ಸಲುವಳಿಯಪ್ಪುವು.

[1]) ಗುಂ ಕುಮೌ ಭವಿಷ್ಯಂತ್ಯಾಃ ಸರ್ವತ್ರ || ಭಾ. ಭೂ. 209. ||
(ಪ್ರಥಮಪುರುಷದ ಭವಿಷ್ಯಂತಿಗೆ ಎಲ್ಲಾ ಲಿಂಗವಚನಗಳಲ್ಲಿ ಗುಂ ಕುಂ ಎಂಬಾದೇಶಗಳು.)

ಅವಿಶಿಷ್ಟಲಿಂಗವಚನ |
ವ್ಯವಸ್ಥೆಯಿಂದೊಂದಿ ಗುಂ ಕುಮಾದೇಶಂಗಳ್ ||
ಬವರಿಸುಗುಂ ಸಂಪ್ರತಿಗಂ |
ಭವಿಷ್ಯದರ್ಥದೊಳಮನ್ಯವಚನೋಕ್ತಿಗಳೊಳ್. || ಶ. ಸ್ಮೃ. 90 ||

ವೃತ್ತಿ.—ಭೂತಕಾಲವೆನ್ನದೆ, ಲಿಂಗತ್ರಯವಚನತ್ರಯವೆನ್ನದೆ, ವರ್ತಮಾನಭವಿಷ್ಯತ್ಕಾಲಂಗಳೊಳ್ ವರ್ತಿಸುವ ಗುಂ ಕುಂ ಎಂಬಿವು ಪ್ರಥಮದೇಕವಚನಕ್ಕಮಾದೇಶಮಪ್ಪುವು.

ಪ್ರಯೋಗಂ.—ಗುಮೆಂಬುದರ್ಕೆ ಭೂತಕಾಲಕ್ಕೆ—ಅಂದು ಮಾಡುಗುಂ, ಅಂದು ಮಾಳ್ಕುಂ.

ಲಿಂಗತ್ರಯಕ್ಕೆ—

"ಅಸವಸದಿಂ ಪಳಗೆಯ್ವುಂ |
ಕಸವಂ ಸೋದಿಸದೆ ಬಿತ್ತಿದೊಕ್ಕಲಿಗನ ವೋಲ್ ||
ಸಸಿಯಂ ನೋಡಿ ತಳೋದರಿ |
ಬಿಸುಸುಯ್ಗುಂ ಬಯ್ಗುಮಂತೆ ಮಾಡಿದ ಬಿದಿಯಂ" || 532 ||

"ಭೂವಳಯಾಧಿಪಂ ಸುಡಿಗುಮಾ ದೂತಂಗೆ ಸ್ವಚಿತ್ತಗತಾರ್ಥಮಂ" || 533 ||

"ಕೋಗಿಲೆಯುಲಿಗುಂ ಬೀಸುಗುಂ ಗಂಧವಾಹಂ" || 534 ||

ವಚನತ್ರಯಕ್ಕೆ—"ಒರ್ವನೆ ಗೆಲ್ಗುಂ ಕಿರೀಟಿ ಕೌರವಬಲಮಂ" || 535 ||

"ಬಲನಾರಾಯಣರಿರ್ವರುಂ ನುಡಿಗುಮಾ ದೂತಂಗೆ. . . ." || 536 ||

". . . . . ಮೂ- |
ದೇವರುಮಂ ಮೂಜಿುಕೋಣೆವುಗಿಸುಗುಮಸುರರ್" || 537 ||

". . . . ಎಮಗೀಗಳೆ ಸೂಚಿಸುಗುಮವರ್ ನಾಳೆ ಕಾಣ್ಗುಂ" || 538 ||

ಕುಮಿಂಗೆ—"ಕೇಳ್ವಾತನ ಕಿವಿಯುಂ ಕಸಲ್ ಕರಿಮುರಿವೋಕುಂ" || 539 ||

"ಅರ್ಕೇಂದುಗಳಂ ತವೆ ನುಂ- |
ಗಿರ್ಕುಂ ಕಟ್ಟಿಲೆ ಸಿಡಿಲ್ಗಳೆಱಿಗುಗುಮತ್ತಂ ||
ಬರ್ಕುಂ ನಿನ್ನೊಳ್ಪವಳ ಭಯ- |
ಮಿರ್ಕುಮೆ ನೀನಿರ್ಪ ಮನದೊಳುಗ್ರತುಳಾರ್ಕಾ" || 540 ||

ಇದುಮದಱಿಂತೆ ಸಲ್ವುದು. ಶ್ರಾವ್ಯಮಾದೊಡೇಕಪದದೊಳೆರಡುಂ ಪತ್ತುಗುಂ—ಸೂಚಿಸುಗ್ಕುಂ, ಸೂಚಿಕುಂ; ಮಾಳ್ಕುಂ, ಮಾಡುಗ್ಕುಂ.

ಸೂತ್ರಂ. || ೨೨೮ ||

When the ಕುಂ (S. 226) is joined to ಇಸು, the suffix of causation (ಹೇತು), the ಸು is dropped. The ಕ in ಕುಂ may be doubled.

ಇಸುವಿನ ಸುಕಾರಮಂ ಲೋ- |
ಪಿಸುವರ್ ಕುಂ ಪರದೊಳಾಗೆ ಕುಂಮಿಂಗೆ ಕೆಲ- ||
ರ್ಪೊಸಯಿಸುವರ್ ದ್ವಿರ್ಭಾವಮ- |
ನೆಸಗಲದಂ ಬೇಡ ಕಿವಿಗೆ ಸೊಗಯಿಸದೆಡೆಯೊಳ್. || ೨೩೯ ||

ಪದಚ್ಛೇದಂ.—ಇಸುವಿನ ಸುಕಾರಮಂ ಲೋಪಿಸುವರ್, ಕುಂ ಪರದೊಳ್ ಆಗೆ; ಕುಂಮಿಂಗೆ ಕೆಲರ್ ಪೊಸಯಿಸುವರ್ ದ್ವಿರ್ಭಾವಮಂ; ಎಸಗಲ್ ಅದಂ ಬೇಡ ಕಿವಿಗೆ ಸೊಗಯಿಸದ ಎಡೆಯೊಳ್.

ಅನ್ವಯಂ.—ಕುಂ ಪರದೊಳ್ ಆಗೆ, ಇಸುವಿನ ಸುಕಾರಮಂ ಲೋಪಿಸುವರ್; ಕೆಲರ್ ಕುಂಮಿಂಗೆ ದ್ವಿರ್ಭಾವಮಂ ಪೊಸಯಿಸುವರ್; ಕಿವಿಗೆ ಸೊಗಯಿಸದೆಡೆಯೊಳ್ ಅದಂ ಎಸಗಲ್ ಬೇಡ.

ಟೀಕು.—ಕುಂ = ಕುಂಕಾರಂ; ಪರದಲ್ಲಿ = ಧಾತುಗಳ ಪರದಲ್ಲಿ; ಆಗೆ = ಪೊರ್ದುಗೆಯಾಗೆ; ಇಸುವಿನ = ಇಸುಪ್ರತ್ಯಯದ; ಸುಕಾರಮಂ = ಸುತ್ವವಂ; ಲೋಪಿಸುವರ್ = ಲೋಪವಂ ಮಾಡುವರ್; ಕೆಲರ್ = ಕೆಲಂಬರ್; ಕುಂಮಿಂಗೆ = ಕುಂಕಾರಕ್ಕೆ; ದ್ವಿರ್ಭಾವಮಂ = ದ್ವಿತ್ವವಂ; ಪೊಸಯಿಸುವರ್ = ಪೊರ್ದುಗೆಯಂ ಮಾಡುವರ್; ಕಿವಿಗೆ = ಕರ್ಣಕ್ಕೆ; ಸೊಗಯಿಸದೆಡೆಯೊಳ್ = ಹಿತವಾಗದ ತಾವಿನಲ್ಲಿ; ಅದಂ = ಆ ಕುಂಕಾರದ ದ್ವಿತ್ವವಂ; ಎಸಗಲ್ ಬೇಡ = ಮಾಡ ಬೇಡ.

ವೃತ್ತಿ.—ಹೇತುವಿನೊಳಾದ ಇಸುವಿನ ಸುಕಾರಕ್ಕೆ ಕುಂ ಪರಮಾಗೆ, ಆ ಸುತ್ವಂ ಲೋಪಮಕ್ಕುಂ; ಕೆಲರಾ ಕುಂಮಿಂಗೆ ದ್ವಿತ್ವಮಂ ಪೇೞ್ವರ್; ಅದಂ ಶ್ರವಣಕ್ಕೆ ಶೋಭನವಾಗದ ತಾಣದೊಳ್ ಪೇೞಲಾಗದು.

ಪ್ರಯೋಗಂ.—ಸುಕಾರಲೋಪಕ್ಕೆ—ಭಾವಿಕುಂ; ಮಾಣಿಕುಂ.

"ಈ ಯೋಗದೊಳಾವ ರೋಗಮಂ ಪರಿಹರಿಕುಂ." || 541 ||

". . ಸಮನಿಕ್ಕುಮಾಕಾರಂ ಮೇಣಿವರ್ಣ. . . ." || 542 ||

"ಇಂದಿನ ದಿನದೊಳ್ ರಂಭೆ ಕೇಳಿಕುಂ ಪ್ರೆಕ್ಕಣಮಂ" || 543 ||

ದ್ವಿತ್ವಕ್ಕೆ—ಪುರುಡಿಕ್ಕುಂ; ಪೊಗೞಿಕ್ಕುಂ; ರಂಜಿಕ್ಕುಂ;

"ಪಾಲಿಕ್ಕುಂ ಜಗವೆಲ್ಲಮಂ ಕಮಲಭವಂ" || 544 ||

ಶ್ರಾವ್ಯಮಲ್ಲದುದರ್ಕೆ — ಬಿಡಿಕ್ಕುಂ, ಕೆಡಿಕ್ಕುಂ, ಸೊಪಿಕ್ಕುಮೆನ ಬೇಡ. ಸಂಸ್ಕೃತದೊಳಿಂತಿದು ಮನೋಹರಂ.

ಸೂತ್ರಂ[1]. || ೨೨೮ ||

Regarding the Imperative (ವಿಧಿ) there are the Suffixes ಗೆ and ಕೆ (ಕ್ಕೆ, cf. S. 227) for the Singular and Plural of the 3rd Person (the Elision regarding ಇಸು also occurring here); ಇಂ for the 2nd Person Plural; and ಅಂ for the 1st Person Plural.

ಸೊಗಯಿಪುವು ಗೆ ಕೆಗಳನ್ಯೋ- |
ಕ್ತಿಗೆ ವಿಧ್ಯರ್ಥಕ್ಕೆ ಮಧ್ಯಮೋತ್ತಮಪುರುಷ ||
ಪ್ರಗತಬಹೂಕ್ತಿಯೊಳಿಮಮೆಂ- |
ದೊಗೆತರ್ಕುಂ ಯುಗಪದುಕ್ತಿಯೊಳ್ ಕ್ರಮದಿಂದಂ.
|| ೨೪೦ ||

ಪದಚ್ಛೇದಂ. — ಸೊಗಯಿಪುವು ಗೆ ಕೆಗಳ್ ಅನ್ಯೋಕ್ತಿಗೆ ವಿಧ್ಯರ್ಥಕ್ಕೆ; ಮಧ್ಯಮೋತ್ತಮಪುರುಷಪ್ರಗತಬಹೂಕ್ತಿಯೊಳ್, ಇಂ ಅಂ ಎಂದು, ಒಗೆತರ್ಕುಂ, ಯುಗಪದುಕ್ತಿಯೊಳ್ ಕ್ರಮದಿಂದಂ.

ಅನ್ವಯಂ. — ವಿಧ್ಯರ್ಥಕ್ಕೆ ಅನ್ಯೋಕ್ತಿಗೆ ಗೆ ಕೆಗಳ್ ಸೊಗಯಿಪುವು; ಯುಗಪದುಕ್ತಿಯೊಳ್ ಮಧ್ಯಮೋತ್ತಮಪುರುಷಪ್ರಗತಬಹೂಕ್ತಿಯೊಳ್ ಕ್ರಮದಿಂದಂ, ಇಂ ಅಂ ಎಂದು, ಒಗೆತರ್ಕುಂ.

---

1) ಗೆ ಕೆ ವಾ ಪ್ರಥಮಸ್ಯಾಶಿಷಿ ವಿಧ್ಯಾದಿಷು ಚ || ಭಾ. ಭೂ. 215. ||
(ಪ್ರಥಮಪುರುಷಕ್ಕೆ ಆಶೀರ್ವಾದದಲ್ಲಿಯೂ ವಿಧ್ಯರ್ಥದಲ್ಲಿಯೂ ವಿಕಲ್ಪವಾಗಿ ಗೆ ಕೆ ಎಂಬಾದೇಶಗಳು ಬರುವುವು.)

ದ್ವಿತ್ವಬಹುತ್ವಯೋರಿಂ || ಭಾ. ಭೂ. 218. ||
(ಮಧ್ಯಮಪುರುಷಕ್ಕೆ ದ್ವಿತ್ವಬಹುತ್ವಗಳಲ್ಲಿ ಇಂ ಎಂದುಂಟು.)

ಹೇತಾವಿಸುಃ || ಭಾ. ಭೂ. 220. ||
(ಹೇತುವಿನಲ್ಲಿ ಧಾತುವಿಂದ ಪರವಾಗಿ ಇಸು ಎಂಬಾಗಮವು ಬರುವುದು.)

ಉಗೆಕೆ ವಿಕಲ್ಪಿತಮನ್ಯಾ- |
ರ್ಥಗತಿಯೊಳುತ್ವೇತ್ವಯುಕ್ತಿಯುಷ್ಮತ್ಸಂಜ್ಞೋ- ||
ಕ್ತಿಗಳೊಳಮಸ್ಮದ್ಬಹುವಚ- |
ನಗತಿಯೊಳಂ ನೆಗಬ್ದಿ ಸರ್ವಸಾಧನಿಗಳ್ಕಂ. || ಶ. ಸ್ಮೃ. 91. ||

ಟೀಕು.— ವಿಧ್ಯರ್ಥಕ್ಕೆ = ವಿಧಿಯರ್ಥಕ್ಕೆ; ಅನ್ಯ = ಪ್ರಥಮಪುರುಷದ; ಉಕ್ತಿಗೆ = ಅಂ ಅರ್ ಎಂಬೇಕವಚನಬಹುವಚನಕ್ಕೆ; ಗೆ ಕೆಗಳ್ = ಗೆಕಾರ ಕೆಕಾರಂಗಳ್; ಸೊಗಯಿಪುವು = ಹಿತವಾಗುವುವು; ಯುಗಪದುಕ್ತಿಯೊಳ್ = ಒಂದಾಗಿ ನುಡಿವುದಾದ; ಮಧ್ಯಮ = ಮಧ್ಯಮಪುರುಷದಲ್ಲಿ; ಉತ್ತಮ = ಉತ್ತಮಪುರುಷದಲ್ಲಿ; ಪ್ರಗತ = ವಿಶೇಷವಾಗಿ ಎದ್ದುಲ್ಪಟ್ಟ; ಬಹೂಕ್ತಿಯೊಳ್ = ಇರ್, ಎವು ಎಂಬ ಬಹುವಚನದಲ್ಲಿ; ಕ್ರಮದಿಂದಂ = ತರುವಾಯಿಂದೆ; ಇಂ = ಇಂ ಎಂದು; ಅಂ = ಅಂ ಎಂದು; ಒಗೆತರ್ಕುಂ = ಬರ್ಪುವು.

ವೃತ್ತಿ.—ಪ್ರಥಮಪುರುಷದೇಕವಚನಕ್ಕಂ ಬಹುವಚನಕ್ಕಂ ವಿಧ್ಯರ್ಥದೊಳ್ ಗೆ ಎಂದುಂ ಕೆ ಎಂದುಮಕ್ಕುಂ; ಕೆಕಾರಕ್ಕೆ ಕುಂಮಿನಂತೆ ದ್ವಿತ್ವವಿಕಲ್ಪಂ. ಮಧ್ಯಮೋತ್ತಮಪುರುಷಂಗಳ ಬಹುವಚನಕ್ಕೆ ಯುಗಪದುಕ್ತಿಯೊಳ್ಸರಿವಿಡಿಯಿಂ ಇಮ್ ಅಮ್ ಎಂಬಿವಕ್ಕುಂ.

ಪ್ರಯೋಗಂ.—ಗೆಕಾರಕ್ಕೆ—ಅವಂ ಕುಡುಗೆ; ಅವಂ ಪಡೆಗೆ; ಅವಂ ತರ್ಕೆ; ಅವಂ ಬರ್ಕೆ.

"ಪಾಲಿಸುತಿರ್ಕೆ ವಿಷ್ಣು ಪರಿಪಾಳಿಕೆ ಜಿಷ್ಣುವಲಂಕರಿಷ್ಣು" ‖ 545 ‖

ಬಹುವಚನಕ್ಕೆ—ಅವರ್ಮಾಳ್ಕೆ; ಅವರ್ತೋರ್ಕೆ.

ಕೆಕಾರಕ್ಕೆ ದ್ವಿತ್ವವಿಕಲ್ಪಂ—ರಕ್ಷಿಕೆ, ರಕ್ಷಿಕ್ಕೆ; ಪೂಜಿಕೆ, ಪೂಜಿಕ್ಕೆ; ಪೆರ್ಚಿಕೆ, ಪೆರ್ಚಿಕ್ಕೆ.

"ನರನಾಥನಾ ತೆಱದಿ. . . . ಪೆರ್ಚಿಕ್ಕೆ ದೇಶಂಗಳಂ." ‖ 546 ‖

ಇಂಗೆ—ಸಮಕಟ್ಟಿಂ; ಇರಿಸಿಂ; ತರಿಸಿಂ; ಬರಿಸಿಂ.

"ವ್ಯಾಳದಂತಿಕುಲಮಂ ಸಮಕಟ್ಟಿಂ" ‖ 547 ‖

ಅಂಗೆ—

"ನೆನೆಯದ ಕಜ್ಜದ ಬಿಣ್ಪಂ |
ಮುನಿವಯ್ ನೀನೊರ್ಬನೆಂಬ ಹರಿಗಮಸಾಧ್ಯಂ ||
ಮನುಜಪ್ರಾಕಾರಾಂಕನೊ- |
ಳನಿಬರುಮೊಂದಾಗಿ ತಾಗುವಂ ಫಲ್ಗುಣನೊಳ್" ‖ 548 ‖

"ವಿಗ್ರೈವಂ ಪೇೞಿಮೆಂದೊಡೆಂದರ್ಭೀಷ್ಮರ್." ‖ 549 ‖

ಸೂತ್ರಂ[1]. || ೨೨೯ || "ವಿಧಿ"

Further, the form of the 2nd Person Singular Imperative is the Verbal theme or root; the root ಇರ್ may become ಇರು.—

ಪರಿಣಮಿಸಿರ್ಕುಂ ಪ್ರಕೃತಿ
ಸ್ವರೂಪದಿಂ ಮಧ್ಯಮೈಕವಚನಂ ವಿಧಿಯೊಳ್ ||
ದೊರೆಕೊಳ್ಗುಮುತ್ವಮಿರ್ಗಂ- (೨೯)
ಕುರಿಪುದು ವಿಧಿಯಾ ಕ್ರಿಯಾಸಮಭಿಹಾರದೊಳಂ.
|| ೨೪೧ ||

Remark: ವೆಂ is the suffix for the 1st Person Singular Imperative, ವಂ for the 1st Person Plural.–The Imperative may be put twice (cf. S. 195).

ಪದಚ್ಛೇದಂ.—ಪರಿಣಮಿಸಿ ಇರ್ಕುಂ ಪ್ರಕೃತಿಸ್ವರೂಪದಿಂ ಮಧ್ಯಮೈಕವಚನಂ ವಿಧಿಯೊಳ್; ದೊರೆಕೊಳ್ಗುಂ ಉತ್ವಂ ಇರ್ಗೆ; ಅಂಕುರಿಪುದು ವಿಧಿ ಆ ಕ್ರಿಯಾಸಮಭಿಹಾರದೊಳಂ.

ಅನ್ವಯಂ.—ವಿಧಿಯೊಳ್ ಮಧ್ಯಮೈಕವಚನಂ ಪ್ರಕೃತಿಸ್ವರೂಪದಿಂ ಪರಿಣಮಿಸಿ ಇರ್ಕುಂ; ಇರ್ಗೆ ಉತ್ವಂ ದೊರೆಕೊಳ್ಗುಂ; ಆ ಕ್ರಿಯಾಸಮಭಿಹಾರದೊಳಂ ವಿಧಿ ಅಂಕುರಿಪುದು.

ಟೀಕು.—ವಿಧಿಯೊಳ್ = ವಿಧ್ಯರ್ಥದಲ್ಲಿ; ಮಧ್ಯಮೈಕವಚನಂ = ಆಯ್ ಎಂಬ ಮಧ್ಯಮಪುರುಷದೇಕವಚನಂ; ಪ್ರಕೃತಿಸ್ವರೂಪದಿಂ = ಧಾತುಸ್ವರೂಪದಿಂದೆ; ಪರಿಣಮಿಸಿರ್ಕುಂ = ಪರಿಣಮಿಸಿರ್ಪುದು; ಇರ್ಗೆ = ಇರ್ ಎಂಬ ಧಾತುವಿಂಗೆ; ಉತ್ವಂ = ಉಕಾರಂ; ದೊರೆಕೊಳ್ಗುಂ = ಪ್ರಾಪ್ತಿಸುವುದು; ಆ ಕ್ರಿಯಾಸಮಭಿಹಾರದೊಳಂ = ಆ ಕ್ರಿಯೆಯನಭಿಮುಖವಾಗಿ ಮಾಡಿ ಕೊಂಬಲ್ಲಿಯುಂ; ವಿಧಿ = ವಿಧ್ಯರ್ಥಂ; ಅಂಕುರಿಪುದು = ಅಂಕುರವಾಗುವುದು, ಬರ್ಪುದೆಂಬುದರ್ಥಂ.

ವಿಚಾರಂ.—(it is not in the Mdb. Ms.)—ಇಲ್ಲಿ, ಮಾಡು, ಕರಣೇ ಎಂದು ಧಾತುವಿರೆ, ಪ್ರಥಮಪುರುಷದೇಕವಚನ ಬಹುವಚನಂಗಳ್ಗೆ—ಅವಂ ಮಾಡುಗೆ, ಅವರ್ ಮಾಡುಗೆ; ಅವಂ ಮಾಟ್ಕೆ, ಅವರ್ ಮಾಟ್ಕೆ ಎಂದಾಯ್ತು. ಮಧ್ಯಮಪುರುಷದೇಕಬಹುವಚನಕ್ಕೆ—ನೀಂ ಮಾಡು! ನೀವೆಲ್ಲರ್ ಮಾಡಿಂ! ಎಂದಾಯ್ತು.

---

[1] ಕ್ರಿಯಾಸಮಭಿಹಾರೇ ಚ || ಭಾ. ಭೂ. 217. ||
(ಕ್ರಿಯಾಸಮಭಿಹಾರದಲ್ಲಿ ಮಧ್ಯಮಪುರುಷೈಕವಚನಕ್ಕೆ ಇ, ಉ, ಎ ಎಂಬಾದೇಶಗಳು ಬರುವುವು.)

316ನೆಯ ಪುಟದಲ್ಲಿ ಶ. ಸ್ಮೃ. 95ನೇ ಸೂತ್ರ ನೋಡಿ.

ಉತ್ತಮಪುರುಷದೇಕವಚನಕ್ಕೆ ಪೇಳಲಿಲ್ಲಾಗಿ, ಬಹುವಚನಕ್ಕೆ ಭವಿಷ್ಯಂತಿಗೆ ಬರ್ಪ ವಕಾರದ ಮೇಲೆ ಅಂ ಎಂಬುದು ಪತ್ತಿ— ಆವೆಲ್ಲರ್ ಮಾಡುವಂ! ಎಂದು, ಆಯ್ತು. ಏಕವಚನಕ್ಕೆ ಪ್ಪಾಂಗೆಂದೊಡೆ— ಭವಿಷ್ಯಂತಿಯ ವಕಾರದ ಮೇಲೆ ಎನ್ ಎಂಬುದು ಪತ್ತಿದಂತೆ ಆನ್ ಮಾಡುವೆಂ ಎಂದಪ್ಪುದಾಗಿ ಪೇಳಲಿಲ್ಲೆಂದರಿವುದು.

ಶಬ್ದಾನುಶಾಸನದಲ್ಲಿ— ॥ ಆಶೀರ್ವಿಧಿನಿಮಂತ್ರಣಾಮಂತ್ರಣಾಧ್ಯೇಷಣಸಂಪ್ರಶ್ನಪ್ರೇಷಣವಿಜ್ಞಾಪನಾಜ್ಞಾಪನಪ್ರಾರ್ಥನೇ ಗೆತ್ ॥ 4, 24 ॥ ಆಶೀರಾದಿವಿವಕ್ಷಾಯಾಂ ಧಾತೋಃ ಪರಯೋರ್ ಅಮ್ ಅರ್ ಇತ್ಯೇತಯೋರ್ ಗೆದ್ ಇತ್ಯಾದೇಶೋ ಭವತಿ ॥ ಎಂದುದಾಗಿ ಆಶೀರಾದಿವಿವಕ್ಷೆಯಲ್ಲಿ ಧಾತುವಿನತ್ತಣಿಂ ಪರಂಗಳಾದ ಅಮ್ ಅರ್ ಎಂಬಿವರ್ಕೆ ಗೆತ್ (ಗೆ) ಎಂಬಾದೇಶಂ ಬರ್ಪುದು. ತಕಾರಂ ಇತ್ತು, ಗೆ ಎಂದು ಉಳಿವುದು— ಅವಂ ಮಾಡುಗೆ; ಅವರ್ಮಾಡುಗೆ.

॥ ಆಯಿರೋರ್ಬ್ಬುದುಃ ॥ 4, 25 ॥ ಎಂದುದಾಗಿ ಧಾತುವಿನತ್ತಣಿಂ ಪರಂಗಳಾದ ಅಮ್, ಅರ್ ಎಂಬವರ್ಕಂ ಅಯ್ ಇರ್ ಎಂಬಿವರ್ಕಂ ಉದು ಎಂಬಾದೇಶಂ ಬರ್ಪುದು, ಆಶೀರಾದಿವಿಷಯದಲ್ಲಿ—ಅವಂ ಮಾಳ್ಪುದು, ಅವರ್ಮಾಳ್ಪುದು; ನೀಂ ಮಾಳ್ಪುದು, ನೀವೆಲ್ಲರ್ ಮಾಳ್ಪುದು. ಮಾಡುವುದು ಎಂದುಂ ವಿಕಲ್ಪಂ.

॥ ಅಯೋರ್ಲೋಪೌ ॥ 4, 27 ॥ ಧಾತೋಃ ಪರಸ್ಯ ಅಯಃ । ಅಕಾರೋ ಲೋಪಶ್ಚಾದೇಶೌ ಭವತ ಆಶೀರಾದಿವಿಷಯೇ ॥ ಎಂದುದಾಗಿ ಧಾತುವಿನತ್ತಣಿಂ ಪರದ ಅಯ್ ಎಂಬುದರ್ಕೆ ಅಕಾರಾದೇಶಮುಂ ಲೋಪಮುಮಕ್ಕುಂ—ನೀ ಮಾಡ! ನೀಂ ಮಾಡು!

॥ ಇರ ಇಮ್ ॥ 4, 26 ॥ ಧಾತೋಃ ಪರಸ್ಯ ಇರ ಇಮ್ ಇತ್ಯಾದೇಶೋ ಭವತ್ಯಾಶೀರಾದಿವಿಷಯೇ ॥ ಎಂದುದಾಗಿ ಧಾತುವಿನತ್ತಣಿಂ ಪರದ ಇರ್ ಎಂಬುದರ್ಕೆ ಇಮ್ ಎಂಬಾದೇಶಮಕ್ಕುಂ ಆಶೀರಾದಿವಿಷಯದಲ್ಲಿ—ನೀವೆಲ್ಲರ್ ಮಾಡಿಂ! ಗುರುಗಳಿರಾ, ಮುದದಿನೆಮಗೆ ಬೆಸಸಿಮೀ ಕಥೆಯುಂ! ಶಿವ ಸುಖಮಂ ಮಾಡಿಮೆಮಗೆ!

॥ ಎನೋ ವೆನ್ ॥ 4, 30 ॥ ಧಾತೋಃ ಪರಸ್ಯ ಎನ್ಪ್ರತ್ಯಯಸ್ಯ ವೆನ್ ಇತ್ಯಾದೇಶೋ ಭವತಿ ॥ ಎಂದುದಾಗಿ ಧಾತುವಿನತ್ತಣಿಂ ಪರ ಎನ್ ಎಂಬುದರ್ಕೆ ವೆನ್ ಎಂಬಾದೇಶಂ ಬರ್ಪುದು, ಆಶೀರಾದಿವಿಷಯದಲ್ಲಿ — ಆನಿದಂ ಮಾಳ್ಪೆಂ! ಆಂ ಶಿವನಂ ಪೂಜಿಸುವೆಂ!

॥ ಎವೋರ್ವಂ ॥ 4, 29 ॥ ಧಾತೋಃ ಪರಸ್ಯ ಎವುಪ್ರತ್ಯಯಸ್ಯ ವಮ್ ಇತ್ಯಾದೇಶೋ ಭವತಿ ಆಶೀರಾದಿವಿಷಯೇ ॥ ಎಂದುದಾಗಿ ಧಾತುವಿನತ್ತಣಿಂ ಪರದ ಎವು ಎಂಬುದರ್ಕೆ ವಮ್ ಎಂಬಾದೇಶಂ ಬರ್ಪುದು ಆಶೀರಾದಿವಿಷಯದಲ್ಲಿ—ಆಮೆಲ್ಲರೀಗಳಶ್ವಮೇಧಮಂ ಮಾಡುವಂ!

ಇಂತು ಪೇಳ್ದುದಾಗಿ ಆಶೀರ್ವಿಧಿಗಳಾದಿಯಾದುವರಲ್ಲಿ ಪ್ರಥಮೈಕವಚನಂ—ಆತಂ ಮಾಡುಗೆ, ಆತಂ ಮಾಳ್ಕೆ; ಆತಂ ಮಾಡುವುದು, ಆತಂ ಮಾಳ್ಪುದು.

ಬಹುವಚನಂ— ಅವರ್ ಮಾಡುಗೆ, ಮಾಳ್ಕೆ; ಅವರ್ ಮಾಡುವುದು, ಮಾಳ್ಪುದು.

ಮಧ್ಯಮೈಕವಚನಂ — ನೀಂ ಮಾಡ! ನೀಂ ಮಾಡು! ಮಾಡುವುದು! ಮಾಳ್ಪುದು!
ಬಹುವಚನಂ — ನೀವೆಲ್ಲರ್ ಮಾಡುವುದು! ಮಾಳ್ಪುದು! ಮಾಡಿಂ!

ಉತ್ತಮಪುರುಷೈಕವಚನಂ — ಆಂ ಮಾಡುವೆಂ! ಮಾಳ್ಪೆಂ!
ಬಹುವಚನಂ — ಆವೆಲ್ಲರ್ ಮಾಡುವಂ! ಮಾಳ್ಪಂ! ಎಂದಿಂತಱಿವುದು.

ವೃತ್ತಿ. — ಧಾತುಸ್ವರೂಪದಿಂ ಮಧ್ಯಮಪುರುಷದೇಕವಚನಂ ವಿಧ್ಯರ್ಥಮಾಗಿ ಪರಿಣಮಿಸುಗುಂ; ಇರ್ ಎಂಬ ಧಾತುವೊಂದರ್ಕಮುತ್ವಮಕ್ಕುಂ; ವಿಧ್ಯರ್ಥಂ ಕ್ರಿಯಾಸಮಭಿಹಾರದೊಳಮಕ್ಕುಂ..

ಪ್ರಯೋಗಂ. — ಧಾತುಸ್ವರೂಪಕ್ಕೆ —

"... ನುಡಿಯೆ ಚಲಂ ಮಗುಳ್ದೆ ಬೇಳ್ಪಿದೆ ಬೇಳ್ಪಿದು" || 550 ||

"ಪಾಡೆಲೆ ತುಂಬಿ ಬಗ್ಗಿಸೆಲೆ ಕೋಗಿಲೆ ತೀಡೆಲೆ ಗಂಧವಾಹ ." || 551 ||

"ಹರಿ ಕೇಳ್ ಧೂಮಪತಾಕ ಕೇಳ್ ನಿರುತಿ ಕೇಳ್. . . ." || 552 ||

"ವಾಯಸದಂತೆ ನೋಡು ಬಕದಂತಿರೆ ಮೆಲ್ಲನೆ ಮೆಟ್ಟು ಕಚ್ಛಪೋ |
ಪಾಯದಡಂಗಿ ನಿಲ್ ಭ್ರಮರಿವೊಲ್ ಭ್ರಮಿಯಂತಿರೆ ಬೆಚ್ಚರಾಗು ಖ ||
ಡ್ಗಾಯುಧಚಾಮರಂ ಪೊಳೆವ ಮಿಂಚನೆ ಪೊಲ್ತಿರೆ ಬೀಸು ನೀಂ ಖಳ |
ನ್ಯಾಯದಿನೆಲ್ಲಮಂ ನೆಱಿಯೆ ಕಲ್ತುಪದೇಶಕನಾಗು ಲೋಕದೊಳ್"
|| 553 ||

ಇರ್ಗೆ —

"ಇರು ಮರುಳೆ ಶುಷ್ಕವೈಯಾಕರಣಂಗಂ" || 554 ||

ಕ್ರಿಯಾಸಮಭಿಹಾರದ ವಿಧಿಗೆ —

"ಬಿಡಬಿಡೆಂದು, ಬಿಡಿಸಿದಂ." || 555 ||

"ಕೊಳ್ಕೊಳ್ಳೆಂದೊಡನೊಡನೆಯೆ |
ತುಳ್ಕುವ ಯುವತಿಯರ ಕರಪರಿಚ್ಯುತ ಸಲಿಲಂ ||
ಗಳ್ಕೊಳೆ ಬಿಡೆ ಕೆದರುವ ಕಿಂ- |
ಜಳ್ಕದಿನಾದುದು ಸರೋವರಂ ಕಪಿಶಜಳಂ" || 556 ||

" . . . . ನಡೆ
ನಡೆಯೆಂದೇಂ ನಡೆದುದೊ ಪಡೆ ಪಡೆದಚ್ಚರಿಯಂ" || 557 ||

ಸೂತ್ರಂ.[1] || ೨೩೦ ||

ಧಾತುಗಿಸು ಕನ್ನಡಕ್ಕಾ- |
ಹೇತುವಿನೊಳ್ ಸ್ವಪರಕರ್ತೃವೊಳ್ ಸಂಸ್ಕೃತದಾ ||
ಧಾತುಗನೇಕಾಕ್ಷರಕಿಸು |
ಜಾತಂ ನಿಜಕರ್ತೃವೊಳ್ ಪ್ರಯೋಜನದೆಡೆಯೊಳ್
|| ೨೪೨ ||

By the Suffix ಇಸು such verbs are formed from Kanarese verbal themes, etc. as denote 1, that the agent causes another to do something or causes something to be done or happen (ಪರಕರ್ತೃ, ಅನ್ಯ—, ಭಿನ್ನ—, ಹೇತು—), or 2, that the agent does that which the word expresses (ಸ್ವಕರ್ತೃ, ಸ್ವಯಂಕರ್ತೃ, ನಿಜಕರ್ತೃ) also when a special aim or purpose of the agent is meant. Saṁskṛita polysyllables also serve for the formation of verbs with ಇಸು that are like the Kanarese ones under No. 2.

ಪದಚ್ಛೇದಂ. — ಧಾತುಗೆ ಇಸು ಕನ್ನಡಕ್ಕೆ ಆ ಹೇತುವಿನೊಳ್ ಸ್ವಪರಕರ್ತೃವೊಳ್, ಸಂಸ್ಕೃತದ ಆ ಧಾತುಗೆ ಅನೇಕಾಕ್ಷರಕೆ ಇಸು ಜಾತಂ ನಿಜಕರ್ತೃವೊಳ್ ಪ್ರಯೋಜನದ ಎಡೆಯೊಳ್.

ಅನ್ವಯಂ. — ಕನ್ನಡಕ್ಕೆ ಧಾತುಗೆ ಆ ಹೇತುವಿನೊಳ್ ಸ್ವಪರಕರ್ತೃವೊಳ್ ಇಸು ಜಾತಂ, ಸಂಸ್ಕೃತದ ಆ ಧಾತುಗೆ ಅನೇಕಾಕ್ಷರಕೆ ನಿಜಕರ್ತೃವೊಳ್ ಪ್ರಯೋಜನದ ಎಡೆಯೊಳ್ ಇಸು.

ಟೀಕು. — ಕನ್ನಡಕ್ಕೆ = ಕನ್ನಡವಾದ; ಧಾತುಗೆ = ಧಾತುಗಳ್ಗೆ; ಆ ಹೇತುವಿನೊಳ್ = ಆ ಕಾರಣದಲ್ಲಿ; ಸ್ವಪರಕರ್ತೃವೊಳ್ = ಸ್ವಕರ್ತೃಪರಕರ್ತೃವಿನಲ್ಲಿ; ಇಸು = ಇಸುಪ್ರತ್ಯಯಂ; ಜಾತಂ = ಹುಟ್ಟುವುದು; ಸಂಸ್ಕೃತದ = ಸಕ್ಕದದ; ಆ ಧಾತುಗೆ = ಆ ಧಾತುಗಳ್ಗೆ; ಅನೇಕಾಕ್ಷ

---

1) ಧಾತೋರನೇಕಾಕ್ಷರಾದಿಸುಃ || ಭಾ. ಭೂ. 213. ||

(ಅನೇಕಾಕ್ಷರಗಳುಳ್ಳ ಧಾತುವಿನ ದೆಸೆಯಿಂದ ವಿಭಕ್ತಿಗಣಂ ಪರವಾಗಲು ನಡುವೆ ಇಸು ಬರುವುದು.)

ಹೇತಾವಿಸುಃ || ಭಾ. ಭೂ. 220. ||

(ಹೇತುವಿನಲ್ಲಿ ಧಾತುವಿನಿಂದ ಪರವಾಗಲು ಇಸು ಬರುವುದು.)

ಧಾತುಗನೇಕಾಕ್ಷರಕಾ- |
ಖ್ಯಾತವಿಭಕ್ತಿಗಳ ಮೊದಲೊಳಿಸು ತಾನಕ್ಕುಂ ||
ಹೇತುಪ್ರಯೋಗದೊಳ್ ತ- |
ಜ್ಜಾತಿಯ ಕರ್ಣಾಟಧಾತುಗಳ್ಗಮದೆರ್ಕ್ಕುಂ || ಶ. ಸ್ಮೃ. 96. ||

ರಕೆ = ಬಹುವರ್ಣಕ್ಕೆ; ನಿಜಕರ್ತೃವೊಳ್ = ಸ್ವಕರ್ತೃವಿನಲ್ಲಿ; ಪ್ರಯೋಜನದೆಡೆಯೊಳ್ = ಪ್ರಯೋಜನದ ತಾವಿನಲ್ಲಿ; ಇಸು = ಇಸುವೆಂಬ ಪ್ರತ್ಯಯಂ ಹುಟ್ಟುವುದು.

ವೃತ್ತಿ.— ಕನ್ನಡದ ಧಾತುವಿಂಗೆ ಹೇತುವಿನೊಳಂ ಸ್ವಯಂಕರ್ತೃಕಪರಕರ್ತೃಕದೊಳಂ ಇಸುವಕ್ಕುಂ; ಸಂಸ್ಕೃತದನೇಕಾಕ್ಷರಧಾತುಗೆ ಸ್ವಯಂಕರ್ತೃವಿನೊಳಿಸುವಕ್ಕುಂ; ಪ್ರಯೋಜನವಸ್ತುವಿನೊಳ್ ಕರ್ತೃವಿವಕ್ಷೆಯಾಗೆ, ಇಸುವಕ್ಕುಂ.

ಪ್ರಯೋಗಂ.— ಹೇತುಗೆ— ಮಾತಿಂ ನಗಿಸಿದಂ.

“ಮೃಗಗಣಮಂ ಪೋದ ಪೆಜ್ಜೆಯಿಂ ಕಾಣಿಸಿದಂ.” || 558 ||

ಸ್ವಯಂಕರ್ತೃವಿವಕ್ಷೆಯಾಗೆ— ನಿಟ್ಟಿಸಿದಂ; ಕಂಟ್ರಿಸಿದಂ; ತುಟ್ಟಿಸಿದಂ.

“ಘೃತಾಹುತಿವಡೆದನಲನಂತೆ ಮಿಗೆ ದಳ್ಳಿಸಿದಂ.” || 559 ||

ಅನ್ಯಕರ್ತೃಗೆ— ನುಡಿಯಿಸಿದಂ; ಮುಡಿಯಿಸಿದಂ; ಕಡಯಿಸಿದಂ.

“ಕಡಯಿಸಿದಂ ಸುರರಿನಸುರರಿಂ ಪಾಲ್ಗಡಲಂ” || 560 ||

ಏಕಾಕ್ಷರದೊಳ್ ಅನ್ಯಕರ್ತೃಗೆ— ಈಯಿಸಿದಂ; ಕೇಯಿಸಿದಂ; ನೋಯಿಸಿದಂ.

“ಜಗುನೆಯ ತಡಿಯಲ್ಲಿ ತುಱುಗಳಂ ಮೇಯಿಸಿದಂ.” || 561 ||

ಸಂಸ್ಕೃತಧಾತುವಿನ ಸ್ವಯಂಕರ್ತೃಗೆ— ಖಂಡಿಸಿದಂ, ಖಂಡಿಸಿದಪಂ.

“ಬರ್ಪಂಬಂ ನಿಶಿತವಿಶಿಖದಿಂ ಖಂಡಿಸಿದಂ” || 562 ||

ಭಿನ್ನಕರ್ತೃವಿನೊಳಿಸುವಿಲ್ಲ.

ಪ್ರಯೋಜನವಸ್ತುವಿಂಗೆ ಸಂಸ್ಕೃತಕ್ಕೆ— ಚಿತ್ರಿಸಿದಂ; ಮುದ್ರಿಸಿದಂ.

ಕನ್ನಡಕ್ಕೆ— ಪೊಂಗಿಸಿದಂ; ಸೊಪ್ಪಿಸಿದಂ.

ಸೂತ್ರಂ[1]. || ೨೩೧ ||

The ವ of the Future tense when pre-

ನೆಗೞ್ದಿರ್ದ ರೇಫಱೞ್ಳಿನಾಂ- |
ತಗಾಂತಸಾಂತೋತ್ವದಿದಿರ ವತ್ವಂ ಪತ್ವಂ ||

[1] ರೞಾಭ್ಯಾಂ ವಸ್ಯ ಪಃ || ಭಾ. ಭೂ. 212. ||
(ರೞಕಾರಗಳತ್ತಣಿಂದ ಪರವಾದ ವಕಾರಕ್ಕೆ ಪಕಾರಾದೇಶವಾಗುವುದು.)

ceded by ರ್ (ಱ), ೞ್ (ಱ), ಟ್, ನ್, ಗ್, ಸ್ and ಓ,

ಪುಗುಗುಂ ದ್ವಿತ್ವಂ ಮೇಣ್ ಸುಗು,
ಯುಗಕ್ಕೆ ಲೋಪೋಕ್ತಿ ನಾಂತಣಾಂತಂ ಬತ್ವಂ. || ೨೪೩ ||

becomes ಪ, and this ಪ may be doubled. In such circumstances ಗ್ and ಸ್ must be elided. The ವ preceded by ನ್ (as an exception) and ಣ್ becomes ಬ.

ಪದಚ್ಛೇದಂ.— ನೆಗೞ್ದು ಇರ್ದ ರೇಫೞಟನಾಂತಗಾಂತಸಾಂತೋತ್ವದ ಇದಿರ ವತ್ವಂ ಪತ್ವಂ; ಪುಗುಗುಂ ದ್ವಿತ್ವಂ ಮೇಣ್; ಸುಗುಯುಗಕ್ಕೆ ಲೋಪೋಕ್ತಿ; ನಾಂತಣಾಂತಂ ಬತ್ವಂ.

ಅನ್ವಯಂ.— ನೆಗೞ್ದಿರ್ದ ರೇಫೞಟನಾಂತಗಾಂತಸಾಂತೋತ್ವದ ಇದಿರ ವತ್ವಂ ಪತ್ವಂ; ಮೇಣ್ ದ್ವಿತ್ವಂ ಪುಗುಗುಂ; ಸುಗುಯುಗಕ್ಕೆ ಲೋಪೋಕ್ತಿ; ನಾಂತಣಾಂತಂ ಬತ್ವಂ.

ಟೀಕು.— ನೆಗೞ್ದಿರ್ದ = ಪ್ರಸಿದ್ಧಿವಿಡಿದಿರ್ದ; ರೇಫ = ರೇಫೆಯ; ೞ = ೞಕಾರದ; ಟ = ಟಕಾರದ; ನಾಂತ = ನಕಾರಾಂತದ; ಗಾಂತ = ಗಕಾರಾಂತದ; ಸಾಂತ = ಸಕಾರಾಂತದ; ಓತ್ವದ = ಓಕಾರದ; ಇದಿರ = ಮುಂದಣ; ವತ್ವಂ = ಭವಿಷ್ಯಂತಿಯ ವಕಾರಂ; ಪತ್ವಂ = ಪಕಾರವಪ್ಪುದು; ಮೇಣ್ = ವಿಕಲ್ಪದಿಂದೆ; ದ್ವಿತ್ವಂ = ದ್ವಿರ್ಭಾವಂ; ಪುಗುಗುಂ = ಪ್ರವೇಶವಾಗುವುದು; ಸುಗುಯುಗಕ್ಕೆ = ಸುಕಾರ ಗುಕಾರಂಗಳ್ಗೆ; ಲೋಪೋಕ್ತಿ = ಲೋಪದ ವಾಕ್ಯಂ ಬರ್ಪುದು; ನಾಂತಣಾಂತಂ = ನಕಾರಾಂತ ಣಕಾರಾಂತವಾಗೆ; ಬತ್ವಂ = ವಕಾರಂ ಬಕಾರಮಪ್ಪುದು.

ವೃತ್ತಿ.— ರೇಫೆೞಕಾರಟಕಾರನಕಾರಗಕಾರಸಕಾರಓಕಾರಾಂತದ ಧಾತುವಿನ ಪರದ ಭವಿಷ್ಯಂತಿಯ ವಕಾರಕ್ಕೆ ಪಕಾರಮಕ್ಕುಂ; ಅದರ್ಕೆ ವಿಕಲ್ಪದಿಂ ದ್ವಿತ್ವಮುಮಕ್ಕುಂ; ಗಾಂತಸಾಂತಧಾತುವಿನ ಕಡೆಗೆಲ್ಲಿಯುಂ ಲೋಪಮಕ್ಕುಂ. ನಾಂತಣಾಂತಂಗಳ ಪರದ ವತ್ವಕ್ಕೆ ಬತ್ವಮಕ್ಕುಂ.

ಪ್ರಯೋಗಂ.— ರೇಫಕ್ಕೆ— ಕೂರ್ಪಂ, ಬರ್ಪಂ, ತರ್ಪಂ, ಇರ್ಪಂ;

"ಆ ಪುರದೊಳಿರ್ಪನಿನಕುಲದೀಪಂ ವಿಪುಲಪ್ರತಾಪಂ" || 563 ||

ೞಕಾರಕ್ಕೆ— ಆೞ್ಪಂ, ತೋೞ್ಪಂ, ಮಾೞ್ಪಂ.

"ಮಾೞ್ಪೆಡೆಗೆ ತೋಳ ಬಾಳ ಕೂರ್ಪಂ ತೋೞ್ಪಂ" || 564 ||

ಟಕಾರಕ್ಕೆ— ಅಟ್ಪಂ, ಅಗಟ್ಪಂ, ಕೀಟ್ಪಂ.

ಡಕಾರಕ್ಕಾದೇಶಮಾದ ಟಕಾರಕ್ಕೆ— ಬೆಗಟ್ಪಂ, ಬಿಸುಟ್ಪಂ, ನೋಟ್ಪಂ, ಬೇಟ್ಪಂ, ಮಾಟ್ಪಂ.

ನಕಾರಕ್ಕೆ— ಆಂಪಂ, ನೋಂಪಂ, ಸೀಂಪಂ.

"ಮಲೆದು ನರನೊಳಾಂಪಂ ಗಾಂಪಂ" || 565 ||

ಗಾಂತಕ್ಕೆ—ಪೋಪಂ, ತಾಪಂ, ತೂಪಂ.

"ತೊಳಪ ದಂತಮರೀಚಿಸಂತತಿ ಪರ್ವೆ ಬಳ್ವಳಂ. . . . .ನೀಳ್ದು" || 566 ||

". . . .ಲಲಾಟದೊಳ್ ಮಿಱುಪ ಕಣ್ಣುರಿಯಂತೆ" || 567 ||

ಸಾಂತಕ್ಕೆ—ತರಿಪಂ, ಬರಿಪಂ, ಇರಿಪಂ, ಬೆಸಪಂ, ಕಾಪಂ.

"ನಿನ್ನೊಡನೊಂದು ಭಾಗಮಮಂ ಬರಿಪುದು." || 568 ||

ಓಕಾರಕ್ಕೆ—ಓಪಂ.

ದ್ವಿತ್ವಕ್ಕೆ—ತೊಳಪ್ಪಂ; ಬೆಳಪ್ಪಂ; ಉದಯಿಪ್ಪಂ.

"ಉದಯಿಪ್ಪ ಗಂಡಮಾರ್ತಾಂಡನಲರ್ಚುಗೆಮ್ಮಂ ಗೆಲ್ದು ಬೆಳಪ್ಪನೀಗೆ ಬೀರಂಗಳಂ" || 569 ||

ಗಕಾರ ಸಕಾರಂಗಳ ಲೋಪಕ್ಕೆ—ಪೋಪಂ, ತಾಪಂ, ಮಿಱಿಪಂ;—ತರಿಪಂ, ಬರಿಪಂ, ಇರಿಪಂ.

ಬಕಾರಕ್ಕೆ—ನಾಂಬಂ, ಎಂಬಂ, ತಿಂಬಂ.

"ಅದು ಪಣ್ಣದು ಪೋಗು ನೀನುಮಾನುಂ ತಿಂಬಂ" || 570 ||

ಉಣ್ಬಂ, ಕಾಣ್ಬಂ, ಪೂಣ್ಬಂ.

"ತಿರಿದುಣ್ಬಂ ಹರನನ್ನಿ ಕಾಡಕಸವಂ ತಿಂದಿರ್ದ. . . ." || 571 ||

ಸೂತ್ರಂ. || ೨೩೨ ||

Also the ಪ in ದಪ (the suffix for the Present, may be doubled.—The two roots ನೋ and ಬೇ, when followed by ದ (the suffix for the Past) or ದಪ, insert ನ್, and becomes short.

ದಪದ ಪಕಾರಕ್ಕಂ ಸಂ- |
ದಿಪುದು ವಿಕಲ್ಪದೆ ಬುಧರ್ಕಳಿಂ ದ್ವಿತ್ವಂ|ಸಂ- ||
ದಿಪುದು ನಕಾರಂ ನೋಧಾ- |
ತುಪರದೊಳಾ ದದಪಮೊದವೆ ನೋಗಂ ಹ್ರಸ್ವಂ. || ೨೪೪ ||

ಪದಚ್ಛೇದಂ.—ದಪದ ಪಕಾರಕ್ಕಂ ಸಂಧಿಪುದು ವಿಕಲ್ಪದೆ ಬುಧರ್ಕಳಿಂ ದ್ವಿತ್ವಂ. ಸಂಧಿಪುದು ನಕಾರಂ, ನೋಧಾತುಪರದೊಳ್ ಆ ದದಪಂ ಒದವೆ; ನೋಗಂ ಹ್ರಸ್ವಂ.

ಅನ್ವಯಂ.—ದಪದ ಪಕಾರಕ್ಕಂ ಬುಧರ್ಕಳಿಂ ದ್ವಿತ್ವಂ ವಿಕಲ್ಪದೆ ಸಂಧಿಪುದು. ನೋಧಾತುಪರದೊಳ್ ಆ ದದಪಂ ಒದವೆ, ನಕಾರಂ ಸಂಧಿಪುದು; ನೋಗಂ ಹ್ರಸ್ವಂ.

ಟೀಕು. — ದಪದ = ದಪಕಾರದ; ಪಕಾರಕ್ಕಂ = ಪತ್ವಕ್ಕಂ; ಬುಧರ್ಕಳಿಂ = ವಿದ್ವಾಂಸರಿಂದೆ; ದ್ವಿತ್ವಂ = ದ್ವಿರ್ಭಾವಕೆ; ವಿಕಲ್ಪದೆ = ವಿಕಲ್ಪದಿಂದೆ; ಸಂದಿಪುದು = ಸಂದಿಸುವುದು; ನೋಧಾತುಪರದೊಳ್ = ನೋ ಎಂಬ ಧಾತುವಿನ ಪರದಲ್ಲಿ; ಆ ದದಪಂ = ಆ ದಕಾರ ದಪಕಾರಂಗಳ್; ಒದವೆ = ಪ್ರಾಪ್ತಿಸೆ; ನಕಾರಂ = ನಕಾರಾಗಮುಂ; ಸಂದಿಪುದು = ಬರ್ಪುದು; ನೋಗಂ = ನೋ ಎಂಬುದರ್ಕೆ; ಹ್ರಸ್ವಂ = ಹ್ರಸ್ವಂ ಬರ್ಪುದು.

ವೃತ್ತಿ. — ವಿಕಲ್ಪದಿಂ ದಪದ ಪಕಾರಕ್ಕಂ ದ್ವಿತ್ವಮಕ್ಕುಂ. ದ ದಪಂಗಳೊದವೆ ನೋಧಾತುವಿನ ಪರದೊಳ್ ನಕಾರಮುಂ ನೋಗೆ ಹ್ರಸ್ವಮುಂ ಅಕ್ಕುಂ. ಸಮುಚ್ಚಯದಿಂ ಬೇ ಎಂಬ ಧಾತುಗಮಂತೆ.

ಪ್ರಯೋಗಂ. — ದ್ವಿತ್ವವಿಕಲ್ಪಕ್ಕೆ — ಬರೆದಪಂ, ಬರೆದಪ್ಪಂ; ಕರೆದಪಂ, ಕರೆದಪ್ಪಂ; ನಿಲಿಸಿದಪಂ, ನಿಲಿಸಿದಪ್ಪಂ; ಇಱಿದಪಂ, ಇಱಿದಪ್ಪಂ.

"..... ಮಗಧೇಶನಂ ನಿಲಿಸಿದಪ್ಪಂ ಚೋಳನಂ ಭಾಷೆಯಂ |
ಹರಿ ಕೇಳ್. . . . ." || 572 ||

ನೋಬೇಧಾತುಗಳ್ಗೆ — ನೊಂದಂ, ನೊಂದಪಂ; ಬೆಂದಂ, ಬೆಂದಪಂ.

'ಅಲ್' ಸೂತ್ರಂ.[1] || ೨೩೩ ||

When the action of the second person of a prohi-

ಸತತಂ ಮಧ್ಯಮಪುರುಷ |
ಪ್ರತಿಷೇಧದ ವಿಧಿಯೊಳಂ ಪ್ರಯೋಜನವಸ್ತ್ವ ||

---

[1] ಕ್ರಿಯಾಯಾಂ ಕ್ರಿಯಾರ್ಥಾಯಾಮಲ್ || ಭಾ. ಭೂ. 221. ||
(ಕ್ರಿಯೆ ಕ್ರಿಯಾರ್ಥವನ್ನು ನುಡಿದರೆ ಧಾತುವಿನತ್ತಣಿಂದ ಅಲ್ ಎಂದಾಗುವುದು.)

ಪ್ರತಿಷೇಧೇ ಚ || ಭಾ. ಭೂ. 222. ||
(ಪ್ರತಿಷೇಧಾರ್ಥದಲ್ಲಿಯೂ ಅಲ್ ಎಂದಾಗುವುದು.)

ಕ್ರಿಯೆ ತಾಂ ಕ್ರಿಯಾರ್ಥಮಪ್ಪ |
ಲ್ಲಿಯಲಕ್ಕುಂ . . . . || ಶ. ಸ್ಮೃ. 93. ||
ಪ್ರತಿಷೇಧದೊಳಂ ಕೆಲಬರ |
ಮತದಿಂದಲ್ ವರ್ತಿಕುಂ . . . . . . || ಶ. ಸ್ಮೃ. 94. ||

bition (ಪ್ರತಿಷೇಧಂ) is changed into an order (ವಿಧಿ), ಅಲಿಂ (ಅಲ್ + ಇಂ) is used [1]. ಅಲ್ denotes *a*) prohibition, is used *b*) to express usefulness or fitness for, and *c*) to make an action the object of an action.

ಶ್ರಿತಹೇತುಕ್ರಿಯೆಯೊಳಮ- |
ನ್ವಿತಮಲ್ಕ್ರಿಯೆ ತಾಂ ಕ್ರಿಯಾರ್ಥಮಪ್ಪೆಡೆಗಳೊಳಂ.
|| ೨೬೫ ||

ಪದಚ್ಛೇದಂ.— ಸತತಂ ಮಧ್ಯಮಪುರುಷಪ್ರತಿಷೇಧದ ವಿಧಿಯೊಳಂ ಪ್ರಯೋಜನವಸ್ತ್ವಾಶ್ರಿತಹೇತುಕ್ರಿಯೆಯೊಳಂ ಅನ್ವಿತಂ ಅಲ್ ಕ್ರಿಯೆ ತಾಂ ಕ್ರಿಯಾರ್ಥಂ ಅಪ್ಪ ಎಡೆಗಳೊಳಂ.

ಅನ್ವಯಂ.— ಸತತಂ ಮಧ್ಯಮಪುರುಷಪ್ರತಿಷೇಧದ ವಿಧಿಯೊಳಂ ಪ್ರಯೋಜನವಸ್ತ್ವಾಶ್ರಿತಹೇತುಕ್ರಿಯೆಯೊಳಂ ಕ್ರಿಯೆ ತಾಂ ಕ್ರಿಯಾರ್ಥಂ ಅಪ್ಪೆಡೆಗಳೊಳಂ ಅಲ್ ಅನ್ವಿತಂ.

ಟೀಕು.— ಸತತಂ = ಆವಾಗಳುಂ; ಮಧ್ಯಮಪುರುಷ = ಮಧ್ಯಮಪುರುಷದ; ಪ್ರತಿಷೇಧದ = ಪ್ರತಿಷೇಧಾರ್ಥದ; ವಿಧಿಯೊಳಂ = ವಿಧಿಯಲ್ಲಿಯುಂ; ಪ್ರಯೋಜನವಸ್ತು = ಪ್ರಯೋಜನವಸ್ತುವಿನಲ್ಲಿ; ಆಶ್ರಿತ = ಆಶ್ರಯಿಸಲ್ಪಟ್ಟ; ಹೇತುಕ್ರಿಯೆಯೊಳಂ = ಕಾರಣಕ್ರಿಯೆಯಲ್ಲಿಯುಂ; ಕ್ರಿಯೆ = ಕ್ರಿಯೆ; ತಾಂ = ತಾಂ; ಕ್ರಿಯಾರ್ಥಂ = ಕ್ರಿಯಾಪ್ರಯೋಜನಂ; ಅಪ್ಪೆಡೆಗಳೊಳಂ = ಆಗುವೆಡೆಗಳಲ್ಲಿಯುಂ; ಅಲ್ = ಅಲ್ಲೆಂಬುದು; ಅನ್ವಿತಂ = ಕೂಡಲ್ಪಡುವುದು.

ವೃತ್ತಿ.— ಮಧ್ಯಮಪುರುಷಪ್ರತಿಷೇಧದ ಕ್ರಿಯೆ ವಿಧ್ಯರ್ಥಮಾದಲ್ಲಿಯುಂ ಪ್ರಯೋಜನವಸ್ತುವಿಂಗೆ ನಿಮಿತ್ತಮಪ್ಪ ಕ್ರಿಯೆಯೊಳಂ ಕ್ರಿಯೆ ತಾಂ ಕ್ರಿಯಾರ್ಥಮಂ ಪೇಳ್ವೆಡೆಯೊಳಂ ಅಲ್ ಅಕ್ಕುಂ.

ಪ್ರಯೋಗಂ.— ವಿಧ್ಯರ್ಥಮಾದಲ್ಲಿ — ಉಸಿರಲಿಂ; ಮಾಡಲಿಂ.

"ಸಾರಲಿಂ ಬಲ್ಲೆಯಿಂ ಯನೆಂದುದೆ ಮಾತು" || 573 ||

"ಏಳಿದಂ ಗೆಯ್ಯಲಿಮಾಗಳೆಮ್ಮೊಳ್;" || 574 ||

"ಆರಯ್ದಾರುಂ ಸಾರಲಿಂ." || 575 ||

The 88th Sûtra of the 4th Pâda of the ಶಬ್ದಾನುಶಾಸನಂ says: || ಪ್ರಾಕ್ಪ್ರಯೋಗೇ ಚಾವಿಕೃತಾತ್ || ಅವಿಕೃತಾದಿಮಃ ಪ್ರಾಗ್ ಅಲ್ ಭವತಿ ಬೇಡಂ ಬೇಡ ಇತ್ಯನಯೋಃ ಪ್ರಯೋಗೇ ಅಪ್ರಯೋಗೇ ಚ ವಿಷಯೇ || Examples: ಪೆಂಡಿರಂ ನಂಬಲಿಂ ಬೇಡಂ | ನಂಬಲಿಂ ಬೇಡ | ನಂಬಲಿಂ | ಆಕಾರ್ಯಮಂ ಮಾಡಲಿಂ ಬೇಡಂ | ಮಾಡಲಿಂ ಬೇಡ | ಮಾಡಲಿಂ | ಅವಿಕೃತಾದಿತಿ ಕಿಂ || ನೋಡಲ್ ಬೇಡ | etc.

ವಿಧ್ಯರ್ಥಮಲ್ಲದ ಪ್ರತಿಷೇಧಕ್ರಿಯೆಯೊಳ್ ಅಲ್ ಅಕ್ಕುಂ.

"ಪೆಱಿತೊಂದನಣಂಬಗೆಯಲ್ ಗಡ ನಿನಗೆ ಸುಮತಿ ಬೇಱಿಾಂ
ಬೇಱಿ" || 576 ||

"ಬನದಲ್ಲಿ ಪುಗಲ್ ಪುಗಲೆಂಬ ಗಂಡುಗೋಗಿಲೆ" || 577 ||

ಪ್ರಯೋಜನವಸ್ತುಕ್ರಿಯೆಗೆ—

"ತಱಿಯಲ್ಕಕ್ಕಳವರ್ತಿಗಳ್ಗೆ" || 578 ||

ಬಿಡದೀಯಲ್ಕಕ್ಕ ಸಂಪತ್ತಿ; ಮಾತಱಿಯಲ್ಕಕ್ಕ ವಿವೇಕಂ.

ಕ್ರಿಯೆಗೆ—ಗೆಲ್ಲಲ್ಬಗೆದಂ; ಪುಗಲ್ಬಂದಂ, ಮುತ್ತಲ್ವೇಟ್ಟಿಂ.

ಈಯಲ್ಬಂದತ್ತು ಕಲ್ಪಾಂಘ್ರಿಪಮಭಿಮತಮಂ" || 579 ||

ಸೂತ್ರಂ.[1] || ೨೩೪ ||

In the last two cases the Dative of ಅಲ್ (ಅಲ್ಕೆ) may be used, or the ಅಲ್ be dropped.

ಸಂದಿಪುದಲ್ಪಿನ ಪರದೊಳ್ |
ಬಂದು ಕೆಕಾರಮುಮದೊರ್ಮೆ ವೈಕಲ್ಪಿಕದಿಂ ||
ಸಂದಿಪುದಲ್ಗಂ ಲೋಪಂ |
ಬಂದಾ ಪ್ರತಿಷೇಧವಿಧಿಯನೊದವದ ಪಕ್ಷಂ. || ೨೪೬ ||

ಪದಚ್ಛೇದಂ.—ಸಂದಿಪುದು ಅಲ್ಪಿನ ಪರದೊಳ್ ಬಂದು ಕೆಕಾರಮುಂ ಅದು ಒರ್ಮೆ, ವೈಕಲ್ಪಿಕದಿಂ ಸಂದಿಪುದು ಅಲ್ಗಂ (ಅಲ್ಲಂ) ಲೋಪಂ ಬಂದು, ಆ ಪ್ರತಿಷೇಧವಿಧಿಯಂ ಒದವದ ಪಕ್ಷಂ.

ಅನ್ವಯಂ.—ಆ ಪ್ರತಿಷೇಧವಿಧಿಯಂ ಒದವದ ಪಕ್ಷಂ ಅಲ್ಪಿನ ಪರದೊಳ್ ಕೆಕಾರವುಂ ಅದು ಒರ್ಮೆ ಬಂದು ಸಂದಿಪುದು, ವೈಕಲ್ಪಿಕದಿಂ ಅಲ್ಗಂ ಲೋಪಂ ಬಂದು ಸಂದಿಪುದು.

ಟೀಕು.—ಆ ಪ್ರತಿಷೇಧವಿಧಿಯಂ = ಆ ಮಧ್ಯಮಪುರುಷದ ಪ್ರತಿಷೇಧದ ವಿಧಿಯಂ; ಒದವದ ಪಕ್ಷಂ = ಪ್ರಾಪ್ತಿಸದ ಪಕ್ಷದಲ್ಲಿ; ಅಲ್ಪಿನ = ಅಲ್ ಎಂಬುದರ; ಪರದೊಳ್ = ಮುಂದು

1) ಸಂಗತಾಂತರೇ ಬಹುಳ ಮಲ್ಲೋಪಃ || ಭಾ. ಭೂ. 223. ||
(ಪದಾಂತರ ಸಂಗತಿಯಲ್ಲಿ ಅಲ್ ಎಂಬುದು ವಿಕಲ್ಪದಿಂದ ಲೋಪವಾಗುವುದು.)

. . . . .ಪದಾಂತರದಿಂ ಸಂ- |
ಗತಿಯಾಗಲ್ಲೋಪಂ ಮೇಣ್ |
ಚತುರ್ಥಿ ಸಮಸಲ್ಗುಮೆಂಬವಱೊಳ್ ಕೆಲಬರ್ || ಶ. ಸ್ಮೃ. 94. ||

ಗಡೆಯಲ್ಲಿ; ಕೆಕಾರಮುಂ = ಕೆಕಾರಮುಂ; ಅದು = ಅದು; ಒರ್ಮೆ = ಒಂದು ಬಾರಿ; ಬಂದು = ಬಂದು; ಸಂದಿಪುದು = ಸಂದಿಸುವುದು; ವೈಕಲ್ಪಿಕದಿಂ = ವಿಕಲ್ಪದಿಂದೆ; ಅಲ್ಗಂ = ಅಲ್ ಎಂಬುದಱ ಲಕಾರಕ್ಕಂ; ಲೋಪಂ = ಅದರ್ಶನಂ; ಬಂದು ಸಂದಿಪುದು = ಬರ್ಪುದು.

ವೃತ್ತಿ. — ಪ್ರತಿಷೇಧದ ವಿಧಿ ಪೊರ್ದದೊಡಲುವಿನ ಮುಂದೊರ್ಮೆ ಕೆಕಾರಮಕ್ಕುಂ; ಆ ಅಲ್ಗೆ ವಿಕಲ್ಪದಿಂ ಲೋಪಂ.

ಪ್ರಯೋಗಂ. — ಕೆಕಾರಕ್ಕೆ — ನುಡಿಯಲ್ಕೆ ಬಂದಂ; ಪೇೞಲ್ಕೆ ಕೇಳ್ದಂ; ಬೇಡಲ್ಕೆ ಬಂದಂ.

"ಬಿತ್ತರಿಸಲ್ಕೆವೇೞ್ ಸುವರ್ಣೋತ್ಕರಮಂ" || 580 ||

ಅಲುವಿನ ಲೋಪಕ್ಕೆ — ಉಡಲ್ವೇೞ್, ಉಡವೇೞ್; ತರಲ್ವೇೞ್, ತರವೇೞ್.

"ತರವೇೞ್ ಸನ್ನದ್ಧವಾಜಿಸಾಧನಮಂ" || 581 ||

ಸೂತ್ರಂ[1]. || ೨೩೫ ||

The Terminations for the Past Participle (ಭೂತಕಾಲಕ್ರಿಯೆ) are ಉ and ಇ; those for the Present Participle (ವರ್ತಮಾನಕ್ರಿಯೆ) are ಉತುಂ, ಉತ್ತುಂ, ಉತ್ತೆ, ಉತೆ.

ಪ್ರತಿಪಾದ್ಯಮುತ್ವಮಿತ್ವಂ ।
ಮತಿವಂತರಿನೆಯ್ದೆ ಪೂರ್ವಕಾಲಕ್ರಿಯೆಗಾ- ॥
ಯುತುಮುತ್ತುಮುತ್ತೆಯುತೆಯೆಂ- ।
ದು ತಗುಳ್ಗುಂ ವರ್ತಮಾನವಿಹಿತಕ್ರಿಯೆಯೊಳ್. ॥ ೨೪೭ ॥

ಪದಚ್ಛೇದಂ. — ಪ್ರತಿಪಾದ್ಯಂ ಉತ್ವಂ ಇತ್ವಂ ಮತಿವಂತರಿಂ ಎಯ್ದೆ ಪೂರ್ವಕಾಲಕ್ರಿಯೆಗೆ; ಆ, ಉತುಂ ಉತ್ತುಂ ಉತ್ತೆ ಉತೆ ಎಂದು, ತಗುಳ್ಗುಂ ವರ್ತಮಾನವಿಹಿತಕ್ರಿಯೆಯೊಳ್.

ಅನ್ವಯಂ. — ಮತಿವಂತರಿಂ ಎಯ್ದೆ ಪೂರ್ವಕಾಲಕ್ರಿಯೆಗೆ ಉತ್ವಂ ಇತ್ವಂ ಪ್ರತಿಪಾದ್ಯಂ; ವರ್ತಮಾನವಿಹಿತಕ್ರಿಯೆಯೊಳ್ ಆ, ಉತುಂ ಉತ್ತುಂ ಉತ್ತೆ ಉತೆ ಎಂದು, ತಗುಳ್ಗುಂ.

---

1) ಉತುಮುತ್ತುಮಂತೇ ತದಾತ್ವೇ || ಧಾ. ಭೂ. 224. ||
(ವರ್ತಮಾನದಲ್ಲಿ ಉತು, ಉತುಂ, ಉತ್ತುಂ ಎಂಬಿವು ಅಂತ್ಯದಲ್ಲಿ ಹತ್ತುವುವು.)

. . ವರ್ತಮಾನಗತಿಗುತ್ತುಮುತುಂ ।
ದ್ವಯಮಕ್ಕುಂ ಪೂರ್ವಭವ- ।
ಕ್ರಿಯೆಯೊಳಿದುತ್ವತ್ವಯುಂಗಳಕ್ಕುಂ ಪೇೞಸಂ || ಶ. ಸ್ಮೃ. 98. ||

ಟೀಕು.— ಮತಿವಂತರಿಂ = ಬುದ್ಧಿವಂತರಿಂದೆ; ಎಯ್ದೆ = ಚೆನ್ನಾಗಿ; ಪೂರ್ವಕಾಲಕ್ರಿಯೆಗೆ = ಮೊದಲ ಕಾಲದ ಕ್ರಿಯೆಗೆ; ಉತ್ವಂ = ಉಕಾರಂ; ಇತ್ವಂ = ಇಕಾರಂ; ಪ್ರತಿಪಾದ್ಯಂ = ಪ್ರತಿಪಾದಿಸಲ್ಪಡುವುದು; ವರ್ತಮಾನ = ವರ್ತಮಾನಕಾಲದಲ್ಲಿ; ವಿಹಿತ = ಕೂಡಲ್ಪಟ್ಟ; ಕ್ರಿಯೆಯೊಳ್ = ಕ್ರಿಯೆಯಲ್ಲಿ; ಅಯುತುಂ = ಅ ಉತುಂ ಎಂದು; ಉತ್ತುಂ = ಉತ್ತುಂ ಎಂದು; ಉತ್ತೆ = ಉತ್ತೆ ಎಂದು; ಉತೆ = ಉತೆ ಎಂದು; ತಗುಳ್ಗುಂ = ಎಯ್ದುವುದು.

ವಿಚಾರಂ (not in Mdb. Ms.).—ಈ, ಓ, ಕಾ, ಕೀ, ಕೇ, ನೋ, ಪೂ, ಬೇ, ಬಾ ಎಂಬೇಕಾಕ್ಷರ ಧಾತುಗಳ್ಗಂ ಇಕಾರಾಂತಂಗಳ್ಗಂ ಎಕಾರಾಂತಂಗಳ್ಗಂ ಉಕಾರಂ ಪತ್ತುವುದು. ಉಕಾರಾಂತಂಗಳ್ಗೆ ಇಕಾರಂ ಪತ್ತುವುದು. ವ್ಯಂಜನಾಂತಂಗಳ್ಗೆ ಎರಡುಂ ಪತ್ತುಗುಂ. ಅಲ್ಲಿ ಉತ್ವಂ ಪತ್ತಿದಲ್ಲಿ ಭೂತಕಾಲದ ದಕಾರಂ ಪತ್ತುವುದು, ಇತ್ವಂ ಪತ್ತಿದಲ್ಲಿ ದತ್ವಂ ಬಾರದು; ಅವಂ ಪ್ರಯೋಗಂಗಳಲ್ಲಿ ನೋಡಿ ತಿಳಿವುದು. ಬಂದಂ ಪೋದಂ ಎಂಬಲ್ಲಿ ಬಂದು ಪೋದಂ; ಪೋದಂ ಬಂದನೆಂಬಲ್ಲಿ ಪೋಗಿ ಬಂದಂ ಎಂಬಂತೆ.

ವೃತ್ತಿ.—ಭೂತಕಾಲಕ್ರಿಯೆಯೊಳುಕಾರಮುಮಿಕಾರಮುಮಕ್ಕುಂ; ವರ್ತಮಾನಕ್ರಿಯೆಯೊಳುತುಂ ಉತ್ತುಂ ಉತ್ತೆ ಉತೆ ಎಂದು ನಾಲ್ಕು ರೂಪಮಕ್ಕುಂ.

ಭೂತಕಾಲದುಕಾರಕ್ಕೆ— ಕುಸಿದು ನಡೆದಂ; ಒಸೆದು ಕೊಟ್ಟಂ; ನೆನೆದು ಪೇಳ್ದಿಂ; ಮಿಂದುಂಡಂ.

"ಮಿಂದುಂಡು ಕುಡಿದು ಮಗುಳ್ದಿಂ |
ಬಂದಿರ್ಪೊಡಮಿರ್ಪ . . . . . ." || 582 ||

ಇಕಾರಕ್ಕೆ— ನಚ್ಚಿ ಬಂದಂ; ಮೆಚ್ಚಿ ಪೊಗಳ್ದಿಂ; ಎತ್ತಿ ನಡೆದಂ; ಮುತ್ತಿ ಬಿಟ್ಟಂ.

". . . . .ತಿರ್ದಿ ನರನುದ್ದಮಿಸೆ ಬೇಳ್ದಿಂ" || 583 ||

ವರ್ತಮಾನದೊಳ್ ಉತುಗೆ— ನಗುತುಂ ಬಂದಂ; ಪುಗುತುಮಿರ್ದಂ; ಕರೆಯುತುಂ ಪೋದಂ.

". . . . .ಸೂಸುತುಂ ನದನದ್ಯಚ್ಛಜಲಂಗಳಂ" || 584 ||

ಉತ್ತುಗೆ— ಕಾದುತ್ತುಂ ಬಂದಂ; ಜಡಿಯುತ್ತುಂ ಪೊಡೆದಂ.

". . . . .ಕಪಿಧ್ವಜಂ ನಿಳ್ಕಿ ನಿವರ್ತಿಸುತ್ತುಮಿರೆ" || 585 ||
"ಕೆದರಿಬಿತ್ತುಂ ಮಣಲಂ. . . . . ." || 586 ||

ಉತ್ತೆಗೆ— ಕೆತ್ತುತ್ತೆ ಕಡಿದಂ; ಪರಸುತ್ತೆ ಬಂದಂ.

"ಪೋಗು ಪೋಗು ಕಾದುತ್ತೆ ಬಂದಪೆಂ ಸಲ್ಲವೆಮ್ಮೊಳಿವು" || 587 ||

ಉತೆಗೆ— ಮಿಱುಗುತೆ ಪೋದಂ; ಎಸುತೆ ನಿಂದಂ; ಇಸುತಿರ್ದಂ.

"ತನ್ನಾಜ್ಞೆಗೆ ಪೇಱುತಿರ್ಪರ್. . . . ." || 588 ||

ಸೂತ್ರಂ[1]. || ೨೪೬ ||

When the roots ಮಿಾ, ತರ್, ಬರ್, ಕೊಲ್ and ಸಲ್ are followed by ದ and ದಪ, they become ಮಿನ್, ತನ್, ಬನ್, ಕೊನ್ and ಸನ್; ನಿಲ್ may keep its form.

ದ ದಪಂಗಳ್ಪರದೊಳ್ತಾ- |
ಮೊದವಿರೆ ಮಿಾಯೆಂಬುದರ್ಕೆ ತರ್ಬರ್ಗಳ್ಗೊಂ- ||
ದಿದ ಕೊಲ್ಸಲ್ಗಳ್ಗಮರ್ದಿ- |
ರ್ಪುದು ನತ್ವಂ। ನಿಲ್ಗೆ ಬಲ್ಲರಿಂದೆ ವಿಕಲ್ಪಂ ।| || ೨೪೬ ||

ಪದಚ್ಛೇದಂ.— ದ ದಪಂಗಳ್ ಪರದೊಳ್ ತಾಂ ಒದವಿ ಇರೆ, ಮಿಾ ಎಂಬುದರ್ಕೆ ತರ್ ಬರ್ಗಳ್ಗೆ ಒಂದಿದ ಕೊಲ್ ಸಲ್ಗಳ್ಗೆ ಅಮರ್ದು ಇರ್ಪುದು ನತ್ವಂ; ನಿಲ್ಗೆ ಬಲ್ಲರಿಂದೆ ವಿಕಲ್ಪಂ.

ಅನ್ವಯಂ.— ಪರದೊಳ್ ದ ದಪಂಗಳ್ ತಾಂ ಒದವಿರೆ, ಮಿಾ ಎಂಬುದರ್ಕೆ ತರ್ ಬರ್ಗಳ್ಗೆ ಒಂದಿದ ಕೊಲ್‌ಸಲ್ಗಳ್ಗೆ ನತ್ವಂ ಅಮರ್ದು ಇರ್ಪುದು; ನಿಲ್ಗೆ ಬಲ್ಲರಿಂದೆ ವಿಕಲ್ಪಂ.

ಟೀಕು.— ಪರದೊಳ್ = ಧಾತುವಿನ ಪರದಲ್ಲಿ; ದ ದಪಂಗಳ್ = ದಕಾರ ದಪಕಾರಂಗಳ್; ತಾಂ = ತಾಂ; ಒದವಿರೆ = ಪ್ರಾಪ್ತಿಸಿರೆ; ಮಿಾ ಎಂಬುದರ್ಕೆ = ಮಿಾ—ಸ್ನಾಪನೇ— ಎಂಬ ಧಾತುವಿಂಗೆ; ತರ್ಬರ್ಗಳ್ಗೆ = ತರ್ ಬರ್ ಎಂಬ ಧಾತುಗಳ್ಗೆ; ಒಂದಿದ ಕೊಲ್ಸಲ್ಗಳ್ಗೆ =

[1] ಹಿಂಸಾಗತ್ಯರ್ಥಯೋರ್ಲೋರ್ನಃ || ಭಾ. ಭೂ. 232. ||
(ಹಿಂಸಾರ್ಥ ಗತ್ಯರ್ಥಗಳನ್ನು ನುಡಿಯುವ ಧಾತುಗಳ ಲಕಾರಕ್ಕೆ ವ್ಯಂಜನವು ಪರವಾದರೆ ನಕಾರಾದೇಶವುಂಟು.)

ವಾ ಸ್ಥಿತ್ಯರ್ಥಕಸ್ಯ || ಭಾ. ಭೂ. 233. |
(ಸ್ಥಿತ್ಯರ್ಥವನ್ನು ನುಡಿಯುವ ಧಾತುವಿನ ಲಕಾರಕ್ಕೆ ವಿಕಲ್ಪದಿಂದ ನಕಾರ.)

ಆನಯುನಾಗಮನಾರ್ಥವರ್ತಿನೋ ರೇಫಸ್ಯ || ಭಾ. ಭೂ. 234. ||
(ಆನಯುನ ಆಗಮನಾರ್ಥಗಳನ್ನು ನುಡಿಯುವ ಧಾತುಗಳ ರೇಫಕ್ಕೆ ನಕಾರಾಗಮವುಂಟು.)

ಕೂಡಿದ ಕೊಲ್ ಸಲ್ ಎಂಬ ಧಾತುಗಳ್ಗೆ; ನತ್ವಂ = ನಕಾರಂ; ಅಮರ್ದಿರ್ಪುದು = ಪೊರ್ದುಗೆಯಾಗಿರ್ಪುದು; ನಿಲ್ಗೆ = ನಿಲ್ ಎಂಬುದಕ್ಕೆ; ಬಲ್ಲರಿಂದೆ = ಬಲ್ಲ ವಿದ್ವಾಂಸರಿಂದೆ; ವಿಕಲ್ಪಂ = ವಿಕಲ್ಪವಾಗಿ ಬರ್ಪುದು.

ವಿಚಾರಂ.— (not in Mdb. Ms.) — ಶಬ್ದಾನುಶಾಸನದಲ್ಲಿ ಸೂತ್ರಂ— || ಕೊಲ್ಸಲೋರ್ ನಃ || 4, 50 || ಕೊಲ್ಸಲ್ ಇತ್ಯೇತಯೋರ್ಧಾತ್ವೋರ್ ನಕಾರಾದೇಶೋ ಭವತಿ ದಕಾರಾದೌ ಪ್ರತ್ಯಯೇ ಪರೇ || ಎಂದುದಾಗಿ ಕೊಲ್ ಸಲ್ ಎಂಬ ಧಾತುಗಳ್ಗೆ ನಕಾರಾದೇಶಮಕ್ಕುಂ, ದಕಾರಾದಿಪ್ರತ್ಯಯಂ ಪರಮಾಗೆ. || ತರ್ಬರೋರ್ ಇಮಿ ಚ || 4, 51 || ತರ್ಬರ್ ಇತ್ಯೇತಯೋರ್ಧಾತ್ವೋರ್ ನಕಾರಾದೇಶೋ ಭವತಿ ದಕಾರಾದೌ ಪ್ರತ್ಯಯೇ ಇಮಿ ಚ ಪರೇ || ಎಂದುದಾಗಿ ತರ್ ಬರ್ ಎಂಬ ಧಾತುಗಳ್ಗೆ ನಕಾರಾದೇಶಮಕ್ಕುಂ, ದಕಾರಾದಿಪ್ರತ್ಯಯಂ ಪರಮಾಗೆಯುಂ ಮಧ್ಯಮಪುರುಷದ ವಿಧ್ಯರ್ಥದ ಬಹುವಚನವಾದ ಇಮ್ ಎಂಬುದು ಪರಮಾಗೆಯುಂ; ಅದೆಂತೆಂದೊಡೆ — ತಂದಂ, ತಂದಪಂ, ತಂದು, ತನ್ನಿಂ; ಬಂದಂ, ಬಂದಪಂ, ಬಂದು, ಬನ್ನಿಂ ಎಂದರಿವುದು.

ವೃತ್ತಿ.— ದ ದಪಂಗಳ್ ಪರಮಾಗೆ, ಮೀ ಎಂಬುದರ್ಕಂ ತರ್ ಬರ್ಗಳ ರೇಫೆಗಂ ಕೊಲ್ ಸಲ್ಗಳ ಲತ್ವಕ್ಕಂ ನಕಾರಾದೇಶಂ; ನಿಲ್ ಎಂಬುದರ್ಕೆ ವಿಕಲ್ಪಂ.

ಪ್ರಯೋಗಂ.— ಕ್ರಮಪ್ರಯೋಗಕ್ಕೆ—

"ಅಲರ ಮೞೆಯೊಳ್ ಮಿಂದಂ ಭೂಪಾಳಮನ್ಮಥನಾಜೆಯೊಳ್" || 589 ||

"ನಡೆತಂದಂ ಮೇರೆದಪ್ಪಿ ಕವಿವಂಬುಧರಂ ಬೋಲ್" || 590 ||

"ಆವನ ಬೀಡಿನಭಿರಮತಿರೋಜವಾರ್ತಂದರಿದಂ" || 591 ||

"ಬಂದಂ ಫಲ್ಗುಣನಿಲ್ಲ ಸಂದಯಮಣಂ ತಾನಿಲ್ಲ. . ." || 592 ||

"ಕೊಂದನಿನ್ನೆಗೊಂಡೆಗಳನೆಯ್ದುವು" || 593 ||

"ತಂತಮನೆ ಕೊಂದರೆಂದು ಪಡೆಯಾ ಸಕಳಂ" || 594 ||

"ಕೊಂದಂ ಕೊಳ್ವಂತೆ ರಸಮನಂಜನಸಿದ್ಧಂ" || 595 ||

"ಬೇಡರ ವೋಲ್ ಮಸಗಿ ತುಱುಗೊಳಲ್ ಬೞಿ ಸಂದಂ" || 596 ||

ಮಿಂದಪಂ, ತಂದಪಂ, ಬಂದಪಂ, ಕೊಂದಪಂ, ಸಂದಪಂ.

ನಿಲ್ಗೆ — ನಿಂದಂ, ನಿಲ್ತಂ; ನಿಂದಪಂ, ನಿಲ್ತಪಂ.

"ಮಂಡಲವ್ಯೂಹಮನೊಡ್ಡಿ ನಿಂದಂ ನಿಱಿಯಲ್. ." || 597 ||

"ಬೆನ್ನೊಳ್ ನಿಲ್ತಂ ಗಾಂಡೀವಿ" || 598 ||

ಸೂತ್ರಂ[1]. ॥ ೨೩೭ ॥

Further, before the affixes ದ and ದಪ, the roots ಇಸು, ಬಿಸು, ಗಿಱು, ಕಿಱು, ತಿಱು, and ಕಿಡು changing their ಇ into ಎ, become ಎಚ್, ಬೆಚ್, ಗೆತ್, ಕೆತ್, ತೆತ್, ಕೆಟ್; and the roots ಉಗು, ಪುಗು, ಕುಡು, ತುಡು, changing their ಉ into ಒ, become ಒಕ್, ಪೊಕ್, ಕೊಟ್, ತೊಟ್. — The ಅ in ತರ್ and ಬರ್ lengthened in the Negative (ವಿಲೋಮಕ್ರಿಯೆ).

ಪ್ರಕೃತಿಯ ಪೂರ್ವದಿಕಾರದೊ- ।
ಳುಕಾರದೊಳ್ ಹ್ರಸ್ವದೆತ್ವಮೊತ್ವಂ ಬಹುಳಂ ॥
ಪ್ರಕಟಂ ತರ್ಬರ್ಗಳ ಮೊದ- ।
ಲಕಾರದೊಳ್ದೀರ್ಘವಿಧಿ ವಿಲೋಮಕ್ರಿಯೆಯೊಳ್ ॥
॥ ೨೪೯ ॥

ಪದಚ್ಛೇದಂ. — ಪ್ರಕೃತಿಯ ಪೂರ್ವದ ಇಕಾರದೊಳ್ ಉಕಾರದೊಳ್ ಹ್ರಸ್ವದ ಎತ್ವಂ ಒತ್ವಂ ಬಹುಳಂ; ಪ್ರಕಟಂ ತರ್ ಬರ್ಗಳ ಮೊದಲ ಅಕಾರದೊಳ್ ದೀರ್ಘವಿಧಿ ವಿಲೋಮ ಕ್ರಿಯೆಯೊಳ್.

ಅನ್ವಯಂ. — ವಿಲೋಮಕ್ರಿಯೆಯೊಳ್ ತರ್ಬರ್ಗಳ ಮೊದಲ ಅಕಾರದೊಳ್ ದೀರ್ಘ- ವಿಧಿ ಪ್ರಕಟಂ ಎಂಬುದನ್ವಯಂ.

ಟೀಕು. — ದ ದಪಂಗಳ್ಪರಮಾದ ಎಂಬುದನುವರ್ತನೆ — ಪ್ರಕೃತಿಯ = ದ ದಪಂಗಳ್ಪರ ಮಾದ ಧಾತುವಿನ; ಪೂರ್ವದ = ಮೊದಲ; ಇಕಾರದೊಳ್ = ಇಕಾರದಲ್ಲಿ; ಉಕಾರದೊಳ್ = ಉಕಾರದಲ್ಲಿ; ಹ್ರಸ್ವದ = ಹ್ರಸ್ವದ; ಎತ್ವಂ = ಎಕಾರಂ; ಒತ್ವಂ = ಒಕಾರಂ; ಬಹುಳಂ = ಬಹುಳವಾಗಿ ಬರ್ಪುದು; ವಿಲೋಮಕ್ರಿಯೆಯೊಳ್ = ಪ್ರತಿಷೇಧದ ಕ್ರಿಯೆಯೊಳ್; ತರ್ ಬರ್ಗಳ = ತರ್ ಬರ್ ಎಂಬ ಧಾತುಗಳ; ಮೊದಲ = ಆದಿಯ; ಅಕಾರದೊಳ್ = ಅತ್ವದಲ್ಲಿ; ದೀರ್ಘವಿಧಿ = ದೀರ್ಘದ ವಿಧಿ; ಪ್ರಕಟಂ = ಸಿದ್ಧವಾಗುವುದು.

ವಿಚಾರಂ. — ಇಸು, ಬಿಸು, ಗಿಱು, ಕಿಱು, ತಿಱು, ಕಿಡು, ಉಗು, ಪುಗು, ಕುಡು, ತುಡು ಎಂಬೀ ಹ್ರಸ್ವಾದಿದ್ವಿಸ್ವರಂಗಳಾದುಕಾರಾಂತಧಾತುಗಳ್ಗೆ ಕ್ರಮದಿಂದೆ ಆದಿಯ ಇಕಾರಕ್ಕೆಕಾರಂ ಉಕಾರಕ್ಕೊಕಾರಂ ಬರ್ಪುವೆಂದರಿವುದು.

---

[1] ಧಾತೋರಿದುತೋರುಪಾಂತ್ಯಯೋರೇದೋತೌ ಪ್ರಾಯಃ ॥ ಭಾ. ಭೂ. 226. ॥
(ಧಾತುವಿನ ಉಪಾಂತ್ಯದ ಇಕಾರ ಉಕಾರಗಳಿಗೆ ಎಕಾರ ಒಕಾರಗಳು ಪ್ರಾಯಿಕವಾಗಿ ಬರುವುವು.)

ಅತೋ ದೀರ್ಘೋऽನಾಗಮೇಷು ॥ ಭಾ. ಭೂ. 227. ॥
(ಧಾತುವಿನ ಅಕಾರಕ್ಕೆ ಆಗಮರಹಿತವಾದ ವಿಭಕ್ತಿಗಳು ಪರವಾದರೆ ದೀರ್ಘಾದೇಶವುಂಟು.)

ವೃತ್ತಿ.—ದ ದಪಂಗಳ್ಪರಮಾದ ಧಾತುವಿನ ಮೊದಲಿಕಾರದೊಳಮುಕಾರದೊಳಂ ಹ್ರಸ್ವಮಪ್ಪೆತ್ವಮುಮತ್ವಮುಮಕ್ಕುಂ; ತರ್ ಬರ್ ಎಂಬ ಧಾತುಗಳ ಮೊದಲಕಾರಕ್ಕೆ ಪ್ರತಿಷೇಧಕ್ರಿಯೆಯೊಳ್ ದೀರ್ಘಮಕ್ಕುಂ.

1. ಪ್ರಯೋಗಂ.—ಇತ್ವದೆತ್ವಕ್ಕೆ—ಬಿಸು, ಬೆಚ್ಚಂ; ತಿಱು, ತೆತ್ತಂ; ಗಿಱು, ಗೆತ್ತಂ; ಕಿಡು, ಕೆಟ್ಟಂ.

"ಮಱುಗುವಿಸಿಂ ಮಾಣದೆಚ್ಚನರಿವಾಹಿನಿಯಂ" || 599 ||

"ಮುಗಿಲಂ ಮಾಱಾನೆ ಗೆತ್ತಂ . . . ." || 600 ||

ಉತ್ವದೊತ್ವಕ್ಕೆ—ಉಗು, ಒಕ್ಕಂ; ಪುಗು, ಪೊಕ್ಕಂ; ಕುಡು, ಕೊಟ್ಟಂ, ತುಡು, ತೊಟ್ಟಂ.

"ಎನಿತುಮನಿತುಮಂ ಧರ್ಮಜಂ ಸೂಱೆಗೊಟ್ಟಂ" || 601 ||

"ತೊಟ್ಟಂ ಸಮ್ಮೋಹನಮಂ" || 602 ||

2. ದಪದೊಳ್—ಎಚ್ಚಪಂ, ಬೆಚ್ಚಪಂ, ತೊಟ್ಟಪಂ, ಕೊಟ್ಟಪಂ ಎಂಬಂತವರ್ಕಂ ಪತ್ತುಗುಂ.

ಬಹುಳದಿಂ ಕೆಲವಱೊಳೆತ್ವಮೊತ್ವಮಿಲ್ಲ—ಇತ್ತಂ; ಇರ್ದಂ.

"ಪಸೆಯಿರ್ದಂ ಗರುಡವೇಗನ್ನೃಪನಂದನೆಯೊಳ್" || 603 ||

ಇಟ್ಟಂ—

". . . . . . ಬೇಟ್ಸಿರಿದಿರೊಳ್ ಚಕ್ರಾವಿಚ್ಛಿನ್ನಂಗಳಂ
ತರಿಸಿಟ್ಟಂ . . . ." || 604 ||

ಉಟ್ಟಂ, ಸುಟ್ಟಂ—

"ಜವದಿಂದಗಮಲೆಯುಂ ಸುಟ್ಟಂ" || 605 ||

ಉರ್ಕಿದಂ; ಸುರ್ಕಿದಂ; ಕಟ್ಕಿಯಿಂದುಟ್ಕಿಂ.

"ಆಗಳೆ ಗಂಡುಡಿಗೆಯುಟ್ಟು ಬಿಟ್ಟು ಹಿಣಿಲಂ . . " || 606 ||

ದಪಕ್ಕಮಂತೆ.

3. ದೀರ್ಘಕ್ಕೆ—

"ಪತಿಗೆಂದು ಯುದ್ಧದೊಳ್ ಬನ್ನಮಂ ತಾರಂ." || 607 ||

"ನೃಪಂ ಬೆಂಬಿಟ್ಟಿಂ ದೂದಟ್ಟಿಯುಂ ಬಾರಂ. || 608 ||

ಬಹುಳದಿಂ ಪ್ರತಿಷೇಧಮಲ್ಲದಲ್ಲಿಯುಂ (ವಿಧಿಯೊಳ್) ದೀರ್ಘಮುಂಟು—

"ಬಾರ ಮರಾಳಿಕಾಗಮನೇ!" || 609 ||

ಸೂತ್ರಂ.[1] || ೨೩೮ ||

ಧಾತುವಿನಂತ್ಯದ ವರ್ಗೋ-|
ಪೇತತೃತೀಯಾಕ್ಷರಕ್ಕೆ ತಾಂ ಪ್ರಥಮತ್ವಂ ||
ಮಾತೇಂ ವ್ಯಂಜನರೂಪದಿ-|
ನೇ ತೆಱದಿಂ ಸ್ವಂತಧಾತುಗಕ್ಕುಂ ಚತ್ವಂ. || ೨೫೭ ||

Further, as partly seen by S. 237, before the affixes ದ and ದಪ, the roots ಪುಗು, ನಗು, ಉಗು, ಮಿಗು, ಅಡು ಸುಡು, ಕುಡು, ತುಡು, ಬಿಡು, ಉಡು, ನಡು, ಪಡು, ಇಡು, ಕಿಡು, ಮಡು, compound-verbs formed with them, and ಮುಡು change their final soft consonant into the corresponding hard one; and ಇಸು, ಬಿಸು, ವಸು their ಸ್ into ಚ್.

ಪದಚ್ಛೇದಂ. — ಧಾತುವಿನ ಅಂತ್ಯದ ವರ್ಗೋಪೇತತೃತೀಯಾಕ್ಷರಕ್ಕೆ ತಾಂ ಪ್ರಥಮತ್ವಂ, ಮಾತೇಂ, ವ್ಯಂಜನರೂಪದಿಂ; ಏ ತೆಱದಿಂ ಸ್ವಂತಧಾತುಗೆ ಅಕ್ಕುಂ ಚತ್ವಂ.

ಅನ್ವಯಂ. — ಧಾತುವಿನ ಅಂತ್ಯದ ವರ್ಗೋಪೇತತೃತೀಯಾಕ್ಷರಕ್ಕೆ ಪ್ರಥಮತ್ವಂ ತಾಂ, ಮಾತೇಂ, ವ್ಯಂಜನರೂಪದಿಂ ಅಕ್ಕುಂ; ಏ ತೆಱದಿಂ ಸ್ವಂತ ಧಾತುಗೆ ಚತ್ವಂ.

ಟೀಕು. — ದ ದಪಂಗಳ್ಪರದೊಳೊದವಿರೆ ಎಂಬುದನುವರ್ತನೆ—ಧಾತುವಿನ = ದ ದಪಂಗಳ್ಪರವಾದ ಹ್ರಸ್ವಾದಿದ್ವಿಸ್ವರಂಗಳಾದುಕಾರಾಂತಧಾತುವಿನ; ಅಂತ್ಯದ = ಕಡೆಯಣ; ವರ್ಗ = ವರ್ಗಂಗಳಲ್ಲಿ; ಉಪೇತ = ಕೂಡಲ್ಪಟ್ಟ; ತೃತೀಯಾಕ್ಷರಕ್ಕೆ = ಮೂರನೆಯಕ್ಷರಂಗಳ್ಗೆ; ಪ್ರಥಮತ್ವಂ = ಮೊದಲಕ್ಷರದ ಭಾವಂ; ತಾಂ = ತಾಂ; ಮಾತೇಂ = ಹೇಳ್ವುದೇಂ; ವ್ಯಂಜನರೂಪದಿಂ = ವ್ಯಂಜನದ ರೂಪಿಸಿಂದೆ; ಅಕ್ಕುಂ = ಆಗುವುದು; ಏ ತೆಱದಿಂ = ಆವ ರೀತಿಯಿಂದೆಯುಂ; ಸ್ವಂತಧಾತುಗೆ = ಸುಕಾರಾಂತಧಾತುಗೆ; ಚತ್ವಂ = ಚಕಾರಂ ಆಗುವುದು.

ವಿಚಾರಂ. (not in Mdb. Ms.) ಪುಗು, ನಗು, ಉಗು, ಮಿಗು ಎಂಬ ಗಾಂತಕ್ಕಂ— ಅಡು, ಸುಡು, ಕುಡು, ತುಡು, ಬಿಡು, ಉಡು, ನಡು, ಪಡು, ಇಡು, ಕಿಡು, ಮಡು ಎಂಬ

---

[1] ತೃತೀಯಾನಾಂ ವ್ಯಂಜನಾದೌ ಪ್ರಥಮತ್ವಂ || ಭಾ. ಭೂ. 228. ||
(ಧಾತುವಿನ ಸಂಬಂಧಿಯಾದ ತೃತೀಯಾಕ್ಷರಗಳಿಗೆ ವ್ಯಂಜನಮುನಾದಿಯಾಗುಳ್ಳ ವಿಭಕ್ತಿಯು ಪರವಾದರೆ ತಂತಮ್ಮ ಪ್ರಥಮಾಕ್ಷರಗಳು ಬರುವುವು.)

ಸಸ್ಯ ಚಃ || ಭಾ. ಭೂ. 235. ||
(ಧಾತುವಿನ ಸಕಾರಕ್ಕೆ ಚಕಾರವು ಬರುವುದು.)

ಡಾಂತಕ್ಕಂ— ಅಸೆವಡು, ಪಡಲಿಡು, ಮುಂಬಿಡು, ಹೊಲಬುಗಿಡು, ಒಡಂಬಡು, ಮೂಗುವಡು, ಅಕ್ಕಜಂಬಡು, ಕರುವಿಡು, ತಿಟ್ಟವಿಡು, ಉಬ್ಬಸಂಬಡು ಎಂಬಂತೆ ಬಹುಸ್ವರಯುಕ್ತಂಗಳೊಡಂ ಇಡು, ಪಡು, ಮಡು, ಬಿಡು, ಕುಡು ಎಂಬ ಹ್ರಸ್ವಾದಿದ್ವಿಸ್ವರಂಗಳಾದುಕಾರಾಂತಧಾತುಗಳಂತ್ಯವಾಗಿರ್ಪುದರಿಂದೆ ಈ ಕ್ರಿಯಾಸಮಾಸರೂಪಧಾತುಗಳ್ಗಂ— ದಾಂತದಲ್ಲಿ "ಮುದು ವೃದ್ಧೌ" ಎಂಬುದರ್ಕಂ ಪ್ರಥಮಾಕ್ಷರಂ ಬರ್ಕುಂ. ಇಸು ಬಿಸು ಪಸು ಎಂಬ ಸುಕಾರಾಂತಕ್ಕೆ ಚತ್ವಂ ಬರ್ಕುಂ.

ವೃತ್ತಿ.— ದ ದಪಂಗಳ್ಪರಮಾದ ಧಾತುವಿನ ಕಡೆಯ ವರ್ಗತೃತೀಯಾಕ್ಷರಕ್ಕೆ ವ್ಯಂಜನರೂಪದಿಂ ಮೊದಲಕ್ಕರಮಕ್ಕುಂ; ಸುಕಾರಾಂತ ಧಾತುವಿನ ಕಡೆಯ ಸುಕಾರಕ್ಕೆ ವ್ಯಂಜನಚಕಾರಮಕ್ಕುಂ.

ಪ್ರಯೋಗಂ.— ಗಕಾರಕ್ಕೆ— ಉಗು, ಒಕ್ಕಂ; ಪುಗು, ಪೊಕ್ಕಂ; ನಗು, ನಕ್ಕಂ; ಮಿಗು, ಮಿಕ್ಕಂ.

"ತಕ್ಕೆಂದರಿ ವೆಡೆಯೊಳ್ . . . . ." || 610 ||
"ಮಿಕ್ಕಂ ಕರ್ಣಾರ್ಜುನರ್ಕಳಂ. . . ." || 611 ||
"ಪೊಕ್ಕನಂದು ನಿಜಮಂದಿರಮಂ ಪರಸೈನ್ಯಭೈರವಂ" || 612 ||

ಡಕಾರಕ್ಕೆ— ನಡು, ನಟ್ಟಂ; ಮಡು, ಮಟ್ಟಂ; ಕಿಡು, ಕೆಟ್ಟಂ; ಕುಡು, ಕೊಟ್ಟಂ; ಸುಡು, ಸುಟ್ಟಂ; ಬಿಡು, ಬಿಟ್ಟಂ.

"ಪಿಡಿಯೆಂದಸಿತಾಳಪತ್ರಮಂ ಯತಿ ಕೊಟ್ಟಂ" || 613 ||
"ನೆಟಿಲೊಳೆ ಪೋರ್ವಂತೆವೊಲ್ ದೆಸೆಗೆಟ್ಟಂ" || 614 ||

ದಕಾರಕ್ಕೆ— ಮುದು, ಮುತ್ತಂ.

"ಮುತ್ತುದು ನೇಸಱ ತೇಜಂ |
ಸತ್ತುದು ದಾವಾಗ್ನಿ. . . . . ." || 615 ||

ಸುಕಾರದ ಚತ್ವಕ್ಕೆ— ಪಸು, ಪಚ್ಚಂ; ಬಿಸು, ಬೆಚ್ಚಂ; ಇಸು, ಎಚ್ಚಂ.

"ಕಳ್ಳವೆಳ್ಳಿವಟ್ಟಲ್ ಬಾಯೊಳ್ ಬೆಚ್ಚಂತಿರೆ. . . ." || 616 ||
" . . . .ಮಾಱಾಂತೆಚ್ಚಂ ಮಹಾರಥಂ ನರಂ" || 617 ||

ದಪಕ್ಕಮಂತೆ.

ಸೂತ್ರಂ[1]. || ೨೩೯ ||

ಱಾಂತದೊಳಂ, ಮೃತಿದಾನಾ- | ಸಾ' ಧಾತು ಈ' ಧಾತು
ರ್ಥಾಂತದೊಳಂ, ವ್ಯಂಜನದ ತಕಾರಂ ದೀರ್ಘಂ. ||
ಪಿಂತಿರೆ ಬರ್ಕುಂ ಹ್ರಸ್ವತೆ |
ಱಾಂತಕ್ಕಂ ರೇಫಮೊರ್ಮೆ ತವುಗೆ ಪಕಾರಂ. || ೨೪೧ ||

Further, before the affixes ದ and ದಪ, the final ಱ್ becomes ತ್; occasionally also ರ್. ಸಾಯ್ and ಈ shortening their Vowel, also get final ತ್. This shortening of the Vowel before ದ and ದಪ appears, for instance, also in ಕಾಣ್, ಎಱ್, ಬೀಱ್, ಆಱ್. — The ವ್ of ತವು becomes ಪ್.

ಪದಚ್ಛೇದಂ. — ಱಾಂತದೊಳಂ ಮೃತಿದಾನಾರ್ಥಾಂತದೊಳಂ ವ್ಯಂಜನದ ತಕಾರಂ; ದೀರ್ಘಂ ಪಿಂತೆ ಇರೆ, ಬರ್ಕುಂ ಹ್ರಸ್ವತೆ: ಱಾಂತಕ್ಕಂ ರೇಫಂ ಒರ್ಮೆ; ತವುಗೆ ಪಕಾರಂ.

ಅನ್ವಯಂ. — ಪಿಂತೆ ದೀರ್ಘಮಿರೆ, ಹ್ರಸ್ವತೆ ಬರ್ಕುಂ; ಱಾಂತಕ್ಕಂ ಒರ್ಮೆ ರೇಫಂ; ತವುಗೆ ಪಕಾರಂ ಎಂಬುದನ್ವಯಂ

ಟೀಕು. — ದ ದಪಂಗಳ್ಪರದೊಳಿರೆ ಎಂಬುದನುವರ್ತನೆ—ಱಾಂತದೊಳಂ = ರೇಫಾಂತ ಧಾತುಗಳಲ್ಲಿಯುಂ; ಮೃತಿದಾನಾರ್ಥಾಂತದೊಳಂ = ಸಾಯ್ ಈ ಎಂಬ ಮರಣಾರ್ಥದಾನಾರ್ಥದ ಧಾತುಗಳಂತ್ಯದಲ್ಲಿಯುಂ; ವ್ಯಂಜನದ = ವ್ಯಂಜನದ; ತಕಾರಂ = ತತ್ವಂ ಬರ್ಕ್ಕುಂ, ಱಾಂತಕ್ಕಂ ಸಾಯ್ ಎಂಬುದರ್ಕಂ ಆದೇಶವಾಗಿ, ಈ ಎಂಬುದಕ್ಕಾಗಮವಾಗಿ ಬರ್ಪುದು; ಪಿಂತೆ = ಹಿಂತೆ; ದೀರ್ಘಂ = ದೀರ್ಘಾಕ್ಷರಂ; ಇರೆ = ಇರೆ; ಹ್ರಸ್ವತೆ = ಹ್ರಸ್ವತ್ವಂ; ಬರ್ಕುಂ = ಬರ್ಪುದು; ಱಾಂತಕ್ಕಂ = ರೇಫಾಂತಕ್ಕೆಯುಂ; ಒರ್ಮೆ = ಒಂದು ಬಾರಿ; ರೇಫಂ = ರೇಫೆ ಬರ್ಪುದು; ತವುಗೆ = "ತವು ಕ್ಷಯೇ" ಎಂಬ ಧಾತುಗೆ; ಪಕಾರಂ = ಪತ್ವಂ ಬರ್ಪುದು.

---

[1] ಱಡಯೋಸ್ತಟೌ || ಧಾ. ಭೂ. 229. ||
(ಧಾತುವಿನ ಱಕಾರ ಡಕಾರಗಳಿಗೆ ಕ್ರಮವಾಗಿ ತಕಾರ ಟಕಾರಗಳು ಬರುವುವು.)

ವಕಾರಸ್ಯ ಪಃ || ಧಾ. ಭೂ. 230. ||
(ಧಾತುವಿನ ವಕಾರಕ್ಕೆ ಪಕಾರವು ಬರುವುದು.)

ಮೃತಿದಾನಾರ್ಥಯೋಸ್ತೋಽಂತೇ ಹ್ರಸ್ವಶ್ಚ || ಧಾ. ಭೂ. 236. ||
(ಮೃತ್ಯರ್ಥ ದಾನಾರ್ಥಗಳನ್ನು ನುಡಿಯುವ ಕಡೆಯಲ್ಲಿ ತಕಾರವೂ ಪೂರ್ವ ಸ್ವರಕ್ಕೆ ಹ್ರಸ್ವವೂ ಬರುವುವು.)

ವಿಚಾರಂ. — ಪೆಱು, ತೆಪ್ಪಱು, ಕಿಱು, ತಿಱು, ಗಿಱು, ಪೊಱು, ಎಟ್ಟಿಱು, ಆಸಱು, ಬೇಸಱು ಎಂಬೀ ಱಾಂತಕ್ಕೆ ತಕಾರಂ ಬರ್ಪುದು; ಉಳಿದ ಱಾಂತಕ್ಕೆ ಒರ್ಮೆ ಎಂಬುದಱಿಂ ವಿಕಲ್ಪದಿಂ ರೇಫೆಯಕ್ಕುಂ.

ವೃತ್ತಿ. — ದ ದಪಂಗಳ್ಪರಮಾದ ಧಾತುವಿನ ಕಡೆಯ ಱಕಾರಕ್ಕೆಯುಂ ಸಾಯ್ಈಯೆಂಬ ಧಾತುಗಳ ಕಡೆಯೊಳಂ ವ್ಯಂಜನತಕಾರಮಕ್ಕುಂ; ಸಾಯ್ಈಯೆಂಬವಱಾದಿದೀರ್ಘಕ್ಕೆ ಹ್ರಸ್ವಮಕ್ಕುಂ; ಱಕಾರಕ್ಕೊರ್ಮೆ ರೇಫಮಕ್ಕುಂ; ತವು ಎಂಬ ಧಾತುವಿನ ವಕಾರಕ್ಕೆ ಪಕಾರಮಕ್ಕುಂ.

ಪ್ರಯೋಗಂ. — ಱಕಾರದ ತಕಾರಕ್ಕೆ — ಕಿಱು, ಕೆತ್ತಂ; ತಿಱು, ತೆತ್ತಂ; ಗಿಱು, ಗೆತ್ತಂ; ಪೆಱು, ಪೆತ್ತಂ.

"ಜಾತವೇದಂ ಪಟುಕಪಟಮಯವ್ಯಾಜದಿಂ ಬೇಡಿ ಪೆತ್ತಂ" || 618 ||

"ಶಾಲಭಂಜಿಕೆವೆತ್ತರಸಂ ನೋಡಿದಂ ಲಲಾಟಕೋಮಲೆಯಂ" || 619 ||

ಸಾಯ್- ಈ-ಎಂಬಿವರ್ಕೆ — ಸತ್ತಂ; ಇತ್ತಂ.

"ಕಾದಿ ನಿನ್ನುಳ್ಳರುಂ ಬೆನ್ನಿತ್ತರ್ ಕೆಲರ್" || 620 ||

". . . . . ನಗೆಮೊ-
ಗದೊಳುಗಿದು ಕವಚಮನಿಂದ್ರಂಗಿತ್ತಂ ಕರ್ಣಂ" || 621 ||

ಸಾಯ್ಈಯೆಂಬವಱಿಂತೆ ಸಮುಚ್ಚಯವಶದಿಂ ಮತ್ತೆ ಕೆಲವಱಾದಿದೀರ್ಘಕ್ಕೆ ಹ್ರಸ್ವಮುಂಟು — (ಕಾಣ್) ಕಂಡಂ; (ಏಱ್) ಎಱ್ದಂ; (ಬೀೞ್) ಬಿೞ್ದಂ; (ಆೞ್) ಅೞ್ದಂ. ಇವು ಮೊದಲಾದುವು.

ಱಕಾರದ ರೇಫೆಗೆ — ಅಱು ಎಂಬುದರ್ಕೆ ಅರ್ತಂ; ವಿಕಲ್ಪದಿಂ ಅಱ್ತನೆಂದುಮುಂಟು —

"ಅರ್ತ ಕದಂಪು ಬತ್ತಿದ ಕಾಲುಂ ಹುರಿಯಱಿದಱಿಮಿಳಿಯೆಸದ ಸೆರೆಯುಂ" || 622 ||

"ಮಾರ್ತಪ್ಪ ತೆರೆಗಳಿಂ ತರ-
ಲಾರ್ತುದು ತನ್ನದಿಗೆ ಸುರನದಿವಿಭ್ರಮಮಂ" || 623 ||

ತವುಗೆ — ತಪ್ಪಂ, ತಪ್ಪಪಂ.

"ತಪ್ಪಂ ತನ್ನೊಳ್ ಪಳಂಚಿ ಕಿಡುಗುಟ್ಟೆ ತಪ್ಪುವಂಬುಗಳರವಂ" || 624 ||

ಸೂತ್ರಂ.[1] || ೨೪೦ ||

Further, when the finals of verbal themes have undergone the changes into ಕ್, ಚ್, ಟ್, ತ್ or ಪ್, the following ದ assumes the same respective shape; — after ಉಣ್, ಕಾಣ್ and ಕೊಳ್ the ದ becomes ಡ; — after the roots ಕವಲ್, ಮಡಲ್, ಬಲ್, ಕಲ್, ಪೋಲ್, ಸಾಲ್, ಸೋಲ್, ಪೇಲ್, ನೂಲ್, ಕೂರ್, ಕಸರ್, ಕನರ್, ಕೊನರ್, ತಳಿರ್, ಬೆಳರ್, ಚಿಗುರ್, ಬೆಮರ್, ಆರ್ದ್, ಉರ್ದ್, ಕೇರ್ದ್, ಚಳಿ, ಮೊಳೆ, ಅಪಿ, ಅಜ್, ಮಜಿ, ಕುಪ್, ಬಾ, ಕೀ, ಪೂ, ಬೀ, ಓ, ಕೂನ್, ಸೀನ್, ಪೇನ್, ಆನ್, ನೋನ್, ಈನ್, the ದ generally appears as ತ; — in ಬೆರಂಟಂ the ದ has disappeared.

ನಿರುತಂ ಕ ಚ ಟ ತ ಪಂಗಳ |
ಪರದ ದಕಾರಕ್ಕೆ ಪೂರ್ವರೂಪಮದಕ್ಕುಂ ||
ಪರವರ್ಣಂ ಧಾತ್ವಂತ್ಯದೊ- |
ಳಿರೆ ಡತ್ವಂ ಮೇಣ್ ತಕಾರಮೊರ್ಮೆಯಕಾರಂ. || ೨೫೨ ||

ಪದಚ್ಛೇದಂ. — ನಿರುತಂ ಕ ಚ ಟ ತ ಪಂಗಳ ಪರದ ದಕಾರಕ್ಕೆ ಪೂರ್ವರೂಪಂ ಅದು ಅಕ್ಕುಂ; ಪರವರ್ಣಂ ಧಾತ್ವಂತ್ಯದೊಳ್ ಇರೆ, ಡತ್ವಂ; ಮೇಣ್ ತಕಾರಂ; ಒರ್ಮೆ ಅಕಾರಂ.

ಟೀಕು, ಯಥಾನ್ವಯಂ. — ನಿರುತಂ = ನಿಶ್ಚಯವಾಗಿ; ಕ ಚ ಟ ತ ಪಂಗಳ = ಕಕಾರ ಚಕಾರ ಟಕಾರ ತಕಾರ ಪಕಾರಂಗಳ; ಪರದ = ಮುಂದಣ; ದಕಾರಕ್ಕೆ = ದತ್ವಕ್ಕೆ; ಪೂರ್ವರೂಪಂ = ಮೊದಲಕ್ಷರದ ರೂಪು; ಅದು = ಅದು; ಅಕ್ಕುಂ = ಆಗುವುದು; ಪರವರ್ಣಂ = ಕ ಚ ಟ ತ ಪಂಗಳಲ್ಲದ ಅನ್ಯವರ್ಣಂ; ಧಾತ್ವಂತ್ಯದೊಳ್ = ಧಾತುಗಳ ಕಡೆಯಲ್ಲಿ; ಇರೆ = ಇರ್ದೊಡೆ; ಡತ್ವಂ = ಡಕಾರಂ; ಮೇಣ್ = ಅದಲ್ಲದೆ; ತಕಾರಂ = ತತ್ವಂ; ಒರ್ಮೆ = ಒಂದು ಬಾರಿ; ಅಕಾರಂ = ಅತ್ವಂ ಆಗುವುದು.

ವಿಚಾರಂ. — ಉಣ್ ಕಾಣ್ ಎಂಬ ಣಕಾರದ ಕೊಳ್ ಧಾತುವಿನ ಣಕಾರದ ಮುಂದೆ ದತ್ವಂ ಡಕಾರವಾಗುವುದು.

---

1) ತೋಃ ಷ್ಟುನಾ ಟುಃ || ಭಾ. ಭೂ. 237. ||
(ತವರ್ಗಕ್ಕೆ ಟವರ್ಗವು ಕೂಡಿದರೆ ಟವರ್ಗವಾಗುವುದು.)
ಕ ಚ ಟ ತ ಪೇಭ್ಯೋ ದಸ್ಯ ಪೂರ್ವರೂಪಂ || ಭಾ. ಭೂ. 238. ||
(ಕ ಚ ಟ ತ ಪ ಎಂಬ ವರ್ಗಪ್ರಥಮಾಕ್ಷರಗಳಿಂದ ಪರವಾದ ದಕಾರಕ್ಕೆ ಪೂರ್ವರೂಪವು ಬರುವುದು.)
ಲ ಳಕಾರಾಭ್ಯಾಂ ದಸ್ಯ ತೋ ವಾ || ಭಾ. ಭೂ. 239. ||
(ಲಳಕಾರಗಳತ್ತಣಿಂದ ಪರವಾದ ದಕಾರಕ್ಕೆ ವಿಕಲ್ಪದಿಂದ ತಕಾರವು ಬರುವುದು.)

ಶಬ್ದಾನುಶಾಸನದಲ್ಲಿ ಸೂತ್ರಂ— ॥ ಕವಲಾದಿಭ್ಯಸ್ ತಃ ॥ 4, 66 ॥ ಕವಲಾದಿಭ್ಯೋ ಧಾತುಭ್ಯಃ ಪರಸ್ಯ ದಕಾರಸ್ಯ ತಕಾರಾದೇಶೋ ಭವತಿ ॥ ಎಂದುದಾಗಿ ಕವಲಾದಿಧಾತುಗಳತ್ತಣಿಂ ಪರದ ದಕಾರಕ್ಕೆ ತಕಾರಾದೇಶವಪ್ಪುದು; ಕವಲ್, ಮಡಲ್, ಬಲ್, ಕಲ್, ಪೋಲ್, ಸಾಲ್, ನೂಲ್, ಕೂರ್, ಕನರ್, ಕೊನರ್, ತಳಿರ್, ಚಿಗುರ್, ಬೆಮರ್, ಆಱ್, ಉಱ್, ಕೀಱ್, ಚಳಿ, ಮೊಳೆ, ಆೞ್, ಅೞ್, ಮೞ್, ಕುೞ್, ಬಾ, ಕೀ, ಪೂ, ಬೀ, ಓ, ಕೂನ್, ಸೀನ್, ಪೇನ್, ಆನ್, ನೋನ್ ಎಂಬಿವು ಕವಲಾದ್ಯಾಕೃತಿಗಣಂ. ಇವಱಲ್ಲಿ ಅೞ್, ಮೞ್, ಬೆಮರ್, ಬೆಳರ್, ಕೀಱ್ ಎಂಬಿವಾದಿಯಾದುವರ್ಕೆ ವಿಕಲ್ಪದಿಂ ತಕಾರಮಪ್ಪುದಾಗಿ, ಇವು ಪ್ರಯೋಗಗಮ್ಯಂಗಳೆಂದಱಿವುದು.

ವೃತ್ತಿ.—ಧಾತುವಿನ ಕಡೆಯ ಕ ಚ ಟ ತ ಪಂಗಳ ರೂಪಮಂ ಪರದ ದಕಾರಂ ಪಡೆಗುಂ; ಕ ಚ ಟ ತ ಪಂಗಳಲ್ಲದ ಪೆಱವಕ್ಕರಂಗಳ್ ಧಾತುವಿನ ಕಡೆಯೊಳಿರೆ, ಪರದ ದಕಾರಕ್ಕೆ ಡಕಾರಮುಂ ತಕಾರಮಕಾರಮುಮಕ್ಕುಂ.

ಪ್ರಯೋಗಂ.—ಕಕಾರಕ್ಕೆ—ಒಕ್ಕು, ಒಕ್ಕರ್; ಮಿಕ್ಕಂ, ಮಿಕ್ಕರ್; ಪೊಕ್ಕಂ, ಪೊಕ್ಕರ್; ನಕ್ಕಂ, ನಕ್ಕರ್; ತಕ್ಕರಂ.

"ಮಿಕ್ಕರನೇಕೆ ಮನ್ನಿಸುವ- |
ರಕ್ಕರವೋದದ ಕಲ್ಲಪಾಪಿಗಳ್ ||
ರಕ್ಕಸಿಯ ಮಾಡಮದಱೊಳ್ |
ಪೊಕ್ಕವರುೞಿದಪರೆ ಸರಸ್ವತಿಮಣಿಹಾರಾ" || 625 ||

ಚಕಾರಕ್ಕೆ—ಎಚ್ಚಂ, ಎಚ್ಚರ್; ಬೆಚ್ಚಂ, ಬೆಚ್ಚರ್; ಪಚ್ಚಂ, ಪಚ್ಚರ್.

". . . . . .ಮಣಿ- |
ಯದೆ ಕುಣಿದೀ ಧೀರನದಿರೆ ಕೂಕಿಱಿದೆಚ್ಚರ್" || 626 ||

" . . . . . ಮಿಱ್ತುಗೆ ಮಾರಿಗೆ |
ಪಚ್ಚರ್ ದುಟ್ಟೋಡೆ ಗಾಯದಿಂ ಹಯಬಲಮಂ" || 627 ||

ಟಕಾರಕ್ಕೆ—ತೊಟ್ಟಂ, ತೊಟ್ಟರ್; ಕೊಟ್ಟಂ, ಕೊಟ್ಟರ್; ಬಿಟ್ಟಂ, ಬಿಟ್ಟರ್; ನಟ್ಟಂ, ನಟ್ಟರ್.

"ಬೆಕ್ಕಸಂಬಟ್ಟು ಬಾಯಂ ಬಿಟ್ಟರ್ ಭೀಷ್ಮರ್" || 628 ||

"ಕೊಟ್ಟಂ ಸಮ್ಮೋಹನಮನಭಯಮಂ ಪಾಂಡವಂ" || 629 ||

ತಕಾರಕ್ಕೆ— ಪೆತ್ತಂ, ಪೆತ್ತರ್; ಕೆತ್ತಂ, ಕೆತ್ತರ್; ತೆಟ್ಟಂ, ತೆಟ್ಟರ್; ಗೆತ್ತಂ, ಗೆತ್ತರ್; ಪೊತ್ತಂ, ಪೊತ್ತರ್.

"ಮುಗಿಲಂ ಮಾಱಾನೆಗೆತ್ತರ್" || 630 ||

ಪಕಾರಕ್ಕೆ— ತಪ್ಪಂ, ತಪ್ಪರ್.

"ತಪ್ಪಂ ತನ್ನೊಳ್ ಪಳಂಚಿ ಕಿಡಿಗುಟ್ಟಿ ತಪ್ಪುವಂಬುಗಳರವಂ" || 631 ||

ಡಕಾರಕ್ಕೆ— ಉಣ್ಡಂ; ಕಣ್ಡಂ; ಕೊಣ್ಡಂ.

". . . . . ಮರದ ಹರಿಯಣದೊಳುಂಡಂ" || 632 ||

"ಮರದೊಳ್ ಸಮೆದಂಕವಣೆಯನೇಱಿದಂ" || 633 ||

". . . . . ಕುರು |
ಪ್ರಭು ಕಂಡಂ ಶರಜಾಲ ಜರ್ಝರಿತ ಗಾತ್ರತ್ರಾಣನಂ ದ್ರೋಣನಂ" || 634 ||

"ಭುವನತ್ರಿಣೇತ್ರರುಚಿಯಂ ಕೈಕೊಂಡನಾ ಪಾಂಡವಂ" || 635 ||

ದಕಾರಕ್ಕಾದ ತಕಾರಕ್ಕೆ—ಸೋಲ್ತಂ; ಪೋಲ್ತಂ; ನಿಲ್ತಂ; ಕಿೞ್ತಂ; ಉೞ್ತಂ.

". . . . ಮಾಲವದೇಶಮಂ ಕಿಡಿಸಿ ತದ್ಧಾರಾಪುರಸ್ತ್ರೀಯರಂ |
ತೊೞ್ತುಮಾಡಿದ. . . . . . ." || 636 ||

"ಕಾದದಿರ್ದಂದು ಸೋಲ್ತಂ ಕೌಂತೇಯಂ ಕೌರವಂಗೆಂದುಲಿಗುಂ" || 637 ||

"ಮಱಿಸುಂದಿದ ಪುಲಿಯನಾಗಳಿನಿಸಂ ಪೋಲ್ತಂ" || 638 ||

"ನೋೞ್ಪಿಕೊಂಡಂತೆ ಬೆನ್ನೊಳ್ ನಿಲ್ತಂ ಗಾಂಡೀವಿ" || 639 ||

ಅಕಾರಕ್ಕೆ (ಬಿಂದು ಸೂಱ್ ದಕಾರಕ್ಕೆ ಟಕಾರಂ ಎಂದು ಪಾಠಾಂತರಂ)— ಬೆರಂಟಂ.*

"ಬೆರಂಟುವು ಪೊಕ್ಕುಟಿನುಗುರಿಸಿದುವು ತುಱಿಂಬ" || 640 ||

ಮೇಣೆಂಬುದಱಿಂ ಕೆಲವಱೊಳಿರ್ದಂತೆ ದಕಾರಮೆ— ಪೂಣ್ದಂ; ಮಾಣ್ದಂ; ಜೋಲ್ದಂ; ಎೞ್ದಂ; ನೇೞ್ದಂ; ಅೞ್ದಂ; (ಆೞ್ದಂ); ಬಿೞ್ದಂ; ಆರ್ದಂ; ನೇರ್ದಂ.

"ಬಾದುಂಟೆಂದು ಪತ್ತನೆಯ ತಲೆಯುಮಂ ನೇರ್ದಾಗಳ್" || 641 ||

ಸೂತ್ರಂ.[1] ‖ ೨೪೧ ‖

Further, the roots ಪೋಗು and ಆಗು lose their ಗ before ದ and ದಪ; and also before ಯ್ತು, their common substitute in the Imperfect for ಉದು (or ಇತು).

ನೆಗೞ್ಗುಂ ಲೋಪಂ ಪೋಗಾ- |
ಗುಗಳ ಗಕಾರಕ್ಕೆ ದದಪವಿಱೆಯುಂ ದತ್ವ- ‖
ಕ್ಕೊಗೆದಸ್ವರಯ್ತ್ವಂ ಪ- |
ತ್ತುಗೆಗೊಂಡುದುಗಾದ ತುತ್ವದೊಳ್ ನೆಲಸಿಱೆಯುಂ. ‖ ೨೫೩ ‖

ಪದಚ್ಛೇದಂ. — ನೆಗೞ್ಗುಂ ಲೋಪಂ ಪೋಗು ಆಗುಗಳ ಗಕಾರಕ್ಕೆ, ದದಪಂ ಇಱೆಯುಂ, ದತ್ವಕ್ಕೆ ಒಗೆದು ಅಸ್ವರಯತ್ವಂ ಪತ್ತುಗೆಗೊಂಡು ಉದುಗೆ ಆದ ತುತ್ವದೊಳ್ ನೆಲಸಿ ಇಱೆಯುಂ.

ಅನ್ವಯಂ. — ದದಪಂ ಇಱೆಯುಂ— ದತ್ವಕ್ಕೆ ಅಸ್ವರಯತ್ವಂ ಒಗೆದು, ಉದುಗೆ ಆದ ತುತ್ವದೊಳ್ ಪತ್ತುಗೆಗೊಂಡು, ನೆಲಸಿಱೆಯುಂ—ಪೋಗಾಗುಗಳ ಗಕಾರಕ್ಕೆ ಲೋಪಂ ನೆಗೞ್ಗುಂ.

ಟೀಕು. — ದದಪಂ = ದಕಾರ ದಪಕಾರಂ; ಇಱೆಯುಂ = ಪರದಲ್ಲಿ ಇರ್ದೊಡೆಯುಂ; ದತ್ವಕ್ಕೆ = ಭೂತಕಾಲದ ದಕಾರಕ್ಕೆ; ಅಸ್ವರಯತ್ವಂ = ವ್ಯಂಜನದ ಯಕಾರಂ; ಒಗೆದು = ಹುಟ್ಟಿ; ಉದುಗೆ = ನಪುಂಸಕಲಿಂಗದ ಉದು ಎಂಬುದರ್ಕ್ಕೆ; ಆದ ತುತ್ವದೊಳ್ = ಆದೇಶವಾದ ತುಕಾರದಲ್ಲಿ; ಪತ್ತುಗೆಗೊಂಡು = ಪೊರ್ದುಗೆಯಾಗಿ; ನೆಲಸಿಱೆಯುಂ = ನೆಲೆಗೊಂಡಿರ್ದೊಡೆಯುಂ; ಪೋಗಾಗುಗಳ = ಪೋಗು ಆಗು ಎಂಬ ಧಾತುಗಳ; ಗಕಾರಕ್ಕೆ = ಗತ್ವಕ್ಕೆ; ಲೋಪಂ = ಅದರ್ಶನಂ; ನೆಗೞ್ಗುಂ = ಬರ್ಪುದು.

ವೃತ್ತಿ. — ದ ದಪಂಗಳ್ಪರಮಾಗೆಯುಂ, ಪೋಗು ಆಗು ಎಂಬಿವಱ ಗಕಾರಕ್ಕೆ ಲೋಪಂ; ಭೂತವತಿಯ ದಕಾರಕ್ಕೆ ವ್ಯಂಜನಯಕಾರಂ ಬಂದು, ಉದುಗಾದ ತುಕಾರದೊಳ್ಪೊರ್ದೆಯುಂ, ಗಕಾರಕ್ಕೆ ಲೋಪಮಕ್ಕುಂ.

ಪ್ರಯೋಗಂ. — ಪೋದಂ, ಪೋದಪಂ; ಆದಂ, ಆದಪಂ; ಪೋದುದು, ಆದುದು; ಪೋಯ್ತು, ಆಯ್ತು.

1) ಆಪೋಭ್ಯಾಂ ದಸ್ಯ ತೇ ಯಃ ‖ ಭಾ. ಭೂ. 231. ‖
(ಆ, ಪೋ, ಎಂಬ ಧಾತುಗಳತ್ತಣಿಂದ ಪರವಾದ ದಕಾರಕ್ಕೆ ತಕಾರವು ಪರವಾಗುತ್ತಿರೆ ಯಕಾರವಾಗುವುದು.)

"ಪೊಮ್ಮಱಿಪೋಲ್ ಪೊಳೆದು ಪಾಱಿಪೋದಂ ಶ್ವೇತಂ" ‖ 642 ‖
". . . . ಕೊಂಬಿಱಿಪಿದ ಮರದಿಂದಗ್ಗಳಂ ತಿಣ್ಣಮಾದಂ" ‖ 643 ‖
"ಕೆಂದಳಿರ್ಮಿಸುಪ ಕೆಂಗಱಿಯಾದುದು ಪೂದೊಡಂಬೆ ಪಿಳ್ಕಾದುದು" ‖ 644 ‖
"ಅಬ್ಜಿನಿಪೋದಂದು ನುಣ್ದನಿ ನವಿಲ್ಗೆ ಸರದದ ಪುಗಿಲೊಳ್" ‖ 645 ‖
"ಸೈನ್ಯಂ ಮಹಾರ್ಣವದಂತಾಯ್ತುದ್ಬುದ್ಧಿಯೆ ಘೂರ್ಣಿಸುವಂತಾಯ್ತುರಮನೆಯೊಳಗೆ" ‖ 646 ‖
"ಬಗೆ ಪೋಯ್ತಾಗಳೆಲೇ ಇದಲ್ತೆ ತುಹಿನಕ್ಷೋಣೀಧ್ರದುತ್ತುಂಗ ಸಾನುಗಳೊಳ್. . . . ." ‖ 647 ‖
". . . ಪುಂಸ್ಕೋಕಿಲ ಧ್ವನಿತಾನಿರೆಲೆಪೋಯ್ತು" ‖ 648 ‖
"ಪೋಗಲ್ಕೀಯದಡಸಿ ತಾಪಮೆಂದುಂ ಜೋದರೆಲ್ಲಂ" ‖ 649 ‖
"ಓಪಂಗೆ ಬರ್ಪಂಗನಾಕುಳಂ" ‖ 650 ‖

ಸೂತ್ರಂ. ‖ ೨೪೩ ‖

Besides, before the affix ಕೆ of the Imperative and before ಕುಂ they receive the forms ಪೋ, ಅಕ್.

ಪರದೊಳ್ವಿಧಿಯ ಕೆಕಾರಂ |
ಬರೆ ಕುಂ ಬರೆ ಪೋಗೆನಿಪ್ಪ ಧಾತುವಿನಂತ್ಯಾ- ‖
ಕ್ಷರಲೋಪಂ ಚರಮಂ ವಿ- |
ಸ್ವರಮಾದ್ಯಂ ಹ್ರಸ್ವಮಕ್ಕುಮಾಗೆಂಬುದಱೊಳ್.
‖ ೩೯೪ ‖

ಪದಚ್ಛೇದಂ.— ಪರದೊಳ್ ವಿಧಿಯ ಕೆಕಾರಂ ಬರೆ, ಕುಂ ಬರೆ, ಪೋಗು ಎನಿಪ್ಪ ಧಾತುವಿನ ಅಂತ್ಯಾಕ್ಷರ ಲೋಪಂ; ಚರಮಂ ವಿಸ್ವರಂ, ಆದ್ಯಂ ಹ್ರಸ್ವಂ ಆಕ್ಕುಂ ಆಗು ಎಂಬುದಱೊಳ್.

ಅನ್ವಯಂ.— ಆಗು ಎಂಬುದಱೊಳ್ ಚರಮಂ ವಿಸ್ವರಂ, ಆದ್ಯಂ ಹ್ರಸ್ವಂ ಆಕ್ಕುಂ ಎಂಬುದನ್ವಯಂ.

ಟೀಕು.— ಪರದೊಳ್ = ಪರದಲ್ಲಿ; ವಿಧಿಯ = ವಿಧ್ಯರ್ಥದ; ಕೆಕಾರಂ = ಕೆಕಾರಂ; ಬರೆ = ಬರೆ; ಕುಂ = ಕುಂಕಾರಂ; ಬರೆ = ಬರೆ; ಪೋಗೆನಿಪ್ಪ ಧಾತುವಿನ = ಪೋಗು ಎಂಬ ಧಾತುವಿನ; ಅಂತ್ಯಾಕ್ಷರ ಲೋಪಂ = ಕಡೆಯಕ್ಷರದ ಲೋಪಂ ಆಗುವುದು; ಆಗೆಂಬುದಱೊಳ್ =

ಆಗು ಎಂಬ ಧಾತುವಿನಲ್ಲಿ; ಚರಮಂ = ಅಂತ್ಯಂ; ವಿಸ್ವರಂ = ವ್ಯಂಜನದ ಕಕಾರಂ; ಆದ್ಯಂ = ಮೊದಲಕ್ಷರಂ; ಹ್ರಸ್ವಂ = ಹ್ರಸ್ವಂ; ಅಕ್ಕಂ = ಆಗುವುದು.

ವೃತ್ತಿ.— ವಿಧಿಯ ಕೆಕಾರಮುಂ ಕುಂ ಎಂಬುದುಂ ಪರಮಾಗೆ, ಪೋಗೆಂಬ ಗಕಾರಕ್ಕೆ ಲೋಪಂ; ಆಗೆಂಬುದಱ ಕಡೆಯ ಸ್ವರಕ್ಕೆ ಲೋಪಮುಂ ಮೊದಲ್ಗೆ ಹ್ರಸ್ವಮುಮಕ್ಕುಂ.

ಪ್ರಯೋಗಂ.— ಪೋಕೆ, ಪೋಕುಂ; ಅಕ್ಕೆ, ಅಕ್ಕುಂ.

"ಪೋಕೆ ಬರ್ಕೆ ಮುಳಿಸಿಲ್ಲೆ ಮಗಾತನೊಳಾವ ಪಾಂಗಿನಿಂ" || 651 ||

"ಪೋಱಮಾಱದೆ ಸಯ್ತೆ ಪೋಕುಮಾ ಪರಸೈನ್ಯಂ" || 652 ||

"ವೇದದೊಳೊಂದಿದಾಯು ನಿನಗಕ್ಕೆ ಬೇಗಂ ಕಲಿಕಾಲಸೂದನಾ" || 653 ||

"ಪ್ರಾಯಂ ಕೂಸಾದೊಡಭಿ- |
ಪ್ರಾಯಂ ಕೂಸಕ್ಕುಮೆ. . . . ." || 654 ||

ಸೂತ್ರಂ. || ೨೪೩ ||

The root ಉಳ್ and the Suffix ಉದು become ಉಂಟು.— For the Negative the Suffixes ಉದು and ಉವು become ಅದು and ಅವು.

ಅವತರಿಸಿರ್ಕುಮದುಳ್ಧಾ- |
ತುವಿನ ಳಕಾರಕ್ಕೆ ಣತ್ವಮುದುಗೆ ಟುಕಾರಂ ||
ಪ್ರವಿಲೋಮಕ್ರಿಯೆಗದುವೆಂ- |
ದವೆಂದು ಬಂದಿರ್ಕುಮುದುಗಮುವುಗಂ ಪ್ರಚುರಂ. || ೨೪೩ ||

ಪದಚ್ಛೇದಂ.— ಅವತರಿಸಿ ಇರ್ಕುಂ ಅದು ಉಳ್‌ಧಾತುವಿನ ಳಕಾರಕ್ಕೆ ಣತ್ವಂ, ಉದುಗೆ ಟುಕಾರಂ.— ಪ್ರವಿಲೋಮಕ್ರಿಯೆಗೆ ಅದು ಎಂದು ಅವು ಎಂದು ಬಂದು ಇರ್ಕುಂ ಉದುಗಂ ಉವುಗಂ ಪ್ರಚುರಂ.

ಅನ್ವಯಂ.— ಉಳ್‌ಧಾತುವಿನ ಳಕಾರಕ್ಕೆ ಣತ್ವಂ ಅದು, ಉದುಗೆ ಟುಕಾರಂ ಅವತರಿಸಿ ಇರ್ಕುಂ.— ಪ್ರವಿಲೋಮಕ್ರಿಯೆಗೆ ಉದುಗಂ ಉವುಗಂ ಅದು ಎಂದು ಅವು ಎಂದು ಪ್ರಚುರಂ ಬಂದು ಇರ್ಕುಂ.

ಟೀಕು.— ಉಳ್‌ಧಾತುವಿನ = "ಉಳ್ ಸತ್ತಾಯಾಂ" ಎಂಬ ಸತ್ತಾರ್ಥದ ಧಾತುವಿನ; ಳಕಾರಕ್ಕೆ = ಳತ್ವಕ್ಕೆ; ಣತ್ವಂ = ಣಕಾರಂ; ಅದು = ಅದು; ಉದುಗೆ = ನಪುಂಸಕ

ಲಿಂಗದ ಉದು ಎಂಬುದರ್ಕೆ; ಟುಕಾರಂ = ಟುತ್ವಂ; ಅವತರಿಸಿರ್ಕುಂ = ಹುಟ್ಟಿರ್ಪುದು; ಪ್ರವಿಲೋಮಕ್ರಿಯೆಗೆ = ಪ್ರತಿಷೇಧಕ್ರಿಯೆಗೆ; ಉದುಗಂ = ನಪುಂಸಕಲಿಂಗದ ಉದುವೆಂಬುದರ್ಕಂ; ಉವುಗಂ = ಉವು ಎಂಬುದರ್ಕಂ; ಅದುವೆಂದು = ಅದು ಎಂದು; ಅವೆಂದು = ಅವು ಎಂದು; ಪ್ರಚುರಂ = ಪ್ರಸಿದ್ಧವಾಗಿ; ಬಂದಿರ್ಕುಂ = ಬಂದಿರ್ಪ್ಪವು.

ವೃತ್ತಿ.— ಉಳ್ ಎಂಬ ಧಾತುವಿನ ಳಕಾರಕ್ಕೆ ಣತ್ವಮುಂ ಅಲ್ಲಿ ಪರದುದುವಿಂಗೆ ಟುಕಾರಾದೇಶಮುಮಕ್ಕುಂ.— ನಪುಂಸಕಲಿಂಗದ ಉದುಗಮುವುಗಂ ಪ್ರತಿಷೇಧಕ್ರಿಯೆಯೊಳದುಮೆಂದುಮವುಮೆಂದುಂ ಆದೇಶಮಕ್ಕುಂ.

ಪ್ರಯೋಗಂ.— ಉಳ್ಳುದೆಂಬುದರ್ಕೆ— ಉಣ್ಟು.

"ಉಂಟು ಭುಜಬಲಂ ಪಿರಿದು ಚಾಗದಮ್ಮೈ" || 655 ||

". . . .ಸಿರಿಯುಂಟು ಮಾಡಿದಂ ಕುರುಬಲದೊಳ್" || 656 ||

ಪ್ರತಿಷೇಧಕ್ರಿಯೆಗೆ—

"ಉಱಿಯದು ವಿಭವಂ ಜವ್ವನ- |
ಮಿಱಿಯದು ನವವಿಧರತೋಪಚಾರದಿನೆಂದುಂ ||
ಪಱಿಸದು ಬೇಟಂ. . . . ." || 657 ||

"ವಿಪುಳಕಳಾಪ ಕೋಪ ಶಿಖಿ ಪುಟ್ಟದು" || 658 ||

ಸಲ್ಲವು; ಗೆಲ್ಲವು; ನಿಲ್ಲವು;

"ನೆಱಿಯವು ಗಿರಿಯುಂ ಕರಿಯುಂ" || 659 ||

"ನಿಲ್ಲವು ಪಪಿಮುಖದಕೋಟಿಮಾತನ ಬಾೞ್ಗಿಂ." || 660 ||

ತುಱುಗಳ ಮೆಯ್ಗಳ ರೋಮಂ ನೆಱಿಯವು ದಲ್" || 661 ||

ಸೂತ್ರಂ || ೨೪೪ ||

ಣತ್ವಂ ಕೊಳ್‌ಧಾತ್ವಂತ್ಯ- |
ಕ್ಕುತ್ವಕ್ಕುಳ್‌ಧಾತುಪೂರ್ವದೊಳ್ ನೆಗೞ್ಗುಂ ಪ್ರ- ||
ಸ್ತೋತ್ವಂ ಪುರುಷತ್ರಯದೊಳ್ |
ದತ್ವನಿಷೇಧಂ ಬಹುತ್ವದುವುಗವುಮಕ್ಕುಂ. || ೨೪೫ ||

Before ದ and ದಪ the theme ಕೊಳ್ becomes ಕೊಣ್.— Excepting ಉಂಟು the root ಉಳ್ becomes ಒಳ್, and takes the personal affixes without inserting ದ or ದಪ. Its Suffix for the Neuter Plural, though ಅವು, is affirmative. For ಉಂಟು, in the Negative, ಇಲ್ಲ is used.

ಪದಚ್ಛೇದಂ.— ಣತ್ವಂ ಕೊಳ್ಧಾತ್ವಂತ್ಯಕ್ಕೆ. ಉತ್ವಕ್ಕೆ ಉಳ್ಧಾತುಪೂರ್ವದೊಳ್ ನೆಗಱ್ಗುಂ ಹ್ರಸ್ವೋತ್ವಂ; ಪುರುಷತ್ರಯದೊಳ್ ದತ್ವನಿಷೇಧಂ; ಬಹುತ್ವದ ಉವುಗೆ ಅವುಂ ಅಕ್ಕುಂ.

ಅನ್ವಯಂ.— ಕೊಳ್ಧಾತ್ವಂತ್ಯಕ್ಕೆ ಣತ್ವಂ ನೆಗಱ್ಗುಂ. ಉಳ್ಧಾತುಪೂರ್ವದೊಳ್ ಉತ್ವಕ್ಕೆ ಹ್ರಸ್ವೋತ್ವಂ; ಪುರುಷತ್ರಯದೊಳ್ ದತ್ವನಿಷೇಧಂ; ಬಹುತ್ವದ ಉವುಗೆ ಅವುಂ ಅಕ್ಕುಂ.

ಟೀಕು.— ದ ದಪಂಗಳ್ ಪರಮಾದ ಎಂಬುದನುವರ್ತನೆ–ಕೊಳ್ಧಾತ್ವಂತ್ಯಕ್ಕೆ = ದ ದಪಂಗಳ್ ಪರಮಾದ ಕೊಳ್ಳೆಂಬ ಧಾತುವಿನಂತ್ಯಕ್ಕೆ; ಣತ್ವಂ = ಣಕಾರಾದೇಶಂ; ನೆಗಱ್ಗುಂ = ಪ್ರಸಿದ್ಧಿವಡೆವುದು; ಉಳ್ಧಾತುಪೂರ್ವದೊಳ್ = ಸತ್ತಾರ್ಥದಲ್ಲಿ ಉಳ್ ಎಂಬ ಧಾತುವಿನ ಮೊದಲಲ್ಲಿ; ಉತ್ವಕ್ಕೆ = ಉಕಾರಕ್ಕೆ; ಹ್ರಸ್ವೋತ್ವಂ = ಹ್ರಸ್ವದ ಒಕಾರಂ ಪ್ರಸಿದ್ಧಿವಡೆವುದು; ಪುರುಷತ್ರಯದೊಳ್ = ಪುರುಷತ್ರಯದಲ್ಲಿ; ದತ್ವನಿಷೇಧಂ = ಭೂತಕಾಲದ ದಕಾರಂ ಬಾರದು. ಬಹುತ್ವದ = ನಪುಂಸಕಲಿಂಗದ ಬಹುವಚನದ; ಉವುಗೆ = ಉವು ಎಂಬುದರ್ಕೆ; ಅವುಂ = ಅವು ಎಂಬುದುಂ; ಅಕ್ಕುಂ = ಆಗುವುದು.

ವಿಚಾರಂ. (not found in Mdb. Ms.) — ದತ್ವನಿಷೇಧವೆಂದು, ಉಪಲಕ್ಷಣವಾಗಿ ಉಳ್ಧಾತುಗೆ ದ ದಪ ವಕಾರಂಗಳ್ ಮೂಱುಂ ನಿಷೇಧವೆಂಬುದರ್ಥಂ; ಭೂತಕಾಲವಾಗಿಯೆ ಸಲ್ವುದು.

ವೃತ್ತಿ.— ದಕಾರಂ ಪರಮಾದ ಕೊಳ್ಧಾತುವಿನ ಳಕಾರಕ್ಕೆ ಣತ್ವಮಕ್ಕುಂ; ಪುರುಷತ್ರಯದೊಳ್ ಉಳ್ಧಾತುವಿನ ಮೊದಲುಕಾರಕ್ಕೆ ಹ್ರಸ್ವೋತ್ವಮಕ್ಕುಂ; ನಪುಂಸಕಲಿಂಗದ ಬಹುವಚನದುವುವಿಂಗೆ ಅವು ಎಂದಕ್ಕುಂ.

ಪ್ರಯೋಗಂ.— ಕೊಳ್ಧಾತುಗೆ—ಕೊಣ್ಡಂ, ಕೊಣ್ಡರ್.

"ಭುವನತ್ರಿಣೇತ್ರರುಚಿಯಂ ಕೈಕೊಂಡನಾ ಪಾಂಡವಂ" || 662 ||

"ತಮತಮಗೆ ಭಯಂಗೊಂಡರಾಶಂಕೆಗೊಂಡರ್" || 663 ||

ಉಳ್ಧಾತುಗೆ—ಒಳಂ, ಒಳರ್; ಒಳಯ್, ಒಳಿರ್; ಒಳೆನ್, ಒಳೆವು.

"ಪೇಱಿನಿತರ್ಕಮೊಳಂ ಮುರಾಂತಕಂ" || 664 ||

"ಒಳರನ್ನೆವರಂ ಮಾರ್ಬಲದೊಳಗಿಱಿಯಲ್ ಮಱುಗುವತಿಭಟರ್" || 665 ||

ನಪುಂಸಕಕ್ಕೆ—ಒಳವು.

"ನೀನುಳ್ಳೊಡುಂಟು ರಾಜ್ಯಂ |
ನೀನುಳ್ಳೊಡೆ ಪಟ್ಟಮುಂಟು ಪೀಱಿಗೆಯುಂಟು ||

ನೀನುಳ್ಳೊಡುಂಟು ಬೆಳ್ಗೊಡೆ |
ನೀನಿಲ್ಲದಿವೆಲ್ಲಮೊಳವೆ ಭಾನುತನೂಜಾ" || 666 ||
"ನುಂಗುವವುವುಮೊಳವುದಧಿಯೊಳೆ ಮಹಾಮತ್ಸ್ಯಂಗಳ್" || 667 ||

ಉಂಟೆಂಬುದರ್ಕೆ ಎಲ್ಲವಿದಿಂತೆ ಪ್ರತಿಷೇಧವಾಗಿಲ್ಲೆಂದಾಯಿತು.

"ನೀಲಗ್ರೀವರುಮಾರ್ತರಿಲ್ಲ ಗೆಲಲಿನ್ನಾರಾರ್ಪರೆಂದಂ ಕೃಪಂ"
|| 668 ||

ಸೂತ್ರಂ. || ೨೪೫ ||

ಇನೆಗಮುದುಮನ್ನಮನ್ನೆಗ- |
ಮಿನಮಲೊಡಂ ಸೊನ್ನೆವೆರಸು ಸತ್ಯರ್ಥದೆಕಾ- ||
ರನಿಜಸ್ಥಾನದೊಳಪ್ಪುವಿ- |
ಅನುಕೂಲಂ ಮತ್ತೆಕಾರದಾದಿಯೊಳಲೊಡಂ || ೨೫೭ ||

A form of the verb expressing the sense of the Locative (ಸತಿಸಪ್ತಮಿ) is formed by the suffix ಎ, instead of which also the Suffixes ಇನೆಗಂ, ಉದುಂ, ಅನ್ನಂ, ಅನ್ನೆಗಂ, ಇನಂ, ಅಲೊಡಂ and ಅಲೊಡಂ + ಎ (ಅಲೊಡನೆ) are used.

ಪದಚ್ಛೇದಂ.— ಇನೆಗಂ ಉದುಂ ಅನ್ನಂ ಅನ್ನೆಗಂ ಇನಂ ಅಲೊಡಂ ಸೊನ್ನೆವೆರಸು; ಸತ್ಯರ್ಥದ ಎಕಾರನಿಜಸ್ಥಾನದೊಳ್ ಅಪ್ಪುವು ಇವು; ಅನುಕೂಲಂ ಮತ್ತೆ ಎಕಾರದ ಆದಿಯೊಳ್ ಅಲೊಡಂ.

ಅನ್ವಯಂ.— ಸತ್ಯರ್ಥದ ಎಕಾರನಿಜಸ್ಥಾನದೊಳ್ ಇನೆಗಂ ಉದುಂ ಅನ್ನಂ ಅನ್ನೆಗಂ ಇನಂ ಅಲೊಡಂ ಇವು ಸೊನ್ನೆವೆರಸು ಅಪ್ಪುವು; ಮತ್ತೆ ಎಕಾರದ ಆದಿಯೊಳ್ ಅಲೊಡಂ ಅನುಕೂಲಂ.

ಟೀಕು.— ಸತ್ಯರ್ಥದ = ಸತಿಸಪ್ತಮಿಯರ್ಥದ; ಎಕಾರನಿಜಸ್ಥಾನದೊಳ್ = ಎಕಾರದ ನಿಜಸ್ಥಾನದಲ್ಲಿ; ಇನೆಗಂ = ಇನೆಗಂ ಎಂದು; ಉದುಂ = ಉದುಂ ಎಂದು; ಅನ್ನಂ = ಅನ್ನಂ ಎಂದು; ಅನ್ನೆಗಂ = ಅನ್ನೆಗಂ ಎಂದು; ಇನಂ = ಇನಂ ಎಂದು; ಅಲೊಡಂ = ಅಲೊಡಂ ಎಂದು; ಇವು = ಈ ರೂಪಂಗಳ್; ಸೊನ್ನೆವೆರಸು = ಸೊನ್ನೆಗೂಡಿ; ಅಪ್ಪುವು = ಆದೇಶವಾಗುವುವು; ಮತ್ತೆ = ಬಳಿಕ; ಎಕಾರದ = ಸತ್ಯರ್ಥದೆಕಾರದ; ಆದಿಯೊಳ್ = ಮೊದಲಲ್ಲಿ; ಅಲೊಡಂ = ಅಲೊಡಂ ಎಂದು; ಅನುಕೂಲಂ = ಹಿತವಪ್ಪುದು.

ವೃತ್ತಿ.— ಇನೆಗಂ ಉದುಂ ಅನ್ನಂ ಅನ್ನೆಗಂ ಇನಂ ಅಲೊಡಂ ಎಂಬಿವು ಸೊನ್ನೆವೆರಸಲ್ಲದಿರವು; ಇವು ಸತಿಸಪ್ತಮಿಯ ಎಕಾರಕ್ಕಾದೇಶಮಾಗಿ

ಬಂದುವು; ಎಕಾರದ ಪೆಱಗೆ ಒರ್ಮೆ ಅಲೊಡಮೆಂಬುದೊಂದಾಗಮಮಾಗಿ ಯುಂ ಬರ್ಕುಂ.

ಪ್ರಯೋಗಂ.—ಸತಿಸಪ್ತಮಿಯ ಎಕಾರಕ್ಕೆ—ನುಡಿಯೆ; ಪೊರ್ದೆ; ನೆಲನ ದಿರೆ; ಮನಂಗೊರಗೆ.

"ನೋಟಕರ್ ಕಣ್ಣಲಸೆ . . . ." || 669 ||

ಎಕಾರದ ಆದೇಶಂಗಳೊಳ್ ಇನೆಗಮೆಂಬುದರ್ಕೆ—

"ಕಾಮಕರಂ ಕರಮಡಂಗಿ ನುರ್ಗಪ್ಪಿನೆಗಂ ಕಾಮದನಡಂಗೆವೊಯ್ದಂ" || 670 ||

ಉದುಮೆಂಬುದರ್ಕೆ—'ಒಟುಂ'

"ಬರವೇೞೆಂಬುದುಮಂಜನಾಚಲದವೊಲ್ ಕಣ್ಗೊಪ್ಪಿ ಬರ್ಪಂಬುಜೋದರನಂ . . . ." || 671 ||

ಅನ್ನಮೆಂಬುದರ್ಕೆ—

"ಉದ್ದವಿರ್ದಂ ನೆಗೆಪನ್ನಂ ಪೊಯ್ಯಲೆಂದವ್ವಳಿಪುದು" || 672 ||

ಅನ್ನೆಗಂ ಇನಮೆಂಬುದರ್ಕೆ—

"ಒಲೆಯೊಡನೆ ಮುತ್ತುಂಗಾಲೊಳ್ ನರೆಬರ್ಪನ್ನೆಗಮಿರು" || 673 ||

". . . . . ಗಂಗೆಯ |
ಮಡುಗಳನಡಹಡಿಸಿ ಪುಗುವಿನಂ ಭಯವಶದಿಂ" || 674 ||

ಒಡಮೆಂಬುದರ್ಕೆ—

"ಕುರುಕುಲಾಧಿಪಂ ನುಡಿಯಲೊಡಂ" || 675 ||

ಎಕಾರದ ಪೆಱಗೆ ಅಲೊಡಮಾಗಮಕ್ಕೆ—[ನಾಗಕು]

"ಬರಲೊಡನೆ ಕೊಟ್ಟಂ" ಒರು+ಎ, ಒಡನೆ. || 676 ||

ಸೂತ್ರಂ. || ೨೪೬ ||

Of the above Suffixes ಅನ್ನೆಗಂ, ಅನ್ನಂ, ಇನೆಗಂ, ಇನಂ are used for the Present and Future tenses; ಉದುಂ, ಅಲೊಡಂ for the Past.

ನೆಗೞ್ಗೆಂ ಸಂಪ್ರತಿಗಂ ಭಾ- |
ವಿಗಮನ್ನೆಗಮನ್ನಮಿನೆಗಮಿನಮೆಂಬಿವು ಸೂ- ||
ರಿಗಳಿಂದುದುಮಲೊಡಂಗಳ್ |
ನೆಗೞ್ಗೆಂ ಭೂತಾರ್ಥದಲ್ಲಿ ಸತಿಸಪ್ತಮಿಯೊಳ್ || ೨೪೬ ||

ಪದಚ್ಛೇದಂ.— ನೆಗಱ್ಗುಂ ಸಂಪ್ರತಿಗಂ ಭಾವಿಗಂ ಅನ್ನೆಗಂ ಅನ್ನಂ ಇನೆಗಂ ಇನಂ ಎಂಬ ಇವು ಸೂರಿಗಳಿಂದೆ, ಉದುಂ ಅಲೊಡಂಗಳ್ ನೆಗಱ್ಗುಂ ಭೂತಾರ್ಥದಲ್ಲಿ ಸತಿಸಪ್ತಮಿಯೊಳ್.

ಅನ್ವಯಂ.— ಸೂರಿಗಳಿಂದೆ ಸತಿಸಪ್ತಮಿಯೊಳ್ ಸಂಪ್ರತಿಗಂ ಭಾವಿಗಂ ಅನ್ನೆಗಂ ಅನ್ನಂ ಇನೆಗಂ ಇನಂ ಎಂಬಿವು ನೆಗಱ್ಗುಂ, ಭೂತಾರ್ಥದಲ್ಲಿ ಉದುಂ ಅಲೊಡಂಗಳ್ ನೆಗಱ್ಗುಂ.

ಟೀಕು.— ಸೂರಿಗಳಿಂದೆ = ವಿದ್ವಾಂಸರಿಂದೆ; ಸತಿಸಪ್ತಮಿಯೊಳ್ = ಸತಿಸಪ್ತಮಿಯಲ್ಲಿ; ಸಂಪ್ರತಿಗಂ = ವರ್ತಮಾನಕಾಲಕ್ಕಂ; ಭಾವಿಗಂ = ಭವಿಷ್ಯತ್ಕಾಲಕ್ಕಂ; ಅನ್ನೆಗಂ = ಅನ್ನೆಗಂ ಎಂದು; ಅನ್ನಂ = ಅನ್ನಂ ಎಂದು; ಇನೆಗಂ = ಇನೆಗಂ ಎಂದು; ಇನಂ = ಇನಂ ಎಂದು; ಎಂಬಿವು = ಎಂಬೀ ರೂಪಂಗಳ್; ನೆಗಱ್ಗುಂ = ಬರ್ಪುವು; ಭೂತಾರ್ಥದಲ್ಲಿ = ಭೂತಕಾಲದರ್ಥದಲ್ಲಿ; ಉದುಮಲೊಡಂಗಳ್ = ಉದುಂ ಅಲೊಡಂ ಎಂಬಿವು; ನೆಗಱ್ಗುಂ = ಬರ್ಪುವು.

ವೃತ್ತಿ.—ಅನ್ನೆಗಂ, ಅನ್ನಂ, ಇನೆಗಂ, ಇನಂ ಎಂಬಿವು ವರ್ತಮಾನದೊಳಂ ಭವಿಷ್ಯಂತಿಯೊಳಂ ವರ್ತಿಪುವು; ಉದುಂ, ಅಲೊಡಂ ಎಂಬಿವು ಭೂತವತಿಯೊಳ್ ಸಲ್ಗುಂ.

ಪ್ರಯೋಗಂ.—ಸಂಪ್ರತಿಗೆ—ನೆನೆವನ್ನೆಗಂ ಬಂದಂ; ಕೊಲ್ವನ್ನಂ ಇಕ್ಕೆಕೊಂಡಂ; ಬಿನ್ನೈಸುವಿನೆಗಂ ಎರ್ದೆಗೊಂಡಂ; ಇದಿರ್ವಪ್ಪಿನಂ ಅಪ್ಪಿಕೊಂಡಂ.

ಭವಿಷ್ಯಂತಿಗೆ—ಈವನ್ನೆಗಮಿರ್ದಂ; ಬರಂಬಡೆವನ್ನಮಾರಾಧಿಸಿದಂ; ಅವಧಿ ಬರ್ಪಿನೆಗಂ ಸೈರಿಸಿದಂ; ಬೆಳಗಪ್ಪಿನಂ ಕೇಳಿಸಿದಂ.

ಭೂತವತಿಗೆ—ಓಲಗಂ ಪರೆವುದುಮಾಲೋಚನಕ್ಕೆ ಪೊಕ್ಕಂ; ಪಾವಸೆಕಿಡಲೊಡಂ ನೀರ್ತಿಳಿದುದು.—ಇವು ಸತಿಸಪ್ತಮಿಯ ಪ್ರಯೋಗಂಗಳ್.

ಸೂತ್ರಂ. || ೨೪೭ ||

When ಅನ್ನೆಗಂ, ಇನ್ನೆಗಂ and ಎನ್ನೆಗಂ are followed by ವರಂ, or ವರೆಗಂ which denote boundary (ಸೀಮಾ, ಸೀಮೆ), their last syllable is dropped. Also ಮುಟ್ಟೆ denotes "as far as."

ಅನ್ನೆಗಮಿನ್ನೆಗಮೆನ್ನೆಗ- |
ಮೆನ್ನದೆ ಕಡೆಗುಂಟು ಲೋಪಮಿದಿರೊಳ್ಸೀಮೋ- ||
ತ್ಪನ್ನಂ ವರಂ ವರೆಗಮಿರೆ ||
ಕೆನ್ನಂ ಪೆಱವರ್ಕೆ ಲೋಪವಿಧಿ ಮುಟ್ಟೆನೆಯುಂ.| || ೫೪೯ ||

ಪದಚ್ಛೇದಂ.— ಅನ್ನೆಗಂ ಇನ್ನೆಗಂ ಎನ್ನೆಗಂ ಎನ್ನದೆ ಕಡೆಗೆ ಉಂಟು ಲೋಪಂ, ಇದಿರೊಳ್ ಸೀಮೋತ್ಪನ್ನಂ ವರಂ ವರೆಗಂ ಇರೆ; ಕೆಸ್ನಂ ಪೆಱವರ್ಕೆ ಲೋಪವಿಧಿ; ಮುಟ್ಟೆ ಎನೆಯುಂ.

ಅನ್ವಯಂ.— ಇದಿರೊಳ್ ಸೀಮೋತ್ಪನ್ನಂ ವರಂ ವರೆಗಂ ಇರೆ, ಅನ್ನೆಗಂ ಇನ್ನೆಗಂ ಎನ್ನೆಗಂ ಎನ್ನದೆ ಕಡೆಗೆ ಲೋಪಂ ಉಂಟು; ಮುಟ್ಟೆನೆಯುಂ; ಕೆಸ್ನಂ ಪೆಱವರ್ಕೆ ಲೋಪವಿಧಿ.

ಟೀಕು.— ಇದಿರೊಳ್ = ಪರದಲ್ಲಿ; ಸೀಮಾ = ಸೀಮೆಯಲ್ಲಿ; ಉತ್ಪನ್ನಂ = ಹುಟ್ಟಿದುವಾದ; ವರಂ = ವರಂ ಎಂದು; ವರೆಗಂ = ವರೆಗಂ ಎಂದು; ಇರೆ = ಇರ್ದೊಡೆ; ಅನ್ನೆಗಂ = ಅನ್ನೆಗಂ ಎಂದು; ಇನ್ನೆಗಂ = ಇನ್ನೆಗಂ ಎಂದು; ಎನ್ನೆಗಂ = ಎನ್ನೆಗಂ ಎಂದು; ಎನ್ನದೆ = ಎನ್ನದೆ; ಕಡೆಗೆ = ಅಂತ್ಯಕ್ಕೆ; ಲೋಪಂ = ಲೋಪಂ; ಉಂಟು = ಉಂಟಾಗುವುದು; ಮುಟ್ಟೆನೆಯುಂ = ಮುಟ್ಟೆ ಎನೆಯುಂ; ಕೆಸ್ನಂ = ಬೆಗ್ಗಳವಾಗಿ; ಪೆಱವರ್ಕೆ = ಅನ್ಯವಾದುವರ್ಕೆ; ಲೋಪವಿಧಿ = ಲೋಪದ ವಿಧಿ ಬರ್ಪುದು.

ವೃತ್ತಿ.— ವರಂ ವರೆಗಮೆಂಬ ಸೀಮಾರ್ಥಶಬ್ದಂ ಪರದೊಳಿರೆ, ಅನ್ನೆಗಂ ಇನ್ನೆಗಂ ಎನ್ನೆಗಂ ಎಂಬಿವಱ ಗಕಾರಕ್ಕೆ ಲೋಪಂ; ವರಂ ವರೆಗಮೆಂಬಿವು ಪರದೊಳಿರ್ದೊಡಂ ಮಿಕ್ಕಲ್ಲಿ ಲೋಪಮಿಲ್ಲ; ಮುಟ್ಟೆ ಎಂದುಂ ಸೀಮಾರ್ಥಮಂ ಪೇೞ್ಗುಂ.

ಪ್ರಯೋಗಂ.— ವರಮೆಂಬುದಾಗಮಕ್ಕೆ—

"ಎನ್ನೆವರಂ ಸಿರಿ ತಮಗುಂ- |
ಟನ್ನೆವರಂ ಸೇವ್ಯರಲ್ತೆ ಖಳರುಂ. . . ." || 677 ||
"ಇನ್ನೆವರಂ ಗುಱಿಯಾದುದಿಲ್ಲ ಕಾಮಕರವಿಮುಕ್ತಬಾಣಹತಿಗೆ" || 678 ||

ಮುಟ್ಟೆಂಬುದರ್ಕೆ— ದೆಸೆಮುಟ್ಟೆ; ವಾರ್ಧಿಮುಟ್ಟೆ; ಅಂತಮುಟ್ಟೆ.

". . . . ಆನಱಿಯೆನಾ ತಮ್ಮುಟ್ಟೆ ಸಂಗ್ರಾಮಮಮಂ." || 679 ||

ಸೂತ್ರಂ. || ೨೪೮ ||

It is not advisable to use the Suffix ಅಲ್ instead of the ಎ of the Locative – Infinitive (S. 245). This last Infinitive form is used when another agent is expected (ಉಭಯಕರ್ತೃಕಂ).

ಏದಿತೋಭಯಕರ್ತೃಕಮೆನಿ- |
ಸಿದ ಸತಿಸಪ್ತಮಿಗೆಕಾರಮಪ್ಪುದದರ್ಕಂ- |
ಜದೆ ಕೆಲರಲ್ಲಿಂ ಪೇೞ್ವರ್ |
ಚದುರರದಂ ಮೆಚ್ಚರಲ್ತೊಡಮೆಂದೊಡೆ ಶುದ್ಧಂ." || ೨೬೦ ||

ಪದಚ್ಛೇದಂ. — ವಿದಿತೋಭಯಕರ್ತೃಕಂ ಎನಿಸಿದ ಸತಿಸಪ್ತಮಿಗೆ ಏಕಾರಂ ಅಪ್ಪುದು. ಅದರ್ಕೆ ಅಂಜದೆ ಕೆಲರ್ ಅಲ್ವಂ ಪೇೞ್ವರ್; ಚದುರರ್ ಅದಂ ಮೆಚ್ಚರ್; ಅಲೊಡಂ ಎಂದೊಡೆ ಶುದ್ಧಂ.

ಟೀಕು, ಯಥಾನ್ವಯಂ. — ವಿದಿತ = ಪ್ರಸಿದ್ಧವಾದ; ಉಭಯಕರ್ತೃಕಂ = ಇರ್ವರ್ ಕರ್ತೃಗಳನುಳ್ಳುದು; ಎನಿಸಿದ ಸತಿಸಪ್ತಮಿಗೆ = ಎನಿಸಿದ ಸತಿಸಪ್ತಮಿಯ ಪ್ರಯೋಗಕ್ಕೆ; ಏಕಾರಂ = ಎತ್ವಂ; ಅಪ್ಪುದು = ಆಗುವುದು; ಅದರ್ಕೆ = ಆ ಏಕಾರಕ್ಕೆ; ಅಂಜದೆ = ಹೆದರದೆ; ಕೆಲರ್ = ಕೆಲಂಬರ್; ಅಲ್ವಂ = ಅಲ್ ಎಂಬುದಂ; ಪೇೞ್ವರ್ = ಹೇಳ್ವರ್; ಚದುರರ್ = ಬಲ್ಲವರ್; ಅದಂ = ಆ ಪ್ರಯೋಗಮಂ; ಮೆಚ್ಚರ್ = ಒಡಂಬಡರ್; ಅಲೊಡಂ = ಅಲೊಡಂ ಎಂದು; ಎಂದೊಡೆ = ಪೇೞ್ದೊಡೆ; ಶುದ್ಧಂ = ಶುದ್ಧವಪ್ಪುದು.

ವೃತ್ತಿ. — ಇರ್ಬರ್ ಕರ್ತೃಗಳ್ಗೆ ನಿಮಿತ್ತಮಪ್ಪ ಸತಿಸಪ್ತಮಿಗೆ ಏಕಾರಮಕ್ಕುಂ; ಆ ಏಕಾರಕ್ಕೆ ಅಲುವಂ ಕೆಲರ್ ಅಂಜದೆ ಪೇೞ್ವರ್, ಅದುಮಾಗದು; ಅಲೊಡಮೆಂದೊಡೆ ಶುದ್ಧಂ.

ಪ್ರಯೋಗಂ. — ಇರ್ಬರ್ ಕರ್ತೃಗಳ್ಗಪ್ಪ ಸತಿಸಪ್ತಮಿಗೆ — ಗಾಯಕಂ ಪಾಡೆ ದೇವಂ ಮೆಚ್ಚಿದಂ; ಪಾತ್ರವಾಡೆ ವಾದಕಂ ಬಾಜಿಸಿದಂ; ವಂದಿ ಪೊಗೞೆ ಚಾಗಿ ಕೊಟ್ಟಂ.

ಅಲ್ಗೆ —

"ಪಾದಪದ್ಮಂಗಳನೊತ್ತುತ್ತಿರಲ್ ಶೂದ್ರಕನೃಪತಿ ಸುಖಾಸೀನನಾಗಿ
ರ್ದನಾಗಳ್" || 680 ||

". . . . . ಬ್ಬೈ- |
ಗಿನ ಕೆಂಬಿಸಿಲೆಳಸಲೆಸೆದುವಾಶ್ರಮತರುಗಳ್" || 681 ||

ಎಂಬಿವಬದ್ಧಂಗಳ್.

ಅಲೊಡಮೆಂಬುದಱ ಶುದ್ಧಕ್ಕೆ — ವಸಂತಂ ಬರಲೊಡಂ ಕೋಗಿಲೆಯುಲಿಗುಂ; ಗಾಳಿ ಬೀಸಲೊಡನೆಲೆ ಕಱಿಲ್ಲುವು.

ಸೂತ್ರಂ. || ೨೪೯ ||

The Suffix ಒಡೆ which introduces the Subjunctive

ಪಿರಿದುಂ ಪಕ್ಷಾಂತರಮಂ |
ನಿರವಿಪೆಕಾರಂ ನಿಜಾಂತಮಾದೊಡೆಶಬ್ದಂ ||

(ಪಕ್ಷಾರ್ಥಂ), is used for all genders, all numbers, all persons and all tenses.

ಪರಿಕಿಸೆ ಧಾತ್ವಂತ್ಯದೊಳಾ- |
ವರಿಸಿರ್ಕುಂ ಲಿಂಗವಚನಪುರುಷಾಯತ್ತಂ. || ೨೬೧ ||

ಪದಚ್ಛೇದಂ.—ಪಿರಿದುಂ ಪಕ್ಷಾಂತರಮಂ ಸಿರವಿಪ ಏಕಾರಂ ಸಿಜಾಂತಂ ಅದ ಒಡೆ ಶಬ್ದಂ ಪರಿಕಿಸೆ, ಧಾತ್ವಂತ್ಯದೊಳ್ ಆವರಿಸಿ ಇರ್ಕುಂ, ಲಿಂಗವಚನಪುರುಷಾಯತ್ತಂ.

ಅನ್ವಯಂ.—ಲಿಂಗವಚನಪುರುಷಾಯತ್ತಂ ಆವರಿಸಿ ಇರ್ಕುಂ ಎಂಬುದನ್ವಯಂ.

ಟೀಕು.—ಪಿರಿದುಂ = ವಿಶೇಷವಾಗಿ; ಪಕ್ಷಾಂತರಮಂ = ಒಂದು ಪಕ್ಷಾಂತರವಂ; ಸಿರವಿಪೆಕಾರಂ = ಪೇೞ್ವ ಏಕಾರಂ; ಸಿಜಾಂತಂ = ತನ್ನಂತಂ; ಆದ = ಆದ; ಒಡೆಶಬ್ದಂ = ಒಡೆ ಎಂಬ ಶಬ್ದಂ; ಪರಿಕಿಸೆ = ವಿಚಾರಿಸೆ; ಧಾತ್ವಂತ್ಯದೊಳ್ = ಧಾತುಗಳಂತ್ಯದಲ್ಲಿ; ಲಿಂಗ = ಲಿಂಗತ್ರಯದಲ್ಲಿ; ವಚನ = ವಚನತ್ರಯದಲ್ಲಿ; ಪುರುಷ = ಪುರುಷತ್ರಯದಲ್ಲಿ; ಆಯತ್ತಂ = ಕೂಡಿದುದಾಗಿ; ಆವರಿಸಿರ್ಕುಂ = ಪೊರ್ದುಗೆಯಾಗಿರ್ಪುದು.

ವೃತ್ತಿ.—ಪಕ್ಷಾರ್ಥಮಂ ಪೇೞ್ವೆಕಾರಂ ಕಡೆಯಾಗುಳ್ಳೊಡೆಶಬ್ದಂ ಲಿಂಗತ್ರಯವಚನತ್ರಯ ಪುರುಷತ್ರಯಾನ್ವಿತಮಾಗಿ, ಧಾತುವಿನ ಕಡೆಯೊಳ್ ಪತ್ತುಗುಂ.

ಪ್ರಯೋಗಂ.—ಲಿಂಗತ್ರಯಕ್ಕೆ—ನೋೞ್ಪೊಡವಳ್ಕಿೞಿಯಳ್; ಸಮಂ ನುಡಿವೊಡವಂ ಪಿರಿಯಂ; ತೀಡುವೊಡಲ್ಲಿ ಕಮ್ಮೆಲರ್ತೀಡುಗುಂ.

ವಚನತ್ರಯಕ್ಕೆ—ಕಾದುವೊಡೊರ್ವನೆ ಬಲ್ಲಿದಂ; ಪೋಲಿಸುವೊಡಿರ್ವರುಂ ತಕ್ಕರ್; ನುಡಿವೊಡೆಲ್ಲರುಂ ಮಾತಱಿಯರ್.

ಪುರುಷತ್ರಯಕ್ಕೆ—ಪೊರ್ದುವೊಡವನೊಳ್ಳಿದಂ; ತಿರ್ದುವೊಡವರೊಳ್ಳಿದರ್; ಬೇೞ್ಪೊಡೆ ನೀನೊಳ್ಳಿದಯ್; ಈವೊಡೆ ನೀಮೊಳ್ಳಿದಿರ್; ಭಾವಿಪೊಡಾನೊಳ್ಳಿದೆಂ; ಸೇವಿಪೊಡಾಮೊಳ್ಳಿದೆವು.

ಪಿರಿದೆಂಬುದಱಿಂ ಕಾಲತ್ರಯಕ್ಕೆ—ಪುಸಿದೊಡೆ ಬಿಟ್ಟಂ; ಪಳಂಚಿದವೊಡೆ ಕೊಂದಪಂ; ಚಿತ್ರಿಪೊಡೆ ತೂಳಿಕೆಯಂ ತರಿಸುವಂ. ?

ಸೂತ್ರಂ. || ೨೫೦ || *

Roots and verbal themes have various meanings.

ಧಾತುಗಳವು ನಾನಾರ್ಥೋ- |
ಪೇತಂಗಳ್ ಲಕ್ಷ್ಯಸಿದ್ಧಿವಿಡಿದುವನಱಿದ- ||
ನ್ವಿತರೆ ಕ್ರಿಯಾನುಕೂಲಂ |
ಮಾತೇಂ ಪೂರಿಸುಗೆ ಮತ್ತಮುಱಿದುವನಿದಱೊಳ್.
|| ೨೬೨ ||

ಪದಚ್ಛೇದಂ.— ಧಾತುಗಳ್ ಅವು ನಾನಾರ್ಥೋಪೇತಂಗಳ್; ಲಕ್ಷ್ಯಸಿದ್ಧಿವಿಡಿದುವಂ ಅಱಿದು, ಅನ್ವಿತರೆ ಕ್ರಿಯಾನುಕೂಲಂ, ಮಾತೇಂ, ಪೂರಿಸುಗೆ ಮತ್ತಂ ಉಱಿದುವಂ ಇದಱೊಳ್.

ಅನ್ವಯಂ.— ಮತ್ತಂ ಉಱಿದುವಂ ಇದಱೊಳ್ ಪೂರಿಸುಗೆ ಎಂಬುದನ್ವಯಂ.

ಟೀಕು.— ಧಾತುಗಳ್ = ಧಾತುಗಳ್; ಅವು = ಅವು; ನಾನಾರ್ಥೋಪೇತಂಗಳ್ = ನಾನಾರ್ಥದೊಡನೆ ಕೂಡಲ್ಪಟ್ಟುವು; ಲಕ್ಷ್ಯಸಿದ್ಧಿವಿಡಿದುವಂ = ಉದಾಹರಣೆಗಳಲ್ಲಿ ಸಿದ್ಧಿಪಡೆದುವಂ; ಅಱಿದು = ತಿಳಿದು; ಅನ್ವಿತರೆ = ಬಲ್ಲವರೆ; ಕ್ರಿಯಾನುಕೂಲಂ = ಕ್ರಿಯೆಗೆ ಅನುಕೂಲವಾಗಿ; ಮಾತೇಂ = ಹೇಳ್ವುದೇಂ; ಮತ್ತಂ = ಇನ್ನು; ಉಱಿದುವಂ = ಉಳಿದ ಧಾತುಗಳಂ; ಇದಱೊಳ್ = ಈ ಆಖ್ಯಾತಪ್ರಯೋಗದಲ್ಲಿ; ಪೂರಿಸುಗೆ = ಪೂರ್ಣವಂ ಮಾಡುಗೆ.

ವೃತ್ತಿ.— ಧಾತುಗಳ್ ಪಲವರ್ಥಂಗಳಂ ನುಡಿಯಲ್ ಸಮರ್ಥಂಗಳಾಗಿರ್ಪುವು; ಪ್ರಮಾಣಪುರುಷರ ಮಾರ್ಗೋದಾಹರಣಂಗಳ ಬೞಿವಿಡಿದು, ವಾಕ್ಯಾನ್ವಯಸಿದ್ಧಿಯುಳ್ಳರ್ ಕ್ರಿಯಾನುಕೂಲವಾಗಿ ಮತ್ತಂ ಈ ಆಖ್ಯಾತಪ್ರಕರಣದೊಳ್ ತಿಳಿದು ಪೂರಿಸುಗೆ.

ಅನುಕ್ತಸೂತ್ರಂ[1]. || ೨೫೦ಅ || *

If the verb ಪಡು (with personal Suffixes) is joined

ಕ್ರಿಯೆಯ ಪದಂ ತಾಂ ಕರ್ತೃ |
ಪ್ರಯುಕ್ತಮಾಗೆಲ್ಲಿಯೇನದೆಂಬಿಚ್ಛೆಯನಾ- ||

[1] This is not found in our best two Manuscripts, and does also not occur in the Muḍabidaru Manuscript. It is, therefore, an interpolation (based on the ಶಬ್ದಾನುಶಾಸನ).

ಶ್ರಯಿಪುದು ಸಕರ್ಮಕಮದಲ್ |
ಪ್ರಯುಕ್ತ ಪಡುಧಾತು ಸರ್ವಧಾತುಗೆಯಕ್ಕುಂ.
|| ೨೬೩ ||

to verbs that have either the Suffix ಅಲ್ or ಇ and are transitive (ಸಕರ್ಮಕಂ), the so-called Passive is formed; when they are intransitive, the combination with ಪಡು. does not alter their meaning.

ಪದಚ್ಛೇದಂ.—ಕ್ರಿಯೆಯ ಪದಂ ತಾಂ ಕರ್ತೃಪ್ರಯುಕ್ತಂ ಆಗಿ ಎಲ್ಲಿ ಏನ್ ಅದು ಎಂಬ ಇಚ್ಛೆಯಂ ಆಶ್ರಯಿಪುದು, ಸಕರ್ಮಕಂ ಅದು. ಅಲ್ಪ್ರಯುಕ್ತ ಪಡುಧಾತು ಸರ್ವಧಾತುಗೆ ಅಕ್ಕುಂ.

ಟೀಕು, ಯಥಾನ್ವಯಂ.—ಕ್ರಿಯೆಯ ಪದಂ = ಕ್ರಿಯಾಪದಂ; ತಾಂ = ತಾಂ; ಕರ್ತೃಪ್ರಯುಕ್ತಂ = ಕರ್ತೃಪದದೊಡನೆ ಕೂಡಿದುದು; ಆಗಿ = ಆಗಿ; ಎಲ್ಲಿ = ಆವೆಡೆಯಲ್ಲಿ; ಅದು = ಅದು; ಏನ್ = ಏನೆಂದು; ಎಂಬಿಚ್ಛೆಯಂ = ಎಂಬಾಪೇಕ್ಷೆಯಂ; ಆಶ್ರಯಿಪುದು = ಬಯಸುವುದು; ಅದು = ಆ ಪದಂ; ಸಕರ್ಮಕಂ = ಸಕರ್ಮಕಪ್ರಯೋಗಂ ಅಪ್ಪುದು; ಸರ್ವಧಾತುಗೆ = 'ಈ ಪ್ರದಾನೇ' ಎಂಬುದಾದಿಯಾದ ಸಮಸ್ತ ಧಾತುಗಳಿಗೆ; ಅಲ್ಪ್ರಯುಕ್ತ ಪಡುಧಾತು = ಅಲ್ ಎಂಬುದರೊಡನೆ ಕೂಡಿದ ಪಡು ಎಂಬ ಧಾತು; ಅಕ್ಕುಂ = ಆಗುವುದು.

ವೃತ್ತಿ.—ಕ್ರಿಯಾಪದಂ ಕರ್ತೃಪದದೊಡನೆ ಕೂಡಿದುದಾಗಿ ಎಲ್ಲಿ ಏನೆಂಬಾಪೇಕ್ಷೆಯಂ ಬಯಸುವುದು, ಅದು ಸಕರ್ಮಕಮಕ್ಕುಂ. ಅಲ್ಲಿ 'ಈ ಪ್ರದಾನೇ' ಎಂಬುದಾದಿಯಾದ ಸಕಲಧಾತುಗಳ್ಗೆ ಅಲ್ ಎಂಬುದರೊಡನೆ ಕೂಡಿದ ಪಡುಧಾತುವಕ್ಕುಂ; ಅಲ್ಲಿ ಮೊದಲ್ಪೇಳ್ದ ತಾಂ ನೀನ್ ಆನೆಂಬ, ಪುರುಷತ್ರಯಕ್ಕೆ ಏಕಾನೇಕವಚನದೊಳ್ ಅಮ್ ಅರ್ ಅಯ್ ಇರ್ ಎನ್ ಎವುಗಳಕ್ಕುಂ ಎಂಬುದನುವರ್ತಿಸೆ, ಪದಮಕ್ಕುಂ.

ಪ್ರಯೋಗಂ.—ತಾನಿರಲ್ಪಟ್ಟಂ, ತಾಮಿರಲ್ಪಟ್ಟರ್; ನೀನಿರಲ್ಪಟ್ಟಯ್ ನೀಮಿರಲ್ಪಟ್ಟಿರ್; ಆನಿರಲ್ಪಟ್ಟೆಂ, ಆಮಿರಲ್ಪಟ್ಟೆವು ಎಂಬಂತೆ ಎಲ್ಲಕ್ಕಂ ತಿಳಿವುದು.

ಶಬ್ದಾನುಶಾಸನದಲ್ಲಿ ಸೂತ್ರಂ (4, 2)[1] || ಕರ್ಮಣಿ || ಅಸ್ಮದ್-ಯುಷ್ಮದ್-ಅಸ್ಮದ್-ಅರ್ಥೇಷು ಪ್ರತ್ಯೇಕಮ್ ಏಕತ್ವಾನೇಕತ್ವಯೋರ್ ವಿವಕ್ಷಿತಯೋರ್ ಯಥಾಕ್ರಮಂ ಧಾತೋಃ ಅಮ್ ಅರ್। ಅಯ್ ಇರ್। ಎನ್ ಎವು।

[1] The first S. is: ಧಾತೋರ್ ಏಕಾನೇಕತ್ವೇ (the Personal suffixes are used). The instances given are: ತಾನಿರ್ದಂ, ತಾಮಿರ್ದರ್, ನೀನಿರ್ದಯ್, ನೀಮಿರ್ದಿರ್; etc.

ಏತೇ ಪ್ರತ್ಯಯಾ ಭವಂತಿ ಕರ್ಮಣಿ ಚಾಭಿಧೇಯೇ ‖ ಇಲ್ಲಿ ಕರ್ಮಣಿ ಎಂದು ಕರ್ಮದಲ್ಲಿ ಎಂಬೀ ಸೂತ್ರಕ್ಕೆ ಅನುವರ್ತನೆ ಬಂದು, ತಾನ್ನೀನಾನೆಂಬರ್ಥಂಗಳಲ್ಲಿ ಬೇಱೆ ಬೇಱೆ ಏಕವಚನ ಬಹುವಚನಂಗಳ್ ವಿವಕ್ಷೆಯಾಗೆ ಯಥಾಕ್ರಮವಾಗಿ ಧಾತುಗೆ ಅಮ್ ಅರ್ ಅಯ್ ಇರ್ ಎನ್ ಎವು ಎಂಬೀ ಪ್ರತ್ಯಯಂಗಳ್ ಕರ್ಮದೊಳಮಕ್ಕುಂ—ತಾನಿರಲ್ಪಟ್ಟಂ, ತಾಮಿರಲ್ಪಟ್ಟರ್, ನೀನಿರಲ್ಪಟ್ಟಯ್, (ಅದು ಇರೆ ಪಟ್ಟುದು) ಎಂಬಂತೆಲ್ಲಕ್ಕಂ ಪತ್ತಿಸುಗುಂ. ಯೋಗವಿಭಾಗಮುತ್ತರಾರ್ಥಂ.

ಸೂತ್ರಂ (4, 3) ‖ ಬೇಡ್ವಾದೇರ್ ಅಪ್ರಧಾನೇ ‖ ಅನ್ಯದರ್ಥವಿವಕ್ಷಾಯಾಂ ಬೇಡ್ವ ಇತ್ಯೇವಮ್ ಆದಿಭ್ಯೋ ಧಾತುಭ್ಯಃ ಅಪ್ರಧಾನೇ ಕರ್ಮಣ್ಯ ಅಮ್-ಆದಯೋ ಭವಂತಿ ‖ ಎಂದುದಾಗಿ (ಈ ಎಂಬ ಧಾತುವಿಗಲ್ಲದೆ) ಬೇಡ್ವಾದಿಗ ಪ್ರಧಾನದಲ್ಲಿ ಎಂಬಾ ಸೂತ್ರಕ್ಕೆ ಅನ್ಯಾರ್ಥವಿವಕ್ಷೆಯಲ್ಲಿ ಬೇಡು ಎಂಬುದಾದಿಯಾದ ಧಾತುಗಳ್ಗೆ ಅಪ್ರಧಾನವಾದಲ್ಲಿ ಕರ್ಮದಲ್ಲಿ ಅಮಾದಿಗಳಕ್ಕುಂ.

ಪ್ರಯೋಗಂ.—ಪಾರ್ವನಿನರಸಂ ಗ್ರಾಮಮಂ ಬೇಡಲ್ಪಟ್ಟಂ; ನೀಂ ಬೇಡಲ್ಪಟ್ಟಯ್; ಆಂ ಬೇಡಲ್ಪಟ್ಟೆಂ. ಇಂತು—ಗೋವಳನಿಂದೆ ಎರ್ಮೆ ಪಾಲಂ ಕಱೆಯಲ್ಪಟ್ಟುದು. ಉಪಾಧ್ಯಾಯಂ ಶಿಷ್ಯರಿಂ ತತ್ವಮಂ ಬೆಸಗೊಳಲ್ಪಟ್ಟಂ; ಬೇಹುಕಾಱನರಸನಿಂ ಸುದ್ದಿಯಂ ಕೇಳಲ್ಪಟ್ಟಂ; ಪಟ್ಟಳ್, ಪಟ್ಟುದು ಎಂಬಂತೆ.

ಸೂತ್ರಂ (4, 89) ‖ ಕರ್ಮಣ್ಯ ಅನುಪಡುಃ ‖ ಧಾತೋಃ ಪಡುಧಾತುರ್ ಅನುಪ್ರಯುಜ್ಯತೇ ಕರ್ಮಣಿ ವಿಹಿತೇತಿಜ್‌ಪರೇ ‖ ಎಂದುದಾಗಿ ಧಾತುಗೆ ಪಡುಧಾತುವನುಪ್ರಯುತ್ಯಮಾದಪುದು ಕರ್ಮದಲ್ಲಿ ವಿಹಿತಮಾಗೆ, (ತಿಜ್ ಎಂಬ) ಅಮಾದಿಗಳ್ಪರಮಾಗೆ.

ಮಾಡಲ್ಪಟ್ಟುದು ಘಟಂ ಕುಂಬಱನಿಂ; ನೋಡಲ್ಪಟ್ಟನರಸನಂಗನೆಯಿಂ; ಬಯಸಲ್ಪಟ್ಟಳ್ತರುಣಿ ರಮಣನಿಂ; ಮಾಡಲ್ಪಡುಗೆಮಗೆ ಸಂಪದಂ ಜಿನಪತಿಯಿಂ; ಕಿಡಿಸಲ್ಪಡುಗೆಮ್ಮ ದುಃಖಸಂತತಿ ಜಿನನಿಂ.

ಕರ್ಮಣಿಪ್ರಯೋಗಮಲ್ಲದಿರೆ—ನೋಡಿದಳರಸನ್ನಂಗನೆ; ರಮಣಂ ತರುಣಿಯಂ ಬಯಸಿದಂ; ಮಾಡಿದಂ ಪದಕಮನಕ್ಕಸಾಲೆ.

ಸೂತ್ರಂ (4, 91) || ತಸ್ಮಿನ್ನೆದಲ್ || ಧಾತೋರ್ ಏಕಾರಃ ಅಲ್ ಭವತಃ ಪಡುಧಾತೌ ಪರೇ || ಎಂದುದಾಗಿ ಧಾತುಗೆ ಹ್ರಸ್ವದೆಕಾರಂ ಅಲ್ಲುಂ ಅಪ್ಪವು, ಪಡುಧಾತು ಪರಮಾಗೆ—ಮಾಡೆ ಪಟ್ಟಂ, ಮಾಡಲ್ ಪಟ್ಟಂ; ನೋಡೆ ಪಟ್ಟಂ, ನೋಡಲ್ ಪಟ್ಟಂ; ಕಿಡಿಸೆ ಪಟ್ಟುದು, ಕಿಡಿಸಲ್ ಪಟ್ಟುದು ಎಂಬಂತೆಲ್ಲಕ್ಕಂ ಪತ್ತಿಸುವುದು.

The author Kêśava is a second Bramha indeed!

ಕವಿತಾಪ್ರೌಢಿಯೊಳಬ್ಜಸಂಭವನೆ ಕರ್ತಾರಂ ಕ್ರಿಯಾಕೌಶಲಂ |
ಸ್ತವನೀಯಂ ತದಧೀನವಾದಖಿಳ ಶಾಸ್ತ್ರಾಮ್ನಾಯಮಂ ಕೂಡೆ ಬ-||
ಲ್ಲವರಿಲ್ಲೆನ್ನದಿರೊರ್ವನಿಂದಭಿನವ ಬ್ರಹ್ಮಂ ಗಡೆಂಬಂತೆ ತೋ- |
ಭುವನಾತ್ಮೀಯ ವಚೋವಿಚಿತ್ರತರ ವಿದ್ಯಾವೇಶವಂ ಕೇಶವಂ.

ಟೀಕು.— ಕವಿತ್ವದ ಬಲ್ಲತನದಲ್ಲಿ ಬ್ರಹ್ಮನೆ ಕರ್ತೃ ಕ್ರಿಯಾಕೌಶಲ್ಯವುಳ್ಳವಂ ಸ್ತುತಿ ಮಾಡಲ್ತಕ್ಕವಂ, ಅವನಧೀನವಾದ ಸಮಸ್ತವಾದ ವೇದಶಾಸ್ತ್ರಂಗಳಂ ಒಡನೆ ಅರಿತವರ್ ಇಲ್ಲವೆಂದು ಎನಲ್ ಬೇಡ; ಕವಿಕೇಶವಂ ಒರ್ವಂ ಇಂದು ಹೊಸಬನಾದ ಬ್ರಹ್ಮಂ ಗಡ! ಎಂಬ ಹಾಗೆ ತನ್ನ ಸಂಬಂಧವಾದ ವಾಕ್ಯಂಗಳ ಚೋದ್ಯತರವಾದ ವಿದ್ಯಂಗಳ ಆವೇಶವನ್ನು ಕಾಣಿಸುವಂ.

ಗದ್ಯಂ.— ಇದು ಸಮಸ್ತಶಾಬ್ದಿಕಜನಮನೋಜನಿತಶಬ್ದಸಂದೇಹಶಲ್ಯಚಾರುಚುಂಬಕಾಯಮಾನಾನೂನಕರ್ನಾಟಕಲಕ್ಷಣಶಿಕ್ಷಾಚಾರ್ಯಸುಕವಿಕೇಶಿರಾಜವಿರಚಿತಮಪ್ಪ ಶಬ್ದಮಣಿದರ್ಪಣದೊಳ್ ಆಖ್ಯಾತಸಾಕಲ್ಯಲಕ್ಷಣಮೆಂಬ ಪಂಚಮಸಂಧಿ ಸಂಪೂರ್ಣಂ.

೫ನೆಯ ಅಧ್ಯಾಯಂ ಸಮಾಪ್ತಂ.

೬ನೆಯ ಅಧ್ಯಾಯಂ. VI. CHAPTER.

ಧಾತುಪ್ರಕರಣಂ.

KANNADA VERBAL ROOTS AND THEMES.

(This list is not in the Mûḍabidaru Manuscript; it is usually given separately.)

Kêśava's list of Kannaḍa verbal Roots (and themes) is equal in value to (the poet) Bhîma's list of Saṁskṛita roots.

ವೇದಸಮನಾಗಿ ಭೀಮನಿ- |
ನಾದುದು ಸಂಸ್ಕೃತದ ಧಾತುವಾ ತೆಱೆದಿಂದಂ ||
ಯಾದವಕಟಕಾಚಾರ್ಯನಿ- |
ನಾದುದು ಕರ್ಣಾಟಧಾತು ಕವಿಕೇಶವನಿಂ. || ೨೬೪ ||

ಸೂತ್ರಂ. || ೨೫೧ ||

No Kannaḍa Roots end in aspirated consonants or in ಙ್, ಞ್, ಶ್, ಷ್, ಹ್, or ಕ್ಷ್.

ದೊರೆವಡೆದ ಮಹಾಪ್ರಾಣಾ- |
ಕ್ಷರಾಂತದಿಂ ಙಞಶಷಾಂತಹಾಂತಕ್ಷಾಂತೋ- ||
ದ್ಧರಣದಿನುದ್ಭವಿಸವು ಬ- |
ಲ್ಲರ ಮತದಿಂ ಧಾತು ತಿಳಿವುದಿವನೀಕ್ರಮದಿಂ. || ೨೬೫ ||

ಕ್ರಿಯಾರ್ಥೋ ಧಾತುಃ[1]

(A verbal root or theme expresses the meaning of a verb)

1. ಸ್ವರಧಾತುಗೆ.

1. ಈ. ಪ್ರದಾನೇ (literally: in giving), to give.
2. ಓ. ಸ್ನೇಹೇ, to love.

2. ಕಾಂತಕ್ಕೆ.

3. ಕಾ. ರಕ್ಷಣೇ, to guard.
4. ಕೀ. ರಕ್ತಪಕ್ವೇ. to become pus.

5a. ಕೇ. ಶಯನೇ, to lie down, ನಿಧುವನೇ ಚ, to lie with.

[1] This sentence occurs in 1, 12 of the Śabdânuśâsana.

5*b*. ಕುಟಕು. ಗಾಢಪೂರಣೇ, to cram into.

6. ಮಿಸುಕು. ಸ್ಪಂದನೇ, to move.

7. ಮುಸುಕು. ಆವರಣೇ, to cover, ಭಾವೇ ಚ, a covering.

8. ಕುಸುಕು, ಕುಸುಂಕು. ಘಾತನೇ, to strike.

9. ಪಿಸುಕು, ಪಿಸುಂಕು. ಅವಜ್ಞಾತಿಶಯೇ, to treat with great disrespect.

10. ಕುಱುಕು, ಕುಱುಂಕು. ಖಾದನೇ to eat, etc.

11. ಮುಱುಕು. ಮುಖವಿಕಾರೇ, to distort the face, etc.

12. ತುಱುಕು. ಗಾಢಪ್ರವೇಶೇ, to force into.

13. ನುಱುಕು. ವೃದ್ಧಿಹೀನೇ, to be or become deficient in growth.

14. ಞಱುಕು, ಞಱುಂಕು. ನಿಗ್ರಹಗ್ರಹಣೇ, to hold firmly, etc.

15. ಸಾಕು. ರಕ್ಷಣೇ, to preserve, foster.

16. ಜಿರ್ಕು. ನಖಘಾತನೇ, to strike with the nails or claws.

17. ನೂಂಕು. ಪ್ರೇರಣೇ, to push on, etc.

18. ಸೋಂಕು. ಸ್ಪರ್ಶನೇ, to touch, etc.

19. ಕೊಂಕು. ಉತ್ಸರ್ಪಣೇ. ಉತ್ಸರ್ಪಣವೆಂದು ಗಮನಂ, to soar, etc.

20. ತೇಂಕು. ಪ್ಲವನೇ, to float, swim.

21. ಅವುಂಕು. ದೃಢಪೀಡನೇ, to press firmly, etc.

22. ಕಲಂಕು. ಆಲೋಡನೇ, to stir up, etc.

23. ಚಲುಕು, ಚಲುಂಕು. ಜಲೋತ್ಸರ್ಜನೇ, to pour out liquids.

24. ಚಳಕು, ಚಳಂಕು. ಕರವಿಮೋಚನೇ to loosen from out of the hand, etc.

25. ಪೊಳಕು, ಪೊಳಂಕು. ಚರ್ವಣಕ್ರಿಯಾಯಾಂ, to chew.

26*a*. ಪಳಂಕು. ಗಾಢಸ್ಪರ್ಶನೇ, to touch strongly or forcibly, to push, etc.

26*b*. ಪಳುಂಕು, (ಪಱುಕು). ನೂಂಕು, to push, etc.

27. ಹಲಕು. ವೃಕ್ಷಾರೋಹಣೇ, to climb, as a tree, ಶರೀರಾಂಗಭೇದೇ ಚ. a certain member of the body.

28. ಉಲುಕು. ಶರೀರಸ್ಫುರಣೇ, the body to shake, etc.

29. ಮುಲುಕು. ಪ್ರಸವನಕ್ರಿಯಾಯಾಂ, to be in labour.

30. ಕುಲುಕು. ಗಾಢಪೂರಣೇ, to fill with force, etc.

31. ತೊಡಕು, ತೊಡಂಕು. ವಿಪರ್ಯಾಸೇ, to oppose, etc.

32. 33. ಕೊಂಕು, ಬಂಕು. ಕೌಟಿಲ್ಯೇ, to get crooked, to bend.

34. ತುಡುಕು, ತುಡುಂಕು. ಸತ್ವರಗ್ರಹಣೇ, to seize or grasp hastily, etc.

35. ಪುಡುಕು, ಪುಡುಂಕು. ಕರಾನ್ವೇಷಣೇ, to search for with the hands, etc.

36. ಮಿಡುಕು, ಮಿಡುಂಕು. ಚೈತನ್ಯೇ, to recover consciousness, etc.

37. ಇಡುಕು, ಇಡುಂಕು. ಗಾಢವಿಮೋಚನೇ, to unloose vehemently, etc.

38. ಅಡಕು. ಸ್ಥಾನಾಂತರಪ್ರವೇಶೇ, to put in another place, etc.

39. ಕುಡುಕು. ಚಂಚುಘಾತನೇ, to peck, ಧಾನ್ಯಾದಿದ್ರವ್ಯೇ ಚ, corn and other things, food, aliment.

40. ಕರ್ದುಕು, ಕರ್ದುಂಕು. ಲಘುಚಂಚುಘಾತನೇ, to peck lightly.

41. ಬರ್ದುಕು, ಬರ್ದುಂಕು. ಜೀವನಾರ್ಥೇ, to live.

42. ಬೆದಕು. ಅನ್ವೇಷಣೇ, to search for.

43. ಕುಡುಕು. ಈಷತ್ಪ್ರಧಾವನೇ, to wash gently.

44. ಮುಡುಕು (ಮುದುಕು). ಶರೀರೋಪಗೂಹನೇ, ಉಪಗೂಹನಮೆಂದಾಲಿಂಗನಂ, to embrace the body.

45. ಮಿನುಕು. ಅಂತರ್ಗತಸ್ವನೇ, to speak in an indistinct tone, etc., ಕಾಂತೌ ಚ, to glitter.

46. ಕೆಣಕು. ಕದರ್ಥನೇ; to irritate or provoke.

47. ಕುಣುಕು. ಮುಸಲಕ್ರಿಯಾಯಾಂ, to pound, ಕೇಲೇ ಚ, to play (or ಕೀಲೇ ಚ, a plug).

48. ಕೊಣಕು. ಮೃಗಲಂಘನೇ, to leap, as a wild beast.

49. ತಿಣುಕು (o. r. ತಿಣಕು). ಅಪಾನವಾಯೌ, to fart.

50. ಬಿಕ್ಕು. ಉಚ್ಛ್ವಸೇ, to sigh, sob, ಮಾಂಸಭೇದೇ ಚ, a kind of flesh.

51. ಒಕ್ಕು. ಖಲಕರಣೇ, to work on the floor for treading out corn. ಶಕುನೇ ಚ, an omen.

52. ಇಕ್ಕು. ತ್ಯಾಗ—ಹನನಯೋಃ, to deposit, etc. to beat, kill.

53. ನಕ್ಕು, (o. r. ನೆಕ್ಕು). ಲೇಹನೇ, to lick.

54. ಹಿಕ್ಕು. ವಿವರಣೇ, to separate.

55. ಎಕ್ಕು. ವಿಭಜನೇ, to divide, etc. ಪ್ರವಾಹಿಕಾಯಾಂ ಚ, to purge.

56. ತಿಕ್ಕು. ತಿರ್ಯಕ್ಕಂಡೂತಿಲೇಹನೇ, to lick the itch as beasts do.

57. ಕೆಕ್ಕು. ಗೋಶಿಕ್ಷಾಧ್ವನೌ, to shout in training cattle.

58. ಮುಕ್ಕು. ಖಾದನವಿಶೇಷೇ, to eat in a certain manner.

59. ನೆಕ್ಕು. ಅಂತರ್ಲೀನೇ, to be depressed, etc.

60. ಕುಕ್ಕು. ವಸ್ತ್ರಸ್ವಲ್ಪಘಾತನೇ, to beat a cloth to a small extent. ಪಕ್ಷಿಭೇದೇ ಚ, a crane.

61. ಮುಳುಕು, ಮುಳುಂಕು. ಜಲನಿಮಜ್ಜನೇ, to be immersed in water.

62. ತುಳುಕು, ತುಳುಂಕು. ಸೇಚನೇ, to sprinkle, etc.

63. ಬಳ್ಕು. ನಮನೇ, to bend.

64. ನಿಳ್ಕು. ಉಪರಿಸ್ಪರ್ಶನೇ, to stretch one's self, etc.

65. ಉಳ್ಕು. ದೀಪ್ತೌ, to shine ದ್ರವ್ಯೇ ಚ, a meteor.

66. ಅಳ್ಕು. ಭಯೇ, to fear, ಅಶಕ್ತೌ ಚ, to be without strength.

67. ತಳ್ಕು. ಅನುಲೇಪನೇ, to anoint the body, ತದ್ಭಾವೇ ಚ, lustre, etc.

68. ಒಱ್ಕು, ಪ್ರವಾಹೇ, to flow.

69. ಅಱ್ಕು. ಜೀರ್ಣೇ, to be worn out, etc.

70. ಉಕ್ಕು. ದಾರ್ಢ್ಯೇ, to be proud, etc. ಲೋಹಭೇದೇ ಚ, steel.

71. ಸೊರ್ಕು. ಉನ್ಮಾದೇ, to grow proud.

72. ಸಿರ್ಕು, ಸಿಲ್ಕು. ಪ್ರತಿಬಂಧೇ, to be impeded, entangled.

73. ಸುರ್ಕು. ಸಂಕೋಚೇ, to contract, shrivel.

74. ಚಿರ್ಕು. ನಖಕ್ಷತೇ, to wound with the nails or claws.

75. ಸೆರ್ಕು. ವಸ್ತ್ವಂತರಪ್ರವೇಶೇ, to tuck into, etc.

76. ಮೊರಕು (o. r. ಮೊರ್ಕು). ದರ್ಪಘೂರ್ಣನೇ, to be in trembling oscillation from haughtiness.

77. ಕೋ. ಸೂತ್ರಪ್ರವೇಶೇ, to enter, as a thread into a needle; to be threaded; to thread.

3. ಗಾಂತಕ್ಕೆ.

78. ಉಗಿ. ಆಕರ್ಷಣೇ, to draw towards, etc. ನಖಕ್ಷತೇ ಚ, to wound with the nails or claws.

79. ಮುಗಿ. ಪುಷ್ಪಸಂಕೋಚನೇ, to contract, as a flower, etc.

80. ಬಗಿ. ವಿಶ್ಲೇಷೇ, ವಿಶ್ಲೇಷವೆಂದು ಭಾಗಂ, to divide, separate, etc.

81. ಸುಗಿ. ಭಯೇ, to fear.

82. ಬಿಗಿ. ಬಂಧನೇ, to fasten, ಹಯಪರಿಕರೇ ಚ, a girth of horses, etc.

83. ಅಗಿ. ಸಂತ್ರಾಸ—ಹರ್ಷ—ಚರ್ವಣೇಷು, ಸಂತ್ರಾಸವೆಂದು ಭಯಂ (to tremble), to tremble or fear; to be glad; to chew.

84. ಚಿಗಿ. ಅಂಗುಲಿವಿಸರ್ಜನೇ, to let loose from the fingers; to discharge or propel with the fingers.

85. ಪುಗು. ಪ್ರವೇಶೇ, to enter.

86. ನಗು. ಹಸನೇ, to laugh

87. ಉಗು ವಿಸರ್ಜನೇ, to let loose, throw away.

88. ಮಿಗು. ಅತಿಕ್ರಮಣೇ, to exceed, etc.; ಅವಶಿಷ್ಟೇ ಚ, to remain.

89. ಮುಗ್ಗು. ಜೀರ್ಣವಗಂಧೇ, to get or have a corrupt, musty smell. ಗತಿಭಂಗೇ ಚ, to stumble.

90. ಉಗ್ಗು. ವಚನವಿರೋಧೇ, to stammer, etc.

91. ಪೋಗು. ಗಮನೇ, to go.

92. ಆಗು. ಪ್ರಾದುರ್ಭಾವೇ, to become manifest, to become.

93. ಕೂಗು. ಉಚ್ಚೈರ್ಧ್ವನೌ, to cry aloud, shout.

94. ತೇಗು. ಉದಾನವಾಯೌ, to belch; ವೃಕ್ಷಭೇದೇ ಚ, a teak-tree.

95. ತಾಗು. ಸಂಘಟ್ಟನೇ, to come into close contact.

96. ಬಾಗು. ನಮ್ರತ್ವೇ, to bend or bow.

97. ತೂಗು. ತುಲನೇ, to weigh.

98. ಬೀಗು. ಹರ್ಷಭಾವೇ, to be glad. ಸ್ಥೌಲ್ಯೇ ಚ, to become bulky, to swell.

99. ಕೇಗು. ಮಯೂರಸ್ವನೇ, to cry, as a peacock.

100. ನೀಗು. ತ್ಯಜನೇ, to leave or quit.

101. ಹುದುಗು. ಗೋಪನೇ, to guard, conceal, etc.

102. ಪುಡುಗು. ಹಸ್ತಾನ್ವೇಷಣೇ, to search about or for with the hands.

103. ಪೊಂಗು. ಸ್ಫುಟನೇ, to burst, open, expand, etc.
104. ನುಂಗು. ಗಿಲನೇ, to swallow.
105. ಕುನುಂಗು. ಸಂಕೋಚನೇ, to contract; to bend.
106. ಕಾಂಗು. ಧಾರಣ—ಸಂಘಟ್ಟನಯೋಃ, to support; to come into close contact.
107. ಜಿನುಗು, ಜಿನುಂಗು. ಅವ್ಯಕ್ತಧ್ವನೌ, to sound inarticulately, to mutter, to hum; ವರ್ಷಭೇದೇ ಚ, drizzling rain.
108. ಮಲಗು, ಮಲಂಗು. ಉಪಧಾನಾವಲಂಬೇ, to lie down, recline; ಉಪಧಾನೇ ಚ, a pillow, a cushion.
109. ಚಿಲಂಗು. ಕರಮುಕ್ತೌ. to let go from the hand, etc.
110. ತೊಲಗು. ವಿವಿಕ್ತೇ, to move away, separate from.
111. ಪಿಂಗು. ಅಪಸರಣೇ, to go away, retreat.
112. ಮಿಸುಗು. ಕಾಂತೌ, to shine.
113. ಎಸಗು. ಉದ್ಯೋಗೇ, to undertake, commence.
114. ಮಸಗು. ವಿಜೃಂಭಣೇ, to open, extend, appear.
115. ಕರಗು. ವಿಲೀನೇ, to be dissolved, melt, etc.
116. ಕೊರಗು. ರಸವಿಹೀನೇ, to be deprived of juice, to shrivel, etc.
117. ಹರಗು. ಸಸ್ಯಕ್ರಿಯಾಯಾಂ, to work in a corn-field, etc.
118. ಮರುಗು. ಸಂತಾಪೇ, to burn, grieve.
119. ಎಱಗು. ಪ್ರಣತೇ, to stoop, to bow, etc.
120. ಮಿಱುಗು. ಚಕಚಕಾಯಮಾನೇ, to glitter.
121. ತುಱುಗು. ಸಂಚ್ಛನ್ನೇ, to be covered or enveloped, etc.
122. ಉಱುಗು. ವಕ್ರಭಾವೇ, to be crooked, bent.
123. ಒಱಗು. ಸುಪ್ತೌ, to lie down' sleep.
124. ಕಱಂಗು. ಕಾರ್ಷ್ಣ್ಯೇ, ಕಾರ್ಷ್ಣ್ಯವೆಂದು ಕರ್ಪು, to turn black.
125. ಉಡುಗು. ಸಂಕೋಚನೇ, to inflect, contract, shrivel, etc.
126. ತೊಡಗು. ಪ್ರಾರಂಭೇ, to begin.
127. ಮಡಗು. ಗೋಪನೇ, to hide, conceal.
128. ನಡುಗು (o. r. ನಡುಗು). ಕಂಪನೇ, to tremble.
129. ಮಿಡುಗು. (ಹ) ಸಂಖಿನ್ನೇ, ಸಖಿನ್ನವೆಂದು ದುಃಖದಿಂದಾದ ಚಿಂತೆ, to grieve.
130. ಕಡಂಗು. ಔತ್ಸುಕ್ಯೇ, ಔತ್ಸುಕ್ಯವೆಂದು ಇಚ್ಛೆ, to desire.
131. ಅಡಂಗು. ಗೋಪನೇ, to hide (v. i.)
132. ಒಣಗು. ಶೋಷಣೇ, to become dry, etc.
133*a*. ಎಡೆಯುಡುಗು (ಎಡೆ-ಉಡುಗು). ವಿಚ್ಛೇದೇ, to leave room, etc.
133*b*. 133*c*. ತೊಳಗು, ಬೆಳಗು. ಕಾಂತೌ, to shine.
133*d*. ಮುೞುಗು. ನಿಮಗ್ನೇ, to submerge.
134. ಅಲುಗು. ಸಂಚಲನೇ, to shake.
135. 136. 137. ಅೞ, ಅೞ್ಗು, ತಱ್ಗು, ಕ್ಷೀಣತ್ವೇ, to decay; to grow less.
138. ಮುೞ್ಗು. ಪತನೇ, to fall down.

139. ಮೊಱ್ಗು. ನಮನೇ, to bow (v. i.).
140. ಅಱ್ಗು (see 136). ಲಯೇ, to dissolve (v. i.).
141. ಪುಱ್ಗು. ದಹನಕ್ರಿಯಾಯಾಂ, to burn.
142. ಉಱ್ಗು. ಸ್ನೇಹೇ, to love.
143. ಮೊಱಗು. ವಾದನಕ್ರಿಯಾಯಾಂ, to sound, as musical instruments; ಸ್ತನಿತೇ ಚ, to thunder; ವೃಕ್ಷಭೇದೇ ಚ, a sort of tree.
144. ಒಱ್ಗು. ಸಮ್ಮೇಳನೇ, to unite.
145. ನುಱ್ಗು (ನುಳ್ಗು). ಸಂಚೂರ್ಣನೇ, to be ground.
146. ಕುಱ್ಗು. ಆಕುಂಚನೇ, to bend together, contract.
147. ಕಱ್ಗು. ಕಾರ್ಷ್ಣ್ಯೇ, to turn black.
148. ನೆಱ್ಗು. ಅಂತರ್ಲೀನೇ, to sink in, be depressed.
149. ತೆಗೆ. ಆಕರ್ಷಣೇ, to take.
150. ಒಗೆ. ಜನನ – ವಸ್ತ್ರಪ್ರಕ್ಷಾಲನಯೋಃ, to be born; to wash clothes.
151. ಬಗೆ. ಪರಿಭಾವೇ, to reflect; ಚಿತ್ತೇ ಚ, to think.
152. ತಗೆ. ಸ್ತಂಭನೇ, to stop, etc.
153. ಹೊಗೆ. ಧೂಪಧೂಮನಿರೋಧಕ್ರಿಯಾಯಾಂ, to hem in the smoke of incense and other materials, to smoke, ಧೂಮೇ ಚ, smoke.
154. ನೆಗೆ. ಉತ್ಪವನೇ, to be purified, become clear.
155. ಮೊಗೆ. ಜಲಾಕರ್ಷಣೇ, to scoop water; ಘಟಭೇದೇ ಚ, (o. r. ಘುಟಭೇದೇ ಚ), an earthen vessel.

4. ಚಾಂತಕ್ಕೆ.

156. ಮಿಂಚು. ದೀಪ್ತೌ, to shine; ವಿದ್ಯುತಿ ಚ, lightning.
157. ಮುಂಚು. ಅಗ್ರಗಮನೇ, to go before.
158. ಪಿಂಚು. ಪಶ್ಚಾದರ್ಥೇ, to be behind.
159. ಹೊಂಚು. ಸಂಕೇತೋದ್ಯೋಗೇ, to exert one's self secretly, etc.
160. ಪಳಂಚು. ಸಂಘಟ್ಟನೇ, to come into close contact, etc.
161. ಜಱುಚು. ಬಹುಭಾಷಾಯಾಂ, to chatter.
162. ಅಱುಚು. ಉಚ್ಚೈರ್ಧ್ವನೌ, to cry out aloud.
163. ಮೋಚು. ವೈಧವ್ಯೇ, to become a widow.
164. ಕವಿಚು. ವಿಪರೀತಪತನೇ, to be turned upside down.
165. ಪೆರ್ಚು. ವಿಸ್ತಾರೇ, to increase.
166. ಮೆರ್ಚು. ಅತಿಪರಿಚಯೇ, to be greatly devoted to, etc.
167. ಬೆರ್ಚು. ಸಂತ್ರಾಸೇ, to fear; ತೃಣಪುರುಷೇ ಚ, a straw-puppet, scare-crow.
168. ಕರ್ಚು. ಖಾದನೇ, to bite; ಪ್ರಕ್ಷಾಲನೇ, to wash; ತಂಡುಲಪ್ರಕ್ಷಾಲಜಲೇ ಚ, water in which rice has been washed.
169. ಬಾರ್ಚು. ಪುಂಜೀಕರಣೇ, to heap.
170. ತೀರ್ಚು. ನಿಷ್ಪತ್ತೌ, to finish.
171. ಉರ್ಚು. ಆಕರ್ಷಣೇ, to draw towards one's self; ಮಲಭೇದನೇ ಚ, to purge or be purged.
172. ಬಿರ್ಚು. ವಿಭಜನೇ, to divide, to loosen.

173. ಪರ್ಚು (o. r. ಅರ್ಚು). ಅವ್ಯಕ್ತಧ್ವನೌ, to whisper.

174. ಪೆಟ್ಟುವೆರ್ಚು (ಪೆಟ್ಟು+ವೆರ್ಚು). ದರ್ಪೇ, to be very haughty (o. r. ಬೆಟ್ಟುವೆರ್ಚು).

175. ಚುಂರ್ಚು. ದಾಹೇ, to burn.

176. ಚುಂರ್ಚು. ಶಿಖಿಸಂಧಾರಣೇ, to burn.

177. ಮುಚ್ಚು. ಆಚ್ಛಾದನೇ, to cover.

178. ಮೆಚ್ಚು. ಅಭ್ಯುಪಗಮೇ, to assent.

179. ನಚ್ಚು-ವಿಶ್ವಾಸೇ, to trust.

180. ಎಚ್ಚು. ಅಂಜನಕ್ರಿಯಾಯಾಂ, to smear.

181. ಕೆಚ್ಚು. ತಂತುವಾಯಕ್ರಿಯಾಯಾಂ, to do (a certain kind of) weaving-business; ತರುಸಾರೇ ಚ, the core of a tree.

182. ನಾಣ್ಚು. ಲಜ್ಜಾಯಾಂ, to be ashamed.

183. ಕಡೆಗಣ್ಚು (ಕಡೆ-ಕಣ್ಚು). ಅವಜ್ಞಾಯಾಂ, ಅವಜ್ಞೆಯೆಂದು ಮಾಡುದು, to slight, contempt.

184. ನುಣ್ಚು. ಅಪಸರಣೇ, to move off.

ಧಾತೋರ್ ಇಸುಪ್ರತ್ಯಯಸ್ಯ ಚಾದೇಶೇ ಪುನರ್ಧಾತುತ್ವಂ.

(Themes formed with ಚು, this being a substitute of ಇಸು.)

185. ಅಲರ್ಚು. ವಿಕಸನೇ, to cause to expand or open.

186. ಎಲರ್ಚು. ಚೇತನಕರಣೇ, to give strength or animation, to enliven.

187. ಉದಿರ್ಚು. ಅಧಃಪತನೇ, to cause to fall down (from above).

188. ಸಾರ್ಚು. ಸಮೀಪಾಗಮನೇ, to make go or come near or to, etc.

189. ಸೋರ್ಚು. ಗಲನೇ, to cause to drop, etc.

190. ಒದರ್ಚು ಉದ್ಯಮೇ, to make effort; to begin.

191. ತೊಡರ್ಚು. ಬಂಧನೇ, to bind, etc.

192. ಬಿದಿರ್ಚು. ರಥವಿಮೋಚನೇ, to unharness or unyoke, as a coach.

193. ಅಮರ್ಚು. ಸಂಘಟೀಕರಣೇ, to put into close contact, to join.

194. ಬೆಮರ್ಚು. ಸ್ವೇದಕರಣೇ, to cause perspiration.

195. ನಿಮಿರ್ಚು. ಪ್ರಸಾರಣೇ, ಪ್ರಸಾರಣವೆಂದು ನಿಗುರಿಸುವದು, to cause to be stretched, etc.

196. ಪೊಣರ್ಚು. ಸಂಯುಗೇ, ಸಂಯುಗವೆಂದು ಬೆರೆದುದು, to join, to unite.

197. ತಳರ್ಚು. ಸ್ಥಾನಾಪಗಮನೇ, to cause to go away from a place.

198. ಸಡಿಲ್ಚು. ಶೈಥಿಲ್ಯೇ, to loosen.

199. 200. ಕೊರಲ್ಚು. ಪುಯಲ್ಚು. ಆಕ್ರೋಶಧ್ವನೌ, to vociferate.

201. 202. ಮರಲ್ಚು (*cf.* 622). ಮಗುಬ್ಚು. ಪರಾಙ್ಮುಖೀಕರಣೇ, to avert the face, etc.

203. ನುಗುಳ್ಚು. ಸೂಕ್ಷ್ಮದ್ವಾರಪ್ರವೇಶೇ, to cause to enter a small opening, etc.

204. ಮುಗುಳ್ಚು. ಸಂಕೋಚಕರಣೇ, to cause to contract, etc.

205. ಸುರುಳ್ಚು. ಸಂಕೋಚನೇ, to cause to contract.

206. ತೆರಳ್ಚು. ಚಲನೇ, to cause to move; ಚಯನೇ ಚ, to amass.

207. ಪೊರಳ್ಚು. ಲುಠನೇ, to cause to welter, etc.

208. ಕೆರಳ್ಚು. ಆಸ್ಫೋಟನೇ, ಆಸ್ಫೋಟನವೆಂದು ಪ್ರಕಟಂ, to make great noise by slapping or clapping the arms (one Ms. ಕೋಪೋದ್ರೇಕೇ, to enrage).

209. ಕುರುಳ್ಚು. ಶಸ್ತ್ರಸಂಚಾಲನೇ, to shake a weapon.

210. ಉರುಳ್ಚು. ನಿಮ್ನಾಗಮನಕರಣೇ, to cause to roll down.

211. ಹರಳ್ಚು. ನೇತ್ರವಿರೋಧಕರಣೇ, to impede or trouble the eye.

212. ಎಡಲ್ಚು. ಆಲಂಬನೇ, to cause to hang down, etc.

213. ಕಡಲ್ಚು. ಪೃಥಕ್ಕರಣೇ, to separate.

214. ಬಡಲ್ಚು. ನಿಶ್ಚೇಷ್ಟಾಯಾಂ, to deprive of motion, activity, etc.

215. ಬೞಲ್ಚು. ಅಧಃಸ್ರಂಸನೇ, to cause to fall down, etc.

216. ಅಗುೞ್ಚು. ಜಲಾಶಯಮಗ್ನೇ, to cause to sink in a piece of water.

217. ಅಡಲ್ಚು. ದುಃಖೋತ್ಪಾದನೇ, to make sorrowful.

218. ಕಿವುೞ್ಚು. ಹಸ್ತಮರ್ದನೇ, to crush with the hand.

219. ನೆಗೞ್ಚು. ವಿಖ್ಯಾತೌ, to make famous; ಉದ್ಯೋಗೇ ಚ, to cause to engage in.

220. ತಗುೞ್ಚು (ತಗುಳ್ಚು). ಉದ್ಯೋಗೇ, to engage in; ಅಗ್ನಿಬಾಧನೇ ಚ, to set on fire.

5. ಜಾಂತಕ್ಕೆ.

221. ಅಂಜು. ಭಯೇ, to fear.

222. ಪಿಂಜು. ಪೃಥಕ್ಕರಣೇ, to separate.

223. ನಂಜು. ಈಷಲ್ಲೇಹನೇ, to lick a little, etc. ವಿಷೇ ಚ, poison.

224. ಬೆರಂಜು. ಚಯನೇ, ಚಯನವೆಂದೊಟ್ಟಗೂಡುವುದು, to collect together.

225. ಮಾಂಜು. ಅಪಲಾಪೇ, to conceal.

6. ಟಾಂತಕ್ಕೆ.

226. ದಾಂಟು. ಲಂಘನೇ, to jump over, cross.

227. ದೂಂಟು. ಏಕಪಾದಗತೌ, to walk on one leg.

228. ಕೂಂಟು. ವಿಕೃತಗತೌ, to walk in a disfigured manner, to halt.

229. ಮೀಂಟು. ಉತ್ಪಾಟನೇ, to pull out; ಉತ್ಕರ್ಷದ್ರವ್ಯೇ ಚ, an instrument for pulling up.

230. ಈಂಟು. ಪಾನೇ, to drink.

231. ನಾಂಟು. ಅಂತರ್ಭೇದೇ, to be pierced into.

232. ತೆಂಟು. ಶೂರ್ಪಕರಣೇ, to winnow.

233. ಸೀಂಟು. ಗುದಸಂಮಾರ್ಜನೇ, to rub the anus, etc.

234. ಬೆರಂಟು (238). ಅಂಗುಲಿಕ್ರಿಯಾಯಾಂ, to make a certain performance with the fingers.

235. ಮುರುಂಟು. ದಹನಕರಣೇ, to cause to burn.

236. ಸುರುಂಟು. ಸಂಕೋಚನೇ, to contract, to shrivel.

237. 238. ಕೆರಂಟು. ಚೆರಂಟು. ನಖಖನನೇ, to dig with the nails or claws.

239. ತೆರಂಟು. ನಿವಸನೋದ್ವಹನೇ, ನಿವಸನೋದ್ವಹನವೆಂದು ಮದುವೆಯ ಮುಯ್ಯ ಸೀರೆ, to make a gift of raiment at a wedding.

240. ಉರುಟು. ಅತಿಕ್ರಮಣೇ, to be overbearing.

241. ತಾಟು. ಸಂಘಟ್ಟನೇ, to come into close contact.

242. ಬಗಟು. ಊರುವಿಶ್ಲೇಷೇ, to disunite the legs.

243. ಪುಟ್ಟು. ಉತ್ಪತ್ತೌ, to be born; ದಾರುಹಸ್ತೇ ಚ, a wooden ladle.

244. ಕಟ್ಟು. ಬಂಧನೇ, to bind, to build; ಪಕ್ವಧಾನ್ಯರಸೇ ಚ, the decoction of any kind of pulse.

245. ಕುಟ್ಟು. ತಾಡನೇ, to strike; to pound.

246. ಜಟ್ಟು. ಗಾಢಪ್ರವೇಶೇ, to cause to enter firmly; ಪರ್ವತೇ ಚ, a mountain.

247. ಮುಟ್ಟು. ಸ್ಪರ್ಶನೇ, to touch; ಉಪಕರಣೇ ಚ, utensils, implements.

248. ಕಿಟ್ಟು. ಸ್ಪರ್ಶನೇ, to touch.

249. 250. 251. ಅಟ್ಟು. ಅಜೆಯಟ್ಟು (ಅಜೆ+ಅಟ್ಟು). ಎಬ್ಬಟ್ಟು (ಎಬ್ಬ+ಅಟ್ಟು). ಅನುಧಾವನೇ, to run after.

252. ಮೆಟ್ಟು. ಪದವಿನ್ಯಾಸೇ, to place the foot, step; ಪಾದತ್ರಾಣೇ ಚ, a sandal.

253. ತಿಟ್ಟು. ಭರ್ತ್ಸನೇ, to abuse; ಉನ್ನತ ಭೂಮೌ ಚ, a high ground.

254. ಸುಟ್ಟು. ಅಂಗುಲಿದರ್ಶನೇ, to point at with the finger.

255. ಕಿಡುಕುಟ್ಟು (ಕಿಡು + ಕುಟ್ಟು). ಸಂಘಟ್ಟನೇ, to come into close contact,

256. ಸಮಕಟ್ಟು (ಸಮ + ಕಟ್ಟು), ವಿಧಾನೇ, to arrange.

257. ಗುಡಿಕಟ್ಟು (ಗುಡಿ + ಕಟ್ಟು). ವರ್ಣಪೂರರೇಖಾಯಾಂ, ವರ್ಣಪೂರರೇಖೆಯೆಂದು ಕುಂಡಲೀಕರಣಂ, a ring or halo to form.

258. ತಟ್ಟು. ತಾಡನೇ, to strike; ಕ್ಷಪಣಕಾಚ್ಛಾದನೇ ಚ, the cloth of a Jaina mendicant.

259. ಎಟ್ಟು. ಊರ್ಧ್ವಗತವಸ್ತುಗ್ರಹಣೇ, to reach a thing placed on high.

260. ಒಟ್ಟು. ಏಕಕ್ರಿಯಾಯಾಂ, to make one, to put together.

7. ಡಾಂತಕ್ಕೆ.

261. ಜಡಿ. ತರ್ಜನೇ, to menace; ಅಲ್ಪವೃಷ್ಟೌ ಚ, fine small rain.

262. ಬಡಿ. ತಾಡನೇ, to strike; ಸ್ವಲ್ಪದಂಡೇ ಚ, a short staff.

263. ನುಡಿ. ವಚನೇ, to speak.

264. ಪಿಡಿ. ಗ್ರಹಣೇ, to seize; ಕರಿಣ್ಯಾಂ ಚ, a female elephant.

265. ಸಿಡಿ. ವಿಕೀರ್ಣೇ, to scatter; ಸೂಕ್ಷ್ಮತಯಸ — ದಾಹಾಂತಗಳ ಕ್ರೋಧವಸ್ತುನೋಃ; ಸೂಕ್ಷ್ಮವೆಂದು ಕಾಣ ಬಾರದ ಹಾಂಗಿರ್ದ ಭಾವಂ, the state of being small, etc. ಅಯಸವೆಂದು ಮಚ್ಚುದು, an iron hook; ದಾಹಾಂತದಲ್ಲಿಯುಂ (o. r.

ದಾಹಂ—) ಗಜದಲ್ಲಿಯು ಮುಂಟು.

266. ಕುಡಿ. ಪಾನೇ, to drink; ವಲ್ಲ್ಯಗ್ರೇ ಚ, the point of a creeper.

267. ಮಿಡಿ. ಅಂಗುಲಿಪ್ರಹರಣೇ, to strike with the finger; ಶಲಾಟುಫಲೇ ಚ, unripe fruit.

268. ಮುಡಿ. ಕೇಶಬಂಧನೇ, to tie (or set in) the hair; ನಿರ್ವಹಣೇ ಚ, to end.

269. ಒಡಿ. ಮೋಟನೇ, to break; ರೋಗಭೇದೇ ಚ, a kind of sickness.

270. ಕಡಿ. ಖಂಡನೇ, to cut; ಶಕಲೇ ಚ, a piece, a potsherd.

271. ಮಡಿ. ಮರಣೇ, to die; ಧೌತವಸ್ತ್ರೇ ಚ, a washed cloth.

272. ಗಿಡಿ. ಕಬಳಪ್ರವೇಶೇ, to enter in, or make enter, by mouthfuls.

273. ಇಡಿ. ಚೂರ್ಣೇ, to be powdered; ಸಂಕೀರ್ಣೇ ಚ, to be crowded.

274. ಅಡು. ಪಚನೇ, to cook.

275. ಸುಡು. ದಾಹೇ, to burn.

276. ತುಡು. ಶರಸಂಧಾನೇ, to fix the arrow (to the bow); ಭೂಷಣಾವರಣೇ ಚ, to put on, as ornaments etc.

277. ಕುಡು. ಪ್ರದಾನೇ, to give; ವಕ್ರೇ ಚ, crooked.

278. ಬಿಡು. ವಿಮೋಚನೇ, to let go, etc.

279. ಉಡು. ವಸ್ತ್ರಪ್ರವೇಷ್ಟನೇ, to enter into clothes; ಮೃಗವಿಶೇಷೇ ಚ, a large kind of lizard.

280. ನಡು. ಸಂಸ್ಥಾಪನೇ, to plant; ಮಧ್ಯೇ ಚ, the middle, the waist.

281. ಪಡು. ಮರಣೇ, to die, ಶಯನೇ ಚ, to repose.

282. ಸೆಡು. ಸ್ಯೂತೇ, to be sewn, stitched, united; to sew, etc.

283. ಇಡು. ಕರವಿಮೋಚನೇ, to let go or send off from the hand, etc.

284. ಕಿಡು. ವಿನಾಶೇ, to be ruined.

285. ಮಡು. ದೃಢಸಂಧಾನೇ, to put firmly or close together; ಅಗಾಧಜಲೇ ಚ, deep water.

286. ಆಡು. ನರ್ತನೇ, to dance, to play; ಅಜೇ ಚ, a goat.

287. ಪಾಡು. ಗಾನೇ, to sing.

288. ನೋಡು. ಪ್ರೇಕ್ಷಣೇ, to see.

289. ಕಾಡು. ಅವಹೇಲನೇ, to treat disrespectfully, etc. ಅರಣ್ಯೇ ಚ, a forest.

290. ತೋಡು. ನಿಷ್ಕ್ರಮಣೇ, to go out, come forth; ಯುಗ್ಮೇ ಚ, a pair.

291. ನೀಡು. ಪ್ರಸಾರಣೇ, to stretch out.

292. ಓಡು. ಪಲಾಯನೇ, to flee; ಭಾಂಡಶಕಲೇ ಚ, a potsherd.

293. ಮಾಡು. ಕರಣೇ, to make, to do; ಕುಡ್ಯವಿಶೇಷೇ ಚ, a niche in a wall.

294. ತೀಡು. ವಾಯುಸ್ಪರ್ಶನೇ, to touch, as sin or wind, etc.

295. ಸೂಡು. ಪುಷ್ಪಧಾರಣೇ, to dress with flowers; ತೃಣಾದಿಪೂರೇ ಚ, a bundle, as of grass.

296. ಕೂಡು. ಸಂಮೇಲನೇ, to come together.

297. ಊಡು. ಭೋಜನಕ್ರಿಯಾಯಾಂ, to take food, etc., ಆಧಾರೇ ಚ, a support, a prop.

298. ಮೂಡು. ಉತ್ಪತ್ತೌ, to be born, to rise.

299. ಕೋಡು. ಶೈತ್ಯೇ, to be cold; ಭಯೇ, to fear; ಶೃಂಗೇ ಚ, a horn.

300. ಬೇಡು. ಯಾಚ್ಞಾಯಾಂ, to beg; ಶಬರಸಮೂಹೇ ಚ, a company of Śabaras.

301. ಬಾಡು. ಮ್ಲಾನೇ, to fade; ಮಾಂಸೇ ಚ, flesh.

302. ಹೂಡು. ಯೋಜನೇ, to join, to harness.

303. ಅಬ್ಯಾಡು (ಅಬ್ಯ+ಆಡು). ನಿರವಶೇಷೇ, ನಿರವಶೇಷವೆಂದಿಲ್ಲವಾದುದು, to be consumed or finished.

304. ತಡವಮಾಡು. ತಡಂಮಾಡು (ತಡಂ+ಮಾಡು). ವಿಪರ್ಯಾಸೇ, to delude, perplex, etc.

305. ಓಲಾಡು (ಓಲ್+ಆಡು). ಜಲಖೇಲನೇ, to move to and fro in water, etc.

306. ಏಸಾಡು (ಏಸು+ಆಡು). ಶರಗತೌ, to shoot, as an arrow.

307. ಈಸಾಡು (ಈಸು+ಆಡು). ಜಲೋತ್ತರಣೇ, to cross water, to swim.

308. ಬೀಸಾಡು (ಬೀಸು+ಆಡು). ಕರವಿಮೋಚನೇ, to let go from the hand, to throw away.

309. ಹರಡು. ಅಂಗುಲಿಖನನೇ, to dig with the fingers, etc.; ಚರಣಾಂಗಭೇದೇ ಚ, the ankle.

310. 311. ಕದಡು. ಕಲಡು. ಕಲುಷೇ, to become turbid.

312. ಮುದುಡು. ಸಂಕೋಚನೇ, to contract, shrink, etc.

313. ಹೊರಡು. ಪರಿಲುಠನೇ, (ಪರಿಲುಠನವೆಂದು ಹೊರಳ್ವುದು), to roll about, to welter, etc.

314. ಔಡು. ದಂತಚರ್ವಣೇ, to chew with the teeth.

315, 309. ಹರಡು. ಪ್ರಸಾರಣೇ, to spread; ಗುಲ್ಫೇ ಚ, the ankle.

316. ಅಲ್ಲಾಡು (ಅಲು+ಆಡು). ಸಂಚಲನೇ, to shake.

317. ಕೊಂಡಾಡು (ಕೊಂಡು+ಆಡು). ಅತ್ಯಾದರೇ, to show excessive regard, to praise.

318. ಆಸೆವಡು (ಆಸೆ+ಪಡು). ಈಪ್ಸಾಯಾಂ, to desire.

319. ಪಡಲಿಡು (ಪಡಲ್+ಇಡು). ವಿಕೀರ್ಣಪತನೇ, to fall scattered.

320. ಮುಂಬಿಡು (ಮುಂಬು+ಇಡು). ಪುರೋಗಮನೇ, to go or place before (?).

321. ಹೊಲಬುಗಿಡು (ಹೊಲಬು+ಕಿಡು). ದಿಗ್ಭ್ರಮಣೇ, to become bewildered.

322. ಒಡಂಬಡು (ಒಡಂ+ಪಡು). ಅಭ್ಯುಪಗಮೇ, to agree.

323. ಮೂಗುವಡು (ಮೂಗು+ಪಡು). ಮೌನೇ, to become silent.

324 *a*. 324 *b*. 324*c*. 324 *d*. ಬಿಸಾಡು (*cf* 308). ಬಿಸುಡು. ಹೋಗಾಡು (ಹೋಗು+ಆಡು). ಈಡಾಡು (ಈಡು+ಆಡು). ಪ್ರಮಾದತ್ಯಜನೇ, to throw away madly, etc.

325. ಅಳ್ಕಜಂಬಡು. ಅಸೂಯ್ಯೇ, to envy.

326. ಕರುವಿಡು (ಕರು+ಇಡು). ಲೇಪ್ಯಕರ್ಮಣೀ, to mould, etc.

327. ತಿಟ್ಟವಿಡು (ತಿಟ್ಟ+ಇಡು). ಚಿತ್ರಪ್ರಾರಂಭೇ, to delineate, etc.

328. ಉಬ್ಬಸಂಬಡು (ಉಬ್ಬಸಂ+ಪಡು). ಉತ್ಸಾಹನಿಗ್ರಹೇ (o. r. ಉಚ್ಛ್ವಾಸನಿಗ್ರಹೇ), to become asthmatic.

329. ದಾಳಿಡು (ದಾಳ್ + ಇಡು). ದೂರಧಾವನೇ, to rush far, etc.

330. ಗೋಳಿಡು (ಗೋಳ್ + ಇಡು). ಆಕ್ರೋಶಧ್ವನೌ, to roar, to howl.

331. ಊಳಿಡು (ಊಳ್ + ಇಡು). ಜಂಬುಕಸ್ವನೌ, to howl as a jackal.

332. ಮೆಯ್ವಿಡು (ಮೆಯ್ + ಬಿಡು). ನಿಃಶಂಕತಾಯಾಂ, to be without hesitation, be fearless.

333. ಕೂಗಿಡು (ಕೂಗು + ಇಡು). ಉಚ್ಚೈರ್ಧ್ವನೌ, to cry aloud.

334. ಬಾಯ್ವಿಡು (ಬಾಯ್ + ಬಿಡು). ದೈನ್ಯೇ, to grow low-spirited, etc.

335. ಬೆಕ್ಕಸಂಬಡು (ಬೆಕ್ಕಸಂ + ಪಡು). ವಿಸ್ಮಯೇ, to be surprised.

336. ಪೊಡಮಡು (ಪೊಡ + ಮಡು). ನಮಸ್ಕಾರೇ, to make obeisance.

337. ತಲೆಮಡು (ತಲೆ + ಮಡು). ಶಿರಸ್ಸಂಧಾನೇ, to join heads, (o. r. ತಲೆವಡು).

338. ರೂಪಿಡು (ರೂಪು + ಇಡು). ಕ್ರೋಧನಿರ್ದೇಶೇ, to indicate anger or passion.

339. ಕಾಪಿಡು (ಕಾಪು + ಇಡು). ಸಂರಕ್ಷಣೇ, to protect.

340. ಬೇರ್ಪಡು (ಬೇರ್ + ಪಡು). ವಿವಿಕ್ತೇ, be separated; ವಿವರೇ ಚ, to be spread out, etc.

341. ನೇರ್ಪಡು (ನೇರ್ + ಪಡು). ಸಂಶ್ಲೇಷೇ, to be united, etc.

342. ಒಡ್ಡು. ಪ್ರತೀಕಾರೇ, to counteract, oppose; ವ್ಯೂಹೇ ಚ, a mass, etc.

343. ಹಿಂಡು. ಮುಷ್ಟಿನಿಷ್ಪೀಡನೇ, to squeeze out with the fist (o. r. ನಿಷ್ಪೀಡನೇ) ಗೋಸಮೂಹೇ ಚ, a herd of cattle.

344. ಚಿವುಡು. ನಖಚ್ಛೇದೇ, to cut off with the nails.

345. ಕೈಮಾಡು (ಕೈ + ಮಾಡು). ಶಸ್ತ್ರಸಂಚಾಲನೇ, to brandish a weapon; ವ್ಯವಹಾರಮೌಲ್ಯಸಂಕೇತನೇ ಚ, to fix the price in bargaining, etc.

346. ಬಾಯ್ಮಾಡು (ಬಾಯ್ + ಮಾಡು). ಪ್ರತಿಜ್ಞಾಯಾಂ, to assert, etc.

347. ಕೊಡಚಾಡು (ಕೊಡಚು + ಆಡು). ಮರ್ಮೋದ್ಘಾಟನವಚನೇ, to speak so as to reveal a secret, etc.

348. ಜೋಡಾಡು (ಜೋಡು + ಆಡು). ವಿಕೃತಾಂಗಾಪಹಸನೇ, to deride with grimaces, etc.

349. ಒಡೆ. ಸ್ಫೋಟನೇ, to break; ದ್ರವ್ಯೇ ಚ, a broken piece.

350. ಪೊಡೆ. ಪ್ರಹರಣೇ, to strike; ಕುಕ್ಷೌ ಚ, the belly.

351. ಸೆಡೆ. (o. r. ಸಿಡೆ). ಅಸ್ಥೌಲ್ಯೇ, ಅಸ್ಥೌಲ್ಯವೆಂದು ಪೆರ್ಚುಗೆ, to increase; ರಸಧಾನ್ಯಾಕರ್ಷಣಪಾತ್ರೇ ಚ, a vessel for the reception of liquids and corn.

352. ಕೆಡೆ (o. r. ಕಿಡೆ). ಪತನೇ, to fall.

353. ಅಡೆ. ಅಂಗುಲಿಪ್ರಹರಣೇ, to strike or throw with the finger; ಪಂಚಕಾರುಕಕರ್ಮದಾರೌ ಚ, a piece of wood used by artisans.

354. ಪಡೆ. ಉಪಾರ್ಜನೇ, to acquire; ಬಲೇ ಚ, an army.

355. ಕಡೆ. ಮಥನೇ, to churn; ಅವಸಾನೇ ಚ, end, termination.

356. ತಡೆ. ಕಾಲಕ್ಷೇಪೇ, to delay.

357. ತೊಡೆ. ಸಂಮಾರ್ಜನೇ, to wipe, etc.; ಅಂಗೇ ಚ, the thigh.

358. ನಡೆ. ಗಮನೇ, to walk.

359. ಕಟ್ಟುವಡೆ (ಕಟ್ಟು + ಪಡೆ). ಮನೋನಿರೋಧೇ, the mind to be fettered, etc.

360. ಮೊಗಂಬಡೆ (ಮೊಗಂ + ಪಡೆ). ಅನುನಯೇ, to be polite, etc.

361. ಜೇವಡೆ (ಜೇ + ಪಡೆ). ಸಿಂಜಿನಿಪ್ರಹರಣೇ, to twang a bow-string (o. r. ಜೇವೊಡೆ).

8. ಣಾಂತಕ್ಕೆ.

362. ಮಣಿ. ನಮನೇ. to bow; ಭಯ-ರತ್ನಯೋಃ, fear; a gem.

363. ಕುಣಿ. ನರ್ತನೇ, to dance.

364. ತಿಣಿ. ಸಂಕೀರ್ಣೇ, to be mixed together, etc.

365. ತಣಿ. ತೃಪ್ತೌ, to be satisfied.

366. ಅಣಿ. ಸ್ಪರ್ಶನೇ, to come in contact with (o. r. ಅಣೆ).

367. ಉಣ್. ಭೋಜನೇ, to take a meal.

368. ಕಾಣ್. ದರ್ಶನೇ, to see.

369. ಮಾಣ್. ನಿವಾರಣೇ, to cease, etc.

370. ಪೂಣ್. ಪ್ರತಿಜ್ಞಾಯಾಂ, to promise, to assent, etc.

371. ಪಣ್ (ಪಣ್ಣು). ಸಜ್ಜೀಕರಣೇ, to make ready; ಫಲೇ ಚ, a ripe fruit.

372. ಅಣೆ (*cf.* 366). ಅಂಗುಲಿಪ್ರಹರಣೇ, to strike or propel with the finger; ಜಲಪ್ರತಿಬಂಧನೇ ಚ, a water-dam.

373. ಸೊಣೆ. ಅಂಗುಲಿಪ್ರಹರಣೇ, to strike with the fingers, etc.

374. ಪೆಣೆ. ಮಿಶ್ರಬಂಧನೇ, to unite miscellaneous things, twist, etc.; ಸಂಯೋಗೇ ಚ, to be joined together.

375. ಸೆಣೆ. ಕ್ರೋಧೇ, to be angry.

376. ನೊಣೆ. ಗಿಲನೇ, to swallow.

377. ಟೊಣೆ. ಶಠಾರ್ಥೇ, to cheat, etc.

9. ತಾಂತಕ್ಕೆ.

378. ಒತ್ತು. ಆಕ್ರಮಣೇ, to press, etc. ನದೀತೀರೇ ಚ, the bank of a river.

379. ಸುತ್ತು. ವೇಷ್ಟನೇ, to surround.

380. ಮುತ್ತು. ನಿರೋಧಾವರಣೇ, to cover so as to obstruct, hem in; ಮೌಕ್ತಿಕೇ ಚ, a pearl.

381. ಕೆತ್ತು. ಸ್ಪಂದನೇ, to quiver.

382. ಕುತ್ತು. ಘಾತನೇ, to strike, beat.

383. ಕೆತ್ತು. ತನೂಕರಣೇ, to make thin, chip.

384. ತುತ್ತು. ಕಬಲನೇ, to take by mouthful.

385. ಪತ್ತು. ಸಂಶ್ಲೇಷೇ, ಸಂಶ್ಲೇಷವೆಂದು ಪೊಂದುಗೆ, to be in contact; ಕಲಹ-ಸಂಖ್ಯಯೋಃ a fight; the number 10.

386. ಬತ್ತು. ನಿರ್ದ್ರವೇ, to lose wetness, dry up.

387. ಬಿತ್ತು. ಬೀಜಸ್ಥಾಪನೇ, to put seeds, sow; ಬೀಜೇ ಚ, a seed.

388. ಪೊತ್ತು. ಅಗ್ನಿಪಟೂಕರಣೇ, to be kindled, etc.; ಅತಿಪಕ್ವಾಂನೇ ಚ, to be burnt, as rice etc.

389. ತೇ. ಅಪಸರಣೇ, to move off, go away, etc.

390. ತೋ. ಆರ್ದ್ರೀಕರಣೇ, to make wet; to be wet.

10. ದಾಂತಕ್ಕೆ.

391. ಹದಿ. ಖನನವಿವರಣೇ, to uncover by digging, etc.

392. ಪುದಿ. ಅಚ್ಛಾದನೇ, to be covered; ದ್ವಾರಪಾರ್ಶ್ವೇ ಚ, the side of a door.

393. ಗುದಿ. ಪಾದಬಂಧನೇ, to tie the feet.

394. ಮಿದಿ. ಮುಸಲಿಕ್ರಿಯಾಯಾಂ, to work with the pestle, to pound; ಘಾತ-ಮರ್ದನಯೋಃ, to kill, to grind.

395. ಕುದಿ. ಸಂತಾಪೇ, to boil, etc.

396. ಕಾದು. ಯುದ್ಧೇ, to fight.

397. ಮೋದು. ತಾಡನೇ, to strike.

398. ಓದು. ಪಠನೇ, to read.

399. ಊದು. ಶ್ವಾಸಪ್ರಹರಣೇ, to strike with the breath, to blow.

400. ಉರ್ದು. ಸಂನಿಘೃಷ್ಟೇ, to rub; ಮಾಷೇ ಚ, a kind of pulse.

401. ಗುರ್ದು. ಮುಷ್ಟಿತಾಡನೇ, to strike with the fist.

402. ತಿರ್ದು. ಋಜೂಕರಣೇ, to make straight or right.

403. ಬರ್ದು. ಮರಣೇ, to die.

404. ಪೊರ್ದು. ಸಮೀಪೇ, to be near.

405. ಅೞ್ದು. ಜಲಮಗ್ನೇ, to sink under water, dive (o. r. ಅೞ್ದು).

406. ತಾಳ್ದು. ಧಾರಣೇ, to hold, etc.

407. ಮೊಳ್ದು. ಅತಿಕ್ರಮಣೇ, to transpass, to transgress.

408. ತಿಮುಳ್ದು. ಚಯನೇ, to amass.

409. ಸೇಂದು. ಜಲನಿಷ್ಕ್ರಮಣೇ, to draw up water.

410. ನಾಂದು. ದ್ರವೀಕರಣೇ, to liquefy, etc.

411. ಹೊಂದು. ಮರಣೇ, to die.

412. ಸುಂದು. ಮೈಥುನೇ, to lie with; ಶಯನೇ ಚ, to lie down.

413. ನಂದು. ವಿನಾಶೇ, to perish; ಗತತೇಜಸಿ ಚ, to lose one's splendour.

414. ಮಾಂದು. ಪ್ರತಿಷೇಧೇ, to stop, etc. (o. r. ಪ್ರಸಿದ್ಧೇ).

415. ಒಂದು. ಸಂಮೇಲನೇ, to be united; ಸಂಖ್ಯಾಯಾಂ ಚ, the number 1.

416. ಕಂದು. ಗತಕಾಂತೌ, to lose one's lustre; ಪೇಷಣಾಗ್ರಶಿಲಾಯಾಂ ಚ, the top-stone in grinding.

417. ಕುಂದು. ಕ್ಷಯೇ, to decrease; ಪಶುರೋಗೇ ಚ, a disease of cattle.

418. ಮುಂದು. ಪುರಸ್ಸರಣೇ, to go before; ಅಗ್ರೇ ಚ, the front.

419. ಒದೆ. ಪಾದಪ್ರಹರಣೇ, to strike with the foot.

420. ಹೊದೆ. ಆಚ್ಛಾದನೇ, to cover; ಶರಕೋಶೇ ಚ, an arrow-hold, quiver.

421. ತದೆ. ತಾಡನೇ, to strike.

422. ಸದೆ. ಈಷಚ್ಚೂರ್ಣೇ, to crush a little or slightly, to squash.

423 *a*. ಪದೆ. ಇಚ್ಛಾಯಾಂ, to desire.

423 *b*. ಮುದು. ವೃದ್ಧೌ, to grow old, etc.

423c. ಪೊದೆ. ಮುಂಜಾತ್ಯಣೇ, the grass *Saccharum munja* (not in all Mss.).

11. ನಾಂತಕ್ಕೆ.

424. ಮುನಿ. ಕ್ರೋಧೇ, to be angry. ತಪಸ್ವಿನಿ ಚ, an ascetic.
425. ಕುನಿ. ಆಕುಂಚನೇ, to bend (v. i.); ವಕ್ರಭೂಮೌ ಚ, crooked or bent ground.
426. ಹನಿ. ಬಿಂದುಪತನೇ, to fall in drops.
427. ನಾನ್. ಆರ್ದ್ರಭಾವೇ, to become wet.
428. ಬಾನ್. ಕುಲಾಲಕರಣೇ, to do the work of a potter; ಆಕಾಶ-ಗೋಮಯಪಿಂಡಪುಂಜಯೋಃ, the sky; a heap of cakes of cowdung.
429. ಆನ್. ಧಾರಣೇ, to hold.
430. ನೋನ್. ವ್ರತಾಚರಣೇ, to perform a vow.
431. ಸೀನ್. ಕ್ಷುತಕರಣೇ, to sneeze.
432. ಕೂನ್. ಆನಮೇ, to bend.
433. ಪೇನ್ (o. r. ಹೇನ್). ಯೂಕಸಮೃದ್ಧೌ, lice to increase.
434. ಈನ್. ತಿರ್ಯಕ್ಪ್ರಸವೇ, to bring forth, as cattle and other beasts.
435. ತಿನ್. ಖಾದನೇ, to eat.
436. ಎನ್. ಭಾಷಣೇ, to say.
437. ನೆನೆ. ಸ್ಮರಣೇ, to remember.
438. ನನೆ. ಆರ್ದ್ರಭಾವೇ, to become wet; ಪುಷ್ಪಕುಟ್ಮಲೇ, ಚ, a flower-bud.
439. ತೊನೆ. ಆಂದೋಲನೇ, to swing backwards and forwards.
440. ಕೊನೆ. ಸ್ವೀಕೃತಾರ್ಥವರ್ಧನೇ, to succeed in one's adopted cause; ಅಗ್ರೇ ಚ, point, top.
441. ಒನೆ. ಶೂರ್ಪಕರಣೇ, to winnow.
442. ನೋ; ವ್ಯಥನೇ, to suffer pain.

12. ಪಾಂತಕ್ಕೆ.

443. ಪೂ. ಪುಷ್ಪಸಂಭವೇ, to bloom; ಪುಷ್ಪೇ ಚ, a flower.
444.* ಪರೆಪು. ಪ್ರಸಾರೇ, to spread (o. r. ಪರಪು).
445. ನೆರೆಪು (o. r. ನೆರಪು). ಸಂಗ್ರಹೇ, to collect.
446. ತಿರುಪು. ಭ್ರಮಣೇ, to turn round.
447. ಉರಿಪು (o. r. ಉರುಪು). ಅಗ್ನಿಬಾಧೇ, to cause to burn or flame.
448. ಮುರಿಪು. ಮುಷ್ಟಿಭ್ರಮಣೇ, to whirl the fist.
449. ತಣಿಪು. ತೃಪ್ತೌ, to satisfy.
450. ಪೋಪು. ಆಸನ್ನಗಮನೇ, ಆಸನ್ನಗಮನವೆಂದು ಗಮನೋದ್ಯುಕ್ತಂ, to be zealously active in going (*cf.* 91).
451. ಮಡಿಪು. ಮರಣಕರಣೇ, to kill.
452. ಕೆಡಪು. ಪತನೇ, to make fall (o. r. ಕೆಡೆಪು, ಕಿಡಪು).
453. ಕೊಡಪು. ಕರವಿಕೀರ್ಣೇ, to scatter about with the hand.
454. ಸಲಪು. ರಕ್ಷಣೇ, to preserve, etc.
455. ಇಳಿಪು. ಅಧಃಸ್ಥಾನೇ, to cause to descend, to lower.
456. ಗಳಿಪು. ಬಹುಭಾಷಣೇ, to chatter.
457. ಕಳಿಪು. ಅನುಗಮನೇ, to send after.
458. ತಿಳಿಪು. ಕ್ರೋಧೋತ್ಸರ್ಜನೇ, to abandon one's anger.

459. ಅಬಿಪು. ಲೋಪತ್ವೇ, to destroy.
460. ಉಬಿಪು. ಶೇಷಕರಣೇ, to let remain.
461. ಅಪ್ಪು. ಆಲಿಂಗನೇ, to embrace; ಉದಕೇ ಚ, water.
462. ಒಪ್ಪು. ಸೌಂದರ್ಯೇ, to be beautiful: ಅಂಗೀಕಾರೇ ಚ, to agree to, etc.
463. ಸೊಪ್ಪು. ನಿವಾರಣೇ, to keep off, etc.
464. ತಪ್ಪು. ಸ್ಖಲನೇ, to slip, to err.
465. ಜಪ್ಪು. ಪ್ರಹರಣೇ, to strike.
466. ಕಪ್ಪು. ಖನನೇ, to dig.
467. ಕುಪ್ಪು ಪುಂಜೀಕರಣೇ, to heap together; ರೋಗಭೇದೇ ಚ, a kind of disease.

13. ಬಾಂತಕ್ಕೆ.

468. ಬೀ. ಅವಸಾನೇ, to end, perish.
469. ನಂಬು. ವಿಶ್ವಾಸೇ, to trust.
470. ತುಂಬು. ಪೂರಣೇ, to become full: ವೃಂತ-ಜಲಪ್ರಣಾಲ್ಯೋಃ, the foot-stalk of a flower, leaf or fruit: a flood-gate, etc.
471. ತಿಂಬು. ಪೂರಣೇ, to fill.
472. ಅಂಬು. ಶೋಷಣೇ, to dry; ಶರೇ ಚ, an arrow.
473. ನಾಂಬು. ಆಲಸ್ಯೇ, to be idle.
474. ಅಲಂಬು. ಜಲಕ್ಷಾಲನೇ, to wash with water.
475. ತಱುಂಬು. ಗತಿಸ್ತಂಭೇ, to stop; ಶಿಲೋದ್ವಹನದಾರೌ ಚ, a wood for lifting stones, a lever.
476. ಕಱುಂಬು. ಅಸೂಯೇ, to envy.
477. ಉಱುಂಬು. ಯುದ್ಧಕ್ರಮಣಗಮನೇ, to march, march against.
478. ಅಸುಂಬು. ಸಂಚಾಲನೇ, to shake.
479. ಕಲುಂಬು. ಕಲುಷೀಕರಣೇ, to make turbid.
480. 481. ನಿಸುಂಬು. ನಿಲುಂಬು. ಪುಂಜೀಕರಣೇ, to amass.
482. ತುಬ್ಬು. ಚೋರಸೂಚನೇ, to inform against a thief; to be detected as a thief; ತಬ್ಬಿಂಚೇ ಚ, the state of being found out or detected.
483. ಗೆರ್ಬು. ಮೈಥುನೇ, to have sexual intercourse.
484. ಪರ್ಬು. ವಿಸ್ತಾರೇ, to spread.
485. ಕೊರ್ಬು. ಸಮೃದ್ಧೌ, to increase, to fatten.
486. ಉರ್ಬು. ಉತ್ಸಾಹೋದ್ವರ್ತನಯೋಃ, to become full of effort, etc.; to rise or swell.
487. ಜರ್ಬು. ಆಕ್ರಮಣಧ್ವನೌ, to scold, etc. (o. r. ಆಗ್ರಹಧ್ವನೌ).
488. ತರ್ಬು. ಆಶ್ಲೇಷೇ, ಆಶ್ಲೇಷವೆಂದು ಆಲಿಂಗನಂ, to embrace.
489. ಎಬ್ಬು. ಉತ್ಸರ್ಗಣೇ, to rise.
490. ಜೇ. ದಾಹೇ, to be burnt up, etc.
491. ಬಾ. ಶೋಥೇ, to swell.

14. ಮಾಂತಕ್ಕೆ.

492. ಮೀ. ಸ್ನಪನೇ, to bathe.
493. ಕೆಮ್ಮು (ಕಿಮ್ಮು). ಕಾಸೇ, to cough.
494. ಕಮ್ಮು. ದಂತಸ್ವಾಸೇ, breath to be fragrant (o. rs. ದಂತಸ್ವಾನೇ, ಗಂಧಶ್ವಾಸೇ).
495. ಕುಮ್ಮು. ಮುಸಲಕ್ರಿಯಾಯಾಂ,

to work with a pestle, to pound.

496. ಒಮ್ಮು. ಅನುವರ್ತನೇ, to assent, etc.

497. ಚಿಮ್ಮು. ಯುಗಾಂಗುಲಿವಿಮೋಚನೇ, to discharge by means of the fingers, etc.; ಶಸ್ತ್ರಕ್ರಿಯಾಯಾಂ ಚ, to brandish a weapon.

498. ಹಮ್ಮು. ರಜ್ಜುಕ್ರಿಯಾಯಾಂ, to make or twist a rope.

499. ನೆಮ್ಮು. ಪೃಷ್ಟಸ್ಥಾಪನೇ, to lean on, etc.

500. ಅಣ್ಮು. ಪೌರುಷೇ, to be strong.

501 *a*. ಪೊಣ್ಮು. ಉದ್ಗಮನೇ, to rise, appear.

501 *b*. ಉಣ್ಮು. ಉದ್ಗತೌ, to rise etc.

502. ಕಯ್ಗಣ್ಮು (ಕಯ್ಗೆ + ಅಣ್ಮು). ಅತಿಕ್ರಮಣೇ, to overstep, etc,

503. ಕರೆಗಣ್ಮು (ಕರೆಗೆ + ಅಣ್ಮು). ಕೂಲಾತಿಕ್ರಮಣೇ, to overstep the boundary.

504. ನವೆ. ಗುರುಯಾಸ್ಯೇ, to become insignificant in bulk, etc; ದಾರಿದ್ರ್ಯೇ ಚ, to become poor.

505. ನವೆ. ನಿರ್ವಹಣೇ. to be made ready, etc. ನಿಃಶೇಷೇ ಚ, to wear away, be consumed, etc.

506. ಮೇ. ತಿರ್ಯಗ್ಖಾದನೇ, to eat as beasts do, to graze.

15. ಯಾಂತಕ್ಕೆ.

507. ಪೊಯ್. ತಾಡನೇ, to strike.

508. ಬಯ್. ನಿಕ್ಷೇಪೇ, (o. r. ವಿಕ್ಷೇಪೇ), to put aside, etc.

509. ಗೆಯ್ (also ಕೆಯ್, as would appear from the compounds, 520, 521, 527, 528, 529). ಶಿಲ್ಪೇ, to perform manual or mechanical art, etc.

510. ನೆಯ್. ವಸ್ತ್ರಕ್ರಿಯಾಯಾಂ, to weave; ಘೃತೇ ಚ, clarified butter, ghee.

511. ಕೊಯ್. ಲವನೇ, to cut, reap.

512. ಉಯ್. ನಿಯಾಮೇ, to restrain.

513. ಅರಯ್. ಅನ್ವೇಷಣೇ, to search.

514. ಸುಯ್. ಉಚ್ಛ್ವಾಸೇ, to breathe, sigh.

515. ತೊಯ್ (o. r. ತುಯ್) ಸಾರ್ದ್ರತ್ವೇ, to become wet.

516. ಕಾಯ್. ಫಲೋತ್ಪತ್ತೌ, fruit to grow; ಕೋಪೇ ಚ, to grow angry.

517. ಆಯ್. ವಿರಲವಸ್ತ್ವಾಕರ್ಷಣೇ, to pick up single things, select, etc.; ಆಯುಷ್ಯೇ ಚ, age.

518. ಪಾಯ್. ಲಂಘನೇ, to pass over.

519. ಮನಂಬೊಯ್ (ಮನಂ + ಪೊಯ್). ಸಮಗ್ರಚೇಷ್ಟಾಯಾಂ, ಸಮಗ್ರಚೇಷ್ಟೆಯೆಂದು ಸಂಪೂರ್ಣಚೇಷ್ಟೇ, to be replete with activity, etc.

520. ಕಡು-ಕೆಯ್. ತೀವ್ರತ್ವೇ, to hasten.

521. ಒಳ-ಕೆಯ್-ಅಂತಃಕ್ರಿಯಾಯಾಂ, to do or to put inside, etc.

522. ತಳ್ವೊಯ್ (ತಳ್ + ಪೊಯ್). ಪ್ರತಿಹತೇ, to be obstructed, to hinder, etc.

523. ಕೆಯ್ಗಾಯ್ (ಕೆಯ್ + ಕಾಯ್). ಸಂರಕ್ಷಣೇ, to protect.

524. 525. ತುಬಿಲ್ಗೆಯ್ (ತುಬಿಲ್ + ಗೆಯ್). ನಮಸ್ಕಾರೇ, to make obeisance.

526. ಕೆಯ್ಗೆಯ್ (ಕೆಯ್ + ಗೆಯ್). ಭೂಷಣೋಪ್ಪಹನೇ, to trim, to adorn.

527. ಎಂಬು ಕೆಯ್. ಅನುಮತೌ, to assent.

528. ಇಂಬು ಕೆಯ್ ಸ್ಥಾನಸಂಗ್ರಹೇ, to seize a place.

529. ಅಪ್ಪು ಕೆಯ್. ಅಂಗೀಕರಣೇ, to agree, consent.

530. ಕೆಯ್ಪೊಯ್ (ಕೆಯ್ + ಪೊಯ್). ಪ್ರತಿಜ್ಞಾಯಾಂ, to agree, assent; ತಾಡನೇ ಚ, to clap the hands.

16. ರಾಂತಕ್ಕೆ.

531. ಸರಿ. ಪಲಾಯನೇ, to go backwards, flee; ಸಾಮ್ಯೇ ಚ, equality, etc.

532. ಸುರಿ. ಗಲನೇ, to drop, etc.

533. ಬಿರಿ. ಸ್ಫುಟನೇ to burst, etc.

534. ಅರಿ. ಕೃಂತನೇ, to cut, cut off; ಶತ್ರೌ ಚ, an enemy.

535. ಕಿರಿ. ವಪನೇ, to shave; ತಂತುಗ್ರಂಥಿ-ವರಾಹಯೋಃ a knot in thread; a hog.

536. ಮುರಿ. ವಕ್ರಭಾವೇ, to be bent, grow crooked.

537. ಹರಿ (o. r. ಪರಿ). ಧಾವನೇ, to run, flow, etc.

538. ಉರಿ. ದಹನೇ, to burn; ತರುವಿಶೇಷೇ ಚ, a kind of tree.

539. ಕರಿ. ಅತಿದಾಹೇ, to be burnt, to cinder, be charred; ಗಜೇ ಚ, an elephant.

540. ಹುರಿ. ನಿರ್ದ್ರವಕರಣೇ, to make dry, parch, etc.

541. ಜರಿ. ತೀರಪತನೇ, to slide or slip down, as a bank.

542 ನಿಮಿರ್. ಪ್ರಸಾರಣೇ, to extend, become straight.

543. ಅಮರ್. ಗಾತ್ರಶ್ಲೇಷೇ, to be closely united, be linked to, etc.

544. ಬೆಮರ್. ಸ್ವೇದಭಾವೇ, to be in perspiration.

545. ತಿಮಿರ್. ತ್ವಙ್ಮಲವಿಸರ್ಜನೇ, to do away with filth or excretion of the skin.

546. ಅಡರ್. ಆರೋಹಣೇ, to ascend, climb.

547. ತೊಡರ್. ಬಂಧನೇ, to be bound, etc.; ಬಿರುದಶೃಂಖಲಾಯಾಂ ಚ, a chain of honour.

548. ಬಿಡುರ್. ಅಶೃಂಖಲಾಯಾಂ, to unite.

549. ಪೊದರ್. ಸ್ಫುರಣೇ, to tremble, etc.

550. ಅದಿರ್. ಕಂಪನೇ, to tremble, etc.

551. ಬಿದಿರ್. ವಿಕೀರ್ಣೇ, to be scattered, spread about, etc. ವೇಣೌ ಚ, a bamboo.

552. ಉದಿರ್. ಪತನೇ, to fall down from above, etc.

553. ಅಲರ್. ವಿಕಸನೇ, to open, blossom; ಪುಷ್ಪೇ ಚ a flower.

554. ಮುಲರ್. ಪರಾಙ್ಮುಖೇ, the face to be turned or averted; ಪುಷ್ಪೇ ಚ, a flower.

555. ಪೊರ್. ಮಲ್ಲಯುದ್ಧೇ, to wrestle; ಬಿಲೇ ಚ, a hole.

556. ಸಾರ್. ಸಮೀಪಾಗಮನೇ, to come or go near.

557. ನೇರ್. ಕೃಂತನೇ, to cut, cut off.

558. ಪಾರ್. ಸಮಯಾನ್ವೇಷಣೇ, to search for a time or occasion, look for, etc.

559. ಗೋರ್. ಜಾಲಕರಣೇ, to catch with a net, fish.

560. ಸೇರ್. ಸಾನುಮತೇ, to agree with, etc.

561. ಕೂರ್. ಸ್ನೇಹೇ, to be attached to.

562. ಬಾರ್. ಚರ್ಮವಲ್ಲೀಕರಣೇ, to cut leather lengthwise or in straps; ದ್ರವ-ದ್ರವ್ಯನಿರ್ಮುಕ್ತೌ, to set free a liquid, pour out.

563. ಸೋರ್. ಗಲನೇ, to drop, etc.; ಗರ್ವಹೀನೇ ಚ, to become free from pride.

564. ಕಾರ್. ಖಾದನೇ, to bite; ಜಲದಾಗಮೇ ಚ, the coming of clouds, the rainy season.

565. ಹೀರ್ (o. r. ಪೀರ್). ರಸಾಸ್ವಾದನೇ, to suck a liquid; ಭೂಷಣೇ ಚ, an ornament.

566. ಅರ್. ಉಚ್ಚೈರ್ಧ್ವನೌ, to cry aloud; ಹಲಾನ್ವಿತವೃಷಭಯುಗ್ಮೇ, a pair of oxen yoked to a plough; ದಾರುಭೇದೇ ಚ, a frame put on the neck of cattle when training them.

567. 568. 569. ಕೊನರ್. ಚಿಗುರ್. ತಳಿರ್. ಪಲ್ಲವೋತ್ಪತ್ತೌ, to sprout.

570. ಕನರ್. ಅಪಕ್ವರಸೇ, the taste of something unripe to exist.

571. ಒಸರ್. ಸ್ರವಣೇ, to ooze, etc.

572. 573. ಕಿಸುರ್. ಅಸುರ್. ಅಸಹ್ಯಭಾವೇ, to be of an intolerable nature or very disagreeable.

574. ಉಸಿರ್. ಭಾಷಣೇ, to speak.

575. ಕಸರ್. ಗಲಕಂಡೂತೌ, to scratch the throat, to be astringent to the taste.

576. ಪಸುರ್. ಹರಿತಭಾವೇ, to be green.

577. ತಗರ್. ಗತಿಬಂಧನೇ, to stop, etc.; ಅಜಭೇದೇ ಚ, a he-goat.

578 *a*. ಬಿಗುರ್. ಭಯೇ, to fear.

578 *b*. ಇರ್. ಸ್ಥಾಯಿಭಾವೇ, to be, to stay.

579. ತರ್. ಆನಯೇ, to bring.

580. ಬರ್. ಆಗಮನೇ, to come.

581. 582. 583. ಎಡ್ತರ್ (ಎಡ್+ತರ್), ಎಯ್ತರ್, (ಎಯ್+ತರ್). ಸಾರ್ತರ್ (ಸಾರ್+ತರ್). ಸಮೀಪಾಗಮನೇ, to come near.

584. ಪೊರೆ. ಪೋಷಣೇ, to nourish; ಉಪಸರ್ಗೇ ಚ, nearness, etc.

585. ನೆರೆ. ಸಂಯೋಗೇ, to be united; ಪಾರ್ಶ್ವೇ ಚ, proximity, neighbourhood.

586. ಅರೆ. ಪೇಷಣೇ, to grind; ಅರ್ಧೇ ಚ, half.

587. ಒರೆ. ಕರ್ಷಣೇ, to draw.

588. ಕರೆ. ಆಹ್ವಾನೇ, to call; ವಸ್ತ್ರದಶಾಪವನಗೋಕುಲೇಷು, the border of a cloth; green black-pepper; a herd of kine (?).

589. ಕೊರೆ. ಸ್ತನ್ಯೇ, milk to come to breast, etc.

590. ಕೊರೆ. ನಿದ್ರಾಂಗಧ್ವನೌ, to snore.
591. ಎರೆ. ಯಾಚ್ಞಾಯಾಂ, to beg; ಭೂವಿಶೇಷ — ತಿರ್ಯಗ್ಗ್ರಾಸಯೋಃ, a kind of black soil; food for animals.
592. ಪರೆ. ಪ್ರಸಾರಣೇ, to extend, etc.; ಕಾಲ್ಯೇ ಚ, to dawn (*cf.* 444).
593. ಬರೆ. ವಿಲೇಖನೇ, to write.
594. ಮುರೆ. (o. r. ಮೊರೆ). ಭ್ರಮರಾದಿ ನಿನದೇ, to sound, as a black bee and other insects; ಕಿನ್ನರಿಕ್ರಿಯಾಯಾಂ, to sound as a lute.
595. ಕೆರೆ. ನಖಕ್ರಿಯಾಯಾಂ, to scratch with the nails.
596. ಮಿಳಿರ್. ಲುಠನೇ, to move about, etc.
597. ತಳರ್. ಚಲನೇ, to move, etc.
598 *a*. ಅಳುಪ್. ಆವರಣೇ, to cover.
598 *b*. ತಳಿರ್. ಪಲ್ಲವೋತ್ಪತ್ತೌ, to sprout.
599. ಕಿಳರ್. ಹಯಧ್ವನೌ, to neigh.
600. ಬೆಳರ್. ಧಾವಲ್ಯೇ, to become white or bright.
601. ಕೆಳರ್. ವಿಜೃಂಭಣೇ, to expand, yawn, etc.
602. ಮಿಳಿರ್. ಸಮೃದ್ಧೌ. to increase.
603. ಕುಳಿರ್. ಋಜುಭೇದೇ, to bend, sit down; ಹೈಮೇ ಚ, to be cool or cold.

16. ಲಾಂತಕ್ಕೆ.

604. ಮಲೆ. ಔದ್ಧತ್ಯೇ, to be puffed up, etc.; ವನೇ ಚ, a forest.
605. ಕಲೆ. ಉತ್ಸಾಹಧ್ವನೌ, to shout with energy or for joy.
606. ಒಲೆ. ಆಂದೋಲನೇ, to be in a swinging motion; ಅಶ್ಮಂತಕೇ ಚ, a fire-place.
607. ಅಲೆ. ಪರಿಭಾವ — ಲೋಲನಯೋಃ, to slight, disgrace, etc.; to shake, be unsteady.
608. ಅಂದಲೆ. ಅಸಂನಪೀಡನೇ, to oppress, harass, etc.
609. ಕಣ್ಮಲೆ (ಕಣ್ + ಮಲೆ). ಚಿತ್ತಸ್ಫುರಣೇ, to flash on the mind, etc.
610. ಪೊಲ್. ಸ್ಯೂತೇ, to sew.
611. ಕಿಚಕಿಲ್. ಹೇಷಿತೇ, to neigh.
612. ಕುಕಿಲ್. ಕೋಕಿಲಸ್ವನೇ, to sound as a cuckoo; ಪಕ್ಷಿಭೇದೇ ಚ, the cuckoo.
613. ಒೞಲ್. ಸ್ನೇಹೇ, to love.
614. ನೆೞಲ್. ನಿಶ್ಚೇಷ್ಟಾವಲಂಬನೇ, to hang down motionless or powerless; to faint.
615. ಕೞಲ್. ತನುತ್ವೇ, to be thin, etc.; ತಕ್ರ — ಮಂಜೀರಯೋಃ, butter-milk mixed with water; a foot-ring, anklet.
616. ಅವಲ್. ಮುಸಲಕ್ರಿಯಾಯಾಂ, to work with the pestle, to pound; ಚಿಪಿಟಕೇ ಚ, grain flattened after boiling.
617. ಬೞಲ್. ಶ್ರಾಂತೌ, to be weary.
618. ತೊೞಲ್. ಭ್ರಮಣೇ, to whirl round, to wander about, etc.

619. ಅೞಲ್. ದುಃಖೇ, to sorrow, to grieve.

620. ಎೞಲ್. ಅಲಂಬನೇ, to hang down, be pendent.

621. ಪಿಳಿಲ್. ಹಸ್ತೋನ್ಮುಕ್ತೌ, to let loose from the hand, etc.

622. ಮಱಲ್. ಪರಾಙ್ಮುಖೇ, the face to be turned or averted, to turn backwards; ಪುಷ್ಪೇ ಚ, a flower.

623. ಅಱಲ್. ವಿಕಾಸೇ, to open, blow; ಪುಷ್ಪೇ ಚ, a flower.

624. ಕನಲ್. ಕ್ರೋಧೇ, to be angry.

625. ಒನಲ್. ಅಪಹಸನಕ್ರೋಧೇ, ಅಪಹಸನಕ್ರೋಧವೆಂದು ನಗೆಯಿಲ್ಲದ ಕ್ರೋಧಂ, to be in scornful wrath, in a wrath which knows no smile.

626. ನಱಲ್. ವೇದನಧ್ವನೌ, to groan, moan.

627. ಮಡಲ್. ವಲ್ಲಿವೃದ್ಧೌ, to spread out or run as a creeper.

628. ಸಿಡಿಲ್. ವಿಕೀರ್ಣೇ, to be scattered; ಮೇಘವಹ್ನೌ ಚ, the fire of clouds, a thunderbolt.

629. ತಳಲ್. ಶಾಖಾಮುಖೇ, to bud, shoot as branches.

630. ಎಳೆ-ತಳಲ್. ಪಲ್ಲವಪ್ರಾಪ್ತೌ, to get sprouts or shoots.

631. ಜೋಲ್. ಅಲಂಬನೇ, to hang down, be suspended, etc.

632. ಕೊಲ್. ಹಿಂಸಾಯಾಂ, to kill.

633. ಸಲ್. ಸ್ಥಾನಪ್ರವೇಶೇ, to enter a place, to enter; ಸತ್ಖ್ಯಾತೌ ಚ, to be famous.

634. ನಿಲ್. ಗತಿಮುಕ್ತೌ, to cease from walking, stand.

635. ಬಿಲ್. ವಿಕ್ರಯೇ, to sell; ಕೋದಂಡೇ ಚ, a bow.

636. ಕಲ್. ಅಭ್ಯಾಸೇ, to learn; ಪಾಷಾಣೇ ಚ, a stone.

637. 638. ಜಿಗಿಲ್. ಪಗಿಲ್. ಸ್ನಿಗ್ಧ—ಸಂಕ್ಲೇಶಯೋಃ, to be sticky, gummy, etc; to suffer distress.

639. ತಱಿ-ಸಲ್. ನಿಶ್ಚಯೇ, to be ascertained, settled, etc.

640. ಬೞಿ-ಸಲ್. ಅನುಗಮನೇ, to follow.

641. ಸೋಲ್. ಪರಾಜಯೇ, to lose, be defeated.

642. ಸಾಲ್. ಋಣೇ, to get into debt, etc.; ಸಸ್ಯಪಂಕ್ತೌ ಚ, a corn-row, furrow.

643. ಪೋಲ್. ಸಾದೃಶ್ಯೇ, to resemble.

644. ನೂಲ್. ತಂತುಕರಣೇ, to make thread; ತಂತುಮಾತ್ರೇ ಚ, thread.

645. ನೇಲ್. ಅಲಂಬನೇ, to be suspended, to hang, etc.

646. ಪೇಲ್. ಮಲವಿಸರ್ಜನೇ, to void excrement; ಮಲೇ ಚ, excrement. (ಹೇಲು)

18. ವಾಂತಕ್ಕೆ.

647. ಅವಿ. ನಿಗೂಹನೇ (o. r. ಗೂಹನೇ), to cover, hide.

648. ಕವಿ. ಆಚ್ಛಾದನೇ, to cover; ಕವೌ ಚ, a poet.

649. ಸವಿ. ಖಾದನಪರೀಕ್ಷಾಯಾಂ, to test by eating, to taste.

650. ತಿವಿ. ಮುಷ್ಟಿಪ್ರಹರಣೇ, to strike with the fist.

651. ತವು. ಕ್ಷಯೇ, to decrease, to waste away.

652. ಒಡವು. ಸಮೃದ್ಧೌ, to thrive.

653. ಓವು. ಪಾಲನೇ, to guard, protect.

654. ಸೀವು. ಭೂಷಣೇ, to adorn.

655. ತೀವು. ಪೂರಣೇ, to fill; to become full.

656. ಎಱಿವು. ಅಪಮರ್ಜನೇ, ಅಪಮರ್ಜನವೆಂದು ತೊಡೆವುದು, to remove by wiping or rubbing.

657. ಸರವು. ಸರ್ವಾಕರ್ಷಣೇ, to draw the whole towards one's self.

658. ತಡವು. ಹಸ್ತಾನ್ವೇಷಣೇ, to seek with the hands, grope; ಸ್ತಿಮಿತಭಾವೇ ಚ, to stop.

659. ಅಬ್ಬು. ದಹನಾತಿಕ್ರಮಣೇ, burning to go beyond the proper limit.

660. ತಳ್ವು. ಕಾಲಕ್ಷೇಪೇ, to delay.

661. ಎಳವು. ವಿಧೀಕರಣೇ, to order, to arrange.

19. ಸಾಂತಕ್ಕೆ.

662. ಹುಸಿ. ಅನೃತೇ, to be false; to lie.

663. ನಸಿ. ಜೀರ್ಣೇ, to decay, etc.; ನಷ್ಟಚೇಷ್ಟಾಯಾಂ ಚ, to have become motionless or insensible.

664. ಬಸಿ. ಗಲನೇ, to drip; ಕಾಶದಂಡಮಧ್ಯಯೋಃ, to be sharpened, etc.; the middle or tongue of a balance.

665. ಕುಸಿ. ಕ್ಷೀಣತ್ವೇ, to sink, give way; ಕವಾಟಕಲಾಕಾಯಾಂ ಚ, the knob-like pin of a door.

666. ಹಸಿ. ಕ್ಷುಧಾಯಾಂ, to hunger; ದ್ರವದ್ರವ್ಯೇ ಚ, a green, fresh, moist substance.

667. ಕಿಸಿ. ವಿಕಸನೇ, to open, etc.

668. ಸಸಿ. ಸಸ್ಯಾದ್ಯುತ್ಪಾಟನೇ, to pull out as corn, etc.; ಸಸ್ಯೇ ಚ, corn, a young plant.

669. ಬೀಸು. ಆವರ್ತನೇ, to turn round, etc.

670. ಹಾಸು. ಆಸ್ತರಣಕ್ರಿಯಾಯಾಂ, to lay, spread out; ತಲ್ಪೇ ಚ, a bed.

671. ಸೂಸು. ಪರಿತ್ಯಾಗೇ, to quit, let go, etc.

672. ಅಸು. ಊರ್ಧ್ವವಿಮೋಚನೇ, to release from above; ವೃಕ್ಷಭೇದೇ ಚ, the sâl tree.

673. ಮಾಸು. ಮಲೀಮಸೇ, to become dirty; ಜರಾಯೌ ಚ, the after-birth.

674. ಹೇಸು. ಜುಗುಪ್ಸಾಯಾಂ, to feel aversion.

675. ಬಾಸು. ಪುರೀಷೋತ್ಸರ್ಗೇ, to void excrement.

676. ಕೀಸು. ಕೃಶೀಕರಣೇ, to make thin; ಕರ್ಣಪತ್ರೇ ಚ, ear-leaf.

577. ಮೂಸು. ಆಘ್ರಾಣೇ, to smell.

678. ಪೂಸು. ವಿಲೇಪನೇ, to besmear, plaster; ಅಪಾನವಾಯೌ ಚ, to fart.

679. ಈಸು. ಜಲೋತ್ತರಣೇ, to cross water in swimming; ಶಕಟಾಂಗ — ದೇಶ part (the shaft) of a cart; to yield, to permit.

680. ಹೂಸು. ಅಧೋವಾಯೌ, to break wind downwards, fart.

681. ಕಾಸು. ದಾಹೇ, to make hot, to heat; ವಿವರೇ ಚ, detail (the smallest copper coin).

682. ಕೋಸು. ಸೂತ್ರಪ್ರವೇಶೇ, to cause to thread.

683. ಕಯ್ಬೀಸು (ಕಯ್ + ಬೀಸು). ರಣಾರಂಭ — ಹಸ್ತಸೂಚನಯೋಃ, to begin fighting by flourishing the hands; to give a sign with the hand.

684. ಅಱಸು. ಅನ್ವೇಷಣೇ, to search.

685. ಮಱಸು. ಆಚ್ಛಾದನೇ, to conceal, hide.

686. ತುಱಿಸು. ಕಂಡೂತಿಕರ್ಷಣೇ, to scratch what itches.

687. ಮೊಗಸು. ಉದ್ಯೋಗಾರಂಭೇ, to begin to exert one self, etc.

688. ಉಱಿಸು. ಸಹನೇ, to bear, endure.

689. ಎಳಸು. ಇಚ್ಛಾಯಾಂ, to desire.

690. ಬಳಸು. ಭ್ರಮಣ — ಕಂಚುಕಾಂಗಯೋಃ, to go round; a coat-of-mail.

691. 692. ಬೆರಸು, ಕಲಸು. ಸಂಮಿಶ್ರೇ, to mix or be mixed.

693. ಅಡಸು. ಗಾಢಪ್ರವೇಶೇ, to enter closely or firmly.

694. ಅಲಸು. ಆಲಸ್ಯೇ, to become tired or fatigued, etc.

695. ಸೆಣಸು. ಈರ್ಷ್ಯಾಯಾಂ, to envy, etc.

696. ಒರಸು. ಘರ್ಷಣೇ, to rub, etc.

697. ಇಸು. ಶರವಿಮೋಚನೇ, to shoot, as an arrow.

698. ಬೆಸು. ಲೋಹಸಂಧಾನೇ, to put metals together, solder.

699. ಪಸು. ವಿಭಜನೇ, to divide; ಜೀವಧನೇ ಚ, living wealth, cattle, etc.

700. ಕೊಸೆ. ನಿಧುವನಕರಣೇ, to have sexual intercourse; ವಾಹಾರೋಹಭೇದೇ ಚ, a sort of mounting or riding a horse.

701. ಹೊಸೆ. ರಜ್ಜುಕ್ರಿಯಾಯಾಂ, to make rope, twist; ಮಂಥದಂಡೇ ಚ, churning-stick.

702. ಬೆಸೆ. ಗರ್ವೇ, to be proud; ಕಾರ್ಪಾಸಚಾಪೇ ಚ, a bow for (dressing) cotton.

703. ನೆಸೆ. ಉತ್ಪವನೇ, to be purified, etc.

704. ಮಸೆ. ಘರ್ಷಣೇ, to rub, whet; ಸ್ವಲ್ಪಕ್ಷತೇ ಚ, a slight wound.

705. ಎಸೆ. ಶೋಭಾಯಾಂ, to shine.

706. ಒಸೆ. ಪ್ರಸನ್ನೇ, to be delighted, etc.

ಸಂಸ್ಕೃತಕೃದಂತೇ ಸ್ವಯಂಕರ್ತರಿ ಇಸು ಭವತಿ.

Verbs formed from Samskṛita noun (ಕೃತ್) by means of ಇಸು in which the Subject is doing or experiencing something itself.

707. ಚಿತ್ರಿಸು. ರೂಪಾದಿಲೇಖನೇ, to draw a picture, etc.

708. ಸೂತ್ರಿಸು. ಮಾನಸೂತ್ರಸ್ಥಾಪನೇ, to place a measuring line.

709. ಗರ್ಜಿಸು. ಭಯಂಕರಧ್ವನೌ, to roar.

710. ತರ್ಜಿಸು. ನಿವಾರಣೇ, to keep off, etc.

711. ಮುದ್ರಿಸು. ಅಂಗೀಕರಣೇ, to agree to, to assent, etc.

712. ಭದ್ರಿಸು, ಮುಂಡನಕ್ರಿಯಾಯಾಂ, to shave.

713. ವರ್ಣಿಸು. ಸ್ತೋತ್ರೇ, to praise.

714. ಘೂರ್ಣಿಸು. ವಿಜೃಂಭಣೇ, to gape, expand.

715. ಶಿಕ್ಷಿಸು. ನಿಯಾಮೇ, to restrain, subdue.

716*a*. 716*b*. ಪಾಳಿಸು. ಮೇಳಿಸು. ಸಂಯೋಗೇ, to be joined, etc.

717. ರಕ್ಷಿಸು. ಪಾಲನೇ, to protect, etc.

718. ರಾಜಿಸು. ಶೋಭಾಯಾಂ, to shine.

719. ಪೂಜಿಸು. ಅರ್ಚನವಿಧೌ, to worship, adore, etc.

720. ವರ್ತಿಸು. ವರ್ತನೇ, to be occupied, etc.

721. ಕೀರ್ತಿಸು. ವರ್ಣನೇ, to praise.

722. ನೀರಾಜಿಸು. ಆರಾತ್ರಿಕಕ್ರಿಯಾಯಾಂ, to wave lamps before a person or idol.

723. ಯೋಜಿಸು. ಅನುಮತೇ, to assent to, etc.

724. ಜೇಂಕರಿಸು. ಪ್ರಶಂಸಾಯಾಂ, ಪ್ರಶಂಸೆಯಿಂದು ಕೊಂಡಾಟಂ, to praise.

725. ಝಾಂಕರಿಸು (o. r. ಝಾಕರಿಸು). ಅವಜ್ಞಾಯಾಂ, ಅವಜ್ಞೆಯಿಂದು ಮೀಱುದುದು, to surpass, etc.

726. ಶಾಸಿಸು. ಶಿಕ್ಷಾಯಾಂ, to teach, train.

727. ವಾಸಿಸು. ಆಘ್ರಾಣೇ, to smell.

728. ನಿಯಾಮಿಸು, ಆಜ್ಞಾಪನೇ, to command.

729. ಅಭಿನಯಿಸು. ಅನುಕರಣೇ, to imitate, represent.

730. ರಂಜಿಸು. ಶೋಭಾಯಾಂ, to shine, etc.

731*a*. ಪುಂಜಿಸು. ರಾಶೌ, to heap.

731*b*. ರಂಜಿಸು. ರಾಗೇ, to paint.

732. ಭಂಜಿಸು. ಅಪಮಾನೇ, to dishonour.

733. ಉದಾಹರಿಸು. ಕಥನೇ, to relate.

734. ಚರಯಿಸು (o. r. ಚರಿಯಿಸು). ಭ್ರಮಣೇ, to walk about, etc.

735. ವರಯಿಸು (o. r. ವರಿಯಿಸು). ಸ್ವೀಕಾರೇ, to adopt, make one's own, etc.

736. ಕೋಪಿಸು. ಅಮರ್ಷೇ, to become angry, etc.

737. ಸ್ಥಾಪಿಸು. ನ್ಯಾಸಕರಣೇ, to put down, place, etc.

738. ಸಂಚಿಸು. ಸಂಗ್ರಹೇ, to collect, etc.

739. ವಂಚಿಸು, ಅಪಲಾಪೇ, to conceal, deny.

740. ರಮಿಸು. ಕ್ರೀಡಾಯಾಂ, to know carnally.

741. ಗಮಿಸು. ಗಮುಕ್ಕೃತೇ (o. r. ಗಮುಕ್ವೇ), to go.

ಕರ್ಣಾಟೇ ಸ್ವಯಂಕರ್ತೃಕ—
ಹೇತುಕರ್ತೃಕಯೋರ್ ಅಪಿ ಇಸು ಭವತಿ.

Verbs formed from Canarese themes by means of ಇಸು in which the Subject is doing or experiencing something itself, or causes something to happen.

742. ಆಲಿಸು. ಆಕರ್ಣನೇ, to listen attentively.

743. ಮಾಲಿಸು. ಕಟಾಕ್ಷೇ, to cast a side-glance, etc.; ದೀರ್ಘಾಲೋಕೇ ಚ, to behold for a long time.

744. ನಿಗುಂಬಿಸು. ಸಂಕೀರ್ಣರಾಶೌ, a heap to be formed of miscellaneous things, etc.

745. ನಂಬಿಸು. ಅನುಮೋದನೇ, to cause to assent, etc.

746. ಗುಡಿಯಿಸು (o. r. ಗುಡಿಸು). ಪುಂಜೀಕರಣೇ, to make a heap, etc.

747. ಬಡಿಸು. ಓಲಗಕ್ರಿಯಾಯಾಂ (ವಾಲಗಕ್ರಿಯಾಯಾಂ), to serve up or out.

748. ನಿಟ್ಟಿಸು. ನಿರ್ಭರಾಲೋಕೇ, to look excessively, etc.

749. ಕುಟ್ಟಿಸು. ಶಕ್ತಿಕ್ಷಯೇ, strength to be diminished, etc.

750. ಓಸರಿಸು. ಅಪಾದಾನೇ, to remove, etc.

751. ಬೋಸರಿಸು. ಮಿಥ್ಯಾಪರೇ, to flatter, etc.

752. ಮುಕ್ಕುಳಿಸು. ಗಂಡೂಷೇ, to rinse the mouth with water.

753. ಬಿಕ್ಕುಳಿಸು. ಉದ್ಗಾರೇ, to vomit, etc.

754. ಅಕ್ಕುಳಿಸು. ನಿಮ್ನಕುಕ್ಷೌ, to contract the belly; ಭಯೇ ಚ, to fear.

755. ನಿಕ್ಕುಳಿಸು. ವಿಲಾಸಾವನಮ್ರೇ, ವಿಲಾಸಾವನಮ್ರವೆಂದು ವಿಲಾಸದಿಂ ಬಾಗುವತನಂ, to bend one's self from coquetry, etc.

756. ಜಕ್ಕುಳಿಸು. ನರ್ಮೀಕರಣೇ, to jest at, etc.

757. ಕುಪ್ಪಳಿಸು. ರಾಶೌ, to heap.

758. ಅಪ್ಪಳಿಸು. ಆಸ್ಫಾಲನೇ, to flap, etc.

759. ಬಿತ್ತರಿಸು. ವಿಸ್ತೃತೇ, to spread.

760. ಒತ್ತರಿಸು. ಉದ್ವೃತ್ತಾಯಾಂ, to act haughtily, etc. (o. r. ಉದ್ವೃತ್ತೌ).

761. ಉಮ್ಮಳಿಸು. ಚಿಂತಾಯಾಂ, to grieve, etc.

762. ದೊಮ್ಮಳಿಸು. ತಿರ್ಯಕ್ಸಮೂಹಸಂಭ್ರಮೇ, to be agitated or alarmed etc., as a herd of cattle.

763. ಕೊಕ್ಕರಿಸು. ವಿಭತ್ಸರ್ಜನೇ, (o. r. ನಿರ್ಭರ್ತ್ಸನೇ), to threaten. etc.

764. ಚೆಕ್ಕರಿಸು (o. r. ಬೆಕ್ಕರಿಸು). ಅಜಧ್ವನೌ, to bleat.

765. ಆಲಿಸು (*cf.* 742). ಪರಿಭಾವನೇ, to think about, etc.

766. ಸೋಲಿಸು. ಅಪಜಯೇ, to defeat.

767. 768. ಸಂದಣಿಸು. ಗೊಂದಣಿಸು, ಸಮೂಹೇ, to crowd, etc.; ಬಾಹುಲ್ಯೇ ಚ, to become much or numerous.

769. ಬಿಚ್ಚಟಿಸು. ವಿಸ್ತೃತೇ, to spread out, etc.

770. ಪುಚ್ಚಟಿಸು. ಲಯೇ, to melt away, be destroyed.

771. ಬೆಚ್ಚಳಿಸು. ವಿಮೋಹೇ, to become bewildered or be beguiled.

772. ಟಿಬ್ಬರಿಸು. ಕುಂಠೀಕರಣೇ, to make blunt, stupid, etc.

773. ಗಬ್ಬರಿಸು. ಖನನೇ, to dig, etc.

774. ಉಬ್ಬರಿಸು. ಪೂರಣೇ, to swell, etc.

775. ಕುಗ್ಗಿಸು. ಸಂಕೋಚೇ, to cause to be bent, etc.

776. ಜಾನಿಸು. ಧ್ಯಾನೇ, to meditate.

777. ಜಿನಿಗಿಸು. ನಷ್ಟಚೇಷ್ಟಾಯಾಂ, to be or make motionless.

778. ತಡವರಿಸು. ಅನ್ವೇಷಣೇ, (o. rs. ಅಸೌಷ್ಟನೇ, ಸೌಷ್ಟನೇ), to grope, etc.

779. ಗುಡುಗುಡಿಸು (o. r. ಗುದಿಗುದಿಸು), ಕೋಪೋದ್ರೇಕೇ, to be excessively angry, etc.

780. ಚಿಮಿಚಿಮಿಸು. ಶಬ್ದೇ, to make a certain sound; ಲುಠನೇ ಚ, to roll about.

781. ಕದಕದಿಸು. ಸಂಚಲತ್ವೇ, to tremble, shake.

782. ಕಳವಳಿಸು. ಮನೋವೈಕಲ್ಯೇ, to be agitated in one's mind, etc.

783. ಕನವರಿಸು. ನಿದ್ರಾವಿಕಾರೇ, to talk in one's sleep.

784. ಸೈರಿಸು. ಸಹನೇ, (o. r. ಕ್ಷಮತ್ವೇ), to bear, forbear.

785. ಸೊಗಯಿಸು. ಶೋಭಾಯಾಂ, to shine.

786. ಮಂದಯಿಸು. ಸಾಂದ್ರತ್ವೇ, to thicken, etc.

787. ಸಂದಿಸು. ಸಂಧಾನೇ, to unite, join, etc.

788. ಟಾಳಿಸು. ಚಾಪಲ್ಯೇ, to be unsteady, etc.

789. ಕಡೆಗಣಿಸು. ಅವಜ್ಞಾಯಾಂ, to disrespect, etc.

790. ಸಮನಿಸು. ಪ್ರಾಪ್ತೌ, to be acquired, etc.

791. ತವಿಸು. ಕ್ಷಯೇ, to cause to decrease, etc.

792. ಅವಧರಿಸು. (o. r. ಅವಧಾರಿಸು). ಸ್ಮರಣೇ, to consider, etc.

793. ಕಿನಿಸು. ಕೋಪೇ, to be angry.

794. ಹನಿಸು. ರಸದಾನೇ, to present a liquid, etc.

795. ಬಿನ್ನವಿಸು. ವಿಜ್ಞಾಪನೇ, to petition.

ಅಥ ಭಿನ್ನಕರ್ತೃಕಪ್ರಯೋಗೇ.

Verbs formed of Canarese verbal themes by means of ಇಸು in which the agent causes something to be done or experienced by another.

796. ಪೆರ್ಚಿಸು. ವರ್ಧನೇ, to cause to grow.

797. ಬೆರ್ಚಿಸು. ಭಯೇ, to cause to suffer fear.

798. ಮಾಡಿಸು. ನಿರ್ಮಾಪಣೇ, to cause to perform.

799. ನೋಡಿಸು. ಲೋಚನಕ್ರಿಯಾಯಾಂ, to cause to see.

800. ಆಡಿಸು. ನರ್ತನವಿಧೌ, to cause to play.

801. ಪಾಡಿಸು, ಗಾನೇ, to cause to sing.

802. ಓದಿಸು. ಶಾಸ್ತ್ರಶಿಕ್ಷಾಯಾಂ, to cause to read, as the śâstras.

803. ಕಾದಿಸು. ಸಂಗರಕ್ರಿಯಾಯಾಂ, to cause to fight.

804. ಮುತ್ತಿಸು. ದುರ್ಗಸಂವೇಷ್ಟನೇ, to cause to encompass, as a fort.

805. ಎತ್ತಿಸು. ಉದ್ಧರಣೇ, to cause to lift up.

806. ತೊಡೆಯಿಸು. ಲೇಪ್ಯಕರಣೇ, to cause to smear, etc.

807. ಕಡಿಯಿಸು. ಖಂಡನೇ, to cause to cut.

808. ಅೞಿಯಿಸು. ಲಯೇ, to cause to be destroyed, etc.

809. ಮುಳಿಯಿಸು. ಕೋಪೇ, to cause to become angry.

810. ಕಟ್ಟಿಸು. ಬಂಧನೇ, to cause to bind, etc.

811. ಒಟ್ಟಿಸು. ಪುಂಜೀಕರಣೇ, to cause to heap.

812. ಹೊದೆಯಿಸು. ಆಚ್ಛಾದನೇ, to cause to cover.

813. ಪಡೆಯಿಸು. ಈಪ್ಸಾಯಾಂ, to cause to desire.

814. ಅಗುೞಿಸು. ಖನನೇ, to cause to dig.

815. ತೆಗೞಿಸು. ನಿಂದಾಯಾಂ, to cause to blame.

816. ಬರೆಯಿಸು. ಲೇಖನೇ, to cause to write.

817. ಒರೆಯಿಸು. ಕರ್ಷಣೇ, to cause to draw.

20. ಱಾಂತಕ್ಕೆ.

818. ಮೆಱ್. ವಿಡಂಬೇ, to make manifest, to display, etc.

819. ಕಱ್. ದೋಹನೇ, to milk; ಕಳಂಕೇ ಚ, a spot, a stain.

820 ಮಱ್. ಪೋತಕಾಯಾಂ, the young of an animal to be born (?).

821. ತೆಱ್. ಅನಾವರಣೋದ್ಘಾಟನಯೋಃ, to be uncovered, to open; to make open, etc.; ಕರೇ ಚ, tribute.

822. ನೆಱ್. ಸಮಗ್ರತ್ವೇ, to become entire, full grown, etc.

823. ಮಱ್. ವಿಸ್ಮರಣೇ, to forget.

824. ತೊಱ್. ವಿಸರ್ಜನೇ, to put away; ನದ್ಯಾಂ ಚ, a river.

825. ಅಱ್. ಜ್ಞಾನೇ, to know.

826. ಕಟ್ಟಿಱ್. ಯುಗಲಸಂಧಾನೇ, to join a pair.

827. ಬೊಬ್ಬಿಱ್ (ಬೊಬ್ಬೆ + ಇಱ್). ಮಹಾರವೇ, to give a loud sound, to bawl.

828. ಪಱ್. ವಿಚ್ಛಿತ್ತೌ, to cut, tear, etc.

829. ತಱ್. ಲೂನೇ, to clip or strip, off; ಖದಿರೇ ಚ, the Acacia Catechu tree.

830. ಮುಱ್. ಮೋಟನೇ, to break, etc.; ಖಂಡೇ ಚ, a fragment, a piece.

831. ಕಱ್ (*cf.* 829). ಛೇದೇ, to cut, etc.

832. ನುಱ್. ಸಂಚೂರ್ಣನೇ, to be powdered, etc.

833. ಪಱ್ (*cf.*. 828). ಭೂಷಣೇ, to decorate.

834. ಇಱ್. ಘಾತನೇ, to strike, stab.

835. ಅಳ್ಕಿಱ್ (ಅಳ್ಕು + ಇಱ್). ಸ್ಪಂದನೇ, to tremble, shake.

836. ಈಡಿಱ್ (ಈಡು + ಇಱ್). ಶೃಂಗಸಂಕರ್ಷಣೇ, to rub with the horns.

837. ಪಾಂಗಱ್ (ಪಾಂಗು + ಅಱ್). ಪ್ರಕಾರಗಮನೇ, to go in proper order, etc.

838. ಎಡೆಗಿಱ್ (ಎಡೆಗೆ + ಇಱ್). ಸಂಛಂನೇ, to be covered, etc.

839. ಏಱು (o. r. ಏಱ್). ಆರೋಹಣೇ, to ascend; ಕ್ಷತೇ ಚ, a wound.

840. ಮಿಾಱು (o. r. ಮಿಾಱ್). ಅತಿಕ್ರಮಣೇ, to transgres, etc.

840*a*—840*e*. ಕೇಱು. ಸೂರ್ಪಕರಣೇ, to winnow.—ತೂಱು. ಉ

ದ್ದೀಪ್ತೌ, to rouse up.—ದೂಱು. ಪೈಶೂನ್ಯೇ, to calumniate, etc.—ತೀಱು. ಕಬಳನೇ, to take mouthfuls.—ಸಾಱು. ಘೋಷಣೇ, to proclaim; ರಸಾದ್ಯರ್ಥೇ ಚ, broth.

841. ಪಾಱು (o. r. ಪಾಱ್). ಉತ್ಪ್ಲವನೇ to leap up, to jump; ವಹಿತ್ರಭೇದೇ ಚ, a kind of boat.

842. ತೋಱು (o. r. ತೋಱ್). ದರ್ಶನೇ, to appear, etc.

843. ಕೀಱು (*cf.* 883, o. r. ಕೀಱ್). ಆಗ್ರಹ-ಪ್ರಮಾರ್ಜನಯೋಃ, to rage; to rub off or away.

844. ಮಾಱು. ವಿಕ್ರಯೇ, to barter, sell.

845. ಕಾಱು. ವಮನೇ, to vomit.

846. ನಾಱು. ದುರ್ಗಂಧೇ, to smell; ಆರ್ದ್ರೀಕರಣೇ ಚ, to make wet, moisten.

847. ಪೇಱು (o r. ಪೀಱು). ವಿಕೀರ್ಯೇ, ವಿಕೀರ್ಯವೆಂದು ಚೆಲ್ಲುದು, to scatter.

848. ಕಾಱು. ಶೋಷಣೇ, to become dry, etc.; dry up ಶಕುನೇ ಚ, an omen.

849. ಊಱು. ಸತ್ವೇ, to be, exist, etc.

850. ಕೆದಱು. ವಿಕೀರ್ಣೇ, to scatter, dishevel, etc.

851. ಒಱ್. ಸ್ರವಣೇ, to ooze, flow; ಶಸ್ತ್ರಕೋಶೇ ಚ, the sheath of a weapon.

852. ಬೆದಱು. ವ್ಯಸ್ತೇ, to be agitated, alarmed, etc.

853. ಒದಱು. ಆಸ್ಫೋಟನೇ, to make noise by slapping or clapping the arms.

854. ಗದಱು. ಗರ್ಜನೇ, to roar, etc.

855. ಸವಱು. ಚಾರುಕರಣೇ, to make beautiful, etc.

856. ಮುಸುಱು. ಸಂಛನ್ನೇ, to cover, etc.

857. ಎಡಱು. ವಕ್ರಭಾವೇ, to be crooked; ದಾರಿದ್ರ್ಯೇ ಚ, poverty.

858. 859. ಅಳಱು. ಪೆಳಱು. ಭಯೇ, to fear.

860. ಒಳಱು. ರಾವೇ, to sound.

861. ಕೆಳಱು. ಹಯಘೋಷೇ, to neigh as a horse. (*cf.* 599).

862. ಪೋಡಿಮಾಱು. ಪಲಾಯನೇ, to flee.

863. ಪೆಱು. ಉಪಲಬ್ಧೌ, to acquire; ಪ್ರಸೂತೇ ಚ, to beget, to generate.

864. ತೆಪ್ಪಱು. ಚೇತನೀಕರಣೇ, to animate.

865. ತಿಱು. ವಿನಿಮಯೇ, to barter, exchange

866. ಕಿಱು. ವ್ಯವಧಾನೇ, to come, between.

867. ಪೊಱು. ಶಿರೋಧಾರಣೇ, to bear on the head, etc.

868. ಎಱ್. ದ್ರವದ್ರವ್ಯದಾನೇ, to pour out liquids; ಪತಿತ್ವೇ ಚ, the state of being a master.

869. ಕೊಱ್. ಖಂಡನೇ, to cut; ಧಾನ್ಯಭೇದೇ ಚ, a sort of grain.

870. ಜಱ್. ಅವಗ್ರಹೇ, to be impeded. (*cf.* 888).

871. ಅಱ್. ಸ್ವರೂಪಾಭಾವೇ, to lose one's form; ಶಿಲಾಯಾಂ ಚ, a rock, slab.

872. ಕಯ್ಮಱೆ (ಕಯ್+ಮಱೆ). ವಿಸ್ಮಯೇ, to be amazed, etc.

873. ತೆಗೆ-ನೆಱೆ. ಆಕರ್ಣಾಂತೇ, to pull to its full extent, etc.

874. ಎಚ್ಚಱು. ಜಾಗರಣೇ, to awake (v. i.).

875. 876. ಬೇಸಱು. ಅಸಱು. ಆಲಸ್ಯೇ, to be weary or fatigued.

877. 878. ಅಳ್ಕಱು ಬೆಳ್ಕಱು (o. r. ಬೆಚ್ಚಱು). ಭಯೇ, to fear.

879. ಅಚ್ಚಱು. ಪ್ರೇಮ್ಣಿ. to love.

880. ಎಚ್ಚಱು. ನಿದ್ರಾಭಾವೇ, to be vigilant, etc. (*cf.* 874).

881 *a*. ಪೊಚ್ಚಱು. ಸ್ಫುರಣೇ, to appear, etc.

881 *b*. ಆಱು. ನಿರ್ದ್ರವೇ, to dry up, become dry; ಸಮರ್ಥತ್ವೇ ಚ, to be able or strong, etc.

882. ಸೀಱು. ದುಃಕುಲಹೇ, to be grieved, to grow enraged.

883. ಕೀಱು (*cf.* 833). ಭಯಧ್ವನೌ, to cry out from fear, etc.

884. ಬೀಱು. ಸ್ವೇಚ್ಛಾಪ್ರದಾನೇ, to give away according to one's inclination.

885. ಗಱು. ಪರಿಭಾವನೇ, to conceive, think, etc.

886. ಜಱು. ಭಯೇ, to fear.

887. ಏಱು. ಸಮಗ್ರತ್ವೇ, to be complete, etc.

888. ಜಱ್ (*cf.* 870). ಆಕ್ರಮಣಾಲಾಪೇ, to speak assaultingly.

889. ಬೆಱ್. ಅಹಂಕಾರಭಾವೇ, to be arrogant, etc.

21. ೞಾಂತಕ್ಕೆ.

ಉತ್ತರಸ್ಥಿತೞಧಾತವಃ

Verbs with final ೞ್.

890. ಕುೞ್. ಖನನೇ, to dig; ನಿಮ್ನಭೂಮೌ ಚ, a hollow, etc.

891. ಇೞ್. ನಿಮ್ನಾವತರಣೇ, to come down, to descend.

892. ಉೞ್. ಅವಶಿಷ್ಟೇ, to remain; ವಿಮೋಚನೇ ಚ, to remain alive; ಚೋರಪ್ರಸ್ತರೋಪಕರಣಗೋಪನೇಷು ಕುಳಂ, but when meaning "a thief", or "a tool", or "to hide", it is written ಉಳಿ.

893. ಅೞ್. ವಿನಾಶೇ, to be ruined; ಮಾನಶೇಷರಸೇ ಚ, the liquid which remains in the measure; ಭ್ರಮರಾರ್ಥೇ ಕ್ಷಳಂ, but when meaning "the black bee" it is written ಅಳಿ.

894. ಕೞ್. ನಿಧನಾತಿದೂರಯೋಃ, to end, to die, to go or be removed very far; ಸೌವೀರೇ ಚ, sour gruel.

895. ಬೞ್. ಸಮ್ಮಾರ್ಜನ-ಮಾರ್ಗ-ವಂಶೇಷು, to sweep, etc. road; race, lineage; ಆಹ್ವಾನಪುರುಷೇ ಚ, a man who calls or invites.

896. 897. ಕಯ್ಕೞ್ (ಕಯ್+ಕೞ್). ಅಸ-ಕೞ್. ಅತಿಕ್ರಮಣೇ, to surpass, etc.

898. ಪೞ್. ನಿಂದಾಯಾಂ, to rebuke; ವಸ್ತ್ರವಿಶೇಷೇ ಚ, a certain cloth.

899. ಸುೞ್. ಭ್ರಮಣೇ (o. r. ಪರಿಭ್ರಮಣೇ), to turn round; ಜಲಾವರ್ತೇ ಚ, a whirlpool.

900. ತುೞ್. ಪಾದಸಂಘಟ್ಟನೇ, to trample on.

901. ಹಿೞ್. ನಿರ್ದ್ರವಕರಣೇ, to squeeze out, etc.; ದಲನಾರ್ಥೇ ಕುಳಂ, but when meaning "to burst" it is ಹಿಳ್, for instance ಹಿಳ್ದನೆ ಹಿಳಿದುದು.

902 ಕೊೞ್. ಜೀರ್ಣೇ, to decay, to rot; ಕಾಯಮಲೇ ಚ, excretion of the body.

903. ಎೞ್. ಆಕ್ರಮಣಾಕರ್ಷಣೇ, to draw with power, to pull; ತಂತುಮಾತ್ರೇ ಚ, thread; ಭೂವಾಚಕೇ ಕ್ಷಳಂ, but when meaning "earth" it is ಎಳೆ.

904. ಕೀೞ್. ಉತ್ಪಾಟನೇ, to pull out, etc.

905. ಉೞ್. ಹಲವಿಲೇಖನೇ, to make furrows, to plough.

906 ಅೞ್. ರೋದನೇ, to weep.

907. ಅಗುೞ್. ಖನನೇ, to dig.

908. ಕೆಗೞ್. ನಿಂದಾಯಾಂ, to rebuke, to blame.

909. ಜಗುೞ್. ಅಪಸರಣೇ, to go away, etc.

910. ಪೊಗೞ್. ಸಂಸ್ತವನೇ, to praise.

911. ನೆಗೞ್. ಉದ್ಯೋಗ-ಖ್ಯಾತಯೋಃ, to engage in, to be known or famous; ನಕ್ರೇ ಚ, an alligator.

912. ಮಗುೞ್. ನಿವರ್ತನೇ, to return, etc.

913. ಪಡ-ಮುಗುೞ್ (o. r. ಪೆಡಂಮುಗುೞ್). ಪರಾಙ್ಮುಖೇ, to turn the face backward.

914. ಎೞ್ (*cf.* 903). ರೋಧಾಕರ್ಷಣೇ, to lay hold of and pull forcibly, to drag.

915. 916. ಅೞ್. ಅಗುೞ್. ಜಲನಿಮಜ್ಜನೇ, to dive into water, to sink in water; ಸೇವಕೇ ಕುಳಂ, but when meaning "servant", ಆಳ್.

917. ಬಾೞ್. ಜೀವನೇ, to live; ಖಡ್ಗೇ ಕುಳಂ, but when meaning "sword", ಬಾಳ್.

918. ಪೋೞ್. ವಿದಾರಣೇ, to cleave asunder, split; ಖಂಡೇ ಚ, a piece or portion; ವಿರಚನಾರ್ಥೇ ಚ, arranging, etc.

919. ಪೂೞ್. ಆಚ್ಛಾದನೇ, to cover, etc.

920. ಬೀೞ್. ಪತನೇ, to fall; ಖಿಲಕ್ಷೇತ್ರೇ ಚ, uncultivated land, etc.

921. ಏೞ್. ಉತ್ಥಾನೇ, to rise.

922. ಪಾಱೇೞ್ (ಪಾಱು + ಏೞ್). ನಿರ್ಗಮನೇ, to run away; ಅವಮಾನೇ ಚ, to become contemptuous.

923. ಚೀಱೇೞ್ (ಚೀಱು + ಏೞ್). ಧ್ವನಿವಿಕಾರೇ, to sound strangely, to scream, etc.

22. ಳಾಂತಕ್ಕೆ.

ತದನಂತರೇ ಕುಳಃ.

Now Verbs with final ಳ್.

924. ಬೆಳೆ. ಸಸ್ಯವೃದ್ಧೌ, to grow, as corn.

925. ಬಳೆ. ಪ್ರವೃದ್ಧೌ, to grow up, to prosper, ಕಾಚಭೂಷಣೇ ಚ, a glass-ring.

926 ತಳೆ. ಧಾರಣೇ, to obtain, etc.; ಆತಪತ್ರಛೇದೇ ಐದಂ, when meaning "parasol" it is ಕೞ್.

927. ಮೊಳೆ. ಪ್ರರೋಹಕ್ರಿಯಾಯಾಂ, to sprout, get shoots; ಅಂಕುರೇ ಚ, a shoot, a sprout.

928. ಸೆಳೆ. ಆಕರ್ಷಣೇ, to draw, etc.; ಬಾಲಶಿಕ್ಷಾದಂಡೇ ಚ, a rod for training boys.

929. ಅಳೆ. ಪರಿಮಾಣೇ, to measure; ತಕ್ರೇ ಚ, buttermilk.

930. ತೊಳೆ. ಪ್ರಕ್ಷಾಲನೇ, to remove by washing, wash; ಫಲತೂಲಾಯಾಂ ಚ, a division in fruits.

931. ಪೊಳೆ. ಲುಠನೇ, to roll about; ನದ್ಯರ್ಥೇ ೞವಿಂ, but when meaning "river", ಪೊೞೆ.

932. ಕಳೆ. ವಿಸರ್ಜನೇ, to throw away, etc.; ಕಳಾಯಾಂ ಕ್ಷಳಂ, but when meaning "lustre", the ಳ is kshaḷa

933. ತಳೆ. ಸೇಚನೇ, to sprinkle; ಸತ್ರೇ ಚ, a choultry for travellers; ಸ್ಥೂಲದಾರೌ ೞವಿಂ, but when meaning "a thick piece of wood" it is ತೞೆ.

934. ನಳೆ. ನಮನೇ, to bow.

935. ಜಳೆ. ವಿಗತಪ್ರಭಾವೇ (o. r. ವಿಗತಭಾವ), to be deprived of power; ಶೀತೇ ಚ, cold, coolness, etc.

936. ಮುಳೆ. ಕೋಪೇ, to be angry.

937*a*. ತಿಳೆ. ನೈರ್ಮಲ್ಯೇ, to be or become clean or clear; ಜ್ಞಾನ-ಪ್ರಸನ್ನಭಾವಯೋಃ, to be known, to know; to be pleased, etc.; ಕಾಂಜಿಕೇ ಚ, conjee water.

937*b*. ಕಿಳೆ. ಆಕರ್ಷಣ, to draw towards one's self (only in one Ms.).

938. ತೂೞ್. ಅಪಸರ್ಪಣೇ, to retreat, etc.

939. ತಾೞ್. ಧಾರಣೇ, to bear; ವೃಕ್ಷೇ ೞವಿಂ, but when meaning "the palmyra tree" it is ತಾಳ್.

940. ಸೀೞ್. ವಿದಾರಣೇ, to cleave, split, etc.; ಶಕಲೇ ಚ, a piece.

941. ಬೇೞ್. ಹವಿಃಪ್ರದಾನೇ, to offer into fire; ನಿರ್ವೃದ್ಧೌ ಚ, to be without growth.*

942. ನೋೞ್. ಅಗ್ರಗಮನೇ, to go before.

943. ಓೞ್. ನಿಧುವನೇ, to have sexual intercourse.

944. ಊೞ್. ದೂರಾದಾಹ್ವಾನೇ, to call from afar.

945. ನೀೞ್. ಪ್ರಸಾರಣೇ, to extend, etc.

946. ಕೞ್. ಸ್ತೇಯೇ, to steal; ಮದ್ಯೇ ಚ, toddy. ಕಳ್ಳು (ಕೆ.)

947. ಕೊೞ್. ಗ್ರಹಣೇ, to seize, take, lay hold.

948. ಮುೞ್. ಕಂಟಕೇ, to be irritated, etc.

949. ಮಸುೞ್. ವಿಗತಪ್ರಭಾಯಾಂ, lustre to go away or disappear, grow dim, etc.

950. 951. ನುಗುೞ್. ನುಸುೞ್. ದ್ವಾರಪ್ರವೇಶೇ, to enter a door or opening, etc.

952. ತಗುಳ್. ಅನುಧಾವನೇ, to run after.

953. ಬಗುಳ್. ಕುಕ್ಕುರಧ್ವನೌ, to sound as a dog, to bark; ಸಾರಣೇ ಚ, to suffer from dysentery.

954. ಮುಗುಳ್. ನಿಮೀಲನೇ, to shut the eyelids; ಕುಟ್ಮಲೇ ಚ, an opening bud.

955. ಸುರುಳ್. ಸಂಕೋಚನೇ, to contract, shrivel.

956. ಉರುಳ್. ನಿಮ್ನಪತನೇ, to roll down, etc.

957. ಪೊರಳ್. ಲುಠನೇ, to roll, etc.

958. ಸೂರುಳ್. ಶಪಥೇ, to swear.

959. ಕಣ್ಗೊಳ್ (ಕಣ್+ಕೊಳ್). ದರ್ಶನೀಯೇ, to appear.

960. ಕಯ್-ಕೊಳ್. ಸ್ವೀಕಾರೇ, to adopt, etc.

961. ಬೆಂ-ಗೊಳ್. ಅನುಧಾವನೇ, to run after.

962. ದೊರೆ-ಕೊಳ್. ಪ್ರಾಪ್ತೌ, to be obtained or gained.

963. ಮನಂ-ಗೊಳ್. ಚಿತ್ತವಿಮೋಹನೇ, the mind to be captured, etc.

964. ಅಸುಂ-ಗೊಳ್. ಪ್ರಾಣಾಪಹರಣೇ, to take away life, to kill.

965. ಬೞಿ-ಕೊಳ್. ಕ್ರಮಸಂಧಾನೇ, to put together in regular order.

966. ನೆಱ್-ಕೊಳ್. ಸರ್ವಸ್ವೀಕರಣೇ, to seize all, etc.; ಮರ್ಮಭೇದೇ ಚ (o. r. ವರ್ಮಭೇದೇ ಚ), to pierce or penetrate the vitals, etc.

967. ಮಾರ್ಕೊಳ್ (ಮಾಱ್+ಕೊಳ್). ಸಂಮುಖೇ, to become opposite to, etc.

968. ಒಲವರಂಗೊಳ್ (ಒಲವರಂ+ಕೊಳ್). ಪಕ್ಷಸ್ವೀಕಾರೇ, to side with.

ಗದ್ಯಂ.— ಇದು ಸಮಸ್ತಶಾಬ್ದಿಕಜನಮನೋಜನಿತಶಬ್ದಸಂದೇಹಶಲ್ಯಚಾರುಚುಂಬಕಾಯಮಾನಾನೂನಕರ್ಣಾಟಕಲಕ್ಷಣಶಿಕ್ಷಾಚಾರ್ಯಸುಕವಿಕೇಶಿರಾಜವಿರಚಿತಮಪ್ಪ ಶಬ್ದಮಣಿದರ್ಪಣದೊಳ್ ಧಾತುನಿರ್ಣಯಮೆಂಬ ಷಷ್ಠಮಪ್ಪ ಸಂಧಿ ಸಮಾಪ್ತಂ.

೬ನೆಯ ಅಧ್ಯಾಯಂ ಸಮಾಪ್ತಂ.

೭ನೆಯ ಅಧ್ಯಾಯಂ. VII. CHAPTER.

ಅಪಭ್ರಂಶಪ್ರಕರಣಂ.

ON WORDS CORRUPTED FROM THE SAṀSKṚIT.

ಸೂತ್ರಂ. || ೨೫೧ ||

There are (Apabhramśa or Tadbhava) words in use that are worth consideration also on the part of the learned.

ಈಕ್ಷಿಸಿ ಶಿಕ್ಷಾಸೂತ್ರದ |
ಲಕ್ಷಣಮಂ ಲೋಕರೂಢಿ ಕೆಡದ ವೊಲಱಿವರ್ ||
ಲಕ್ಷಿಪುದು ನುಡಿಗಳೊಳ್ ಬಹು- |
ಳಾಕ್ಷೇಪಣಮಿಲ್ಲದಿರೆಯುಮಱಿಯದ ಕೆಲವಂ || ೨೬೬ ||

ಪದಚ್ಛೇದಂ.—ಈಕ್ಷಿಸಿ ಶಿಕ್ಷಾ ಸೂತ್ರದ ಲಕ್ಷಣಮಂ, ಲೋಕರೂಢಿ ಕೆಡದ ವೊಲ್, ಅಱಿವರ್ ಲಕ್ಷಿಪುದು, ನುಡಿಗಳೊಳ್ ಬಹುಳಾಕ್ಷೇಪಣಂ ಇಲ್ಲದೆ ಇರೆಯುಂ, ಅಱಿಯದ ಕೆಲವಂ.

ಅನ್ವಯಂ.—ಶಿಕ್ಷಾ ಸೂತ್ರದ ಲಕ್ಷಣಮಂ ಈಕ್ಷಿಸಿ, ಲೋಕರೂಢಿ ಕೆಡದ ವೊಲ್, ಅಱಿವರ್, ನುಡಿಗಳೊಳ್ ಬಹುಳಾಕ್ಷೇಪಣಂ ಇಲ್ಲದೆ ಇರೆಯುಂ, ಅಱಿಯದ ಕೆಲವಂ ಲಕ್ಷಿಪುದು.

ಟೀಕು.—ಶಿಕ್ಷಾ ಸೂತ್ರದ = ಶಿಕ್ಷಾ ಸೂತ್ರದ; ಲಕ್ಷಣಮಂ = ಲಕ್ಷಣವಂ; ಈಕ್ಷಿಸಿ = ನೋಡಿ; ಲೋಕರೂಢಿ = ಲೋಕಪ್ರಸಿದ್ಧಿ; ಕೆಡದ ವೊಲ್ = ಕೆಡದ ಹಾಂಗೆ; ಅಱಿವರ್ = ತಿಳಿವರ್; ನುಡಿಗಳೊಳ್ = ವಾಕ್ಯಂಗಳಲ್ಲಿ; ಬಹುಳಾಕ್ಷೇಪಣಂ = ಬಹುಳ ಸಮುಚ್ಚಯಂಗಳ್; ಇಲ್ಲದಿರೆಯುಂ = ಇಲ್ಲದಿರ್ದೊಡಂ; ಅಱಿಯದ ಕೆಲವಂ = ತಿಳಿಯದ ಕೆಲವಂ; ಲಕ್ಷಿಪುದು = ಕುರುಪಿಡುವುದು.

1. Changes of Consonants in general.

ಸೂತ್ರಂ. || ೨೫೨ ||

In Tadbhava words ಶ್ and ಷ್ are changed into ಸ್.

ಸಕ್ಕದದ ತದ್ಭವಂಗಳ |
ಲಕ್ಕಣಮಂ ಕನ್ನಡಕ್ಕೆ ಲಕ್ಕಿಸಿ ಪೇೞ್ವೆಂ ||
ಸಕ್ಕದದ ಶಷದ್ವಿತಯ- |
ಕ್ಕಕ್ಕುಂ ಸತ್ವಂ ಪ್ರಸಿದ್ಧಿಯಿಂದೆಲ್ಲೆಡೆಯೊಳ್ || ೨೬೭ ||

ಪದಚ್ಛೇದಂ.—ಸಕ್ಕದದ ತದ್ಭವಂಗಳ ಲಕ್ಕಣಮಂ ಕನ್ನಡಕ್ಕೆ ಲಕ್ಷಿಸಿ ಪೇಳ್ವೆಂ. ಸಕ್ಕದದ ಶಷದ್ವಿತಯಕ್ಕೆ ಅಕ್ಕುಂ ಸತ್ವಂ ಪ್ರಸಿದ್ಧಿಯಿಂದೆ ಎಲ್ಲ ಎಡೆಯೊಳ್.

ಅನ್ವಯಂ.— ಸಕ್ಕದದ ಶಷದ್ವಿತಯಕ್ಕೆ ಎಲ್ಲೆಡೆಯೊಳ್ ಪ್ರಸಿದ್ಧಿಯಿಂದೆ ಸತ್ವಂ ಅಕ್ಕುಂ ಎಂಬುದನ್ವಯಂ.

ಟೀಕು.—ಸಕ್ಕದದ = ಸಂಸ್ಕೃತದ; ತದ್ಭವಂಗಳ = ತದ್ಭವಶಬ್ದಂಗಳ; ಲಕ್ಕಣಮಂ = ಲಕ್ಷಣವಂ; ಕನ್ನಡಕ್ಕೆ = ಕರ್ಣಾಟಕಕ್ಕೆ; ಲಕ್ಷಿಸಿ = ಕುರುಪಿಟ್ಟು; ಪೇಳ್ವೆಂ = ಹೇಳ್ವೆಂ; ಸಕ್ಕದದ = ಸಂಸ್ಕೃತದ; ಶಷದ್ವಿತಯಕ್ಕೆ = ಶಕಾರ ಷಕಾರವೆಂಬೆರಡಕ್ಕೆ; ಎಲ್ಲೆಡೆಯೊಳ್ = ಎಲ್ಲಾ ಠಾವಿನಲ್ಲಿ; ಪ್ರಸಿದ್ಧಿಯಿಂದೆ = ಪ್ರಸಿದ್ಧಿಯಿಂದೆ; ಸತ್ವಂ = ಸಕಾರಂ; ಅಕ್ಕಂ = ಆಗುವುದು.

ವೃತ್ತಿ.— ಸಂಸ್ಕೃತಕ್ಕೆ ಪುಟ್ಟಿದ ಕನ್ನಡಮಂ ನಿರೂಪಿಸುವೆಂ. ಸಂಸ್ಕೃತದ ಶಷಂಗಳ್ಗೆ ಸಕಾರಂ ಪ್ರಸಿದ್ಧಮಾಗೆಲ್ಲೆಡೆಯೊಳಮಕ್ಕುಂ.

ಪ್ರಯೋಗಂ.— ಶಕಾರಕ್ಕೆ— ಶಶಿ=ಸಸಿ; ಶಂಕೆ=ಸಂಕೆ; ಶಾಂತಿ=ಸಾಂತಿ; ಶರಂ=ಸರಂ; ಶಂಬರಂ=ಸಂಬರಂ, ಶಂಬರಮೆಂದುದಕಂ; ಕಳಶಂ=ಕಳಸಂ; ಶೂಲಂ=ಸೂಲಂ; ಗಿರಿಶಂ=ಗಿರಿಸಂ; ಶಿವಾ=ಸಿವೆ; ನಿಶ್ಶಂಕಂ=ನಿಸ್ಸಂಕಂ; ಅಶನಿ=ಅಸನಿ; ಶುಚಿ=ಸುಚಿ; ಪಾಶಂ=ಪಾಸಂ or ಹಾಸಂ; ಶರದಂ=ಸರದಂ; ಶಂಕು=ಸಂಕು, ಶಂಕುವೆಂದು ಕೊರಡುಂ ಗಿರ್ವಂದಿಯಮಕ್ಕುಂ; ಅಂಕುಶಂ=ಅಂಕುಸಂ; ಶಾಲೆ=ಸಾಲೆ; ಶಕುನಂ=ಸಕುನಂ; ಶಾಪಂ=ಸಾಪಂ; ಶಂಬಳಂ=ಸಂಬಳಂ; ಆಕಾಶಂ=ಆಕಾಸಂ, ಆಗಸಂ; ಶಾಲಣಂ=ಸಾಲಣಂ; ಸಂಶಯಂ=ಸಂಸಯಂ; ಶೌರಿದಂ=ಸೌರಿದಂ; ಶಿರಂ=ಸಿರಂ; ದಶೆ=ದಸೆ; ರಾಶಿ=ರಾಸಿ; ಶಾಣಂ=ಸಾಣೆ; ಶೌರಿ=ಸೌರಿ; ಶಕುನಿ=ಸಕುನಿ; ಪರಶು=ಪರಸು; ಶುದ್ಧಿ=ಸುದ್ದಿ; ಶುಂಠಿ=ಸುಂಟಿ; ಶೀತಂ=ಸೀತಂ; ಪಶು=ಪಸು; ನಿಶಾದಿ=ನಿಸಾದಿ; ಶಾರೀರಂ=ಸಾರೀರಂ.

ಷಕಾರಕ್ಕೆ— ಹರ್ಷಂ=ಹರುಸಂ; ಭಾಷೆ=ಬಾಸೆ; ವೇಷಂ=ವೇಸಂ; ವಿಷಯಂ=ವಿಸಯಂ; ಮೇಷಂ=ಮೇಸಂ; ಆಮಿಷಂ=ಆಮಿಸಂ; ನಿಷಾದಿ=ನಿಸಾದಿ, ನಿಸಾದಿಯೆಂದು ಮಾವಂತಿಗಂ; ದೋಷಂ=ದೋಸಂ; ವಿಷಂ=ವಿಸಂ; ನಿಮಿಷಂ=ನಿಮಿಸಂ; ಪಾಷಾಣಂ=ಪಾಸಾಣಂ; ಔಷಧಂ=ಔಸದಂ; ರೋಷಂ=ರೋಸಂ; ದೂಷಣಂ=ದೂಸಣೆ; ಪಾಷಂಡಿ=ಪಾಸಂಡಿ; ಜೋಷಂ=ಜೋಸಂ; ಶೇಷಂ=ಸೇಸಂ; ಶೇಷೆ=ಸೇಸೆ; ಪೌರುಷಂ=ಪೌರುಸಂ; ಕಾಷಾಯಂ=ಕಾಸಾಯಂ; ಮಷಿ=ಮಸಿ.

ಸೂತ್ರಂ. || ೨೫೪ ||

Further, when a Double-consonant is disjoined, its first letter receives either ಅ, ಇ or ಉ, and a long vowel (preceded by ಅ or ಇ) is then shortened.

ವಿರಳಂ ಮಾಡಿದ ದಡ್ಡ- |
ಕ್ಕರದ ಮೊದಲ್ಗತ್ವಮಿತ್ವಮುತ್ವಮುಮಕ್ಕುಂ |
ದೊರೆಕೊಳ್ಗುಮತ್ವದಿತ್ವದ- |
ಪರವರ್ಣಂ ದೀರ್ಘಮಾದ ಪಕ್ಷಂ ಹ್ರಸ್ವಂ || ೨೬೮ ||

ಪದಚ್ಛೇದಂ.— ವಿರಳಂ ಮಾಡಿದ ದಡ್ಡಕ್ಕರದ ಮೊದಲ್ಗೆ ಅತ್ವಂ ಇತ್ವಂ ಉತ್ವಮುಂ ಅಕ್ಕುಂ; ದೊರೆಕೊಳ್ಗುಂ ಅತ್ವದ ಇತ್ವದ ಪರವರ್ಣಂ ದೀರ್ಘಂ ಆದ ಪಕ್ಷಂ ಹ್ರಸ್ವಂ.

ಅನ್ವಯಂ.— ಅತ್ವದ ಇತ್ವದ ಪರವರ್ಣಂ ದೀರ್ಘಮಾದ ಪಕ್ಷಂ ಹ್ರಸ್ವಂ ದೊರೆಕೊಳ್ಗುಂ ಎಂಬುದನ್ವಯಂ.

ಟೀಕು.—ವಿರಳಂ ಮಾಡಿದ ದಡ್ಡಕ್ಕರದ= ವಿರಳವಂ ಮಾಡಿದ ಒತ್ತಿನಕ್ಕರದ; ಮೊದಲ್ಗೆ = ಮೊದಲಕ್ಷರಕ್ಕೆ; ಅತ್ವಂ = ಅಕಾರಂ; ಇತ್ವಂ = ಇಕಾರಂ; ಉತ್ವಮುಂ = ಉಕಾರಮುಂ; ಅಕ್ಕುಂ = ಆಗುವುದು; ಅತ್ವದ = ಅಕಾರದ; ಇತ್ವದ = ಇಕಾರದ; ಪರವರ್ಣಂ = ಮುಂದಣಕ್ಷರಂ; ದೀರ್ಘಂ = ದೀರ್ಘಾಕ್ಷರಂ; ಆದ ಪಕ್ಷಂ = ಆದ ಪಕ್ಷದಲ್ಲಿ; ಹ್ರಸ್ವಂ = ಹ್ರಸ್ವಂ; ದೊರೆಕೊಳ್ಗುಂ = ಬರ್ಪುದು.

ವೃತ್ತಿ.— ಬೇರ್ಕೆಯ್ದ ದಡ್ಡಕ್ಕರದ ಪೂರ್ವವ್ಯಂಜನಕ್ಕೆ ಅಕಾರಮಿಕಾರಮುಕಾರಮಕ್ಕುಂ; ಅಕಾರದಿಕಾರದ ಮುಂದಣ ದೀರ್ಘಕ್ಕೆ ಹ್ರಸ್ವಮಕ್ಕುಂ.

ಪ್ರಯೋಗಂ.— ಅಕಾರಕ್ಕೆ— ಯತ್ನಂ= ಜತನಂ; ಇಂದ್ರಂ= ಇಂದರಂ; ಕೃಕಚಂ= ಕರಗಸಂ.

ಇಕಾರಕ್ಕೆ— ಶ್ರೀ= ಸಿರಿ; ಗಿರ್ಗಟಂ= ಗಿರಿಗಟಂ; ವರ್ಷಂ= ಬರಿಸಂ.

ಉಕಾರಕ್ಕೆ— ಲಕ್ಷ್ಮಿ= ಲಕುಮಿ; ಲಕ್ಷ್ಮಣಂ= ಲಕುಮಣಂ; ಸರ್ಷಪಂ= ಸರುಸಪಂ, ಸರ್ಷಪಮೆಂದು ಸಾಸವೆ; ಹರ್ಷಂ= ಹರುಸಂ; ಅರ್ಹಂ= ಅರುಹಂ; ದರ್ಶನಂ= ದರುಸನಂ; ಆಕರ್ಷಣಂ= ಆಕರುಸನಂ; ಅಲ್ಪಂ= ಅಲುಪಂ; ಯುಗ್ಮಂ= ಜುಗುಮಂ; ಪದ್ಮಂ= ಪದುಮಂ; ಲಗ್ನಂ= ಲಗುನಂ; ಶಬ್ದಂ= ಸಬುದಂ; ಮಾತ್ರಂ= ಮಾತುರಂ; ತನ್ತ್ರಂ= ತನ್ತುರಂ; ಭಕ್ತಿ= ಭಕುತಿ; ಮುಕ್ತಿ= ಮುಕುತಿ; ರತ್ನಂ= ರತುನಂ; ಸೂಕ್ಷ್ಮಂ= ಸುಕುಮಂ.

ಅತ್ವದ ಮುಂದಣ ಹ್ರಸ್ವಕ್ಕೆ— ಪ್ರಾಯಂ= ಹರಯಂ; ಪ್ರಾಣಂ= ಹರಣಂ; ತ್ರಾಸಂ= ತರಸಂ; ತ್ರಾಣಂ= ತರಣಂ.

ಇತ್ವದ ಮುಂದಣ ಹ್ರಸ್ವಕ್ಕೆ—ವ್ಯಾಧಿ=ಬಿಯದಿ; ವ್ಯಾಧಂ=ಬಿಯದಂ; ವ್ಯಾಳಂ=ಬಿಯಳಂ; ವ್ಯಾಸಂಗಂ=ಬಿಯಸಂಗಂ.

ಸೂತ್ರಂ. || ೨೫೫ ||

The letters ಕ, ಚ, ಟ, ತ become ಗ, ಜ, ಡ, ದ; ಖ, ಛ, ಠ, ಥ, ಫ become ಕ, ಚ, ಟ, ತ, ಪ; and ಘ, ಝ, ಢ, ಧ, ಭ become ಗ, ಜ, ಡ, ದ, ಬ.

ವರ್ಗಪ್ರಥಮಂಗಳ್ತ- |
ದ್ವರ್ಗತೃತೀಯಂಗಳಪ್ಪುವುೞಿಯೆ ಪವರ್ಗಂ ||
ವರ್ಗದ್ವಿತೀಯವರ್ಣಂ |
ವರ್ಗಪ್ರಥಮಂ ಚತುರ್ಥಮಱಿಗೆ ತೃತೀಯಂ ||೨೬೯||

ಪದಚ್ಛೇದಂ.—ವರ್ಗಪ್ರಥಮಂಗಳ್ ತದ್ವರ್ಗತೃತೀಯಂಗಳ್ ಅಪ್ಪುವು, ಉೞಿಯೆ ಪವರ್ಗಂ; ವರ್ಗದ್ವಿತೀಯವರ್ಣಂ ವರ್ಗಪ್ರಥಮಂ; ಚತುರ್ಥಂ; ಅಱಿಗೆ, ತೃತೀಯಂ.

ಅನ್ವಯಂ.—ಪವರ್ಗಂ ಉೞಿಯೆ, ವರ್ಗಪ್ರಥಮಂಗಳ್ ತದ್ವರ್ಗತೃತೀಯಂಗಳ್ ಅಪ್ಪುವು; ವರ್ಗದ್ವಿತೀಯವರ್ಣಂ ವರ್ಗಪ್ರಥಮಂ; ಚತುರ್ಥಂ ತೃತೀಯಂ; ಅಱಿಗೆ.

ಟೀಕು.—ಪವರ್ಗಂ=ಪವರ್ಗಂ; ಉೞಿಯೆ=ಹೊರತಾಗಿ; ವರ್ಗಪ್ರಥಮಂಗಳ್=ವರ್ಗದ ಮೊದಲಕ್ಷರಂಗಳ್; ತದ್ವರ್ಗತೃತೀಯಂಗಳ್=ಆ ವರ್ಗದ ಮೂರರಯಕ್ಷರಂಗಳ್; ಅಪ್ಪುವು=ಆಗುವುವು; ವರ್ಗದ್ವಿತೀಯವರ್ಣಂ=ವರ್ಗದೆರಡನೆಯಕ್ಷರಂಗಳ್; ವರ್ಗಪ್ರಥಮಂ=ವರ್ಗದ ಮೊದಲಕ್ಷರಂಗಳ್ ಆಗುವುವು; ಚತುರ್ಥಂ=ವರ್ಗದ ನಾಲ್ಕನೆಯಕ್ಷರಂಗಳ್; ತೃತೀಯಂ=ವರ್ಗದ ಮೂರನೆಯಕ್ಷರಂಗಳ್ ಆಗುವುವು; ಅಱಿಗೆ=ತಿಳಿಗೆ.

ವೃತ್ತಿ.—ಪವರ್ಗಮಂ ಕಳೆದುೞಿದ ವರ್ಗಂಗಳ ಮೊದಲ ಕ ಚ ಟ ತಂಗಳ್ ತಮ್ಮ ಮೂಱನೆಯ ಗ ಜ ಡ ದಂಗಳಪ್ಪುವು; ವರ್ಗದೆರಡನೆಯ ಖ ಛ ಠ ಥ ಫಂಗಳ್ ತಮ್ಮ ಮೊದಲ ಕ ಚ ಟ ತ ಪಂಗಳಪ್ಪುವು; ವರ್ಗದ ನಾಲ್ಕನೆಯ ಘ ಝ ಢ ಧ ಭಂಗಳ್ ತಮ್ಮ ಮೂಱನೆಯ ಗ ಜ ಡ ದ ಬಂಗಳಪ್ಪುವು.

ಪ್ರಯೋಗಂ.—1) ಕಕಾರಕ್ಕೆ ಗಕಾರಂ—ಹಾರಿಕ=ಹಾರಿಗೆ; ಹೋರಿಕ=ಹೋರಿಗ; ವಾಸುಕಿ=ವಾಸುಗಿ; ಡಮರುಕಂ=ಡಮರುಗಂ; ಆಕರಂ=ಆಗರಂ; ಆಕಾಶಂ=ಆಗಸಂ; ಗಳಂತಿಕಾ=ಗಳಂತಿಗೆ, ಗಳಂತಿಗೆಯೆಂದಣಿಗೆ; ಪೇಟಿಕೆ=ಪೆಟ್ಟಿಗೆ; ಮಲ್ಲಿಕೆ=ಮಲ್ಲಿಗೆ; ಪೂರಿಕೆ=ಪೂರಿಗೆ; ದೀಪಿಕೆ=ದೀವಿಗೆ; ಮುಷ್ಟಿಕೆ=ಮುಷ್ಟಿಗೆ; ಜೀವಕಂ=ಜೀವಗಂ, ಜೀವಗಮೆಂದು ಹೊನ್ನೆಯ ಮರಂ; ಪಿಣ್ಡಿಕೆ=ಪಿಣ್ಡಿಗೆ; ಪೈತೃಕಂ=ಹೈತಿಗೆ (o. r. ಹೈತಿಗಂ); ಓಳಿಕೆ=ಓಳಿಗೆ.

ಚಕಾರಕ್ಕೆ ಜಕಾರಂ — ಸೂಚಿ=ಸೂಜಿ; ಕಾಚು=ಗಾಜು; ವಾಚನಾ= ಬಾಜನೆ; ವಚಾ=ಬಜೆ.

ಟಕಾರಕ್ಕೆ ಡಕಾರಂ — ಕೋಟಿ=ಕೋಡಿ; ಕಟಕಂ=ಕಡಗಂ; ಮಕುಟಂ= ಮಗುಡಂ; ಅಟವಿ=ಅಡವಿ; ಮಾಟಂ=ಮಾಡಂ; ಲಕುಟಂ=ಲಗುಡಂ, ಲಗುಡಮೆಂದು ಡಾಣೆ; ಕಟಂ=ಕಡಂ; ತಟಂ=ತಡಂ; ಪಟಲಕಂ=ಹಡಲಗೆ; ತಟಿ=ತಡಿ; ಕುಟಿ=ಗುಡಿ; ಕೋಟಿ=ಗೋಡೆ; ಕೂಟಂ=ಕೋಡು.

ತಕಾರಕ್ಕೆ ದಕಾರಂ — ಜಾತಿ=ಜಾದಿ; ವಸತಿ=ಬಸದಿ; ಚತುರಂ=ಚದುರಂ; ಭೂತಿ=ಬೂದಿ; ದೂತಿ=ದೂದಿ; ಕೈತವಂ=ಕೈದವಂ; ಪ್ರಾಕೃತಂ= ಪಾಗದಂ; ತಾತಂ=ತಂದೆ.

2) ಖಕಾರಕ್ಕೆ ಕಕಾರಂ — ಖದಿರಂ=ಕದಿರಂ; ಖಳಂ=ಕಳಂ; ಖಂಡಂ= ಕಂಡಂ; ಖಾಸಂ=ಕಾಸಂ; ಶಂಖಂ=ಸಂಕಂ; ನಖಂ=ನಕಂ; ಪರಿಖೆ=ಪರಿಕೆ; ಖಂಕರಿ=ಕಂಕರಿ; ಖಜಾಖಂ=ಕಜಾಕಂ (o. r. ಖಜಿಕಂ=ಕಜಿಕಂ); ಖರಂ=ಕರಂ; ಖುರಂ=ಕುರಂ; ಮುಖಂ=ಮುಕಂ.

ಛಕಾರಕ್ಕೆ ಚಕಾರಂ — ಛಂದಂ=ಚಂದಂ; ಛಿನ್ನಂ=ಚಿನ್ನಂ; ಛಾಂದಸಂ=ಚಾಂದಸಂ; ಛವಿ=ಚವಿ.

ಠಕಾರಕ್ಕೆ ಟಕಾರಂ — ಕಂಠಿಕಾ=ಕಂಟಿಕೆ; ಶುಂಠಿ=ಸುಂಟಿ; ಮಠಂ= ಮಟಂ; ಶಠೆ=ಸಟೆ; ಕಂಠಂ=ಕಂಟಂ; ವಂಠಂ=ವಂಟಂ (o. r. ಬಂಟಂ); ಕಠೋರಂ=ಕಟೋರಂ.

ಥಕಾರಕ್ಕೆ ತಕಾರಂ — ಕಥೆ=ಕತೆ; ಕಂಥಾ=ಕಂತೆ; ವೃಥಾ=ವಿತೆ, ವಿತೆಯೆಂದು ಪ್ರಯೋಜನವಲ್ಲದುದು; ಮಂಥಂ=ಮಂತಂ, ಮಂತಮೆಂದು ಕಡೆಗೋಲುಂ ಮೊಸರ ಮೇಲಣ ನಿಡಿಯುಮಕ್ಕುಂ; ಮಂಥನಿ=ಮಂತಣಿ, ಮಂತಣಿಯೆಂದು ಕಡೆವ ಮಡಕೆಯುಂ ಗುಡುವನಮಕ್ಕುಂ; ಮಿಥಿಳೆ=ಮಿತಿಳೆ; ಪಥಂ=ಪತಂ; ಗ್ರಂಥಂ=ಗ್ರಂತಂ.

ಫಕಾರಕ್ಕೆ ಪಕಾರಂ — ಫಳಂ=ಪಳಂ; ಫಾಲಂ=ಪಾಲಂ; ಫಣಿ=ಪಣಿ; ಫಲಕಂ=ಹಲಗೆ; ಕಫಂ=ಕಪಂ; ಫಲ್ಗುಸಂ=ಪಲುಗುಣಂ; ಫೇನಂ=ಪೇನಂ; ಗುಂಫನಂ=ಗುಂಪನಂ; ಫಾಲ್ಗುನಂ=ಪಾಲುಗುಣಂ.

3) ಘಕಾರಕ್ಕೆ ಗಕಾರಂ — ಘಂಟಾ=ಗಂಟೆ; ಘುಂಟಿಕಾ=ಗುಂಟಿಗೆ; ಜಘನಂ=ಜಗನಂ; ನಿಘಂಟು=ನಿಗಂಟು; ಘಟಕಂ=ಗಡಗೆ; ಘಟ=ಗಡ;

ಜಾಘಂ=ಜಾಗಂ; ಗರ್ಘರಂ=ಗರ್ಗರಂ; ಸಂಘಂ=ಸಂಗಂ; ಘೋಷಣಾ=ಗೋಸಣೆ; ಘೂಕಂ=ಗೂಗೆ; ಅರ್ಘಂ=ಅಗ್ಗಂ.

ಝಕಾರಕ್ಕೆ ಜಕಾರಂ—ಝುಗಟಾ=ಜಗಳೆ; ಝಟಿತಿ=ಜಡಿತಿ, ಜಡಿತಿ ಎಂದು ಬೇಗಂ; ಝೋಂಟಿಗಂ=ಜೋಂಟಿಗಂ; ಝಂಕಾ=ಜಂಕೆ; ಝಂಪ=ಜಂಪ; ಝಂಝಾ=ಜಂಜು.

ಢಕಾರಕ್ಕೆ ಡಕಾರಂ—ಢಕ್ಕೆ=ಡಕ್ಕೆ; ರೂಢಿ=ರೂಡಿ; ಗಾಢಂ=ಗಾಡಂ; ಷಂಢಂ=ಸಂಡಂ; ಢೆಂಕೆ=ಡೆಂಕೆ.

ಧಕಾರಕ್ಕೆ ದಕಾರಂ—ಧನಂ=ದನಂ; ಧೂಪಂ=ದೂಪಂ; ನಿಧಿ=ನಿದಿ; ನಿಧಾನಂ=ನಿದಾನಂ; ಸಾಧನಂ=ಸಾದನೆ; ಬಂಧಂ=ಬಂದಂ; ಧೂಸರಂ=ದೂಸರಂ, ದೂಸರಮೆಂದು ನಸುಬಿಳಿದು; ಧಾರಾ=ದಾರೆ; ಬುಧಂ=ಬುದಂ; ಔಷಧಂ=ಔಸದಂ; ಧೂಳಿ=ದೂಳಿ; ಸಿಂಧುರಂ=ಸಿಂದುರಂ; ಶುದ್ಧಿ=ಸುದ್ದಿ; ವಿಧಿ=ಬಿದಿ; ಸೈಂಧವಂ=ಸೈಂದವಂ.

ಭಕಾರಕ್ಕೆ ಬಕಾರಂ—ಶುಂಭಂ=ಸುಂಬಂ; ಶುಭಂ=ಸುಬಂ; ಶಂಭು=ಸಂಬು; ಕುಸುಂಭಂ=ಕುಸುಂಬೆ; ಕುಂಭಂ=ಕುಂಬಂ; ರಂಭಾ=ರಂಬೆ; ಭೈರವಂ=ಬೈರವಂ; ಭೇರಿ=ಬೇರಿ; ಭೋಗಿ=ಬೋಗಿ; ಆರಂಭಂ=ಆರಂಬಂ; ಭೀಮಂ=ಬೀಮಂ; ಭೋಗಂ=ಬೋಗಂ; ಭವಿ=ಬವಿ; ಭಂಡಂ=ಬಂಡಂ; ಲೋಭಂ=ಲೋಬಂ.

ಸೂತ್ರಂ. || ೨೫೬ ||

Also ಖ becomes ಗ; ಚ್ಛ and ಛ್ಯ become ಚ್ಚ; ಛ becomes also ಸ.

ಖತ್ವಕ್ಕಂ ಬಹುಳತೆಯಿಂ |
ಗತ್ವಂ ಛತ್ವಂ ದ್ವಿರುಕ್ತಿಯಿಂ ಕೂಡಿರೆ ಮೇಣ್ ||
ಯತ್ವಾನ್ವಿತಮಿರೆ ಚತ್ವಂ |
ದ್ವಿತ್ವಂ ಛತ್ವಕ್ಕೆ ಸತ್ವಮುಂಟರೆಯೆಡೆಯೊಳ್ || ೨೬೦ ||

ಪದಚ್ಛೇದಂ.—ಖತ್ವಕ್ಕಂ ಬಹುಳತೆಯಿಂ ಗತ್ವಂ; ಛತ್ವಂ ದ್ವಿರುಕ್ತಿಯಿಂ ಕೂಡಿರೆ, ಮೇಣ್ ಯತ್ವಾನ್ವಿತಂ ಇರೆ, ಚತ್ವಂ ದ್ವಿತ್ವಂ; ಛತ್ವಕ್ಕೆ ಸತ್ವಂ ಉಂಟು ಅರೆ ಎಡೆಯೊಳ್.

ಟೀಕು, ಯಥಾನ್ವಯಂ.—ಖತ್ವಕ್ಕಂ=ಖಕಾರಕ್ಕೆಯುಂ; ಬಹುಳತೆಯಿಂ=ಬಹುಳವಿಂದೆ; ಗತ್ವಂ=ಗಕಾರಂ ಬರ್ಪುದು; ಛತ್ವಂ=ಛಕಾರಂ; ದ್ವಿರುಕ್ತಿಯಿಂ=ದ್ವಿತ್ವದಿಂದೆ; ಕೂಡಿರೆ=ಪೊರ್ದುಗೆಯಾಗಿರೆ; ಮೇಣ್=ಅದಲ್ಲದೆ; ಯತ್ವಾನ್ವಿತಂ=ಯಕಾರದೊಡನೆ ಕೂಡಲ್ಪಟ್ಟುದಾಗಿ; ಇರೆ=ಇರ್ದೊಡೆ; ದ್ವಿತ್ವಂ=ದ್ವಿತ್ವವಾದ; ಚತ್ವಂ=ಚಕಾರಂ ಬರ್ಪುದು;

ಛತ್ವಕ್ಕೆ = ಛಕಾರಕ್ಕೆ; ಅರೆಯೆಡೆಯೊಳ್ = ಕೆಲವೆಡೆಯೊಳ್; ಸತ್ವಂ = ಸಕಾರಂ; ಉಂಟು = ಉಂಟಾಗುವುದು.

ವೃತ್ತಿ.— ಖಕಾರಕ್ಕೆ ತಾನುಂ ಗಕಾರಮಕ್ಕುಂ; ಛಕಾರಂ ದಡ್ಡಕ್ಕರಮಾಗಿ ರ್ದೊಡಂ ಮೇಣ್ ಯಕಾರಂ ಬೆರಸಿರ್ದೊಡಂ ದ್ವಿತ್ವಮಪ್ಪ ಚಕಾರಮಕ್ಕುಂ; ಛಕಾರಕ್ಕೆ ಸಕಾರಮುಂ ಕೆಲವೆಡೆಯೊಳಕ್ಕುಂ.

ಪ್ರಯೋಗಂ.— ಖಕಾರಕ್ಕೆ ಗಕಾರಂ — ಮುಖಂ = ಮೊಗಂ; ವೈಶಾಖಂ = ವೈಶಾಗಂ ಅಂದರೆ ಬೇಸಗೆ.

ದ್ವಿತ್ವದ ಛತ್ವಕ್ಕೆ ದಡ್ಡಕ್ಕರದ ಚಕಾರಂ — ಇಚ್ಛಾ = ಇಚ್ಚೆ; ಮಚ್ಛರಂ = ಮಚ್ಚರಂ; ಚಿಕಿಚ್ಛೆ = ಚಿಕಿಚ್ಚೆ.

ಯತ್ವಂ ಬೆರಸಿದ ಛತ್ವಕ್ಕೆ ದ್ವಿತ್ವದ ಚಕಾರಂ — ಮಚ್ಛ್ಯಂ = ಮಚ್ಚಂ; ತುಚ್ಛ್ಯಂ = ತುಚ್ಚಂ; ಅಚ್ಛ್ಯಂ = ಅಚ್ಚಂ; ವಿಚ್ಛ್ಯಂದಂ = ಬಿಚ್ಚಂದಂ; ಲಾಂಛ್ಯನಂ = ಲಚ್ಚಣಂ.

ಛಕಾರಕ್ಕೆ ಸಕಾರಂ — ಛುರಿಕಾ = ಸುರಿಗೆ; ಛತ್ರಿಕಾ = ಸತ್ತಿಗೆ.

ಸೂತ್ರಂ. || ೨೫೭ ||

ಠ becomes also ಡ and ಢ; ಸ್ಥ becomes ತ; ಥ becomes also ದ, ಟ, and ಹ.

ಅರಮೆ ಠಕಾರಂ ಡಢದಿಂ ।
ಪರಿಣಮಿಕುಂ ಸತ್ವಮಿಶ್ರಮಪ್ಪ ಥಕಾರಂ ||
ಬರೆಯುಂ ತಕಾರಮಕ್ಕುಂ ।
ಸ್ವರಾನ್ವಿತಂ ಥತ್ವಮೊರ್ಮೆ ದಟಹಮುಮಕ್ಕುಂ || ೨೬೧ ||

ಪದಚ್ಛೇದಂ.— ಅರಮೆ ಠಕಾರಂ ಡಢದಿಂ ಪರಿಣಮಿಕುಂ; ಸತ್ವಮಿಶ್ರಮಪ್ಪ ಥಕಾರಂ ಬರೆಯುಂ ತಕಾರಂ ಅಕ್ಕುಂ ಸ್ವರಾನ್ವಿತಂ; ಥತ್ವಂ ಒರ್ಮೆ ದಟಹಮುಂ ಅಕ್ಕುಂ.

ಟೀಕು, ಯಥಾನ್ವಯಂ.— ಅರಮೆ = ಕೆಲವೆಡೆಯೊಳ್; ಠಕಾರಂ = ಠತ್ವಂ; ಡಢದಿಂ = ಡಕಾರ ಢಕಾರಂಗಳಿಂದೆ; ಪರಿಣಮಿಕುಂ = ಪರಿಣಮಿಸುವದು; ಸತ್ವಮಿಶ್ರಂ = ಸಕಾರದೊಡನೆ ಮಿಶ್ರಂ; ಅಪ್ಪ ಥಕಾರಂ = ಆದ ಥಕಾರಂ; ಬರೆಯುಂ = ಬಂದೊಡೆಯುಂ; ತಕಾರಂ = ತತ್ವಂ; ಅಕ್ಕುಂ = ಅಪ್ಪುದು; ಸ್ವರಾನ್ವಿತಂ = ಸ್ವರದೊಡನೆ ಕೂಡಿದುದಾದ; ಥತ್ವಂ = ಥಕಾರಂ; ಒರ್ಮೆ = ಒಂದು ಬಾರಿ; ದಟಹಮುಂ = ದಕಾರ ಟಕಾರ ಹಕಾರಮುಂ; ಅಕ್ಕುಂ = ಅಪ್ಪುದು.

ವೃತ್ತಿ.— ಎತ್ತಾನುಂ ಕೆಲವು ಶಬ್ದಂಗಳ ಠಕಾರಂ ಡಢಕಾರಮಾಗಿ ಪರಿಣಮಿಕುಂ; ಸಕಾರದೊಡನೆವೆರಸಿದ ಥಕಾರಂ ಸ್ವರಾನ್ವಿತಮಪ್ಪ ತಕಾರಮಕ್ಕುಂ; ಥಕಾರಮೊರ್ಮೆ ದಕಾರಮುಂ ಟಕಾರಮುಂ ಹಕಾರಮುಂ ಅಕ್ಕುಂ.

ಪ್ರಯೋಗಂ.—ತಕಾರಕ್ಕೆ ಡಕಾರಂ—ಕುಠಾರಂ=ಕೊಡಲಿ; ಮಠಂ=(ಭಾ.) ಮಡಂ (o. r. ಮಂಠಂ=ಮಂಡಂ). (ಮಳಿ)

ಠಕಾರಕ್ಕೆ ಟಿಕಾರಂ—ಮಠಿಕೆ=ಮಟಿಕೆ; ಪೀಠಿಕೆ=ಪೀಟಿಗೆ.

ಸಕಾರದೊಡನೆ ಕೂಡಿದ ಥಕಾರಕ್ಕೆ ತಕಾರಂ—ಅವಸ್ಥೆ=ಅವತೆ; ಸ್ಥೂಲಂ=ತೂಳಂ; ಸ್ಥಾನಂ=ತಾಣಂ; ಸಂಸ್ಥೆ=ಸಂತೆ; ಸ್ಥಾಪನಂ=ತಾಪಣೆ (ಭಾ.) (o. r. ಸ್ಥಾಪನೆ=ತಾಪಣೆ).

ಥಕಾರಕ್ಕೆ ದತ್ವಂ—ವೀಥಿ=ಬೀದಿ.

ಥಕಾರಕ್ಕೆ ಟತ್ವಂ—ಗ್ರಂಥಿ=ಗಂಟು.

ಥಕಾರಕ್ಕೆ ಹತ್ವಂ—ಗಾಥೆ=ಗಾಹೆ. [ಗಾಹಿ]

ಸೂತ್ರಂ. || ೨೫೮ ||

ಪ becomes ವ and ಹ (cf. Ss. 67; 159; 232); ಬ becomes ವ; ವ becomes ಬ.

ಅವತರಿಸಿರ್ಕುಂ ಪತ್ವ- |
ಕ್ಕೆ ವತ್ವಹತ್ವವ್ಯವಸ್ಥೆ ಕೆಲಕೆಲವೆಡೆಯೊಳ್ ||
ಸವನಿಸುಗುಂ ಬತ್ವಕ್ಕೊ- |
ರ್ಮೆ ವತ್ವಮುಂ ವತ್ವದೆಡೆಗೆ ಬತ್ವಂ ಬಹುಳಂ ||೨೭೨||

ಪದಚ್ಛೇದಂ.—ಅವತರಿಸಿ ಇರ್ಕುಂ ಪತ್ವಕ್ಕೆ ವತ್ವಹತ್ವವ್ಯವಸ್ಥೆ ಕೆಲಕೆಲ ಎಡೆಯೊಳ್; ಸವನಿಸುಗುಂ ಬತ್ವಕ್ಕೆ ಒರ್ಮೆ ವತ್ವಮುಂ; ವತ್ವದ ಎಡೆಗೆ ಬತ್ವಂ ಬಹುಳಂ.

ಅನ್ವಯಂ.—ಕೆಲಕೆಲವೆಡೆಯೊಳ್ ಪತ್ವಕ್ಕೆ ವತ್ವಹತ್ವವ್ಯವಸ್ಥೆ ಅವತರಿಸಿ ಇರ್ಕುಂ; ಒರ್ಮೆ ಬತ್ವಕ್ಕೆ ವತ್ವಮುಂ, ವತ್ವದ ಎಡೆಗೆ ಬತ್ವಂ ಬಹುಳಂ ಸವನಿಸುಗುಂ.

ಟೀಕು.—ಕೆಲಕೆಲವೆಡೆಯೊಳ್=ಕೆಲವು ಕೆಲವು ತಾವಿನಲ್ಲಿ; ಪತ್ವಕ್ಕೆ=ಪಕಾರಕ್ಕೆ; ವತ್ವಹತ್ವವ್ಯವಸ್ಥೆ=ವಕಾರದ ಹಕಾರದ ವ್ಯವಸ್ಥೆ; ಅವತರಿಸಿರ್ಕುಂ=ಹುಟ್ಟಿರ್ಪುದು; ಒರ್ಮೆ=ಒಂದು ಬಾರಿ; ಬತ್ವಕ್ಕೆ=ಬಕಾರಕ್ಕೆ; ವತ್ವಮುಂ=ವಕಾರವುಂ; ವತ್ವದೆಡೆಗೆ=ವಕಾರದ ಸ್ಥಾನಕ್ಕೆ; ಬತ್ವಂ=ಬಕಾರಂ; ಬಹುಳಂ=ಬಹುಳವಾಗಿ; ಸವನಿಸುಗುಂ=ಪ್ರಾಪ್ತಿಸುವುದು.

ವೃತ್ತಿ.—ಪಕಾರಕ್ಕೆ ವಕಾರಮುಂ ಹಕಾರಮುಂ ಕೆಲಕೆಲವೆಡೆಯೊಳಕ್ಕುಂ; ಬಕಾರಕ್ಕೊರ್ಮೆ ವಕಾರಮುಂ, ವಕಾರಕ್ಕೊರ್ಮೆ ಬಕಾರಮುಮಕ್ಕುಂ.

ಪ್ರಯೋಗಂ. — ಪತ್ವಕ್ಕೆ ವತ್ವಂ — ಸೂಪಂ = ಸೂವಂ; ವಾಪಿ = ಬಾವಿ; ಚಾಪಳಂ = ಚಾವಳಂ; ದೀಪಿಕೆ = ದೀವಿಗೆ; ಕಪಿಲೆ = ಕವಿಲೆ; ತ್ರಿಪದೆ = ತಿವದೆ (o. r. ತ್ರಿಪದಿ = ತಿವದಿ); ಕೂಪಸ್ತಂಭಂ = ಕೂವಕಂಬಂ; ಕಪಿಂಜಳಂ = ಕವಿಂಜಳಂ.

ಪತ್ವಕ್ಕೆ ಹತ್ವಂ — ಪಿಪ್ಪಲಿ = ಹಿಪ್ಪಲಿ; ಪಟ್ಟಿಕೆ = ಹಟ್ಟಿಕೆ; ಪಾದುಕಂ = ಹಾವುಗೆ; ಗೋಪುರಂ = ಗೋಹುರಂ; ಪರವಶಂ = ಹರವಸಂ; ಪಂಜರಂ = ಹಂಜರಂ; ಪಾಶಂ = ಹಾಸಂ; ಪಂಡಂ = ಹಂಡಂ; ಪಂಥಂ = ಹಂತಂ; ಪಿಸುನಂ = ಹಿಸುಣಂ.

ಬತ್ವಕ್ಕೆ ವತ್ವಂ — ಕಬಳಂ = ಕವಳಂ; ಶಿಬಿಕೆ = ಸಿವಿಗೆ; ಶಬಂ = ಸವಂ; ವಿಬಂದಂ = ವಿವಂದಂ.

ವತ್ವಕ್ಕೆ ಬತ್ವಂ — ವಿಧಿ = ಬಿದಿ; ವಶೆ = ಬಸೆ, ಬಸೆಯೆಂದು ನೆಣಮುಂ ಹೆಣ್ಣಾನೆಯುಂ ಗೂಡಾನೆಕಳಬುಮಕ್ಕುಂ; ವೇಗಂ = ಬೇಗಂ; ವೇದನೆ = ಬೇದನೆ; ವಂಚನೆ = ಬಂಚನೆ; ವಸಂತಂ = ಬಸಂತಂ; ವಾಸಂತಿ = ಬಾಸಂತಿ; ವೀಣೆ = ಬೀಣೆ; ವೀರಂ = ಬೀರಂ; ವಾಲಂ = ಬಾಳಂ (o. r. ಬಾಲಂ); ವಲ್ಲಿ = ಬಳ್ಳಿ; ವಸತಿ = ಬಸದಿ (o. r. ಬಸತಿ).

ಸೂತ್ರಂ. ‖ ೨೫೯ ‖

ಯ seldom becomes ಗ or ನ, often ಜ; ದ್ಯ becomes ಜ್ಜ.

ಘನಮಿಲ್ಲ ಯತ್ವದೊಳ್ ಗ- ।
ತ್ವನತ್ವವಿಧಿ ಪಿರಿದು ಜತ್ವವಿಧಿ ಮತ್ತಂ ದ- ‖
ತ್ವನಿಯುಕ್ತಯತ್ವಮುಂ ಜ- ।
ತ್ವನಿಯತಮಂ ಕೆಲವು ಶಬ್ದದೊಳ್ತಾಳ್ದಿರ್ಕುಂ ‖ ೨೭೩ ‖

ಪದಚ್ಛೇದಂ. — ಘನಂ ಇಲ್ಲ ಯತ್ವದೊಳ್ ಗತ್ವನತ್ವವಿಧಿ; ಪಿರಿದು ಜತ್ವವಿಧಿ; ಮತ್ತಂ ದತ್ವನಿಯುಕ್ತಯತ್ವಮುಂ ಜತ್ವನಿಯತಮಂ ಕೆಲವು ಶಬ್ದದೊಳ್ ತಾಳ್ದಿ ಇರ್ಕುಂ.

ಅನ್ವಯಂ. — ಯತ್ವದೊಳ್ ಗತ್ವನತ್ವವಿಧಿ ಘನಮಿಲ್ಲ; ಪಿರಿದು ಜತ್ವವಿಧಿ ಮತ್ತಂ ಕೆಲವು ಶಬ್ದದೊಳ್ ದತ್ವನಿಯುಕ್ತಯತ್ವಮುಂ ಜತ್ವನಿಯತಮಂ ತಾಳ್ದಿ ಇರ್ಕುಂ.

ಟೀಕು. — ಯತ್ವದೊಳ್ = ಯಕಾರದಲ್ಲಿ; ಗತ್ವನತ್ವವಿಧಿ = ಗಕಾರದ ನಕಾರದ ವಿಧಿ; ಘನಮಿಲ್ಲ = ಹೆಗ್ಗಳವಾಗಿ ಬಾರದೆಂಬುದರ್ಥಂ; ಪಿರಿದು = ವಿಶೇಷವಾಗಿ; ಜತ್ವವಿಧಿ = ಜಕಾರದ

ವಿಧಿ ಬರ್ಪುದು; ಮತ್ತಂ = ಬಳಿಕಂ; ಕೆಲವು ಶಬ್ದದೊಳ್ = ಕೆಲವು ಶಬ್ದಂಗಳಲ್ಲಿ; ದತ್ವನಿಯುಕ್ತ ಯತ್ವಮುಂ = ದತ್ವದೊಡನೆ ಕೂಡಿದ ಯತ್ವವುಂ; ಜತ್ವನಿಯತಮುಂ = ಜಕಾರದ ನಿಯತಿಯೂ; ತಾಳ್ದಿರ್ಕುಂ = ಧರಿಸಿರ್ಪುದು.

ವೃತ್ತಿ.—ಯಕಾರಕ್ಕೆ ಗಕಾರನಕಾರಾದೇಶಂ ಕೆಲವೆಡೆಯೊಳುಂಟು; ಆ ಯಕಾರಕ್ಕೆ ಜಕಾರಾದೇಶಂ ಪಿರಿದು; ದಕಾರದೊಳ್ಕೂಡಿದ ಯಕಾರಕ್ಕಂ ದ್ವಿತ್ವದ ಜಕಾರಮಕ್ಕುಂ.

ಪ್ರಯೋಗಂ.—ಯಕಾರಕ್ಕೆ ಗಕಾರಂ—ದ್ವಿತೀಯೆ = ಬಿದಿಗೆ; ತೃತೀಯೆ = ತದಿಗೆ; ಚರ್ಯೆ = ಚರಿಗೆ.

ಯತ್ವಕ್ಕೆ ನತ್ವಂ—ಯುಗಂ = ನೊಗಂ.

ಯತ್ವಕ್ಕೆ ಜತ್ವಂ—ಯವೆ = ಜವೆ; ಯಶಂ = ಜಸಂ; ಯೋಗಿ = ಜೋಗಿ; ಯತಿ = ಜತಿ; ಯೌವನಂ = ಜವ್ವನಂ; ಯಂತ್ರಂ = ಜಂತ್ರಂ; ಯಾತ್ರೆ = ಜಾತ್ರೆ; ಯುಗಂ = ಜುಗಂ; ಯುದ್ಧಂ = ಜುದ್ದಂ; ದುರ್ಯೋಧನಂ = ದುಜ್ಜೋದನಂ; ಯುಗ್ಮಂ = ಜುಗುಮಂ; ಯಮುನೆ = ಜಗುನೆ; ಯಮಳಂ = ಜಮಳಂ; ಯವನಿಕೆ = ಜವನಿಕೆ.

ದಕಾರದೊಳ್ಬೆರಸಿದ ಯತ್ವಕ್ಕೆ ದ್ವಿತ್ವಜಕಾರಂ—ವಿದ್ಯೆ = ಬಿಜ್ಜೆ; ವಿದ್ಯಾಧರಂ = ಬಿಜ್ಜೋದರಂ; ವೈದ್ಯಂ = ಬೆಜ್ಜಂ; ಉದ್ಯೋಗಂ = ಉಜ್ಜುಗಂ.

ಸೂತ್ರಂ. ‖ ೨೬೦ ‖

ದ್ಯೂತಂ, ವಿಂಧ್ಯಂ, ವಂಧ್ಯೆ, ಸಂಧ್ಯೆ, ಧ್ಯಾನಂ become ಜೂದು, ಬಿಂಜಂ, ಬಂಜೆ, ಸಂಜೆ, ಜಾನಂ

ವ್ಯವಹರಿಕುಂ ಲೋಪಂ ದ್ಯೂ- |
ತವಿಂಧ್ಯವಂಧ್ಯಾಪ್ರಶಸ್ತಸಂಧ್ಯಾಧ್ಯಾನ ‖
ಪ್ರವಿದಿತದಧಕಾರಂಗ- |
ಳ್ಗವಶಿಷ್ಟಯಕಾರಮಂತೆ ಜತ್ವಮನಾಳ್ಗುಂ ‖ ೨೭೪ ‖

ಪದಚ್ಛೇದಂ.—ವ್ಯವಹರಿಕುಂ ಲೋಪಂ ದ್ಯೂತವಿಂಧ್ಯವಂಧ್ಯಾಪ್ರಶಸ್ತಸಂಧ್ಯಾಧ್ಯಾನ ಪ್ರವಿದಿತದಧಕಾರಂಗಳ್ಗೆ ಅವಶಿಷ್ಟಯಕಾರಂ ಅಂತೆ ಜತ್ವಮಂ ಆಳ್ಗುಂ.

ಅನ್ವಯಂ.—ದ್ಯೂತವಿಂಧ್ಯವಂಧ್ಯಾಪ್ರಶಸ್ತಸಂಧ್ಯಾಧ್ಯಾನಪ್ರವಿದಿತದಧಕಾರಂಗಳ್ಗೆ ಲೋಪಂ ವ್ಯವಹರಿಕುಂ, ಅವಶಿಷ್ಟಯಕಾರಂ ಅಂತೆ ಜತ್ವಮಂ ಆಳ್ಗುಂ.

ಟೀಕು.—ದ್ಯೂತ = ದ್ಯೂತ ಎಂಬ ಶಬ್ದದ; ವಿಂಧ್ಯ = ವಿಂಧ್ಯ ಎಂಬ ಶಬ್ದದ; ವಂಧ್ಯಾ= ವಂಧ್ಯಾ ಎಂಬ ಶಬ್ದದ; ಪ್ರಶಸ್ತ = ಪ್ರಸಿದ್ಧವಾದ; ಸಂಧ್ಯಾ = ಸಂಧ್ಯಾ ಎಂಬ ಶಬ್ದದ; ಧ್ಯಾನ= ಧ್ಯಾನ ಎಂಬ ಶಬ್ದದ; ಪ್ರವಿದಿತ=ಪ್ರಸಿದ್ಧವಾದ; ದಧಕಾರಂಗಳ್ಗೆ = ದಕಾರ ಧಕಾರಂಗಳ್ಗೆ; ಲೋಪಂ = ಅದರ್ಶನಂ; ವ್ಯವಹರಿಕುಂ = ವ್ಯವಹರಿಸುವುದು; ಅವಶಿಷ್ಟಯಕಾರಂ = ಉಳಿದ ಯಕಾರಂ; ಅಂತೆ = ಮೊದಲ್ ಪೇಳ್ದಂತೆ; ಜತ್ವಮುಂ = ಜಕಾರಮಂ; ಅಳ್ಗುಂ = ತಾಳ್ವುದು

ವೃತ್ತಿ.—ಮೇಲಿರ್ದ ದಧಕಾರಂಗಳಂ ಲೋಪಿಸಿ, ನಿಂದ ಯಕಾರಕ್ಕೆ ಜತ್ವಮಕ್ಕುಂ.

ಪ್ರಯೋಗಂ.—ದ್ಯೂತಂ=ಜೂದು (o. r. ಜೂಜು); ವಿಂಧ್ಯಂ=ಬಿಂಜಂ; ವಂಧ್ಯೆ=ಬಂಜೆ; ಸಂಧ್ಯೆ=ಸಂಜೆ; ಧ್ಯಾನಂ=ಜಾನಂ.

ಸೂತ್ರಂ. || ೨೬೧ ||

Rêpha after a double or single consonant (ᕒ) and under a consonant (⌣) is elided; when under a consonant, it also takes the form of that consonant.

ನೆಗೞ್ಗುಂ ದ್ವಿತ್ವಾಗ್ರದ ರೇ- |
ಫೆಗೆ ಲೋಪಂ ವರ್ಣಮಿಶ್ರರೇಫಕ್ಕಂ ತಾಂ ||
ನೆಗೞ್ಗುಂ ಲೋಪಂ ಬಹುಳದೆ |
ನೆಗೞ್ಗುಂ ವೃತರೇಫಮಡಿಯೊಳಾ ವರ್ಣದ ಪೋಲ್ || ೨೭೪ ||

ಪದಚ್ಛೇದಂ.— ನೆಗೞ್ಗುಂ ದ್ವಿತ್ವಾಗ್ರದ ರೇಫೆಗೆ ಲೋಪಂ; ವರ್ಣಮಿಶ್ರರೇಫಕ್ಕಂ ತಾಂ ನೆಗೞ್ಗುಂ ಲೋಪಂ ಬಹುಳದೆ; ನೆಗೞ್ಗುಂ ವೃತರೇಫಂ ಅಡಿಯೊಳ್ ಆ ವರ್ಣದ ಪೋಲ್.

ಅನ್ವಯಂ.— ಬಹುಳದೆ ದ್ವಿತ್ವಾಗ್ರದ ರೇಫೆಗೆ ಲೋಪಂ ನೆಗೞ್ಗುಂ; ವರ್ಣಮಿಶ್ರರೇಫಕ್ಕಂ ಲೋಪಂ ತಾಂ ನೆಗೞ್ಗುಂ; ವೃತರೇಫಂ ಅಡಿಯೊಳ್ ಆ ವರ್ಣದ ಪೋಲ್ ನೆಗೞ್ಗುಂ.

ಟೀಕು.— ಬಹುಳದೆ = ಬಹುಳದಿಂದೆ; ದ್ವಿತ್ವಾಗ್ರದ = ದ್ವಿತ್ವದ ಮೇಲಣ; ರೇಫೆಗೆ = ರೇಫಕ್ಕೆ; ಲೋಪಂ = ಅದರ್ಶನಂ; ನೆಗೞ್ವುಂ = ನೆಗಳ್ವುದು, ಒಪ್ಪುದು; ವರ್ಣಮಿಶ್ರರೇಫಕ್ಕಂ = ಅಕ್ಷರದಲ್ಲಿ ಅವ್ಯಕ್ತವಾದ ರೇಫೆಗಂ; ಲೋಪಂ = ಅದರ್ಶನಂ; ತಾಂ = ತಾಂ; ನೆಗೞ್ಗುಂ = ಒಪ್ಪುದು; ವೃತರೇಫಂ = ಆ ವೃತರೇಫಂ; ಅಡಿಯೊಳ್ = ಕೆಳಗೆ; ಆ ವರ್ಣದ ಪೋಲ್ = ಆ ಮೇಲಿರ್ದ ವರ್ಣದ ಹಾಂಗೆ; ನೆಗೞ್ಗುಂ = ಪ್ರಸಿದ್ಧಿವಡೆವುದು.

ವೃತ್ತಿ.—ದಡ್ಡಕ್ಕರದ ಮೇಲಣ ರೇಫೆಗೆ ಲೋಪಂ; ಬಳಸಿದ ರೇಫೆಗಂ ಬಹುಳದಿಂ ಲೋಪಂ; ಆ ಸುತ್ತಿದ ರೇಫೆ ತನ್ನೊಳಿರ್ದಕ್ಕರದಂತೆ ದ್ವಿರ್ಭಾವಮಂ ಕೆಲವೆಡೆಯೊಳ್ತಳೆಗುಂ.

ಪ್ರಯೋಗಂ.—ದ್ವಿತ್ವಾಗ್ರರೇಫಲೋಪಕ್ಕೆ—ಒರ್ಬ್ಬರಂ=ಒಬ್ಬರಂ, ಒಬ್ಬರಮೆಂದು ನಾಱುವ ಬೇಳೆಯುಂ ಬೊಬ್ಬುಲಿಯುಮೊಂದು ದೇಶಮುಮಕ್ಕುಂ; ಸರ್ಬ್ಬಂ=ಸಬ್ಬಂ; ನಿರ್ಬ್ಬುದ್ಧಿ=ನಿಬ್ಬುದ್ಧಿ; ಪುರ್ಗ್ಗಿ=ಪುಗ್ಗಿ (o. r. ಸುರ್ಗ್ಗಿ=ಸುಗ್ಗಿ); ಅರ್ಘ್ಘಂ=ಅಗ್ಗಂ; ಶೀರ್ಷಕಂ=ಸೀಸಕಂ, ಸೀಸಕಮೆಂದು ತಲೆಯ ಟೌಳಿ; ವರ್ತ್ತಿ=ಬತ್ತಿ; ಕರ್ತ್ತರಿ=ಕತ್ತರಿ; ಮರ್ಕ್ಕಟಂ=ಮಕ್ಕಡಂ; ದರ್ಪ್ಪಂ=ದಪ್ಪಂ; ಶರ್ಕ್ಕರೆ=ಸಕ್ಕರೆ; ವರ್ಗ್ಗಂ=ಬಗ್ಗಂ; ಅರ್ಜ್ಜನೆ=ಅಜ್ಜನೆ; ಕರ್ಕ್ಕಶಂ=ಕಕ್ಕಸಂ; ಅರ್ದ್ಧಂ=ಅದ್ದಂ; ಧರ್ಮ್ಮಂ=ಧಮ್ಮಂ; ನಿರ್ಮ್ಮಳಂ=ನಿಮ್ಮಳಂ.

ಕರ್ಕ್ಕ ದರ್ದ್ದುಗಳೆರಡಱ ಮೇಲಣ ರೇಫೆಗೆ ತದ್ಭವಮಾದೊಡಂ ಬಹುಳದಿಂ ಲೋಪಮಿಲ್ಲ—ಅರ್ಕ್ಕ=ಎರ್ಕ್ಕ; ದರ್ದ್ದು=ತರ್ದ್ದು. ಈ ತೆಱದಿನಿರ್ಪುವು. ಅವರ್ಕೆ ಪ್ರಯೋಗಂ.—

ಒರ್ಕ್ಕಡಿತೆನೀರ್ಗೆ ಪಱಿಪ-
ಟ್ಟೆರ್ಕ್ಕೆಯ ಪಣ್ಣೆಲೆಯ || 682 ||
ತರ್ದ್ದುಗಳಱುಗುಂ ಬಱಟೆಯೊ (o. r. ಬೆಱಟೆಯೊ)
ಉರ್ದ್ದಿ ನೆಲಾವರೆಯ ಬೇರನಾಮಳಕಮುಮಂ |
ಬರ್ದ್ದಿಲಿಮಿಂಚಿಯ ರಸದೊಳ್
ನಿರ್ದ್ದಯೆಯಿಂದೊರಸಿ ಪೂಸೆ ದಿನಪಂಚಕದೊಳ್. || 683 ||

ಪರಿವೃತರೇಫಲೋಪಕ್ಕೆ—ದ್ರೋಣಿ=ದೋಣಿ; ದ್ರೋಣಂ=ದೋಣಂ, ದೋಣಮೆಂದು ನಾಗೊಳಗಮುಂ ದ್ರೋಣಾಚಾರ್ಯನುಮಕ್ಕುಂ; ದ್ರೋಹಂ=ದೋಹಂ; ಕ್ರೇಣಿ=ಕೇಣಿ; ಭ್ರಮರಂ=ಬವರಂ; ಪ್ರಭೆ=ಹಬೆ; ಶ್ರೋಣಿ=ಸೋಣಿ; ಪ್ರಣಿತೆ=ಹಣಿತೆ; ಶ್ರವಣಂ=ಸವಣಂ; ಪ್ರಸರಂ=ಪಸರಂ; ಪತಿವ್ರತೆ=ಹದಿಬತೆ; ಶ್ರೇಣಿ=ಸೇಣಿ; ಪ್ರಭು=ಹಬು; ಚಂದ್ರಂ=ಚಂದಂ.

ಸುತ್ತಿದ ರೇಫೆ ದಡ್ಡಕ್ಕರಮಾದುದರ್ಕೆ—ವೇತ್ರಂ=ಬೆತ್ತಂ; ನೇತ್ರಂ=ನೆತ್ತಂ; ಛತ್ರಿಕೆ=ಸತ್ತಿಗೆ; ಸೂತ್ರಿಕೆ=ಸುತ್ತಿಗೆ; ತೀವ್ರಂ=ತಿಬ್ಬಂ; ಮುದ್ರಿಕೆ=

ಮುದ್ದಿಗೆ; ಚಕ್ರಪಕ್ಷಿ=ಚಕ್ಕವಕ್ಕಿ; ವ್ಯಾಘ್ರಂ=ಬಗ್ಗಂ; ನಿದ್ರೆ=ನಿದ್ದೆ; ಚಿತ್ರಾಕಾರಂ=ಚಿತ್ತಾಗಾರಂ; ಪುತ್ರಿಕೆ=ಪುತ್ತಿಗೆ, ಬಹುಳದಿಂ ಪುತ್ತಳಿಯುಮಕ್ಕುಂ.

ಸೂತ್ರಂ. ॥ ೨೬೨ ॥

ಕ್ಷ becomes either ಕ್ಕ, ಚ್ಚ, ಖ್ಖ, ಸ, or ಕ; also ಕ್ಷ್ಣ becomes ಕ್ಕ.

ದ್ವಿತ್ವಂ ಬೆರಸಿದ ಕತ್ವಂ ।
ಚತ್ವಂ ಖತ್ವಂ ಯಥಾಪ್ರಯೋಗದಿನಕ್ಕುಂ ॥
ಕ್ಷತ್ವಕ್ಕೆ ಬಹುಳದಿಂದಂ ।
ಸತ್ವಂ ಕತ್ವಂ ದ್ವಿರುಕ್ತಿಯಿಲ್ಲರೆಯೆಡೆಯೊಳ್ ॥ ೨೭೬ ॥

ಪದಚ್ಛೇದಂ.—ದ್ವಿತ್ವಂ ಬೆರಸಿದ ಕತ್ವಂ, ಚತ್ವಂ, ಖತ್ವಂ ಯಥಾಪ್ರಯೋಗದಿಂ ಆಕ್ಕುಂ ಕ್ಷತ್ವಕ್ಕೆ ಬಹುಳದಿಂದಂ; ಸತ್ವಂ, ಕತ್ವಂ—ದ್ವಿರುಕ್ತಿ ಇಲ್ಲ—ಅರೆ ಎಡೆಯೊಳ್.

ಅನ್ವಯಂ.—ಕ್ಷತ್ವಕ್ಕೆ ಬಹುಳದಿಂದಂ ದ್ವಿತ್ವಂ ಬೆರಸಿದ ಕತ್ವಂ, ಚತ್ವಂ, ಖತ್ವಂ ಯಥಾಪ್ರಯೋಗದಿಂ ಆಕ್ಕುಂ; ಅರೆಯೆಡೆಯೊಳ್ ಸತ್ವಂ; ಕತ್ವಂ, ದ್ವಿರುಕ್ತಿಯಿಲ್ಲ.

ಟೀಕು.—ಕ್ಷತ್ವಕ್ಕೆ=ಕ್ಷಕಾರಕ್ಕೆ; ಬಹುಳದಿಂದ=ಬಹುಳದಿಂದೆ; ದ್ವಿತ್ವಂ ಬೆರಸಿದ ಕತ್ವಂ=ದ್ವಿತ್ವವಂ ಬೆರಸಿದ ಕಕಾರಂ; ಚತ್ವಂ=ಚಕಾರಂ; ಖತ್ವಂ=ಖಕಾರಂ; ಯಥಾಪ್ರಯೋಗದಿಂ=ಪ್ರಯೋಗಾನುಸಾರದಿಂದೆ; ಅಕ್ಕುಂ=ಆಗುವುದು; ಅರೆಯೆಡೆಯೊಳ್=ಕೆಲವೆಡೆಯಲ್ಲಿ; ಸತ್ವಂ=ಸಕಾರಂ; ಕತ್ವಂ=ಕಕಾರಂ; ದ್ವಿರುಕ್ತಿ=ದ್ವಿರ್ಭಾವಂ; ಇಲ್ಲ=ಬಾರದು.

ವೃತ್ತಿ.—ಕ್ಷಕಾರಕ್ಕೆ ದ್ವಿತ್ವಂ ಬೆರಸಿದ ಕಕಾರಮುಂ ಚಕಾರಮುಂ ಖಕಾರಮುಂ ಪ್ರಯೋಗಾನುಸಾರಮಾಗಿ ಬಹುಳದಿನಕ್ಕುಂ; ಆ ಕ್ಷಕಾರಕ್ಕೆ ಸಕಾರಮೊರ್ಮೆ ಘಟಿಯಿಸುಗುಂ; ದ್ವಿತ್ವಮಿಲ್ಲದ ಕಕಾರಮುಂ ಕ್ಷಕಾರಕ್ಕೆ ಕಿಱಿದೆಡೆಯೊಳಕ್ಕುಂ.

ಪ್ರಯೋಗಂ.—ಕ್ಷಕಾರಕ್ಕೆ ದ್ವಿತ್ವದ ಕಕಾರಂ—ರಕ್ಷೆ=ರಕ್ಕೆ; ಪಕ್ಷಂ=ಪಕ್ಕಂ; ಲಕ್ಷಂ=ಲಕ್ಕಂ; ಪ್ರೇಕ್ಷಣಂ=ಪೆಕ್ಕಣಂ; ಅಕ್ಷರಂ=ಅಕ್ಕರಂ; ಸಾಕ್ಷಿ=ಸಾಕ್ಕಿ; ಭಿಕ್ಷೆ=ಬಿಕ್ಕೆ; ಲಕ್ಷಣಂ=ಲಕ್ಕಣಂ.

ದ್ವಿತ್ವದ ಚಕಾರಕ್ಕೆ—ಅಕ್ಷಿ=ಅಚ್ಚಿ; ಭಿಕ್ಷು=ಬಿಚ್ಚು; ಕಕ್ಷಂ=ಕಚ್ಚಂ; ಅಕ್ಷಂ=ಅಚ್ಚು; ಮಕ್ಷಿ=ಮಚ್ಚು.

ದ್ವಿತ್ವದ ಖಕಾರಕ್ಕೆ—ಪ್ರಕ್ಷಾಲಂ=ಪಖ್ಖಾಳಂ (o.r. ಪಖ್ಖಳಂ).

ಬಹುಳದಿಂ ಣಕಾರಮಿಶ್ರಮಪ್ಪ ಕ್ಷಕಾರಕ್ಕಂ ದ್ವಿತ್ವದ ಕಕಾರಂ—ತೀಕ್ಷ್ಣಂ=ತಿಕ್ಕಂ.

ಸಕಾರಕ್ಕೆ—ಕ್ಷೇಮಂ=ಸೇಮಂ; ಕ್ಷಪಣಂ=ಸವಣಂ.

ಅದ್ವಿತ್ವದ ಕಕಾರಕ್ಕೆ—ಕ್ಷೇಪಣಂ=ಕೇವಣಂ, ಕೇವಣಮೆಂದು ಸೂಂಕುವುದು; ಭೈಕ್ಷಂ=ಬೈಕಂ; ಪರೀಕ್ಷೆ=ಪರಿಕೆ; ಕ್ಷಾರಂ=ಕಾರಂ; ಕ್ಷೀರಂ=ಕೀರಂ; ದೀಕ್ಷೆ=ದೀಕೆ.

ಸೂತ್ರಂ.

ಮ becomes ವ; ಚ becomes ಸ or ದ; ಶ, ಷ, ಸ, ತ become ಚ; ಹ becomes either ಯ, ಗ, or ಣ.

ಪಡೆಗುಂ ಮತ್ವಂ ವತ್ವಮ |
ಅಡಸಿದ ಚತ್ವಕ್ಕೆ ಸತ್ವದತ್ವಂ ಶಷತಂ ||
ಪಡೆಗುಂ ಚಕಾರಮಂ ತಾಂ |
ಪಡೆಗುಂ ಬಹುಳದೆ ಹಕಾರದೆಡೆಯಂ ಯಗಣಂ || ೨೬೭ ||

ಪದಚ್ಛೇದಂ.—ಪಡೆಗುಂ ಮತ್ವಂ ವತ್ವಮಂ; ಅಡಸಿದ ಚತ್ವಕ್ಕೆ ಸತ್ವದತ್ವಂ; ಶಷತಂ ಪಡೆಗುಂ ಚಕಾರಮಂ; ತಾಂ ಪಡೆಗುಂ ಬಹುಳದೆ ಹಕಾರದ ಎಡೆಯಂ ಯಗಣಂ.

ಅನ್ವಯಂ.—ಮತ್ವಂ ವತ್ವಮಂ ಪಡೆಗುಂ; ಅಡಸಿದ ಚತ್ವಕ್ಕೆ ಸತ್ವದತ್ವಂ; ಶಷತಂ ಚಕಾರಮಂ ಪಡೆಗುಂ; ಬಹುಳದೆ ಹಕಾರದ ಎಡೆಯಂ ಯಗಣಂ ತಾಂ ಪಡೆಗುಂ.

ಟೀಕು.—ಮತ್ವಂ=ಮಕಾರಂ; ವತ್ವಮಂ=ವಕಾರಮಂ; ಪಡೆಗುಂ=ಪಡೆವುದು; ಅಡಸಿದ ಚತ್ವಕ್ಕೆ=ಶಬ್ದಂಗಳಲ್ಲಿರ್ದ ಚಕಾರಕ್ಕೆ; ಸತ್ವದತ್ವಂ=ಸಕಾರ ದಕಾರಂಗಳ್ ಬರ್ಪುವು; ಶಷತಂ=ಶಕಾರ ಷಕಾರ ತಕಾರಂ; ಚಕಾರಮಂ=ಚತ್ವಮಂ; ಪಡೆಗುಂ=ಪಡೆವುದು; ಬಹುಳದೆ=ಬಹುಳದಿಂದೆ; ಹಕಾರದ=ಹತ್ವದ; ಎಡೆಯಂ=ಸ್ಥಾನಮಂ; ಯಗಣಂ=ಯಕಾರ ಗಕಾರ ಣಕಾರಂ; ತಾಂ=ತಾಂ; ಪಡೆಗುಂ=ಪಡೆವುದು.

ವೃತ್ತಿ.—ಪರದೊಳಗಣ ಮಕಾರಂ ವಕಾರಮಕ್ಕುಂ; ಚಕಾರಕ್ಕೆ ಸಕಾರಮುಂ ದಕಾರಮುಮಕ್ಕುಂ; ಶ ಷ ತಂಗಳೆ ಚಕಾರಮಕ್ಕುಂ; ಹಕಾರಂ ಬಹುಳದಿಂ ಯಕಾರಮುಂ ಗಕಾರಮುಂ ಣಕಾರಮುಮಕ್ಕುಂ.

ಪ್ರಯೋಗಂ.—ಮಕಾರಕ್ಕೆ ವಕಾರಂ—ಭೀಮಂ=ಬೀವಂ; ಯಮಳಂ=ಜವಳಂ; ಗ್ರಾಮಂ=ಗಾವಂ; ಕುಂಕುಮಂ=ಕುಂಕುವಂ; ಹಿಮಂ=ಹಿವಂ; ರೋಮಂ=ರೋವಂ; ಭೂಮಿ=ಬೂವಿ; ಡಮರಕಂ (o. r. ಡಮರುಕಂ, ಡಮರುಗಂ)=ಡವರುಗಂ; ಶ್ರಮಂ=ಸವಂ; ಚಾಮುಂಡಿ=ಚಾವುಂಡಿ; ಕ್ರಮಂ=ಕವಂ; ಜೇಮನಂ=ಜೇವಣಂ (ಜೆವಣಂ); ಸಂಗಮಂ=ಸಂಗವಂ; ಅಮರಿ=ಅವರಿ (o. r. ಅವರೆ=ಅಮರೆ).

ಚಕಾರಕ್ಕೆ ಸಕಾರಂ — ಚರ್ಮಕಾರಂ = ಸಮ್ಮಗಾಱಂ; ಚೂರ್ಣಂ = ಸುಣ್ಣಂ; ಮರಿಚಂ = ಮೆಳಸು (ಮೆಱಿಸು); ಚೇಲಂ = ಸೇಲೆ; ಚೀರಂ = ಸೀರೆ; ಕ್ರಕಚಂ = ಕರಗಸಂ.

ಚಕಾರಕ್ಕೆ ದತ್ವಂ — ಉಚ್ಚಂ = ಉದ್ದಂ.

ಶತ್ವಕ್ಕೆ ಚತ್ವಂ — ಶಿಲ್ಪಿಕಂ = ಚಿಪ್ಪಿಗಂ; ಶಷ್ಕುಲಿ = ಚಕ್ಕುಲಿ; ವಂಶಂ = ಬಂಚಂ; ಶಿಖರಿ = ಚಿಕರಿ; ನಿಶ್ಚಲಂ = ನಿಚ್ಚಲಂ; ನಿಶ್ಚಿಂತಂ = ನಿಚ್ಚಿಂತಂ.

ಷತ್ವಕ್ಕೆ ಚತ್ವಂ — ಷಷ್ಠಿ = ಚಟ್ಟಿ.

ಬಹುಳದಿಂ ಸತ್ವಕ್ಕೆ ಚತ್ವಂ — ಹಂಸೆ = ಅಂಚೆ; ತುಳಸಿ = ತೊಳಚಿ; ಕಾಂಸ್ಯಂ = ಕಂಚು; ಅಪ್ಸರಸಿ = ಅಚ್ಚರಸಿ.

ತಕಾರಕ್ಕೆ ಚತ್ವಂ — ನರ್ತಕಿ = ನಚ್ಚಣಿ; ವತ್ಸಳೆ = ಬಚ್ಚಳೆ (o. r. ಬಚ್ಚಣೆ); ನಿತ್ಯಂ = ನಿಚ್ಚಂ.

ಹಕಾರಕ್ಕೆ ಯಕಾರಂ — ಕುಹಕಂ = ಕೊಯಕಂ.

ಹಕಾರಕ್ಕೆ ಗಕಾರಂ — ಹಡಹು (o. r. ಪಡಹು) = ಪಡಗು; ಸಿಂಹಂ = ಸಿಂಗಂ.

ಹಕಾರಕ್ಕೆ ಣಕಾರಂ — ಸನ್ನಾಹಂ = ಸನ್ನಣಂ, ಸನ್ನಣವೆಂದು ದಗಲೆ.

ಸೂತ್ರಂ. || ೨೬೪ ||

ತಳೆಗುಂ ಮೇಲಣ ಕಸಪಂ |
ತಳದ ತಕಾರಸ್ವರೂಪಮಂ ಮೇಗೆ ತಗು- ||
ಳ್ದೆಳಸಿದ ಹಕಾರಮುಂ ತಳ- |
ದೊಳಿರ್ದ ಮನಕಾರರೂಪಮಂ ಧರಿಯಿಸುಗುಂ ||೨೬೮||

ಕ್ತ, ಸ್ತ, ಪ್ತ become ತ್ತ; ಹ್ಮ becomes ಮ್ಮ; ಹ್ನ becomes ನ್ನ.

ಪದಚ್ಛೇದಂ. — ತಳೆಗುಂ ಮೇಲಣ ಕಸಪಂ ತಳದ ತಕಾರಸ್ವರೂಪಮಂ; ಮೇಗೆ ತಗಳ್ದು ಎಳಸಿದ ಹಕಾರಮುಂ ತಳದೊಳ್ ಇರ್ದ ಮನಕಾರರೂಪಮಂ ಧರಿಯಿಸುಗುಂ.

ಅನ್ವಯಂ. — ಮೇಲಣ ಕಸಪಂ ತಳದ ತಕಾರಸ್ವರೂಪಮಂ ತಳೆಗುಂ; ಮೇಗೆ ತಗುಳ್ದೆಳಸಿದ ಹಕಾರಮುಂ ತಳದೊಳ್ ಇರ್ದ ಮನಕಾರರೂಪಮಂ ಧರಿಯಿಸುಗುಂ.

ಟೀಕು. — ಮೇಲಣ = ಅಗ್ರದ; ಕಸಪಂ = ಕಕಾರ ಸಕಾರ ಪಕಾರಂ; ತಳದ = ಕೆಳಗಣ; ತಕಾರಸ್ವರೂಪಮಂ = ತಕಾರದ ರೂಪಮಂ; ತಳೆಗುಂ = ಧರಿಸುವುದು; ಮೇಗೆ = ಮೇಲೆ; ತಗುಳ್ದೆಳಸಿದ = ಕೂಡಿಕೊಂಡಿರ್ದ; ಹಕಾರಮುಂ = ಹಕಾರವೂ; ತಳದೊಳ್ = ಕೆಳಗೆ; ಇರ್ದ

ಮನಕಾರರೂಪಮಂ = ಇರ್ದ ಮಕಾರನಕಾರದ ಸ್ವರೂಪಮಂ; ಧರಿಯಿಸುಗುಂ = ಧರಿಯಿಸು ವುದು.

ವೃತ್ತಿ.—ಮೇಲಿರ್ದ ಕಸಪಾಕ್ಷರಂಗಳ್ ಕೆಳಗಣ ತಕಾರರೂಪಮಾಗಿ ಪರಿಣಮಿಸುಗುಂ; ಮೇಲಣ ಹಕಾರಮುಂ ಕೆಳಗಣ ಮಕಾರನಕಾರಮಾಗಿ ಪರಿಣಮಿಸುಗುಂ.

ಪ್ರಯೋಗಂ.—ಮೇಲಣ ಕಕಾರಕ್ಕೆ ತಕಾರಂ—ಶುಕ್ತಿ=ಸುತ್ತಿ; ಯುಕ್ತಿ= ಜುತ್ತಿ, ಜುಗುತಿಯುಮಕ್ಕುಂ (o. r. ಜುಕುತಿಯುಮಕ್ಕುಂ).

ಮೇಲಣ ಸಕಾರಕ್ಕೆ ತಕಾರಂ—ವಿಸ್ತಾರಂ=ಬಿತ್ತರಂ; ಕಸ್ತೂರಿ=ಕತ್ತುರಿ; ಪುಸ್ತಕಂ=ಹೊತ್ತಗೆ; ಕುಸ್ತುಂಬುರು=ಕೊತ್ತುಂಬರಿ.

ಮೇಲಣ ಪಕಾರಕ್ಕೆ ತಕಾರಂ—ಸಪ್ತಮಿ=ಸತ್ತಮಿ; ಗುಪ್ತಂ=ಗುತ್ತಂ.

ಮೇಲಣ ಹತ್ವಕ್ಕೆ ಮಕಾರಂ—ಬ್ರಹ್ಮಂ=ಬೊಮ್ಮಂ.

ಮೇಲಣ ಹತ್ವಕ್ಕೆ ನತ್ವಂ—ಚಿಹ್ನಂ=ಚಿನ್ನಂ.

ಸೂತ್ರಂ. ||. ೨೬೫ ||

ಹ್ಮ becomes ಮ್ಮ; ಹ್ಕ becomes ಕ್ಕ; ಹ್ಪ becomes ಪ್ಪ; ಹ್ಫ becomes ಫ್ಫ; ಹ್ನ becomes ನ್ನ; ಙ becomes ನ್ನ; ಣ್ಮ becomes ಮ್ಮ.

ತಳದ ಮಕಾಕ್ಷರರೂಪಂ |
ಗಱಿಯಿಪುದಗ್ರದ ಪಕಾರಮಗ್ರತಕಾರಂ ||
ತಳದ ಪಫನಮೆ ದಲಕ್ಕುಂ |
ತಳದ ನಮಾಕ್ಷರಮೆಯಕ್ಕುಮಗ್ರದ ನಣಮುಂ || ೨೬೯ ||

ಪದಚ್ಛೇದಂ.— ತಳದ ಮಕಾಕ್ಷರರೂಪಂ ಗಱಿಯಿಪುದು ಅಗ್ರದ ಪಕಾರಂ; ಅಗ್ರತಕಾರಂ ತಳದ ಪಫನಮೆದಲ್ ಅಕ್ಕುಂ ತಳದ ನಮಾಕ್ಷರಮೆ ಅಕ್ಕುಂ ಅಗ್ರದ ನಣಮುಂ.

ಅನ್ವಯಂ.— ಅಗ್ರದ ಪಕಾರಂ ತಳದ ಮಕಾಕ್ಷರರೂಪಂ ಗಱಿಯಿಪುದು; ಅಗ್ರತಕಾರಂ ತಳದ ಪಫನಮೆದಲ್ ಅಕ್ಕುಂ; ಅಗ್ರದ ನಣಮುಂ ತಳದ ನಮಾಕ್ಷರಮೆ ಅಕ್ಕುಂ.

ಟೀಕು.— ಅಗ್ರದ = ಮೇಲಣ; ಪಕಾರಂ = ಪತ್ವಂ; ತಳದ = ಕೆಳಗಣ; ಮಕಾಕ್ಷರ ರೂಪಂ = ಮಕಾರದ ಕಕಾರದ ರೂಪಂ; ಗಱಿಯಿಪುದು = ಗಱಿಯಿಸುವುದು; ಅಗ್ರತಕಾರಂ = ಮೇಲಣ ತಕಾರಂ; ತಳದ = ಕೆಳಗಣ; ಪಫನಮೆ = ಪಕಾರ ಫಕಾರ ನಕಾರವೆ; ದಲ್ = ನಿಶ್ಚ ಯವಾಗಿ; ಅಕ್ಕುಂ = ಆಗುವುದು; ಅಗ್ರದ = ಮೇಲಣ; ನಣಮುಂ = ನಕಾರ ಣಕಾರವುಂ; ತಳ ದ = ಕೆಳಗಣ; ನಮಾಕ್ಷರಮೆ = ನಕಾರ ಮಕಾರವೆ; ಅಕ್ಕುಂ = ಆಗುವುದು.

ವೃತ್ತಿ.—ಮೇಲಣ ಷತ್ವಂ ತಳದ ಮತ್ವ ಕತ್ವಂಗಳಕ್ಕುಂ; ಮೇಲಣ ತತ್ವಂ ಕೆಳಗಣ ಪ ಫ ನಂಗಳಕ್ಕುಂ; ಮೇಲಣ ಣಕಾರ ನಕಾರಂಗಳ್ ಕೆಳಗಣ ನತ್ವ ಮತ್ವಂಗಳಕ್ಕುಂ.

ಪ್ರಯೋಗಂ.—ಮೇಲಣ ಷತ್ವಕ್ಕೆ ಮತ್ವಂ—ಉಷ್ಮ=ಉಮ್ಮ.

ಮೇಲಣ ಷತ್ವಕ್ಕೆ ಕತ್ವಂ—ವಿಷ್ಕಿರಂ=ವಿಕ್ಕಿರಂ, ಎಕ್ಕಿರಮೆಂದು ಪಕ್ಕಿ; ಪುಷ್ಕರಣೆ=ಹೊಕ್ಕರಣೆ; ಮಷ್ಕರಿ=ಮಕ್ಕರಿ.

ಮೇಲಣ ತತ್ವಕ್ಕೆ ಪತ್ವಂ—ಉತ್ಪಟಂ=ಉಪ್ಪಡಂ.

ಮೇಲಣ ತತ್ವಕ್ಕೆ ಫತ್ವಂ—ಸತ್ಫಲಂ=ಸಪ್ಫಳಂ=(o. r. ಸಪ್ಫಳಂ).

ಮೇಲಣ ತತ್ವಕ್ಕೆ ನತ್ವಂ—ರತ್ನಂ=ರನ್ನಂ.

ಮೇಲಣ ಣತ್ವಕ್ಕೆ ನತ್ವಂ—ಜೀರ್ಣಂ=ಜಿನ್ನಂ (o. r. ಜೀನ್ನಂ); ಕರ್ಣಂ=ಕನ್ನಂ; ಕರ್ಣಾಟಕಂ=ಕನ್ನಡಂ.

ಮೇಲಣ ನತ್ವಕ್ಕೆ ಮತ್ವಂ—ಉನ್ಮತ್ತಂ=ಉಮ್ಮತ್ತಂ.

ಸೂತ್ರಂ. || ೨೬೬ ||

Within words ಜ್ವ becomes ಜ್ಜ; ಲ್ವ becomes ಲ್ಲ; ತ್ವ becomes ತ್ತ; ದ್ವ becomes ದ್ದ; ನ್ಯ becomes ನ್ನ; ಲ್ಯ becomes ಲ್ಲ; ತ್ಯ becomes ತ್ತ; ವ್ಯ becomes ಬ್ಬ; ಪ್ಯ becomes ಪ್ಪ; ಗ್ನ becomes ಗ್ಗ.

ಜಲತದ ಕೆಳಗಣ ವತ್ವಂ |
ನಲತವಪಾಕ್ಷರದ ಕೆಳಗೆ ಕೂಡಿದ ಯತ್ವಂ ||
ಸಲೆ ಗತ್ವದ ಕೆಳ ಮ್ಮೆಯೊಳ್ |
ನೆಲಸಿದ ನತ್ವಂ ತದಾಕೃತಿಯನಾಳ್ದಿರ್ಕುಂ || ೨೮೦ ||

ಪದಚ್ಛೇದಂ.—ಜಲತದ ಕೆಳಗಣ ವತ್ವಂ, ನಲತವಪಾಕ್ಷರದ ಕೆಳಗೆ ಕೂಡಿದ ಯತ್ವಂ, ಸಲೆ ಗತ್ವದ ಕೆಳ ಮ್ಮೆಯೊಳ್ ನೆಲಸಿದ ನತ್ವಂ ತದಾಕೃತಿಯುಂ ಆಳ್ದು ಇರ್ಕುಂ.

ಟೀಕು, ಯಥಾನ್ವಯಂ.—ಜಲತದ=ಜಕಾರ ಲಕಾರ ತಕಾರಂಗಳ; ಕೆಳಗಣ=ಅಡಿಯಣ; ವತ್ವಂ=ವಕಾರಂ; ನಲತವಪಾಕ್ಷರದ=ನಕಾರ ಲಕಾರ ತಕಾರ ವಕಾರ ಪಕಾರವೆಂಬಕ್ಷರದ; ಕೆಳಗೆ=ತಳದಲ್ಲಿ; ಕೂಡಿದ ಯತ್ವಂ=ಕೂಡಿದ ಯಕಾರಂ; ಸಲೆ=ಚನ್ನಾಗಿ; ಗತ್ವದ=ಗಕಾರದ; ಕೆಳಮ್ಮೆಯೊಳ್=ಕೆಳಗಣ ಮೈಯಲ್ಲಿ; ನೆಲಸಿದ ನತ್ವಂ=ನೆಲೆಗೊಂಡ ನಕಾರಂ; ತದಾಕೃತಿಯಂ=ಆ ಮೇಲಿರ್ದಕ್ಷರದಾಕಾರಮುಂ; ಆಳ್ದು=ತಾಳ್ದು; ಇರ್ಕುಂ=ಇರ್ಪುವು.

ವೃತ್ತಿ.—ಪದಂಗಳೊಳ್ ನೆಲಸಿದ ಜಕಾರ ಲಕಾರ ತಕಾರಂಗಳ ಕೆಳಗಿರ್ದ ವಕಾರಮವಱಿಂತಕ್ಕುಂ; ನಕಾರ ಲಕಾರ ತಕಾರ ವಕಾರ ಪಕಾರಂಗಳ ಕೆಳಗಿರ್ದ ಯಕಾರಮವಱಿಂತಕ್ಕುಂ; ಗತ್ವದ ಕೆಳಗಣ ನತ್ವಂ ಗತ್ವಮೆಯಕ್ಕುಂ.

ಪ್ರಯೋಗಂ.—ವತ್ವಕ್ಕೆ ಜತ್ವಂ—ಉಜ್ಜ್ವಲಂ=ಉಜ್ಜಳಂ; ಪ್ರಜ್ವಲಂ=ಪಜ್ಜಳಂ.

ವತ್ವಕ್ಕೆ ಲತ್ವಂ—ಬಿಲ್ವಪತ್ರಂ=ಬೆಲ್ಲವತ್ತಂ.

ವತ್ವಕ್ಕೆ ತತ್ವಂ—ಸತ್ವಕಂ=ಸತ್ತುಗಂ.

ಯತ್ವಕ್ಕೆ ನತ್ವಂ—ಮನ್ಯಾಳಿ=ಮನ್ನಳಿ; ಅನ್ಯಾಯಂ=ಅನ್ನೆಯಂ; ಕನ್ಯಕೆ=ಕನ್ನಿಕೆ.

ಯತ್ವಕ್ಕೆ ಲತ್ವಂ—ಪಲ್ಯಯನಂ=ಹಲ್ಲಣಂ.

ಯತ್ವಕ್ಕೆ ತತ್ವಂ—ಮೃತ್ಯು=ಮಿತ್ತು, ಮಿಟ್ಟುವೆಂದುಮುಂಟು.

ಯತ್ವಕ್ಕೆ ವತ್ವಂ—ಕಾವ್ಯಂ=ಕಬ್ಬಂ.

ಯತ್ವಕ್ಕೆ ಪತ್ವಂ—ಲೇಪ್ಯಂ=ಲೆಪ್ಪಂ.

ನತ್ವಕ್ಕೆ ಗತ್ವಂ—ಅಗ್ನಿ=ಅಗ್ಗಿ; ಲಾಗ್ನಿಕಂ=ಲಗ್ಗಿಕಂ (o. r. ಲಗ್ಗಿಗಂ). ಮೃದ್ವೀಕೆ ಮುದ್ದಿಗೆಯಾದಂತೆ ಕೆಳಗಣಕ್ಕರಮೆ ಮೇಲಣದಪ್ಪುದರ್ಕೆ ಕೆಲವಂ ಪ್ರಯೋಗವಶದಿನಱಿವುದು.

ಸೂತ್ರಂ. || ೨೬೭ ||

ದ becomes ವ, ರ, ಜ, ಯ, ತ, ಡ. The first syllable of a word is lengthened occasionally.

ವರಜಯತಡವರ್ಣಮನಾ |
ಚರಿಪುದು ತಾಂ ಬೇಱಿ ಬೇಱಿ ಪದಚಯದೊಳ್ಸಂ- ||
ಚರಿಪ ದಕಾರಕ್ಕಾದಂ |
ದೊರೆಕೊಳ್ಗುಂ ಕೆಲವು ಶಬ್ದದಾದಿಗೆ ದೀರ್ಘಂ || ೨೮೧ ||

ಪದಚ್ಛೇದಂ.—ವರಜಯತಡವರ್ಣಮಂ ಆಚರಿಪುದು ತಾಂ ಬೇಱಿ ಬೇಱಿ ಪದಚಯದೊಳ್ ಸಂಚರಿಪ ದಕಾರಕ್ಕೆ ಆದಂ; ದೊರೆಕೊಳ್ಗುಂ ಕೆಲವು ಶಬ್ದದ ಆದಿಗೆ ದೀರ್ಘಂ.

ಅನ್ವಯಂ.—ಪದಚಯದೊಳ್ ಸಂಚರಿಪ ದಕಾರಕ್ಕೆ ಆದಂ ಬೇಱಿ ಬೇಱಿ ವರಜಯತಡವರ್ಣಮಂ ತಾಂ ಆಚರಿಪುದು; ಕೆಲವು ಶಬ್ದದ ಆದಿಗೆ ದೀರ್ಘಂ ದೊರೆಕೊಳ್ಗುಂ.

ಟೀಕು.—ಪದಚಯದೊಳ್=ಪದಸಮೂಹದಲ್ಲಿ; ಸಂಚರಿಪ ದಕಾರಕ್ಕೆ=ಸಂಚರಿಸುವ ದಕಾರಕ್ಕೆ; ಅದಂ—ಅದಂ ಎಂಬ ವಿಶೇಷಣದಿಂದೆ; ಬೇಱ ಬೇಱ=ಒಂದೊಂದಾಗಿ; ವರಜಯತಡವರ್ಣಮಂ=ವಕಾರ ರೇಫ ಜಕಾರ ಯಕಾರ ತಕಾರ ಡಕಾರವೆಂಬಕ್ಷರವಂ; ತಾಂ=ವಿದ್ವಾಂಸರ್ ತಾಂ; ಅಚರಿಪುದು=ಹೇಳ್ವುದು; ಕೆಲವು ಶಬ್ದದ=ಕೆಲವು ಶಬ್ದಂಗಳ; ಆದಿಗೆ=ಮೊದಲ್ಗೆ; ದೀರ್ಘಂ=ದೀರ್ಘಂ; ದೊರೆಕೊಳ್ಗುಂ=ಬರ್ಪುದು.

ವೃತ್ತಿ.—ಪದಂಗಳೊಳ್ನೆಲಸಿದ ದತ್ವಕ್ಕೆ ವತ್ವಮುಂ ರೇಫೆಯುಂ ಜತ್ವಮುಂ ಯತ್ವಮುಂ ತತ್ವಮುಂ ಡತ್ವಮುಮಾದೇಶಮಕ್ಕುಂ; ಕೆಲವು ಶಬ್ದಂಗಳಾದಿಗೆ ದೀರ್ಘಮಕ್ಕುಂ.

ಪ್ರಯೋಗಂ.—ದಕಾರಕ್ಕೆ ವತ್ವಂ—ಪಾದುಕಂ=ಹಾವುಗೆ.

ದಕಾರಕ್ಕೆ ರೇಫಂ—ಕದಂಬಂ=ಕರಂಬಂ, ಕರಂಬಮೆಂದು ಹಸುರ ಶಾಕದ ಕಾವು.

ದತ್ವಕ್ಕೆ ಜತ್ವಂ—ಗದೆ=ಗಜೆ; ದಂತಂ=ಜಂತಂ.

ದತ್ವಕ್ಕೆ ಯತ್ವಂ—ಮದನಂ=ಮಯಣಂ; ಪದಂ=ಪಯಂ; ಯಶೋದೆ=ಜಸೋಯೆ.

ದತ್ವಕ್ಕೆ ತತ್ವಂ—ದರ್ದುರ=ತರ್ದುರ.

ದತ್ವಕ್ಕೆ ಡತ್ವಂ—ವಿಚ್ಛಂದಂ=ಬಿಚ್ಚಂಡಂ; ಪದದಕ್ಕೆ (o. r. ಪದಡಕ್ಕೆ)= ಪದಡಕ್ಕೆ (o. r. ಪಡಡಕ್ಕೆ).

ಪದದಾದಿಯ ದೀರ್ಘಕ್ಕೆ—ಗಹನಂ=ಗಾನಂ; ನವಮಿ=ನಾಮಿ; ದಂಷ್ಟ್ರಂ=ದಾಡೆ; ಕಹಳೆ=ಕಾಳೆ; ಅಮರೆ=ಆವರೆ; ದ್ವಿಪಟ್ಟಿಕೆ=ದೂವಟ್ಟಿಗೆ; ದ್ವಿಹಸ್ತಿ=ದೂಹಸ್ತಿ.

2. Changes of Vowels and Consonants in the Beginning.

ಸೂತ್ರಂ. || ೨೬೮ ||

In the beginning ಋ becomes ರಿ, ಇ, ಎ, ಅ, and ಉ; in the middle ಆ and ಅರ್.

ಪದದಾದಿಯ ಋತ್ವಕ್ಕಿ- |
ತ್ವದೆತ್ವದತ್ವದ ವಿಧಾನಮುತ್ವಂ ಬಹುಳಂ ||
ಪುದಿದಿಕ್ಕುಮಮೃತಶಬ್ದಾಂ-
ತದಲ್ಲಿಯುಂ ಬ್ರಹ್ಮಶಬ್ದದಂತಿರೆ ರೇಫಂ || ೨೮೨ ||

ಪದಚ್ಛೇದಂ.—ಪದದ ಆದಿಯ ಋತ್ವಕ್ಕೆ ಇತ್ವದ ಎತ್ವದ ಅತ್ವದ ವಿಧಾನಂ, ಉತ್ವಂ ಬಹುಳಂ, ಪುಗಿದು ಇರ್ಕುಂ; ಅಮೃತಶಬ್ದಾಂತದಲ್ಲಿಯುಂ, ಬ್ರಹ್ಮಶಬ್ದದಂತೆ ಇರೆ, ರೇಫಂ.

ಅನ್ವಯಂ.—ಪದದ ಆದಿಯ ಋತ್ವಕ್ಕೆ ಇತ್ವದ ಎತ್ವದ ಅತ್ವದ ವಿಧಾನಂ ಪುಗಿದು ಇರ್ಕುಂ, ಉತ್ವಂ ಬಹುಳಂ; ಅಮೃತಶಬ್ದಾಂತದಲ್ಲಿಯುಂ, ಬ್ರಹ್ಮಶಬ್ದದಂತಿರೆ, ರೇಫಂ.

ಟೀಕು.—ಪದದ = ಪದಂಗಳ; ಆದಿಯ = ಮೊದಲ; ಋತ್ವಕ್ಕೆ = ಋಕಾರಕ್ಕೆ; ಇತ್ವದ = ಇಕಾರದ; ಎತ್ವದ = ಎಕಾರದ; ಅತ್ವದ = ಅಕಾರದ; ವಿಧಾನಂ = ವಿಧಾನಂ; ಪುಗಿದಿರ್ಕುಂ = ಪ್ರವೇಶವಾಗಿರ್ಪುದು; ಉತ್ವಂ = ಉಕಾರಂ; ಬಹುಳಂ = ಬಹುಳವಾಗಿ ಪ್ರವೇಶವಾಗಿರ್ಪುದು; ಅಮೃತಶಬ್ದಾಂತದಲ್ಲಿಯುಂ = ಅಮೃತವೆಂಬ ಶಬ್ದದ ಕಡೆಯಲ್ಲಿಯುಂ; ಬ್ರಹ್ಮಶಬ್ದದಂತಿರೆ=ಬ್ರಹ್ಮಶಬ್ದದ ಹಾಂಗೆ; ರೇಫ=ರೇಫೆ ಪ್ರವೇಶವಾಗಿರ್ಪುದು.

ವೃತ್ತಿ—ಪದದ ಮೊದಲ ಋತ್ವಕ್ಕೆ ಇತ್ವಮುಂ ಎತ್ವಮುಂ ಅತ್ವಮುಂ ಬಹುಳದಿನುತ್ವಮುಮಕ್ಕುಂ; ಬ್ರಹ್ಮಶಬ್ದದಂತಮೃತಶಬ್ದದ ಕಡೆಗಂ ರೇಫಂ.

ಪ್ರಯೋಗಂ.—ಋತ್ವಕ್ಕಿತ್ವಂ—ಋತು=ರಿತು; ಋಷಿ=ರಿಸಿ; ಋಣಂ=ರಿಣಂ; ಮೃಗಂ=ಮಿಗಂ; ಶೃಂಗಿ=ಸಿಂಗಿ; ತೃಣಂ=ತಿಣಂ; ಭೃಂಗಂ=ಬಿಂಗಂ; ಬೃಂದಂ=ಬಿಂದಂ; ವೃದ್ಧಿ=ವಿದ್ದಿ; ವೃತ್ತಿ=ವಿತ್ತಿ; ವೃಥೆ=ವಿತೆ; ಮೃತಂ=ಮಿತಂ; ಭೃಂಗಾರಂ=ಬಿಂಗಾರಂ; ಶೃಂಗಾರಂ=ಸಿಂಗಾರಂ; ಋಜು=ರಿಜು.

ಋತ್ವಕ್ಕೆತ್ವಂ—ಹೃಷ್ಟಂ=ಹೆಟ್ಟಂ; ಹೃದಯಂ=ಹೆದೆಯಂ.

ಋತ್ವಕ್ಕತ್ವಂ—ವೃಷಭಂ=ಬಸವಂ; ಶೃಂಖಲಂ=ಸಂಕಲೆ; ಕೃತಕಿ=ಗದಕಿ.

ಬಹುಳದಿಂ ಪದಮಧ್ಯದ ಋತ್ವಕ್ಕಮತ್ವಂ—ಪ್ರಾಕೃತಂ=ಪಾಗದಂ; ಅಮೃತಂ=ಅಮರ್ದುೞ; ಸಂಸ್ಕೃತಂ=ಸಕ್ಕದಂ.

ಪದದಾದಿಯ ಋತ್ವಕ್ಕುತ್ವಂ—ಮೃದ್ವೀಕೆ=ಮುದ್ದಿಗೆ.

ಬ್ರಹ್ಮಶಬ್ದದಂತಮೃತಶಬ್ದದ ಕಡೆಗಂ ರೇಫಂ—ಬ್ರಹ್ಮ=ಬರ್ಮ್ಮ; ಅಮೃತ=ಅಮರ್ದುೞ.

ಸೂತ್ರಂ. || ೨೬೯ ||

In the beginning ಅ becomes ಉ, ಇ, or ಹ; after the first syllable ಜ್ಞ becomes ನ್ನ or ಣ.

ಆದಿಯೊಳಿರ್ದತ್ವಕ್ಕು- |
ತ್ವಾದೇಶಮುಮಿತ್ವವೃತ್ತಿಯುಂ ಹತ್ವಮುಮಾ- ||
ಪಾದಿತಮಕ್ಕುಂ ಜ್ಞತ್ವ- |
ಕ್ಕಾದಿಯನುೞಿದು ನ್ನನಕ್ಕುಮದು ಬಹುಳತೆಯಿಂ
|| ೨೮೩ ||

ಪದಚ್ಛೇದಂ.— ಆದಿಯೊಳ್ ಇರ್ದ ಅತ್ವಕ್ಕೆ ಉತ್ವಾದೇಶಮುಂ ಇತ್ವವೃತ್ತಿಯುಂ ಹತ್ವಮುಂ ಆಪಾದಿತಂ ಅಕ್ಕುಂ, ಜ್ಞತ್ವಕ್ಕೆ ಆದಿಯಂ ಉೞಿದು ನ್ನಂ ಅಕ್ಕುಂ, ಅದು ಬಹುಳತೆಯಿಂ.

ಅನ್ವಯಂ.— ನ್ನಂ ಅದು ಬಹುಳತೆಯಿಂ ಅಕ್ಕುಂ ಎಂಬುದನ್ವಯಂ.

ಟೀಕು.— ಆದಿಯೊಳ್ = ಮೊದಲಲ್ಲಿ; ಇರ್ದತ್ವಕ್ಕೆ = ಇರ್ದಕಾರಕ್ಕೆ; ಉತ್ವಾದೇಶಮುಂ = ಉಕಾರದ ಆದೇಶಮುಂ; ಇತ್ವವೃತ್ತಿಯುಂ = ಇಕಾರದ ವರ್ತನೆಯುಂ; ಹತ್ವಮುಂ = ಹಕಾರಮುಂ; ಆಪಾದಿತಂ = ಪ್ರತಿಪಾದಿಸಲ್ಪಡುವುದು; ಅಕ್ಕುಂ = ಆಗುವುದು; ಜ್ಞತ್ವಕ್ಕೆ = ಜ್ಞಕಾರಕ್ಕೆ; ಆದಿಯಂ = ಮೊದಲಂ; ಉೞಿದು = ಬಿಟ್ಟು; ನ್ನಂ = ದ್ವಿತ್ವದ ನಕಾರಂ; ಅದು = ಅದು; ಬಹುಳತೆಯಿಂ = ಬಹುಳತ್ವದಿಂದೆ; ಅಕ್ಕುಂ = ಆಗುವುದು.

ವೃತ್ತಿ.— ಪದದಾದಿಯಕಾರಕ್ಕುಕಾರಮುಮಿಕಾರಮುಂ ಹಕಾರಮುಮಕ್ಕುಂ; ಆದಿಯಂ ಕಳೆದುೞಿದ ಜ್ಞತ್ವಕ್ಕೆ ದ್ವಿತ್ವದ ನಕಾರಂ ಬಹುಳದಿನಕ್ಕುಂ.

ಪ್ರಯೋಗಂ.— ಅತ್ವಕ್ಕುತ್ವಂ—ಅಂಗುಷ್ಠಂ=ಉಂಗುಟಂ; ತ್ವರಿತಂ=ತುರಿಹಂ.

(H.T.) ಜಿಗುಳೆ

(ಪ್ರ.) ಅತ್ವಕ್ಕಿತ್ವಂ—ಜಳೂಕಂ=ಜಿಗುಳೆ; ಅಂಗಾರಂ=ಇಂಗಳಂ.

ಅತ್ವಕ್ಕೆ ಹತ್ವಂ—ಅಗ್ನಿ=ಹಗ್ಗಿ.

ಜ್ಞಕಾರಕ್ಕೆ ದ್ವಿತ್ವನಕಾರಂ—ವಿಜ್ಞಾನಂ=ಬಿನ್ನಣಂ; ವಿಜ್ಞಾಪನಂ=ಬಿನ್ನಪಂ; ಸಂಜ್ಞೆ=ಸನ್ನೆ; ಯಜ್ಞಂ=ಜನ್ನಂ.

ಬಹುಳಮೆಂಬುದಱಿಂದಾಜ್ಞೆಗೆ ಆಣೆಯೆಂದುಂಟು.

ಸೂತ್ರಂ. || ೨೭೦ ||

In the beginning ಉ becomes ಒ or ಓ; ಊ becomes ಓ; ಔ becomes ಒ and ಓ; ಅ becomes ಒ and ಓ; the first syllable, when long, becomes short.

ಪದದಾದಿಯುವರ್ಣಕ್ಕೌ- |
ತ್ವದತ್ವದೆಡೆಗೊತ್ವಮುಂ ಪೊದಟ್ದೋತ್ವಮುಮ- ||
ಪ್ಪುದು ವೈಕಲ್ಪಿಕದಿಂ ಶ- |
ಬ್ದದಾದಿದೀರ್ಘಕ್ಕೆ ಪಿರಿದುಮಕ್ಕುಂ ಹ್ರಸ್ವಂ || ೨೮೪ ||

ಪದಚ್ಛೇದಂ.— ಪದದ ಆದಿಯ ಉವರ್ಣಕ್ಕೆ ಔತ್ವದ ಅತ್ವದ ಎಡೆಗೆ ಒತ್ವಮುಂ ಪೊದಟ್ದ ಓತ್ವಮುಂ ಅಪ್ಪುದು ವೈಕಲ್ಪಿಕದಿಂ; ಶಬ್ದದ ಆದಿದೀರ್ಘಕ್ಕೆ ಪಿರಿದುಂ ಅಕ್ಕುಂ ಹ್ರಸ್ವಂ.

ಅನ್ವಯಂ.—ಹ್ರಸ್ವಂ ಅಕ್ಕುಂ ಎಂಬುದನ್ವಯಂ.

ಟೀಕು.— ಪದದ = ಪದಂಗಳ; ಆದಿಯ = ಮೊದಲ; ಉವರ್ಣಕ್ಕೆ = ಉ ಊ ಎಂಬ ಸವರ್ಣಕ್ಕೆ; ಔತ್ವದ = ಔಕಾರದ; ಅತ್ವದ = ಅಕಾರದ; ಎಡೆಗೆ = ಸ್ಥಾನಕ್ಕೆ; ಒತ್ವಮುಂ = ಹ್ರಸ್ವವಾದ ಒಕಾರವುಂ; ಪೊದಟ್ದೋತ್ವಮುಂ = ಪ್ರಸಿದ್ಧಿವಡೆದ ಓಕಾರವುಂ; ವೈಕಲ್ಪಿಕದಿಂ = ವಿಕಲ್ಪದಿಂದೆ; ಅಪ್ಪುದು = ಆಗುವುದು; ಶಬ್ದದ = ಶಬ್ದಂಗಳ; ಆದಿದೀರ್ಘಕ್ಕೆ = ಮೊದಲ ದೀರ್ಘಕ್ಕೆ; ಪಿರಿದುಂ = ವಿಶೇಷವಾಗಿ; ಹ್ರಸ್ವಂ = ಹ್ರಸ್ವಂ; ಅಕ್ಕುಂ = ಆಗುವುದು.

ವೃತ್ತಿ.—ವಿಕಲ್ಪದಿಂ ಪದದಾದಿಯ ಉ ಊ ಎಂಬಿವರ್ಕಂ ಔಕಾರಕ್ಕಂ ಅಕಾರಕ್ಕಂ ಹ್ರಸ್ವೋತ್ವಮುಂ ದೀರ್ಘೋತ್ವಮುಂ ಅಕ್ಕುಂ; ಪದಂಗಳ ಮೊದಲ ದೀರ್ಘಕ್ಕೆ ಪಿರಿದುಂ ಹ್ರಸ್ವಮಕ್ಕುಂ.

ಪ್ರಯೋಗಂ.— ಉಕಾರಕ್ಕೆ ಒತ್ವಂ— ಕುಂತಂ = ಕೊಂತಂ; ಕುಂಡಂ = ಕೊಂಡಂ; ತುವರಿ = ತೊವರಿ; ಸುಧೆ = ಸೊದೆ; ಭುಜಂಗಂ = ಬೊಜಂಗಂ; ಸುಖಂ = ಸೊಕಂ (o. r. ಸೊಗಂ); ಸುಭಗಂ = ಸೊಬಗಂ; ಮುಖಂ = ಮೊಗಂ; ಉಷ್ಟ್ರಂ = ಒಟ್ಟೆ (o. r. ಒಂಟೆ); ಪುಸ್ತಕಂ = ಪೊತ್ತಗೆ; ತುಲಸಿ = ತೊಳಸಿ (o. r. ತೊಳಚಿ).

ಉಕಾರಕ್ಕೆ ಓತ್ವಂ— ಸುವಾಸಿನಿ = ಸೋವಾಸಿಣಿ (o. r. ಸೋವಾಸಿನಿ); ಕುಕ್ಕುಟಂ = ಕೋೞಿ; ಕುರುಂಟಂ = ಗೋರಟೆ.

ಊಕಾರಕ್ಕೆ ಓತ್ವಂ— ಮೂಢಂ = ಮೋಡಂ; ಕೂಟಂ = ಕೋಡು.

ಔಕಾರಕ್ಕೆ ಒತ್ವಂ— ಸೌರಾಷ್ಟ್ರಂ = ಸೊರಟಂ; ಕ್ರೌಂಚಂ = ಕೊಂಚೆ.

ಔಕಾರಕ್ಕೆ ಓತ್ವಂ—ಕೌಪೀನಂ=ಕೋವಣಂ.

ಅಕಾರಕ್ಕೆ ಒತ್ವಂ—ಸ್ವರ್ಣಂ=ಸೊನ್ನೆ.

ಅಕಾರಕ್ಕೆ ಓತ್ವಂ—ಮಯೂರಂ=ಮೋರಂ.

ಆದಿದೀರ್ಘಕ್ಕೆ ಹ್ರಸ್ವಂ—ಕಾರ್ಯಂ=ಕಜ್ಜಂ; ಸೂತ್ರಿಕೆ=ಸುತ್ತಿಗೆ; ರಾಕ್ಷಸಂ=ರಕ್ಕಸಂ; ಪೂರ್ವೆ=ಹುಬ್ಬೆ; ಗೂರ್ಜರಂ=ಗುಜ್ಜರಂ; ಸಾಕ್ಷಿ=ಸಕ್ಕಿ; ಪ್ರೇಕ್ಷಣಂ=ಪೆಕ್ಕಣಂ; ವ್ಯಾಘ್ರಂ=ಬಗ್ಗಂ; ಕಾಂಚಿ=ಕಂಚಿ; ಕಾಂಜಿ=ಗಂಜಿ; ಆರ್ಯಂ=ಅಜ್ಜಂ; ತಾತಂ=ತಂದೆ; ತೀಕ್ಷ್ಣಂ=ತಿಕ್ಕಂ; ಕಾಂಡಪಟಂ=ಕಂಡಪಟಂ; ಲಾಗ್ನಿಕಂ=ಲಗ್ಗಿಕಂ (o. r. ಲಗ್ಗಿಗಂ).

ಸೂತ್ರಂ. ॥ ೨೭೧ ॥

In the beginning it now and then happens that ಇ and ಅ become ಎ, and ಏ; also that ಐ becomes ಎ or ಏ; an initial ಹ is dropped, but its vowel is retained.

ಅಕ್ಕುಮೆವರ್ಣಂ ಭಾವಿಸೆ ।
ತಕ್ಕಂತೆ ಪದಾದಿಯಿತ್ವದತ್ವದ ಸಂಸ್ಥಾ- ॥
ನಕ್ಕಂ ಮತ್ತೈತ್ವಕ್ಕಂ ।
ಮಿಕ್ಕಾದಿಹಕಾರಮಸ್ವರದೆ ಲೋಪಿಸುಗುಂ ॥ ೨೮೫ ॥

ಪದಚ್ಛೇದಂ.—ಅಕ್ಕುಂ ಎವರ್ಣಂ, ಭಾವಿಸೆ, ತಕ್ಕಂತೆ ಪದಾದಿಯ ಇತ್ವದ ಅತ್ವದ ಸಂಸ್ಥಾನಕ್ಕಂ ಮತ್ತೆ ಐತ್ವಕ್ಕಂ; ಮಿಕ್ಕ ಆದಿಹಕಾರಂ ಅಸ್ವರದೆ ಲೋಪಿಸುಗುಂ.

ಅನ್ವಯಂ.—ಪದಾದಿಯ ಇತ್ವದ ಅತ್ವದ ಸಂಸ್ಥಾನಕ್ಕಂ ಮತ್ತೆ ಐತ್ವಕ್ಕಂ ಎವರ್ಣಂ, ಭಾವಿಸೆ, ತಕ್ಕಂತೆ ಅಕ್ಕುಂ; ಮಿಕ್ಕಾದಿಹಕಾರಂ ಅಸ್ವರದೆ ಲೋಪಿಸುಗುಂ.

ಟೀಕು.—ಪದಾದಿಯ=ಪದಂಗಳ ಮೊದಲ; ಇತ್ವದ=ಇಕಾರದ; ಅತ್ವದ=ಅಕಾರದ; ಸಂಸ್ಥಾನಕ್ಕಂ=ಲೇಸಾದ ಸ್ಥಾನಕ್ಕೆಯುಂ; ಮತ್ತೆ=ಬಳಿಕ; ಐತ್ವಕ್ಕಂ=ಐಕಾರಕ್ಕೆಯುಂ; ಎವರ್ಣಂ=ಎ ಏ ಎಂಬ ಸವರ್ಣಂ; ಭಾವಿಸೆ=ವಿಚಾರಿಸೆ; ತಕ್ಕಂತೆ=ತಕ್ಕಹಾಂಗೆ; ಅಕ್ಕುಂ=ಆಗುವುದು; ಮಿಕ್ಕ=ಉಳಿದ; ಆದಿಹಕಾರಂ=ಮೊದಲ ಹಕಾರಂ; ಅಸ್ವರದೆ=ವ್ಯಂಜನರೂಪದಿಂದೆ; ಲೋಪಿಸುಗುಂ=ಲೋಪಿಸಿ ಕೊಂಬುದು.

ವೃತ್ತಿ.—ಎ ಏ ಎಂಬಕ್ಕರಂಗಳ್ ಪದಾದಿಯ ಇಕಾರಕ್ಕಮಕಾರಕ್ಕಮೈಕಾರಕ್ಕಮಕ್ಕುಂ; ಪದಾದಿಯ ಹಕಾರಂ ಸ್ವರರಹಿತಮಾಗಿ ಲೋಪಮಕ್ಕುಂ.

ಪ್ರಯೋಗಂ.—ಇಕಾರಕ್ಕೆ ಎತ್ವಂ—ಇಳೆ=ಎಳೆ; ಸಿಂದೂರಂ=ಸೆಂದುರಂ;

ದಿವಸಂ=ದೆವಸಂ; ದಿಶಾ=ದೆಸೆ; ಬಿಲ್ವಪತ್ರಂ=ಬೆಲ್ಲವತ್ತಂ; ವಿನಾಯಕಂ=ಬೆನಕಂ; ಶಿಲಾ=ಸೆಲೆ.

ಇಕಾರಕ್ಕೆ ಏತ್ವಂ—ನಿಯಮಂ=ನೇಮಂ.

ಅಕಾರಕ್ಕೆ ಎತ್ವಂ—ಜಟಾ=ಜೆಡೆ; ಶಯ್ಯಾ=ಸೆಜ್ಜೆ; ವ್ಯಂಜನಂ=ಬೆಂಜನಂ; ವ್ಯತಿರೇಕಂ=ಬೆತಿರೇಕಂ (o. r. ವೆತಿರೇಕಂ); ವ್ಯಥಾ=ಬೆತೆ (o. r. ವೆತೆ).

ಅಕಾರಕ್ಕೆ ಏತ್ವಂ—ವ್ಯವಹಾರಂ=ಬೇಹಾರಂ (o. r. ಬೇಹರಂ).

ಐಕಾರಕ್ಕೆ ಎತ್ವಂ—ಸೈಂಧವಂ=ಸೆಂದವಂ; ವೈದ್ಯಂ=ಬೆಜ್ಜಂ; ತೈಲಿಕಂ=ತೆಲ್ಲಿಗಂ.

ಐಕಾರಕ್ಕೆ ಏತ್ವಂ— ವೈಶಾಖಂ=ಬೇಸಗೆ; ವೈರಂ=ಬೇರಂ.

ತಕ್ಕಂತೆ ಎಂಬ ಪರಿಮಿತವಚನದಿಂದಿತ್ವಕ್ಕಮತ್ವಕ್ಕಮೈತ್ವಕ್ಕಂ ಎವರ್ಣಂ ಕೆಲವೞೊಳಿಲ್ಲ; ಇತ್ವಕ್ಕೆ—ನಿಶಾ (o. r. ನಿಶಿ)=ನಿಸಿ; ವಿಷಂ=ಬಿಸಂ; ನಿಮಿಷಂ=ನಿಮಿಸಂ.

ಅತ್ವಕ್ಕಮಂತೆ—ಅಂಕುಶಂ=ಅಂಕುಸಂ; ಕಂಠಿಕಾ=ಕಂಟಿಕೆ (o. r. ಕಂಟಿಗೆ); ಖಂಖರಿ=ಕಂಕರಿ.

ಐತ್ವಕ್ಕಮಂತೆ—ಭೈರವಂ=ಬೈರವಂ; ಭೈಕ್ಷ್ಯಂ=ಬೈಕಂ; ಶೈವಂ=ಸೈವಂ.

ಅಸ್ವರಹಕಾರಲೋಪಕ್ಕೆ—ಹಂಸೆ=ಅಂಚೆ; ಹಿಂಗು=ಇಂಗು; ಹಿಂಗುಲಿಕಂ=ಇಂಗುಲಿಕಂ.

ಸೂತ್ರಂ. || ೨೭೨ ||

ಅಕ್ಕುಂ ಸ್ಪರ್ಶಸ್ಫಟಿಕ |
ಸ್ಫಿಕ್ಕಾಸ್ಫೋಟಕದೊಳಂ ಸ್ತುತಿಸ್ತಿಮಿತಸ್ತೋ- ||
ಮಕ್ಕಿರ್ದ ಪದಾದಿಸಕಾ- |
ರಕ್ಕಂ ಲೋಪಂ ಶ್ಮಶಾನದಾ ಶತ್ವಕ್ಕಂ. || ೨೮೬ ||

ಸ್ಪರ್ಶಂ, ಸ್ಫಟಿಕಂ, ಸ್ಫಿಕ್ಕೆ, ಸ್ಫೋಟಕಂ, ಸ್ತುತಿ, ಸ್ತಿಮಿತಂ, ಸ್ತೋಮಂ and ಶ್ಮಶಾನಂ become ಪರುಸಂ, ಪಳಿಕು, ಪೆಕ್ಕೆ, ಪೋಳಿಗೆ, ತುತಿ, ತಿಮಿತಂ, ತೋಮಂ and ಮಸಣಂ.

ಪದಚ್ಛೇದಂ. — ಅಕ್ಕುಂ ಸ್ಪರ್ಶಸ್ಫಟಿಕಸ್ಫಿಕ್ಕಾಸ್ಫೋಟಕದೊಳಂ ಸ್ತುತಿಸ್ತಿಮಿತಸ್ತೋಮಕ್ಕೆ ಇರ್ದ ಪದಾದಿಸಕಾರಕ್ಕಂ ಲೋಪಂ, ಶ್ಮಶಾನದ ಆ ಶತ್ವಕ್ಕಂ.

ಅನ್ವಯಂ. — ಸ್ಪರ್ಶಸ್ಫಟಿಕಸ್ಫಿಕ್ಕಾಸ್ಫೋಟಕದೊಳಂ ಸ್ತುತಿಸ್ತಿಮಿತಸ್ತೋಮಕ್ಕೆ ಇರ್ದ ಪದಾದಿಸಕಾರಕ್ಕಂ ಲೋಪಂ ಅಕ್ಕುಂ, ಶ್ಮಶಾನದ ಆ ಶತ್ವಕ್ಕಂ.

ಟೀಕು. — ಸ್ಪರ್ಶಸ್ಫಟಿಕಸ್ಫಿಕ್ಕಾಸ್ಫೋಟಕದೊಳಂ = ಸ್ಪರ್ಶವೆಂಬ ಸ್ಫಟಿಕವೆಂಬ ಸ್ಫಿಕ್ಕೆ ಯೆಂಬ ಸ್ಫೋಟಕವೆಂಬ ಶಬ್ದಂಗಳಲ್ಲಿಯುಂ; ಸ್ತುತಿಸ್ತಿಮಿತಸ್ತೋಮಕ್ಕೆ = ಸ್ತುತಿಯೆಂಬ ಸ್ತಿಮಿ ತವೆಂಬ ಸ್ತೋಮವೆಂಬ ಶಬ್ದಂಗಳ್ಗೆ; ಇರ್ದ ಪದಾದಿಸಕಾರಕ್ಕಂ = ಇರ್ದ ಪದಾದಿಸಕಾರಕ್ಕೆಯುಂ; ಲೋಪಂ = ಅದರ್ಶನಂ; ಅಕ್ಕುಂ = ಆಗುವುದು; ಶ್ಮಶಾನದ = ಶ್ಮಶಾನವೆಂಬ ಶಬ್ದದ; ಆ ಶತ್ವ ಕ್ಕಂ = ಆ ಶಕಾರಕ್ಕೆಯುಂ ಅದರ್ಶನಂ ಆಗುವುದು.

ವೃತ್ತಿ. — ಈ ಪೇೞಲ್ಪಡೆದ ಶಬ್ದಂಗಳ ಸಕಾರಕ್ಕಂ ಶ್ಮಶಾನಶಬ್ದದ ಶಕಾ ರಕ್ಕಂ ಲೋಪಮಕ್ಕುಂ.

ಪ್ರಯೋಗಂ. — ಸ್ಪರ್ಶಂ = ಪರುಸಂ; ಸ್ಫಟಿಕಂ = ಪಳಿಕು; ಸ್ಫಿಕ್ಕೆ = ಹೆಕ್ಕೆ (o. r. ಹಿಕ್ಕೆ); ಸ್ಫೋಟಕಂ = ಹೋಳಿಗೆ; ಸ್ತುತಿ = ತುತಿ; ಸ್ತಿಮಿತಂ = ತಿಮಿ ತಂ; ಸ್ತೋಮಂ = ತೋಮಂ; ಶ್ಮಶಾನಂ = ಮಸಣಂ.

3. Changes of Vowels and Consonants in the Middle.

ಸೂತ್ರಂ. || ೨೭೩ ||

In the middle a long vowel is shortened; ಓ becomes ಉ; ಉ becomes ಇ or ಅ; and ಅ becomes ಇ.

ಪದಮಧ್ಯದ ದೀರ್ಘಕ್ಕ- |
ಪ್ಪುದು ಪೀನಂ ಹ್ರಸ್ವಮೋತ್ವಮಾದಂದುತ್ವಂ ||
ಪುದಿದುತ್ವಕ್ಕಿತ್ವಮುಮ- |
ತ್ವದ ಮೆಯ್ಯುಮದತ್ವದಲ್ಲಿಗಿತ್ವಾದೇಶಂ. || ೨೮೭ ||

ಪದಚ್ಛೇದಂ. — ಪದಮಧ್ಯದ ದೀರ್ಘಕ್ಕೆ ಅಪ್ಪುದು ಪೀನಂ ಹ್ರಸ್ವಂ; ಓತ್ವಂ ಆದ ಅಂದು ಉತ್ವಂ; ಪುದಿದ ಉತ್ವಕ್ಕೆ ಇತ್ವಮುಂ ಅತ್ವದ ಮೆಯ್ಯುಂ ಅದು; ಅತ್ವದ ಅಲ್ಲಿಗೆ ಇತ್ವಾದೇಶಂ.

ಅನ್ವಯಂ. — ಪದಮಧ್ಯದ ದೀರ್ಘಕ್ಕೆ ಪೀನಂ ಹ್ರಸ್ವಂ ಅಪ್ಪುದು; ಓತ್ವಂ ಆದಂದು ಉತ್ವಂ; ಪುದಿದುತ್ವಕ್ಕೆ ಇತ್ವಮುಂ ಅತ್ವದ ಮೆಯ್ಯುಂ ಅದು; ಅತ್ವದಲ್ಲಿಗೆ ಇತ್ವಾದೇಶಂ.

ಟೀಕು. — ಪದಮಧ್ಯದ = ಪದಂಗಳ ನಡುವಣ; ದೀರ್ಘಕ್ಕೆ = ದೀರ್ಘಕ್ಕೆ; ಪೀನಂ = ವಿಶೇಷವಾಗಿ; ಹ್ರಸ್ವಂ = ಹ್ರಸ್ವಂ; ಅಪ್ಪುದು = ಆಗುವುದು; ಓತ್ವಂ = ಓಕಾರಂ; ಆದಂದು = ಆದಲ್ಲಿ; ಉತ್ವಂ = ಉಕಾರಂ ಅಪ್ಪುದು; ಪುದಿದ = ಪ್ರವೇಶವಾದ; ಉತ್ವಕ್ಕೆ = ಉಕಾರಕ್ಕೆ; ಇತ್ವಮುಂ = ಇಕಾರವುಂ; ಅತ್ವದ ಮೆಯ್ಯುಂ = ಅಕಾರದ ಸ್ವರೂಪವುಂ; ಅದು = ಅದು ಅಪ್ಪುದು; ಅತ್ವದಲ್ಲಿಗೆ = ಅಕಾರದ ಸ್ಥಾನಕ್ಕೆ; ಇತ್ವಾದೇಶಂ = ಇಕಾರದಾದೇಶಂ ಅಪ್ಪುದು.

ವೃತ್ತಿ.—ಪದಮಧ್ಯದ ದೀರ್ಘಕ್ಕೆ ಪಿರಿದುಂ ಹ್ರಸ್ವಮಕ್ಕುಂ; ಪದಮಧ್ಯದೋತ್ವಕ್ಕುತ್ವಮಕ್ಕುಂ; ಪದಮಧ್ಯದುತ್ವಕ್ಕಿತ್ವಮುಮತ್ವಮುಮಕ್ಕುಂ; ಪದಮಧ್ಯದತ್ವಕ್ಕಿತ್ವಮಕ್ಕುಂ.

ಪ್ರಯೋಗಂ.—ದೀರ್ಘಕ್ಕೆ ಹ್ರಸ್ವಂ—ಅಯೋಗ್ರಂ=ಅಯೊಗಂ; ದುಕೂಲಂ=ದುಗುಲಂ; ಆಕಾಶಂ=ಆಗಸಂ; ಸನ್ನಾಹಂ=ಸನ್ನಣಂ; ಶಲಾಕಾ=ಸಲಗೆ; ತಾಂಬೂಲಂ=ತಂಬುಲಂ; ಆರಾಮಂ=ಆರವೆ; ವಿಲಾಸಂ=ವಿಲಸಂ; ಬಂಧೂಕಂ=ಬಂದುಗೆ; ಗೋಧೂಮಂ=ಗೋದುವೆ; ಗೋಪಾಳಂ=ಗೋವಳಂ; ಬರ್ಬೂರಂ (o. r. ಬರ್ಬೂಲಂ)=ಬೊಬ್ಬುಲಿ (o. r. ಬಬ್ಬುಲಿ); ಕೂರ್ಪಾಸಂ=ಕುಪ್ಪಸಂ; ಶ್ಮಶಾನಂ=ಮಸಣಂ; ಪ್ರಯಾಣಂ=ಪಯಣಂ; ದ್ವಿತೀಯಾ=ಬಿದಿಗೆ; ತೃತೀಯಾ=ತದಿಗೆ.

ಓತ್ವಕ್ಕುತ್ವಂ—ಅಶೋಕೆ (o. r. ಅಶೋಕಂ)=ಅಸುಗೆ; ಉದ್ಯೋಗಂ=ಉಜ್ಜುಗಂ; ಕಠೋರಂ=ಕಟುರಂ.

ಉತ್ವಕ್ಕಿತ್ವಂ—ಆಯುಷ್ಯಂ=ಆಯಿಸಂ.

ಉತ್ವಕ್ಕತ್ವಂ—ಕುರುಂಟಂ=ಗೋರಟೆ (o. r. ಗೋರಣ್ಟೆ); ಮಾನುಷ್ಯಂ=ಮಾನಸಂ.

ಅತ್ವಕ್ಕಿತ್ವಂ—ಕನ್ಯಕಾ=ಕನ್ನಿಕೆ.

ಸೂತ್ರಂ. || ೨೭೪ ||

In the middle ಏ and ಈ become ಅ; ಅ becomes ಉ; ಆ becomes ಎ.

ಪದಮಧ್ಯದೇತ್ವದೊಳಮಿಾ- |
ತ್ವದೊಳಂ ತಾನತ್ವಮತ್ವಮಿರ್ದಂದುತ್ವಂ ||
ವಿದಿತಾತ್ವಕ್ಕಕ್ಕುಂ ಹ್ರ- |
ಸ್ವದೆತ್ವವಿಧಿ ಬಹುಳವೃತ್ತಿಯಿಂ ಕೆಲವೆಡೆಯೊಳ್. || ೨೮೮ ||

ಪದಚ್ಛೇದಂ.—ಪದಮಧ್ಯದ ಏತ್ವದೊಳಂ ಈತ್ವದೊಳಂ ತಾಂ ಅತ್ವಂ; ಅತ್ವಂ ಇರ್ದ ಅಂದು ಉತ್ವಂ; ವಿದಿತಾತ್ವಕ್ಕೆ ಅಕ್ಕುಂ ಹ್ರಸ್ವದ ಎತ್ವವಿಧಿ ಬಹುಳವೃತ್ತಿಯಿಂ ಕೆಲ ಎಡೆಯೊಳ್.

ಅನ್ವಯಂ.—ಪದಮಧ್ಯದ ಏತ್ವದೊಳಂ ಈತ್ವದೊಳಂ ಅತ್ವಂ ತಾಂ ಅಕ್ಕುಂ; ಅತ್ವಂ ಇರ್ದಂದು ಉತ್ವಂ; ಕೆಲವೆಡೆಯೊಳ್ ಬಹುಳವೃತ್ತಿಯಿಂ ವಿದಿತಾತ್ವಕ್ಕೆ ಹ್ರಸ್ವದ ಎತ್ವವಿಧಿ.

ಟೀಕು.—ಪದಮಧ್ಯದ=ಪದಂಗಳ ನಡುವಣ; ಏತ್ವದೊಳಂ=ಏಕಾರದಲ್ಲಿಯುಂ; ಈತ್ವದೊಳಂ=ಈಕಾರದಲ್ಲಿಯುಂ; ಅತ್ವಂ=ಅಕಾರಂ; ತಾಂ=ತಾಂ; ಅಕ್ಕುಂ=ಆಗುವುದು; ಅತ್ವಂ=ಅಕಾರಂ; ಇರ್ದಂದು=ಇರ್ದಲ್ಲಿ; ಉತ್ವಂ=ಉಕಾರಂ ಆಗುವುದು; ಕೆಲವೆಡೆಯೊಳ್=ಕೆಲವೆಡೆಯಲ್ಲಿ; ಬಹುಳವೃತ್ತಿಯಿಂ=ಬಹುಳದ ವರ್ತನೆಯಿಂದೆ; ವಿದಿತಾತ್ವಕ್ಕೆ=ಪ್ರಸಿದ್ಧವಾದಾಕಾರಕ್ಕೆ; ಹ್ರಸ್ವದ=ಹ್ರಸ್ವದ; ಏತ್ವವಿಧಿ=ಏಕಾರದ ವಿಧಿ ಆಗುವುದು.

ವೃತ್ತಿ.—ಪದಮಧ್ಯದೇಕಾರದೊಳಮೀಕಾರದೊಳಮತ್ವಮಕ್ಕುಂ; ಪದಮಧ್ಯದತ್ವಕ್ಕುತ್ವಮಕ್ಕುಂ; ಪದಮಧ್ಯದಾತ್ವಕ್ಕೆತ್ವಂ ಬಹುಳದಿನಕ್ಕುಂ.

ಪ್ರಯೋಗಂ.—ಏತ್ವಕತ್ವಂ—ಅಲೇಖಂ=ಅಳಕಂ. ?

ಈಕಾರಕ್ಕೆ ಅತ್ವಂ—ಕೌಪೀನಂ=ಕೋವಣಂ; ಮರೀಚಂ=ಮೆಳಸು (o. r. ಮೆಱಿಸು).?

ಅತ್ವಕ್ಕುತ್ವಂ—ಸತ್ವಕಂ=ಸತ್ತುಗಂ.

ಆತ್ವಕ್ಕೆತ್ವಂ—ಅನ್ಯಾಯಂ=ಅನ್ನೆಯಂ.

ಬಹುಳದಿನೆಂಬದಱಿಂ—ರಸಾಯನಂ=ರಸೆಯನಂ.

ಸೂತ್ರಂ. ‖ ೨೭೫ ‖

In the middle Elision often takes place; in the beginning ಬ becomes ಭೈ, and ಅ becomes ಐ; also ಆ becomes ಐ.

ಅವತರಿಸಿರ್ಕುಂ ಪದಮ- |
ಧ್ಯವರ್ಣದೊಳ್ ಲೋಪವೃತ್ತಿ ಬಹುಳತೆಯಿಂ ತ- |
ದ್ಭವಮಾದಿಯ ಬತ್ವಂ ಭೈ- |
ತ್ವಮೈತ್ವವಿಧಿಯತ್ವದಾತ್ವದೊಳ್ ದೊರೆಕೊಳ್ಗುಂ. ‖೨೮೯‖

ಪದಚ್ಛೇದಂ.—ಅವತರಿಸಿ ಇರ್ಕುಂ ಪದಮಧ್ಯವರ್ಣದೊಳ್ ಲೋಪವೃತ್ತಿ ಬಹುಳತೆಯಿಂ; ತದ್ಭವಂ ಆದಿಯ ಬತ್ವಂ ಭೈತ್ವಂ; ಐತ್ವವಿಧಿ ಅತ್ವದ ಆತ್ವದೊಳ್ ದೊರೆಕೊಳ್ಗುಂ.

ಅನ್ವಯಂ.—ಪದಮಧ್ಯವರ್ಣದೊಳ್ ಲೋಪವೃತ್ತಿ ಬಹುಳತೆಯಿಂ ಅವತರಿಸಿರ್ಕುಂ; ಆದಿಯ ಬತ್ವಂ ಭೈತ್ವಂ ತದ್ಭವಂ; ಅತ್ವದಾತ್ವದೊಳ್ ಐತ್ವವಿಧಿ ದೊರೆಕೊಳ್ಗುಂ.

ಟೀಕು.—ಪದಮಧ್ಯವರ್ಣದೊಳ್=ಪದಂಗಳ ನಡುವಣ ವರ್ಣದಲ್ಲಿ; ಲೋಪವೃತ್ತಿ=ಲೋಪದ ವರ್ತನೆ; ಬಹುಳತೆಯಿಂ=ಬಹುಳದಿಂದೆ; ಅವತರಿಸಿರ್ಕುಂ=ಹುಟ್ಟಿರ್ಪುದು; ಆದಿಯ=ಮೊದಲ; ಬತ್ವಂ=ಬಕಾರಂ; ಭೈತ್ವಂ=ಭೈಕಾರವಾಗಿ; ತತ್=ಅದರಲ್ಲಿ; ಭವಂ=ಹುಟ್ಟಿದುದು; ಅತ್ವದಾತ್ವದೊಳ್=ಅಕಾರ ಆಕಾರದಲ್ಲಿ; ಐತ್ವವಿಧಿ=ಐಕಾರದ ವಿಧಿ; ದೊರೆಕೊಳ್ಗುಂ=ಪ್ರಾಪ್ತಿಸುವುದು.

ವೃತ್ತಿ.—ಪದಮಧ್ಯದಕ್ಕರಕ್ಕೆ ಬಹುಳದಿಂ ಲೋಪಮಕ್ಕುಂ; ಪದಾದಿಯ ಬಕಾರಕ್ಕೆ ಐತ್ವಂ ಬೆರಸಿದ ಭಕಾರಮಕ್ಕುಂ; ಪದಾದಿಯತ್ವಕ್ಕಮಾತ್ವಕ್ಕಮೈತ್ವಮಕ್ಕುಂ.

ಪ್ರಯೋಗಂ.—ಪದಮಧ್ಯಲೋಪಕ್ಕೆ—ನವಮಿ=ನಾಮಿ; ಸಾಹಸಂ=ಸಾಸಂ; ಗಹನಂ=ಗಾನಂ; ಕುಕ್ಕುಟಂ=ಕೋಟಿ; ವಾಹಳಿ=ವಾಳಿ; ಮಯೂರಂ=ಮೋರಂ; ಕುಮಾರಂ=ಕೋರಂ (also ಕುವರಂ); ನಿಯಮಂ=ನೇಮಂ.

ಬತ್ವದ ಭೈಕಾರಕ್ಕೆ—ಬಹಿತ್ರಂ=ಭೈತ್ರಂ.

ಅತ್ವಕ್ಕೈತ್ವಂ—ಮಹಿಮೆ=ಮೈಮೆ; ಮಹಿಷಿ=ಮೈಸಿ.

ಆತ್ವಕ್ಕೈತ್ವಂ—ವಾಹ್ಯಾಳಿ=ವೈಹಾಳಿ (o. r. ವೈಹ್ಯಾಳಿ); ಬಹುಳದಿನಿಲ್ಲಿ ಪದಮಧ್ಯಲೋಪಮಿಲ್ಲ.

ಸೂತ್ರಂ. || ೨೭೮ ||

In the middle ಮ and ಳ (ಲ) become ಗ; ಕ becomes ವ; ಧ್ಯ becomes ದ್ದಿ.

ಸಮನಿಸುಗುಂ ಗತ್ವಂ ಶ- |
ಬ್ದಮಧ್ಯ ಮತ್ವಕ್ಕಮಂತೆ ಳತ್ವಕ್ಕಂ ಕ- ||
ತ್ವಮದಿರ್ದೊಡೆ ವತ್ವಂ ಯ- |
ತ್ವಮಿಶ್ರ ಧತ್ವಕ್ಕೆ ದತ್ವಮತ್ವಕ್ಕಿತ್ವಂ. || ೨೯೦ ||

ಪದಚ್ಛೇದಂ.—ಸಮನಿಸುಗುಂ ಗತ್ವಂ ಶಬ್ದಮಧ್ಯಮತ್ವಕ್ಕಂ ಅಂತೆ ಳತ್ವಕ್ಕಂ; ಕತ್ವಂ ಅದು ಇರ್ದೊಡೆ ವತ್ವಂ; ಯತ್ವಮಿಶ್ರಧತ್ವಕ್ಕೆ ದತ್ವಂ, ಅತ್ವಕ್ಕೆ ಇತ್ವಂ.

ಅನ್ವಯಂ.—ಶಬ್ದಮಧ್ಯಮತ್ವಕ್ಕಂ ಅಂತೆ ಳತ್ವಕ್ಕಂ ಗತ್ವಂ ಸಮನಿಸುಗುಂ; ಕತ್ವಂ ಅದು ಇರ್ದೊಡೆ ವತ್ವಂ; ಯತ್ವಮಿಶ್ರಧತ್ವಕ್ಕೆ ದತ್ವಂ, ಅತ್ವಕ್ಕೆ ಇತ್ವಂ.

ಟೀಕು.— ಶಬ್ದಮಧ್ಯಮತ್ವಕ್ಕಂ = ಶಬ್ದಂಗಳ ನಡುವಣ ಮಕಾರಕ್ಕೆಯುಂ; ಅಂತೆ = ಹಾಂಗೆ; ಳತ್ವಕ್ಕಂ = ಳಕಾರಕ್ಕೆಯುಂ; ಗತ್ವಂ = ಗಕಾರಂ; ಸಮನಿಸುಗುಂ = ಪ್ರಾಪ್ತಿಸುವುದು; ಕತ್ವಂ = ಕಕಾರಂ; ಅದು = ಅದು; ಇರ್ದೊಡೆ = ಇರ್ದೊಡೆ; ವತ್ವಂ = ವಕಾರಂ ಪ್ರಾಪ್ತಿಸುವುದು; ಯತ್ವಮಿಶ್ರಧತ್ವಕ್ಕೆ = ಯಕಾರದೊಡನೆ ಕೂಡಿದ ಧಕಾರಕ್ಕೆ; ದತ್ವಂ = ದಕಾರಂ; ಪ್ರಾಪ್ತಿಸುವುದು; ಅತ್ವಕ್ಕೆ = ಅಕಾರಕ್ಕೆ; ಇತ್ವಂ = ಇಕಾರಂ ಪ್ರಾಪ್ತಿಸುವುದು.

ವೃತ್ತಿ.— ಶಬ್ದಮಧ್ಯದ ಮಕಾರಕ್ಕಂ ಳಕಾರಕ್ಕಂ ಗಕಾರಮಕ್ಕುಂ; ಪದಮಧ್ಯಕಕಾರಕ್ಕೆ ವಕಾರಮಕ್ಕುಂ; ಯತ್ವಮಿಶ್ರಧಕಾರಕ್ಕೆ ದಕಾರಮಕ್ಕುಂ, ಅದಱತ್ವಕ್ಕಿತ್ವಮಕ್ಕುಂ.

ಪ್ರಯೋಗಂ.— ಮಕಾರಕ್ಕೆ ಗಕಾರಂ—ಯಮುನಾ = ಜಗುನೆ.

ಳಕಾರಕ್ಕೆ ಗಕಾರಂ—ಜಳೂಕಾ = ಜಿಗುಳೆ.

ಕಕಾರಕ್ಕೆ ವತ್ವಂ—ಶೀಕರಂ = ಸೀವರಂ.

ಯತ್ವಮಿಶ್ರಧಕಾರಕ್ಕಿತ್ವಂ ಬೆರಸಿದ ದಕಾರಂ—ಅಧ್ಯಕ್ಷಂ = ಅದ್ದಿಕಂ.

ಸೂತ್ರಂ. || ೨೭೭ ||

In the middle ತ becomes ರ, ಟ, or ಗ; a final ತ becomes ಡ or ಹ.

ಪದಮಧ್ಯತಕಾರಕ್ಕ- |
ಪುದೊರ್ಮೆ ರೇಫಂ ಟಕಾರಮೊರ್ಮೆ ಗಕಾರಂ ||
ಪುದಿದಿರ್ಕುಮೊರ್ಮೆ ತಾನಂ- |
ತ್ಯದೊಳೊಂದಿರೆ ಡತ್ವಮೊರ್ಮೆಯೊರ್ಮೆ ಹಕಾರಂ.
|| ೫೧ ||

ಪದಚ್ಛೇದಂ.— ಪದಮಧ್ಯತಕಾರಕ್ಕೆ ಅಪ್ಪುದು ಒರ್ಮೆ ರೇಫಂ, ಟಕಾರಂ ಒರ್ಮೆ, ಗಕಾರಂ ಪುದಿದು ಇರ್ಕುಂ ಒರ್ಮೆ; ತಾಂ ಅಂತ್ಯದೊಳ್ ಒಂದಿ ಇರೆ, ಡತ್ವಂ ಒರ್ಮೆ, ಒರ್ಮೆ ಹಕಾರಂ.

ಅನ್ವಯಂ.— ಪದಮಧ್ಯತಕಾರಕ್ಕೆ ಒರ್ಮೆ ರೇಫಂ, ಒರ್ಮೆ ಟಕಾರಂ, ಒರ್ಮೆ ಗಕಾರಂ ಅಪ್ಪುದು; ತಾಂ ಅಂತ್ಯದೊಳ್ ಒಂದಿ ಇರೆ. ಒರ್ಮೆ ಡತ್ವಂ, ಒರ್ಮೆ ಹಕಾರಂ ಪುದಿದು ಇರ್ಕುಂ.

ಟೀಕು.— ಪದಮಧ್ಯತಕಾರಕ್ಕೆ = ಪದಂಗಳ ನಡುವಣ ತಕಾರಕ್ಕೆ; ಒರ್ಮೆ = ಒಂದು ಬಾರಿ; ರೇಫಂ = ರೇಫೆ ಆಗುವುದು; ಒರ್ಮೆ = ಒಂದು ಬಾರಿ; ಟಕಾರಂ = ಟತ್ವಂ ಆಗುವುದು; ಒರ್ಮೆ = ಒಂದು ಬಾರಿ; ಗಕಾರಂ = ಗತ್ವಂ; ಅಪ್ಪುದು = ಆಗುವುದು; ತಾಂ = ಅದು ತಾಂ; ಅಂತ್ಯದೊಳ್ = ಪದಾಂತ್ಯದಲ್ಲಿ; ಒಂದಿರೆ = ಕೂಡಿರೆ; ಒರ್ಮೆ = ಒಂದು ಬಾರಿ; ಡತ್ವಂ = ಡಕಾ

ರಂ ಪ್ರವೇಶವಾಗಿರ್ಪುದು; ಒರ್ಮೆ = ಒಂದು ಬಾರಿ; ಹಕಾರಂ = ಹತ್ವಂ; ಪುದಿದಿರ್ಕುಂ = ಪ್ರವೇಶವಾಗಿರ್ಪುದು.

ವೃತ್ತಿ. — ಪದಮಧ್ಯತಕಾರಕ್ಕೊರ್ಮೆ ರೇಫಮುಂ ಟಕಾರಮುಂ ಗಕಾರಮುಮಕ್ಕುಂ; ಪದಾಂತ್ಯತಕಾರಕ್ಕೆ ಡಕಾರಮುಂ ಹಕಾರಮುಮಕ್ಕುಂ.

ಪ್ರಯೋಗಂ. — ಪದಮಧ್ಯತಕಾರದ ರೇಫೆಗೆ— ಖಾತಿಕಾ = ಕಾರಿಗೆ (o. rs. ಖಾರಿಗೆ, ಗಾರಿಗೆ).

ತಕಾರಕ್ಕೆ ಟಕಾರಂ — ಪತ್ತನಂ = ಪಟ್ಟಣಂ.

ತಕಾರಕ್ಕೆ ಗಕಾರಂ — ಉತ್ಕಟಂ = ಉಗ್ಗಟಂ; ಅತಸಿ = ಅಗಸೆ.

ಪದಾಂತತಕಾರದ ಡತ್ವಕ್ಕೆ — ಸಂಘಾತಂ = ಸಂಗಡಂ.

ತಕಾರಕ್ಕೆ ಹಕಾರಂ — ತ್ವರಿತಂ = ತುರಿಹಂ.

4. Changes of Vowels and Consonants in the End.

ಸೂತ್ರಂ. || ೨೭೮ ||

Final ನ, ಜ್ಞ, ಳ become ಣ; ನ becomes ಣ also in the middle; final ಅ becomes ಎ, ಇ or ಉ.

ತಿಳಿ ಬಹುಳದೆ ಶಬ್ದಾಂತಂ- |
ಗಳ ನತ್ವಜ್ಞತ್ವಳತ್ವದೆಡೆಗೆ ಣಕಾರಂ ||
ತಳೆಗುಮದಂತಪದಾಂತಂ- |
ಗಳೆತ್ವಮುಮನಿತ್ವವೃತ್ತಿಯುಮನುತ್ವಮುಮಂ. || ೨೯೨ ||

ಪದಚ್ಛೇದಂ. — ತಿಳಿ! ಬಹುಳದೆ ಶಬ್ದಾಂತಂಗಳ ನತ್ವಜ್ಞತ್ವಳತ್ವದ ಎಡೆಗೆ ಣಕಾರಂ; ತಳೆಗುಂ ಅದಂತಪದಾಂತಂಗಳ್ ಎತ್ವಮುಮಂ ಇತ್ವವೃತ್ತಿಯುಮಂ ಉತ್ವಮುಮಂ.

ಅನ್ವಯಂ. — ಬಹುಳದೆ ಶಬ್ದಾಂತಂಗಳ ನತ್ವಜ್ಞತ್ವಳತ್ವದ ಎಡೆಗೆ ಣಕಾರಂ; ಅದಂತಪದಾಂತಂಗಳ್ ಎತ್ವಮುಮಂ ಇತ್ವವೃತ್ತಿಯುಮಂ ಉತ್ವಮುಮಂ ತಳೆಗುಂ; ತಿಳಿ!

ಟೀಕು. — ಬಹುಳದೆ = ಬಹುಳದಿಂದೆ; ಶಬ್ದಾಂತಂಗಳ = ಶಬ್ದಂಗಳಂತ್ಯದ; ನತ್ವಜ್ಞತ್ವಳತ್ವದ = ನಕಾರದ ಜ್ಞಕಾರದ ಳಕಾರದ; ಎಡೆಗೆ = ಸ್ಥಾನಕ್ಕೆ; ಣಕಾರಂ = ಣತ್ವಂ ಬರ್ಪುದು, ಅರಿ; ಅದಂತಪದಾಂತಂಗಳ್ = ಅಕಾರಾಂತವಾದ ಪದಾಂತಂಗಳ್; ಎತ್ವಮುಮಂ = ಎಕಾರಮುಮಂ; ಇತ್ವವೃತ್ತಿಯುಮಂ = ಇಕಾರದ ವರ್ತನೆಯುಮಂ; ಉತ್ವಮುಮಂ = ಉಕಾರಮುಮಂ; ತಳೆಗುಂ = ತಳೆವುವು; ತಿಳಿ = ಅರಿ.

ವೃತ್ತಿ. — ಬಹುಳದಿಂ ಶಬ್ದಂಗಳ ಕಡೆಯ ನಕಾರ ಜ್ಞಕಾರ ಳಕಾರಂಗಳ್ಗೆ ಣತ್ವಮಕ್ಕುಂ; ಪದಾಂತ್ಯದಕಾರಂಗಳ್ಗೆತ್ವಮುಮಿತ್ವಮುಮುತ್ವಮುಮಕ್ಕುಂ.

ಪ್ರಯೋಗಂ.—ನತ್ವಕ್ಕೆ ಣತ್ವಂ—ಖನಿ=ಕಣಿ; ಮಂಥನಿ=ಮಂತಣಿ; ಲಂಬನಂ=ಲಂಬಣಂ; ಸ್ಥಾನಂ=ತಾಣಂ; ಪಿಶುನಂ=ಹಿಸುಣಂ; ವಿಜ್ಞಾನಂ=ಬಿನ್ನಣಂ; ಪತ್ತನಂ=ಪಟ್ಟಣಂ; ಸುವಾಸಿನಿ=ಸೋವಾಸಿಣಿ; ಫಲ್ಗುನಂ=ಪಲುಗುಣಂ; ಅಂಕನಂ (o. r. ಅಂಗನಂ)=ಅಂಗಣಂ, ಅಂಗಣವಾವಿಯೆಂದ ಚ್ಚಗನ್ನಡದ ಸಮಾಸಮುಂಟು, ಮತ್ತಂ ಸಂಸ್ಕೃತದೊಳಮಂಗಣಮುಂಟು ರಾಜಾಂಗಣಂ ಗೃಹಾಂಗಣಮೆಂದು.

ಜ್ಞತ್ವಕ್ಕೆ ಣತ್ವಂ—ಆಜ್ಞೆ=ಆಣೆ.

ಕಕಾರಕ್ಕೆ ಣತ್ವಂ—ನರ್ತಕಿ=ನಚ್ಚಣಿ.

ಬಹುಳದಿಂ ಪದಮಧ್ಯನಕಾರಕ್ಕಂ ಣತ್ವಂ—ಶುನಕಂ=ಸೊಣಗಂ.

ಅತ್ವಕ್ಕೆತ್ವಂ—ಶಾಣಂ=ಸಾಣೆ; ಪ್ರಹರಣಂ=ಪ್ರಹರಣೆ; ಕುಸುಂಭಂ=ಕುಸುಂಬೆ; ಜೀರಕಂ=ಜೀರಿಗೆ (o. r. ಜೀರಗೆ); ಚೀರಂ=ಸೀರೆ; ಧೂಮಂ=ದೂವೆ; ಅಂದುಕಂ=ಅಂದುಗೆ; ಕುರುಂಟಂ=ಗೋರಟೆ; ಕಳಮಂ=ಕೞವೆ; ಘಟ್ಟಣಂ=ಘಟ್ಟಣೆ; ಸ್ಥಾಪನಂ=ತಾಪಣೆ; ಕೋಕಿಲಂ=ಕೋಗಿಲೆ; ಮಂಡಕಂ=ಮಂಡಗೆ; ಪಾದುಕಂ=ಪಾವುಗೆ (o. r. ಹಾವುಗೆ); ಹಂಸಂ=ಅಂಚೆ; ಅರ್ಕ್ಕಂ=ಎರ್ಕ್ಕೆ.

ಅತ್ವಕ್ಕಿತ್ವಂ—ಕಂಬಲಂ=ಕಂಬಳಿ; ಮಾಘಂ=ಮಾಗಿ; ಬರ್ಬುಲಂ=ಬೊಬ್ಬುಲಿ (o. r. ಬಬ್ಬುಲಿ); ಭೃಂಗಾರಂ=ಬಿಂಗಾರಿ; ಪಾಟಳಂ=ಪಾದರಿ (o. r. ಹಾದರಿ); ಕುಕ್ಕುಟಂ=ಕೋೞಿ; ಅರ್ಗಳಂ=ಅಗುೞಿ; ಕುದ್ದಾಲಂ=ಗುದ್ದಲಿ; ಆಪಾಢಂ=ಆಸಡಿ (o. r. ಅಸಡಿ); ಸಸ್ಯಂ=ಸಸಿ.

ಅತ್ವಕುತ್ವಂ—ದಂಡಂ=ದಂಡು; ವಾಟಂ=ಬಾಡು; ವಾದಂ=ಬಾದು; ಸ್ಫಟಿಕಂ=ಪಳಿಕು; ರೂಪಂ=ರೂವು, ರೂವೆಂದುಮುಂಟು; ಕೂಟಂ=ಕೋಡು; ಸುಲ್ವಂ (ಶುಲ್ವಂ)=ಸುಲು, (o. r. ಸುಲೆಂದು, ಸುಲುವೆಂದು ಕಿಸುವೊನ್); ಕಾಚ=ಗಾಜು (o. r. ಕಾಜು); ಅಕ್ಷಂ=ಅಚ್ಚು; ಅಮೃತಂ=ಅಮರ್ದು; ಧಾಮಂ=ದಾವು; ಮರೀಚಂ=ಮೆಳಸು (ಮೆೞಸು); ದ್ಯೂತಂ=ಜೂದು (o. r. ಜೂಜು); ತರಂಗಂ=ತರಂಗು; ಪೇಟ್ವಂ=ಪೆಟ್ಟು; ಪಿಷ್ಟಂ=ಹಿಟ್ಟು.

ಸೂತ್ರಂ. || ೨೭೮ ||

Final ಉ becomes ಇ; ಇ becomes ಉ or ಎ; a final vowel is also elided.

ನೆಲೆಗೊಂಡುತ್ವಕ್ಕಿತ್ವಂ |
ಕೆಲವೆಡೆಯಿತ್ವಕ್ಕಮುತ್ವಮುಂ ಹ್ರಸ್ವತೆಯ- ||
ಗ್ಗಲಿಸಿರ್ದೆತ್ವಮುಮಂತ್ಯ |
ಸ್ಥಲಸ್ವರಕ್ಕೊರ್ಮೆ ಲೋಪಮುಂ ಸಂಭವಿಕುಂ. || ೨೯೩ ||

ಪದಚ್ಛೇದಂ.— ನೆಲೆಗೊಂಡ ಉತ್ವಕ್ಕೆ ಇತ್ವಂ, ಕೆಲ ಎಡೆಯ ಇತ್ವಕ್ಕಂ ಉತ್ವಮುಂ ಹ್ರಸ್ವತೆ ಅಗ್ಗಲಿಸಿ ಇರ್ದ ಎತ್ವಮುಂ, ಅಂತ್ಯಸ್ಥಲಸ್ವರಕ್ಕೆ ಒರ್ಮೆ ಲೋಪಮುಂ ಸಂಭವಿಕುಂ.

ಟೀಕು, ಯಥಾನ್ವಯಂ.— ನೆಲೆಗೊಂಡ = ಪದಾಂತಂಗಳಲ್ಲಿ ನೆಲೆಗೊಂಡ; ಉತ್ವಕ್ಕೆ = ಉಕಾರಕ್ಕೆ; ಇತ್ವಂ = ಇಕಾರಂ ಬರ್ಪುದು; ಕೆಲವೆಡೆಯ = ಕೆಲವು ತಾವಿನ; ಇತ್ವಕ್ಕಂ = ಇಕಾರಕ್ಕೆಯುಂ; ಉತ್ವಮುಂ = ಉಕಾರವುಂ; ಹ್ರಸ್ವತೆ = ಹ್ರಸ್ವತ್ವಂ; ಅಗ್ಗಲಿಸಿರ್ದೆತ್ವಮುಂ = ವೆಗ್ಗಳಿಸಿರ್ದ ಎಕಾರವುಂ ಬರ್ಪುದು; ಅಂತ್ಯಸ್ಥಲಸ್ವರಕ್ಕೆ = ಕಡೆಯಣ ಸ್ವರಕ್ಕೆ; ಒರ್ಮೆ = ಒಂದು ಬಾರಿ; ಲೋಪಮುಂ = ಅದರ್ಶನಮುಂ; ಸಂಭವಿಕುಂ = ಸಂಭವಿಸುವುದು.

ವೃತ್ತಿ.— ಪದಾಂತ್ಯದುಕಾರಕ್ಕಿಕಾರಮಕ್ಕುಂ; ಕೆಲವೆಡೆಯಿಕಾರಕ್ಕುಕಾರಮುಂ ಹ್ರಸ್ವಮಪ್ಪೆತ್ವಮುಮಕ್ಕುಂ; ಪದಾಂತ್ಯಸ್ವರಕ್ಕೊರ್ಮೆ ಲೋಪಮಕ್ಕುಂ.

ಪ್ರಯೋಗಂ.— ಉತ್ವಕ್ಕಿತ್ವಂ— ಖರ್ಜು=ಕಜ್ಜಿ; ಕುಸ್ತುಂಬುರು=ಕೊತ್ತುಂಬರಿ.

ಇತ್ವಕ್ಕುತ್ವಂ— ಗ್ರಂಥಿ=ಗಂಟು; ಸಂಧಿ=ಸಂದು; ಮಕ್ಷಿ=ಮಚ್ಚು; ಮಂತ್ರಿ=ಮಂತು.

ಇತ್ವಕ್ಕೆತ್ವಂ— ಪಂಚಮಿ=ಪಂಚವೆ; ಸಪ್ತಮಿ=ಸತ್ತವೆ; ಅಷ್ಟಮಿ=ಅಟ್ಟವೆ; ಪುಷ್ಕರಣಿ=ಹೊಕ್ಕರಣೆ; ಕುಕ್ಷಿ=ಕುಕ್ಕೆ; ತುಂಡಿ=ತೊಂಡೆ; ಅತಸಿ=ಅಗಸೆ; ತುಳಸಿ=ತೊಳಚೆ.

ಅಂತ್ಯಸ್ವರಲೋಪಕ್ಕೆ— ಕೀಲಂ=ಕೀಲ್; ಶೀಲಂ=ಶೀಲ್; ಕೋಣಂ=ಕೋಣ್; ಪ್ರಮಾಣಂ=ಪವಣ್; ಮೀನಂ=ಮೀನ್; ನೀರಂ=ನೀರ್; ಮುಕುಳಂ=ಮುಗುಳ್.

ಸೂತ್ರಂ. || ೨೮೦ ||

ಆಶ್ಚರ್ಯಂ, ಪ್ರಗ್ರಹಂ, ವಿಜ್ಞಾಪನಂ, ಕಪಿಂಜಳಂ, ಅಂಗಿರಸಂ, ಗ್ರಹಣಂ become ಅಚ್ಚರಿ, ಹಗ್ಗಂ, ಬಿನ್ನಪಂ, ಕವಿಂಜು, ಆಂಗಿರಂ, ಗರಣಂ.

ಮಹಿ ಪೊಗಟ್ಬಿಾಶ್ಚರ್ಯಪ್ರ- |
ಗ್ರಹವಿಜ್ಞಾಪನಕಪಿಂಜಳಾಂಗಿರಸಾಂತ್ಯ- ||
ಕ್ಕೆ ಹಿತಂ ಲೋಪವಿಧಾನಂ |
ಗ್ರಹಣಕ್ಕಂ ಗರಣಮಾಯ್ತು ಶಬ್ದಾದೇಶಂ. || ೪೯೪ ||

ಪದಚ್ಛೇದಂ.— ಮಹಿ ಪೊಗಟ್ಬಿ ಆಶ್ಚರ್ಯಪ್ರಗ್ರಹವಿಜ್ಞಾನಕಪಿಂಜಳಾಂಗಿರಸಾಂತ್ಯಕ್ಕೆ ಹಿತಂ ಲೋಪವಿಧಾನಂ; ಗ್ರಹಣಕ್ಕಂ ಗರಣಂ ಆಯ್ತು ಶಬ್ದಾದೇಶಂ.

ಟೀಕು, ಯಥಾನ್ವಯಂ.— ಮಹಿ = ಭೂಮಿ; ಪೊಗಟ್ಬಿ = ಕೊಂಡಾಡುವ; ಆಶ್ಚರ್ಯ = ಆಶ್ಚರ್ಯವೆಂಬ ಶಬ್ದದ; ಪ್ರಗ್ರಹ = ಪ್ರಗ್ರಹವೆಂಬ ಶಬ್ದದ; ವಿಜ್ಞಾಪನ = ವಿಜ್ಞಾಪನವೆಂಬ ಶಬ್ದದ; ಕಪಿಂಜಳ = ಕಪಿಂಜಳವೆಂಬ ಶಬ್ದದ; ಆಂಗಿರಸ = ಆಂಗಿರಸವೆಂಬ ಶಬ್ದದ; ಅಂತ್ಯಕ್ಕೆ = ಕಡೆಗೆ; ಲೋಪವಿಧಾನಂ = ಅದರ್ಶನಂ; ಹಿತಂ = ಹಿತವಾಗುವುದು; ಗ್ರಹಣಕ್ಕಂ = ಗ್ರಹಣವೆಂಬ ಶಬ್ದಕ್ಕೆಯುಂ; ಗರಣಂ = ಗರಣವೆಂದು; ಶಬ್ದಾದೇಶಂ = ಶಬ್ದಕ್ಕಾದೇಶಂ; ಆಯ್ತು = ಆಯ್ತು.

ವೃತ್ತಿ.— ಈ ಶಬ್ದಂಗಳ ಕಡೆಯಕ್ಕರಕ್ಕೆ ಲೋಪಂ; ಗ್ರಹಣಶಬ್ದಕ್ಕೆ ಗರಣಮೆಂದಾದೇಶಂ.

ಪ್ರಯೋಗಂ.— ಆಶ್ಚರ್ಯಂ = ಅಚ್ಚರಿ; ಪ್ರಗ್ರಹಂ = ಹಗ್ಗಂ; ವಿಜ್ಞಾಪನಂ = ಬಿನ್ನಪಂ; ಕಪಿಂಜಳಂ = ಕವಿಂಜು; ಆಂಗಿರಸಂ = ಆಂಗಿರಂ; ಗ್ರಹಣಂ = ಗರಣಂ.

ಸೂತ್ರಂ. || ೨೮೧ ||

ಕ್ರೂರಂ, ಪ್ರಾಕಾರಂ, ಗ್ರಾಮಾಣಂ become ಕೂಟಿಲ್, ಪಾಗಲ್, ಗಾವಿಲಂ.

ಕ್ರೂರಪ್ರಾಕಾರಂಗಳ |
ಮೇರೆಯ ರೇಫಕ್ಕೆ ತರದೆ ಟಿಟಿಲತ್ವಂಗಳ್ ||
ಪೂರಿಪುವಸ್ವರವಿಧಿಯಿಂ
ಸಾರಂ ಗ್ರಾಮಾಣಣತ್ವದೆಡೆಗೆ ಲಕಾರಂ. || ೪೯೫ ||

ಪದಚ್ಛೇದಂ.— ಕ್ರೂರಪ್ರಾಕಾರಂಗಳ ಮೇರೆಯ ರೇಫಕ್ಕೆ ತರದೆ ಟಿಟಿಲತ್ವಂಗಳ್ ಪೂರಿಪುವು ಅಸ್ವರವಿಧಿಯಿಂ; ಸಾರಂ ಗ್ರಾಮಾಣಣತ್ವದ ಎಡೆಗೆ ಲಕಾರಂ.

ಟೀಕು, ಯಥಾನ್ವಯಂ.— ಕ್ರೂರಪ್ರಾಕಾರಂಗಳ = ಕ್ರೂರವೆಂಬ ಪ್ರಾಕಾರವೆಂಬ ಶಬ್ದಂಗಳ; ಮೇರೆಯು = ಅಂತ್ಯದ; ರೇಫಕ್ಕೆ = ರೇಫೆಗೆ; ತರದೆ = ತರುವಾಯಿಂದೆ; ಟಿಟಿಲತ್ವಂಗಳ್ = ಟಿ ಟಿ ಲಕಾರಂಗಳ್ಕೆ; ಅಸ್ವರವಿಧಿಯಿಂ = ವ್ಯಂಜನದ ವಿಧಿಯಿಂದೆ; ಪೂರಿಪುವು = ಪೂರೈಸು

ವುವು; ಗ್ರಾಮಿಣಣತ್ವದ = ಗ್ರಾಮಿಣವೆಂಬ ಶಬ್ದದ ಣಕಾರದ; ಎಡೆಗೆ = ತಾವಿಂಗೆ; ಲಕಾರಂ= ಲತ್ವಂ; ಸಾರಂ = ಶ್ರೇಷ್ಠವಾಗುವುದು.

ವೃತ್ತಿ.— ಕ್ರೂರ ಪ್ರಾಕಾರಂಗಳ ರೇಫೆಗೆ ಪರಿವಿಡಿಯಿಂ ಟಿಟಿನುಂ ಲಕಾರಮುಂ ವ್ಯಂಜನರೂಪದಿನಕ್ಕುಂ; ಗ್ರಾಮಿಣಶಬ್ದದ ಣಕಾರಕ್ಕೆ ಲಕಾರಮಕ್ಕುಂ.

ಪ್ರಯೋಗಂ.— ಕ್ರೂರಂ=ಕೂಟಿರ್; ಪ್ರಾಕಾರಂ=ಪಾಗಲ್; ಗ್ರಾಮಿಣಂ=ಗಾವಿಲಂ.

5. Further changes.

ಸೂತ್ರಂ. || ೨೮೨ ||

ಶ್ವ, ಸ್ವ, ದ್ವ, ಧ್ವ, ಲ್ವ, ಜ್ವ, ಳ್ವ, ತ್ವ lose their ವ; ಸ್ನ loses its ನ; ಜ್ಯ, ಸ್ಯ, ಕ್ಯ, ನ್ಯ, ವ್ಯ, ಶ್ಯ, ಷ್ಯ lose their ಯ;—and then some other changes also happer.

ಶ ಸ ದ ಧ ಲ ಜ ಳ ತದಿಂ ಕೆಳ- |
ಗೆ ಸಲ್ವ ವತ್ವಂ ಸ್ನಕಾರನತ್ವಂ ಮತ್ತಂ ||
ಜ ಸ ಕ ನ ವ ಶ ಷದ ಯತ್ವಂ |
ಪ್ರಸನ್ನಭಾವದೊಳೆ ತಳ್ತು ಲೋಪಮನಾಳ್ಗುಂ. ||೩೯೬||

ಪದಚ್ಛೇದಂ.— ಶಸದಧಲಜಳತದಿಂ ಕೆಳಗೆ ಸಲ್ವ ವತ್ವಂ, ಸ್ನಕಾರನತ್ವಂ, ಮತ್ತಂ ಜಸಕನವಶಷದ ಯತ್ವಂ ಪ್ರಸನ್ನಭಾವದೊಳೆ ತಳ್ತು ಲೋಪಮಂ ಆಳ್ಗುಂ.

ಟೀಕು, ಯಥಾನ್ವಯಂ.— ಶಸದಧಲಜಳತದಿಂ = ಶಕಾರ ಸಕಾರ ದಕಾರ ಧಕಾರ ಲಕಾರ ಜಕಾರ ಳಕಾರ ತಕಾರಂಗಳಿಂದೆ; ಕೆಳಗೆ ಸಲ್ವ ವತ್ವಂ = ಕೆಳಗೆ ಸಲ್ವ ವಕಾರಂ; ಸ್ನಕಾರನತ್ವಂ = ಸ್ನಕಾರದ ನಕಾರಂ; ಮತ್ತಂ = ಬಳಿಕಂ; ಜಸಕನವಶಷದ = ಜಕಾರ ಸಕಾರ ಕಕಾರ ನಕಾರ ವಕಾರ ಶಕಾರ ಷಕಾರಂಗಳ; ಯತ್ವಂ = ಅಡಿಯಣ ಯಕಾರಂ; ಪ್ರಸನ್ನಭಾವದೊಳೆ = ಪ್ರತ್ಯಕ್ಷದ ಭಾವದಲ್ಲಿಯೆ; ತಳ್ತು = ಕೂಡಿ; ಲೋಪಮಂ = ಅದರ್ಶನಮಂ; ಆಳ್ಗುಂ = ತಾಳ್ವುವು.

ವೃತ್ತಿ.— ಶಕಾರ-ಸಕಾರ-ದಕಾರ-ಧಕಾರ-ಲಕಾರ-ಜಕಾರ-ಳಕಾರ-ತಕಾರದ ಕೆಳಗಣ ವತ್ವಕ್ಕೆ ಲೋಪಂ; ಸ್ನಕಾರದ ನಕಾರಕ್ಕಂ ಲೋಪಂ; ಜಕಾರ-ಸಕಾರ-ಕಕಾರ-ನಕಾರ-ವಕಾರ-ಶಕಾರ-ಷಕಾರದ ಕೆಳಗಿರ್ದ ಯತ್ವಕ್ಕಂ ಲೋಪಂ.

ಪ್ರಯೋಗಂ.— ವತ್ವಲೋಪಕ್ಕೆ— ಈಶ್ವರಂ= ಈಸರಂ; ಶಾಶ್ವತಂ=ಸಾಸತಂ; ಶ್ವಾನಂ=ಸಾನಂ; ಶ್ವೇತಂ=ಸೇತಂ;— ಸ್ವರ್ಗಂ=ಸಗ್ಗಂ; ಸ್ವಾಮಿ=ಸಾ

ಮಿ; ಸ್ವಯಂಭು=ಸಯಂಬು; ಸ್ವರಂ=ಸರಂ; ತಪಸ್ವಿ=ತಪಸಿ, ತವಸಿಯೆಂದು ಮುಂಟು; ಸ್ವರೂಪಂ=ಸರೂಪಂ; ಸ್ವಾತಿ=ಸಾತಿ; ಸರಸ್ವತಿ=ಸರಸತಿ;— ದ್ವೀಪಂ=ದೀಪಂ, ದೀವಿಯೆಂದುಮುಂಟು; ದ್ವಾರಪಟ್ಟಂ=ದಾರವಟ್ಟಂ; ದ್ವಿಗುಣಂ=ದುಗುಣಂ;—ಧ್ವನಿ=ದನಿ;— ಸುಲ್ವಂ (ಶುಲ್ವಂ)=ಸುಲು, ಸುಲ್ ಎಂದುಮುಂಟು;—ಜ್ವಾಲಾ=ಜಾಳೆ; ಜ್ವರಂ=ಜರಂ;—ಖಿಳ್ವಂ=ಕಿಲ್; o. r. ಬಿಳ್ವ=ಬಿಳ್;—ತ್ವರಿತಂ=ತುರಿಹಂ.

ಸ್ನಕಾರಸತ್ವಲೋಪಕ್ಕೆ—ಸ್ನುಷಾ=ಸೊಸೆ.

ಯತ್ವಲೋಪಕ್ಕೆ—ಜ್ಯೋತಿ=ಜೋತಿ; ಜ್ಯೋತಿಷಂ=ಜೋಯಿಸಂ;— ಸಸ್ಯಂ=ಸಸಿ; ಕಾಂಸ್ಯಂ=ಕಂಚು; ಆಲಸ್ಯಕಂ=ಅಲಸುಗೆ; ಅಮಾವಾಸ್ಯಾ= ಅಮಾಸೆ, ಅವಸೆಯೆಂದುಮುಂಟು; — ಮಾಣಿಕ್ಯಂ=ಮಾಣಿಕಂ; — ನ್ಯೂನಂ=ನೂನಂ; ನ್ಯಾಯಂ=ನೇಯಂ (o. r. ನಾಯಂ): — ವ್ಯಥೆ=ಬೆತೆ (o. r. ವೆತೆ); ವ್ಯಂಜನಂ=ಬೆಂಜನಂ; ವ್ಯವಹಾರಂ=ಬೇಹಾರಂ (o. r. ವೆವಹಾರಂ);— ವಾಂಶ್ಯಂ=ವಾಸಂ; ಶ್ಯಾಮವರ್ಣಂ=ಸಾಮವರ್ಣಂ;— ಆಯುಷ್ಯಂ=ಆಯಿಸಂ (o. r. ಆಯುಸಂ).

ಸೂತ್ರಂ. || ೨೮೩ ||

ಜ becomes ಯ, ಸ, ಚ, ದ; ಭ becomes ಹ, ಪ, ವ; ರ becomes ಲ or ಳ.

ಯತ್ವದ ಸತ್ವದ ಚತ್ವದ |
ದತ್ವದ ವಿಧಿ ಜತ್ವದಲ್ಲಿ ಸಂಭವಿಸಿರ್ಕುಂ ||
ಭತ್ವಕ್ಕೆ ಹ ಪ ವಮಕ್ಕುಂ |
ರತ್ವಕ್ಕಂ ಲ ಳಮುಮಕ್ಕುಮೋರೊಂದೆಡೆಯೊಳ್. || ೨೮೩ ||

ಪದಚ್ಛೇದಂ. — ಯತ್ವದ ಸತ್ವದ ಚತ್ವದ ದತ್ವದ ವಿಧಿ ಜತ್ವದಲ್ಲಿ ಸಂಭವಿಸಿ ಇರ್ಕುಂ; ಭತ್ವಕ್ಕೆ ಹಪವಂ ಆಕ್ಕುಂ; ರತ್ವಕ್ಕಂ ಲಳಮುಂ ಆಕ್ಕುಂ ಓರ್ ಒಂದು ಎಡೆಯೊಳ್.

ಟೀಕು, ಯಥಾನ್ವಯಂ. — ಜತ್ವದಲ್ಲಿ = ಜಕಾರದಲ್ಲಿ; ಯತ್ವದ = ಯಕಾರದ; ಸತ್ವದ = ಸಕಾರದ; ಚತ್ವದ = ಚಕಾರದ; ದತ್ವದ = ದಕಾರದ; ವಿಧಿ = ವಿಧಿ; ಸಂಭವಿಸಿರ್ಕುಂ = ಹುಟ್ಟಿರ್ಪುದು; ಭತ್ವಕ್ಕೆ = ಭಕಾರಕ್ಕೆ; ಹಪವಂ = ಹಕಾರಪಕಾರವಕಾರಂ; ಅಕ್ಕುಂ = ಆಗುವುದು; ಓರೊಂದೆಡೆಯೊಳ್ = ಒಂದೊಂದು ತಾವಿನಲ್ಲಿ; ರತ್ವಕ್ಕಂ = ರೇಫೆಗಂ; ಲಳಮುಂ = ಲಕಾರಳಕಾರಮುಂ; ಅಕ್ಕುಂ ಆಗುವುದು.

ವೃತ್ತಿ.—ಯತ್ವಮುಂ ಸತ್ವಮುಂ ದತ್ವಮುಂ ಚತ್ವಮುಂ ಜತ್ವಕ್ಕಾದೇಶಮಕ್ಕುಂ; ಭತ್ವಕ್ಕೆ ಹತ್ವಮುಂ ಪತ್ವಮುಂ ವತ್ವಮುಮಕ್ಕುಂ; ರೇಫೆಗೆ ಲತ್ವಮುಂ ಳತ್ವಮುಂ ಕಿಱಿದೆಡೆಯೊಳಕ್ಕುಂ.

ಪ್ರಯೋಗಂ.—ಜತ್ವಕ್ಕೆ ಯತ್ವಂ—ರಾಜಂ=ರಾಯಂ.

ಜತ್ವಕ್ಕೆ ಸತ್ವಂ—ಕುಟಜಕಂ=ಕೊಡಸಿಗೆ.

ಜತ್ವಕ್ಕೆ ದತ್ವಂ—ಮುಂಜಂ=ಮೊಡೆ.

ಜತ್ವಕ್ಕೆ ಚತ್ವಂ—ಲಾಮಜ್ಜಂ=ಲಾಮಚ್ಚಂ (o. r. ಲಾಮಚಂ).

ಭತ್ವಕ್ಕೆ ಹತ್ವಂ—ವಲ್ಲಭಂ=ಬಲ್ಲಹಂ.

ಭತ್ವಕ್ಕೆ ಪತ್ವಂ—ಭಿಂಡಿವಾಳಂ=ಪಿಂಡಿವಾಳಂ.

ಭತ್ವಕ್ಕೆ ವತ್ವಂ—ವೃಷಭಂ=ಬಸವಂ.

ರೇಫೆಗೆ ಲತ್ವಂ—ಕುಠಾರಂ=ಕೊಡಲಿ.

ರೇಫೆಗೆ ಳತ್ವಂ—ಮರೀಚಂ=ಮೆಳಸು, (ಮೆಱಿಸು).

ಸೂತ್ರಂ || ೨೮೪ ||

ದ್ಧ becomes ಡ್ಡ, ಡ, or ಜ್ಜ; ಧ becomes ಜ; ಷ್ಟ becomes ಡ್ಡ, ಟ್ಟ, or ಟ; ಷ್ಠ becomes ಟ್ಟ, or ಟ.

ಡತ್ವಂ ಜತ್ವಂ ದ್ವಿತ್ವಾ- |
ದ್ವಿತ್ವ ಧಕಾರಕ್ಕೆ ಯೋಗವಾಹಮನಾಳ್ದಾ ||
ಷತ್ವಕ್ಕೆ ಡತ್ವಟತ್ವಂ
ದ್ವಿತ್ವದಿನಕ್ಕುಂ ಟಕಾರಮೊರ್ಮೆದ್ವಿತ್ವಂ. || ೫೮ ||

ಪದಚ್ಛೇದಂ.—ಡತ್ವಂ ಜತ್ವಂ ದ್ವಿತ್ವಾದ್ವಿತ್ವ ಧಕಾರಕ್ಕೆ; ಯೋಗವಾಹಮಂ ಆಳ್ದ ಆ ಷತ್ವಕ್ಕೆ ಡತ್ವಟತ್ವಂ ದ್ವಿತ್ವದಿಂ ಅಕ್ಕುಂ; ಟಕಾರಂ ಒರ್ಮೆ ಅದ್ವಿತ್ವಂ.

ಅನ್ವಯಂ.—ದ್ವಿತ್ವಾದ್ವಿತ್ವ ಧಕಾರಕ್ಕೆ ಡತ್ವಂ ಜತ್ವಂ ಎಂಬುದನ್ವಯಂ.

ಟೀಕು.—ದ್ವಿತ್ವಾದ್ವಿತ್ವಧಕಾರಕ್ಕೆ=ದ್ವಿತ್ವದ (ಮತ್ತು) ಅದ್ವಿತ್ವದ ಧಕಾರಕ್ಕೆ; ಡತ್ವಂ=ಡಕಾರಂ; ಜತ್ವಂ=ಜಕಾರಂ; ಅಕ್ಕುಂ=ಅದ್ವಿತ್ವವಾಗಿ ದ್ವಿತ್ವವಾಗಿ ಅಗುವುದು; ಯೋಗವಾಹಮಂ=ಯೋಗವಾಹಮಂ; ಆಳ್ದಾ ಷತ್ವಕ್ಕೆ=ತಾಳ್ದ ಆ ಷಕಾರಕ್ಕೆ; ಡತ್ವಟತ್ವಂ=ಡಕಾರ ಟಕಾರಂಗಳ್; ದ್ವಿತ್ವದಿಂ=ಒತ್ತಿನೊಡನೆ ಆಗುವುದು; ಟತ್ವಂ=ಟಕಾರಂ; ಒರ್ಮೆ=ಒಂದು ಬಾರಿ; ಅದ್ವಿತ್ವಂ=ದ್ವಿತ್ವವಿಲ್ಲದುದು ಆಗುವುದು.

ವೃತ್ತಿ.—ದ್ವಿತ್ವಮುಮದ್ವಿತ್ವಮುಮಪ್ಪ ಧಕಾರಕ್ಕೆ ತದನುರೂಪಮಾಗಿ ಡಕಾರಮುಂ ಜಕಾರಮುಮಕ್ಕುಂ; ಆ ಯೋಗವಾಹದ ಷತ್ವಕ್ಕೆ ದ್ವಿತ್ವದ ಡಕಾರಮುಂ ಟಕಾರಮುಮಕ್ಕುಂ; ದ್ವಿತ್ವರಹಿತಮಪ್ಪ ಟತ್ವಮೊರ್ಮೆಯಕ್ಕುಂ.

ಪ್ರಯೋಗಂ.—ದ್ವಿತ್ವಧಕಾರಕ್ಕೆ ಡಕಾರಂ—ವರ್ದ್ಧಕಿ=ಬಡ್ಡಗಿ, ಬಡಗಿಯುಮಕ್ಕುಂ.

ದ್ವಿತ್ವಧಕಾರಕ್ಕೆ ಜಕಾರಂ—ಪದ್ಧತಿ=ಪಜ್ಜೆ (o. r. ಹೆಜ್ಜೆ)? ಪದ್ಧತಿಯೆಂಬ ಶಬ್ದದ ತಕಾರಕ್ಕೆ ಲೋಪಮುಂಟು.

ಅದ್ವಿತ್ವಧಕಾರಕ್ಕೆ ಜಕಾರಂ—ಧಾತು=ಜಾದು.

ಯೋಗವಾಹಷಕಾರಕ್ಕೆ ಡತ್ವಂ—ಕಾಷ್ಠಂ=ಕಡ್ಡಿ.

ಆ ಷಕಾರಕ್ಕೆ ಟತ್ವಂ—ನಿಷ್ಠಾ=ನಿಟ್ಟೆ; ನಿಷ್ಠುರಂ=ನಿಟ್ಟುರಂ; ಗೋಷ್ಠೀ=ಗೋಟ್ಟಿ; ಷಷ್ಠೀ=ಚಟ್ಟಿ; ಮಂಜಿಷ್ಠಕಂ=ಮಂಜಿಟ್ಟಿಗೆ; ಅಂಗುಷ್ಠಂ=ಉಂಗುಟ್ಟಂ; (ಈ ಎರಡು ಶಬ್ದಂಗಳ್ಗೆ ವಿಕಲ್ಪಂ ಮಂಜಿಟಿಗೆ, ಉಂಗುಟಂ;) ದುಷ್ಟಂ=ದುಟ್ಟಂ; ನಷ್ಟಿ=ನಟ್ಟಿ; ಸೃಷ್ಟಿ=ಸಿಟ್ಟಿ; ಕಷ್ಟಂ=ಕಟ್ಟಂ; ಪಿಷ್ಟಂ=ಪಿಟ್ಟು (o. r. ಹಿಟ್ಟು); ಮುಷ್ಟಿಕಾ=ಮುಟ್ಟಿಗೆ; ಇಷ್ಟಕಾ=ಇಟ್ಟಿಗೆ.

ಆ ಷಕಾರಕ್ಕೆ ಅದ್ವಿತ್ವಟಕಾರಂ—ಪ್ರತಿಷ್ಠಾ=ಹದಿಟೆ (o. r. ಪದಿತೆ); ಜ್ಯೇಷ್ಠಾ=ಜೇಟೆ; ಸೌರಾಷ್ಟ್ರಂ=ಸೊರಟಂ.

ಸೂತ್ರಂ. || ೨೮೫ ||

ದಾಡಿಮಂ, ಕೂಷ್ಮಾಂಡಂ become ದಾಳಿಂಬಂ, ಕುಂಬಳಂ.

ವಿದಿತಂ ದಾಡಿಮಕೂಷ್ಮಾಂ- |
ಡದ ಮತ್ವಸ್ಥಾನದಲ್ಲಿ ಬತ್ವಂ ಕೂಷ್ಮಾಂ- ||
ಡದ ಷತ್ವಕ್ಕಂ ಬಿಂದುಗ- |
ಮುದಯಿಸುಗುಂ ಲೋಪವೃತ್ತಿ ಲಕ್ಷಣವಿಧಿಯಿಂ.

|| ೨೮೯ |

ಪದಚ್ಛೇದಂ.—ವಿದಿತಂ ದಾಡಿಮಕೂಷ್ಮಾಂಡದ ಮತ್ವಸ್ಥಾನದಲ್ಲಿ ಬತ್ವಂ; ಕೂಷ್ಮಾಂಡದ ಷತ್ವಕ್ಕಂ ಬಿಂದುಗಂ ಉದಯಿಸುಗುಂ ಲೋಪವೃತ್ತಿ ಲಕ್ಷಣವಿಧಿಯಿಂ.

ಅನ್ವಯಂ.— ದಾಡಿಮಕೂಷ್ಮಾಂಡದ ಮತ್ವಸ್ಥಾನದಲ್ಲಿ ಬತ್ವಂ ಎದಿತಂ; ಕೂಷ್ಮಾಂಡದ ಷತ್ವಕ್ಕಂ ಬಿಂದುಗಂ ಲಕ್ಷಣವಿಧಿಯಿಂ ಲೋಪವೃತ್ತಿ ಉದಯಿಸುಗುಂ.

ಟೀಕು.— ದಾಡಿಮಕೂಷ್ಮಾಂಡದ = ದಾಡಿಮವೆಂಬ ಕೂಷ್ಮಾಂಡವೆಂಬ ಶಬ್ದಂಗಳ; ಮತ್ವಸ್ಥಾನದಲ್ಲಿ = ಮಕಾರದ ತಾವಿನಲ್ಲಿ; ಬತ್ವಂ = ಬಕಾರಂ; ಎದಿತಂ = ಪ್ರಸಿದ್ಧವಾಗುವುದು; ಕೂಷ್ಮಾಂಡದ = ಕೂಷ್ಮಾಂಡ ಶಬ್ದದ; ಷತ್ವಕ್ಕಂ = ಷಕಾರಕ್ಕೆಯುಂ; ಬಿಂದುಗಂ = ಬಿಂದುವಿಂಗೆಯುಂ; ಲಕ್ಷಣವಿಧಿಯಿಂ = ಲಕ್ಷಣವಿಧಿಯಿಂದೆ; ಲೋಪವೃತ್ತಿ = ಲೋಪದ ವರ್ತನೆ; ಉದಯಿಸುಗುಂ = ಹುಟ್ಟುವುದು.

ವೃತ್ತಿ.— ದಾಡಿಮಕೂಷ್ಮಾಂಡಂಗಳ ಮತ್ವಕ್ಕೆ ಬತ್ವಂ; ಕೂಷ್ಮಾಂಡದ ಷಕಾರಕ್ಕಂ ಬಿಂದುಗಂ ಲೋಪಮಕ್ಕುಂ.

ಪ್ರಯೋಗಂ.— ದಾಡಿಮಂ = ದಾಳಿಂಬಂ; ಕೂಷ್ಮಾಂಡಂ = ಕುಂಬಳಂ.

ಸೂತ್ರಂ. || ೨೮೬ ||

First and second syllables receive the Bindu; a Bindu is sometimes dropped.

ಸಮನಿಸುಗುಮಾದಿವರ್ಣಾಂ- |
ತಿಮದೊಳಮೆರಡನೆಯ ವರ್ಣದಂತಿಮದೊಳಮಾ ||
ಸಮುಚಿತಬಿಂದುಸ್ಥಿತಿ ಬಿಂ- |
ದುಮಂತಶಬ್ದಕ್ಕೆ ಬಿಂದುಲೋಪಂ ಬಹುಳಂ. || ೩೦೦ ||

ಪದಚ್ಛೇದಂ.— ಸಮನಿಸುಗುಂ ಆದಿವರ್ಣಾಂತಿಮದೊಳಂ ಎರಡನೆಯ ವರ್ಣದ ಅಂತಿಮದೊಳಂ ಆ ಸಮುಚಿತಬಿಂದುಸ್ಥಿತಿ; ಬಿಂದುಮಂತ ಶಬ್ದಕ್ಕೆ ಬಿಂದುಲೋಪಂ ಬಹುಳಂ.

ಟೀಕು, ಯಥಾನ್ವಯಂ.— ಆದಿವರ್ಣಾಂತಿಮದೊಳಂ = ಆದ್ಯಕ್ಷರದ ಅಂತ್ಯದಲ್ಲಿಯುಂ; ಎರಡನೆಯ ವರ್ಣದ = ಎರಡನೆಯಕ್ಷರದ; ಅಂತಿಮದೊಳಂ = ಕಡೆಯಲ್ಲಿಯುಂ; ಆ ಸಮುಚಿತಬಿಂದುಸ್ಥಿತಿ = ಆಯುಚಿತವಾದ ಬಿಂದುವಿನ ಸ್ಥಿತಿ; ಸಮನಿಸುಗುಂ = ಪ್ರಾಪ್ತಿಸುವುದು; ಬಿಂದುಮಂತಶಬ್ದಕ್ಕೆ = ಬಿಂದುವುಳ್ಳ ಶಬ್ದಕ್ಕೆ; ಬಹುಳಂ = ಬಹುಳವಾಗಿ; ಬಿಂದುಲೋಪಂ = ಬಿಂದುವಿನ ಲೋಪಂ ಪ್ರಾಪ್ತಿಸುವುದು.

ವೃತ್ತಿ.— ಮೊದಲಕ್ಕರದ ಕಡೆಯೊಳಮೆರಡನೆಯಕ್ಕರದ ಕಡೆಯೊಳಮುಚಿತಮಾಗಿ ಬಿಂದುವಕ್ಕುಂ; ಬಿಂದುಯುಕ್ತಶಬ್ದಂಗಳ್ಗೆ ಬಹುಳದಿಂ ಲೋಪಮಕ್ಕುಂ.

ಪ್ರಯೋಗಂ.— ಆದ್ಯಕ್ಷರದ ಬಿಂದುವಿಂಗೆ— ಮೇಠಿ (o. r. ಮೇಥಿ)= ಮೇಂಟಿ; ತಾತಂ=ತಂದೆ; ಕೂಷ್ಮಾಂಡಂ=ಕುಂಬಳಂ; ಮರ್ಕಟಂ=ಮಂಕಡಂ, ಮಕ್ಕಡಮೆಂದುಮುಂಟು. (Monkey)

ದ್ವಿತೀಯಾಕ್ಷರದ ಬಿಂದುವಿಂಗೆ—ಕ್ರಮುಕಂ=ಕವುಂಗು; ದಾಡಿಮಂ= ದಾಳಿಂಬಂ.

ಬಿಂದುಲೋಪಕ್ಕೆ— ವಾಂಶ್ಯಂ=ವಾಸಂ; ಮುಂಜಂ=ಮೊದೆ; ಸಂಸ್ಕೃತಂ=ಸಕ್ಕದಂ; ಲಾಂಛನಂ (o. r. ಲಾಂಛ್ಯನಂ)=ಲಚ್ಛಣಂ.

ಬಹುಳಮಾಗಿ ಲೋಪಮಿಲ್ಲ — ಮಂಥನಿ=ಮಂತಣಿ; ಸಂಘಾತಂ=ಸಂಗಡಂ; ಅಂಕುಶಂ=ಅಂಕುಸಂ.

ಸೂತ್ರಂ. || ೨೮೭ ||

ಪದದೆರಡನೆಯಕ್ಕರದ- |
ತ್ವದೊಳೆತ್ವಂ ಹ್ರಸ್ವದೆತ್ವಮಾತ್ವಕ್ಕೂತ್ವ- ||
ಕ್ಕುದಯಿಕುಮತ್ವಸ್ಥಿತಿ ಬಹು- |
ಳದೆ ದೀರ್ಘಂ ಹ್ರಸ್ವಮಾ ತೃತೀಯಾಕ್ಷರಕಂ. ||೩೦೧||

In the second syllable ಅ becomes ಎ; also ಆ becomes ಎ; ಊ becomes ಅ; and a long vowel is shortened. The last occurs also in the third syllable.

ಪದಚ್ಛೇದಂ.— ಪದದ ಎರಡನೆಯ ಅಕ್ಕರದ ಅತ್ವದೊಳ್ ಎತ್ವಂ; ಹ್ರಸ್ವದ ಎತ್ವಂ ಆತ್ವಕ್ಕೆ; ಊತ್ವಕ್ಕೆ ಉದಯಿಕುಂ ಅತ್ವಸ್ಥಿತಿ; ಬಹುಳದೆ ದೀರ್ಘಂ ಹ್ರಸ್ವಂ, ಆ ತೃತೀಯಾಕ್ಷರಕಂ.

ಅನ್ವಯಂ.— ಪದದ ಎರಡನೆಯಕ್ಕರದ ಅತ್ವದೊಳ್ ಎತ್ವಂ; ಆತ್ವಕ್ಕೆ ಹ್ರಸ್ವದೆತ್ವಂ; ಊತ್ವಕ್ಕೆ ಅತ್ವಸ್ಥಿತಿ ಉದಯಿಕುಂ; ಬಹುಳದೆ, ಆ ತೃತೀಯಾಕ್ಷರಕಂ, ದೀರ್ಘಂ ಹ್ರಸ್ವಂ.

ಟೀಕು.— ಪದದ=ಪದಂಗಳ; ಎರಡನೆಯಕ್ಕರದ=ಎರಡನೆಯಕ್ಷರದ; ಅತ್ವದೊಳ್=ಅಕಾರದಲ್ಲಿ; ಎತ್ವಂ=ಎಕಾರಂ ಆಗುವುದು; ಆತ್ವಕ್ಕೆ=ಆಕಾರಕ್ಕೆ; ಹ್ರಸ್ವದೆತ್ವಂ=ಹ್ರಸ್ವದ ಎಕಾರಂ ಬರ್ಪುದು; ಊತ್ವಕ್ಕೆ=ಊಕಾರಕ್ಕೆ; ಅತ್ವಸ್ಥಿತಿ=ಅಕಾರದ ಸ್ಥಿತಿ; ಉದಯಿಕುಂ=ಹುಟ್ಟುವುದು; ಬಹುಳದೆ=ಬಹುಳದಿಂದೆ; ಆ ತೃತೀಯಾಕ್ಷರಕಂ=ಆ ಮೂರನೆಯಕ್ಷರಕ್ಕಂ; ದೀರ್ಘಂ=ದೀರ್ಘಂ; ಹ್ರಸ್ವಂ=ಹ್ರಸ್ವವಾಗುವುದು. ಬಹುಳಸಮುಚ್ಚಯಗಳಿಂ ದ್ವಿತೀಯಾಕ್ಷರಕ್ಕಂ ಹ್ರಸ್ವಂ ಬರ್ಪುದು.

ವೃತ್ತಿ.— ಪದದೆರಡನೆಯಕ್ಕರದತ್ವಕ್ಕೆತ್ವಮುಮಾಕಾರಕ್ಕೆ ಹ್ರಸ್ವೈತ್ವಮು ಮೂಕಾರಕ್ಕತ್ವಮುಮಕ್ಕುಂ; ಆ ದ್ವಿತೀಯಾಕ್ಷರದೀರ್ಘಕ್ಕೆ ಹ್ರಸ್ವಮಕ್ಕುಂ; ಆ ತೃತೀಯಾಕ್ಷರಕ್ಕಮಂತೆ.

ಪ್ರಯೋಗಂ.— ಅತ್ವಕ್ಕೆತ್ವಂ— ಉಜ್ಜಯನಿ= ಉಜ್ಜೆಣಿ.

ಆತ್ವಕ್ಕೆತ್ವಂ — ರಸಾಯನಂ= ರಸೆಯನಂ.

ಊಕಾರಕ್ಕತ್ವಂ— ನಿರೂಪಿಸಿದಂ= ನಿರವಿಸಿದಂ.

ದ್ವಿತೀಯಾಕ್ಷರದೀರ್ಘಕ್ಕೆ ಹ್ರಸ್ವಂ— ಹಿಂಗೂಲಕಂ= ಇಂಗುಲಿಕಂ; ಪ್ರಸಾಧನಂ=ಪಸದನಂ; ದ್ವಿತೀಯಾ=ಬಿದಿಗೆ; ತೃತೀಯಾ=ತದಿಗೆ; ಅಮಾವಾಸ್ಯೆ= ಅವಸೆ; ಉದ್ಯಾಪನಂ= ಉಜ್ಜವಣೆ; ವಿನಾಯಕಂ=ಬೆನಕಂ.

ತೃತೀಯಾಕ್ಷರದೀರ್ಘಕ್ಕೆ ಹ್ರಸ್ವಂ— ಉತ್ತರೀಯಕಂ= ಉತ್ತರಿಗೆ; ವರ್ಧಮಾನಂ= ಬದ್ದವಣಂ, ಬದ್ದವಣಮೆಂದು ಔಡಲಂ. [ಭತ್ರವಣ?]

ಸೂತ್ರಂ. ॥ ೨೮೮ ॥

In the third syllable ಅ becomes ಇ, ಒ, or ಉ; and ಉ becomes ಅ.

ವ್ಯವಹರಿಸುಗುಮತ್ವಕ್ಕಿ- ।
ತ್ವವಿಧಾನಂ ಹ್ರಸ್ವದೋತ್ವಮುತ್ವಂ ಶಬ್ದ ॥
ಪ್ರವಿದಿತಮಾದುತ್ವಕ್ಕ- ।
ತ್ವವೃತ್ತಿ ಮೂಱನೆಯ ವರ್ಣದೊಳ್ ನೆಲೆಗೊಳ್ಗುಂ
॥ ೩೦೨ ॥

ಪದಚ್ಛೇದಂ.— ವ್ಯವಹರಿಸುಗುಂ ಅತ್ವಕ್ಕೆ ಇತ್ವವಿಧಾನಂ, ಹ್ರಸ್ವದ ಒತ್ವಂ, ಉತ್ವಂ; ಶಬ್ದಪ್ರವಿದಿತಂ ಆದ ಉತ್ವಕ್ಕೆ ಅತ್ವವೃತ್ತಿ— ಮೂಱನೆಯ ವರ್ಣದೊಳ್— ನೆಲೆಗೊಳ್ಗುಂ.

ಟೀಕು, ಯಥಾನ್ವಯಂ.— ಮೂಱನೆಯ ವರ್ಣದೊಳ್ = ಮೂಱನೆಯಕ್ಷರದಲ್ಲಿ; ಅತ್ವಕ್ಕೆ = ಅಕಾರಕ್ಕೆ; ಇತ್ವವಿಧಾನಂ = ಇಕಾರದ ವಿಧಾನಂ; ಹ್ರಸ್ವದೋತ್ವಂ = ಹ್ರಸ್ವದ ಒಕಾರಂ; ಉತ್ವಂ = ಉಕಾರಂ; ವ್ಯವಹರಿಸುಗುಂ = ವ್ಯವಹರಿಸುವುದು; ಶಬ್ದಪ್ರವಿದಿತಂ = ಶಬ್ದಂಗಳಲ್ಲಿ ಪ್ರಸಿದ್ಧಂ; ಆದುತ್ವಕ್ಕೆ = ಆದ ಉಕಾರಕ್ಕೆ; ಅತ್ವವೃತ್ತಿ = ಅಕಾರದ ವರ್ತನೆ; ನೆಲೆಗೊಳ್ಗುಂ = ನೆಲೆಗೊಂಬುದು.

ವೃತ್ತಿ. — ಶಬ್ದಂಗಳ ತೃತೀಯಾಕ್ಷರದತ್ವಕ್ಕಿತ್ವಮುಂ ಹ್ರಸ್ವೋತ್ವಮುಂ ಉತ್ವಮುಮಕ್ಕುಂ; ಉತ್ವಕ್ಕತ್ವಮಕ್ಕುಂ.

ಪ್ರಯೋಗಂ. — ಅತ್ವದ ಇತ್ವಕ್ಕೆ — ಹಿಂಗೂಲಕಂ = ಇಂಗುಲಿಕಂ.
ಒತ್ವಕ್ಕೆ — ಸುರವರ್ಣ = ಸುರಹೊನ್ನೆ.
ಉತ್ವಕ್ಕೆ — ಆಲಸ್ಯಕಂ = ಅಲಸುಗೆ.
ಉತ್ವದತ್ವಕ್ಕೆ — ಕುಸ್ತುಂಬುರು = ಕೊತ್ತುಂಬರಿ.

ಸೂತ್ರಂ. || ೨೮೯ ||

In the fourth syllable ಅ becomes ಒ. A syllable of the second, third and fourth place suffers elision.

ದೊರೆಕೊಳ್ಗುಂ ನಾಲ್ಕನೆಯ- |
ಕ್ಕರದತ್ವಕ್ಕೊತ್ವವೃತ್ತಿ ಶಬ್ದಂಗಳೊಳಿ- ||
ರ್ದೆರಡನೆಯ ಮೂಱನೆಯ ಸಂ- |
ಚರಿಸುವ ನಾಲ್ಕನೆಯ ವರ್ಣಮಕ್ಕುಮಭಾವಂ
|| ೩೦೩ ||

ಪದಚ್ಛೇದಂ. — ದೊರೆಕೊಳ್ಗುಂ ನಾಲ್ಕನೆಯ ಅಕ್ಕರದ ಅತ್ವಕ್ಕೆ ಒತ್ವವೃತ್ತಿ; ಶಬ್ದಂಗಳೊಳ್ ಇರ್ದ ಎರಡನೆಯ ಮೂಱನೆಯ ಸಂಚರಿಸುವ ನಾಲ್ಕನೆಯ ವರ್ಣಂ ಅಕ್ಕುಂ ಅಭಾವಂ.

ಟೀಕು, ಯಥಾನ್ವಯಂ. — ನಾಲ್ಕನೆಯಕ್ಕರದ = ನಾಲ್ಕನೆಯಕ್ಷರದ; ಅತ್ವಕ್ಕೆ = ಅಕಾರಕ್ಕೆ; ಒತ್ವವೃತ್ತಿ = ಒಕಾರದ ವರ್ತನೆ; ದೊರೆಕೊಳ್ಗುಂ = ದೊರೆಕೊಂಬುದು; ಶಬ್ದಂಗಳೊಳ್ = ಶಬ್ದಂಗಳಲ್ಲಿ; ಇರ್ದೆರಡನೆಯ ಮೂಱನೆಯ ಸಂಚರಿಸುವ ನಾಲ್ಕನೆಯ ವರ್ಣಂ = ಇರ್ದ ಎರಡನೆಯದಾದ ಮೂರನೆಯದಾದ ನಾಲ್ಕನೆಯದಾದ ಅಕ್ಷರಂ; ಅಭಾವಂ = ಲೋಪಂ; ಅಕ್ಕುಂ = ಆಗುವುದು.

ವೃತ್ತಿ. — ನಾಲ್ಕನೆಯಕ್ಕರದತ್ವಕ್ಕೊತ್ವಮಕ್ಕುಂ; ಶಬ್ದಂಗಳೊಳಿರ್ದೆರಡನೆಯ ಮೂಱನೆಯ ನಾಲ್ಕನೆಯಕ್ಕರಕ್ಕೆ ಲೋಪಂ.

ಪ್ರಯೋಗಂ. — ಅಕಾರದೊತ್ವಕ್ಕೆ — ಆಟರೂಷಕಂ = ಆಡಸೊಗೆ.
ದ್ವಿತೀಯಾಕ್ಷರಕ್ಕೆ ಲೋಪಂ — ವ್ಯವಹಾರಂ = ಬೇಹಾರಂ.
ತೃತೀಯಾಕ್ಷರಕ್ಕೆ ಲೋಪಂ — ಪಲ್ಯಯನಂ = ಹಲ್ಲಣಂ; ಅಮಾವಾ

ಸ್ಯೆ=ಅವಸೆ; ವಿನಾಯಕಂ=ಬೆನಕಂ; ಮರುವಕಂ=ಮರುಗಂ (o. r. ಮರಗಂ); ಉಜ್ಜಯನಿ=ಉಜ್ಜೆಣಿ; ಆಟರೂಷಕಂ=ಆಡಸೋಗೆ.

ಚತುರ್ಥಾಕ್ಷರಕ್ಕೆ ಲೋಪಂ— ಉತ್ತರೀಯಕಂ=ಉತ್ತರಿಗೆ.

6. Compounds of Tadbhavas with Tadbhavas, and of Tadbhavas with unaltered Saṁskṛit themes.

ಸಂಸ್ಕೃತಪದಕ್ಕಾದಪಭ್ರಂಶದಚ್ಚಗನ್ನಡದ ಸಮಾಸಮಂ ಪೇೞ್ದಪೆಂ—

ಸೂತ್ರಂ. || ೨೯೦ ||

ಪದನೆರಡುಂ ತದ್ಭವದೊಳ್ |
ಪುದಿದಿರೆ ಮಾೞ್ಪುದು ಸಮಾಸಮಂ ಪದಯುಗದೊಳ್ ||
ಪದಮೊಂದೇಗೆಯ್ದುಂ ವಿಧಿ- |
ಗೊದವದೆ ನಿಲೆಯುಂ ಸಮಾಸಮುಂಟರೆಯೆಡೆಯೊಳ್.
|| ೩೦೪ ||

In forming compounds (ಸಮಾಸಂ) both words may be Tadbhavas. In some cases it is also allowed to form compounds wherein either the first or second word is an unaltered Saṁskṛit theme. It is, however, incorrect, if a word of which there exists a Tadbhava, is compounded in its Saṁskṛita form with a Tadbhava.

ಪದಚ್ಛೇದಂ.—ಪದಂ ಎರಡುಂ ತದ್ಭವದೊಳ್ ಪುದಿದು ಇರೆ, ಮಾೞ್ಪುದು ಸಮಾಸಮಂ; ಪದಯುಗದೊಳ್ ಪದಂ ಒಂದು, ಏ ಗೆಯ್ದುಂ, ವಿಧಿಗೆ ಒದವದೆ ನಿಲೆಯುಂ ಸಮಾಸಂ ಉಂಟು ಅರೆ ಎಡೆಯೊಳ್.

ಅನ್ವಯಂ.—ಪದಂ ಎರಡುಂ ತದ್ಭವದೊಳ್ ಪುದಿದು ಇರೆ, ಸಮಾಸಮಂ ಮಾೞ್ಪುದುಂ; ಪದಯುಗದೊಳ್ ಒಂದು ಪದಂ, ಏ ಗೆಯ್ದುಂ, ವಿಧಿಗೆ ಒದವದೆ ನಿಲೆಯುಂ ಅರೆಯೆಡೆಯೊಳ್ ಸಮಾಸಂ ಉಂಟು.

ಟೀಕು.—ಪದನೆರಡುಂ = ಎರಡು ಪದಂಗಳುಂ; ತದ್ಭವದೊಳ್ = ತದ್ಭವದಲ್ಲಿ; ಪುದಿದಿರೆ = ಪೊರ್ದುಗೆಯಾಗಿರೆ; ಸಮಾಸಮುಂ = ಸಮಾಸವಂ; ಮಾೞ್ಪುದು = ಮಾಡುವುದು; ಪದಯುಗದೊಳ್ = ಪದವೆರಡರಲ್ಲಿ; ಪದಮೊಂದು = ಒಂದು ಪದಂ; ಏ ಗೆಯ್ದುಂ = ಏನ ಮಾಡಿಯುಂ; ವಿಧಿಗೆ = ತದ್ಭವದ ವಿಧಿಗೆ; ಒದವದೆ = ಪ್ರಾಪ್ತಿಸದೆ; ನಿಲೆಯುಂ = ನಿಂದೊಡೆಯುಂ; ಅರೆಯೆಡೆಯೊಳ್ = ಕಿರಿದೆಡೆಯಲ್ಲಿ; ಸಮಾಸಂ = ಸಮಾಸಂ; ಉಂಟು = ಪೂರ್ವಕವಿಗಳ ಪ್ರಯೋಗದಲ್ಲಿ ಉಂಟು.

ವೃತ್ತಿ.—ಎರಡು ಪದಂಗಳಪಭ್ರಂಶದೊಳ್ ನಿಲೆ, ಸಮಾಸಮಂ ಮಾಡ್ಪಿದು; ಎರಡು ಪದಂಗಳೊಳೊಂದು ಪದನಪಭ್ರಂಶಲಕ್ಷಣಕ್ಕೆ ಬಾರದೆ ನಿಜದಿನಿರೆಯುಂ ನಿರ್ದೋಷಮಾಗಿ ಕಿಱಿದೆಡೆಯೊಳ್ ಸಮಾಸಮುಂಟು.

ಪ್ರಯೋಗಂ.—1) ಎರಡು ಪದಂಗಳಪಭ್ರಂಶಕ್ಕೆ—ಸರ್ವಲಕ್ಷಣಂ=ಸಬ್ಬಲಕ್ಕಣಂ; ಸರ್ವಸನ್ನಾಹಂ=ಸಬ್ಬಸನ್ನಣಂ; ಸಮೋಘಸನ್ನಾಹಂ=ಸವಗಸನ್ನಣಂ; ಕರ್ಕಶಯೌವನಂ=ಕಕ್ಕಸಜವ್ವನಂ; ಅಂಕುಶಚಾರಣಂ=ಅಂಕುಸಸಾರಣೆ; ದಶಶಿರಂ=ದಸಸಿರಂ; ವರ್ಣಶರಂ=ಬಣ್ಣಸರಂ; ದೃಷ್ಟಿವಿಷಂ=ದಿಟ್ಟಿಬಿಸಂ (o. r. ದಿಟ್ಟಿವಿಸಂ); ಶಿಲ್ಪಿಕವಿದ್ಯಾ=ಚಿಪ್ಪಿಗಬಿಜ್ಜೆ; ರಕ್ಷಾಶೃಂಖಲಂ=ರಕ್ಕಸಂಕಲೆ; ಯಮಪುರಂ=ಜವಹುರಂ; ಷಷ್ಠೀಗ್ರಹಣಂ=ಚಟ್ಟಿಗರಣಂ; ಸ್ಥಾನದೀಪಿಕಾ=ತಾಣದೀವಿಗೆ; ಸ್ಥಾನಭ್ರಷ್ಟಂ=ತಾಣಬಟ್ಟಂ; ಕ್ರೂರಕರ್ಮಿ=ಕೂಬ್ಕಿಮ್ಮಿ; ಶ್ರೀಖಂಡಂ=ಸಿರಿಕಂಡಂ; ವೀರಶ್ರೀ=ಬೀರಸಿರಿ; ಅವನಜೇಮನಂ=ಅವಣಜವಣಂ; ಅಚ್ಛಸ್ಫಟಿಕಂ=ಅಚ್ಚವಳಿಕ್ಕು; ಸಂಭಾರಕಬಳಂ=ಸಂಬರಗವಳಂ; ಖರಶಾಣಂ=ಕರಸಾಣೆ; ಪ್ರತಿಚ್ಛಂದಂ=ಪಡಿಚಂದಂ; ಆಂದೋಳಛತ್ರಿಕಾ=ಅಂದಳಸತ್ತಿಗೆ.

2) ಮೊದಲ ಪದನಪಭ್ರಂಶಕ್ಕೆ ಬಾರದೆ, ಪರಪದಂ ತದ್ಭವಮಾದ ಸಮಾಸಕ್ಕೆ—ಮಂಗಳಪ್ರಸಾಧನಂ=ಮಂಗಳವಸದನಂ; ವಿಜಯಶೇಷಿ=ವಿಜಯಸೇಸಿ; ಪರಮಶ್ರೀ=ಪರಮಸಿರಿ; ಜಗವರ್ತಿ=ಜಗವತ್ತಿ; ಪಂಚಶರಂ=ಪಂಚಸರಂ; ಪಾದರಕ್ಷಾ=ಪಾದರಕ್ಕೆ; ಪರಬ್ರಹ್ಮಂ=ಪರಬೊಮ್ಮಂ; ಕರಣಶಾಲಾ=ಕರಣಸಾಲೆ; ಪಟ್ಟಶಾಲಾ=ಪಟ್ಟಸಾಲೆ; ದಾನಶಾಲಾ=ದಾನಸಾಲೆ; ಉತ್ತರದೇಶಂ=ಉತ್ತರದೇಸಂ; ಬಾಹುವಳಯಂ=ಬಾಹುಬಳೆ; ಪಾದಶೃಂಖಲಾ=ಪಾದಸಂಕಲೆ.

3) ಪೂರ್ವಪದಂ ತದ್ಭವಮಾದುದರ್ಕೆ—ತ್ರಿಪುರಾಂತಕಂ=ತಿವುರಾಂತಕಂ; ತ್ರಿಗುಣಂ=ತಿಗುಣಂ; ತ್ರಿವಳಿ=ತಿವಳಿ; ದ್ವಿಗುಣಂ=ದುಗುಣಂ; ಚತುರ್ದಂತಂ=ಚೌದಂತ; ಸ್ವರಕರಣಂ=ಸರಕರಣಂ; ಸ್ವರವಾದಿ=ಸರವಾದಿ; ಪದಗತಿ=ಪಯಗತಿ; ಯಮದಂಡಂ=ಜವದಂಡಂ; ಸಂಧಿವಾತಂ=ಸಂದುವಾತಂ; ಶನಿವಾರಂ=ಸಣಿವಾರಂ; ಗ್ರಾಮರಸಂ=ಗಾವರಸಂ; ಪಶುಪತಿ=ಪಸುಪತಿ; ದಿಶಾಬಲಿ=ದೆಸೆಬಲಿ; ಶೂಲಪಾಣಿ=ಸೂಳಪಾಣಿ.

4) ಎರಡು ಪದಮುಂ ತದ್ಭವನೆಯ್ದುವಲ್ಲಿಯೊಂದು ಪದಮನುೞಿಸಿ ತಪ್ಪಾದುದರ್ಕೆ ಹಂಸರಾಜನ ಪ್ರಯೋಗಂ—

"ತರವೇೞ್ಮಾಣಿಕ್ಯಭಂಡಾರದ ಪುಟಿಕೆಗಳಂ" || 684 ||

ಇಲ್ಲಿ ಮಾಣಿಕ್ಯಶಬ್ದಮನುೞಿದು ಮಾಣಿಕಭಂಡಾರಮೆನೆ ಶುದ್ಧಂ.

ಸೂತ್ರಂ. || ೨೯೧ ||

In the beginning of compounds ಏಕ, ದ್ವಿ, ತ್ರಿ, ಚತುಃ become ಎಕ್ಕ, ದು (ದೂ), ತಿ, ಚೌ; and ದ್ವಿಕ, ತ್ರಿಕ, ಚತುಷ್ಕ become ದುಗ, ತಿಗ, ಚೌಕ.

ಏಕದ್ವಿತ್ರಿಚತುಃಶ- |
ಬ್ದಾಕೃತಿಗೆಕ್ಕ ದು ತಿ ಚೌಗಳಾದೇಶಂಗಳ್ ||
ಸ್ವೀಕೃತಸಮಾಸಪೂರ್ವದೊ- |
ಳಾಕರಿಪರ್ ಪ್ರತ್ಯಯಾಂತದೊಳಮೀ ವಿಧಿಯಂ.
|| ೩೦೫ ||

ಪದಚ್ಛೇದಂ.—ಏಕ-ದ್ವಿ-ತ್ರಿ-ಚತುಃಶಬ್ದಾಕೃತಿಗೆ ಎಕ್ಕ ದು ತಿ ಚೌಗಳ್ ಆದೇಶಂಗಳ್ ಸ್ವೀಕೃತಸಮಾಸಪೂರ್ವದೊಳ್; ಆಕರಿಪರ್ ಪ್ರತ್ಯಯಾಂತದೊಳಂ ಈ ವಿಧಿಯಂ.

ಅನ್ವಯಂ.— ಸ್ವೀಕೃತಸಮಾಸಪೂರ್ವದೊಳ್ ಏಕದ್ವಿತ್ರಿಚತುಃಶಬ್ದಾಕೃತಿಗೆ ಎಕ್ಕ ದು ತಿ ಚೌಗಳ್ ಆದೇಶಂಗಳ್; ಪ್ರತ್ಯಯಾಂತದೊಳಂ ಈ ವಿಧಿಯಂ ಆಕರಿಪರ್.

ಟೀಕು.— ಸ್ವೀಕೃತಸಮಾಸಪೂರ್ವದೊಳ್=ಅಂಗೀಕರಿಸಲ್ಪಟ್ಟ ಸಮಾಸಪದಂಗಳ ಮೊದಲಲ್ಲಿ; ಏಕದ್ವಿತ್ರಿಚತುಃಶಬ್ದಾಕೃತಿಗೆ= ಏಕ ಎಂಬ ದ್ವಿ ಎಂಬ ತ್ರಿ ಎಂಬ ಚತುಃ ಎಂಬ ಶಬ್ದಂಗಳ ಆಕಾರಕ್ಕೆ; ಎಕ್ಕ ದು ತಿ ಚೌಗಳ್ = ಎಕ್ಕ ಎಂಬ ದು ಎಂಬ ತಿ ಎಂಬ ಚೌ ಎಂಬ ಶಬ್ದಂಗಳ್; ಆದೇಶಂಗಳ್ = ಆದೇಶಂಗಳಪ್ಪುವು; ಪ್ರತ್ಯಯಾಂತದೊಳಂ = ದ್ವಿಕಂ ತ್ರಿಕಂ ಚತುಷ್ಕಂ ಎಂಬ ಪ್ರತ್ಯಯಾಂತಶಬ್ದಂಗಳಲ್ಲಿಯುಂ; ಈ ವಿಧಿಯಂ = ಈ ಪೇಳ್ದ ವಿಧಿಯಂ; ಆಕರಿಪರ್ = ಪೇಳ್ವರ್.

ವೃತ್ತಿ.—ಸಮಾಸದಾದಿಯೊಳಿರ್ದ ಏಕದ್ವಿತ್ರಿಚತುಃಶಬ್ದಂಗಳ್ಗೆ ಎಕ್ಕ ದು ತಿ ಚೌ ಎಂಬಿವಾದೇಶಮಪ್ಪುವು; ದ್ವಿತ್ರಿಚತುಃಶಬ್ದಂಗಳ್ ಪ್ರತ್ಯಯಾಂತಮಾದೊಡಂ ಈ ಲಕ್ಷಣಮೆ.

ಪ್ರಯೋಗಂ.—ಎಕ್ಕಕ್ಕೆ—ಏಕಶರಂ=ಎಕ್ಕಸರಂ; ಏಕಪತ್ರಂ=ಎಕ್ಕವತ್ತಿ; ಏಕಸ್ಥಲಂ=ಎಕ್ಕತಳಂ.

ದುಗೆ—ದ್ವಿಶರಂ=ದುಸರಂ; ದ್ವಿಗುಣಂ=ದುಗುಣಂ; ದ್ವಿಪಟ್ಟಿಕಾ=ದುವಟ್ಟಿಗೆ; ದ್ವಿಹಸ್ತಂ=ದುಹತ್ತಂ, ದೂವಟ್ಟಿಗೆ, ದೂಹತ್ತಮೆಂದುಮುಂಟು.

ತಿಗೆ—ತ್ರಿಗುಣಂ=ತಿಗುಣಂ; ತ್ರಿಶರಂ=ತಿಸರಂ; ತ್ರಿಶೂಲಂ=ತಿಸುಳಂ; ತ್ರಿಪದಿ=ತಿವದಿ; ತ್ರಿವಳಿ=ತಿವಳಿ.

ಚೌಗೆ—ಚತುಃಪದಂ=ಚೌಪದಂ; ಚತುಃಪಟ್ಟಂ=ಚೌವಟ್ಟಂ, ವಿಕಲ್ಪದಿಂ ಚೌವಟಮೆಂದುಮುಂಟು; ಚತುರ್ಗ್ರಾಮಂ=ಚೌಗಾವೆ; ಚತುಃಖಂಡಂ=ಚೌಕಂಡಂ; ಚತುರ್ವೇದಿ=ಚೌವೇದಿ; ಚತುರ್ದಂತಂ=ಚೌಜಂತಂ.

ಪ್ರತ್ಯಯಾಂತಕ್ಕೆ—ದ್ವಿಕಂ=ದುಗಂ; ತ್ರಿಕಂ=ತಿಗಂ; ಚತುಷ್ಕಂ=ಚೌಕಂ.

ಸೂತ್ರಂ. || ೨೯೨ ||

When, in compounds, ಸಹ and ಮಹತ್ precede a consonant, they may become ಸಾ and ಮಾ.

ಸಮಸಂದ ಸಹ ಮಹಚ್ಛ- |
ಬ್ದಮೆ ಸಾಮಾದೇಶದಿಂ ಸಮಾಸಾದಿಯೊಳಂ ||
ತಮರ್ದಿರ್ಕುಂ ಪರಪದಪೂ- |
ರ್ವಮದುಂ ವ್ಯಂಜನದೊಳೊಂದೆ ಬಹುಳತೆಯಿಂದಂ.
|| ೩೦೬ ||

ಪದಚ್ಛೇದಂ.—ಸಮಸಂದ ಸಹ ಮಹಚ್ಛಬ್ದಮೆ ಸಾಮಾದೇಶದಿಂ ಸಮಾಸಾದಿಯೊಳ್ ಅಂತು ಅಮರ್ದು ಇರ್ಕುಂ, ಪರಪದಪೂರ್ವಂ ಅದುಂ ವ್ಯಂಜನದೊಳ್ ಒಂದೆ, ಬಹುಳತೆಯಿಂದಂ.

ಅನ್ವಯಂ.—ಪರಪದಪೂರ್ವಂ ಅದುಂ ವ್ಯಂಜನದೊಳ್ ಒಂದೆ, ಸಮಾಸಾದಿಯೊಳ್ ಸಮಸಂದ ಸಹ ಮಹಚ್ಛಬ್ದಮೆ ಸಾಮಾದೇಶದಿಂ ಅಂತು ಬಹುಳತೆಯಿಂದಂ ಅಮರ್ದು ಇರ್ಕುಂ.

ಟೀಕು.—ಪರಪದಪೂರ್ವಂ=ಮುಂದಣ ಪದದ ಮೊದಲ್; ಅದುಂ=ಅದೂ; ವ್ಯಂಜನದೊಳ್=ವ್ಯಂಜನಾಕ್ಷರದಲ್ಲಿ; ಒಂದೆ=ಕೂಡೆ; ಸಮಾಸಾದಿಯೊಳ್=ಸಮಾಸದ ಮೊದಲಲ್ಲಿ; ಸಮಸಂದ ಸಹಮಹಚ್ಛಬ್ದಮೆ=ಸಮಾನವಾಗಿ ಸಂದ ಸಹ ಎಂಬ ಮಹತ್ ಎಂಬ ಶಬ್ದಂಗಳೆ; ಸಾಮಾದೇಶದಿಂ=ಸಾ ಎಂಬ ಮಾ ಎಂಬಾದೇಶದಿಂ; ಅಂತು=ಹಾಂಗೆ; ಬಹುಳತೆಯಿಂದಂ=ಬಹುಳತ್ವದಿಂದೆ; ಅಮರ್ದಿರ್ಕುಂ=ಪೊರ್ದುಗೆಯಾಗಿರ್ಪುದು.

ವೃತ್ತಿ.—ವ್ಯಂಜನಂ ಪರಮಾಗೆ, ಸಹ ಮಹಚ್ಛಬ್ದಂಗಳ್ಗೆ ಸಾ ಮಾ ಎಂಬಾದೇಶಂ ಬಹುಳದಿನಕ್ಕುಂ.

ಪ್ರಯೋಗಂ.— ಸಾಗೆ—ಸಹದೇವಂ = ಸಾದೇವಂ; ಸಹವಾಸಿ = ಸಾವಾಸಿ.

ಮಾಗೆ—ಮಹಾದೇವಂ = ಮಾದ್ದೇವಂ; ಮಹಾಕಾಳಿ = ಮಾಕಾಳಿ; ಮಹಾಜನಂ = ಮಾಜನಂ; ಮಹಾದಾನಿ = ಮಾದಾನಿ; ಮಹಾಸಾಮಂತಂ = ಮಾಸಾವಂತಂ; ಮಹಾಪಾತಕಂ = ಮಾಪಾತಕಂ; ಮಹಾಪಥಂ = ಮಾಪತಂ; ಮಹಂತಂ = ಮಾಂತಂ; ಮಹಾಪುರುಷಂ = ಮಾಪುರುಷಂ; ಮಹಾಲಕ್ಷ್ಮಿ = ಮಾಲಕುಮಿ.

ಕೆಲವೆಡೆಯೊಳಿಲ್ಲ—ಸಹಜಾತಂ; ಸಹಧರ್ಮಿ; ಸಹಭೋಜಿ;— ಮಹಾಗಿರಿ; ಮಹಾಗಜಂ; ಮಹಾಸೈನ್ಯಂ.

ಸೂತ್ರಂ. || ೨೯೩ ||

When, in compounds, the first letter of the second word is ಪ, ಬ, or ಮ, these are often changed into ವ; in such a case an ಊ of ಪ is shortened, and the Rêpha (visarga) of a preceding ಅಂತರ್ (ಅಂತಃ) elided.

ಪರದೊಳ್ ಪಬಮಂಗಳ್ ನೆಲ- |
ಸಿರೆ ವತ್ವಂ ಪೇನಮಾ ಪಕಾರಮದೂತ್ವಂ ||
ಬೆರಸಿರೆ ತಾಂ ಹ್ರಸ್ವತೆಯಂ- |
ತರೆಂಬ ಶಬ್ದಾಂತರೇಫೆಗಕ್ಕುಂ ಲೋಪಂ. || ೩೦೭ ||

ಪದಚ್ಛೇದಂ.— ಪರದೊಳ್ ಪ ಬ ಮಂಗಳ್ ನೆಲಸಿ ಇರೆ, ವತ್ವಂ; ಪೇನಂ ಆ ಪಕಾರಂ ಅದು ಊತ್ವಂ ಬೆರಸಿ ಇರೆ, ತಾಂ ಹ್ರಸ್ವತೆ; ಅಂತರ್ ಎಂಬ ಶಬ್ದಾಂತರೇಫೆಗೆ ಅಕ್ಕುಂ ಲೋಪಂ.

ಅನ್ವಯಂ.— ಪರದೊಳ್ ಪ ಬ ಮಂಗಳ್ ನೆಲಸಿರೆ, ವತ್ವಂ ಅಕ್ಕುಂ; ಏನಂ ಆ ಪಕಾರಂ ಅದು ಊತ್ವಂ ಬೆರಸಿರೆ, ಹ್ರಸ್ವತೆ ತಾಂ; ಅಂತರ್ ಎಂಬ ಶಬ್ದಾಂತರೇಫೆಗೆ ಲೋಪಂ.

ಟೀಕು.— ಪರದೊಳ್ = ಪರಪದದಾದಿಯಲ್ಲಿ; ಪ ಬ ಮಂಗಳ್ = ಪಕಾರ ಬಕಾರ ಮಕಾರಂಗಳ್; ನೆಲಸಿರೆ = ನೆಲೆಗೊಂಡಿರೆ; ವತ್ವಂ = ವಕಾರಂ; ಅಕ್ಕುಂ = ಅಪ್ಪುದು; ಪೇನಂ = ವಿಶೇಷವಾಗಿ; ಆ ಪಕಾರಂ = ಆ ಪತ್ವಂ; ಅದು = ಅದು; ಊತ್ವಂ = ಊಕಾರಮಂ; ಬೆರಸಿರೆ = ಕೂಡಿರೆ; ಹ್ರಸ್ವತೆ = ಹ್ರಸ್ವತ್ವಂ; ತಾಂ = ತಾಂ ಆಗುವುದು; ಅಂತರೆಂಬ ಶಬ್ದಾಂತರೇಫೆಗೆ = ಅಂತರ್ ಎಂಬ ಶಬ್ದದ ಕಡೆಯಣ ರೇಫೆಗೆ; ಲೋಪಂ = ಅದರ್ಶನಂ ಆಗುವುದು.

ವೃತ್ತಿ.— ಪರಪದದ ಮೊದಲೊಳ್ ಪಕಾರ ಬಕಾರ ಮಕಾರಂಗಳಿರೆ, ವತ್ವಮಕ್ಕುಂ, ಆ ಪಕಾರದೂತ್ವಕ್ಕೆ ಹ್ರಸ್ವಮಪ್ಪುಕಾರಮಕ್ಕುಂ; ಅಂತರ್ ಶಬ್ದದ ಕಡೆಯ ರೇಫೆಗೆ ಲೋಪಮಕ್ಕುಂ.

ಪ್ರಯೋಗಂ.— ಪಕಾರಕ್ಕೆ ವತ್ವಂ—ಹಂಸಪಿಂಡಂ= ಅಂಚೆವಿಂಡು; ಪಂಜರಪಕ್ಷಿ= ಹಂಜರವಕ್ಕಿ; ಪಾದಪಾಶಂ= ಪಾದವಾಸಂ; ಪಾದಪಟ್ಟಂ= ಪಾಯವಟ್ಟಂ; ರತ್ನಪಟ್ಟಿಕಾ= ರನ್ನವಟ್ಟಿಗೆ; ಯೋಗಪಾದುಕಾಂ= ಜೋಗವಾವುಗೆ; ಸಂಸ್ಥಾಪತ್ತನಂ= ಸಂತೆವಟ್ಟಣಂ; ಮಾನುಷಪುಸ್ತಕಂ= ಮಾನಸವೊತ್ತಗೆ; ಸಂಘಾತಪ್ರೇಕ್ಷಣಂ= ಸಂಗಡವೆಗ್ಗಣಂ (o. r. ಸಂಗಡವೆಕ್ಕಣಂ); ರಾಕ್ಷಸಪ್ರಕರಣಂ= ರಕ್ಕಸವಗರಣಂ; ಚಂದ್ರಪುರಂ= ಚಂದವುರಂ.

ಬಕಾರಕ್ಕೆ ವಕಾರಂ—ಶೃಂಖಲಾಬಂಧಂ= ಸಂಕಲೆವಂದಂ; ದಿಶಾಬಲಿ= ದೆಸೆವಲಿ; ಶರಬಂಧಂ= ಸರವಂದಂ.

ಮಕಾರಕ್ಕೆ ವತ್ವಂ—ದೇವಮಾನುಷಂ= ದೇವವಾನಸಂ; ಯಮಳಮರ್ದಳಂ= ಜವಳಿವದ್ದಳಿ; ರತ್ನಮಣಿ= ರನ್ನವಣಿ.

ಆ ಪತ್ವದ ಊತ್ವಕ್ಕುತ್ವಂ— ವರ್ಣಪೂರಂ= ಬಣ್ಣವುರಂ; ಕರ್ಣಪೂರಂ= ಕನ್ನವುರಂ.

ರೇಫಲೋಪಕ್ಕೆ—ಅಂತಃಪುರಂ= ಅಂತವುರಂ.

ಪೀನಗ್ರಹಣದಿಂದೆ ಕೆಲವಱೊಳ್ವತ್ವಮಿಲ್ಲ—ಕಾಂಡಪಟಂ= ಕಂಡಪಟಂ; ಗೂರ್ಜರಪಟ್ಟಿ= ಗುಜ್ಜರಪಟ್ಟಿ; ಶಂಕರಪ್ರಸಾದಿತಂ= ಸಂಕರಪಸಾಯಿತಂ; ಪತಿವ್ರತಾ= ಹದಿಬದೆ (o. r. ಹದಿಬತೆ); ನಿರ್ಬಂಧಿಕಂ= ನಿಬ್ಬಂದಿಗಂ; ನಿರ್ಬುದ್ಧಿ= ನಿಬುದ್ಧಿ; ಅಚ್ಛಮಲ್ಲಿಕಾ= ಅಚ್ಚಮಲ್ಲಿಗೆ; ವಲ್ಲಿಮಾಟಂ= ಬಳ್ಳಿಮಾಡಂ; ಅಕ್ಷರಮಾಲಾ= ಅಕ್ಕರಮಾಲೆ.

ಸೂತ್ರಂ. || ೨೯೪ ||

ಉದಯಿಪುದು ತೃತೀಯತೆ ಪೂ- |
ರ್ವದ ಸೂತ್ರವಿಧಾನದಿಂದೆ ಕತಪಕ್ಕೆ ತಗು- ||
ಳ್ವುದು ದೀರ್ಘಂ ಪೂರ್ವಪದಾಂ- |
ತ್ಯದೊಳುತ್ತರಪದದ ಮೊದಲೊಳೊದವಿರೆ ಲೋಪಂ.
|| ೩೦೮ ||

As according to S. 65 in sandhi thus also in Tadbhava compounds ಕ, ತ, ಪ become ಗ, ದ, ಬ; further, when the first syllable of the second word suffers elision, the last letter of the first word is lengthened.

ಪದಚ್ಛೇದಂ.— ಉದಯಿಪುದು ತೃತೀಯತೆ ಪೂರ್ವದ ಸೂತ್ರವಿಧಾನದಿಂದೆ ಕ-ತ-ಪಕ್ಕೆ; ತಗುಳ್ವುದು ದೀರ್ಘಂ ಪೂರ್ವಪದಾಂತ್ಯದೊಳ್ ಉತ್ತರಪದದ ಮೊದಲೊಳ್ ಒದವಿ ಇರೆ ಲೋಪಂ.

ಅನ್ವಯಂ.— ಪೂರ್ವದ ಸೂತ್ರವಿಧಾನದಿಂದೆ ಕತಪಕ್ಕೆ ತೃತೀಯತೆ ಉದಯಿಪುದು; ಉತ್ತರಪದದ ಮೊದಲೊಳ್ ಲೋಪಂ ಒದವಿರೆ ಪೂರ್ವಪದಾಂತ್ಯದೊಳ್ ದೀರ್ಘಂ ತಗುಳ್ವುದು.

ಟೀಕು.— ಪೂರ್ವದ = ಮೊದಲ ಸಂಧಿಪ್ರಕರಣದ; ಸೂತ್ರವಿಧಾನದಿಂದೆ = ಸೂತ್ರದ ವಿಧಿಯಿಂದೆ; ಕತಪಕ್ಕೆ = ಕಕಾರ ತಕಾರ ಪಕಾರಂಗಳ್ಗೆ; ತೃತೀಯತೆ = ಮೂರನೆಯಕ್ಷರದ ಭಾವಂ; ಉದಯಿಪುದು = ಹುಟ್ಟುವುದು; ಉತ್ತರಪದದ = ಮುಂದಣ ಪದದ; ಮೊದಲೊಳ್ = ಆದಿಯಲ್ಲಿ; ಲೋಪಂ = ಅದರ್ಶನಂ; ಒದವಿರೆ = ಬಂದಿರೆ; ಪೂರ್ವಪದಾಂತ್ಯದೊಳ್ = ಮೊದಲ ಪದದ ಕಡೆಯಲ್ಲಿ; ದೀರ್ಘಂ = ದೀರ್ಘಂ; ತಗುಳ್ವುದು = ಎಯ್ದುವುದು, ಬರ್ಪುದೆಂಬುದರ್ಥಂ.

ವೃತ್ತಿ.— ಪೂರ್ವೋಕ್ತಸೂತ್ರದಿಂ ಪರದ ಕತಪಕ್ಕೆ ತೃತೀಯತೆಯಕ್ಕುಂ; ಪೂರ್ವಪದಾಂತ್ಯಕ್ಕೆ ದೀರ್ಘಮುಮುತ್ತರಪದದಾದಿಗೆ ಲೋಪಮುಮಕ್ಕುಂ.

ಪ್ರಯೋಗಂ.— ಕಕಾರತೃತೀಯತೆಗೆ — ಮಾನುಷಕಾವ್ಯಂ = ಮಾನಸಗಬ್ಬಂ; ಕರ್ಪೂರಕರಂಡಕಂ = ಕಪ್ಪುರಗರಡಗೆ; ಸಂಭಾರಕಬಳಂ = ಸಂಬರಗವಳಂ; ರತ್ನಕಂಬಳಂ = ರನ್ನಗಂಬಳಿ; ಕಾಶಾಕರ್ಪಟಂ = ಕಾಸಿಗಪ್ಪಡಂ (o. r. ಕಸೆಗಪ್ಪಡಂ).

ತಕಾರತೃತೀಯತೆಗೆ— ಖದಿರತಾಂಬೂಲಂ = ಕೈರದಂಬುಲಂ; ಮಾಲಾತೋರಣಂ = ಮಾಲೆದೋರಣಂ; ಕಾಕತುಂಡಿ = ಕಾಗೆದೊಂಡೆ; ಅಚ್ಛತುವರಿ = ಅಚ್ಚದೊವರಿ (o. r. ಅಚ್ಚದೊಗರಿ); ಸಂಘಾತತಾಳಂ = ಸಂಗಡದಾಳಂ.

ಪಕಾರತೃತೀಯತೆಯಂ ಪ್ರಯೋಗದೊಳ್ ನೋಡಿ ಕೊಳ್ವುದು.

ಪೂರ್ವಪದಾಂತ್ಯಕ್ಕೆ ದೀರ್ಘಮುಂ ಉತ್ತರಪದಾದಿಗೆ ಲೋಪಮುಮಾಗಿ— ಧರ್ಮಪಾನೀಯಕ್ಕೆ ದಮ್ಮಾಣಿ, ಕಾಂಸ್ಯತಾಳಕ್ಕೆ ಕಂಸಾಳಂ ಎಂದಾಯ್ತು.

ಸೂತ್ರಂ. || ೨೯೫ ||

Further, in compounds sometimes the first syllable of the second word suffers elision; sometimes the last syllable of the first word is elided.

ಪರಪದದಾದಿಗೆ ಲೋಪಂ |
ದೊರೆಕೊಳ್ಗುಂ ಕೆಲವಱಲ್ಲಿ ಪೂರ್ವಪದಾಂತ್ಯ- ||
ಕ್ಕಿರದಕ್ಕುಂ ಲೋಪಂ ವ್ಯವ- |
ಹರಿಪ ಸಮಾಸಂಗಳಲ್ಲಿ ಕೆಲಕೆಲವೆಡೆಯೊಳ್. || ೩೦೯ ||

ಪದಚ್ಛೇದಂ.—ಪರಪದದ ಆದಿಗೆ ಲೋಪಂ ದೊರೆಕೊಳ್ಗುಂ, ಕೆಲವೞಿಲ್ಲಿ ಪೂರ್ವ ಪದಾಂತ್ಯಕ್ಕೆ ಇರದೆ ಅಕ್ಕುಂ ಲೋಪಂ, ವ್ಯವಹರಿಪ ಸಮಾಸಂಗಳಲ್ಲಿ ಕೆಲ ಕೆಲ ಎಡೆಯೊಳ್.

ಅನ್ವಯಂ.—ವ್ಯವಹರಿಪ ಸಮಾಸಂಗಳಲ್ಲಿ ಕೆಲಕೆಲವೆಡೆಯೊಳ್ ಪರಪದದ ಆದಿಗೆ ಲೋಪಂ ದೊರೆಕೊಳ್ಗುಂ; ಕೆಲವೞಿಲ್ಲಿ ಪೂರ್ವಪದಾಂತ್ಯಕ್ಕೆ ಇರದೆ ಲೋಪಂ ಅಕ್ಕುಂ.

ಟೀಕು.—ವ್ಯವಹರಿಪ ಸಮಾಸಂಗಳಲ್ಲಿ = ವ್ಯವಹರಿಸುವ ಸಮಾಸಪದಂಗಳಲ್ಲಿ; ಕೆಲ ಕೆಲವೆಡೆಯೊಳ್ = ಕೆಲವು ಕೆಲವು ತಾವಿನಲ್ಲಿ; ಪರಪದದ = ಮುಂದಣ ಪದದ; ಆದಿಗೆ = ಮೊದಲ್ಗೆ; ಲೋಪಂ = ಅದರ್ಶನಂ; ದೊರೆಕೊಳ್ಗುಂ = ಬರ್ಪುದು; ಕೆಲವೞಿಲ್ಲಿ = ಕೆಲವು ಸಮಾಸ ಪದಂಗಳಲ್ಲಿ; ಪೂರ್ವಪದಾಂತ್ಯಕ್ಕೆ = ಮೊದಲ ಪದದ ಕಡೆಯಕ್ಷರಕ್ಕೆ; ಇರದೆ = ನಿಲ್ಲದೆ; ಲೋಪಂ = ಅದರ್ಶನಂ; ಅಕ್ಕುಂ = ಅಗುವುದು.

ವೃತ್ತಿ.—ಸಮಾಸದೊಳುತ್ತರಪದದಾದಿಗೆ ಕೆಲವೆಡೆಯೊಳ್ ಲೋಪಮಕ್ಕುಂ; ಪೂರ್ವಪದಾಂತ್ಯಕ್ಕೆ ಕೆಲವೞಿಯೊಳ್ ಲೋಪಮಕ್ಕುಂ.

ಪ್ರಯೋಗಂ.—ಉತ್ತರಪದಾದಿಯ ಲೋಪಕ್ಕೆ—ಚರ್ಮಪಟ್ಟಿಕಾ=ಚಮ್ಮಟ್ಟಿಗೆ, ಸಮಟಿಗೆಯೆನಲುಮಕ್ಕುಂ.

ಪೂರ್ವಪದಾಂತ್ಯಲೋಪಕ್ಕೆ—ದೇವಕುಲಂ=ದೇಗುಲಂ; ದೇಶಶಾಖಾ= ದೇಸಾಕೆ; ಸೂಚಿಯಾನಂ=ಸೂಯಾಣಂ.

ಸೂತ್ರಂ. || ೨೯೬ ||

Where ಅಕಾರ and ಆಗಾರ form the second word of a compound, they often become ಅರ; and ಆವಳಿಕೆ become ಅಳಿಗೆ (or ಳಿಗೆ).

ಆವಗಮಾಕಾರಾಗಾ- |
ರಾವಳಿಕೆಗಳಿವು ಸಮಾಸದುತ್ತರಪದನಾ- ||
ಗಾವರಿಸಿರ್ಕುಂ ಲೋಪಂ |
ಭಾವಿಪೊಡೆರಡನೆಯ ವರ್ಣದೊಳಮಾದಿಯೊಳಂ
|| ೩೧೦ ||

ಪದಚ್ಛೇದಂ.—ಆವಗಂ ಆಕಾರಾಗಾರಾವಳಿಕೆಗಳ್ ಇವು ಸಮಾಸದ ಉತ್ತರಪದಂ ಆಗೆ, ಆವರಿಸಿ ಇರ್ಕುಂ ಲೋಪಂ, ಭಾವಿಪೊಡೆ ಎರಡನೆಯ ವರ್ಣದೊಳಂ ಆದಿಯೊಳಂ.

ಟೀಕು, ಯಥಾನ್ವಯಂ.—ಅವಗಂ = ಅವಾಗಳುಂ; ಆಕಾರಾಗಾರಾವಳಿಕೆಗಳ್= ಆಕಾರವೆಂಬ ಆಗಾರವೆಂಬ ಆವಳಿಕೆಯೆಂಬ ಶಬ್ದಂಗಳ್; ಇವು = ಈ ಪದಂಗಳ್; ಸಮಾಸದ= ಸಮಾಸಪದದ; ಉತ್ತರಪದಂ = ಮುಂದಣಪದಂ; ಆಗಿ = ಆಗಿ; ಆವರಿಸಿರ್ಪುದಂ=ಆವರಿಸಿಪ್ಪುವು; ಭಾವಿಪೊಡೆ = ಭಾವಿಸುವೊಡೆ; ಎರಡನೆಯ ವರ್ಣದೊಳಂ=ಎರಡನೆಯಕ್ಷರದಲ್ಲಿಯುಂ; ಆದಿಯೊಳಂ = ಆದಿಯಕ್ಷರದಲ್ಲಿಯುಂ; ಲೋಪಂ = ಅದರ್ಶನಂ ಬರ್ಪುದು.

ವೃತ್ತಿ.—ಆಕಾರ ಆಗಾರ ಆವಳಿಕಾ ಶಬ್ದಂಗಳ್ ಪರಮಾಗೆ, ತಮ್ಮೆರಡನೆ ಯಕ್ಕರದೊಳಂ ಆದಿಯಕ್ಕರದೊಳಂ ಲೋಪಂ.

ಪ್ರಯೋಗಂ.—ಆಕಾರಕ್ಕೆ—ಚಿತ್ರಾಕಾರಂ=ಚಿತ್ತಾರಂ; ರೂಪಾಕಾರಂ=ರೂಪಾರಂ.

ಆಗಾರಕ್ಕೆ—ಕೋಷ್ಠಾಗಾರಂ=ಕೊಟ್ಟಾರಂ; ಭಾಂಡಾಗಾರಂ=ಭಂಡಾರಂ; ಕ್ಷೀರಾಗಾರಂ=ಕೀರಾರಂ, ಕೀಲಾರಂ ಎಂದುಮುಂಟು; ದೇವಾಗಾರಂ=ದೇವಾರಂ; ಧವಳಾಗಾರಂ=ಧವಳಾರಂ; ಗೂಢಾಗಾರಂ=ಗೂಡಾರಂ.

ಆವಳಿಕೆಗೆ—ದೀಪಾವಳಿಕಾ=ದೀಪಾಳಿಗೆ; ಆದಿಯಕ್ಕರಂ ಲೋಪಮಾಗಿ ದೀವಳಿಗೆ ಎಂದಾಯ್ತು. ಸಿಂಹಾಗಾರಂ ಕಾರಾಗಾರಮೆಂಬ ಶಬ್ದಂಗಳ್ಗೆ ಬಹುಳದಿನೀ ಲಕ್ಷಣಮಿಲ್ಲ.

ಸೂತ್ರಂ. || ೨೯೭ ||

ದರ ದಾರ ಬಾರಮಕ್ಕುಂ |
ಪರದಾ ದ್ವಾರಕ್ಕೆ ಪೂರ್ವದೊಳ್ ತದ್ಭವಮಾ- ||
ಗಿರೆ ಸಿರಿಯ ವಂಕ ಪಾಣಿಯ- |
ಮಿರೆ ಕಂಟಿಯಮುಚಿತವಿಧಿ ವಿಕಲ್ಪವಿಧಾನಂ || ೩೧೧ ||

ದ್ವಾರಂ, when being the second word of a compound with the Tadbhavas ಸಿರಿಯ, ವಂಕ, ಪಾಣಿಯ, and ಕಂಟಿಯ, appears as ದರಂ, ದಾರಂ, or ಬಾರಂ.

ಪದಚ್ಛೇದಂ.—ದರ-ದಾರ-ಬಾರಂ ಅಕ್ಕುಂ ಪರದ ಆ ದ್ವಾರಕ್ಕೆ, ಪೂರ್ವದೊಳ್ ತದ್ಭವಂ ಆಗಿ ಇರೆ ಸಿರಿಯ-ವಂಕ-ಪಾಣಿಯುಂ, ಇರೆ ಕಂಟಿಯುಂ; ಉಚಿತವಿಧಿ ವಿಕಲ್ಪವಿಧಾನಂ.

ಅನ್ವಯಂ.—ಪೂರ್ವದೊಳ್ ತದ್ಭವಂ ಆಗಿ ಇರೆ ಸಿರಿಯವಂಕಪಾಣಿಯುಂ, ಕಂಟಿಯುಂ ಇರೆ-ವಿಕಲ್ಪವಿಧಾನಂ ಉಚಿತವಿಧಿ-ಪರದ ಆ ದ್ವಾರಕ್ಕೆ ದರದಾರಬಾರಂ ಅಕ್ಕುಂ.

ಟೀಕು. — ಪೂರ್ವದೊಳ್ = ಆದಿಯಲ್ಲಿ; ತದ್ಭವಂ = ತದ್ಭವಂ; ಆಗಿರೆ = ಆಗಿರೆ; ಸಿರಿಯುವಂಕಪಾಣಿಯುಂ = ಸಿರಿಯು ಎಂಬ ವಂಕ ಎಂಬ ಪಾಣಿ ಎಂಬ ಶಬ್ದಂಗಳ್; ಕಂಟಿಯುಂ = ಕಂಟಿಯು ಎಂಬ ಶಬ್ದಂ; ಇರೆ = ಇರಲಾಗಿ; ವಿಕಲ್ಪವಿಧಾನಂ = ವಿಕಲ್ಪದ ವಿಧಾನಂ; ಉಚಿತವಿಧಿ = ಉಚಿತದ ವಿಧಿಯಾಗಿ; ಪರದ = ಮುಂದಣ; ಆ ದ್ವಾರಕ್ಕೆ = ಆ ದ್ವಾರ ಎಂಬ ಶಬ್ದಕ್ಕೆ; ದರದಾರಬಾರಂ — ದರ ಎಂಬ ದಾರ ಎಂಬ ಬಾರ ಎಂಬಾದೇಶಂ; ಅಕ್ಕುಂ = ಆಗುವುದು.

ವೃತ್ತಿ. — ಶ್ರೀವಕ್ರಪಾನೀಯಕಂಟಕಮೆಂಬಿವರ್ಕಾದ ಸಿರಿಯ ವಂಕ ಪಾಣಿಯ ಕಂಟಿಯಂಗಳ್ ಮೊದಲೊಳಿರೆ, ಪರದ ದ್ವಾರಶಬ್ದಕ್ಕೆ ದರಮೆಂದುಂ ದಾರಮೆಂದುಂ ಬಾರಮೆಂದುಮಕ್ಕುಂ; ಇವಱೊಳ್ ವಿಕಲ್ಪಮನುಚಿತಮಾಗಱಿವುದು.

ಪ್ರಯೋಗಂ.— ಶ್ರೀದ್ವಾರಂ = ಸಿರಿಯದರಂ, ಸಿರಿಯದಾರಂ, ಸಿರಿಯಬಾರಂ.
ವಕ್ರದ್ವಾರಂ = ವಂಕದರಂ, ವಂಕದಾರಂ, ವಂಕಬಾರಂ.
ಪಾನೀಯದ್ವಾರಂ = ಪಾಣಿಯಬಾರಂ; ಕಂಟಕದ್ವಾರಂ = ಕಂಟಿಯಬಾರಂ. ಈ ಎರಡು ಸಮಾಸಪದಕ್ಕಮುಚಿತವಿಧಿಯಿಂ ವಿಕಲ್ಪಮಿಲ್ಲ.

7. Tatsama words.

ಇಲ್ಲಿಂದಂ ಮೇಲೆ ತತ್ಸಮಕ್ಕೆ ಸೂತ್ರಂ.

ಸೂತ್ರಂ. || ೨೯೮ ||

There are 21 Tatsamas. Their compounds with Saṁskṛita and Karṇāṭaka words.

ಮಣಿ ಮಂಚಂ ಪಟ್ಟಂ ತೋ- |
ರಣಮಟ್ಟಂ ಗೋಣಿ ಸಬಳಮಂಕಂ ಲತೆ ಕಂ- ||
ಕಣಮೆಸೆವ ಕೋಂಟೆ ಬಲಮಂ- |
ಗಣಂ ಬಿಲಂ ಬಂದಿ ಮಾಲೆ ಗಾಳಂ ಗಂಡಂ || ೩೧೨ ||

ಗಲ್ಲಂ ಮಲ್ಲಂ ತಳಮಿಂ- |
ತೆಲ್ಲಂ ತತ್ಸಮಮುಮಿವಱುದಾಹರಣೆಗಳಂ ||
ಸೊಲ್ಲಿಸುವೆನೆರಡು ಮೆಯ್ಗಂ |
ಬಲ್ಲರ್ಗಳ್ ಮೆಚ್ಚುತಿರೆ ಸಮಾಸೋಕ್ತಿಗಳಿಂ || ೩೧೩ ||

ಪದಚ್ಛೇದಂ.— ಮಣಿ, ಮಂಚಂ, ಪಟ್ಟಂ, ತೋರಣಂ, ಅಟ್ಟಂ, ಗೋಣಿ, ಸಬಳಂ, ಅಂಕಂ, ಲತೆ, ಕಂಕಣಂ, ಎಸೆವ ಕೋಂಟೆ, ಬಲಂ, ಅಂಗಣಂ, ಬಿಲಂ, ಬಂದಿ, ಮೂಲೆ, ಗಾಳಂ, ಗಂಡಂ, ಗಲ್ಲಂ, ಮಲ್ಲಂ, ತಳಂ ಇಂತು ಎಲ್ಲಂ ತತ್ಸಮಮುಂ; ಇವಱ ಉದಾಹರಣೆಗಳಂ ಸೊಲ್ಲಿಸುವೆಂ ಎರಡು ಮೆಯ್ಗಂ, ಬಲ್ಲರ್ಗಳ್ ಮೆಚ್ಚುತಿರೆ, ಸಮಾಸೋಕ್ತಿಗಳಿಂ.

ಟೀಕು, ಯಥಾನ್ವಯಂ.— ಮಣಿಯೆಂದು, ಮಂಚವೆಂದು, ಪಟ್ಟವೆಂದು, ತೋರಣವೆಂದು, ಅಟ್ಟವೆಂದು, ಗೋಣಿಯೆಂದು, ಸಬಳವೆಂದು, ಅಂಕವೆಂದು, ಲತೆಯೆಂದು, ಕಂಕಣವೆಂದು, ಎಸೆವ ಕೋಂಟೆಯೆಂದು, ಬಲವೆಂದು, ಅಂಗಣವೆಂದು, ಬಿಲವೆಂದು, ಬಂದಿಯೆಂದು, ಮೂಲೆಯೆಂದು, ಗಾಳವೆಂದು, ಗಂಡವೆಂದು, ಗಲ್ಲವೆಂದು, ಮಲ್ಲವೆಂದು, ತಳವೆಂದು; ಇಂತು = ಹೀಗೆ; ಎಲ್ಲಂ = ಈ ಶಬ್ದಂಗಳೆಲ್ಲಂ; ತತ್ಸಮಮುಂ = ತತ್ಸಮಂಗಳೆನಿಸುವುವು; ಇವಱ = ಈ ಶಬ್ದಂಗಳ; ಉದಾಹರಣೆಗಳಂ = ಉದಾಹರಣಂಗಳಂ; ಎರಡು ಮೆಯ್ಗಂ = ಸಂಸ್ಕೃತ ಕರ್ಣಾಟಕವೆಂಬೆರಡು ಸ್ವರೂಪಕ್ಕೆಯುಂ; ಬಲ್ಲರ್ಗಳ್ = ಬಲ್ಲ ವಿದ್ವಾಂಸರ್; ಮೆಚ್ಚುತಿರೆ = ಅಂಗೀಕರಿಸುತ್ತಿರೆ; ಸಮಾಸೋಕ್ತಿಗಳಿಂ = ಸಮಾಸವಾಕ್ಯಂಗಳಿಂದೆ; ಸೊಲ್ಲಿಸುವೆಂ = ಪೇೞ್ವೆಂ.

ವೃತ್ತಿ.— ಈ ಶಬ್ದಂಗಳ್ ಸಂಸ್ಕೃತಕ್ಕಂ ಕನ್ನಡಕ್ಕಂ ಸರಿ; ಇವಱುದಾಹರಣಂಗಳಂ ಸಮಾಸೋಕ್ತಿಯಿಂ ಸಂಸ್ಕೃತ ಕರ್ಣಾಟಕಂಗಳೊಳ್, ಬಲ್ಲರ್ ಮೆಚ್ಚೆ, ತೋಱಿದಪೆಂ.

ಪ್ರಯೋಗಂ.— ಮಣಿಗೆ— ಮಕುಟಮಣಿ; ದಿನಮಣಿ; ಕೆಲವಣಿ; ಉಡೆವಣಿ.

ಮಂಚಕ್ಕೆ— ಕಾಂಚನಮಂಚಂ; ರತ್ನಮಂಚಂ; ಸೆಳೆಮಂಚಂ; ತೂಗುಮಂಚಂ.

ಪಟ್ಟಕ್ಕೆ— ಪಟ್ಟವರ್ಧನಂ; ಪಟ್ಟಮಹಿಷಿ; ಪಟ್ಟಶರಂ; ಪಟ್ಟವಣೆ; ಪಟ್ಟಗೊಱೆ (o. r. ಪಟ್ಟಗಾಱೆ); ಪಟ್ಟಗರ್ದುಗೆ.

ತೋರಣಕ್ಕೆ— ಕಾಂಸ್ಯತೋರಣಂ; ಮಕರತೋರಣಂ; ಪಚ್ಚೆದೋರಣಂ; ತಳಿದೋರಣಂ.

ಅಟ್ಟಕ್ಕೆ— ಅಟ್ಟಹಾಸಂ; ಅಟ್ಟವಡಿ; ಅಟ್ಟಗವಲ್.

ಗೋಣಿಗೆ.— ಗೋಣಿಕಾಪುತ್ರಂ; ಕಿಱುಗೋಣಿ; ಪೆಗೋಣಿ.

ಸಬಳಕ್ಕೆ— ಸಬಳತ್ರಿಣೇತ್ರಂ; ಸಬಳಸಹಸ್ರಬಾಹು; ಸಬಳಗದ್ಯಾಣಂ; ಸಬಳದೆಱೆ; ಸಬಳವಿನ್ನಣಿ.

ಅಂಕಕ್ಕೆ— ಮೃಗಾಂಕಂ; ವೃಷಾಂಕಂ; ಮೂಱಿಂಕಂ; ಕಟ್ಟಂಕಂ; ಅಂಕವಱೆ; ಅಂಕವಾತು.

ಲತೆಗೆ—ನವಲತೆ; ಎಳಲತೆ; ಲತೆವಳ್ಳಿ; ಲತೆವನೆ.

ಕಂಕಣಕ್ಕೆ—ಮಣಿಕಂಕಣಂ; ಹಸ್ತಕಂಕಣಂ; ಹಿಂಡುಗಂಕಣಂ; ಗುಬ್ಬಿಗಂಕಣಂ.

ಕೋಂಟೆಗೆ—ಧೂಳಿಕೋಂಟೆ; ಹೆಡೆಗೆಗೋಂಟೆ (o. rs. ಹೆಡಗೆಗೋಂಟೆ, ಹೆಡೆ—, ಹೆಡ—); ತಱಿಗೋಂಟೆ; ಹತ್ತುಗೋಂಟೆ.

ಬಲಕ್ಕೆ—ಭೂಬಲಂ; ಭುಜಬಲಂ; ಆಳ್ವಲಂ (o. r. ಆಳ್ಬಲಂ); ತೋಳ್ವಲಂ (o. r. ತೋಳ್ಬಲಂ); ನೆಲವಲಂ; ಪೆರ್ವಲಂ; ಮಾರ್ವಲಂ.

ಅಂಗಣಕ್ಕೆ—ಅಂಗಣವಲಯಂ; ಅಂಗಣವಾವಿ; ಅಂಗಣವೆಟ್ಟು (o. r. ಅಂಗಣವೆಟ್ಟಿ); ಅಂಕಣಶಬ್ದಕ್ಕಂಗಣವಾದುದಾಗಿ ತತ್ಸಮವಾಗಲಾರ್ಪುದು.

ಬಿಲಕ್ಕೆ—ಬಿಲದ್ವಾರಂ; ಬಿಲಸರ್ಗಂ (o. r. ಬಿಲಸಗ್ಗ); ಪೆರ್ಬಿಲಂ.

ಬಂದಿಗೆ—ಬಂದಿಗ್ರಹಣಂ; ಬಲ್ವಂದಿಕಾಱಿಂ, ಬಲ್ವಂದಿಕಾಱಿನ ವೋಲ್ ಹಿಂಡೊಡೆದೊಂದೆ (ಹಿಂಡೊಡೆದಂತೆ) ಪೋಯ್ತು.

"....... ಬಂದಿವಿಡಿದಂ ಬಿಂಬಾಧರಸ್ಥಾನಮಂ." || 685 ||

ಮಾಲೆಗೆ—ವನಮಾಲೆ; ಕಂಠಮಾಲೆ; ಪೂಮಾಲೆ; ಪಚ್ಚೆವಾಲೆ.

ಗಾಳಕ್ಕೆ—ಗಳಗಾಳಂ; ಸಣ್ಣಗಾಳಂ; ಎಡೆಗಾಳಂ.

ಗಂಡಕ್ಕೆ—ಗಂಡಗರ್ವಂ; ಗಂಡಗುಣಂ; ಗಂಡವರಿಜು; ಗಂಡಗಲಿ; ಗಂಡವಸದನಂ (o. r. ಗಂಡವಸನಂ); ಗಂಡಪೆಂಡಿರ್.

ಗಲ್ಲಕ್ಕೆ—ಗಲ್ಲಸ್ಥಳಂ; ಗಲ್ಲಗಿವಿ; ಗಲ್ಲಮುಗುರಿ; ಗಲ್ಲಗುಗ್ಗುರಿ; ತೆಳ್ಗಲ್ಲಂ.

ಮಲ್ಲ—ಮಲ್ಲಮುರಾಂತಕಂ; ಮಲ್ಲವಾತು; ಮಲ್ಲಗಾಳೆಗಂ (o. r. ಮಲ್ಲಗಾಳಗ).

ತಳಕ್ಕೆ—ಕರತಳಂ; ಧರಣೀತಳಂ; ಕೆಂದಳಂ; ತಟ್ಟತಳಂ; ತಳಹಗ್ಗಂ ಎಂಬಂತೆ.

ಸೂತ್ರಂ. || ೨೯೯ ||

Further, in forming compounds not only Tadbhava words, but also Tadbhava compounds and Tatsama compounds may be joined to pure Canarese words.

ಸಕ್ಕದಮಂ ಮಱಿಗೊಳ್ಳದೆ |
ಚೊಕ್ಕಳಿಕೆಯಿನಚ್ಚಗನ್ನಡಂ ಬೇಱ್ಪಿರ ಕ- ||
ಯ್ಯೊಕ್ಕ ಸಿಧಿಯೆನಿಪಪಭ್ರಂ- |
ಶಕ್ಕಂ ದೇಶೀಯಪದಕಮುಂಟು ಸಮಾಸಂ. || ೬೮೬ ||

ಪದಚ್ಛೇದಂ.— ಸಕ್ಕದಮಂ ಮಱೆಗೊಳ್ಳದೆ ಚೊಕ್ಕಳಿಕೆಯಿಂ ಅಚ್ಚಗನ್ನಡಂ ಬೇೞ್ಪರ ಕಯ್ವೊಕ್ಕ ನಿಧಿ ಎನಿಪ ಅಪಭ್ರಂಶಕ್ಕಂ ದೇಶೀಯಪದಕಂ ಉಂಟು ಸಮಾಸಂ.

ಟೀಕು, ಯಥಾನ್ವಯಂ.— ಸಕ್ಕದಮಂ = ಸಂಸ್ಕೃತಮಂ; ಮಱೆಗೊಳ್ಳದೆ = ಮಱೆಪೊಗದೆ; ಚೊಕ್ಕಳಿಕೆಯಿಂ = ಚೊಕ್ಕಟದಿಂದೆ; ಅಚ್ಚಗನ್ನಡಂ = ಅಚ್ಚ ಕನ್ನಡಂ; ಬೇೞ್ಪರ = ಬಯಸುವರ; ಕಯ್ವೊಕ್ಕ ನಿಧಿ = ಕೈ ಸಾರ್ದ ನಿಧಾನಂ; ಎನಿಪಪಭ್ರಂಶಕ್ಕಂ = ಎನಿಸುವ ಅಪಭ್ರಂಶ ಶಬ್ದಕ್ಕೆಯುಂ; ದೇಶೀಯಪದಕಂ = ದೇಶೀಯಪದಕ್ಕೆಯುಂ; ಸಮಾಸಂ = ಸಮಾಸಂ; ಉಂಟು = ಉಂಟಾಗಿರ್ಪುದು.

ವೃತ್ತಿ.—ಸಂಸ್ಕೃತಮಂ ಮಱೆಗೊಳ್ಳದೆ ನೆಱೆವಣಿಯಿಂದಚ್ಚಗನ್ನಡಮಂ ಪೇೞ್ವಿರ್ಗೀಯಪಭ್ರಂಶಪದಮುಂ ಇದಱ ಸಮಾಸಮುಂ ತತ್ಸಮದ ಸಮಾಸಮುಂ ಕಯ್ವೊಕ್ಕನಿಧಾನಮಿದಱೊಡನೆ ಕನ್ನಡದ ದೇಶೀಯಪದಮುಂ ಸಮಾಸಿಸಲಪ್ಪುದು.

ಪ್ರಯೋಗಂ.— ಅಪಭ್ರಂಶಕ್ಕಂ ದೇಶೀಯಪದಕ್ಕಂ ಸಮಾಸಂ—ಸೆಜ್ಜೆವನ್ರೆ; ಸಿಂಗವೇಂಟೆ; ರಾಯಗೋಟೆ.

ಅಪಭ್ರಂಶಸಮಾಸಕ್ಕಂ ದೇಶೀಯಪದಕ್ಕಂ ಸಮಾಸಂ — ತಾಣದೀವಿಗೆವೆಳಗು; ಜವಳಿವದ್ದಳಿದೊಂಗಲ್; ಜೊನ್ನವಕ್ಕಿಗಣ್ಗಳ್.

ತತ್ಸಮಸಮಾಸಕ್ಕಂ ದೇಶೀಯಪದಕ್ಕಂ ಸಮಾಸಂ — ಸಬಳಗದ್ಯಾಣದೆಱೆ; ಕಟ್ಟಂಕದಲ್ಲಣಂ; ಪೂಮಾಲೆದುಱುಂಬು.

ಗದ್ಯಂ. — ಇದು ಸಮಸ್ತಶಾಬ್ದಿಕಜನಮನೋಜನಿತಶಬ್ದಸಂದೇಹಕಲ್ಯಜಾರುಚುಂಬಕಾಯಮಾನಾನೂನಕರ್ಣಾಟಕಲಕ್ಷಣಶಿಕ್ಷಾಚಾರ್ಯಸುಕವಿಕೇಶಿರಾಜವಿರಚಿತಮಪ್ಪ ಶಬ್ದಮಣಿದರ್ಪಣದೊಳ್ ಅಪಭ್ರಂಶಪ್ರಪಂಚಲಕ್ಷಣಮೆಂಬ ಸಪ್ತಮಮಪ್ಪ ಸಂಧಿ ಸಮಾಪ್ತಂ.

೭ನೆಯ ಅಧ್ಯಾಯಂ ಸಮಾಪ್ತಂ.

೮ನೆಯ ಅಧ್ಯಾಯಂ. VIII. CHAPTER.

ಅವ್ಯಯಪ್ರಕರಣಂ.

ON PARTICLES.

ಸೂತ್ರಂ. || ೩೦೦ ||

Particles (Adverbs ಅವ್ಯಯಂ) include all Imitative sounds and many words formed by the suffixes ಅದು, ಅನೆ, ಅಗೆ.

ಅನುಕೃತಿಪದಮೊದವೆಯುಮದು- |
ವನೆಯೆಂಬೆರಡುಂ ಪದಾಂತ್ಯದೊಳ್ ಬರೆಯುಂ ನೆ- ||
ಟ್ಟನೆ ತಾವವ್ಯಯಮಪ್ಪುವು |
ವನೆಯ ನಕಾರಂ ವಿಕಲ್ಪದಿಂದೆ ಗಕಾರಂ || ೩೧೫ ||

ಪದಚ್ಛೇದಂ.— ಅನುಕೃತಿಪದಂ ಒದವೆಯುಂ ಅದು ಅನೆ ಎಂಬ ಎರಡುಂ ಪದಾಂತ್ಯದೊಳ್ ಬರೆಯುಂ ನೆಟ್ಟನೆ ತಾಂ ಅವ್ಯಯಂ ಅಪ್ಪುವು; ಅನೆಯ ನಕಾರಂ ವಿಕಲ್ಪದಿಂದೆ ಗಕಾರಂ.

ಟೀಕು.— ಅನುಕೃತಿಪದಂ = ಅನುಕರಣಪದಂಗಳ್; ಒದವೆಯುಂ = ಬಂದೊಡೆಯುಂ; ಅದು = ಅದೆಂದು; ಅನೆ = ಅನೆ ಎಂದು; ಎಂಬೆರಡುಂ = ಎಂಬೆರಡು ರೂಪುಂ; ಪದಾಂತ್ಯದೊಳ್ = ಪದದ ಕಡೆಯಲ್ಲಿ; ಬರೆಯುಂ = ಬಂದೊಡಂ; ನೆಟ್ಟನೆ = ವ್ಯಕ್ತವಾಗಿ; ತಾಂ = ಆ ಶಬ್ದಂಗಳ್ ತಾಂ; ಅವ್ಯಯಂ = ಅವ್ಯಯಂಗಳ್; ಅಪ್ಪುವು = ಆಗುವುವು; ಅನೆಯ = ಅನೆ ಎಂಬ ರೂಪಿನ; ನಕಾರಂ = ನತ್ವಂ; ವಿಕಲ್ಪದಿಂದೆ = ವಿಕಲ್ಪದಿಂದೆ; ಗಕಾರಂ = ಗತ್ವವಾಗುವುದು.

ವೃತ್ತಿ.— ಧಿಗಿಲನೆ, ಭುಗಿಲನೆ, ಭೋರನೆ ಎಂಬನುಕರಣಪದಂಗಳ್ ಬರೆಯುಂ, ಅದು ಅನೆ ಎಂಬಿವು ಪದಾಂತ್ಯಂಗಳೊಳಿರೆಯುಂ, ಅವ್ಯಯಪದಂಗಳಪ್ಪುವು.

ಪ್ರಯೋಗಂ.— ಅದುಗೆ—ನೂಂಕದು (o. r. ನೂಕದು); ನೂಳದು; ತೆತ್ತದು (o. r. ತೆಕ್ಕದು), ತೆತ್ತದೆಂದು ತೀರದೆಂಬರ್ಥಂ.

ಅನೆಗೆ— ಕಮ್ಮನೆ; ಇಮ್ಮನೆ; ಸಿಯ್ಯನೆ; ಮೆಲ್ಲನೆ.

ನಕಾರಕ್ಕೆ ವಿಕಲ್ಪದಿಂ ಗಕಾರಂ— ನೆಟ್ಟನೆ=ನೆಟ್ಟಗೆ; ಸುಮ್ಮನೆ=ಸುಮ್ಮಗೆ; ಕಮ್ಮನೆ=ಕಮ್ಮಗೆ; ಬಿನ್ನನೆ=ಬಿನ್ನಗೆ.

ಕ್ರಿಯಾತ್ಮಕಾವ್ಯಯ   ಸೂತ್ರಂ. || ೩೦೧ || ಇಲ್ಲ-ಕೀಱಿದು-ನಿರ್ನೆರಂ

ಇಲ್ಲ, not; ಕೀಱಿದು (ಕಿಱಿದು) crowdedly, densely; ನಿರಿರ್, ನಿರ್ನೆರಂ, causelessly.

ಸೊಲ್ಲೊಳ್ ಕ್ರಿಯಾತ್ಮಕಾವ್ಯಯ |
ಮಿಲ್ಲೆಂಬುದು ಕೀಱಿದೆಂಬುದಾಕೀರ್ಣಾರ್ಥಂ ||
ಬಲ್ಲರ್ಗೆ ನಿರ್ನಿಮಿತ್ತಾ- |
ರ್ಥೋಲ್ಲಸಿತಂ ನಿರ್ನಿರೆಂಬುದು ನಿರ್ನೆರಮುಂ. || ೩೧೬ ||

ಪದಚ್ಛೇದಂ. — ಸೊಲ್ಲೊಳ್ ಕ್ರಿಯಾತ್ಮಕಾವ್ಯಯಂ ಇಲ್ಲ ಎಂಬುದು; ಕೀಱಿದು ಎಂಬುದು ಆಕೀರ್ಣಾರ್ಥಂ; ಬಲ್ಲರ್ಗೆ ನಿರ್ನಿಮಿತ್ತಾರ್ಥೋಲ್ಲಸಿತಂ ನಿರ್ನಿರ್ ಎಂಬುದುಂ ನಿರ್ನೆರಮುಂ.

ಟೀಕು. — ಇಲ್ಲೆಂಬುದು = ಇಲ್ಲ ಎಂಬುದು; ಸೊಲ್ಲೊಳ್ = ವಾಕ್ಯದಲ್ಲಿ; ಕ್ರಿಯಾತ್ಮಕಾವ್ಯಯಂ = ಕ್ರಿಯಾಸ್ವರೂಪವಾದವ್ಯಯಂ; ಕೀಱಿದೆಂಬುದು = ಕೀಱಿದೆಂಬುದು; ಆಕೀರ್ಣಾರ್ಥಂ = ತುಱುಗಿದರ್ಥಂ; ಬಲ್ಲರ್ಗೆ = ಬಲ್ಲವರ್ಗೆ; ನಿರ್ನಿರೆಂಬುದುಂ = ನಿರ್ನಿರ್ ಎಂಬುದುಂ; ನಿರ್ನೆರಮುಂ = ನಿರ್ನೆರಂ ಎಂಬುದುಂ; ನಿರ್ನಿಮಿತ್ತಾರ್ಥ = ಕಾರಣವಲ್ಲದ ಅರ್ಥದಲ್ಲಿ; ಉಲ್ಲಸಿತಂ = ಉನ್ನತವಾಗಿ ಬಪ್ಪದು.

ಕ್ರಿಯಾಶೂನ್ಯಾರ್ಥ.   ಸೂತ್ರಂ. || ೩೦೨ ||

ಸುಮ್ಮಗೆ, ಸುಮ್ಮನೆ, ಉಸಿಕನೆ, silently; ಗುಱುಗುಮ್ಮಗೆ, ಬಿನ್ನಗೆ, ಬಿನ್ನನೆ, inactively.

ನೆಗೞ್ಗುಂ ಮೌನಾರ್ಥಂ ಸು- |
ಮ್ಮಗೆ ಸುಮ್ಮನೆಯುಸಿಕನೆಂದು ನುಡಿವವ್ಯಯದೊಳ್ ||
ಪುಗುಗುಂ ಗುಱುಗುಮ್ಮಗೆ ಬಿ- |
ನ್ನಗೆ ಬಿನ್ನನೆಯೆನಲೊಡಂ ಕ್ರಿಯಾಶೂನ್ಯಾರ್ಥಂ.
|| ೩೧೭ ||

ಪದಚ್ಛೇದಂ. — ನೆಗೞ್ಗುಂ ಮೌನಾರ್ಥಂ ಸುಮ್ಮಗೆ ಸುಮ್ಮನೆ ಉಸಿಕನೆ ಎಂದು ನುಡಿವ ಅವ್ಯಯದೊಳ್; ಪುಗುಗುಂ ಗುಱುಗುಮ್ಮಗೆ ಬಿನ್ನಗೆ ಬಿನ್ನನೆ ಎನಲೊಡಂ ಕ್ರಿಯಾಶೂನ್ಯಾರ್ಥಂ.

ಟೀಕು. — ಸುಮ್ಮಗೆ = ಸುಮ್ಮಗೆಯೆಂದು; ಸುಮ್ಮನೆ = ಸುಮ್ಮನೆಯೆಂದು; ಉಸಿಕನೆ = ಉಸಿಕನೆಯೆಂದು; ನುಡಿವವ್ಯಯದೊಳ್ = ಪೇಳ್ವ ಅವ್ಯಯದಲ್ಲಿ; ಮೌನಾರ್ಥಂ = ಮೌನದರ್ಥಂ; ನೆಗಟ್ಗುಂ = ಪ್ರಸಿದ್ಧಿವಡೆವುದು; ಗುಜುಗುಮ್ಮಗೆ = ಗುಜುಗುಮ್ಮಗೆಯೆಂದು; ಬಿಸ್ಸಗೆ = ಬಿಸ್ಸಗೆಯೆಂದು; ಬಿಸ್ಸನೆ = ಬಿಸ್ಸನೆಯೆಂದು; ಎನಲೊಡಂ = ಎನಲೊಡನೆ; ಕ್ರಿಯಾಶೂನ್ಯಾರ್ಥಂ = ಕ್ರಿಯೆಯಿಲ್ಲದರ್ಥಂ; ಪುಗುಗುಂ = ಪ್ರವೇಶವಪ್ಪುದು.

ಸೂತ್ರಂ. || ೩೦೩ || ಆನುಂ-ಅಣಂ-ಆಣಂ

ಆನುಂ, soever, refers to place, direction, time and number; ಅಣಂ, ಆಣಂ, whatsoever.

ಆನುಮೆನಿಪ್ಪವ್ಯಯಮಂ ।
ಸ್ಥಾನದಿಶಾಕಾಲಸಂಖ್ಯೆಗಳೊಳುಸಿರ್ವರ್ ಮ- ॥
ತ್ತೇನುಮೆನಿಪ್ಪರ್ಥಮನಿರ- ।
ದಾನಿಪರಣಮಾಣಮೆಂದು ನುಡಿವವ್ಯಯದೊಳ್.
|| ೩೧೮ ||

ಪದಚ್ಛೇದಂ. — ಆನುಂ ಎನಿಪ್ಪ ಅವ್ಯಯಮಂ ಸ್ಥಾನದಿಶಾಕಾಲಸಂಖ್ಯೆಗಳೊಳ್ ಉಸಿರ್ವರ್; ಮತ್ತೆ ಏನುಂ ಎನಿಪ್ಪ ಅರ್ಥಮಂ ಇರದೆ ಆನಿಪರ್ ಅಣಂ ಆಣಂ ಎಂದು ನುಡಿವ ಅವ್ಯಯದೊಳ್.

ಟೀಕು. — ಸ್ಥಾನದಿಶಾಕಾಲಸಂಖ್ಯೆಗಳೊಳ್ = ಸ್ಥಾನಂಗಳಲ್ಲಿ ದಿಕ್ಕುಗಳಲ್ಲಿ ಕಾಲಂಗಳಲ್ಲಿ ಸಂಖ್ಯೆಗಳಲ್ಲಿ; ಆನುಂ = ಆನುಂ ಎಂದು; ಎನಿಪ್ಪವ್ಯಯಮಂ = ಎನಿಸುವವ್ಯಯಮಂ; ಉಸಿರ್ವರ್ = ಪೇಳ್ವರ್; ಮತ್ತೆ = ಬಳಿಕಂ; ಅಣಂ = ಅಣಂ ಎಂದು; ಆಣಂ = ಆಣಂ ಎಂದು; ನುಡಿವವ್ಯಯದೊಳ್ = ಪೇಳ್ವವ್ಯಯದಲ್ಲಿ; ಏನುಂ = ಏನುಂ ಎಂದು; ಎನಿಪ್ಪರ್ಥಮಂ = ಎನಿಸುವರ್ಥಮಂ; ಇರದೆ = ನಿಲ್ಲದೆ; ಆನಿಪರ್ = ಸಂಬಂಧಿಸುವರ್.

ವೃತ್ತಿ. — ಸ್ಥಾನ ದೆಸೆ ಕಾಲ ಸಂಖ್ಯೆಗಳಲ್ಲಿ ಆನುಂ ಎಂಬವ್ಯಯಮಂ ಪೇಳಿಲಕ್ಕುಂ; ಏನುಮೆಂಬರ್ಥದೊಳ್ ಅಣಂ ಆಣಂ ಎಂಬವ್ಯಯಮಂ ಪೇಳಿಲಕ್ಕುಂ.

ಪ್ರಯೋಗಂ. — ಸ್ಥಾನಕ್ಕೆ — ಎಲ್ಲಿಯಾನುಂ.
ದೆಸೆಗೆ — ಎತ್ತಾನುಂ.
ಕಾಲಕ್ಕೆ — ಎಂದಾನುಂ.
ಸಂಖ್ಯೆಗೆ — ಒಂದಾನುಂ; ಎರಡಾನುಂ; ಪತ್ತಾನುಂ; ನೂರ್ಛಾನುಂ.
ಅಣಕ್ಕೆ — ಕಾರ್ಯಮಣಮಿಲ್ಲ.
ಆಣಕ್ಕೆ — ಗುಣಮಾಣಮಿಲ್ಲ ಎನಲೊಡಮೇನುಮಿಲ್ಲೆಂಬರ್ಥಂ.

good for nothing

ಸೂತ್ರಂ[1]. || ೩೦೪ ||

ನಾಡೆ, ಎಡೆ, ಆವಗಂ, ನೆಱೆ, ಸೀಡುಂ, ಕರಂ, ಆದಂ, ಎಯ್ದೆ, ನೂಳ ದು, ಪಿರಿದುಂ, ಸೀಡು, ಮಿಗೆ, ಕೆನ್ನಂ signify "much", "exceedingly", "more".

ನಾಡೆಯೆಡೆಯಾವಗಂ ನೆಱೆ |
ಸೀಡುಂ ಕರಮಾದಮೆಯ್ದೆ ನೂಳದು ಪಿರಿದುಂ ||
ಸೀಡು ಮಿಗೆ ಕೆನ್ನಮೆಲ್ಲಂ |
ರೂಢಿಯನುಳ್ಳುದುಮಿವವ್ಯಯದೊಳಧಿಕಾರ್ಥಂ.
|| ೩೧೯ ||

ಪದಚ್ಛೇದಂ.—ನಾಡೆ, ಎಡೆ, ಆವಗಂ, ನೆಱೆ, ಸೀಡುಂ, ಕರಂ, ಆದಂ, ಎಯ್ದೆ, ನೂಳದು, ಪಿರಿದುಂ, ಸೀಡು, ಮಿಗೆ, ಕೆನ್ನಂ, ಎಲ್ಲಂ, ರೂಢಿಯಂ ಉಳ್ಳುದು; ಇವು ಅವ್ಯಯದೊಳ್ ಅಧಿಕಾರ್ಥಂ.

ಟೀಕು.—ನಾಡೆ = ನಾಡೆ ಎಂದು; ಎಡೆ = ಎಡೆ ಎಂದು; ಆವಗಂ = ಆವಗಂ ಎಂದು; ನೆಱೆ = ನೆಱೆ ಎಂದು; ಸೀಡುಂ = ಸೀಡುಂ ಎಂದು; ಕರಂ = ಕರಂ ಎಂದು; ಆದಂ = ಆದಂ ಎಂದು; ಎಯ್ದೆ = ಎಯ್ದೆ ಎಂದು; ನೂಳದು = ನೂಳದು ಎಂದು; ಪಿರಿದುಂ = ಪಿರಿದುಂ ಎಂದು; ಸೀಡು = ಸೀಡು ಎಂದು; ಮಿಗೆ = ಮಿಗೆ ಎಂದು; ಕೆನ್ನಂ = ಕೆನ್ನಂ ಎಂದು; ಎಲ್ಲಂ = ಈ ಶಬ್ದಂಗಳೆಲ್ಲಂ; ರೂಢಿಯನುಳ್ಳುದು = ಪ್ರಸಿದ್ಧಿಯನುಳ್ಳದು; ಇವು = ಈ ಶಬ್ದಂಗಳ್; ಅವ್ಯಯದೊಳ್ = ಅವ್ಯಯದಲ್ಲಿ; ಅಧಿಕಾರ್ಥಂ = ಅಧಿಕವಾದರ್ಥಂ.

ಸೂತ್ರಂ[2]. || ೩೦೫ ||

ಭೋಂಕನೆ, ಚೆಕ್ಕನೆ, ಭೋರನೆ, ಭೋಂಕಲ್, ಚಡುಪುಡನೆ, ಗಿಡ್ಡಿತಿಡ್ಡಿನೆ, ಕಡು, ಚೆಚ್ಚರಂ, ಬೆಚ್ಚರಂ signify "swiftly".

ಭೋಂಕನೆ ಚೆಕ್ಕನೆ ಭೋರನೆ |
ಭೋಂಕಲ್ ಚಡುಪುಡನೆ ಗಿಡ್ಡಿತಿಡ್ಡಿನೆಯುಂ ಮ- ||
ತ್ತಂ ಕಡು ಚೆಚ್ಚರ ಬೆಚ್ಚರ- |
ಮುಂ ಕೂಡಿರೆ ತಮ್ಮೊಳೊದವುಗುಂ ಶೀಘ್ರಾರ್ಥಂ.
|| ೩೨೦ ||

[1] ಆದಮತ್ಯರ್ಥೇ || ಭಾ. ಭೂ. 242. ||
(ಆದಂ ಎಂಬುದು ಅತ್ಯರ್ಥದಲ್ಲಿ ವರ್ತಿಸುವ ಅವ್ಯಯವು.)
ಕೆನ್ನಂ ತತ್ವಾಖ್ಯಾನೇ || ಭಾ. ಭೂ. 247. ||
(ಕೆನ್ನಂ ಎಂಬುದು ಯಥಾರ್ಥಕಥನದಲ್ಲಿ ವರ್ತಿಸುವ ಅವ್ಯಯವು.)

[2] ಭೋಂಕಲ್ ತೊಟ್ಟನೆ ಸಹಸಾ || ಭಾ ಭೂ. 248. ||
(ಭೋಂಕಲ್ ಮತ್ತು ತೊಟ್ಟನೆ ಎಂಬಿವೆರಡು ಸಹಸಾರ್ಥದಲ್ಲಿ ವರ್ತಿಸುವುವು.)

ಪದಚ್ಛೇದಂ.— ಭೋಂಕನೆ, ಚೆಕ್ಕನೆ, ಭೋರನೆ, ಭೋಂಕಲ್, ಚಡುಪುಡನೆ, ಗಿಡ್ಡಿತಿಡ್ಡನೆಯುಂ, ಮತ್ತಂ ಕಡು, ಚೆಚ್ಚರ, ಬೆಚ್ಚರಮುಂ ಕೂಡಿರೆ, ತಮ್ಮೊಳ್ ಒದವುಗುಂ ಶೀಘ್ರಾರ್ಥಂ.

ಟೀಕು.— ಭೋಂಕನೆ ಎಂದು; ಚಕ್ಕನೆ ಎಂದು; ಭೋರನೆ ಎಂದು; ಭೋಂಕಲ್ ಎಂದು; ಚಡುಪುಡನೆ ಎಂದು; ಗಿಡ್ಡಗಿಡ್ಡನೆ ಎಂದು; ಮತ್ತಂ = ಆ ಮೇಲೆ; ಕಡು ಚೆಚ್ಚರ ಬೆಚ್ಚರಮುಂ = ಕಡು ಚೆಚ್ಚರಂ ಬೆಚ್ಚರಂ ಎಂದು; ಕೂಡಿರೆ = ಪೊರ್ದುಗೆಯಾಗಿರೆ; ತಮ್ಮೊಳ್ = ತಮ್ಮಲ್ಲಿ; ಶೀಘ್ರಾರ್ಥಂ = ಬೇಗವೆಂಬರ್ಥಂ; ಒದವುಗುಂ = ಪ್ರಾಪ್ತಿಸುವದು.

ಸೂತ್ರಂ[1]. || ೫೦೬ ||

ಏಗಂ ವಲಂ ವೆಟಿಂ ದಲ್ |
ತಾಗುಗುಮತಿನಿಶ್ಚಯಾರ್ಥಮಂ ತಾನಿತರಾ- ||
ರ್ಥಾಗತಮದು ಮತ್ತಿನನುಡಿ- |
ಯೇಗೆಯ್ದುಂ ಬೇಱೆಬೇಱೆಯೆನೆ ಪೃಥಗರ್ಥಂ.
|| ೫೨೧ ||

ಏಗಂ, ವಲಂ, ವೆಟಿಂ, ದಲ್ signify "most certainly"; ಮತ್ತಿನ means "other"; ಬೇಱೆ ಬೇಱೆ "separately".

ಪದಚ್ಛೇದಂ.— ಏಗಂ ವಲಂ ವೆಟಿಂ ದಲ್ ತಾಗುಗುಂ ಅತಿನಿಶ್ಚಯಾರ್ಥಮಂ; ತಾಂ ಇತರಾರ್ಥಾಗತಂ ಅದು ಮತ್ತಿನನುಡಿ; ಏಗೆಯ್ದುಂ ಬೇಱೆಬೇಱೆ ಎನೆ ಪೃಥಗರ್ಥಂ.

ಟೀಕು.— ಏಗಂ = ಏಗಂ ಎಂದು; ವಲಂ = ವಲಂ ಎಂದು; ವೆಟಿಂ = ವೆಟಿಂ ಎಂದು; ದಲ್ = ದಲ್ ಎಂದು; ಅತಿನಿಶ್ಚಯಾರ್ಥಮಂ = ಅತ್ಯಂತನಿಶ್ಚಯಾರ್ಥವಂ; ತಾಗುಗುಂ = ಐಯ್ದುವುವು; ಮತ್ತಿನನುಡಿ = ಮತ್ತಿನ ಎಂಬ ನುಡಿ; ಅದು ತಾಂ = ಅದು ತಾಂ; ಇತರಾರ್ಥಾಗತಂ = ಅನ್ಯಾರ್ಥದಲ್ಲಿ ಬರ್ಪುದು; ಏಗೆಯ್ದುಂ = ಏನಂ ಮಾಡೆಯುಂ; ಬೇಱೆಬೇಱೆಯೆನೆ = ಬೇಱೆಬೇಱೆ ಎಂದೊಡಂ; ಪೃಥಗರ್ಥಂ = ಇಂಗಡಿಂಗಡವೆಂಬರ್ಥಂ.

---

1) ಏಗಂ ವಿನಿಶ್ಚಯೇ || ಭಾ. ಭೂ. 243. ||
ವೆಟಿಂ ವಲಂ ವಿಸ್ಪಷ್ಟಾರ್ಥೇ || ಭಾ. ಭೂ. 251. ||
ದಲ್ ವಾಕ್ಯಾಲಂಕಾರಪಾದಪೂರಣವಿನಿಶ್ಚಯೇಷು || ಭಾ. ಭೂ. 257. ||
(ವಿನಿಶ್ಚಯಾರ್ಥದಲ್ಲಿ ಏಗಂ ಎಂಬುದೂ, ವಿಸ್ಪಷ್ಟಾರ್ಥದಲ್ಲಿ ವೆಟಿಂ ಮತ್ತು ವಲಂ ಎಂಬಿವೂ, ವಾಕ್ಯಾಲಂಕಾರ ಪಾದಪೂರಣ ವಿನಿಶ್ಚಯಾರ್ಥಗಳಲ್ಲಿ ದಲ್ ಎಂಬುದೂ ವರ್ತಿಸುವುವು.)

ಸೂತ್ರಂ[1]. || ೩೦೭ ||

ತಿಱ್ಱನೆ, ತಿಟ್ಟನೆ, ಬಟ್ಟನೆ mean "whirlingly"; ಒಯ್ಯನೆ, ನೆಟ್ಟನೆ, ನೆಟ್ಟಗೆ "exactly", "nicely".

ಅನುತಿಱ್ಱನೆ ತಿಟ್ಟನೆ ಬ- |
ಟ್ಟನೆಯೆಂಬಿವಱೊಳ್ ಭ್ರಮಾರ್ಥಮೊಯ್ಯನೆಯೆನೆ ನೆ- ||
ಟ್ಟನೆಯೆನೆ ನೆಟ್ಟಗೆಯೆನೆ ಬಂ- |
ದು ನಿಲ್ಕುಮಿವಱೊಳ್ ಪರಿಸ್ಫುಟಾರ್ಥವಿಧಾನಂ.
|| ೩೨೨ ||

ಪದಚ್ಛೇದಂ.— ಅನು ತಿಱ್ಱನೆ ತಿಟ್ಟನೆ ಬಟ್ಟನೆ ಎಂಬ ಇವಱೊಳ್ ಭ್ರಮಾರ್ಥಂ; ಒಯ್ಯನೆ ಎನೆ, ನೆಟ್ಟನೆ ಎನೆ, ನೆಟ್ಟಗೆ ಎನೆ, ಬಂದು ನಿಲ್ಕುಂ ಇವಱೊಳ್ ಪರಿಸ್ಫುಟಾರ್ಥವಿಧಾನಂ.

ಟೀಕು.— ಅನು ತಿಱ್ಱನೆ= ಅನು ತಿಱ್ಱನೆಯೆಂದು; ತಿಟ್ಟನೆ= ತಿಟ್ಟನೆಯೆಂದು; ಬಟ್ಟನೆ= ಬಟ್ಟನೆಯೆಂದು; ಎಂಬಿವಱೊಳ್= ಎಂಬೀ ಶಬ್ದಂಗಳಲ್ಲಿ; ಭ್ರಮಾರ್ಥಂ= ಭ್ರಮಣಾರ್ಥಂ; ಒಯ್ಯನೆಯೆನೆ= ಒಯ್ಯನೆಯೆಂದೊಡೆ; ನೆಟ್ಟನೆಯೆನೆ= ನೆಟ್ಟನೆಯೆಂದೊಡೆ; ನೆಟ್ಟಗೆಯೆನೆ= ನೆಟ್ಟಗೆಯೆಂದೊಡೆ; ಇವಱೊಳ್= ಈ ಶಬ್ದಂಗಳಲ್ಲಿ; ಪರಿಸ್ಫುಟಾರ್ಥವಿಧಾನಂ= ವ್ಯಕ್ತವಾದರ್ಥವಿಧಾನಂ; ಬಂದು ನಿಲ್ಕುಂ= ಬಂದು ನಿಲ್ವುದು.

ಸೂತ್ರಂ[2]. || ೩೦೮ ||

ಅಹಹಂ is used in pain; ಅಕ್ಕಟಾ in grief and surprise; ಅಯ್ಯೋ in grief and compassion.

ವೇದನೆಯೊಳಹಹಮೆಂಬುದು |
ಖೇದದೊಳಚ್ಚರಿಯೊಳಕ್ಕಟಾ ಎಂಬುದು ತತ್- ||
ಖೇದವಿಡಂಬನಕರುಣಾ- |
ನಾದದೊಳಯ್ಯೋ ಎನಿಪ್ಪುದವತರಿಸಿರ್ಕುಂ. || ೩೨೩ ||

---

1) ನೆಟ್ಟನೆ ಪರಿಸ್ಫುಟಾರ್ಥೇ || ಭಾ. ಭೂ. 256. ||
(ನೆಟ್ಟನೆ ಎಂಬ ಅವ್ಯಯವು ಪರಿಸ್ಫುಟಾರ್ಥದಲ್ಲಿ ವರ್ತಿಸುವುದು.)

2) ಅಕ್ಕಟ ವಿಷಾದೇ || ಭಾ. ಭೂ. 254. ||
ಅ ಅಃ ದುಃಖಸೂಚನೇ || ಭಾ. ಭೂ. 264. ||
ಅಯ್ಯೋ ವಿಷಾದಾನುಕಂಪಾಪಹಾಸೇಷು || ಭಾ. ಭೂ. 266. ||
(ಅಕ್ಕಟ ಎಂಬುದು ವಿಷಾದಾರ್ಥದಲ್ಲಿ ವರ್ತಿಸುವ ಅವ್ಯಯವು; ಅ ಅಃ ಎಂಬ ನಿಪಾತವು ದುಃಖಸೂಚನದಲ್ಲಿಯೂ, ಅಯ್ಯೋ ಎಂಬ ನಿಪಾತವು ವಿಷಾದ ಅನುಕಂಪ ಅಪಹಾಸಗಳಲ್ಲಿಯೂ ಬರುವುವು.)

ಪದಚ್ಛೇದಂ. — ವೇದನೆಯೊಳ್ ಅಹಹಂ ಎಂಬುದು, ಖೇದದೊಳ್ ಅಚ್ಚರಿಯೊಳ್ ಅಕ್ಕಟಾ ಎಂಬುದು, ತತ್ಖೇದವಿಡಂಬನಕರುಣಾನಾದದೊಳ್ ಅಯ್ಯೋ ಎನಿಪ್ಪುದು ಅವತರಿಸಿಕ್ಕುರ್ಗುಂ.

ಟೀಕು. — ವೇದನೆಯೊಳ್ = ನೋವಿನಲ್ಲಿ; ಅಹಹಂ ಎಂಬುದು = ಅಹಹಂ ಎಂಬ ಶಬ್ದಂ; ಖೇದದೊಳ್ = ದುಃಖದಲ್ಲಿ; ಅಚ್ಚರಿಯೊಳ್ = ಆಶ್ಚರ್ಯದಲ್ಲಿ; ಅಕ್ಕಟಾ ಎಂಬುದು = ಅಕ್ಕಟಾ ಎಂಬ ಶಬ್ದಂ; ತತ್ಖೇದವಿಡಂಬನಕರುಣಾನಾದದೊಳ್ = ಆ ದುಃಖದ ವಿಡಂಬನದ ಕರುಣದ ಧ್ವನಿಯಲ್ಲಿ; ಅಯ್ಯೋ ಎನಿಪ್ಪುದು = ಅಯ್ಯೋ ಎಂಬ ಶಬ್ದಂ; ಅವತರಿಸಿಕ್ಕುರ್ಗುಂ = ಹುಟ್ಟುರ್ಗುದು.

ನಿವಾರಣಾರ್ಥ-ಸಹಾರ್ಥ

ಸೂತ್ರಂ[1]. || ೩೦೯ || ಹಸನ - ಪಿರಿದುಸೋಡಂಬಾಡಂ

ಓಹೋ, ಹೋ are used in stopping; ಒಡನೆ means "with" ಗಹಗಹಂ is used in laughing; ಸೋಡಂ ಬಾಡಂ mean "much", "more".

ಸವನಿಪುದೋಹೋ ಹೋ ಎನೆ |
ನಿವಾರಣಾರ್ಥಂ ಸಹಾರ್ಥಮೊಡನೆನೆ ಹಸನ ||
ವ್ಯವಹೃತಿ ಗಹಗಹಮೆನೆ ಪಿರಿ- |
ದುವೆಂಬಭಿಪ್ರಾಯದಲ್ಲಿ ಸೋಡಂಬಾಡಂ. || ೩೨೪ ||

ಪದಚ್ಛೇದಂ. — ಸವನಿಪುದು ಓಹೋ ಹೋ ಎನೆ ನಿವಾರಣಾರ್ಥಂ; ಸಹಾರ್ಥಂ ಒಡನೆ ಎನೆ; ಹಸನವ್ಯವಹೃತಿ ಗಹಗಹಂ ಎನೆ; ಪಿರಿದುಂ ಎಂಬ ಅಭಿಪ್ರಾಯದಲ್ಲಿ ಸೋಡಂಬಾಡಂ.

ಟೀಕು. — ಓಹೋ = ಓಹೋ ಎಂದು; ಹೋ = ಹೋ ಎಂದು; ಎನೆ = ಎಂದೊಡೆ; ನಿವಾರಣಾರ್ಥಂ = ನಿಲ್ಲಿಸುವರ್ಥಂ; ಸವನಿಪುದು = ಪ್ರಾಪ್ತಿಸುವುದು; ಒಡನೆನೆ = ಒಡನೆ ಎಂದೊಡೆ; ಸಹಾರ್ಥಂ = ಸಂಗಡವೆಂಬರ್ಥಂ; ಗಹಗಹಮೆನೆ = ಗಹಗಹಂ ಎಂದೊಡೆ; ಹಸನವ್ಯವಹೃತಿ = ನಗುವ ವ್ಯವಹಾರಂ; ಪಿರಿದುವೆಂಬಭಿಪ್ರಾಯದಲ್ಲಿ = ಪಿರಿದು ಎಂಬರ್ಥದಲ್ಲಿ; ಸೋಡಂ ಬಾಡಂ = ಸೋಡಂ ಬಾಡವೆಂದಾಗುವುದು.

ಸೂತ್ರಂ.[2] || ೩೧೦ || ಆಃ ಅಃ ಉಃ

ಆಃ, ಅಃ are used in showing surprise;

ಪರಿವಿಡಿಯಿಂದಾಃ ಅಃ ಎಂ- |
ಬೆರಡುಂ ವಿಸ್ಮಯ ವಿಡಂಬನಂ ವ್ಯಸನಸುಖ ||

---

1) ಓಹೋ ನಿವಾರಣೇ || ಭಾ. ಭೂ. 267. ||

(ನಿವಾರಣಾರ್ಥದಲ್ಲಿ ಓಹೋ ಎಂಬ ನಿಪಾತವು ವರ್ತಿಸುವುದು.)

2) ಆಃ ಸಂಪ್ರಹರ್ಷಾಶೋಭನಖೇದವಿಸ್ಮಯೇಷು || ಭಾ. ಭೂ. 263. ||

ಊಃ ಅವಜ್ಞಾಯಾಂ || ಭಾ. ಭೂ. 265. ||

ಉಃ expresses joy derived from a bad habit and disgust.

ಸ್ಫುರಿತಾರ್ಥದೊಳುಃ ಎಂಬುದು |
ಪಿರಿದುಮಸಹ್ಯಾರ್ಥದೊಳ್ ಪ್ರಯೋಗಿಸೆ ಪಡೆಗುಂ.
|| ೩೨೪ ||

ಪದಚ್ಛೇದಂ. — ಪರಿಪಿಡಿಯಿಂದೆ ಆಃ ಅಃ ಎಂಬ ಎರಡುಂ ವಿಸ್ಮಯವಿಡಂಬನಂ; ವ್ಯಸನ ಸುಖಸ್ಫುರಿತಾರ್ಥದೊಳ್ ಉಃ ಎಂಬುದು, ಪಿರಿದುಂ ಅಸಹ್ಯಾರ್ಥದೊಳ್ ಪ್ರಯೋಗಿಸ ಪಡೆಗುಂ.

ಟೀಕು. — ಪರಿಪಿಡಿಯಿಂದೆ = ತಪ್ಪುವಾಯಿಂದೆ; ಆಃ ಅಃ ಎಂಬೆರಡುಂ = ಆಃ ಎಂಬ ಅಃ ಎಂಬ ಎರಡು ಶಬ್ದಂಗಳುಂ; ವಿಸ್ಮಯವಿಡಂಬನಂ = ಚೋದ್ಯವಿಡಂಬನಂಗಳ್; ವ್ಯಸನ ಸುಖಸ್ಫುರಿತಾರ್ಥದೊಳ್ = ವ್ಯಸನ ಸುಖಂ ಕಾಣಿಸಿದರ್ಥದಲ್ಲಿ; ಪಿರಿದುಂ = ವಿಶೇಷವಾಗಿ; ಅಸಹ್ಯಾರ್ಥದೊಳ್ = ಅಸಹ್ಯಾರ್ಥದಲ್ಲಿ; ಉಃ ಎಂಬುದು = ಉಃ ಎಂಬ ಶಬ್ದಂ; ಪ್ರಯೋಗಿಸೆ ಪಡೆಗುಂ = ಪ್ರಯೋಗಿಸಲ್ಪಡುವುದು.

ಸೂತ್ರಂ[1].　|| ೨೦೦ ||

ಎಲೆಲೆ, ಏ are used in calling to mind, in deliberation, and in addressing; ಎ, ಏ are used in emphasizing.

ಸ್ಮರಣವಿಚಾರಾಮಂತ್ರಣ |
ಪರಿಗತವೆನಿಸಿರ್ಪುವೆಲೆಲೆ ಏ ಎಂಬಿವು ಸಂ- ||
ಚರಿಸುವುದನುಮತದೊಳ್ ಬ- |
ಲ್ಲರಿನೇಕಾರಮದೆಕಾರಮವಧಾರಣೆಯೊಳ್. || ೩೨೫ ||

ಪದಚ್ಛೇದಂ. — ಸ್ಮರಣವಿಚಾರಾಮಂತ್ರಣಪರಿಗತಂ ಎನಿಸಿ ಇರ್ಪುವು ಎಲೆಲೆ ಏ ಎಂಬ ಇವು; ಸಂಚರಿಸುವುದು ಅನುಮತದೊಳ್ ಬಲ್ಲರಿಂ ಏಕಾರಂ ಅದು ಎಕಾರಂ ಅವಧಾರಣೆಯೊಳ್.

(ಸಂಪ್ರಹರ್ಷ ಆಲೋಚನ ಖೇದ ವಿಸ್ಮಯಗಳಲ್ಲಿ ಆಃ ಎಂಬ ನಿಪಾತವೂ ಅವಜ್ಞಾರ್ಥದಲ್ಲಿ ಉಃ ಎಂಬ ನಿಪಾತವೂ ಬರುವುವು.)

[1] ಏ ಇತ್ಯಭ್ಯುಪಗಮೇ　|| ಭಾ. ಭೂ. 259. ||

ಲಘುಕೇಪೋಽವಧಾರಣೇ　|| ಭಾ. ಭೂ. 260. ||

ಎಲೇ ವಿತರ್ಕಭಾವನಾಮಂತ್ರಣೇಷು　|| ಭಾ. ಭೂ. 261. ||

ಹ್ರಸ್ವಾಂತೋಽಪಿ ಚ　|| ಭಾ. ಭೂ. 262. ||

(ಅಂಗೀಕಾರಾರ್ಥದಲ್ಲಿ ಏ ಎಂಬುದೂ, ಅವಧಾರಣೆಯಲ್ಲಿ ಎ ಎಂಬುದೂ, ವಿತರ್ಕಭಾವನೆ ಆಮಂತ್ರಣಗಳಲ್ಲಿ ಎಲೇ ಮತ್ತು ಎಲೆ ಎಂಬಿವೂ ವರ್ತಿಸುವುವು.)

ಟೀಕು. — ಎಲೆಲೆ = ಎಲೆಲೆ ಎಂದು; ಏ = ಏ ಎಂದು; ಎಂಬಿವು = ಎಂಬೀ ಶಬ್ದಂಗಳ್; ಸ್ಮರಣವಿಚಾರಾಮಂತ್ರಣಪರಿಗತಂ = ನೆನೆವಲ್ಲಿ ವಿಚಾರದಲ್ಲಿ ಸಂಬುದ್ಧಿಯಲ್ಲಿ ಎಯ್ದಲ್ಪಟ್ಟವು; ಎನಿಸಿರ್ಪುವು = ಎನಿಸಿರ್ಪುವು; ಅವಧಾರಣೆಯೊಳ್ = ನಿರ್ಧಾರಣದಲ್ಲಿ; ಬಲ್ಲರಿಂ = ಬಲ್ಲ ವಿದ್ವಾಂಸರಿಂದೆ; ಅನುಮತದೊಳ್ = ಅನುಮತದಲ್ಲಿ; ಏಕಾರಂ = ಏಕಾರಂ; ಅದು = ಅದು; ಏಕಾರಂ = ಏಕಾರಂ; ಸಂಚರಿಸುವುದು = ಬರ್ಪುದು.

ಮತ್ತೆ – ಅರಮೆ - ಅರೆ
ಬೆಳ್ವಳಂ.

ಸೂತ್ರಂ.[1] || ೩೧೨ ||

ಮತ್ತೆ means "again"; ಅರಮೆ, ಅರೆ mean "here and there", "to some extent"; ಬೆಳ್ಪಳಂ "unsteadily", "tremblingly".

ಮತ್ತೆಂಬುದು ಪುನರರ್ಥದೊ- |
ಳೆತ್ತಾನುಮದೆಲ್ಲಿಯಾನುಮೆಂಬರ್ಥದೊಳಾ- ||
ಯತ್ತಂಗಳರಮೆ ಅರೆಗಳ್ |
ಸುತ್ತೇಂ ತರಲಾರ್ಥದಲ್ಲಿ ಬೆಳ್ಪಳಮಕ್ಕುಂ. || ೩೨೭ ||

ಪದಚ್ಛೇದಂ. — ಮತ್ತೆ ಎಂಬುದು ಪುನರರ್ಥದೊಳ್; ಎತ್ತಾನುಂ ಅದು ಎಲ್ಲಿಯಾನುಂ ಎಂಬ ಅರ್ಥದೊಳ್ ಆಯತ್ತಂಗಳ್ ಅರಮೆ ಅರೆಗಳ್; ಸುತ್ತೇಂ, ತರಲಾರ್ಥದಲ್ಲಿ ಬೆಳ್ಪಳಂ ಅಕ್ಕುಂ.

ಟೀಕು. — ಪುನರರ್ಥದೊಳ್ = ಆಮೇಲೆಂಬರ್ಥದಲ್ಲಿ; ಮತ್ತೆ ಎಂಬುದು = ಮತ್ತೆ ಎಂಬ ಶಬ್ದಂ; ಅಕ್ಕುಂ = ಆಗುವುದು; ಎಲ್ಲಿಯಾನುಂ ಎಂಬರ್ಥದೊಳ್ = ಎಲ್ಲಿಯಾನುಂ ಎಂದು ಪೇಳ್ವರ್ಥದಲ್ಲಿ; ಎತ್ತಾನುಂ = ಎತ್ತಾನುಂ; ಅದು = ಅದು ಎಂದಲ್ಲಿ; ಅರಮೆ ಅರೆಗಳ್ = ಅರಮೆ ಅರೆ ಎಂಬ ಶಬ್ದಂಗಳ್; ಆಯತ್ತಂಗಳ್ = ಏಕಾರ್ಥದಲ್ಲಿ ಆಯತ್ತಂಗಳ್ ಅಪ್ಪುವು; ಸುತ್ತೇಂ = ಭ್ರಮೆಯಿಂ; ತರಲಾರ್ಥದಲ್ಲಿ = ಎಳವೆಂಬರ್ಥದಲ್ಲಿ; ಬೆಳ್ಪಳಂ = ಬೆಳ್ಪಳಂ ಎಂಬುದು ಅಪ್ಪುದು.

---

1. ಮತ್ತೆ ಕಂಠಸಮೀಕೃತೌ ಭೂಯೋಽರ್ಥೇಽಪಿ || ಭಾ. ಭೂ. 246. ||
(ಕಂಠಸಮೀಕರಣದಲ್ಲಿಯೂ ಪುನಃ ಎಂಬರ್ಥದಲ್ಲಿಯೂ ಮತ್ತೆ ಎಂಬ ಅವ್ಯಯವು ಬರುವುದು.)

ಅರೆ ಅರಮೆ ಕ್ವಚಿತ್ಕದಾಚಿದರ್ಥಯೋಃ || ಭಾ. ಭೂ. 268. ||
(ಕ್ವಚಿತ್ ಕದಾಚಿತ್ ಎಂಬರ್ಥದಲ್ಲಿ ಅರೆ ಅರಮೆ ಎಂಬ ನಿಪಾತಗಳು ವರ್ತಿಸುವುವು.)

ಸೂತ್ರಂ[1]. || ೩೧೩ ||

ಸಳೆ means "constantly", "essentially"; ಹುಂ and ಅಲ್ತೆಯಲ್ತೆ are used in asking and inferring.

ಸಲೆಯೆಂಬುದು ನಿತ್ಯಾರ್ಥಾ- |
ವಲಂಬಿ ಹುಂವೆನೆಯುಂ ಅಲ್ತೆಯಲ್ತೆಯೆನೆಯುಂ ||
ಫಲಿಯಿಸುಗುಂ ಪ್ರಶ್ನಾರ್ಥೋರ್- |
ಜ್ಜ್ವಲಾನುಮಾನಾರ್ಥಯುಗಳಮವು ಶಾಬ್ದಿಕರಿಂ.
|| ೩೨೮ ||

ಪದಚ್ಛೇದಂ. — ಸಲೆ ಎಂಬುದು ನಿತ್ಯಾರ್ಥಾವಲಂಬಿ; ಹುಂ ಎನೆಯುಂ ಅಲ್ತೆಯಲ್ತೆ ಎನೆಯುಂ ಫಲಿಯಿಸುಗುಂ ಪ್ರಶ್ನಾರ್ಥೋರ್ಜ್ಜ್ವಲಾನುಮಾನಾರ್ಥಯುಗಳಂ ಅವು ಶಾಬ್ದಿಕರಿಂ.

ಟೀಕು. — ಸಲೆಯೆಂಬುದು = ಸಲೆ ಎಂಬ ಶಬ್ದಂ; ನಿತ್ಯಾರ್ಥಾವಲಂಬಿ = ನಿತ್ಯವಾದರ್ಥದಲ್ಲಿ ಅವಲಂಬವುಳ್ಳುದು; ಹುಂ ಎನೆಯುಂ = ಹುಂ ಎಂದೊಡೆಯುಂ; ಅಲ್ತೆಯಲ್ತೆ ಎನೆಯುಂ = ಅಲ್ತೆ ಅಲ್ತೆ ಎಂದೊಡಂ; ಶಾಬ್ದಿಕರಿಂ = ಶಬ್ದಜ್ಞರಿಂದೆ; ಪ್ರಶ್ನಾರ್ಥೋರ್ಜ್ಜ್ವಲಾನುಮಾನಾರ್ಥಯುಗಳಂ = ಪ್ರಶ್ನೆಯ ಅರ್ಥವೆಂಬ ಪ್ರಕಾಶಮಾನವಾದ ಅನುಮಾನದರ್ಥವೆಂಬ ಎರಡರ್ಥಂ; ಅವು = ಅವು; ಫಲಿಯಿಸುಗುಂ = ಫಲಿತವಪ್ಪುವು.

ಸೂತ್ರಂ.[2] || ೩೧೪ ||

ಅಂ, ಉಂ mean "and", "also"; ಎ, ಏ, ಒ, ಓ joined to a word, express doubt, question and censure.

ಅಮುಮೆಂಬಿವೆರಡುಮಮರ್ಗುಂ |
ಸಮುಚ್ಚಯಾರ್ಥದೊಳೆ ಏ ಒ ಓ ಎಂಬಿವು ಶ- ||
ಬ್ದಮನಪ್ಪಿ ವಿಶಂಕಾಪ್ರ- |
ಶ್ನಮಂಡಲಾಕ್ಷೇಪಕಾರ್ಥದೊಳ್ ವರ್ತಿಸುಗುಂ.
|| ೩೨೯ ||

---

1) ಹುಂ ಪೃಚ್ಛಾಯಾಂ ವಿತರ್ಕಾವಧಾರಣನಿವಾರಣೇಷು ಚ || ಭಾ. ಭೂ. 244. ||
(ಪ್ರಶ್ನೆ, ವಿತರ್ಕ, ಅವಧಾರಣ, ನಿವಾರಣ ಎಂಬರ್ಥಗಳಲ್ಲಿ ಹುಂ ಎಂಬ ಅವ್ಯಯವು ಬರುವುದು.)

ಅಲ್ತೆ ಸಂಪ್ರಶ್ನಾನುಮಾನಯೋಃ || ಭಾ. ಭೂ. 269. ||
(ಪ್ರಶ್ನೆಯಲ್ಲಿಯೂ ಅನುಮಾನದಲ್ಲಿಯೂ ಅಲ್ತೆ ಎಂಬ ನಿಪಾತವು ಬರುವುದು.)

2) ಅಮುಮ್ ಸಮುಚ್ಚಯೇ || ಭಾ. ಭೂ. 253. ||
(ಅಂ ಉಂ ಎಂಬಿವು ಸಮುಚ್ಚಯಾರ್ಥದಲ್ಲಿ ಬರುವ ಅವ್ಯಯಗಳು.)

ಪದಚ್ಛೇದಂ. — ಅಂ ಉಂ ಎಂಬ ಇವು ಎರಡುಂ ಅಮರ್ಗುಂ ಸಮುಚ್ಚಯಾರ್ಥದೊಳ್; ಎ ಏ ಒ ಓ ಎಂಬ ಇವು ಶಬ್ದಮುಂ ಅಪ್ಪಿ ವಿಶಂಕಾಪ್ರಶ್ನಮಂಡಲಾಕ್ಷೇಪಕಾರ್ಥದೊಳ್ ವರ್ತಿಸುಗುಂ.

ಟೀಕು. — ಅಂ = ಅಂ ಎಂದು; ಉಂ = ಉಂ ಎಂದು; ಎಂಬಿವೆರಡುಂ = ಎಂಬಿವೆರಡು ರೂಪುಗಳುಂ; ಸಮುಚ್ಚಯಾರ್ಥದೊಳ್ = ಸಮುಚ್ಚಯದರ್ಥದಲ್ಲಿ; ಅಮರ್ಗುಂ = ಪೊರ್ದುಗೆಯಪ್ಪುವು; ಎ = ಎ ಎಂದು; ಏ = ಏ ಎಂದು; ಒ ಓ = ಒ ಓ ಎಂದು; ಎಂಬಿವು = ಎಂಬೀ ಶಬ್ದಂಗಳ್; ಶಬ್ದಮುಂ = ಶಬ್ದವಂ; ಅಪ್ಪಿ = ಕೂಡಿ; ವಿಶಂಕಾಪ್ರಶ್ನಮಂಡಲಾಕ್ಷೇಪಕಾರ್ಥದೊಳ್ = ವಿಶಂಕೆಯ (ಮತ್ತೆ) ಪ್ರಶ್ನೆಯ (ಮಂಡಲದ ಮತ್ತೆ) ಆಕ್ಷೇಪಕದ ಅರ್ಥದಲ್ಲಿ; ವರ್ತಿಸುಗುಂ = ವರ್ತಿಸುವುವು.

ಸೂತ್ರಂ[1]. ‖ ೩೧೫ ‖

ಬೞಿಕೆ, ಬೞಿಕ್ಕಂ, ಬೞಿಕಂ, ಬೞಿಕ್ಕೆ, ಬೞಿಯಂ mean "afterwards"; ಮೇಣ್ means "further", "or".

ಬೞಿಕೆ ಬೞಿಕ್ಕಂ ಬೞಿಕಂ ।
ಬೞಿಕ್ಕೆ ಬೞಿಯಂ ಪ್ರಸಿದ್ಧಪಶ್ಚಾದರ್ಥಂ ‖
ಘಟಿಯಿಪುದು ವಿಕಲ್ಪಾರ್ಥಂ ।
ಕೞಿಲದೆ ಮೇಣೆಂಬ ಶಬ್ದದೊಳ್ ಶಾಬ್ದಿಕರಿಂ. ‖ ೩೩೦ ‖

ಪದಚ್ಛೇದಂ.— ಬೞಿಕೆ ಬೞಿಕ್ಕಂ ಬೞಿಕಂ ಬೞಿಕ್ಕೆ ಬೞಿಯಂ ಪ್ರಸಿದ್ಧಪಶ್ಚಾದರ್ಥಂ ಘಟಿಯಿಪುದು, ವಿಕಲ್ಪಾರ್ಥಂ ಕೞಿಲದೆ ಮೇಣ್ ಎಂಬ ಶಬ್ದದೊಳ್ ಶಾಬ್ದಿಕರಿಂ.

ಟೀಕು. — ಶಾಬ್ದಿಕರಿಂ=ಶಬ್ದಜ್ಞರಿಂದೆ; ಬೞಿಕೆ=ಬೞಿಕೆ ಎಂದು; ಬೞಿಕ್ಕಂ=ಬೞಿಕ್ಕಂ ಎಂದು; ಬೞಿಕಂ = ಬೞಿಕಂ ಎಂದು; ಬೞಿಕ್ಕೆ = ಬೞಿಕ್ಕೆ ಎಂದು; ಬೞಿಯಂ = ಬೞಿಯಂ ಎಂದು; ಪ್ರಸಿದ್ಧಪಶ್ಚಾದರ್ಥಂ = ಪ್ರಸಿದ್ಧವಾದ ಮತ್ತೆಂಬರ್ಥವಾಗಿ; ಘಟಿಯಿಪುದು = ಬರ್ಪುದು; ಮೇಣೆಂಬ ಶಬ್ದದೊಳ್ = ಮೇಣೆಂಬ ಶಬ್ದದಲ್ಲಿ; ವಿಕಲ್ಪಾರ್ಥಂ = ವಿಕಲ್ಪವೆಂಬರ್ಥಂ; ಕೞಿಲದೆ = ಕೆಡದೆ ಬರ್ಪುದು.

---

[1] ಮೇಣ್ ವಿಕಲ್ಪೇ ‖ ಭಾ. ಭೂ. 250. ‖
(ವಿಕಲ್ಪಾರ್ಥದಲ್ಲಿ ಮೇಣ್ ಎಂಬ ಅವ್ಯಯವು ಬರುವುದು.)

ಸೂತ್ರಂ[1]. || ೩೧೬ ||

ಅಂತಿರೆ, ಅಂತೆ, ಅಂತೆ ವೋಲ್, ವೋಲ್, signify "as", "like as"; ಗಳ and ಗಡ are used in polite communication.

ಉಪಮಾನಾರ್ಥದೊಳಿವು ವ- |
ರ್ತಿಪುವಂತಿರೆಯಂತೆ ಯಂತೆವೋಲ್ ವೋಲ್ಗಳ್ ರಂ- ||
ಜಿಪುವು ಗಡ ಗಳಗಡಂಗಳ |
ವುಪಚಿತವಾರ್ತೆಯೊಳಮುಚಿತಸಂಭಾಷಣೆಯೊಳ್.
|| ೩೩೧ ||

ಪದಚ್ಛೇದಂ. — ಉಪಮಾನಾರ್ಥದೊಳ್ ಇವು ವರ್ತಿಪುವು ಅಂತಿರೆ ಅಂತೆ ಅಂತೆವೋಲ್ ವೋಲ್ಗಳ್; ರಂಜಿಪುವು, ಗಡ, ಗಳ ಗಡಂಗಳ್ ಅವು ಉಪಚಿತವಾರ್ತೆಯೊಳಂ ಉಚಿತಸಂಭಾಷಣೆಯೊಳ್.

ಟೀಕು. — ಅಂತಿರೆಯಂತೆಯಂತೆವೋಲ್ ವೋಲ್ಗಳ್ = ಅಂತಿರೆಯೆಂದು, ಅಂತೆಯೆಂದು, ಅಂತೆವೋಲ್ ಎಂದು, ವೋಲ್ ಎಂದು, ಎಂಬೀ ಶಬ್ದಂಗಳ್; ಇವು = ಈ ಪೇಳ್ದ ಶಬ್ದಂಗಳ್; ಉಪಮಾನಾರ್ಥದೊಳ್ = ಪೋಲಿಸುವರ್ಥದಲ್ಲಿ; ವರ್ತಿಪುವು = ವರ್ತಿಸುವುವು; ಗಳ ಗಡಂಗಳ್ = ಗಳ ಎಂಬ ಗಡ ಎಂಬ ಶಬ್ದಂಗಳ್; ಅವು = ಆ ಶಬ್ದಂಗಳ್; ಉಪಚಿತವಾರ್ತೆಯೊಳಂ = ಉಪಚಾರವಾದ ವಾರ್ತೆಯಲ್ಲಿಯುಂ; ಉಚಿತಸಂಭಾಷಣೆಯೊಳ್ = ಉಚಿತವಾದ ಸಂಭಾಷಣೆಯಲ್ಲಿ; ರಂಜಿಪುವು = ರಂಜಿಸುವುವು; ಗಡ = ಗಡ.

ಸೂತ್ರಂ. || ೩೧೭ ||

ಸುಮ್ಮನೆ, ಸುಮ್ಮಗೆ, ಬರಿದೆ, ಅಲ್ಲವಱ್ mean "causelessly". ಅನ್ತಱಿಂ is used in the instrumental, but not with the suffix ಎ.

ಮೆಱೆಗುಂ ಸುಮ್ಮನೆ ಸುಮ್ಮಗೆ |
ಬಱಿದಲ್ಲವಱೆಂಬ ಮಾತಕಾರಣದೊಳ್ ಪೊ- ||
ೞ್ದಱಿಗುಂ ತೃತೀಯೆ ಬಂದಂ- |
ತಱೆನೆಂಬ ಪದಕ್ಕಮಾ ಏಕಾರಕ್ಕಿತರಂ. || ೩೩೨ ||

---

[1] ಪೋಲಿವಾರ್ಥೇ || ಧಾ. ಭೂ. 249. ||
ಗಡಗಳ ವಾರ್ತಾಸಂಭಾಷಣಯೋಃ || ಧಾ. ಭೂ. 252. ||

(ಉಪಮಾನಾರ್ಥದಲ್ಲಿ ಪೋಲ್ ಎಂಬ ಅವ್ಯಯವೂ, ವಾರ್ತೆಯಲ್ಲಿಯೂ ಸಂಭಾಷಣೆಯಲ್ಲಿಯೂ ಗಡ ಗಳ ಎಂಬೀ ಅವ್ಯಯಗಳೂ ಬರುವುವು.)

ಪದಚ್ಛೇದಂ. — ಮೆಱೆಗುಂ ಸುಮ್ಮನೆ ಸುಮ್ಮಗೆ ಬಱಿದೆ ಅಲ್ಲವರ್ ಎಂಬ ಮಾತು ಅಕಾರಣದೊಳ್ ಪೊರ್ದುಗುಂ; ತೃತೀಯೆ ಬಂದು ಅಂತಱಿಂ ಎಂಬ ಪದಕ್ಕಂ ಆ ಎಕಾರಕ್ಕೆ ಇತರಂ.

ಟೀಕು.— ಸುಮ್ಮನೆ = ಸುಮ್ಮನೆಯೆಂದು; ಸುಮ್ಮಗೆ = ಸುಮ್ಮಗೆಯೆಂದು; ಬಱಿದೆ = ಬಱಿದೆಯೆಂದು; ಅಲ್ಲವಱ್ = ಅಲ್ಲವಱೆಂದು; ಎಂಬ ಮಾತು = ಎಂಬ ವಾಕ್ಯಂ; ಅಕಾರಣದೊಳ್ = ಕಾರಣವಿಲ್ಲೆಂಬರ್ಥದಲ್ಲಿ; ಮೆಱೆಗುಂ = ಮೆಱೆವುದು; ಅಂತಱಿನೆಂಬ ಪದಕ್ಕಂ = ಅಂತಱಿಂ ಎಂಬ ಅವ್ಯಯಪದಕ್ಕೆಯುಂ; ಆ ಎಕಾರಕ್ಕಿತರಂ = ಆ ಎಕಾರಕ್ಕೆ ಅನ್ಯವಾದ; ತೃತೀಯೆ = ಇಂ, ಇಂದಂ, ಇಂದೆ ಎಂಬ ತೃತೀಯೆ; ಬಂದು = ಬಂದು; ಪೊರ್ದುಗುಂ = ಪೊರ್ದುಗೆಯಪ್ಪುದು.

ಸೂತ್ರಂ[1]. || ೩೧೮ || ಹೌವನೆ – ಅಂತು – ಇಂತು –
ಚೀಃ – ಇಸ್ಸೀ –

ಹೌವನೆಯಾಕಸ್ಮಿಕಭಯ |
ಭಾವಿತಮಂತಿಂತುಗಳ್ ಪದಾಪೂರಣದೊಳ್ ||
ಕೋೞ್ವುವು ಚೀಃ ಇಸ್ಸೀಗಳ್ |
ತಾವೊಗೆದು ಜುಗುಪ್ಸನಾರ್ಥದೊಳ್ ವರ್ತಿಸುಗುಂ.
|| ೩೩೩ ||

ಹೌವನೆ is uttered when something suddenly happens, or when one is seized with fear; ಅಂತು, ಇಂತು "thus" are used to complete a verse; ಚೀಃ and ಇಸ್ಸಿ denote detestation.

ಪದಚ್ಛೇದಂ. — ಹೌವನೆ ಆಕಸ್ಮಿಕಭಯಭಾವಿತಂ; ಅಂತು ಇಂತುಗಳ್ ಪದಾಪೂರಣದೊಳ್ ಕೋೞ್ವುವು; ಚೀಃ ಇಸ್ಸೀಗಳ್ ತಾಂ ಒಗೆದು ಜುಗುಪ್ಸನಾರ್ಥದೊಳ್ ವರ್ತಿಸುಗುಂ.

ಟೀಕು. — ಹೌವನೆ = ಹೌವನೆಯೆಂದು; ಆಕಸ್ಮಿಕಭಯಭಾವಿತಂ = ಆಕಸ್ಮಿಕಾರ್ಥವುಂ ಭಯ ಭಾವಿತಾರ್ಥವುಂ; ಅಂತಿಂತುಗಳ್ = ಅಂತು ಇಂತು ಎಂಬ ಶಬ್ದಂಗಳ್; ಪದಾಪೂರಣದೊಳ್ = ಪದದ ಆಪೂರಣದಲ್ಲಿ; ಕೋೞ್ವುವು = ಪವಣಿಗೆಯಪ್ಪುವು; ಜುಗುಪ್ಸನಾರ್ಥದೊಳ್ = ಹೇಸಿಕೆಯರ್ಥದಲ್ಲಿ; ಚೀಃ ಇಸ್ಸೀಗಳ್ = ಚೀಃ ಇಸ್ಸಿ ಎಂಬಿವು; ತಾಂ = ತಾಂ; ಒಗೆದು = ಹುಟ್ಟಿ; ವರ್ತಿಸುಗುಂ = ವರ್ತಿಸುವುವು.

---

[1] ಚೀಃ ಕುತ್ಸನೇ || ಧಾ. ಭೂ. 245. ||
(ಚೀಃ ಎಂಬ ಅವ್ಯಯವು ಗರ್ಹಣಾರ್ಥದಲ್ಲಿ ಬರುವುದು.) ✓

ಸೂತ್ರಂ. || ೩೧೯ ||

ಬಲ್ಲೆ, ಬಟೆ mean "further", "and"; ಅಂದು "then", ಇಂದು "now", ಉಂದು "now", ಎಂದು "when".

ಮತ್ತೆಂಬರ್ಥದೊಳುಸಿರ್ವರ್ |
ಬಿತ್ತಿಗರಾ ಬಲ್ಲೆ ಬಟೆಗಳಂ ಕಾಲಾರ್ಥಂ ||
ಪತ್ತುವುದಂದಿಂದುಂದೆಂ- |
ದೆತ್ತಂ ನುಡಿವವ್ಯಯಂಗಳೊಳ್ ವಾಗ್ವಿದರಿಂ. || ೩೩೪ ||

ಪದಚ್ಛೇದಂ. — ಮತ್ತೆ ಎಂಬ ಅರ್ಥದೊಳ್ ಉಸಿರ್ವರ್ ಬಿತ್ತಿಗರ್ ಆ ಬಲ್ಲೆ ಬಟೆಗಳಂ; ಕಾಲಾರ್ಥಂ ಪತ್ತುವುದು ಅಂದು ಇಂದು ಉಂದು ಎಂದು ಎತ್ತಂ ನುಡಿವ ಅವ್ಯಯಂಗಳೊಳ್ ವಾಗ್ವಿದರಿಂ.

ಟೀಕು. — ಬಿತ್ತಿಗರ್ = ಬಲ್ಲವರ್; ಮತ್ತೆಂಬರ್ಥದೊಳ್ = ಮತ್ತೆ ಎಂಬರ್ಥದಲ್ಲಿ; ಆ ಬಲ್ಲೆ ಬಟೆಗಳಂ = ಆ ಬಲ್ಲೆಯೆಂಬ ಬಟೆಯೆಂಬ ಶಬ್ದಂಗಳಂ; ಉಸಿರ್ವರ್ = ಪೇಳ್ವರ್; ವಾಗ್ವಿದರಿಂ = ವಾಕ್ಯವಂ ಬಲ್ಲವರಿಂದೆ; ಅಂದು = ಅಂದೆಂದು; ಇಂದು = ಇಂದೆಂದು; ಉಂದು = ಉಂದೆಂದು; ಎಂದು = ಎಂದೆಂದು; ಎತ್ತಂ = ಆವೆಡೆಯಲ್ಲಿಯುಂ; ನುಡಿವವ್ಯಯಂಗಳೊಳ್ = ಪೇಳ್ವವ್ಯಯಂಗಳಲ್ಲಿ; ಕಾಲಾರ್ಥಂ = ಕಾಲದರ್ಥಂ; ಪತ್ತುವುದು = ಪೊರ್ದುಗೆಯಾಗುವುದು.

ಸೂತ್ರಂ. || ೩೨೦ ||

ಅಂತು "in that manner", ಇಂತು "in this manner", ಉಂತು "in this manner", ಎಂತು "how" refer to manifold ways.—Now follow Particles of time, which have a Genitive and Dative.

ಭ್ರಾಂತಿಯನುಟಿದಂತಿಂತುಂ- |
ತೆಂತೆಂಬಿವು ತಾಂ ಪ್ರಕಾರಕಾಲ್ಯಾರ್ಥಂಗಳ್ ||
ಮುಂತೆ ಚತುರ್ಥೀಷಷ್ಠೀ |
ಕಾಂತಂಗಳವೆಂದು ತಿಳಿಗೆ ಪೇಟ್ವವ್ಯಯಮಂ. || ೩೩೫ ||

ಪದಚ್ಛೇದಂ. — ಭ್ರಾಂತಿಯುಂ ಉಟಿದು ಅಂತು ಇಂತು ಉಂತು ಎಂತು ಎಂಬ ಇವು ತಾಂ ಪ್ರಕಾರಕಾಲ್ಯಾರ್ಥಂಗಳ್. — ಮುಂತೆ, ಚತುರ್ಥೀಷಷ್ಠೀಕಾಂತಂಗಳ್ ಅವು ಎಂದು, ತಿಳಿಗೆ ಪೇಟ್ವ ಅವ್ಯಯಮಂ.

ಅನ್ವಯಂ. — ಭ್ರಾಂತಿಯುಂ ಉಟಿದು ಅಂತು ಇಂತು ಉಂತು ಎಂತು ಎಂಬಿವು ತಾಂ ಪ್ರಕಾರಕಾಲ್ಯಾರ್ಥಂಗಳ್. — ಮುಂತೆ ಪೇಟ್ವವ್ಯಯಮಂ, ಚತುರ್ಥೀಷಷ್ಠೀಕಾಂತಂಗಳ್ ಅವು ಎಂದು, ತಿಳಿಗೆ.

ಟೀಕು.— ಭ್ರಾಂತಿಯುಂ = ಭ್ರಮೆಯುಂ; ಉಱದು = ಬಿಟ್ಟು; ಅಂತು = ಅಂತೆಂದು; ಇಂತು = ಇಂತೆಂದು; ಉಂತು = ಉಂತೆಂದು; ಎಂತು = ಎಂತೆಂದು; ಎಂಬಿವು = ಎಂಬೀ ಶಬ್ದಂಗಳ್; ತಾಂ = ತಾಂ; ಪ್ರಕಾರಕಾಲ್ಯಾರ್ಥಂಗಳ್ = ಆ ಪ್ರಕಾರವಿಾ ಪ್ರಕಾರಮೆಂಬಂತೆ ಪ್ರಕಾರ ಕಾಲ್ಯಾರ್ಥವಂ ಪೇಳ್ವುವು;— ಮುಂತೆ = ಮುಂದೆ; ಪೇಳ್ವವ್ಯಯಮುಂ = ಹೇಳ್ವವ್ಯಯಶಬ್ದಂಗಳಂ; ಚತುರ್ಥೀಷಷ್ಠ್ಯಂತಂಗಳ್ = ಚತುರ್ಥೀವಿಭಕ್ತಿ ಷಷ್ಠೀವಿಭಕ್ತಿಯಿಂದೆ ಬೆಳಗುವವು; ಅವು = ಆ ಶಬ್ದಂಗಳ್; ಎಂದು = ಎಂದು; ತಳೆಗೆ = ಅರಿಗೆ.

ವೃತ್ತಿ.— ಕಾಲಭೇದಮನಱೀವ ಮುಂದಣವ್ಯಯಂಗಳೊಳ್ ಚತುರ್ಥಿಷಷ್ಠಿಗಳ್ ಪರಿಣಮಿಸಿರ್ಪುವೆಂದಱಿವುದು.

ಸೂತ್ರಂ. || ೩೨೧ ||

ತಳೆಗುಂ ಕಾಲಾರ್ಥಮನಾ- |
ಗಳೀಗಳೆಂಬಾಗಡೀಗಡೆಂಬಿವು ಬಿಂದೂ- ||
ಜ್ಜ್ವಳಮುಮಿವುದಯಮನುಸಿರ್ಪುವು |
ತಿಳಿ ಸವಳದೆ ಪೊಟ್ತಿಡೆನೆ ಸವಳ್ತಡೆಯೆನೆಯುಂ. || ೩೩೬ ||

ಸವಸಂದ ಕಾಲವಾಚಕ- |
ಮಿವು ನಾಡಿದು ನಾಳೆ ನಿನ್ನೆ ಮೊನ್ನೆಗಳಾದಂ ||
ಏವರಿಪುವೀವಱು ಮೊನೆಯೇ- |
ಡವು ಕಿಂಚಿದ್ಭೂತಭೂತಕಾಲದ್ವಯದೊಳ್. || ೩೩೭ ||

They all with the exception of ಸವಳದೆ receive the Bindu in being declined, and are: ಆಗಳ್, then, ಈಗಳ್, now, ಆಗಡು, then ಈಗಡು, now; ಸವಳದೆ, ಪೊಟ್ತಿಡೆ, ಸವಳ್ತಡೆ, early;—ನಾಡಿದು, the day after to-morrow, ನಾಳೆ, to-morrow, ನಿನ್ನೆ yesterday, ಮೊನ್ನೆ, the day before yesterday, ಈವರೆ till now, ಮೊನೆಯೇಡು till then.

ಪದಚ್ಛೇದಂ.— ತಳೆಗುಂ ಕಾಲಾರ್ಥಮುಂ ಆಗಳ್ ಈಗಳ್ ಎಂಬ ಆಗಡು ಈಗಡು ಎಂಬ ಇವು, ಬಿಂದೂಜ್ಜ್ವಳಮುಂ ಇವು, ಉದಯಮಂ ಉಸಿರ್ಪುವು, ತಿಳಿ, ಸವಳದೆ ಪೊಟ್ತಿಡೆ ಎನೆ, ಸವಳ್ತಡೆ ಎನೆಯುಂ. ಸವಸಂದ ಕಾಲವಾಚಕಂ ಇವು ನಾಡಿದು ನಾಳೆ ನಿನ್ನೆ ಮೊನ್ನೆಗಳ್ ಆದಂ; ಏವರಿಪುವು ಈವಱು ಮೊನೆಯೇಡು ಇವು ಕಿಂಚಿದ್ಭೂತಭೂತಕಾಲದ್ವಯದೊಳ್.

ಟೀಕು.— ಆಗಳ್ ಈಗಳ್ ಎಂಬ ಆಗಡು ಈಗಡು ಎಂಬಿವು = ಆಗಳೆಂಬ ಈಗಳೆಂಬ ಆಗಡೆಂಬ ಈಗಡೆಂಬ ಈ ಶಬ್ದಂಗಳ್; ಕಾಲಾರ್ಥಮುಂ = ಕಾಲಾರ್ಥವನ್ನು; ತಳೆಗುಂ = ತಳೆವು

ವು; ಸವಳದೆ = ಸವಳದೆ ಎಂದು; ಪೋದ್ದಿಡೆ = ಪೊದ್ದಿಡೆ ಎಂದು; ಎನೆ = ಎನೆ; ಸವಳ್ತಿಡೆ = ಸವಳ್ತಿಡೆ ಎಂದು; ಎನೆಯುಂ = ಎಂದೊಡೆಯುಂ; ಬಿಂದೂಜ್ಜ್ವಳಮುಂ = ಬಿಂದುವಿನೊಡನೆ ಪ್ರಕಾಶಿಪುವಾಗಿಯುಂ; ಇವು = ಈ ಶಬ್ದಂಗಳ್; ಉದಯಮಂ = ಉದಯಕಾಲಮಂ; ಉಸಿರ್ವುವು = ಪೇಳ್ವುವು; ತಿಳಿ = ಅರಿ; ನಾಡಿದು ನಾಳೆ ನಿನ್ನೆ ಮೊನ್ನೆಗಳ್ = ನಾಡಿದು ಎಂಬ ನಾಳೆ ಎಂಬ ನಿನ್ನೆ ಎಂಬ ಮೊನ್ನೆ ಎಂಬ ಶಬ್ದಂಗಳ್; ಇವು = ಇವು; ಆದಂ = ಆದಂ ಎಂಬ ಪೀನಗ್ರಹಣದಿಂದೆ; ಸಮಸಂದ ಕಾಲವಾಚಕಂ = ಸಮಾನವಾಗಿ ಸಂದ ಕಾಲವಾಚಕವಂ ಪೇಳ್ವ ಶಬ್ದಂಗಳ್; ಕಿಂಚಿದ್ಭೂತಭೂತಕಾಲದ್ವಯದೊಳ್ = ಸ್ವಲ್ಪಭೂತಕಾಲ ಭೂತಕಾಲವೆಂಬೆರಡರಲ್ಲಿ; ಈವಱು = ಈವಱು ಎಂದು; ಮೊನೆಯೇಡು = ಮೊನೆಯೇಡು ಎಂದು; ಇವು = ಈ ಶಬ್ದಂಗಳ್; ವಿವರಿಪುವು = ವಿವರವಾಗುವುವು.

ವೃತ್ತಿ. — ಇವಱೊಳ್ ಚತುರ್ಥಿ ಷಷ್ಠಿಗಳ್ ಪತ್ತುವಂದಮಂ ಉದಾಹರಿಪೆಂ. — ಆಗಳಿಂಗೆ, ಈಗಳಿಂಗೆ, ಆಗಡಿಂಗೆ, ಈಗಡಿಂಗೆ; ಆಗಳಿನ, ಈಗಳಿನ, ಆಗಡಿನ, ಈಗಡಿನ; ಸವಳ್ತಡಿಂಗೆ, ಪೊಟ್ಟಿಡಿಂಗೆ, ಸವಳ್ತಡಿನ, ಪೊಟ್ಟಿಡಿನ. ಸವಳವೆಗೆ ಆಗದು. — ನಾಳಿಂಗೆ, ನಾಡಿದಿಂಗೆ, ನಿನ್ನಿಂಗೆ, ಮೊನ್ನಿಂಗೆ; ನಾಳಿನ, ನಾಡ್ದಿದಿನ, ನಿನ್ನಿನ, ಮೊನ್ನಿನ; ಈವಱಿಂಗೆ, ಮೊನೆಯೇಡಿಂಗೆ; ಈವಱಿನ, ಮೊನೆಯೇಡಿನ. ಈವಱೆಂಬುದು ಈಷದ್ಭೂತಕಾಲಂ; ಮೊನೆಯೇಡೆಂದು ಭೂತ ಕಾಲಂ; ಇವು ವರ್ಷವಾಚಕಂಗಳಾಗಿ ಕಾಲೋಪಯುಕ್ತಂಗಳ್.

ಗದ್ಯಂ. — ಇದು ಸಮಸ್ತಶಾಬ್ದಿಕಜನಮನೋಜನಿತಶಬ್ದಸಂದೇಹಶಲ್ಯಚಾರುಡುಂಬಕಾಯಮಾನಾನೂನಕರ್ಣಾಟಕಲಕ್ಷಣಶಿಕ್ಷಾಚಾರ್ಯಸುಕವಿಕೇತಿರಾಜವಿರಚಿತಮಪ್ಪ ಶಬ್ದಮಣಿದರ್ಪಣದೊಳ್ ಅವ್ಯಯಾರ್ಥವಿವರಣಮೆಂಬ ಅಷ್ಟಮಮಪ್ಪ ಸಂಧಿ ಸಂಪೂರ್ಣಂ.

೮ನೆಯ ಅಧ್ಯಾಯಂ ಸಮಾಪ್ತಂ.

ಸಮಾಪ್ತಿಕವಾಕ್ಯಂಗಳ್

CONCLUSION.

Keśava's Grammar's value is undisputable.

ನಡೆದುದೆ ಮಾರ್ಗಂ ಪದವಿಡ- |
ಲೊಡರಿಸಿದುದೆ ಬಂಗಿ ಕೇಶವಂಗಿದಿರುಂಟೇ ||
ತೊಡಗಿದ ಕೃತಿಗಳೊಳಾನೆಯ |
ನಡು ಬಡವೆ(ತಾನೆ ಲೋಕದೊಳ್ ಲಾಕ್ಷಣಿಕಂ. ||

Besides this work he has written a čoḷa-king-story, the story of (Kṛishṇa's sister) Subhadra being carried off (by Arjuna), the book called "the Moon of Knowledge", and a Kirâta-story.

ದೊರೆವಡೆದ ಚೋಳಪಾಲಕ |
ಚರಿತಂ ಶ್ರೀಚಿತ್ರಮಾಲೆಯಂತೆ ಸುಭದ್ರಾ- ||
ಹರಣಂ ಪ್ರಬೋಧಚಂದ್ರಂ |
ಕಿರಾತಮಿವು ಕೇಶಿರಾಜಕವಿರಚಿತಂಗಳ್. || ೩೩೯ ||

All learned men will highly esteem his beautiful and well-sounding Śabdamaṇidarpaṇa.

ಸಿರಿಗೀಕ್ಷಿಪ ರಸಚಿತ್ರಂ |
ಸರಸತಿಗೆರಡನೆಯ ಬೀಣೆಯೆನೆ ಸೌಭಾಗ್ಯಂ ||
ಕರಮಾದುದೆಂದು ಬುಧರಾ- |
ದರಿಪರ್ ಮೆಚ್ಚೆಂದೆ ಶಬ್ದಮಣಿದರ್ಪಣಮಂ. || ೩೪೦ ||

Certainly the fame also of this work of Kêśava of Ârya race, who is a teacher to the Yâdavas, will spread afar, and remain.

ಆರ್ಯನ ಯಾದವಕಟಕಾ- |
ಚಾರ್ಯನ ಕೇಶವನ ಶಬ್ದಮಣಿದರ್ಪಣಮುಂ ||
ಸೂರ್ಯೇಂದುಮೇರುವಾರಿಧಿ |
ಪರ್ಯಂತಂ ಪರೆದು ನಿಲ್ಕನಾಕುಳದಿಂದಂ. || ೩೪೧ ||

ಚಂಪಕಮಾಲಾವೃತ್ತಂ.

Recapitulation of the chief subjects.

ಗಮಕಸಮಾಸದಿಂ ಬಿಬಿಕುಳಕ್ಷಳದಿಂ ಶ್ರುತಿಸಹ್ಯಸಂಧಿಯಿಂ
ಸಮುಚಿತಮಾಗಿ ಬರ್ಪ ಸತಿಸಪ್ತಮಿಯಿಂ ಸಮಸಂಸ್ಕೃತೋ
ಕ್ತಿಯಿಂ |
ವಮಹಪಭೇದದಿಂ ವಿರಹಿತಾವ್ಯಯಸಂಸ್ಕೃತಲಿಂಗದಿಂ ಪ-
ದೋಕ್ತಮಶಿಥಿಲತ್ವದಿಂ ಯತಿವಿಲಂಘನದಿಂದರಿದಲ್ತೆ
ಕನ್ನಡಂ. || ೩೪೨ ||

ಇದು ಸಮಸ್ತಶಾಬ್ದಿಕಜನಮನೋಜನಿತಶಬ್ದಸಂದೇಹಶಲ್ಯಚಾರುಚುಂಬಕಾಯಮಾನಾನೂನಕರ್ಣಾಟಕಲಕ್ಷಣಶಿಕ್ಷಾಚಾರ್ಯಸುಕವಿಕೇಶಿರಾಜವಿರಚಿತಮಪ್ಪ ಶಬ್ದಮಣಿದರ್ಪಣದೊಳ್ ಪ್ರಯೋಗಸಾರಂ ಶಬ್ದಾರ್ಥನಿರ್ಣಯಂ ಸಂಪೂರ್ಣಂ.

ಶಬ್ದಮಣಿದರ್ಪಣಂ ಸಂಪೂರ್ಣಂ.

೯ನೆಯ ಅಧ್ಯಾಯಂ. IX. CHAPTER.

ಪ್ರಯೋಗಸಾರಮೆಂಬ ಶಬ್ದಾರ್ಥನಿರ್ಣಯಂ.

MEANING OF SOME UNCOMMON WORDS.

ಅಪರಿಮಿತವಿದ್ಯರೆನಿಸಿ- |
ರ್ದ ಪುರಾಣಕವೀಂದ್ರರಖಿಳಕಾವ್ಯಂಗಳ ಗೂ- ||
ಢಪದಪ್ರಯೋಗಮಂ ನೆರೆ- |
ಪಿ ಪದಾರ್ಥಂಗಳನಣಂ ಮನಂಬುಗೆ ಪೇಳ್ವೆಂ || ೩೪೩ ||

1. Version.

1. ಕಚ್ಚಡಿಯೆಂದು, ಬಿರುದಿನ ಬಳೆ. || 6 ||
2. ಪುಚ್ಚಡಿಯೆಂದು, ಕೇಡು. || 11 ||
3. ದಡ್ಡಸವೆಂದು, ಡೊಂಬವಱ್. || 17 ||
4. ಪರ್ಪರಿಕೆಯೆಂದು, ಕರ್ಕಶತೆ. || 18 ||
5. ಅಪ್ಪಂಗೊಡಲಿಯೆಂದು, ಹೆಗ್ಗಟ್ಟವತ್ತಿಗೆ. || 20 ||
6. ಪಂಚವೆಂದು, ಅಪೂರ್ವಂ (o. r. ಪೂರ್ವಂ). || 23 ||
7. ಉರ್ಗ್ವಳದೆಣ್ಣೆಯೆಂದು, ಉರಿವೆಣ್ಣೆ (o. r. ಉಗ್ಗವಳದೆಣ್ಣೆಯೆಂದು, ಉರಿವೆಣ್ಣೆ). || 28 ||
8. ಸಿರಿವಂತಿಗೆಯೆಂದು, ಹುರಿಯೋಡು. || 29 ||
9. ಸೊಡಬಲಿಯೆಂದು, ಮಸಣವಟ್ಟಿಗೆ. || 30 ||
10. ಪೊಚ್ಚಮೆಂದು, ಪೊಱ್. || 32 ||
11. ಅತ್ತಪರವೆಂದು, ಕಾಳೆಗದಲಗೆ. || 34 ||
12. ಕಿರ್ಗೆಯೆಂದು, ಒಱಪು. || 37 ||
13. ಸಲವೆಂದು, ಪ್ರವೇಶಂ. || 38 ||
14. ಗಾರಣವೆಂದು, ದೂಱು. || 39 ||
15. ಕೊಟ್ಟಜವೆಂದು, ಕಷ್ಟಂ. || 44 ||
16. ತೇನತೇನವೆಂದು, ಮೇಲೆ ಮೇಲೆ. || 45 ||
17. ಅಳಸೆಂದು, ಸುರತಧ್ವನಿ. || 54 ||
18. ಪವಿತ್ರವೆಂದು, ಒಂದು ಕಿವಿದುಡಿಗೆ. || 57 ||
19. ಬದುರ್ಗೆಯೆಂದು, ಸಾವು. || 59 ||
20. ಅಱಿಲೆಂದು, ವಿಮೀನೆಂದು, ನಕ್ಷತ್ರಂ. || 61 ||
21. ಮುಮ್ಮುರಿಯೆಂದು, ಕಾಸಿದ ಮುರಲ್ (o. r. ಕಾಸಿದ ಮುಳಲ್). || 62 ||
22. ಸೈಪೆಂದು, ಪುಣ್ಯಂ. || 65 ||
23. ಗುಂಡೆಂದು, ನೆರವಿ. || 66 ||
24. ಬಂಡಣವೆಂದು, ಕಾಳೆಗಂ. || 67 ||
25. ನಿಕ್ಕುವಮೆಂದು, ನಿಶ್ಚಯಂ. || 69 ||
26. ತಿಱುಕೊಱೆಯೆಂದು, ಅಯ್ಯುಳಿ. || 70 ||

27. ನನಸೆಂದು, ದಿಟಂ (o. r. ನನೆಸೆಂದು —). ‖ 71 ‖
28. ಬಿಸವಂದಮೆಂದು, ಕೌತುಕಂ. ‖ 75 ‖
29. ಬರ್ದೆಂದು, ಪ್ರೌಢಿ. ‖ 84 ‖
30. ಸಿಗ್ಗವಮೆಂದು, ಗಜದಂತಂ. ‖ 85 ‖
31. ಪಲ್ಲಮುಱಿಯೆಂದು, ಆನೆಯ ಮುಱಿ. ‖ 86 ‖
32. ಪೊಸೆಯೆಂದು, ಕಾಳೆಗಂ. ‖ 88 ‖
33. ರಾಜಾವರ್ತಮೆಂದು, ಎಳೆನೀಲಂ. ‖ 89 ‖
34. ನವಿರೆಂದು, ಕೂದಲ್. ‖ 90 ‖
35. ತೊದಳೆಂದು, ಪುಸಿ. ‖ 93 ‖
36. ಸೌಸವಮೆಂದು, ಕಂಪು. ‖ 97 ‖
37. ಕೊಳವೇರೆಂದು, ಲಾಮಂಚಂ. ‖ 102 ‖
38. ಗೋಂಕೆಯೆಂದು, ಗೋಣ್. ‖ 105 ‖
39. ಮುನ್ನೀರೆಂದು, ಸಮುದ್ರಂ. ‖ 107 ‖
40. ತಳಮುಳಗೆಂದು, ಬೆರಗಾಗುಹಂ. ‖ 110 ‖
41. ಕಾಮುಕರಮೆಂದು, ಗರ್ವಂ. ‖ 124 ‖
42. ಬೇಂಟೆಯೆಂದು, ಸರವಿ; ಮಳಲ ಬೇಂಟೆಯಂ ಮಾಡಿದ ಪೋಲ್. ‖ 125 ‖
43. ಚೆನ್ನಪೊಂಗನೆಂದು, ಬೀರಂ. ‖ 131 ‖
44. ಪುಗ್ಗಾಯ್ಲನೆಂದು, ಗರ್ವಿತಂ. ‖ 132 ‖
45. ನೆಲಕಲನೆಂದು, ಲೋಭಿ. ‖ 133 ‖
46. ಬೆಳ್ಪಡಿಯೆಂದು, ಗೊರವಂ. ‖ 135 ‖
47. ಕಿತ್ತಡಿಯೆಂದು, ವ್ರತಿ. ‖ 136 ‖
48. ಬಿತ್ತಿಗನೆಂದು, ಪ್ರೌಢಂ. ‖ 137 ‖
49. ನೇರ್ದನೆಂದು, ಅರಿದಂ. ‖ 141 ‖
50. ಅಲ್ಲಣಿಗೆಯೆಂದುಂ, ಸಬ್ಬವಮೆಂದುಂ, ಮೇಳಂ. ‖ 168 ‖
51. ಪನಮೆಂದುಂ, ಕೊಂಬೆಂದು, ಸಂಕೇತಸ್ಥಳಂ. ‖ 170 ‖
52. ಸೊಂದಿಯೆಂದು, ಸಿತಗಂ. ‖ 138 ‖
53. ಗಾಳಿವಾತೆಂದುಂ, ತಿಟ್ಟೆಂದುಂ, ಬೆಂಯ್ಗುಳ್. ‖ 176 ‖
54. ಪುಚ್ಚವಣಮೆಂದು, ಪರೀಕ್ಷೆಯುಮ್ ಅಣ್ಮುಮುಕ್ಕುಂ. ‖ 179 ‖
55. ಸುಸಿಲೆಂದು, ಸಂಭೋಗಮುಂ ಪ್ರಭಾತಕಾಲಮುಮುಕ್ಕುಂ. ‖ 183 ‖

ಇವೆಲ್ಲಂ ಕವಿಮಾರ್ಗಮನೋಹರಂಗಳ್; ಇನ್ನುಮಿವು ಮೊದಲಾದುವಂ ನೋಡಿಕೊಳ್ವುದು.

2. Version.

1. ಬದ್ದವಣಮೆಂದು, ಮಂಗಳವಱಿ.
2. ಬೆಳ್ಪೆಂದು, ನಿರ್ಮಳಿಕೆ.
3. ಮೂಡಿಯೆಂದು, ಉದಯಂ.
4. ಅದುವದೆಂದು, ವಿಚಾರಿಸುಹಂ.
5. ಬೆಳ್ಪಳಮೆಂದು, ಸಂಚಳಂ.
6. ಕಚ್ಚಱಿಯೆಂದು, ಬಿರುವಿನ ಬಳಿ. ‖ 1 ‖
7. ಪನ್ನತಿಕೆಯೆಂದು, ಪರಾಕ್ರಮಂ.
8. ಸಲಂಡುಗೊಂಡುದೆಂದು, ಆಕ್ರಮಿಸಿಕೊಂಡುದು.
9. ಕೆಲಚೆಂದು, ಸಹಾಯಂ.
10. ಪೊದಿಮಾಱೆಂದು, ಬೆನ್ನೀಹಂ.
11. ಪುಚ್ಚಱಿಯೆಂದು, ಕೇಡು. ‖ 2 ‖
12. ಮೆಳ್ಪಡೆಯೆಂದು, ಮರುಳ್ತನಂ (o. r. ಮೆಳ್ಪಡೆಯೆಂದು —).
13. ಬದ್ದಮೆಂದು, ಗಾಢಂ (o. r. ಗಾಡಂ).
14. ಪೊಪ್ಪಕಮೆಂದು, ಸೊಪ್ಪುಗುಟ್ಟುಹಂ (o. r. ಪಪ್ಪಕಮೆಂದು —).
15. ಅಡೆವಣಿಗೆಯೆಂದು, ಕೆಸಱೊಳಾದ ಪಜ್ಜೆ.
16. ಬೆಜ್ಜೆಯೆಂದು, ಚಪ್ಪರಣೆ.
17. ದಡ್ಡಸಮೆಂದು, ಡೊಂಬವಱಿ. ‖ 3 ‖
18. ಪರ್ಪರಿಕೆಯೆಂದು, ಕರ್ಕಶತೆ. ‖ 4 ‖
19. ಪಿಱಿತಿನಿಯೆಂದು, ಮರುಳ್.
20. ಅಮ್ಮಂಗೋಡಲಿಯೆಂದು, ಹಗ್ಗಟ್ಟಿವತ್ತಿಗೆ. ‖ 5 ‖
21. ತಡಗುಂಡಿಯೆಂದು, ಜಳಪ್ರತ್ಯಯಂ.

22. ಉಱ್ಗೆಯೆಂದು, ಒಂದು ಸೋಂಪು (o. r. ಉಗ್ಗೆಯೆಂದು —).
23. ಪಂಚಮೆಂದು, ಪೂರ್ವಂ. ‖ 6 ‖
24. ನಿಸ್ಸಂಕೆಯೆಂದು, ಅವಜ್ಞೆ.
25. ಮರಾಳಮೆಂದು, ಕುದುರೆಯುಪಟ್ಟ (o. r. ಮಳಾರಮೆಂದು —).
26. ಒಳೆಂದು, ಕುದುರೆಯ ವಳೆಯುಂ.
27a. ಇಱ್ಕಿಲೆಂದು, ಮಿಗಮುಂ ಕೆಡಪುವ ಗುೞಿ.
27b. ಕೊತ್ತಣಿಯೆಂದು, ಕಾಗೆಗಳ ಮೊತ್ತಂ.
28. ಉಗ್ಗವಳದೆಣ್ಣೆಯೆಂದು, ಉರಿವೆಣ್ಣೆ. ‖ 7 ‖
29. ಸಿರಿವಂತಿಗೆಯೆಂದು, ಹುರಿಯೋಡು. ‖ 8 ‖
30. ಸೋಡಬಲಿಯೆಂದು, ಮಸಣವಟ್ಟಿಗೆ. ‖ 9 ‖
31. ಎವ್ವೞೆಂದು, ಎರೆಯೆಂದು, ಎಂಜಲವುಳು (o. r., instead of ಎರೆಯೆಂದು, ಸೀವುೞೆಂದು).
32. ಪೊಚ್ಚಮೆಂದು, ಪೊೞೆ. ‖ 10 ‖
33. ಅತುರ್ದೆಂದು, ಅಱಿತುದು.
34. ಅತ್ತಪರಮೆಂದು, ಕಾಳಿಗವಲಗೆ ‖ 11 ‖
35. ಬಳಮರ್ದೆಂದು, ಅಂಕದೌಷಧಂ (o. r. ಬಲಮರ್ದೆಂದು —).
36. ಮೆಚ್ಚವಣಿಗೆಯೆಂದು, ಮೆಚ್ಚನುಳ್ಳದೆಂಬರ್ಥಂ.
37. ಕಱಿಗೆಯೆಂದು, ಒಱಪು (o. r. ಕಿರ್ಗಿಯೆಂದು —). ‖ 12 ‖
38. ಸಲಮೆಂದು, ಪ್ರವೇಶಂ. ‖ 13 ‖
39. ಗಾರಣಮೆಂದು, ದೂಱು. ‖ 14 ‖
40. ಬಡಸೆಂದು, ಕೌಟಿಲ್ಯಂ (o. r. ಬಡಗೆಂದು —).
41. ಕೌಮರಿಯೆಂದು, ಸಂಭ್ರಮಂ.
42. ಹರಳಿಗನೆಂದು, ಜಾರಂ.
43. ಹೇರಿಗನೆಂದು, ಬೇಹಿನವಂ.
44. ಕೊಟ್ಟಜಮೆಂದು, ಕಪ್ಪಂ. ‖ 15 ‖
45. ತೇಸತೇಸಮೆಂದು, ಮೇಲೆ ಮೇಲೆ. ‖ 16 ‖
46. ತೆಂಗುಹಮೆಂದು, ಹಕ್ಕಿಯೆಱಗುಹಂ.
47. ತಿಪ್ಪೞೆಂದು, ಗೞೆ.
48. ಬಿಜ್ಜಲಬಿಟ್ಟೇಱೆಂದು, ಹಿರಿಯ ಬಿಟ್ಟೇಱು.
49. ಸಾರಿಯೆಂದುಂ ಬಿಸುಗೆಯೆಂದುಂ, ಡೆಂಜೆಯುಂ (o. r. ಡೆಂಜೆಯುಂ).
50. ಪೂಜಾಗಜಮೆಂದು, ಪಟ್ಟವರ್ಧನಂ.
51. ಪಂಚಪಲ್ಲವದ ವಾಜಿಗಳೆಂದು, ರಾಜವಾಹನಂಗಳ್.
52. ದೊಡ್ಡ ಮಾರ್ಗಮೆಂದು, ಆನೆ ಕುದುರೆಗಳೊಳಾದ ಕಱುದೊಡೆಯ ಜಡ್ಡು (o. rs. ಜಡ್ಡು, ದಡ್ಡು).
53. ಇಱಿವೆಂದು, ಸಂದಣಿ.
54. ಅಳಸೆಂದು, ಸುರತಧ್ವನಿ. ‖ 17 ‖
55. ತೆರೆಪೊಡೆಯೆಂದು, ಮಡಿಲ್.
56. ಜೊಬ್ಬೆಯೆಂದು, ಹಱಕು (o. r. ರಣಜ್ಜೆಯೆಂದು —).
57. ಪವಿತ್ರಮೆಂದು, ಒಂದು ಕಿವಿದುಡಿಗೆ. ‖ 18 ‖
58. ಪಾೞೆಂದು, ಒಚಿತ್ರಭೇದಂ.
59. ಬರ್ದುಗೆಯೆಂದು, ಸಾವು. ‖ 19 ‖
60. ದಳಿಯೆಂದು, ಪತ್ರಂ.
61. ಅೞಲೆಂದುಂ ಮೀನೆಂದುಂ, ನಕ್ಷತ್ರಂ. ‖ 20 ‖
62. ಮುಮ್ಮುರಿಯೆಂದು, ಕಾಸಿದ ಮುಳಲ್. ‖ 21 ‖
63. ತಟ್ಟಮೆಡಱಾದನೆಂದು, ತಟ್ಟವೆಣದಂ.
64. ನಾಗಹಮೆಂದು, ಗೋದಾವರಿಯೊಳೊಂದು ಮಡು.
65. ಸ್ಯೆಪೆಂದು, ಪುಣ್ಯಂ. ‖ 22 ‖
66. ಗುಂಡೆಂದು, ನೆರವಿ. ‖ 23 ‖
67. ಒಂಡಣಮೆಂದು, ಕಾಳೆಗಂ. ‖ 24 ‖
68. ಉಗಿಪದಮೆಂದು, ಸುಲಿಹಂ.
69. ನಿಕ್ಕುವಮೆಂದು, ನಿಶ್ಚಯಂ. ‖ 25 ‖
70. ತಿರಿಕೊಱೆಯೆಂದು, ಆಯ್ಕಳಿ. ‖ 26 ‖
71. ನನಸೆಂದು, ದಿಟಂ. ‖ 27 ‖

"ವ್ಯಾಕರಣದಲ್ಲಿ ಬೀಗಕನಿದ್ರೆ."

72. ಕುಱಿಯೆಂದು, ಕುಱುಪು (o. r. ಕುಱುಪು).
73. ಅಸುವೆಂದು, ಶೀಘ್ರಂ.
74. ಅಸಿದನೆಂದುಂ ಜೆಲಂಕಿದನೆಂದುಂ, ಈಡಾಡಿದಂ.
75. ಬಿಸವಂದವೆಂದು, ಕೌತುಕಂ. ‖ 28 ‖
76. ಮುಕ್ಕುಱೆಂದು, ಮುಸುರುಹಂ.
77. ಡಾಹಿಣಿಯೆಂದು, ರಕ್ಕಸಿಯ ಕತ್ತಿಗೆ.
78. ಜಱುಚೆಂದು, ವ್ಯರ್ಥಾಳಾಪಂ.
79. ಬೆಜ್ಜೆಂದು, ವೈದ್ಯಂ.
80. ಅಜ್ಜೆಂದು, ಸಾವಾಸಿ.
81. ಕಾದಲ್ಮೆಯೆಂದು, ಸ್ನೇಹಂ.
82. ಅರ್ಬಿಯೆಂದು, ನಿರ್ಝರಂ.
83. ತೋರ್ವೆಯೆಂದು, ತೋರ್ಕೆ (o. r. ತೋರ್ವೆಂದು—).
84. ಬರ್ದೆಂದು, ಪ್ರೌಢಿ. ‖ 29 ‖
85. ನಿಗ್ಗವಮೆಂದು, ಗಜದಂತಂ. ‖ 30 ‖
86. ಪಲ್ಲಮುಱಿಯೆಂದು, ಆನೆಯ ಮುಱಿ. ‖ 31 ‖
87. ಕರಿಯೆಂದು, ಆನೆ.
88. ಮೊಸೆಯೆಂದು, ಕಾಳೆಗಂ. ‖ 32 ‖
89. ರಾಜಾವರ್ತಮೆಂದು, ಎಳೆನೀಲಂ. ‖ 33 ‖
90. ನವಿರೆಂದು, ಕೂದಲ್. ‖ 34 ‖
91. ವಾಳಿಯೆಂದು (o. r. ಲಾಳೆಂದು), ಲಿಂಗವತ್ತಿಗೆ.
92. ಸುನ್ನಮೆಂದು, ಶೂನ್ಯಂ.
93. ತೊದಳೆಂದು, ಪುಸಿಯ ಭೇದಂ. ‖ 35 ‖
94. ಅಸಕದೞಹಮೆಂದು, ಕೈಮೀಱುಹಂ.
95. ಎನವೆಂದು, ಎನ್ನವರ್ತನಂ.
96. ಆವೆಯಾಡೊಡಮೆಂದು, ಆರಾಡೊಡಮೆಂಬರ್ಥಂ.
97. ಸೌಸವಮೆಂದು, ಕಂಪು. ‖ 36 ‖
98. ಮೂಂದಡೆಯೆಂದು, ಮೂಣದೆಂಬರ್ಥಂ.
99. ನಿಱುಗಮೆಂದು, ಒಂದು ಮಾವು.
100. ಗಱುವುಪ್ಪೆಂದು, ಕೇದಗೆಯ ಪೂ.
101. ಕೋಮಳೆಯೆಂದು, ನೆಯ್ದಲ್ (o. r. ನೆಯ್ದಿಲ್).
102. ಕೊಳವೇರೆಂದು, ಲಾಮಂಚ (o. r. ಕೊಳರೆಂದು—). ‖ 37 ‖
103. ಕೆಕ್ಕೆಯೆಂದು, ಕೆನ್ನೆ.
104. ತೆಗಳೆಂದು, ಪೆಗಲ್.
105*a*. ಗೊಂಕೆಯೆಂದು, ಗೋಣ್. ‖ 38 ‖
105*b*. ಬಡ್ದಿಸಮೆಂದು, ಅವುಂಕುಹಂ (o. r. ಬಡ್ಡಿಸಮೆಂದು—).
106. ತಱಸಲಮೆಂದು, ನಿರ್ಣಯಂ.
107. ಮುನ್ನೀರೆಂದು, ಸಮುದ್ರಂ. ‖ 39 ‖
108. ಬೆದಂಡೆಯೆಂದು, ವೈದಂಡಿಕಂ.
109. ಚತ್ರಾಣಮೆಂದು, ಒಂದು ಕಾವ್ಯಂ.
110. ತಳಮುಳಗೆಂದು, ಬೆದಿಗಾಗುಹಂ. ‖ 40 ‖
111. ಅಣಿಯರಂ, ಉಬ್ಬಡಿಗಂ (o. r. ಉಬ್ಬರಿಗಂ), ಅಗುಂದಲೆ, ಉರ್ಬಿನಂ, ನೋಳದು ಎಂಬಿವು ಪಿರಿದೆಂಬರ್ಥಂ.
112. ತಿಬ್ಬಮೆಂದು, ತೀವ್ರಂ.
113. ಪರಕಮೆಂದು, ಪರೋಕ್ಷಂ.
114. ಬವಸೆಂದು, ವ್ಯವಸಾಯಂ.
115. ಬಾಗುಳೆಂದು, ವ್ಯಾಕುಳಂ.
116. ಪಾಗಲಮೆಂದು, ಪ್ರಾಕಾರಂ.
117. ಅಳಕಮೆಂದು, ಅಲೇಖಂ.
118. ಮಂಚಮೆಂದು, ವಂಶಂ.
119. ಕುಯಕಮೆಂದು, ಕುಹಕಂ.
120. ಕೈದವಮೆಂದು, ಕೈತವಂ.
121. ಸುತ್ತಿಯೆಂದು, ಶುಕ್ತಿ.
122. ಉಮ್ಮಳಿಸಿತೆಂದು, ಊಷ್ಮೆದೋಱಿದುದು.
122*a*. ತೆಲ್ಲಂಟೆಯೆಂದು, ನಿಬ್ಬಣಂ.
122*b*. ತಮ್ಮಡಮೆಂದು, ತಡದುದು.
122*c*. ಡವಕೆಯೆಂದು, ಕಾಳಾಂಜಿ.
123. ನಿರ್ನೆರೆಂದು, ನಿರ್ನೆರಮೆಂದು (o. rs. ನೆರ್ನೆರೆಂದು, ನಿರ್ನೆರಮೆಂದು), ನಿರ್ನಿಮಿತ್ತಂ.
123*a*. ಅಡಬಳನೆಂದು, ಬಾಣಸಿಗಂ.

123*b*. ಹೇದೆಯೆಂದು, ಭೂತಂ.

123*c*. ಹರಿಮೇಖಲೆಯೆಂದು, ಇಂದ್ರಜಾಲಂ.

124. ಕಾಮುಕರಮೆಂದು, ಗರ್ವಮುಕ್ಕುಂ. ಪ್ರಯೋಗಂ — ತಾಮಸಗೆ ತಾಗಿದ ಸುರನ ಕಾಮುಕರಂ ಕರಮುಡಂಗಿ ಸುಗರ್ಪ್ಪಿನೆಗಂ. ‖ 41 ‖

125. ಬೇಂಟೆಯೆಂದು, ಸರವಿ; ಮಳಲ ಬೇಂಟೆಯುಂ ಮಾಡಿದ ಪೋಲ್. ‖ 42 ‖

126. ತಗರ್ದುದೆಂದು, ತಗಡುದೆಂಬರ್ಥಂ.

127. ನಾಳಿಯೆಂದು, ಪಾಡಿಯೆಂಬರ್ಥಂ.

128. ಏಪೂರ್ತುದೆಂದು, ತಡೇಬೊಯ್ದುದೆಂಬರ್ಥಂ.

129. ಕಯ್ಕೋಲೆಂದು, ಕಡೆಗೋಲ್.

130. ಚಣಕಮೆಂದು, ಚಲ್ಲಣಂ. ಚಲ್ಲಣಮೆಂದು, ಅರ್ಧೋರುಕಂ.

131. ಚೆನ್ನಪೊಂಗನೆಂದು ವೀರಂ. ‖ 43 ‖

132. ಪುಗ್ಗಾಯ್ಲನೆಂದು (o. r. ಪುಗ್ಗಾಯಿಲನೆಂದು), ಗರ್ವಿತಂ. ‖ 44 ‖

133. ನೆಲಕಲನೆಂದು, ಲೋಭಿ. ‖ 45 ‖

134. ಪಚ್ಚಾಯ್ಲನೆಂದು, ಪಚ್ಚಗಾಱಂ.

135. ಬೆಳ್ಪಡಿಯೆಂದು, ಗೋರವಂ. ‖ 46 ‖

136. ಕಿತ್ತಡಿಯೆಂದು, ವ್ರತಿ. ‖ 47 ‖

137. ಬಿತ್ತಗನೆಂದು ಪ್ರೌಢಂ. ‖ 48 ‖

138. ಸೊಂಪಿಯೆಂದು (o. r. ಸೊಂದೆಯೆಂದು ಪೊಲದಿಯೆಂದು), ಸಿತಗಂ. ‖ 52 ‖

139. ಪೆಱನೆಂದು, ಒಡೆಯಂ (o. rs. ಸಡೆಯಂ, ಸೆಡೆಯಂ, ಪಜೆಯಂ).

140. ನೆಱಲ್ದನೆಂದು, ಜೋಲ್ದಂ.

141. ನೇರ್ದನೆಂದು, ಅರಿದಂ. ‖ 49 ‖

142. ನಿರದನೆಂದು, ಕೊಂದಂ.

143. ನೋಳ್ಪಿದನೆಂದು, ಇದಿರ್ಚಿ ನಡೆದಂ.

144. ಬಿತ್ತಗನೆಂದು, ತುತ್ತಿದಂ.

145. ಪಳುಂಕಿದನೆಂದು, ಸೋಂಕಿದಂ.

146. ತಡ ಮಾಡಿದನೆಂದು, ತಳ್ಪಂಕಗೊಳಿಸಿದಂ.

147. ಕಿಸುಗಣ್ಚಿದನೆಂದು, ಕೋಪಿಸಿದಂ.

148. ಎಂಬುಕೆಯ್ದನೆಂದು, ಎಂದುದಂ ಮಾಡಿದಂ.

149. ಕರೆದನೆಂದು, ಅಡಂಗಿದಂ.

150. ತೆರ್ಪತ್ತನೆಂದು, ಮೂರ್ಛೆತಿಳಿದಂ.

151. ಮುಚ್ಚುತ್ತನೆಂದು, ಮೂರ್ಛೆವೋದಂ.

152. ಕುಂಗರೆಂದು, ಬೆಸದವರ್.

153. ಬಾಂಬರೆಂದುಂ ಕೋವರೆಂದುಂ, ಕುಂಬಱರ್ (o. r. ಕುಱುಂಬರ್).

154. ಕೆಸಱಂಕರೆಂದು, ಮಲ್ಲರ್.

155. ಮಾಮುರ್ರೆಂದು, ಮಲೆವರ್.

156. ಚಲ್ಲವೊತ್ತರೆಂದು, ನಂಬಿಸಿ ತಿಂಬುವರ್.

157. ಸೈದರೆಂದು, ನೇರಿದರ್.

158. ಪಾಣ್ಬೆಯೆಂದುಂ, ದಡ್ಡುಂಜೆಯರೆಂದುಂ (o. r. ದಡ್ಡ್ರುಂಜೆಯರೆಂದುಂ) ಸಿತಗೆಯರ್.

159. ಪಚ್ಚವಡತಿಯೆಂದು, ಹಚ್ಚಡಿಸುವಾಕೆ.

160. ಮುಗಳ್ತಿಯೆಂದುಂ ಮಾಳ್ಕಿಯೆಂದುಂ, ಗಂಡನ ಪತ್ತಿ ಬಿಡದಾಕೆ.

161. 162. ಜೋಡೆಯೆಂದು, ಸಿತಗೆಯರುಂ ಪಾಣ್ಬೆಯರುಂ ಅಕ್ಕುಂ [ಕ್ಕುಂ.

163. ಜೋಡನೆಂದು, ಸಿತಗನುಂ ಪಾಣ್ಬನುಮ

164. 165. ಒಱಲ್ದನೆಂದುಂ ಮಱುಗಿದನೆಂದುಂ ಉಱುಗಿದನೆಂದುಂ, ಕೂರ್ತಂ; ಅಕ್ಕರ್ತನೆಂದುಂ ಗುಣಕಱುಗೊಂಡನೆಂದುಂ, ಪ್ರೀತಿವಟ್ಟಂ.

166. ನಿಲುಂಬಿತೆಂದು (o. r. ನಿಗುಂಬಿತೆಂದು), ಕುಪ್ಪಳಿಸಿತ್ತು.

167. ಕಣ್ಣಲದುದೆಂದುಂ (o. r. ಕಣ್ಮಲೆದುದೆಂದುಂ) ಪೊಚ್ಚಱಿಸಿತೆಂದುಂ, ಪೊಡಕರಿಸಿತು.

168. ಅಲ್ಲಣಿಗೆಯೆಂದುಂ ಸಬ್ಬವಮೆಂದುಂ, ಮೇಳಂ. ‖ 50 ‖

169. ಕತ್ತುಪೆಸಮೆಂದುಂ ಪೆಟಕೆಂದುಂ, ಜಗಳಂ.

170. ಪಸವೆಂದುಂ ಕೊಳಹೆಂದುಂ ಕೊಂಬೆಂದುಂ, ಸಂಕೇತ ಸ್ಥಳಂ. ‖ 51 ‖

171. ಉಕ್ಕವವೆಂದುಂ (o. r. ಉಕ್ಕೆವವೆಂದುಂ) ಪಳಾಳವೆಂದುಂ, ತಕ್ಕು.

172. ಅಳ್ಕೆಂದುಂ ಬೆಗಡೆಂದುಂ ಭಯಂ.

173. ಅವ್ರುತೆಯೆಂದುಂ (o. r. ಅವ್ರುಸೆಯೆಂದುಂ) ಜೀವರಕ್ಕೆಯೆಂದುಂ, ಕವಚಂ.

174. ಬೋಂದಿಯೆಂದುವೊಡಂಬಿಯೆಂದುಂ, ಶರೀರಂ.

175. ಕಸವರವೆಂದುಂ ವಸುವೆಂದುಂ ಪೊನ್ (o. r. ಕಸವರವೆಂದು, ಮಿಸುನಿ).

176. ಗಾಳಿವಾತೆಂದುಂ ತಿಟ್ಟೆಂದುಂ, ಬೈಗುಳ್. ‖ 53 ‖

177. ಮುಚ್ಚೆಂದು, ನೊಳಂ (o. r. ನೊಳವು).

178. ಪಾಟಿಯೆಂದುಂ ಕೇಟಿಯೆಂದು, ಪಂಕ್ತಿ.

179. ಪಚ್ಚವಣಮೆಂದು (o. r. ಪುಚ್ಚವಣಯೆಂದು), ಪರೀಕ್ಷೆಯುಮುಣ್ಮುಮುಕ್ಕಂ ‖ 54 ‖

180. ಗರವಸಗೊಂಡುದೆಂದುಂ ಕೊಟಿಡುದೆಂದುಂ, ಗರವಟಿಸಿಡುದುಮುಕ್ಕಂ.

181. ಸೋಡಂಬಾಡವೆಂದುಂ ಉಣ್ಣವಳೆಂದೆಂದುಂ, ಪಿರಿದುಮುಕ್ಕಂ.

182. ಮುಟಿಲೆಂದು, ವೀರಮುಂ ಪೊಡವಯುಮುಕ್ಕಂ.

183. ಸುಸಿಲೆಂದು, ಸಂಭೋಗಮುಂ ಪ್ರಭಾತಕಾಲಮುಮುಕ್ಕಂ. ‖ 55 ‖

184. ಕಮ್ಮಂಗಣೆಯನೆಂದುಂ ಇಂಗೋಲ್ವಿಲ್ಲನೆಂದುಂ, ಕಾಮಂ.

185. ಪಂಡಿತವಕ್ಕಿಯೆಂದುಂ ಕನ್ನಡವಕ್ಕಿಯೆಂದುಂ, ಗಿಳಿ.

186. ಪಡಿಯುರವಕ್ಕಿಯೆಂದುಂ ಪೂರ್ಕುಳಿವಕ್ಕಿಯೆಂದುಂ ಕೆಂಗಣ್ಣಲರ್ವಕ್ಕಿಯೆಂದುಂ, ಕೋಗಿಲೆ.

187. ಮುಯ್ಯಾರಡಿಯೆಂದುಂ ಅಱುಡಿಯೆಂದುಂ ಅಲರ್ವಕ್ಕಿಯೆಂದುಂ ಪಥಮೆಯೆಂದುಂ ಮೋಳಂಬಮೆಂದುಂ, ತುಂಬಿ.

188. ಜೊನ್ನವಕ್ಕಿಯೆಂದು, ಚಕೋರಂ.

189. ತಾರಗೆವಟ್ಟೆಯೆಂದು, ಅಗಸಂ.

190. ಬಾನೆಂದು, ಗಗನಂ. [153.

191. ಬಾಂಬನೆಂದು, ಕುಟುಂಬಂ. cf No

[ಇವೆಲ್ಲಂ ಕವಿಮಾರ್ಗಮನೋಹರದೊಳ್ ನಿದರ್ಶನಂಗಳಿನ್ನುಮಿವು ಮೊದಲಾದುವಂ ನೋಡಿ ಕೊಳ್ವುದು.]